ಡಾ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯಪ್ರಜ್ಞೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಮೃಣಾಲಿನಿ. ಆರ್.
ನೋಂದಣಿ ಸಂಖ್ಯೆ: ೧೪೧.೨೦೧೦.೨೦೧೨

ಮಾರ್ಗದರ್ಶಕರು
ಡಾ.ಎ.ಆರ್. ಮದನಕುಮಾರ್
ಮುಖ್ಯಸ್ಥರು ಮತ್ತು ಸಂಯೋಜಕರು
ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ, ಮಾನ್ಯತೆ ಪಡೆದಿದೆ)

೨೦೧೮

1008

ಡಾ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯಪ್ರಜ್ಞೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಮೃಣಾಲಿನಿ. ಆರ್.

ನೋಂದಣಿ ಸಂಖ್ಯೆ: ೧೪೧೨೦೧೦೨೦೦೧೨

ಮಾರ್ಗದರ್ಶಕರು

ಡಾ.ಎ.ಆರ್. ಮದನಕುಮಾರ್

ಮುಖ್ಯಸ್ಥರು ಮತ್ತು ಸಂಯೋಜಕರು

ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ, ಮಾನ್ಯತೆ ಪಡೆದಿದೆ)

೨೦೧೯

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ), ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ **"ಡಾ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯ ಪ್ರಜ್ಞೆ"** ಎಂಬ ಮಹಾಪ್ರಬಂಧವನ್ನು ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ ಈ ಸಂಸ್ಥೆಯ ಮೂಲಕ ಮಹಿಳಾ ಸರ್ಕಾರಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರು ಮತ್ತು ಸಂಯೋಜಕರು ಹಾಗೂ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವ **ಡಾ. ಎ.ಆರ್.ಮದನಕುಮಾರ್** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ಮಹಾಪ್ರಬಂಧ ನನ್ನ ಸ್ವಂತ ಸಂಶೋಧನೆ ಆಗಿದೆ. ಈ ಮಹಾಪ್ರಬಂಧವನ್ನು ಸಂಪೂರ್ಣವಾಗಿ ಆಗಲೀ ಅಥವಾ ಭಾಗಶಃವಾಗಲೀ ಯಾವುದೇ ವಿಶ್ವವಿದ್ಯಾಲಯದ ಪದವಿ, ಡಿಪ್ಲೊಮೊ ಹಾಗೂ ತತ್ಸಮಾನ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮೃಣಾಲಿನಿ. ಆರ್.

ಮೃಣಾಲಿನಿ. ಆರ್.

ನೋಂದಣಿ ಸಂಖ್ಯೆ ೧೪೧೨೦೧೦೨೦೦೧೨

ದಿನಾಂಕ : ೨೩.೦೯.೨೦೧೯

ಸ್ಥಳ : ಮಂಡ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಮೃಣಾಲಿನಿ. ಆರ್. ಇವರು ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ ಈ ಸಂಸ್ಥೆಯ ಮೂಲಕ **"ಡಾ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯ ಪ್ರಜ್ಞೆ"** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಸಂಶೋಧನೆ ನಡೆಸಿ, ಪಿಎಚ್.ಡಿ. ಪದವಿಗಾಗಿ ತಮ್ಮ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಮಹಾಪ್ರಬಂಧವು ಸಂಶೋಧನಾ ವಿದ್ಯಾರ್ಥಿಯ ಸ್ವಂತ ಪರಿಶ್ರಮದ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಮಹಾಪ್ರಬಂಧವನ್ನು ಅಂಶಿಕವಾಗಿ ಆಗಲೀ, ಪೂರ್ಣವಾಗಿ ಆಗಲೀ ಯಾವುದೇ ಬಗೆಯ ಪದವಿ, ಡಿಪ್ಲೊಮೋ ಅಥವಾ ತತ್ಸಮಾನ ಪದವಿಗಾಗಿ ಈ ಮೊದಲು ಸಲ್ಲಿಸಿಲ್ಲವೆಂದು, ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಎ.ಆರ್. ಮದನಕುಮಾರ್)
ಮುಖ್ಯಸ್ಥರು ಮತ್ತು ಸಂಯೋಜಕರು
ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ದಿನಾಂಕ : 23-09-2019.
ಸ್ಥಳ : ಮಂಡ್ಯ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಸಾಹಿತ್ಯ ಪರಂಪರೆಯು ವಿಸ್ತಾರವಾಗಿದ್ದು, ಸಮೃದ್ಧತೆಯಿಂದ ಕೂಡಿದೆ. ವೇದಗಳ ಕಾಲದಿಂದ ಹಿಡಿದು ಇಲ್ಲಿಯವರೆಗೆ ಹರಿದುಬಂದಿರುವ ಸಾಹಿತ್ಯದ ಪರಿಕಲ್ಪನೆ ವೈವಿಧ್ಯತೆಯನ್ನು ಮೈಗೂಡಿಸಿಕೊಂಡು ವಿಸ್ಮಯವನ್ನುಂಟು ಮಾಡುತ್ತದೆ. ಸಂಸ್ಕೃತದ ಪ್ರಾಚೀನ ಕವಿಗಳಿಂದ ಹಿಡಿದು ಎಲ್ಲಾ ಭಾಷೆಗಳ ಕವಿಗಳು ಕಥಾಪರಂಪರೆಯನ್ನು ಅಡಿಪಾಯವಾಗಿ ಮಾಡಿಕೊಂಡು ನೂರಾರು ಕಾವ್ಯಗಳನ್ನು ರಚಿಸಿದ್ದಾರೆ. ಪ್ರಾಚೀನ ಕಾವ್ಯ ಪರಂಪರೆ ಧರ್ಮ ಮತ್ತು ಪ್ರಭುತ್ವವನ್ನು ವರ್ಣಿಸುವುದರ ಮೂಲಕ ನೈತಿಕಮೌಲ್ಯಗಳನ್ನು ಬಿತ್ತುವ ಕಾರ್ಯದಲ್ಲಿ ತೊಡಗಿಕೊಂಡವು. ಇದರ ಜೊತೆಗೆ ಸೌಂದರ್ಯದ ವರ್ಣನೆಗಳೂ ಸೇರಿ ಕಾವ್ಯಗಳು ಹೃದಯ ಸ್ಪರ್ಶಿಯಾಗುವಂತೆ ರೂಪಿತವಾದವು.

ಸಂಸ್ಕೃತ ಕಾವ್ಯ ಪರಂಪರೆಯಿಂದ ಪ್ರಭಾವಿತವಾದ ಕನ್ನಡ ಸಾಹಿತ್ಯ ಪರಂಪರೆಯು ೧೧ಲನೇ ಶತಮಾನದವರೆಗೂ ಮಹಾಭಾರತ, ರಾಮಾಯಣದ ಕತೆಗಳನ್ನು ಒಳಗೊಂಡು ರೂಪಿತವಾದವು. ಜೊತೆಗೆ ಧರ್ಮದ ಹಿನ್ನೆಲೆಯನ್ನು ಪಡೆದುಕೊಂಡು ಧಾರ್ಮಿಕ ಕಾವ್ಯಗಳು ರಚಿಸಲ್ಪಟ್ಟವು. ೧೨ನೇ ಶತಮಾನದಲ್ಲಿ ಬಂದ ಶರಣರು ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿದ್ದ ಕನ್ನಡ ಸಾಹಿತ್ಯವನ್ನು ಸಮಾಜಮುಖಿಯಾಗುವಂತೆ ಮಾಡಿದರು. ಇವರ ಪ್ರಭಾವದಿಂದ ಮುಂದೆ ಕನಕದಾಸರು, ಸರ್ವಜ್ಞ, ತತ್ವಪದಕಾರರು, ಕನ್ನಡ ಸಾಹಿತ್ಯವನ್ನು ಸಮಾಜಮುಖಿಯಾಗಿಯೇ ನಿರೂಪಿಸಿದರು. ಆಂಗ್ಲರ ಆಡಳಿತದಿಂದ ಅಕ್ಷರ ಜ್ಞಾನವನ್ನು ಪಡೆದ ಭಾರತೀಯರು, ವೈಚಾರಿಕತೆಯ ಚಿಂತನೆಗಳನ್ನು ರೂಢಿಸಿಕೊಂಡ ಮೇಲೆ ಅವರ ಆಲೋಚನಾಕ್ರಮವು ಹೊಸ ಪರಂಪರೆಯನ್ನು ಬೆಳೆಸಿಕೊಂಡಿತು. ಕ್ರೈಸ್ತಮಿಷನರಿಗಳು ಹಾಗೂ ಹಲವಾರು ವಿದೇಶಿ ವಿದ್ವಾಂಸರ ಸಂಸರ್ಗದಿಂದ ಆಧುನಿಕ ಕನ್ನಡ ಸಾಹಿತ್ಯವು ಹೊಸ ಹೊಸ ಚಿಂತನೆಗಳನ್ನು, ಹೊಸ ಪಂಥಗಳನ್ನು, ಹೊಸ ಪ್ರಕಾರಗಳನ್ನು, ವೈವಿಧ್ಯಮಯ ವಸ್ತುವನ್ನು ತನ್ನೊಳಗೆ ಸೇರಿಸಿಕೊಂಡು ವಿಶಿಷ್ಟವಾದ ಸಾಹಿತ್ಯ ಕೃಷಿಯನ್ನು ಪಡೆದು ಮೌಲ್ಯಯುತ ಸಾಹಿತ್ಯ ಕೃತಿಗಳ ಫಸಲನ್ನು ಪಡೆದುಕೊಂಡಿತು.

ಆಧುನಿಕ ಕನ್ನಡ ಸಾಹಿತ್ಯವು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ರೂಪುಗೊಂಡು ಆರ್. ನರಸಿಂಹಾಚಾರ್, ಬಿ.ಎಂ.ಶ್ರೀ, ಎಂ.ಎ.ರಾಮಾನುಜಯ್ಯಂಗಾರ್, ನರಸಿಂಗರಾಯರು,

ಮುಳಿಯ ತಿಮ್ಮಪ್ಪಯ್ಯ, ಎಂ.ಎಲ್. ಶ್ರೀಕಂಠೇಶಗೌಡ ಮೊದಲಾದವರಿಂದ ಹೊಸ ವಿನ್ಯಾಸವನ್ನು ಪಡೆದುಕೊಂಡಿತು. ಕಾವ್ಯದ ಸ್ವರೂಪದಿಂದ ಕನ್ನಡ ಸಾಹಿತ್ಯವು ಹೊಸ ಪ್ರಕಾರಗಳಾದ ಭಾವಗೀತೆ, ಕತೆ, ನಾಟಕ, ಕಾದಂಬರಿ, ಅನುವಾದ, ರೂಪಾಂತರ, ವಿಮರ್ಶೆ, ಮೊದಲಾದ ಮಜಲುಗಳಲ್ಲಿ ಹೆಚ್ಚು ಸಮೃದ್ಧತೆಯನ್ನು ಪಡೆದುಕೊಂಡಿತು. ಜೊತೆಗೆ ರಾಷ್ಟ್ರಭಕ್ತಿ ಮತ್ತು ನಾಡಭಕ್ತಿಗಳು ನಮ್ಮ ಸಾಹಿತ್ಯ ಸಮೃದ್ಧಿಗೆ ಬಹು ಮುಖ್ಯವಾದ ಕೊಡುಗೆಯನ್ನು ನೀಡಿವೆ. ಪುರಾಣ ಮತ್ತು ಚಾರಿತ್ರಿಕ ವಸ್ತುವನ್ನು ಮರುನಿರ್ಮಾಣ ಮಾಡುವ, ವಾಸ್ತವಿಕ ಬದುಕಿನ ನೆಲೆಗಳನ್ನು ಗುರುತಿಸುವ ಕೆಲಸ ಆಧುನಿಕ ಸಾಹಿತ್ಯದಲ್ಲಿ ಸಾಕಾರಗೊಂಡಿತು. ಸಮಾಜದಲ್ಲಿರುವ ಮೂಢನಂಬಿಕೆಗಳು, ಆಚರಣೆಗಳನ್ನು ನಿವಾರಿಸುವ, ನೈಸರ್ಗಿಕ ಅಂಶಗಳಲ್ಲಿ ದೈವಿಕಭಾವನೆಯನ್ನು ಕಂಡುಕೊಳ್ಳುವ ವಸ್ತುವನ್ನು ಸಾಹಿತ್ಯದಲ್ಲಿ ನಿರೂಪಿಸಿ ಅದರ ಸಮೃದ್ಧಿಗೆ ಕಾರಣರಾದವರು ಹಲವರು. ಸ್ವಾತಂತ್ರ್ಯಾನಂತರ ಪಾಶ್ಚಾತ್ಯದಾರ್ಶನಿಕರ ಸಿದ್ಧಾಂತಗಳು, ಭಾರತೀಯ ಸಮಾಜದ ಮೇಲೆ ಉಂಟು ಮಾಡಿದ ಪ್ರಭಾವಗಳು ಮತ್ತು ಪರಿಣಾಮಗಳನ್ನು ಸಾಹಿತ್ಯದಲ್ಲಿ ನಿರೂಪಿಸಿ ಪರಿಹಾರಗಳನ್ನು ಸೂಚಿಸಿದರು. ಜನಪಯೋಗಿಯಾಗಿ ರೂಪುಗೊಂಡ ಆಧುನಿಕ ಕನ್ನಡ ಸಾಹಿತ್ಯ ಸಮಾಜದಲ್ಲಿರುವ ಜನರ ಎಲ್ಲಾಸ್ತರಗಳನ್ನು ತನ್ನ ಕಥಾ ಭಿತ್ತಿಯನ್ನಾಗಿ ಮಾಡಿಕೊಂಡು ಸಾಕಷ್ಟು ಬದಲಾವಣೆಗೆ ಕಾರಣವಾಗಿದೆ.

ಕನ್ನಡ ಸಣ್ಣ ಕಥಾ ಪರಂಪರೆಯು ಮಹತ್ವದ್ದಾಗಿದ್ದು ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಮುಂತಾದ ಎಲ್ಲಾ ಪಂಥಗಳನ್ನು ಒಳಗೊಂಡ ಲೇಖಕರು ಕಥಾ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಮಾಸ್ತಿ, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಆನಂದಕಂದ, ಕೆರೂರು ವಾಸುದೇವಾಚಾರ್ಯ, ನಿರಂಜನ, ತ್ರಿವೇಣಿ, ಕೊಡಗಿನ ಗೌರಮ್ಮ, ತರಾಸು, ಅನಂತ ಮೂರ್ತಿ, ಲಂಕೇಶ್, ದೇವನೂರು ಮಹಾದೇವ, ಪೂರ್ಣಚಂದ್ರ ತೇಜಸ್ವಿ, ಆಲನಹಳ್ಳಿ ಕೃಷ್ಣ, ಸುಧಾಕರ, ಯಶವಂತ ಚಿತ್ತಾಲ, ಅನುಪಮನಿರಂಜನ, ಸಾರಾ ಅಬೂಬಕ್ಕರ್, ವೈದೇಹಿ, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ಮೊಗಳ್ಳಿ ಗಣೇಶ, ಅಮರೇಶ ನುಗಡೋಣಿ, ರಾಘವೇಂದ್ರ ಪಾಟೀಲ, ರಾಘವೇಂದ್ರ ಖಾಸನೀಸ, ನೇಮಿಚಂದ್ರ ಮೊದಲಾದ ನೂರಾರು ಕತೆಗಾರರು ಕನ್ನಡ ಕಥಾ ಕಣಜವನ್ನು ತುಂಬಿದ್ದಾರೆ. ಈ ಎಲ್ಲಾ ಕಥೆಗಾರರೂ ಸಾಮಾಜಿಕ, ಕೌಟುಂಬಿಕ ವಸ್ತುವಿನ ಜೊತೆಗೆ ಸ್ತ್ರೀಯರೂ, ದೀನ-ದಲಿತರು, ಶೋಷಿತರು, ಕೃಷಿಕರು, ಕೃಷಿಕಾರ್ಮಿಕರು ಮೊದಲಾದ ಶೋಷಿತ ಸಮುದಾಯಗಳ ಬದುಕನ್ನು ತಮ್ಮ ಕಥಾಭಿತ್ತಿಯಲ್ಲಿ ರೂಪಿಸಿದ್ದಾರೆ. ಸಮಾಜದ ಅಂಕುಡೊಂಕುಗಳಿಗೆ, ಕಂದಾಚಾರ, ಮೂಢನಂಬಿಕೆಗಳಿಗೆ ಶೋಷಣೆಯ ಶೋಷಿತ ಬದುಕಿಗೆ ಕನ್ನಡಿ ಹಿಡಿದಿದ್ದಾರೆ. ಇಂದು ಕನ್ನಡ

ಕಥಾಸಾಹಿತ್ಯ ಹತ್ತಾರು ಆಯಾಮಗಳನ್ನು ರೂಪಿಸಿಕೊಂಡು ಮಾನವ ಬದುಕನ್ನು ಉನ್ನತೀಕರಿಸುವ ಕಾರ್ಯದಲ್ಲಿ ತೊಡಗಿದೆ ಎಂದರೆ ತಪ್ಪಾಗಲಾರದು.

ಸಾಹಿತ್ಯ ಎಂಬುದು ಬದುಕಿನ ಪ್ರತಿಬಿಂಬ ಎಂಬುದರ ಜೊತೆಗೆ ಸಮಾಜದ ಪ್ರತಿಬಿಂಬವೂ ಹೌದು. ಸಾಹಿತ್ಯದಲ್ಲಿ ಸಾಮಾಜಿಕ ಬದುಕಿನ ಚಿತ್ರಣದೊಂದಿಗೆ ಸಾಮಾಜಿಕ ಪ್ರಗತಿಯ ಆಶಯಗಳೂ ಇರುತ್ತವೆ. ಅನುಭವ ಮತ್ತು ಕಲ್ಪನೆ ಮೂಲಕ ಕತೆಕಟ್ಟಬಲ್ಲ ಸಾಹಿತ್ಯ ಸಮಾಜದ, ಲೋಕದ ಸಕಲವನ್ನೂ ತೆರೆದಿಡುತ್ತದೆ. ಬದುಕಿನ ಅರಿವು ಮೂಡಿಸುವ ಕಥಾ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಒಂದು ಸಮೃದ್ಧ ಕಣಜ. ಕನ್ನಡ ಸಾಹಿತ್ಯ ಪಂಪನಿಂದ ಕಾವ್ಯ ರೂಪದಲ್ಲಿ ಹರಿದು ಬಂದರೂ ಅದರೊಳಗೊಂದು ಕತೆ ಇದ್ದೇ ಇರುತ್ತದೆ. ಕಾವ್ಯವಾಗಿ ಹರಿದುಬಂದಾಗ ಅದರಲ್ಲಿರುವ ಕತೆ ದೊಡ್ಡದಾಗುತ್ತದೆ. ಈ ಹಿನ್ನೆಲೆಯಲ್ಲಿ ಕಥಾಪರಂಪರೆ ಮಹಾಕಾವ್ಯಗಳ ಅಡಿಪಾಯ.

"ಕಿರಿದರೊಳ್ ಪಿರಿದರ್ಥಮಂ" ಹೇಳುವ ಸಣ್ಣಕತೆಗಳು ಭಾಷೆ, ವೈವಿಧ್ಯತೆ, ವೈಶಿಷ್ಟ್ಯತೆಗಳಿಂದ ಸರಳಭಾಷೆಯಿಂದ ಕೂಡಿದ ಬದುಕಿನ ಸಾರವೇ ಆಗಿದೆ. ಸೀಮಿತ ಪರಿಧಿಯಲ್ಲಿ ಬದುಕಿನ ಸಮಸ್ತ ಅನುಭವವನ್ನು ಸಂಕ್ಷಿಪ್ತವಾಗಿ ಹಿಡಿದಿಡುತ್ತವೆ. ಸಣ್ಣಕತೆ ಕಾಲಧರ್ಮಕ್ಕೆ ಅನುಗುಣವಾಗಿ ವಸ್ತು, ಭಾಷೆ, ತಂತ್ರ ಮತ್ತು ಶೈಲಿಗಳಿಂದ ಹೊಸ ಆಯಾಮಗಳಲ್ಲಿ ಬೆಳೆದಿದೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಅವರು ಶ್ರೇಷ್ಠ ಕಥೆಗಾರರ ಸಾಲಿನಲ್ಲಿ ನಿಲ್ಲಬಲ್ಲ ಕಥೆಗಾರರು. ಇಬ್ಬರೂ ಕೂಡ ಗ್ರಾಮೀಣ ಬದುಕಿನೊಂದಿಗೆ ಬೆಳೆದು ಆ ಪರಿಸರವನ್ನೇ ತಮ್ಮ ಕಥಾ ಭಿತ್ತಿಯೊಳಗೆ ರೂಪಿಸಿದವರು. ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ಇಂದಿಗೂ ಹೆಚ್ಚು ಪರಿಣಾಮಕಾರಿಯಾಗಿ ರೂಪಿತವಾಗುತ್ತಿರುವ ಅನುಭವ ಲೋಕವೆಂದರೆ ಗ್ರಾಮ ಮತ್ತು ಕೃಷಿಬದುಕಿನ ಲೋಕವೇ ಆಗಿದೆ. ರಾಮಣ್ಣನವರು ತಮ್ಮ ಅನುಭವಗಳನ್ನು ಹೆಕ್ಕಿ ಅವುಗಳನ್ನು ಕಥೆಗಳ ಮೂಲಕ ಮರುಶೋಧಿಸುವ ಪ್ರಯತ್ನವನ್ನು ಮಾಡುತ್ತಾರೆ. ವ್ಯಕ್ತಿ ಮತ್ತು ಸಮಾಜದ ನಡುವಿನ, ವೈರುಧ್ಯ, ಸಂಕೀರ್ಣತೆಗಳನ್ನು ಶೋಧಿಸುವ ದೇಸಿಸಂವೇದನೆ ಅವರ ಕತೆಗಳ ವಿಶಿಷ್ಟತೆಯಾಗಿದೆ. ಗ್ರಾಮೀಣ ಜೀವನವನ್ನೇ ವಸ್ತುವಾಗಿಸಿಕೊಂಡ ಅವರ ಕತೆಗಳು ಬದುಕಿನ ದರ್ಪ–ದೌರ್ಬಲ್ಯ, ಅಪರಿಹಾಸ್ಯ, ವಿಷಾದ – ವಿಷಣ್ಣತೆ, ಅಸಹಾಯಕತೆ – ಅಂತಃಕರಣ, ತಿಕ್ಕಾಟ–ತೀವ್ರತೆ,

ಸೋಲು-ಗೋಳು, ಅನಾಥತೆ – ಆತ್ಮಬಲ, ನೀತಿ-ನಿಯಮಗಳನ್ನೊಳಗೊಂಡು ಬದುಕಿನ ಅನಂತಮುಖಗಳನ್ನು ಸೀಮಿತ ಪರಿಧಿಯಲ್ಲಿ ಸೂಕ್ಷ್ಮವಾಗಿ ಅನಾವರಣಗೊಳಿಸುತ್ತವೆ.

ನವ್ಯೋತ್ತರ ಸಂದರ್ಭದಲ್ಲಿ ಬಂಡಾಯದನಿಯಲ್ಲಿ ಗುರುತಿಸಿಕೊಂಡ ಕುಂ.ವೀರಭದ್ರಪ್ಪ ಅವರು ತಮ್ಮದೇ ಆದ ಛಾಪನ್ನು ಸಾಹಿತ್ಯ ವಲಯದಲ್ಲಿ ಮೂಡಿಸಿದವರು. ಹಳ್ಳಿಯ ಜೀವನ, ಹಳ್ಳಿಯ ಪಾತ್ರಗಳು, ಹಸಿವಿನ ಬಹುಮುಖದ ಚಿತ್ರಣ ಕೊಡುವುದರ ಮೂಲಕ ತಳವರ್ಗದವರ ಬದುಕನ್ನು ಕತೆಗಳ ಮೂಲಕ ಅನಾವರಣಗೊಳಿಸುವುದು ಇವರ ಕತೆಗಳ ಕೇಂದ್ರವಸ್ತು. ಕುಂ.ವೀರಭದ್ರಪ್ಪ ಅವರು ತಳವರ್ಗದ ಮನುಷ್ಯನ ಬದುಕಿನ ಹಿಂದಿನ ಒತ್ತಡಗಳನ್ನು ಅರ್ಥೈಸುತ್ತಾ ಸಾಗುವ ಅವರ ಕತೆಗಳಿಗೆ ಪ್ರಾದೇಶಿಕ ಅನುಭವದ ಗಾಢತೆಯಿಂದ ಅವರ ಕತೆಗಳು ಅನನ್ಯವೆನಿಸುವುದು. ಈ ಇಬ್ಬರು ಕತೆಗಾರರು ಗ್ರಾಮೀಣ ಬದುಕು, ಅಲ್ಲಿಯ ಸಮಸ್ಯೆಗಳು ಹಾಗೂ ತಳವರ್ಗದ ದೌರ್ಬಲ್ಯಗಳನ್ನು ಮಾನವೀಯ ಅಂತಃಕರಣದಿಂದ ನೋಡುತ್ತಾರೆ.

ಇಬ್ಬರು ಕತೆಗಾರರು ದಲಿತರ ಬದುಕನ್ನು ದಿಣ್ಣೆಯ ಮೇಲೆ ನಿಂತು ನೋಡಿದವರು. ದೇವನೂರು ಮಹಾದೇವ ಅವರಂತೆ ಅನುಭವ ಕಟ್ಟಿಕೊಡಲು ಸಾಧ್ಯವೇ? ದಲಿತರ ಗುಡಿಸಲು ಹೊಕ್ಕುನೋಡಿದವರೆ? ಪ್ರಶ್ನೆ ಸಹಜವಾದರೂ ದಲಿತೇತರ ಕತೆಗಾರರಾದ ರಾಮಣ್ಣ ಮತ್ತು ಕುಂ.ವೀರಭದ್ರಪ್ಪರವರು ದಲಿತರ ಬದುಕನ್ನು ನೋಡಿರುವ ಸಾಧ್ಯತೆಯನ್ನು ಕುರಿತು ಪ್ರಶ್ನೆ ಎದ್ದರೂ, ಮಾನವೀಯ ಮಿಡಿತಕ್ಕೆ ದಲಿತರ, ದಲಿತೇತರ, ಕಾಲ, ದೇಶ, ಧರ್ಮ ಮಾನದಂಡವಾಗಬಲ್ಲದೆ? ದಲಿತರ ಬದುಕಿನ ಸಂಸ್ಕೃತಿಯೊಳಗಿನ ಅಂತಃಕರಣ, ಪ್ರೀತಿ, ಚೆಂದವನ್ನು ಕತೆಗಳು ದಾಖಲಿಸುವುದಿಲ್ಲವೆ? ಸೂಕ್ಷ್ಮತೆ, ಒಳನೋಟದಿಂದ ಯಾವ ಅನುಭವ ದಕ್ಕಲು ಅಸಾಧ್ಯ? ಎಂಬ ಕೊಂಕು ಮಾತುಗಳಿಗೆ ಇಬ್ಬರ ಕಥೆಗಳು ಉತ್ತರವೆಂಬಂತೆ ರೂಪುಗೊಂಡಿವೆ.

ಇಂದಿನ ಯುವ ಜನಾಂಗ ಗ್ರಾಮೀಣ ಲೋಕದಿಂದ ದೂರ ಸರಿಯುತ್ತಿರುವ ಸಂದರ್ಭದಲ್ಲಿ, ಇಬ್ಬರ ಕಥೆಗಳು ಗ್ರಾಮ ಬದುಕಿನ ಸಾರವನ್ನು ನೀಡುತ್ತವೆ. ಇವರ ಕತೆಗಳು ಸಮಾಜಮುಖಿಯಾಗಿ ರೂಪುಗೊಂಡಿದ್ದು ಬದುಕನ್ನು ಮೌಲ್ಯದ ನೆಲೆಯಲ್ಲಿ ಗಟ್ಟಿಗೊಳಿಸಬಲ್ಲವಾಗಿವೆ. ಇಬ್ಬರೂ ಸಣ್ಣ ಕತೆಗಳ ಸಾಹಿತ್ಯದಲ್ಲಿ ಸಾರ್ಥಕತೆ ಕಂಡವರು. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿರುವ ಮೌಲ್ಯ ಪ್ರಜ್ಞೆ ಕುರಿತಾದ ಸಂಶೋಧನಾತ್ಮಕ ಮತ್ತು ತೌಲನಿಕ ಅಧ್ಯಯನದಿಂದ ಮೌಲಿಕ ಸಂದೇಶಗಳನ್ನು ಮತ್ತು ಸಂಬಂಧಗಳನ್ನು ಕಂಡುಕೊಳ್ಳುವ ಪ್ರಸ್ತುತತೆ ಇಂದಿನ ಸಂಶೋಧನೆಗೆ ಇದೆ. ಇರ್ವರ ಕಥೆಗಳಲ್ಲಿ

ಹುದುಗಿರುವ ಹೇಳಲಾಗದ ಅಮೂರ್ತತೆಗಳನ್ನು ಅಂದರೆ ಸಂಬಂಧಗಳ ಸೂಕ್ಷ್ಮತೆ, ಲೈಂಗಿಕ ವಿಚಾರಗಳು, ಶೋಷಣೆಯ ನೆಲೆಗಳು ಮುಂತಾದವುಗಳನ್ನು ಶೋಧಿಸುವ ಅಗತ್ಯತೆಯನ್ನು ನನ್ನ ಮಹಾಪ್ರಬಂಧವು ಒಳಗೊಂಡಿದೆ. ಆದ್ದರಿಂದಲೇ ಈ ಬಗೆಗಿನ ಅಧ್ಯಯನ ನಡೆಸುವುದು ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ಯಂತ ಸೂಕ್ತವೆಂದು ಭಾವಿಸಿದ್ದೇನೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಪ್ರಸ್ತುತವಾಗಿರುವ ಮೌಲಿಕ ಸಂದೇಶ ನಮ್ಮ ಬದುಕಿಗೆ ಬೆಳಕನ್ನು ತೋರಬಹುದಾಗಿದೆ. ಸಾರ್ವಕಾಲಿಕ ಮೌಲ್ಯಗಳು, ಆದರ್ಶಗಳು ಅವರ ಕಥಾಸಾಹಿತ್ಯದಲ್ಲಿ ರೂಪುಗೊಂಡಿರುವ ಸಾಧ್ಯತೆಗಳತ್ತ ಚಿಂತಿಸುವ ಪ್ರಸ್ತುತತೆ ನನ್ನ ಅಧ್ಯಯನದ ಉದ್ದೇಶವಾಗಿದೆ.

ವೈದಾನಿಕತೆ : ಕನ್ನಡ ಸಣ್ಣ ಕಥಾಪರಂಪರೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಬೇರೆ ಬೇರೆ ಭೂಪ್ರದೇಶದವರಾದರೂ ಇಬ್ಬರ ಕಥೆಗಳಲ್ಲಿ ಕಂಡುಬರುವ ಹಲವಾರು ಮೌಲಿಕ ಅಂಶಗಳು ಸಾಮ್ಯತೆಯನ್ನು ಹೊಂದಿವೆ. ಅದೇ ರೀತಿ ಭಾಷೆ, ಆಚರಣೆ, ಪರಿಣಾಮಗಳ ದೃಷ್ಟಿಯಿಂದ ಇಬ್ಬರ ಕಥೆಗಳನ್ನು, ಭಿನ್ನತೆಗಳನ್ನು ಗುರುತಿಸುವ ವೈಧಾನಿಕತೆಯನ್ನು ಅನುಸರಿಸಲಾಗುವುದು. ಇಬ್ಬರ ಕಥೆಗಳಲ್ಲಿ ರೂಪಿತ ಗೊಂಡಿರುವ ಅವರ ಬದುಕಿನ ಪರಿಸರ, ಸಾಮಾಜಿಕ ಜೀವನಸ್ತರಗಳು, ಆಚರಣೆಗಳು, ಹಸಿವು–ಬಡತನ, ಸ್ತ್ರೀಸಂವೇದನೆ ಮುಂತಾದ ಮೌಲಿಕ ವಿಚಾರಗಳನ್ನು ತುಲನಾತ್ಮಕವಾಗಿ ವಿಶ್ಲೇಷಣೆ ಮಾಡಿ ಅವುಗಳಿಗೆ ಮೌಲ್ಯಕಟ್ಟುವ ವಿಧಾನವನ್ನು ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯ ಪ್ರಜ್ಞೆಯ ಅಧ್ಯಯನ ತೌಲನಿಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ. ಅಧ್ಯಯನದ ಅನುಕೂಲದೃಷ್ಟಿಯಿಂದ ಐದು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅಧ್ಯಾಯ **ಒಂದು 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ'**ಯನ್ನು ಒಳಗೊಂಡಿದ್ದು ಮಹಾಪ್ರಬಂಧದ ಅಧ್ಯಯನದ ಉದ್ದೇಶ, ಅಳವಡಿಸಿಕೊಂಡಿರುವ ವೈಧಾನಿಕತೆ ಈ ಮಹಾ ಪ್ರಬಂಧದ ವ್ಯಾಪ್ತಿಯನ್ನು ಕುರಿತಂತೆ ವಿವರಿಸಲಾಗಿದೆ.

ಎರಡನೇ ಅಧ್ಯಾಯ **'ಪೂರ್ವ ಸಾಹಿತ್ಯ ಸಮೀಕ್ಷೆ'**ಯು 'ಬೆಸಗರಹಳ್ಳಿ ರಾಮಣ್ಣ' ಮತ್ತು 'ಕುಂ. ವೀರಭದ್ರಪ್ಪ' ಅವರ ಕತೆಗಳನ್ನು ಕುರಿತಂತೆ ಇದುವರಗೆ ನಡೆದಿರುವ ಅಧ್ಯಯನಗಳ ಪೂರ್ವ ಸಾಹಿತ್ಯ ಸಮೀಕ್ಷೆಯನ್ನು ಒಳಗೊಂಡಿದ್ದು ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಮತ್ತು

ಸಂಶೋಧನಾ ಕೇಂದ್ರಗಳಲ್ಲಿ ನಡೆದಿರುವ ಸಂಶೋಧನಾ ಪ್ರಬಂಧಗಳ ತಾತ್ವಿಕವಾದ ಸಮೀಕ್ಷೆಯನ್ನು ಈ ಭಾಗದಲ್ಲಿ ಸಮೀಕ್ಷಿಸಲಾಗಿದೆ.

ಮೂರನೆಯ ಅಧ್ಯಾಯ **'ಮೌಲ್ಯ ಪ್ರಜ್ಞೆಯ ಪರಿಕಲ್ಪನೆ'** ಭಾಗವು ಸಾರ್ವತ್ರಿಕ ಮೌಲ್ಯಗಳ ಜೊತೆಗೆ ಹೊಸ ಮೌಲ್ಯಗಳ ಗುರುತಿಸುವಿಕೆಯನ್ನು ಒಳಗೊಂಡಿದೆ. ಸಾಹಿತ್ಯದಲ್ಲಿ ದಾಖಲಾಗಿರುವ ಸಾಹಿತ್ಯಿಕ ಮೌಲ್ಯ, ನೈತಿಕಮೌಲ್ಯ, ಅಧ್ಯಾತ್ಮಿಕ ಮೌಲ್ಯ, ಸಾಮಾಜಿಕ ಮೌಲ್ಯ ಮತ್ತು ವೈಚಾರಿಕ ಮೌಲ್ಯ ಮೊದಲಾದ ಮೌಲ್ಯದ ನೆಲೆಗಳನ್ನು ವಿದ್ವಾಂಸರ ಚಿಂತನೆಯ ಬೆಳಕಿನಲ್ಲಿ ವಿವೇಚಿಸಲಾಗಿದೆ. ಜೊತೆಗೆ ಇಬ್ಬರು ಕಥೆಗಾರರ ಕಥೆಗಳಲ್ಲಿನ ಮೌಲಿಕ ಸಂದೇಶಗಳು ಮತ್ತು ಸಂಬಂಧಗಳನ್ನು ಕುರಿತಾದ ಚಿಂತನೆಯನ್ನು ನಿರೂಪಿಸಲಾಗಿದೆ.

ನಾಲ್ಕನೇ ಅಧ್ಯಾಯವು **'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ'** ಭಾಗವು ಇಬ್ಬರು ಕಥೆಗಾರರ ಜೀವನದ ವಿವಿಧ ಘಟ್ಟಗಳ ಪ್ರಗತಿ ಅವರ ಸಾಹಿತ್ಯದ ಪ್ರಗತಿಯನ್ನು ಹೇಗೆ ರೂಪಿಸಲ್ಪಟ್ಟಿತು ಎಂಬ ಅಂಶಗಳನ್ನು ಒಳಗೊಂಡಿವೆ. ಇಬ್ಬರ ಪರಿಸರವು ಅವರವರ ಸಾಹಿತ್ಯದ ರಚನೆಗೆ ಹೇಗೆ ಬೆನ್ನೆಲುಬಾಗಿ ನಿಂತು ಸಹಕಾರಿಯಾದವು ಎಂಬುದರ ವಿವರಣೆಯನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ **'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯಪ್ರಜ್ಞೆಯ ವಿಭಿನ್ನ ನೆಲೆಗಳ ತೌಲನಿಕ ವಿವೇಚನೆ'** ಕುರಿತಂತೆ ತೌಲನಿಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನವನ್ನು ನಡೆಸಲಾಗಿದೆ. ಈ ಇಬ್ಬರ ಕಥೆಗಳಲ್ಲಿ ಕಂಡುಬರುವ ಪ್ರಮುಖವಾದ ಮೌಲಿಕ ಸ್ತರಗಳನ್ನು ಈ ಕೆಳಕಂಡಂತೆ ಗುರುತಿಸಿ ಉಪ ಅಧ್ಯಾಯಗಳಾಗಿ ರೂಪಿಸಲಾಗಿದೆ. ಅವುಗಳೆಂದರೆ–

- ಸಾಮಾಜಿಕ ನೆಲೆ
- ಸ್ತ್ರೀಸಂವೇದನೆ
- ಹಸಿವು ಮತ್ತು ಬಡತನ .
- ಧರ್ಮ ಮತ್ತು ಆಚರಣೆ
- ಭಾಷಿಕ ನೆಲೆ

'ಸಾಮಾಜಿಕ ನೆಲೆ'ಯಲ್ಲಿ ಇಬ್ಬರೂ ಕಥೆಗಾರರ ಕತೆಗಳಲ್ಲಿ ಕಂಡುಬರುವ ಸಮಾಜದ ಜನಜೀವನ, ಜೀವನ ಪ್ರೀತಿ, ನಿಷ್ಠೆ, ಅಸಮಾನತೆ, ಪ್ರತಿರೋಧಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಸಮಕಾಲೀನ ಸಮಾಜದ ಅಂಶಗಳನ್ನು ವಿಶ್ಲೇಷಿಸಿ ಅದರ ಮೂಲಕ ಸಮಾಜ, ಸಾಮರಸ್ಯಕ್ಕೆ,

ಸಮ-ಸಮಾಜ ಸೃಷ್ಟಿಗೆ ಯಾವ ರೀತಿಯ ಮೌಲಿಕ ಅಂಶಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಲಾಗಿದೆ.

'ಸ್ತ್ರೀ ಸಂವೇದನೆ' ಭಾಗದಲ್ಲಿ ಕಥೆಗಾರರಿಬ್ಬರೂ ವಾಸ್ತವಿಕ ನೆಲೆಯ ಚಿತ್ರಣಗಳನ್ನು ನೀಡಿದ್ದು, ಹೆಣ್ಣಿನ ಬವಣೆಗಳನ್ನು ಆಸಕ್ತಿಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ಮೇಲೆ ಆಗುವ ಅನೇಕ ಸಾಮಾಜಿಕ ಶೋಷಣೆಯನ್ನು ಗಮನದಲ್ಲಿಟ್ಟುಕೊಂಡು ಈ ಭಾಗವನ್ನು ವಿಶ್ಲೇಷಿಸಲಾಗಿದೆ. ಹೆಣ್ಣಿಗೂ ಕೂಡ ಮೌಲ್ಯಯುತವಾದ ಬದುಕನ್ನು ಕಟ್ಟಿಕೊಡಬಹುದಾದ ಮಾರ್ಗೋಪಾಯಗಳನ್ನು ಕತೆಗಳಲ್ಲಿ ನಿರೂಪಿಸಿರುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

'ಹಸಿವು ಮತ್ತು ಬಡತನ' ಎಂಬ ಉಪಶೀರ್ಷಿಕೆಯಲ್ಲಿ ಇಬ್ಬರೂ ಕತೆಗಾರರ ಕಥೆಗಳ ಮೂಲನೆಲೆಯಾಗಿರುವ ಹಸಿವು ಮತ್ತು ಬಡತನದ ಚಿತ್ರಣವನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ವರ್ತಮಾನದಲ್ಲಿ ಹಸಿವು ಮತ್ತು ಬಡತನಗಳು ಹೇಗೆ ಚಿತ್ರಿತವಾಗಿವೆ ಎಂಬುದನ್ನು ಈ ಇಬ್ಬರ ಕತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

ಮುಂದಿನ ಉಪಶೀರ್ಷಿಕೆ **'ಧರ್ಮ ಮತ್ತು ಆಚರಣೆ'**ಯಲ್ಲಿ ಇಬ್ಬರೂ ಕತೆಗಾರರ ಕತೆಗಳಲ್ಲಿ ಒಡಮೂಡಿರುವ ನಂಬಿಕೆ, ಮೂಢನಂಬಿಕೆ, ಆಚರಣೆ, ಸಂಪ್ರದಾಯ, ಪದ್ಧತಿಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಧರ್ಮ ಆಚರಣೆಗಳು ಆಧುನಿಕ ಕಾಲದಲ್ಲಿ ಹೇಗೆ ಮೌಲ್ಯವನ್ನು ಕಳೆದುಕೊಂಡಿವೆ. ನಿಜವಾದ ಧರ್ಮದ ಮೌಲ್ಯ ಮಾನವತೆ ಎಂಬ ಸತ್ಯವನ್ನು ಇಬ್ಬರ ಕತೆಗಳು ಹೇಗೆ ಧ್ವನಿಸುತ್ತವೆ ಎಂಬುದನ್ನು ತೌಲನಿಕವಾದ ವಿಶ್ಲೇಷಣಾತ್ಮಕ ವಿಧಾನದಿಂದ ಅಧ್ಯಯನ ಮಾಡಲಾಗಿದೆ.

'ಭಾಷಿಕ ನೆಲೆ'ಯೆಂಬ ಉಪಶೀರ್ಷಿಕೆಯು ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪನವರು ತಮ್ಮ ತಮ್ಮ ಪರಿಸರದ ಹಿನ್ನೆಲೆಯ ಭಾಷೆಯನ್ನು ಹೇಗೆ ತಮ್ಮ ಕತೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಉತ್ತರಕರ್ನಾಟಕ ಮತ್ತು ದಕ್ಷಿಣದ ಮಂಡ್ಯದ ಆಡುಭಾಷೆ ಅವರವರ ಕತೆಗಳಲ್ಲಿ ಬಳಕೆಯಾಗಿರುವುದನ್ನು ವಿಶ್ಲೇಷಿಸಲಾಗಿದೆ. ಭಿನ್ನ ಭಿನ್ನ ನೆಲೆಗಳಲ್ಲಿ ಅದರದೇ ಆದ ಭಾಷಾ ಸೊಗಡನ್ನು ಹೊಂದಿ ಜನರ ಭಾಷೆ ಸಾಹಿತ್ಯ ಭಾಷೆಯಾಗಿ ಹೇಗೆ ಮೌಲಿಕವಾದುದು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

'ಸಮಾರೋಪ' ಭಾಗದಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯ ಪ್ರಜ್ಞೆಯ ವಿವಿಧ ನೆಲೆಗಳನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡಿ ಅದರ ಫಲಿತಗಳನ್ನು ದಾಖಲಿಸಲಾಗಿದೆ. ಮಹಾಪ್ರಬಂಧದ ಒಟ್ಟು ನೋಟವನ್ನು ಮತ್ತು ನನ್ನ ಅಧ್ಯಯನದ ಮೌಲಿಕ ಫಲಿತಗಳನ್ನು ಇದು ಒಳಗೊಂಡಿರುತ್ತದೆ.

ಅಧ್ಯಾಯ : ೨

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳನ್ನು ಕುರಿತ ಪೂರ್ವ ಸಾಹಿತ್ಯ ಸಮೀಕ್ಷೆ

ಅಧ್ಯಾಯ – ೨

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳನ್ನು ಕುರಿತ ಪೂರ್ವ ಸಾಹಿತ್ಯ ಸಮೀಕ್ಷೆ

ಓದುಗರನ್ನು ಹೆಚ್ಚು ಆಕರ್ಷಿಸುವ ಸಾಹಿತ್ಯ ಪ್ರಕಾರದಲ್ಲಿ ಪ್ರಮುಖವಾದ ಕಥಾಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಹೆಚ್ಚಿನ ಅಧ್ಯಯನಗಳು ನಡೆಯುತ್ತಿವೆ. ಕತೆಗಾರರಾಗಿ ಸಾಹಿತ್ಯ ವಲಯದಲ್ಲಿ ಗುರುತಿಸಲ್ಪಟ್ಟಿರುವ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥಾಸಾಹಿತ್ಯಕ್ಕೆ ವಿಶಿಷ್ಟ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳು ಇದ್ದು ಅದನ್ನು ಕಂಡುಕೊಳ್ಳುವುದು ಮುಖ್ಯವಾದುದಾಗಿದೆ. ಕಾವ್ಯದಲ್ಲಿ ಮೌಲ್ಯ ಅಂತರ್ಗತವಾಗಿರುವಂತೆ ಕತೆಗಳಲ್ಲಿ ಅನೇಕ ಸ್ವಭಾವಗಳ ಭಿನ್ನ ಭಿನ್ನ ಸಂಸ್ಕಾರಗಳ ನೂರಾರು ಭಾವಲಹರಿಗಳನ್ನು ತುಂಬಿಕೊಂಡು ಬೆಳೆಯುತ್ತಾ ಮೌಲ್ಯ ಶೋಧನೆಯತ್ತ ತೊಡಗುತ್ತದೆ. ಈ ನಿಟ್ಟಿನಲ್ಲಿ ಕತೆಗಳಲ್ಲಿನ ಮೌಲ್ಯ ಪ್ರಜ್ಞೆ ಅಧ್ಯಯನದ ಅವಶ್ಯಕತೆಯನ್ನು ಮನಗಂಡು ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯ ಪ್ರಜ್ಞೆ ಎಂಬ ವಿಷಯವನ್ನು ಸಂಶೋಧನೆಗೆ ಕೈಗೊಳ್ಳಲಾಗಿದೆ. ನನ್ನ ಈ ಮಹಾಪ್ರಬಂಧಕ್ಕೆ ಪೂರಕವಾಗಿ ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿದೆ.

'ಕತೆ ಹುಟ್ಟುವ ಪರಿ' : ಅಮರೇಶನುಗಡೋಣಿ ಅವರ ಕೃತಿಯಲ್ಲಿ ಕತೆ ಕಟ್ಟುವ, ಭಾಷೆಯ ರೂಪದಲ್ಲಿ ಅಭಿವ್ಯಕ್ತಗೊಳ್ಳುವ ವಿಸ್ಮಯದ ಬಗ್ಗೆ ಕತೆಗಾರರ ವಿವಿಧ ಅಭಿಪ್ರಾಯಗಳನ್ನು ಕತೆ ರೂಪುಗೊಳ್ಳುವ ಬಗೆಗೆ ವಿವರಣೆಯನ್ನು ನೀಡಿದ್ದಾರೆ.

ಶ್ರೀನಿವಾಸವೈದ್ಯ ಅವರು ತಮ್ಮ ಲೇಖನದಲ್ಲಿ ಕಾದಂಬರಿಗಿಂತ ಸಣ್ಣಕತೆ ಒಡ್ಡುವ ಸವಾಲು ಕಠಿಣ, ವಿಷಯ ವ್ಯಾಪ್ತಿ, ನಿರೂಪಣೆ, ಗುರಿ, ಪಾತ್ರ ನಿರ್ವಹಣೆ ಎಲ್ಲವುಗಳಲ್ಲಿ ಮುಖ್ಯವಾಗಿ ಇರಬೇಕಾದದ್ದು ಮಿತಿಯೇ, ಮಿತವ್ಯಯವೇ ಸಣ್ಣಕತೆಯ ಸವಾಲು ಮತ್ತು ಆಕರ್ಷಣೆ ಎಂದಿದ್ದಾರೆ.

ಲೋಕೇಶ ಅಗಸನಕಟ್ಟೆ ಅವರ ಲೇಖನದಲ್ಲಿ ಕತೆ ಹುಟ್ಟಲು ಮುಖ್ಯವಾದುದು ಚಿಂತನೆ ಮತ್ತು ವಸ್ತುದ್ರವ್ಯ ಎಂದಿದ್ದು ಲೋಕಾಂತರದ ಒಂದು ಘಟನೆ ಏಕಾಂತದಲ್ಲಿ ಎಬ್ಬಿಸುವ ಬಿರುಗಾಳಿ ಕತೆಯಾಗಿ ರೂಪುಗೊಳ್ಳುತ್ತದೆ. ಕತೆಗೆ ಒಂದು ಘಟನೆ, ಒಂದು ಮಾತು, ವಿಚಾರ ಚಾಲನೆ ಒದಗಿಸುತ್ತದೆ ಎನ್ನುತ್ತಾರೆ. ಬರವಣಿಗೆಯಲ್ಲಿ ತೊಡಗುವವರಿಗೆ ಅತ್ಯಂತ ಅಗತ್ಯವಾದುದೆಂದರೆ ಲೋಕವನ್ನು ನೋಡುವ ದೃಷ್ಟಿ, ಒಂದು ತಾತ್ವಿಕ ಚಿಂತನೆ, ಲೋಕದ

ಸುಖದುಃಖಗಳನ್ನು ಕಿವಿತೆರೆದು ತನ್ನದಾಗಿಸಿಕೊಂಡು ನೋಡುವ ಜೀವನದೃಷ್ಟಿ, ತಾತ್ವಿಕತೆ ಹಾಗೂ ಗಟ್ಟಿಯಾದ ಜೀವನಾನುಭವವೇ ಕತೆಗೆ ಮುಖ್ಯ ಎಂದು ವಿವರಿಸುತ್ತಾರೆ.

ಕತೆಯ ಇಂದಿನ ತುಡಿತ-ಮಿಡಿತಗಳು ಕತೆಯನ್ನು ಮುರಿದುಕಟ್ಟುವಲ್ಲಿ ಜೀವನದೃಷ್ಟಿ ಮುಖ್ಯವಾದುದೆಂದು ಬಹುತೇಕ ಕತೆಗಾರರ ಅಭಿಪ್ರಾಯವಾಗಿದೆ. ಕತೆಯ ಸೃಷ್ಟಿಗೆ ಕಾರಣವಾದ ಅಂಶಗಳು ಮುಖ್ಯವೆನಿಸುವುದರಿಂದ ಈ ಕೃತಿ ಸಂಶೋಧನೆಗೆ ಪೂರಕವೆನ್ನಬಹುದಾಗಿದೆ.

ಸಣ್ಣಕತೆಯ ವಿಮರ್ಶೆಗೆ ಸಂಬಂಧಿಸಿದಂತೆ ಟಿ.ಪಿ. ಅಶೋಕ ಅವರ **'ಸಾಹಿತ್ಯ ಸಂಚಾರ'** ಮತ್ತು **'ಕಥನ ಪ್ರೀತಿ'** ಕೃತಿಗಳಲ್ಲಿ ಕುಂ.ವೀರಭದ್ರಪ್ಪ ಅವರ ಎರಡು ಕತೆಗಳನ್ನು ವಿಮರ್ಶೆ ಮಾಡಲಾಗಿದೆ. **'ಕುರ್ಮಾವತಾರ'** ಭಿನ್ನಸ್ತರಕ್ಕೆ ಸೇರಿದ್ದು ಕೆಳವರ್ಗದ ಸಾಮಾಜಿಕ ಬದುಕಿನ ಮಿತಿ ದಾಟಿದೆ ಎನ್ನಬಹುದಾಗಿದೆ. ಅನುಭವ ಸಮೃದ್ಧತೆಯೇ ಹೆಚ್ಚಿರುವ ಅವರ ಕತೆಗಳಲ್ಲಿ ಹಾಸ್ಯ, ವಿನೋದ ಸಹಜವಾಗಿ ಒಡಮೂಡಿ ಬರುತ್ತದೆಯಾದರೂ ಈ ಕತೆ ಗಾಂಧಿ ತತ್ವಕ್ಕೆ ಅನುಸಾರವಾಗಿ ನಿಷ್ಠವಾದ ವೈಯಕ್ತಿಕ ಬದುಕಿನ ಚಿತ್ರಣವಿದ್ದು ಅಂತ್ಯದಲ್ಲಿ ಮಾನವೀಯತೆಯ ಮೆರುಗಿನಲ್ಲಿ ನಿಲ್ಲುತ್ತದೆ. **'ಕುಬುಸ'** ಕತೆ ಬದಲಾದ ಕಾಲಮಾನಕ್ಕೆ ಹೊಂದಿಕೊಳ್ಳಲು ಅನಕ್ಷರಸ್ಥ ಸಮುದಾಯ ಪಡುವ ಕಷ್ಟ, ತೊಳಲಾಟವನ್ನು ಬಂಡೆವ್ವಜ್ಜಿಯ ಪಾತ್ರದ ಮೂಲಕ ಆಧುನಿಕತೆ ಮತ್ತು ಪರಂಪರೆಯೊಂದಿಗಿನ ಸಂಘರ್ಷವನ್ನು ಸೂಕ್ಷ್ಮವಾಗಿ ತಮ್ಮ ವಿಶಿಷ್ಟ ಮೋಡಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ವಿಮರ್ಶೆಗಳೊಂದಿಗೆ ಕೆರೂರು ವಾಸುದೇವಾಚಾರ್ಯರಿಂದ ಪ್ರಾರಂಭವಾಗಿ ಇತ್ತೀಚಿನ ಕತೆಗಾರರ ಕತೆಗಳನ್ನು ಮರು ಓದು, ವಿಮರ್ಶೆಯ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

'ಕನ್ನಡ ಕಥನ ಸಾಹಿತ್ಯ: 'ಸಣ್ಣಕತೆ' - ಜಿ.ಎಸ್. ಅಮೂರ ಅವರ ಕೃತಿಯಲ್ಲಿ ಸಣ್ಣಕತೆಯ ವಿಕಾಸಕ್ಕೆ ಕಾರಣರಾದ ಕತೆಗಾರರ ಕತೆಗಳಿವೆ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪರವರು ಕತೆಗಳನ್ನು ವಿಮರ್ಶೆಯಲ್ಲಿ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿದ್ದಾರೆ. ರಾಮಣ್ಣನವರ ಕತೆಗಳು ಸಾಮಾಜಿಕ ವಾಸ್ತವಕ್ಕೆ ಸಮೀಪವಾಗುವ ಬಗೆಯನ್ನು ಸುಗ್ಗಿ, ದೇವರ ಹೂ ಕತೆಗಳಲ್ಲಿ ಕಾಣಬಹುದಾಗಿದ್ದು ಸಮಾಜದ ಹಲವು ಸ್ತರಗಳ ನೋಟವನ್ನು ಕಕರನಯುಗಾದಿ ಕತೆಯಲ್ಲಿ, ಸರ್ಕಾರಿ ಸಂಸ್ಥೆಗಳ ಕಾರ್ಯವೈಖರಿಯನ್ನು ಗಾಂಧಿ, ಕ್ಷಮಾಗುಣವನ್ನು ಗಂಗಾ ಕತೆಯಲ್ಲಿ ಕಟ್ಟಿಕೊಟ್ಟಿರುವುದನ್ನು ವಿಶ್ಲೇಷಿಸಿದ್ದಾರೆ.

ಹಸಿವಿನ ಚಿತ್ರಣವನ್ನು ಕೊಡುವ 'ಕಿವುಡ ನಾಯಿಯಾದ ಪ್ರಸಂಗ' ಕತೆ, ವ್ಯಂಗ್ಯ, ವೈಚಾರಿಕತೆ ಆಯಾಮದ 'ಲೋಹಿಯಾವಾದಿಯೊಬ್ಬನ ಕಥೆ'ಗಳು ಪ್ರಾತಿನಿಧಿಕವಾಗಿದ್ದು ಪ್ರತಿಭಟನೆಯ ಹಿನ್ನೆಲೆಯಲ್ಲಿ ರೂಪಿತವಾಗಿವೆ. ಸಣ್ಣಕತೆಯ ಸ್ವರೂಪ ಬೇರೆ ಪ್ರಕಾರಕ್ಕಿಂತ ಭಿನ್ನವಾಗಿರುವ ಬಗೆಗಿನ ಒಳನೋಟವಿದೆ.

ಲೋಹಿಯಾ ಅವರ ಸಮಾಜವಾದದ ಚಿಂತನೆಗಳು ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಮೇಲೆ ಪ್ರಭಾವ ಬೀರಿರುವ ಹಿನ್ನೆಲೆಯಲ್ಲಿ **'ಲೋಹಿಯಾ : ವರ್ತಮಾನ ಮುಖಾಮುಖಿ'** ಸಂ : ಎ.ಎಸ್. ಪ್ರಭಾಕರ, ಶ್ರೀಪಾದಶೆಟ್ಟಿ; **'ರಾಮಮನೋಹರ ಲೋಹಿಯಾ ಚಿಂತನೆ'** ಸಂ : ನಟರಾಜ ಹುಳಿಯಾರ್ ಅವರ ಕೃತಿಗಳನ್ನು ಕತೆಗಳು ಅರ್ಥಪೂರ್ಣಮೌಲ್ಯಗಳ ಪುನರ್ ಸ್ಥಾಪನೆಗೆ ಕಾರಣವಾಗುವ ಸಾಧ್ಯತೆಗಳ ನೆಲೆಯಲ್ಲಿ, ಇಂದಿನ ಜಾಗತೀಕರಣದ ಕೋಮುವಾದ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟು ಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕತೆಗಳ ಮಹತ್ವವನ್ನು ತಿಳಿಯುವ ಪ್ರಯತ್ನವಿದೆ.

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರು ಸಮಾಜವನ್ನು ಗ್ರಹಿಸುವ, ವಿಶ್ಲೇಷಿಸುವ, ಅದನ್ನು ಬದಲಿಸಲು ಕಂಡುಕೊಂಡ ವಿಧಾನದಲ್ಲಿ ಪರಸ್ಪರ ಭಿನ್ನರಾಗಿದ್ದರೂ ಲೋಹಿಯಾ ಚಿಂತನೆಗಳ ಪ್ರಭಾವವಲಯದಲ್ಲಿ ಕತೆಗಳು ರೂಪಿತವಾಗಿರುವ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ ಈ ಕೃತಿಯಲ್ಲಿ ಮಾಡಲಾಗಿದೆ.

'ಮಾತು ತಲೆಯೆತ್ತುವ ಬಗೆ': ರಹಮತ್‌ತರೀಕೆರೆ ಅವರ ಕೃತಿಯಲ್ಲಿ ಕುಂ.ವೀರಭದ್ರಪ್ಪ ಅವರು **'ನನ್ನನ್ನು ಲೇಖಕನಾಗಿ ರೂಪಿಸಿದ ಪರಿಸರ'** ಲೇಖನದಲ್ಲಿ ತಾವು ಆಕಸ್ಮಿಕವಾಗಿ ಬರಹಗಾರನಾದ ಬಗೆ, ತನ್ನ ಕತೆಯನ್ನು ರಕ್ತಸಂಬಂಧಿಗಳಾರೂ ಓದಿರದ ಬಗ್ಗೆ, ತಳವರ್ಗಕ್ಕೆ ತಲುಪದಿರುವ ಬಗ್ಗೆ ಗಾಢವಿಷಾದವಿರುವ ಅವರು ತಾವು ನವನಿರ್ಮಾಣ ಚಳವಳಿಯಲ್ಲಿ ಭಾಗವಹಿಸಿದ್ದು, ಅಬ್ರಹಾಂ ಕೊವೂರ್‌ರ ಪ್ರಭಾವಕ್ಕೆ ಒಳಗಾಗಿದ್ದು, ತಳವರ್ಗದವರೊಡನೆ ತ್ರಿಕರಣಪೂರ್ವಕವಾಗಿ ಒಡನಾಡಿದ್ದು, ಕುಗ್ರಾಮಗಳ ಬದುಕು ಕತೆಗಾರನಾಗಲು ಕಾರಣವಾದ ಸಂಗತಿಗಳನ್ನು ಹೇಳಿರುವ ಹಿನ್ನೆಲೆಯಲ್ಲಿ ಕತೆಗಳನ್ನು ಗ್ರಹಿಸುವ ಯತ್ನ ಮಾಡಲಾಗಿದೆ.

'ಕುಂ.ವೀರಭದ್ರಪ್ಪ ಅವರ ಕಥಾಸಾಹಿತ್ಯ' : ಗಿರಡ್ಡಿ ಗೋವಿಂದರಾಜ ಅವರ ಸಂಪಾದಿತ ಕೃತಿಯಲ್ಲಿನ ಟಿ.ಪಿ. ಅಶೋಕ ಅವರ 'ಡೋಮ ಮತ್ತಿತ್ತರ ಕತೆಗಳು' ಲೇಖನದ ಹತ್ತು ಕತೆಗಳ ವಿಮರ್ಶೆಯಲ್ಲಿ ಸಮಕಾಲೀನ ಬಂಡಾಯ ಲೇಖಕರಾದ ಕುಂ.ವೀರಭದ್ರಪ್ಪ ಅವರಿಗೆ

ತಳವರ್ಗದ ಬದುಕಿನ ಬಗೆಗೆ ಇರುವ ಅನುಭವ ಸಮೃದ್ಧತೆ, ಪಾತ್ರಗಳಲ್ಲಿ ಕಂಡುಬರುವ ವೈಯಕ್ತಿಕ ನೆಲೆಯ ಅತಿರಂಜಕ ಪ್ರತಿರೋಧ, ಶೋಷಿತರ ಬದುಕಿನ ಜೀವನಪ್ರೀತಿ, ಪಾತ್ರಗಳಲ್ಲಿನ ಗಟ್ಟಿತನವನ್ನು ವಿಶ್ಲೇಷಿಸಿದ್ದಾರೆ.

ಕೆ. ರವೀಂದ್ರನಾಥ್ ಅವರು ಕುಂ.ವೀರಭದ್ರಪ್ಪರವರ ಕಥೆಗಳ ಭಾಷೆ, ವಸ್ತು ಮತ್ತು ತಂತ್ರಗಳ ಕುರಿತು ತಮ್ಮ ಲೇಖನದಲ್ಲಿ ವಸ್ತು ಸರಳ ಮತ್ತು ನೇರ ಅನಿಸಿದರೂ ವಿಶ್ಲೇಷಣೆ ಸುಲಭವಾಗಿಲ್ಲದ ಬಗ್ಗೆ ಕತೆಯಲ್ಲಿರುವ ತಂತ್ರವನ್ನು ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ ಕತೆಯ ಮೂಲಕ, ಭಾಷೆ ಕುಂ.ವೀರಭದ್ರಪ್ಪ ಅವರ ಸ್ವತ್ತಾಗಿದ್ದು ಕತೆಗಳನ್ನು ಅದು ಶಕ್ತಿಗೊಳಿಸಿರುವ ಬಗ್ಗೆ ವಿವರಣೆ ನೀಡಿದ್ದಾರೆ.

ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿನ ಪ್ರಾದೇಶಿಕತೆಯ ಬಗ್ಗೆ ಎಫ್.ಟಿ. ಹಳ್ಳಿಕೇರಿ ಅವರ ಲೇಖನದಲ್ಲಿ ಬದುಕನ್ನು ಹತ್ತಿರದಿಂದ ಕಂಡ ಕುಂ.ವೀರಭದ್ರಪ್ಪರವರ ಕಥೆಗಳಲ್ಲಿ ಭಾಷೆಯು ಪ್ರಾದೇಶಿಕ ಸೊಗಡಿನಿಂದ,ತೆಲುಗಿನ ಲೇಪನದಿಂದ ಕತೆಗೆ ವಿಶಿಷ್ಟತೆಯೊಂದಿಗೆ, ಎರಡು ಪ್ರದೇಶಗಳ ಸಂಸ್ಕೃತಿ ಸಹಜವಾಗಿ ಮೂಡಿ ಬಂದಿರುವ ಬಗೆಯನ್ನು ಕತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

'ಯುಗಧರ್ಮ ಮತ್ತು ಸಾಹಿತ್ಯದರ್ಶನ' : ಕೀರ್ತಿನಾಥ ಕುರ್ತುಕೋಟಿ ತಮ್ಮ ಕೃತಿಯಲ್ಲಿ ಕಥನತಂತ್ರ, ಕಥನ ಗುಣ ಕತೆಗಳಲ್ಲಿನ ಬದುಕಿನ ಎಚ್ಚರ, ಜೀವನಶ್ರದ್ಧೆ ಅವುಗಳಲ್ಲಿನ ಸಂಸ್ಕೃತಿ ಚಿತ್ರಣ, ಕತೆಯ ಸೌರಭ, ಕಲೆಗಾರಿಕೆಯ ಅಂಶಗಳನ್ನು ವಿಶ್ಲೇಷಿಸುವ ಕಥಾಸಾಹಿತ್ಯದ ಸಂಕ್ಷಿಪ್ತ ಚಿತ್ರಣವನ್ನು ನೀಡಿದ್ದಾರೆ.

'ಸಮಗ್ರ ವಿಮರ್ಶೆ' : ಗಿರಡ್ಡಿಗೋವಿಂದರಾಜ ಅವರ ಕೃತಿಯಲ್ಲಿ ಸಣ್ಣ ಕತೆಗಳಲ್ಲಿ ಮಾಸ್ತಿಯವರ ಮಹತ್ವ, ಕಥಾಪರಂಪರೆ ಬೆಳೆದ ಬಗೆ, ಕಥಾ ಸ್ವರೂಪ, ಇತ್ತೀಚಿನ ಕತೆಯ ಒಲವುಗಳನ್ನು ಸಂಶೋಧನಾತ್ಮಕವಾಗಿ ನೋಡಿದ್ದಾರೆ. ಬೆಸಗರಹಳ್ಳಿ ರಾಮಣ್ಣನವರು ನೇರ ಮತ್ತು ಸರಳವಾಗಿ, ಬಂಡಾಯ ಆದರ್ಶಗಳೊಂದಿಗೆ, ಹೊಸ ಉದ್ದೇಶಗಳಿಗಾಗಿ ಬರೆಯುವ ಲೇಖಕರಾಗಿದ್ದು, ತಮ್ಮ ಗ್ರಾಮೀಣ ಅನುಭವದ ಹಿನ್ನೆಲೆಯಲ್ಲಿ ಕತೆಗಾರರಾಗಿ ರೂಪುಗೊಂಡ ಬಗೆ ಮತ್ತು ಅವರ ಗಾಂಧಿಕತೆಯನ್ನು ಪ್ರಾತಿನಿಧಿಕವಾಗಿ ವಿಮರ್ಶಿಸಿದ್ದಾರೆ. ಕುಂ.ವೀರಭದ್ರಪ್ಪ ಅವರು ಬಂಡಾಯ ಮನೋಧರ್ಮದ ಕಥೆಗಾರರಾಗಿದ್ದು ಅವರ ಕತೆಗಳಲ್ಲಿ ವ್ಯಕ್ತವಾಗುವ ಪ್ರತಿರೋಧ ಉಗ್ರವಾಗಿದ್ದು ಸಾಹಿತ್ಯದಲ್ಲಿ ಕಾಣಿಸದ ಕೆಳವರ್ಗದ ಬದುಕನ್ನು ಕತೆಗಳ ಮೂಲಕ ಪರಿಚಯಿಸುವುದನ್ನು 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಕತೆಯಲ್ಲಿ

ವೈಚಾರಿಕ ನೆಲೆಗೆ ಕತೆ ಬಂದು ನಿಲ್ಲುವುದನ್ನು ಮತ್ತು ಕತೆಗಿರುವ ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸಿದ್ದಾರೆ.

'ಗಾಂಧಿಕ್ಲಾಸು' : ಇದು ಕುಂ.ವೀರಭದ್ರಪ್ಪ ಅವರ ಆತ್ಮಕಥನವಾಗಿದ್ದು ಬಾಲ್ಯದಲ್ಲೇ ಬುದ್ಧಿವಂತ ಎಂದು ಗುರುತಿಸಲ್ಪಟ್ಟಿದ್ದ ಕುಂ.ವೀರಭದ್ರಪ್ಪ ಅವರು ಹೇಳುವಂತೆ ತಂದೆ ಸೃಜನಶೀಲ ಕುಂಬಾರ, ನಟ, ಹಾಡುಗಾರ, ಕತೆಗಾರ, ಮಾತುಗಾರ, ಅಜಾನುಬಾಹು, ಶೋಕಿಲಾಲ ತಂದೆಯ ಪ್ರಭಾವ ತಮ್ಮ ಮೇಲಾದ ಬಗ್ಗೆ ಮತ್ತು ತಂದೆಯಿಂದಲೇ ಬಂಡಾಯ ಮನೋಧರ್ಮ, ಮುಚ್ಚುಮರೆಯಿಲ್ಲದ ವ್ಯಕ್ತಿತ್ವ ರೂಪುಗೊಳ್ಳಲು ಕಾರಣ ಎಂದೂ, ಕರ್ನಾಟಕಾಂಧ್ರದ ಅಡಕತ್ತರಿಯಲ್ಲಿ ಸೌಲಭ್ಯವಂಚಿತ, ಖೂನಿ ಊರುಗಳಲ್ಲಿ ಶಿಕ್ಷಕ ವೃತ್ತಿಯ ಸವಾಲನ್ನು ಎದುರಿಸಿದ್ದು, ಅನುಭವಗಳನ್ನು ಬಾಚಿಕೊಂಡಿದ್ದು, ಕತೆಗಾರರಾಗಿ ರೂಪುಗೊಂಡ ಹಿನ್ನೆಲೆಯಲ್ಲಿ ಮಹಾಪ್ರಬಂಧಕ್ಕೆ ಪೂರಕವಾಗಿ ಅಧ್ಯಯನ ಮಾಡಲಾಗಿದೆ.

'ಕಾಡುಗಿಣಿ' ಕೆ. ಪುಟ್ಟಸ್ವಾಮಿ, ರವಿ ಬೆಸಗರಹಳ್ಳಿ (ಸಂ) ಅವರ ಕೃತಿಯ ವಿವಿಧ ಲೇಖನಗಳು ಉದಾತ್ತ ಮನೋಭಾವದ, ಭಾವುಕ ಮನಸ್ಸಿನ, ಗ್ರಾಮ ಭಾರತಕ್ಕೆ ಚಿಕಿತ್ಸೆ ನೀಡುವ ಕಾಯಕ ಮಾಡಿದ ಮಾನವೀಯ ಅಂತಃಕರಣದ, ರೋಗಿಗಳಿಗಾಗಿ ಹಗಲಿರುಳು ದುಡಿದ, ಹೃದಯವಂತ ವೈದ್ಯರಾದ, ಆಪ್ತಭಾವದ, ಜನಪರ ಕಾಳಜಿಯ, ಬೆಚ್ಚನೆಯ ಸ್ನೇಹದ, ಹಂಚುಣ್ಣುವ, ಉದಾತ್ತ, ನಿಷ್ಕಲ್ಮಶ ಮನದ, ಮಾನವತಾವಾದಿ, ವಾಸ್ತವವಾದಿ ನೆಲೆಗಟ್ಟಿನ ಸಶಕ್ತ ಕತೆಗಾರರಾದ ರಾಮಣ್ಣನವರ ವ್ಯಕ್ತಿತ್ವವನ್ನು ಅರಿಯಲು ಲೇಖನಗಳು ಸಹಕಾರಿಯಾಗಿವೆ.

ಬೆಸಗರಹಳ್ಳಿ ರಾಮಣ್ಣನವರ ಬದುಕು-ಬರಹ ಕುರಿತಾದ ವಿಚಾರ ಸಂಕಿರಣದ ವಿಮರ್ಶಾ ಲೇಖನಗಳು **'ಆಲೆಮನೆ'** ಕೃತಿಯಲ್ಲಿ ಪ್ರಕಟಗೊಂಡಿದ್ದು, ಕತೆಯಿಂದ ಕತೆಗೆ ರಾಮಣ್ಣ ಬೆಳೆದ ಬಗೆ, ಕತೆಗಳಲ್ಲಿರುವ ಧೋರಣೆ, ಜೀವನದ್ರವ್ಯ, ಕಾದಂಬರಿ ಕಾವ್ಯ ಪ್ರಕಾರಗಳಲ್ಲಿ ಯಶಸ್ವಿಯಾದ ಬಗ್ಗೆ, ಕುವೆಂಪು ಅವರಿಂದ ಪ್ರಭಾವಿತರಾಗಿದ್ದನ್ನು ಕುರಿತು, ಕಥೆಗಳಲ್ಲಿರುವ ಬದುಕಿನ ಎಚ್ಚರದ ಬಗ್ಗೆ ಹಿರಿಯ ಲೇಖಕರ ಬರಹಗಳು ಪ್ರಬಂಧಕ್ಕೆ ಮಹತ್ವ ಪೂರ್ಣವಾಗಿವೆ.

ಸ.ಚಿ.ರಮೇಶ ಅವರ **'ಡಾ. ಬೆಸರಗರಹಳ್ಳಿ ರಾಮಣ್ಣ'**, ಕೃತಿ ರಾಮಣ್ಣನವರ ವ್ಯಕ್ತಿತ್ವ ಕಥಾಸಾಹಿತ್ಯ ಕುರಿತ ವಿಮರ್ಶೆಯನ್ನು ಒಳಗೊಂಡಿದೆ. **'ಡಾ. ಬೆಸಗರಹಳ್ಳಿ'** ಲೀಲಾ ಅಪ್ಪಾಜಿ ಅವರ ಸಂಪಾದಿತ ಕೃತಿಯಲ್ಲಿ ಮನುಷ್ಯ ಸಂಬಂಧಗಳಿಗೆ ಕಾತರಿಸುವ ರಾಮಣ್ಣನವರ ವ್ಯಕ್ತಿ

ವೈಶಿಷ್ಟ್ಯತೆ, ಅವರ ಕಥಾಸಾಹಿತ್ಯದಲ್ಲಿನ ಗ್ರಾಮೀಣ ಸಂಸ್ಕೃತಿಯ ಕೂಡು ಬದುಕಿನ ಚೆಲುವು, ಮನುಷ್ಯ ಸಂಬಂಧಗಳನ್ನು ಬೆಸೆಯುವಲ್ಲಿ ನಿಸರ್ಗದ ಪಾತ್ರ, ಅವರ ಕಥೆಗಳಲ್ಲಿನ ಮೌಲ್ಯ ಚಿಂತನೆ, ತಳವರ್ಗದವರಲ್ಲಿ ಕಾಣಿಸುವ ಸಾಮಾಜಿಕ ಎಚ್ಚರ, ಪ್ರತಿಭಟಿಸಬಲ್ಲ ಪ್ರಗತಿ ಪರವಾಗಿ ಆಲೋಚಿಸಬಲ್ಲ ಮಹಿಳಾ ಪಾತ್ರಗಳು, ದೇಸಿ, ಜಾನಪದ ಸಮೃದ್ಧತೆಯಿಂದ ಗಟ್ಟಿಗೊಂಡ ಕಥೆಗಳು, ಜನಮೂಲ ನೆಲೆಯ ಗ್ರಾಮ್ಯತೆಯ ಸೊಗಡಿನ ವಿಶಿಷ್ಟ ಸಂಸ್ಕೃತಿಯ ಸ್ವಾತಂತ್ರ್ಯೋತ್ತರ ಭಾರತ ಸಮಾಜದ ಮಾನವ ಬದುಕನ್ನು ಅರ್ಥವತ್ತಾದ ರೀತಿಯಲ್ಲಿ ಕಟ್ಟಿ ರೂಪಿಸುವ ಅದಮ್ಯ ಹಂಬಲವನ್ನು ಕತೆಗಳ ಮೂಲಕ ಅಭಿವ್ಯಕ್ತಿಗೊಳಿಸಿ ಸಾಕಾರಗೊಳ್ಳುವ ಬಗೆಗೆ ಆಶಾವಾದಿ ಚಿಂತನೆಯ ರಾಮಣ್ಣನವರ ಕಥಾಸಾಹಿತ್ಯ ಮತ್ತು ವ್ಯಕ್ತಿ ವಿಶಿಷ್ಟತೆ ನೆಲೆಯಲ್ಲಿ ಹಲವಾರು ವಿದ್ವಾಂಸರು ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡಿದ್ದಾರೆ.

'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳ ತೌಲನಿಕ ಅಧ್ಯಯನ', ಬಿಂದುರಾಣಿ ಎಸ್.ಕೆ. ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧದಲ್ಲಿ ಸಾಮಾಜಿಕ ಎಚ್ಚರದೊಂದಿಗೆ ತನ್ನ ಸುತ್ತಲಿನ ಪರಿಸರಕ್ಕೆ ನಿರಂತರ ಸಂಬಂಧ ಮತ್ತು ಸಂವಾದವನ್ನಿರಿಸಿಕೊಂಡೇ ಬರೆದ ಕತೆಗಳ ಮೂಲಕ ಬದುಕಿನ ಶೋಧನೆ ಮಾಡಿರುವ ಬಗ್ಗೆ ಅಧ್ಯಯನ ಮಾಡಿದ್ದಾರೆ.

'ಕುಂ.ವೀರಭದ್ರಪ್ಪ ಕಾದಂಬರಿಗಳು : ಒಂದು ಅಧ್ಯಯನ', ಮಲ್ಲಿಕಾರ್ಜುನ. ಕೆ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧದಲ್ಲಿ ಸಾಮಾಜಿಕ ಚೌಕಟ್ಟಿನಲ್ಲಿ ಸಂಸ್ಕೃತಿಯ ನೆಲೆಗಳನ್ನು ದಾಖಲಿಸುವ ಕುಂ.ವೀರಭದ್ರಪ್ಪ ಅವರ ಹದಿಮೂರು ಕಾದಂಬರಿಗಳನ್ನು ವಸ್ತು, ಭಾಷೆ, ಶೈಲಿ, ತಂತ್ರಗಳನ್ನು ವಿವಿಧ ಆಯಾಮಗಳಲ್ಲಿ ಗ್ರಹಿಸಲಾಗಿದೆ.

'ಕುಂ.ವೀರಭದ್ರಪ್ಪರವರ ಕಥಾಸಾಹಿತ್ಯ : ಒಂದು ಅಧ್ಯಯನ', ಕೆ. ಅಮೃತೇಶ್ವರ ಅವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧದಲ್ಲಿ ಕಥೆ–ಕಾದಂಬರಿಗಳ ಮೂಲಭೂತವಾದ ತಾತ್ವಿಕ ಚಿಂತನೆಗಳನ್ನು ಹಾಗೂ ಅವುಗಳ ಅಂತಃ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸಲಾಗಿದೆ. ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಬರುವ ಪಾತ್ರಗಳು ಹಲವು ಬಗೆಯ ಸಮಸ್ಯೆಗಳನ್ನು ಹಾಗೂ ಜೀವನದ ಹೊಸ ಮೌಲ್ಯಗಳನ್ನು ಹೊತ್ತು ತರುವ ಬಗೆಯನ್ನು ಚಿತ್ರಿಸಲಾಗಿದೆ. ಕೆಲವು ಕತೆಗಳ ಕೇಂದ್ರ ಪಾತ್ರಗಳನ್ನು ವಿಲಕ್ಷಣತೆಯ ನೆಲೆಯಲ್ಲಿಟ್ಟು ಬರೆಯುವ ಕುಂ.ವೀರಭದ್ರಪ ಅವರ ವಿಲಕ್ಷಣ ಎಂದು ತೋರುವ ನಡವಳಿಕೆಯಲ್ಲಿಯೇ ಶಿಷ್ಟ ಸಮಾಜದ ವೈರುಧ್ಯಗಳನ್ನು ಬಯಲಿಗೆಳೆಯುವ ಚಿತ್ರಣವನ್ನು ಗುರುತಿಸಲಾಗಿದೆ. ಶೋಷಣೆಯ

ವಿವಿಧ ಮುಖಗಳ ಸೂಕ್ಷ್ಮಗಳನ್ನು ಜಾತಿ, ವರ್ಗ ಸಂಘರ್ಷನೆಲೆಯಲ್ಲಿ ಮತ್ತು ತೆಲುಗು ವಿಪ್ಲವಸಾಹಿತ್ಯದ ಪ್ರೇರಣೆ-ಪ್ರಭಾವದ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ.

'ಡಾ. ಬೆಸಗರಹಳ್ಳಿ ರಾಮಣ್ಣ ಅವರ ಕತೆಗಳು : 'ಒಂದು ಸಾಂಸ್ಕೃತಿಕ ಅಧ್ಯಯನ' ಎಂ. ಚಂದ್ರಮ್ಮ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧದಲ್ಲಿ ಅಂತರಂಗ ಜೀವನಕ್ಕೆ ಸಂಬಂಧಿಸಿದ ಸಂಸ್ಕೃತಿಯ ವಿಕಾಸ, ಜನಸಾಮಾನ್ಯರು ಅನುಸರಿಸುವ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಗುಣ ಮೌಲ್ಯಗಳನ್ನು ಕತೆಗಳ ಮೂಲಕ ಚರ್ಚಿಸಲಾಗಿದೆ. ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿಯ ಉನ್ನತ ಜೀವನ ನೆಲೆಯಲ್ಲಿ ಕತೆಗಳ ವಿಶ್ಲೇಷಣೆ ಮಾಡಲಾಗಿದೆ.

'ಡಾ. ಬೆಸಗರಹಳ್ಳಿ ರಾಮಣ್ಣನವರ ಸಮಗ್ರ ಸಾಹಿತ್ಯ : ಒಂದು ಅಧ್ಯಯನ', ಸಿ. ಪ್ರಭಾವತಿಯವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧದಲ್ಲಿ ಸ್ವಾತಂತ್ರ್ಯಾನಂತರದ ಗ್ರಾಮೀಣ ಬದುಕು, ಜೀತಪದ್ಧತಿ, ಭೂಮಿ ಪ್ರಶ್ನೆ, ಸಮಾಜವಾದ ಚಿಂತನೆ ಕುರಿತು ಅಧ್ಯಯನ ಮಾಡಿದ್ದಾರೆ.

'ದೇವನೂರು, ನಾಗವಾರ ಮತ್ತು ಕುಂವೀ ಅವರ ಕಥೆಗಳು : ಒಂದು ಅಧ್ಯಯನ', ಎಸ್. ನರೇಂದ್ರಕುಮಾರ್ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಸಂಶೋಧನಾ ಮಹಾ ಪ್ರಬಂಧದಲ್ಲಿ ದಲಿತರ ಸಾಮುದಾಯಿಕ ಬದುಕಿನ ಬವಣೆಗಳು, ಜೀವಂತಿಕೆಯ ವಿವರಗಳು, ಮಡಿವಂತಿಕೆ ಮುರಿದ ಭಾಷೆಯಲ್ಲಿ ಅಭಿವ್ಯಕ್ತಗೊಂಡಿವೆ. ಇವರ ಕತೆಗಳಲ್ಲಿನ ಗ್ರಾಮ್ಯ ಜಗತ್ತು ಸಂಕೀರ್ಣ ಸ್ವರೂಪವಾಗಿದ್ದು, ಶೋಷಿತ ಬದುಕಿನ ಗಾಢವಾದ ಅನುಭವ ದ್ರವ್ಯ ಮತ್ತು ದಲಿತರ ಸತ್ವಭರಿತ ಬದುಕನ್ನು ಹಿಡಿದಿಟ್ಟಿರುವುದು ಮುಖ್ಯವಾದ ಅಧ್ಯಯನವೆನಿಸುತ್ತದೆ.

'ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' ಎನ್.ಕೆ. ಕೋದಂಡರಾಮ ಅವರ ಕೃತಿಯಲ್ಲಿ ರಾಮಣ್ಣ ಅವರಿಗೆ ಗ್ರಾಮೀಣ ಬದುಕಿನ ಅಂತರಾಳದ ಅರಿವಿರುವುದರಿಂದಲೇ ಅವರ ಕತೆಗಳು ಜೀವ ಸೆಲೆ ಬತ್ತದಂತೆ ಕಾಪಿಡುತ್ತಾ ಸಾಗುತ್ತವೆ. ಬಂಡಾಯದ ನೆಲೆಯಲ್ಲಿ ವರ್ತಮಾನದ ಕ್ರೌರ್ಯವನ್ನು, ಭವಿಷ್ಯದಲ್ಲಿ ಬದಲಾವಣೆಯ ಸಾಧ್ಯತೆಯಲ್ಲಿ ನೋಡುವ ಆಶಯದ ನೋಟವಿದೆ. ದಲಿತನ ಶ್ರಮವನ್ನು ಸೂರೆ ಹೊಡೆಯುವ ಮೇಲ್ವರ್ಗ ಅವನ ಅಸ್ತಿತ್ವವನ್ನು ನಿರಾಕರಿಸುವುದು ಮಾನವೀಯವಲ್ಲ ಎಂಬ ಜೀವಪರ ನಿಲುವು ಗಮನಾರ್ಹವೆನಿಸುತ್ತದೆ.

ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ವಿವಿಧ ಲೇಖಕರು, ಕನ್ನಡ ಸಾಹಿತ್ಯ ಅಕಾಡೆಮಿ, ಪ್ರಧಾನ ಸಂಪಾದಕರು : ಬರಗೂರು ರಾಮಚಂದ್ರಪ್ಪ ಅವರ ಕೃತಿಯಲ್ಲಿ ಆರ್.ವಿ. ಭಂಡಾರಿ ಅವರ ಲೇಖನದಲ್ಲಿ ಕುಂ.ವೀರಭದ್ರಪ್ಪ ಅವರು ಚಿತ್ರಿಸುವ ಲೋಕ ದಲಿತರದಾಗಿದೆ ಎಂದು, ಪ್ರತಿಭಟನೆ ವೈಯಕ್ತಿಕ ನೆಲೆಯಲ್ಲಿ ಕಲಾರೂಪದಲ್ಲಿ ಸಂಭವಿಸುವ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ಪುರುಷೋತ್ತಮ ಬಿಳಿಮಲೆ ಅವರು ತಮ್ಮ ಲೇಖನದಲ್ಲಿ ಬೆಸಗರಹಳ್ಳಿ ರಾಮಣ್ಣನವರ ಕತೆಗಳು ಗ್ರಾಮೀಣ ಪರಿಸರದ ಸಣ್ಣ ಕುಟೀರಗಳಲ್ಲಿ ಚಿಗುರೊಡೆಯುವ ಬಗ್ಗೆ ತಿಳಿಸಿದ್ದಾರೆ. ಎಲ್. ಹನುಮಂತಯ್ಯ ಅವರು ತಮ್ಮ ಲೇಖನದಲ್ಲಿ ರಾಮಣ್ಣನವರು ಗ್ರಾಮೀಣ ಲೋಕದ ಅನುಭವವನ್ನು ಅಥೆಂಟಿಕ್ ಆಗಿ ನೀಡಿರುವ ಬಗ್ಗೆ, ಕತೆಗಳ ಮೂಲಕ ಸಂಸ್ಕೃತಿಯೊಳಗಿನ ಮೋಸವನ್ನು ಅನಾವರಣ ಮಾಡಿರುವ ಬಗ್ಗೆ ವಿಮರ್ಶೆ ಮಾಡಿದ್ದಾರೆ.

ಬರಗೂರು ರಾಮಚಂದ್ರಪ್ಪನವರ **'ಮರ್ಯಾದಸ್ಥ ಮನುಷ್ಯರಾಗೋಣ',** ಅಂಕಿತ ಪುಸ್ತಕ ಕೃತಿಯಲ್ಲಿನ ಲೇಖನದಲ್ಲಿ ರಾಮಣ್ಣನವರು ಹಳ್ಳಿಯ ಸುಗ್ಗಿ – ಸಂಕಟಗಳನ್ನು ಒಟ್ಟಿಗೆ ಕಟ್ಟಿಕೊಟ್ಟ ಕತೆಗಾರರೆಂದು, ಹಳ್ಳಿಯನ್ನು ವೈಭವೀಕರಿಸದೆ ಕಟುವಾಸ್ತವಗಳ ಗ್ರಹಿಕೆ ನೆಲೆಯಲ್ಲಿ ಕಂಡ ಬಗೆಯನ್ನು ವಿಶ್ಲೇಷಿಸಿದ್ದಾರೆ.

ಚಂದ್ರಶೇಖರ ಪಾಟೀಲರ **'ಚಂಪಾದಕೀಯ'** ಕೃತಿಯಲ್ಲಿ ರಾಮಣ್ಣನವರ ತೆರೆದ ಬದುಕು ಮತ್ತು ವ್ಯಕ್ತಿತ್ವ ಕುರಿತು ಬರೆದಿದ್ದಾರೆ. ಚಿ. ಶ್ರೀನಿವಾಸರಾಜುರವರ **'ಆಗಾಗ'** ಕೃತಿಯಲ್ಲಿ 'ಬೆಚ್ಚನೆಯ ಗೆಳಯ ಬೆಸಗರಹಳ್ಳಿ ರಾಮಣ್ಣ' ಲೇಖನದಲ್ಲಿ ರಾಮಣ್ಣನವರು ತೋರುವ ಮಾನವೀಯತೆಯಲ್ಲಿ ಹೊರಗೆ ಮತ್ತು ಒಳಗೆ ಒಂದೇ ರೀತಿಯಲ್ಲಿರುವ ಅವರ ವ್ಯಕ್ತಿತ್ವ ಕುರಿತು ಬರೆಯಲಾಗಿದೆ.

ಬರಗೂರು ರಾಮಚಂದ್ರಪ್ಪರವರ **'ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ',** ಕೃತಿಯಲ್ಲಿ ಕುಂ.ವೀರಭದ್ರಪ್ಪ ಅವರು ತಮ್ಮ ಲೇಖನದಲ್ಲಿ ಲೇಖಕನಾದವನಿಗೆ ಮಾನವೀಯ ಮೌಲ್ಯಗಳು ಸಜೀವ ಮೌಲ್ಯಗಳೇ ಎಂಬ ಸ್ಪಷ್ಟ ಅರಿವು ಅಗತ್ಯವಾಗಿರುವ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ಸಿ.ಎನ್. ರಾಮಚಂದ್ರನ್‌ರವರು ಕುಂವೀ ಸ್ಟೈಲ್ ಎಂದೇ ಪೇಟೆಂಟ್ ಆಗಿರುವ ಅವರ ವ್ಯಂಗ್ಯ – ವೈನೋದಿಕ ಅಥವಾ ಅಣಕು – ಮಹಾಶೈಲಿ, ಭವ್ಯ ಥ ಕ್ಷುಲ್ಲಕ, ಸಾಧಾರಣ

ಥ ಅಸಾಧಾರಣ, ಗ್ರಾಂಥಿಕ ಥ ಗ್ರಾಮ್ಯದ ಕುಂ.ವೀರಭದ್ರಪ್ಪ ಅವರ ಬರಹದ ಶೈಲಿ ಕುರಿತು ವಿಶ್ಲೇಷಣೆ ಮಾಡಿದ್ದಾರೆ.

ಲೋಕೇಶ್ ಅವರು **'ದೇವನೂರು ಮಹಾದೇವ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ದಲಿತ ಬದುಕು'** ಎಂಬ ವಿಷಯದ ಬಗ್ಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಕಿರುಪ್ರಬಂಧವನ್ನು ಸಲ್ಲಿಸಿರುತ್ತಾರೆ. ಕಿರುಪ್ರಬಂಧವನ್ನು ನಾನು ಗಮನಿಸಿದಾಗ ಅವರು ದಲಿತ ಬದುಕಿನ ದಟ್ಟ ಸಾಮಾಜಿಕ ಆರೋಗ್ಯಕರ ನಿಲುವು ಮತ್ತು ಸೂಕ್ಷ್ಮ ಪ್ರಗತಿಪರ ನಿಲುವನ್ನು ಗುರುತಿಸಿದ್ದಾರೆಂಬುದು ನನಗೆ ತಿಳಿದು ಬಂದ ವಿಷಯವಾಗಿರುತ್ತದೆ. ಇಬ್ಬರು ಚಿಂತನಶೀಲ ಲೇಖಕರು ಸಾಮಾಜಿಕ ಎಚ್ಚರದೊಂದಿಗೆ ತಮ್ಮ ಸುತ್ತಲಿನ ಪರಿಸರದೊಂದಿಗೆ ನಿರಂತರ ಸಂಬಂಧ ಮತ್ತು ಸಂವಾದವನ್ನಿರಿಸಿಕೊಂಡಿರುವುದು ಕಥೆಗಳಲ್ಲಿ ಕಂಡುಬರುತ್ತದೆ.

ಜಯಲಕ್ಷ್ಮಿ ಎಂ.ಎಸ್. ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ **'ಬೆಸಗರಹಳ್ಳಿ ಸಾಂಸ್ಕೃತಿಕ ಅಧ್ಯಯನ'** ಎಂಬ ಕಿರುಪ್ರಬಂಧದಲ್ಲಿ 'ಸಂಸ್ಕೃತಿ ಬದಲಾದರೂ ಬೇರು ಬದಲಾಗುವುದಿಲ್ಲ' ಎಂಬ ಹೇಳಿಕೆಯೊಂದಿಗೆ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಬೆಸಗರಹಳ್ಳಿಯಲ್ಲಿರುವ ವಿವಿಧ ಜಾತಿಗಳು, ಅಲ್ಲಿಯ ಜನರ ಆಹಾರ ಪದ್ಧತಿ, ಆಚಾರ-ವಿಚಾರಗಳು, ಉಡುಗೆ-ತೊಡುಗೆಗಳು ಕೃಷಿ ಪದ್ಧತಿ, ಶೈಕ್ಷಣಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಮುಂತಾದವುಗಳ ಸ್ಥಿತಿ-ಗತಿಗಳ ಚಿತ್ರಣದ ವಿವರಗಳನ್ನು ಚರ್ಚಿಸಿದ್ದಾರೆ.

"ದೇವನೂರು ಮಹಾದೇವ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಪ್ರತಿಭಟನೆಯ ಸ್ವರೂಪ: ಎಂಬ ಕಿರುಪ್ರಬಂಧವನ್ನು ವಸಂತಕುಮಾರ ಅವರು ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಅವರು ಕತೆಗಳಲ್ಲಿರುವ ಪರಂಪರಾಗತ ಜೀವ ವಿರೋಧಿ ಮೌಲ್ಯಗಳು ಅನಾವರಣಗೊಂಡಿರುವ ಬಗ್ಗೆ ಮತ್ತು ಪ್ರಗತಿಪರ ನೆಲೆಗೆ ಸಾಗಲು ತಡೆಯಾಗಿರುವ ಬಗ್ಗೆ ತಿಳಿಸಿದ್ದಾರೆ. ಮುಕ್ತ ಮನಸ್ಸಿನಿಂದ ಇಬ್ಬರು ಲೇಖಕರು ತೀಕ್ಷ್ಣವಾಗಿ ವರ್ತಮಾನಕ್ಕೆ ಸ್ಪಂದಿಸಿರುವುದರಲ್ಲಿ ಬರಹಗಾರರಿಗೆ ಆಯಾ ಪರಿಸರಗಳೇ ಸತ್ವದ ಅಂಶಗಳಾಗಿವೆ ಎಂದು ಗುರುತಿಸಿದ್ದಾರೆ. ಮನುಷ್ಯರನ್ನು ಮನುಷ್ಯರಂತೆ ಬದುಕಲು ಬಿಡದ ಸಂಸ್ಕೃತಿಯ ಇನ್ನೊಂದು ಮುಖವನ್ನು ಬಯಲು ಮಾಡುವುದನ್ನು ಕಥೆಗಳ ಮೂಲಕ ವಿಶ್ಲೇಷಿಸಿದ್ದಾರೆ.

ಗ್ರಾಮೀಣ ಬದುಕನ್ನು ಅನಾವರಣಗೊಳಿಸುವ ಕತೆಗಾರರೆಂದೇ ಕರೆಸಿಕೊಳ್ಳುವ ಬೆಸಗರಹಳ್ಳಿ ರಾಮಣ್ಣ ಸ್ಥಗಿತಗೊಂಡ ಸಂಸ್ಕೃತಿಯ ನೆಲೆಯಲ್ಲಿ ಹಳ್ಳಿಗಳನ್ನು ನೋಡದೆ, ಅವರು ಹಳ್ಳಿಯ ಆಚರಣೆಗಳನ್ನು ಪರಿಶೀಲಿಸುತ್ತಾ ಸಾಮಾಜಿಕ ಕಾಳಜಿಯ ಆಯಾಮಕ್ಕೆ ಕರೆದೊಯ್ಯುವ ಅವರ ಕತೆಗಳಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ನಿಸರ್ಗ ಪ್ರೀತಿ ಕೆನೆಗಟ್ಟಿರುವ ಬಗೆಯನ್ನು ವಿಶ್ಲೇಷಿಸಿದ್ದರೆ, ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ತಳವರ್ಗದವರು ಉಳಿವಿಗಾಗಿ ನಡೆಸುವ ಹೋರಾಟ, ಮಾನವೀಯ ಗ್ರಹಿಕೆಗಳು, ಅಸಹಾಯಕರ ಪರವಾಗಿ ಅಧಿಕೃತವಾಗಿ ಬರೆಯುವ ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಹೊಸತನವನ್ನು ವಿಶ್ಲೇಷಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ, ಪ್ರಾದೇಶಿಕತೆಯ ನೆಲೆ, ಭಾಷೆ, ವಸ್ತು, ತಂತ್ರ, ಜೀವನ ಪ್ರೀತಿ ಮತ್ತು ಸಾಂಸ್ಕೃತಿಕ ನೆಲೆಗಳನ್ನೊಳಗೊಂಡ ಅಧ್ಯಯನಗಳನ್ನು ವಿಶ್ಲೇಷಣಾತ್ಮಕವಾಗಿ ಸಂಶೋಧನೆಯ ಪರಿಧಿಯಲ್ಲಿ ಮಾಡಿದ್ದಾರೆ. ಈ ಎಲ್ಲಾ ಅಂಶಗಳು ಪ್ರಸ್ತುತ ಕಾಲಘಟ್ಟದಲ್ಲಿ ಮೌಲ್ಯಯುತವಾದ ಅಂಶಗಳಾಗಿದ್ದು ಅವುಗಳ ಮೂಲಕ ಸಾಮಾಜಿಕ ಬದುಕನ್ನು ಹಸನುಗೊಳಿಸಲು ಹೇಗೆ ಅಳವಡಿಸಿಕೊಳ್ಳಬೇಕೆಂಬ ಆಶಯವನ್ನು ಹೊಂದಿರುತ್ತವೆ. ಆದ್ದರಿಂದ ನನ್ನ ಸಂಶೋಧನಾ ವಿಧಾನವು ಈ ಇಬ್ಬರ ಕಥೆಗಳಲ್ಲೂ ಅಂತರ್ಗತವಾಗಿರುವ ಮೌಲ್ಯ ಪ್ರಜ್ಞೆಯನ್ನು ಅಧ್ಯಯನ ಮಾಡುವುದಾಗಿದೆ. ಆ ಮೂಲಕ ಇಬ್ಬರ ಕಥಾ ಸಾಹಿತ್ಯವನ್ನು ತೌಲನಿಕವಾಗಿ ಪರಿಶೀಲಿಸಿ ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಹೇಗೆ ಸಫಲವಾಗಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ : ೩

ಮೌಲ್ಯಪ್ರಜ್ಞೆಯ ಪರಿಕಲ್ಪನೆ

ಅಧ್ಯಾಯ – ೩

ಮೌಲ್ಯಪ್ರಜ್ಞೆಯ ಪರಿಕಲ್ಪನೆ

'ಮೌಲ್ಯ' ಎಂಬುದು ಮಾನವೀಯತೆಯ ರೂಪಕ. ತತ್ತ್ವಗಳ ತತ್ತ್ವವಾದ ಮಾನವೀಯತೆ ಸೃಜನಶೀಲ ಸಾಹಿತ್ಯದ ಆಶಯವೂ ಹೌದು. ಕಾಲ, ದೇಶಗಳಿಗೆ ಅನುಗುಣವಾಗಿ ಬದಲಾಗುವ ಮೌಲ್ಯಗಳಿಗೂ ಮತ್ತು ಸಾಹಿತ್ಯಕ್ಕೂ ಮೂಲಭೂತ ಸಂಬಂಧವಿದ್ದು ಮಾನವತಾ ದೃಷ್ಟಿಯನ್ನು ಎತ್ತಿಹಿಡಿಯುವುದೂ ಸೃಜನಶೀಲ ಸಾಹಿತ್ಯದ ಆಶಯವೂ ಆಗಿದೆ. ಹಲವಾರು ಆಯಾಮಗಳನ್ನು ಹೊಂದಿರುವ ಮೌಲ್ಯಗಳು ವ್ಯಕ್ತಿ ಮತ್ತು ಸಮಾಜದ ವಿಕಾಸಕ್ಕೆ ಅನುಗುಣವಾಗಿ ಸಾಗುವುದು ಮುಖ್ಯವಾಗುತ್ತದೆ.

ವ್ಯಕ್ತಿ ಮತ್ತು ಸಮಾಜಕ್ಕೆ ಒಳಿತಾಗುವ ಜ್ಞಾನ ಮತ್ತು ಆಚರಣೆ, ಪರಿಶುದ್ಧ ಜೀವನಮಾರ್ಗ ಮತ್ತು ಯಾವ ಗುಣಗಳು ಶ್ರೇಷ್ಠ ಎಂದು ಪರಿಗಣಿಸಲ್ಪಡುತ್ತವೋ ಅವೆಲ್ಲವೂ ಮೌಲ್ಯಗಳೇ ಆಗಿರುತ್ತವೆ. ಮನಃಶಾಸ್ತ್ರೀಯ ದೃಷ್ಟಿಕೋನದಲ್ಲಿ ಮನುಷ್ಯನ ಮೂಲಭೂತ ಅಗತ್ಯತೆಗಳು ಈಡೇರಿದ ಮೇಲೆ ಮನಸ್ಸು ಇನ್ನೇನನ್ನೋ ಬಯಸುವುದೇ ಮೌಲ್ಯಗಳಾಗಿರುತ್ತವೆ. ಮನುಷ್ಯನ ಆತ್ಮತೃಪ್ತಿಗೆ, ಸಾರ್ಥಕ ಬದುಕಿಗೆ, ಹೃದಯ ಶ್ರೀಮಂತಿಕೆಗೆ ಮೌಲ್ಯಗಳು ಪೂರಕ. ಮೌಲ್ಯಗಳಲ್ಲಿ ಚಿರಂತನ ಬೆಲೆಯುಳ್ಳವು ಇರುವಂತೆ ಕೆಲವು ತಾತ್ಪೂರ್ವಿಕವಾಗಿ ಮಹತ್ವವೆನಿಸುವ ಮೌಲ್ಯಗಳಿದ್ದರೂ ಮಾನವೀಯ ಮೌಲ್ಯಗಳು ಸೀಮಿತಚೌಕಟ್ಟಿಗೆ ಒಳಪಡುವುದಿಲ್ಲ.

ಮೌಲ್ಯಗಳು ನಿರಂತರ ಬದಲಾವಣೆಗೆ ಒಳಗಾಗುತ್ತಿದ್ದರೂ ಶಾಶ್ವತಮೌಲ್ಯಗಳೆಂದು ಪರಿಗಣಿಸಲ್ಪಟ್ಟಿರುವ ಸತ್ಯ, ಅಹಿಂಸೆ, ದಯೆ, ಶಾಂತಿ, ಸಹಕಾರ ಆದಿಯಿಂದಲೂ ಸಾರ್ವಕಾಲಿಕ ಮೌಲ್ಯಗಳೆಂದು ಪರಿಗಣಿಸಲ್ಪಟ್ಟಿವೆ. ಮೇಲ್ವರ್ಗದವರಿಂದ ರಚಿತವಾದ ಸ್ಥಾಪಿತಮೌಲ್ಯಗಳು ತಮ್ಮದೇ ಆದ ನಿಲುವಿನಿಂದ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ. ಬದುಕೇ ಒಂದು ಮೌಲ್ಯ. ಆದರ್ಶಬದುಕಿನ ಜೀವನಾನುಭವಗಳು ಮೌಲ್ಯಗಳನ್ನು ಕಂಡುಕೊಳ್ಳಲು ಮಾರ್ಗಸೂಚಿಗಳಾಗಿರುತ್ತವೆ. ಆ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗಲೇ ಸ್ವಸ್ಥ ಸಮಾಜ ರೂಪಿತವಾಗುತ್ತದೆ.

ಮೌಲ್ಯಗಳನ್ನು ಅಳವಡಿಸಿಕೊಂಡ ಬದುಕು ಸಂಪನ್ನವಾಗಿ ಮಾನಸಿಕ ವಿಕಾಸದಿಂದ ನಮ್ಮನ್ನು ಹಿತರಕ್ಷಕನಂತೆ ಕಾಪಾಡುತ್ತಾ ಲೋಕವನ್ನು ಪ್ರೀತಿಸುವತ್ತ ಒಯ್ಯುತ್ತದೆ. ಅಂತರಂಗ

ಮತ್ತು ಬಹಿರಂಗವನ್ನು ಶುದ್ಧಿಕರಿಸುವ ಮೌಲ್ಯಗಳು ಮನುಕುಲದ ಹಣತೆಗಳು. ವ್ಯಕ್ತಿಗತ ನೆಲೆಯಲ್ಲಿ ದಾರ್ಶನಿಕರ ಚಿಂತನೆಯಲ್ಲಿ ಮೌಲ್ಯದ ಬಹುಮುಖಗಳ ಹರಹು ಮಾನವೀಯ ಬದುಕಿಗೆ ಬೆಳಕಿನದಾರಿಯಾಗಿದೆ.

ಪ್ರಾಪಂಚಿಕ ನಿಜಧರ್ಮ ಮನುಷ್ಯಧರ್ಮವೆಂದೂ ಸಮಾನತೆ, ಸಾಮಾಜಿಕನ್ಯಾಯದ ಅರಿವನ್ನು ಜನರಲ್ಲಿ ಉಂಟುಮಾಡಲು ಸಂಚಾರ ಕೈಗೊಂಡ ಬುದ್ಧ, ಸ್ವಹಿತಾಸಕ್ತಿಯಲ್ಲೇ ಸರ್ವಹಿತಾಸಕ್ತಿ ಅಡಗಿದೆ ಎಂಬ ಸತ್ಯ ಎಲ್ಲರಿಗೂ ಅರಿವಾಗಬೇಕೆಂದು ಬೋಧಿಸಿದರು. **"ತನ್ನದೆಲ್ಲವನ್ನೂ ತ್ಯಜಿಸಿ ಜನರನ್ನು ತಲುಪಿದ ಬುದ್ಧ ಸಾಮಾನ್ಯರ ಹೃದಯಕ್ಕೆ ಹತ್ತಿರವಾಗಿ ಲೋಕವನ್ನೇ ಬೆಳಗಿಸುವ ಪ್ರಯತ್ನಮಾಡಿದರು".**[೧] ಎಂಬ ಮಾತು ಉಲ್ಲೇಖನೀಯವಾಗಿದೆ.

ಸಮಾನತೆಯ ಸಮಾಜ ಗಾಂಧಿಯವರ ಆಶಯವಾಗಿದ್ದು ಉನ್ನತ ಮೌಲ್ಯವೆನಿಸಿದೆ. ನಾನು, ನನ್ನದು ಎಂಬ ಭಾವವಿಲ್ಲದ ಗಾಂಧೀಜಿಗೆ ಪ್ರಪಂಚವೆಲ್ಲಾ ಅವರದೇ ಆಗಿತ್ತು. ಬಹುಸಂಸ್ಕೃತಿಯನ್ನು ಅರ್ಥೈಸಿಕೊಂಡಿದ್ದ ಗಾಂಧೀಜಿಯವರು ಬುದ್ಧಿ, ಭಾವ ಸಾಮಾಜಿಕ ಮಟ್ಟದಲ್ಲಿ ಅಸಮಾನತೆಯ ವಿರುದ್ಧ ಪ್ರತಿಕ್ರಿಯಿಸಿ ಸಮಾನತೆಗಾಗಿ ಹಂಬಲಿಸಿದರು. ಸಮಾನತೆ, ಸರಳತೆ, ಸಹಕಾರ ಮನೋಭಾವವನ್ನು ಅಳವಡಿಸಿಕೊಂಡಿದ್ದ ಗಾಂಧೀಜಿ ನಮ್ಮಲ್ಲಿ ಹೊಸಬಗೆಯ ಸಾಮಾಜಿಕ ಅಂತಃಕರಣವನ್ನು ಮೂಡಿಸಿ, ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಂಡವರು. **"ಧರ್ಮ, ಅಹಿಂಸೆ, ಸತ್ಯ ಅವರ ಬದುಕಿನ ತತ್ತ್ವಗಳಾಗಿದ್ದವು. ನಾವಿಂದು ನೈಜವಾಗಿ ಗಾಂಧಿಮಾರ್ಗದಲ್ಲಿ ಹೋಗಲು ಪ್ರಯತ್ನಿಸುವುದೇ ಇಂದಿನ ಮೌಲ್ಯವಾಗಿದೆ".**[೨] ಬೌದ್ಧಧರ್ಮದ ಲೋಕಕಾರುಣ್ಯ, ಉಪನಿಷತ್ತುಗಳ ಜೀವನಧರ್ಮದ ಮೌಲ್ಯಗಳೊಂದಿಗೆ, ಕ್ರೈಸ್ತಧರ್ಮದ ಜನತಾ ಸೇವೆಯ ತತ್ವವನ್ನೊಳಗೊಂಡ ವಿವೇಕವನ್ನು ರವೀಂದ್ರನಾಥ ಠಾಗೋರ್ ತಮ್ಮ ಮಾನವತಾ ಸಿದ್ಧಾಂತದಲ್ಲಿ ನಿರೂಪಿಸಿದರು. 'ಯಶಸ್ವಿ ವ್ಯಕ್ತಿಯಾಗುವುದಕ್ಕಿಂತ ಮೌಲ್ಯವಂತ ವ್ಯಕ್ತಿಯಾಗಿರುವುದಕ್ಕೆ ಪ್ರಯತ್ನಿಸಿ' ಎಂಬ ಐನ್‌ಸ್ಟೈನ್‌ರ ಮಾತು ಸರ್ವಜನರ ಹಿತವನ್ನು ಕುರಿತಾಗಿದೆ. ಗಾಂಧೀಜಿ, ವಿವೇಕಾನಂದ, ಅರವಿಂದರು ಸಾಮಾಜಿಕ ಮಟ್ಟದಲ್ಲಿ ಅಸಮಾನತೆಯ ವಿರುದ್ಧ ಪ್ರತಿಕ್ರಿಯಿಸಿ ಸಮಾನತೆಗಾಗಿ

---

೧ ಸಿ.ಎಚ್. ರಾಜಶೇಖರ, 'ಬುದ್ಧನಂದನ ಬೀಳ್ಕೊಟ್ಟ ಕಾಮ ತೋರಿಸಿ ಕಲ್ಯಾಣದತ್ತ' ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು.

೨ ಜನಪದ, (ಪ್ರಸಂ) ಎನ್.ಆರ್. ವಿಶುಕುಮಾರ್, ಪ್ರ: ವಾರ್ತಾ & ಸಾರ್ವಜನಿಕ ಸಂಪರ್ಕ ಇಲಾಖೆ, ೨೦೧೫ (ಮಾಸಿಕ).

ಹಂಬಲಿಸಿದವರು. ಜೊತೆಗೆ ವ್ಯಕ್ತಿಗತ ಬಿಡುಗಡೆಗಾಗಿ ಆಧ್ಯಾತ್ಮಿಕ ಚಿಂತನೆಯ ಹಾದಿಯಲ್ಲಿ ಸಾಗಿದವರು.

ನೈತಿಕವಾಗಿ ಅಧಃಪತನಗೊಂಡವರು ಹೇಗೆ ಚೆನ್ನಾಗಿರಲು ಸಾಧ್ಯ ಎಂಬುದು ಟಾಲ್‌ಸ್ಟಾಯ್‌ರ ಅಭಿಪ್ರಾಯ. ವ್ಯಕ್ತಿ ದುಃಖದಿಂದ ಜರ್ಜರಿತನಾಗಿದ್ದಾಗ ಅವನನ್ನು ಸಂತೈಸುವುದೇ ಮಾನವೀಯ ಮೌಲ್ಯ ಎಂಬುದು ಶರಚ್ಚಂದ್ರ ಚಟ್ಟೋಪಾಧ್ಯಾಯರ ಅಭಿಮತ. ವಿವೇಕಾನಂದರು ಮನುಷ್ಯನಾಗಿದ್ದು ಮನುಷ್ಯನಿಗಾಗಿ ಮರುಗಲೇ ಬೇಕು ಎನ್ನುತ್ತಾರೆ. **"ಅಸ್ತಿತ್ವ ಮತ್ತು ಪ್ರಗತಿಗೆ ಮೂಲವಾದ ಚಲನೆಯ ಸಂದರ್ಭದಲ್ಲಿ ಎದುರಾಗುವ ವಿರೋಧಗಳನ್ನು ವೈಚಾರಿಕತೆಯಿಂದ ವಿಶ್ಲೇಷಿಸುವುದು ವಾಸ್ತವಿಕತೆಯ ದೃಷ್ಟಿಯಾಗಿದ್ದು ಪ್ರಗತಿಗೆ ವಿರುದ್ಧವಾದ ಪ್ರತಿಗಾಮಿಶಕ್ತಿಯನ್ನು ಬೇರ್ಪಡಿಸುವುದೇ ವಾಸ್ತವಿಕತೆ"**[೩]ಯೆಂದು ಬೇಲಿನ್‌ಸ್ಕಿ ನಿರೂಪಿಸುತ್ತಾರೆ.

ಮಾನವ ಸಮಾಜದ ಸ್ಥಿತಿಗತಿಗಳನ್ನು ತಮ್ಮ ಜೀವನದ ಉದ್ದಕ್ಕೂ ಮಾನವೀಯ ಕಳಕಳಿಯಿಂದ ನೋಡಿದ ಪ್ರೇಮ್‌ಚಂದ್ ಸೃಜನಶೀಲ ಮಾನವ ಚೇತನದ ಪ್ರತೀಕವಾಗಿದ್ದರೆನ್ನಬಹುದು. ಎಲ್ಲವನ್ನೂ ಮಾನವೀಯತೆಯಿಂದ ನೋಡಿದ ಅವರು ಬಡವರ್ಗದಲ್ಲಿರುವ ಮಾನವೀಯ ಮೌಲ್ಯದ ಸ್ವರೂಪ ಇಂತಿಷ್ಟು ಸತ್ವದಿಂದ ಕೂಡಿದ್ದರೂ ಇವರ ಬಾಳು ಹೀಗೇಕೆ ಎಂದು ಚಿಂತಿಸಿದವರು. ಮಾನವಹಿತ ಚಿಂತಕರಿಗೆ ಮೌಲ್ಯಗಳ ರಕ್ಷಣೆಯ ಹೊಣೆ ಇದ್ದೇ ಇರುತ್ತದೆ. ಸಾಹಿತ್ಯ ಕೃತಿಗಳು ಮೌಲ್ಯಗಳನ್ನು ಅರ್ಥೈಸುವ ಕಾರ್ಯವನ್ನು ಮಾಡುತ್ತಲೇ ಬಂದಿವೆ.

ಕಾಲದ ಪರಿಧಿಯೊಳಗೆ ಎಲ್ಲವೂ ಪರಿಶೀಲನೆಗೆ ಒಳಪಡಬೇಕಾಗುತ್ತದೆ. ಆಗ ಪುನರ್‌ವಿಂಗಡನೆ, ಪುನರ್‌ಮೌಲ್ಯೀಕರಣ, ಪುನರ್ ಪರೀಕ್ಷೆ, ಪುನರ್ ನಿರ್ಮಾಣ, ಪುನಶ್ಚೇತನವಾಗುವಂತೆ ಸಾಹಿತ್ಯವೂ ಕಾಲದೇಶಗಳಿಗೆ ಅನುಗುಣವಾಗಿ ಪರಿಶೀಲನೆಯಿಂದ ಹೊಸ ತುಡಿತ–ಮಿಡಿತಗಳು ಉಂಟಾಗುತ್ತವೆ. ಆಗ ಹೊಸಕಾಲದ ವೈರುಧ್ಯಕ್ಕೆ ಸಮರ್ಪಕ ಉತ್ತರಕೊಡಬಲ್ಲವವಾಗುತ್ತವೆ. ಈ ಸಂದರ್ಭದಲ್ಲಿ ಸಾಮಾಜಿಕ ಸಂಘರ್ಷ, ಹೋರಾಟ, ತಾತ್ವಿಕ ಸಂಘರ್ಷಗಳೆಲ್ಲವೂ ಸಹಜವಾದದ್ದೇ.

"ಬದಲಾಗುತ್ತಿರುವ ಬದುಕಿನ ಹೊಸಪರಿಕಲ್ಪನೆಗಳು ಮತ್ತು ಪರಿಕರಗಳು ಚರಿತ್ರೆ ಮತ್ತು ಚರಿತ್ರೆಯ ಸಂಭವವಾದ ಕಲೆಯನ್ನು ಕಾಲಕಾಲಕ್ಕೆ ಪರೀಕ್ಷೆಗೆ ಒಳಪಡಿಸುವುದು ಅನಿವಾರ್ಯ.

---

[೩] ಮೂರ್ತಿ. ಡಿ.ವಿ.ಕೆ, 'ಜೀವನ ಮೌಲ್ಯಗಳು ಮತ್ತು ಸಾಹಿತ್ಯ' ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೦೮.

ಇದೇ ಪುನರ್ಮೌಲ್ಯೀಕರಣ[೪] ಎಂಬ ಬರಗೂರು ರಾಮಚಂದ್ರಪ್ಪ ಅವರ ಅಭಿಪ್ರಾಯ ಸೂಕ್ತವಾದುದು. ಇಂದಿನ ಮನುಷ್ಯನ ಸಮಸ್ಯೆ, ಸವಾಲು, ಒಳತೋಟಿ ವಿಭಿನ್ನವಾಗಿದ್ದು ಪರಂಪರೆಯನ್ನು ಬಿಡಲಾರದೆ ತೊಳಲಾಟದಲ್ಲಿ ಸಿಲುಕುತ್ತಾನೆ. ಪ್ರಗತಿಯನ್ನು ಕಡೆಗಣಿಸಲಾಗದ ಮನುಷ್ಯ ಬದಲಾಗುತ್ತಿರುವ ಬದುಕಿನಲ್ಲಿ ವಿವೇಕದ ನೆಲೆಯಲ್ಲಿ ನಿಂತು ಪ್ರಬುದ್ಧತೆಯಿಂದ ಪರಿಶೀಲಿಸಬೇಕಾಗುತ್ತದೆ. ಆಗಲೇ ಪುನರ್ಮೌಲೀಕರಣವಾಗುವುದು. ಈ ಪ್ರಕ್ರಿಯೆ ಸಮಾಜದಲ್ಲಿ ನಿರಂತರವಾಗಿ ಆಗುತ್ತಿದ್ದು ಅನಗತ್ಯವಾದುದ್ದನ್ನು ಕಳೆದು ಅಗತ್ಯವಾದದ್ದನ್ನು ಉಳಿಸಿಕೊಂಡು ಅಂದಿನ ಯುಗಧರ್ಮವನ್ನು ಪ್ರತಿನಿಧಿಸುತ್ತದೆ.

ಬದುಕನ್ನೇ ಆಗಲೀ ಸಾಹಿತ್ಯವನ್ನೇ ಆಗಲೀ ವಿಭಿನ್ನ ನೆಲೆಯಿಂದ ನೋಡಿದಾಗ ಆಗುವ ಪುನರ್ಮೌಲ್ಯೀಕರಣ ಪ್ರಕ್ರಿಯೆಯಿಂದ ಹೊಸಮೌಲ್ಯಗಳು ಹುಟ್ಟುವುದರೊಂದಿಗೆ ಸ್ಥಗಿತ ಮೌಲ್ಯಗಳು ಪುನರ್ಮೌಲ್ಯೀಕರಣಗೊಳ್ಳುತ್ತವೆ. ಪುನರ್ಮೌಲ್ಯೀಕರಣದಿಂದ ಪ್ರಾಮುಖ್ಯತೆ ಪಡೆದಂತಹವು ಮಹತ್ವ ಕಳೆದುಕೊಳ್ಳಬಹುದು, ಕಡೆಗಣಿಸಲ್ಪಟ್ಟವು ಮಂಚೂಣಿಗೆ ಬಂದು ಹೊಸದೃಷ್ಟಿಕೋನ ಮೂಡಬಹುದು. ಸಾಹಿತ್ಯಕ್ಕೂ ಮನಸ್ಸಿಗೂ ಸಂಬಂಧವಿರುವಾಗ ವೈಚಾರಿಕ ಮನೋಧರ್ಮದ ಪರಿಶೀಲನೆ ಕಾರಣವಾದಾಗ ಪುನರ್ಮೌಲ್ಯೀಕರಣವಾಗುತ್ತದೆ.

೩.೧ ಸಾಹಿತ್ಯದಲ್ಲಿ ಮೌಲ್ಯಗಳು :

ಸಾಹಿತ್ಯದಲ್ಲಿ ಸಾಹಿತ್ಯಮೌಲ್ಯದೊಂದಿಗೆ ಇತರ ಮೌಲ್ಯಗಳೂ ಅಡಕವಾಗಿರುತ್ತವೆ. ಸೃಷ್ಟಿಕರ್ತನಾದ ಕವಿ ತನ್ನ ಬರವಣಿಗೆಯಿಂದ ನವಲೋಕವನ್ನೇ ಸೃಷ್ಟಿಮಾಡಿದರೂ ಎಲ್ಲಾ ಸಾಹಿತ್ಯವೂ ಮನಸ್ಸನ್ನು ಸೆರೆಹಿಡಿಯುವ ಸೃಷ್ಟಿಕಾರ್ಯ ಆಗಿರುವುದಿಲ್ಲ. ಪತ್ರಿಕೆಯಲ್ಲಿ ಬರುವ ವರದಿ ಸಾಹಿತ್ಯ ವಾರ್ತೆಯಾಗಿ ಇದ್ದರೂ ಸಂಬಂಧಿಸಿದವರಿಗೆ ಅರ್ಥವಾಗುವಂತೆ ಉಳಿದವರಿಗೆ ಆಗಬೇಕೆಂದಿಲ್ಲ. ನಮಗೆ ಜ್ಞಾನನೀಡುವ ಸಾಹಿತ್ಯ ಮಾತ್ರ ಸಾರ್ವಕಾಲಿಕ, ಸಾರ್ವತ್ರಿಕವೂ ಆಗಿ ಮೌಲ್ಯ ಪಡೆದಿರುತ್ತದೆ.

ಕವಿಯ ಸೃಷ್ಟಿಯಿಲ್ಲದೇ ರಸಪರಿಜ್ಞಾನವಿಲ್ಲ, ರಸಪರಿಜ್ಞಾನವಿಲ್ಲದೆ ಸೃಷ್ಟಿಯೂ ಸಾಧ್ಯವಿಲ್ಲವಾದ್ದರಿಂದ ಎರಡೂ ಮೌಲ್ಯಗಳೂ ಪರಸ್ಪರ ಪೂರಕವಾದ್ದರಿಂದ 'ಕಾವ್ಯಮೌಲ್ಯ – ಸಾಹಿತ್ಯಿಕಮೌಲ್ಯ' ಎಂದು ನಿರ್ದೇಶಿಸಿದ್ದಾರೆ. ಹಣ್ಣಿನಲ್ಲಿ ರುಚಿಕರವಾದ ರಸ ಸಹಜವಾಗಿರುವಂತೆ ಸಾಹಿತ್ಯದಲ್ಲಿ ರಸಮೌಲ್ಯವನ್ನು 'ಸಹಜಮೌಲ್ಯ' ಎಂದರೂ ರಸವೆಂದರೆ

---

೪ ಬರಗೂರು ರಾಮಚಂದ್ರಪ್ಪ (ಪ್ರಸಂ.), 'ಕನ್ನಡ ಸಾಹಿತ್ಯ ಪುನರ್ಮೌಲ್ಯೀಕರಣ ಮಾಲೆ', ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩, ಪು : ೭.

ನವರಸಗಳಿಗೆ ಸೀಮಿತಗೊಳಿಸದೆ ಅರ್ಥಭಾವಗಳೂ ರಸಮೌಲ್ಯವೇ ಆಗಿರಬಹುದು. **"ಸೌಂದರ್ಯದ ಅನುಭವವು ಅಭ್ಯಾಸದಿಂದ ಬೆಳೆಯುತ್ತದೆ. ಮನಸ್ಸು ದೊಡ್ಡದಾದಷ್ಟು, ನವುರಾದಷ್ಟು, ವಿವಿಧ ರಸ ಸುಖಗಳು ಅದಕ್ಕೆ ದೊರೆಯುತ್ತವೆ"**[೫] ಎಂಬ ಡಿ.ವಿ.ಜಿ. ಯವರ ಅಭಿಪ್ರಾಯ ಉಲ್ಲೇಖಾರ್ಹವಾಗಿದೆ.

'ರಮಣೀಯಾರ್ಥ ಪ್ರತಿಪಾಕಶ್ಯಬ್ದಕಿಕಾವ್ಯಂ' ಎಂಬುದು ಸಾಹಿತ್ಯದಲ್ಲಿ ಅರ್ಥಮೌಲ್ಯದ ಬಗ್ಗೆ ಹೇಳಿರುವ ಉಕ್ತಿ. ಕಾವ್ಯಕ್ಕೆ ಗೇಯಮೌಲ್ಯ ದೊರಕುವುದು ಶಬ್ದದಿಂದಾದರೂ ಶಬ್ದವೇ ಸಾಹಿತ್ಯದ ಮೂಲದ್ರವ್ಯ. ಆದ್ದರಿಂದಲೇ **'ಸುಶ್ರಾವ್ಯವಾದ'** ಕಾವ್ಯರಚನೆ ಕವಿಗಳ ಆದರ್ಶವಾದರೂ ಹಾಡುಗಬ್ಬದಲ್ಲಿ ಗೇಯಮೌಲ್ಯ ಅಧಿಕವಾಗಿರುತ್ತದೆ.

ಸಾಹಿತ್ಯದ ಉಪಯುಕ್ತತೆ ಸಾಹಿತಿ ಮತ್ತು ಓದುಗನಿಗಾಗುವುದರಿಂದ ಪ್ರಯೋಜನಮೌಲ್ಯವೂ ಸಾಹಿತ್ಯದಲ್ಲಿ ಅಡಕವಾಗಿದೆ. ಇಂದು ಸಾಹಿತ್ಯ ಕೃತಿಗಳಿಂದ ಹಣ ಗಳಿಸುವುದರಿಂದ ಸಾಹಿತ್ಯಕ್ಕೆ ವಾಣಿಜ್ಯಮೌಲ್ಯವೂ, ಓದುಗನನ್ನು ರಂಜಿಸಿದರೆ ರಂಜಕಮೌಲ್ಯವೂ ಪ್ರಾಪ್ತವಾಗಿದೆ. ಕಾವ್ಯ ಆಹ್ಲಾದವನ್ನು ಉಂಟುಮಾಡುವುದರೊಂದಿಗೆ ನಮಗರಿವಿಲ್ಲದಂತೆ ಉಪದೇಶ ಮಾಡುವುದರಿಂದ ನೈತಿಕ ಮೌಲ್ಯವೂ ಅಡಗಿರುತ್ತದೆ.

ಸಾಹಿತ್ಯದಲ್ಲಿ ಸ್ವ-ಪ್ರೇರಣೆ, ಪ್ರಭಾವ, ಆಜ್ಞೆಯಿಂದಲೋ, ಧರ್ಮ, ತತ್ವ, ಸಿದ್ಧಾಂತಗಳು ಸಾಹಿತ್ಯದಲ್ಲಿ ಸ್ಫುಟವಾಗಿಯೋ ಅಸ್ಫುಟವಾಗಿಯೋ ಹುದುಗಿರುತ್ತದೆ. ಇಂತಹ ಸಂದರ್ಭದಲ್ಲಿ ಕೃತಿಯಲ್ಲಿ ತಾತ್ವಿಕಮೌಲ್ಯ, ಧಾರ್ಮಿಕಮೌಲ್ಯ, ವೈಚಾರಿಕಮೌಲ್ಯ, ಅಧ್ಯಾತ್ಮಿಕಮೌಲ್ಯಗಳು ಪ್ರವೇಶ ಪಡೆದಿರುತ್ತವೆ. ಸಾಹಿತ್ಯದ ಮೂಲ ಉದ್ದೇಶ ಮೌಲ್ಯಗಳ ವಿಕಾಸವಾದುದರಿಂದ ಕಾವ್ಯಧರ್ಮಕ್ಕೆ ಚ್ಯುತಿಬರದಂತೆ ಮೌಲ್ಯ ಪ್ರವೇಶ ಪಡೆಯಬಹುದೆಂದು ವಿದ್ವಾಂಸರು ಹೇಳಿದ್ದಾರೆ. ಹಿಂದೆ ಜೈನ, ವೀರಶೈವ, ವೈಷ್ಣವಧರ್ಮವನ್ನು ಬೋಧಿಸಲು ಕಾವ್ಯವನ್ನು ಮಾಧ್ಯಮವಾಗಿ ಬಳಸುತ್ತಿದ್ದರು. ಇಂದು ಸಮತಾವಾದ, ಸಮಾಜವಾದ ಮುಂತಾದ ಸಿದ್ಧಾಂತಗಳನ್ನು ಸಾಹಿತ್ಯದ ಮೂಲಕ ಪ್ರಚಾರಪಡಿಸುತ್ತಿರುವುದರಿಂದ ಸಾಹಿತ್ಯಕ್ಕೆ ಪ್ರಚಾರಮೌಲ್ಯವೂ ಲಭಿಸಿದೆ. **"ಯಾವುದೇ ಮೌಲ್ಯದ ನೆಲೆಯ ಪರಿವೀಕ್ಷಣೆ ಆಯಾ ಸಾಮಾಜಿಕ, ರಾಜಕೀಯ ಸ್ಥಿತಿಯಿಂದ ಹೊರತುಗೊಳಿಸಿ ನಡೆಯುವುದು ಸರಿಯಲ್ಲ"**[೬] ಎಂದು ಬರಗೂರು ರಾಮಚಂದ್ರಪ್ಪ ಹೇಳುವ

---

೫ ಡಿ.ವಿ.ಜಿ., 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೭, ಪು : ೩೭.

೬ ಬರಗೂರು ರಾಮಚಂದ್ರಪ್ಪ (ಪ್ರಸಂ.), 'ಸಾಹಿತ್ಯ ಮತ್ತು ರಾಜಕಾರಣ', ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು, ೧೯೯೮, ಪು : ೨೬೧.

ಮಾತು ಪ್ರಸ್ತುತದಲ್ಲಿ ಹೆಚ್ಚಿನ ಸ್ಥಾನ ಪಡೆದಿದೆ. ಸಾಮಾಜಿಕ ಚಿಂತನೆಗಳು ಕೃತಿಯಲ್ಲಿ ಕಂಡಾಗ ಸಾಮಾಜಿಕ ಮೌಲ್ಯವನ್ನು, ಐತಿಹಾಸಿಕ ಸಂಗತಿಗಳಿದ್ದಾಗ ಐತಿಹಾಸಿಕ ಮೌಲ್ಯವನ್ನು ಗುರುತಿಸಬಹುದು. ವಿಜ್ಞಾನ ಸಾಹಿತ್ಯದಲ್ಲಿ ಬೌದ್ಧಿಕ ಮೌಲ್ಯಗಳಿದ್ದರೂ ಇವೆಲ್ಲವೂ ಸಾಹಿತ್ಯದಲ್ಲಿ ಸಹಜಮೌಲ್ಯಗಳಾಗದೆ ಉಪಮೌಲ್ಯಗಳಾಗುತ್ತವೆ.

ಇಂದು ಸಾಹಿತ್ಯದಲ್ಲಿ ರಸ ಅರ್ಥ ಮೌಲ್ಯಗಳಿಗಿಂತ ಪ್ರಭಾವಮೌಲ್ಯದಿಂದ ಪರಿಣಾಮ ಮೌಲ್ಯಗಳೇ ಹೆಚ್ಚಾಗುತ್ತಿದೆಯೆಂಬ ಶಂಕೆ ಕಾಣುತ್ತಿರುವುದುಂಟು. ಕವಿ ಬದುಕಿನಲ್ಲಿ ಕಂಡ ಸತ್ಯವನ್ನು ಸಾಹಿತ್ಯದಲ್ಲಿ ತಂದಾಗಲೇ ಎಲ್ಲಕ್ಕಿಂತ ಮಿಗಿಲೆನ್ನಿಸುವ 'ದರ್ಶನಮೌಲ್ಯ' ಓದುಗನಿಗೆ ಪ್ರಾಪ್ತವಾಗುತ್ತದೆ ಮತ್ತು ಕೃತಿಗೆ ಮಹತ್ವ ದೊರಕುತ್ತದೆ. ಮಾನವನಿಗೆ ಹಿತಕಾರಿಯಾದ ಜೀವನಮೌಲ್ಯಗಳು ಕೃತಿಯಲ್ಲಿ ಸಹಜವಾಗಿ ಹುದುಗಿರುತ್ತವೆ. ಪ್ರಪಂಚದ ನಿಜವಾದ ಧರ್ಮ ಮನುಷ್ಯಧರ್ಮವೆಂದು ಸಮಾನತೆ, ಸಾಮಾಜಿಕ ನ್ಯಾಯದ ಅರಿವನ್ನು ಜನರಲ್ಲಿ ಉಂಟುಮಾಡಲು ಗೌತಮಬುದ್ಧ ಸಂಚಾರಕೈಗೊಂಡವು. ಸ್ವಹಿತಾಸಕ್ತಿಯಲ್ಲೇ ಸರ್ವಹಿತಾಸಕ್ತಿ ಅಡಗಿದೆ ಎಂಬ ಸತ್ಯ ಎಲ್ಲರಿಗೂ ಅರಿವಾಗಬೇಕೆಂದು ಬೋಧಿಸಿದರು. ತನ್ನದೆಲ್ಲವನ್ನೂ ತ್ಯಜಿಸಿ ಜನರನ್ನು ತಲುಪಿದ ಬುದ್ಧ ಸಾಮಾನ್ಯರ ಹೃದಯಕ್ಕೆ ಹತ್ತಿರವಾಗಿ ಲೋಕವನ್ನು ಬೆಳಗಿಸುವ ಪ್ರಯತ್ನ ಮಾಡಿದರು.

೩.೨ ಹಳಗನ್ನಡ ಸಾಹಿತ್ಯದಲ್ಲಿ ಮೌಲ್ಯಗಳು :

ಕನ್ನಡ ಭಾಷೆಯ ಬೆಳವಣಿಗೆಯ ಕಾಲಘಟ್ಟದಲ್ಲಿ ನಮಗೆ ಪೂರ್ವಹಳಗನ್ನಡ ಕಾಲದ ಬಗ್ಗೆ ಸ್ಪಷ್ಟ ಪುರಾವೆಗಳು ಇಲ್ಲವಾಗಿರುವುದರಿಂದ ಹಳಗನ್ನಡ ಕಾಲದ ಸಾಹಿತ್ಯ ಕೃತಿಗಳ ಆಧಾರದ ಮೇಲೆ ಅಂದಿನ ಕಾಲದ ಜೀವನಮೌಲ್ಯಗಳನ್ನು ಅನುಲಕ್ಷಿಸಬೇಕಾಗಿದೆ.

ಭಾರತೀಯ ಪರಂಪರೆ ಮತ್ತು ಕನ್ನಡಸಾಹಿತ್ಯದಲ್ಲಿ ಚತುರ್ವಿಧ ಪುರುಷಾರ್ಥಗಳೇ ಜೀವನಮೌಲ್ಯಗಳಾಗಿದ್ದು ಧರ್ಮ, ಅರ್ಥ, ಕಾಮ ತ್ರಿವಿಧ ಸಾಧನೆಯ ಫಲ ಪರಿಪೂರ್ಣವಾದ ಮೋಕ್ಷವೆನಿಸುತ್ತದೆ.

ಯುದ್ಧ ರಾಜರ ಬದುಕಿನ ಭಾಗವೇ ಆಗಿದ್ದರಿಂದ ಸಹಜವಾಗಿ ಪೌರುಷ, ಛಲ, ಅಭಿಮಾನ, ಶರಣಾಗತರ ರಕ್ಷಣೆ, ಪ್ರಜೆಗಳ ಸ್ವಾಮಿಭಕ್ತಿ, ತ್ಯಾಗ ಅಂದಿನ ಪ್ರಚಲಿತ ಮೌಲ್ಯಗಳಾಗಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಕಾಲದಲ್ಲಿ ಗಡಿರಕ್ಷಣೆ ಮತ್ತು ವಿಸ್ತರಣೆ, ಪ್ರಜೆಗಳ ಮತ್ತು ಮಹಿಳೆಯರ ಮಾನ ರಕ್ಷಣೆ, ಕಳ್ಳರು ಮತ್ತು ಕ್ರೂರ ಮೃಗಗಳಿಂದ ಜನರಕ್ಷಣೆ ರಾಜನ ಕರ್ತವ್ಯವೆನಿಸಿದ ಸಾಮಾಜಿಕ ಮೌಲ್ಯಗಳಾಗಿದ್ದವು.

"ನಮ್ಮ ಸಂಪ್ರದಾಯದಲ್ಲಿ ಜೀವನ ಮೌಲ್ಯಗಳು ಎಂದರೆ ಚತುರ್ವಿಧ ಪುರುಷಾರ್ಥಗಳು ಎಂದು ಅರ್ಥ. ಆಧುನಿಕ ವಿದ್ವಾಂಸರು ಆರ್ಥಿಕ, ಸಾಮಾಜಿಕ, ಮಾನಸಿಕ, ಆಧ್ಯಾತ್ಮ ಮುಂತಾದ ಭೇದಗಳಲ್ಲಿ ಮೌಲ್ಯಗಳನ್ನು ವಿಶ್ಲೇಷಿಸುವುದುಂಟು. ಇವುಗಳ ಅನುಸರಣೆಯಿಂದ ಸ್ಫುಟಗೊಳ್ಳುವುದು ಮಾನವೀಯ ಮೌಲ್ಯಗಳು. ನಮ್ಮ ಪುರುಷಾರ್ಥಗಳಲ್ಲಿಯೇ ಇವೆಲ್ಲ ಸೇರುತ್ತವೆ"[೭] ಎಂದು ಮೌಲ್ಯ ವಿವೇಚನೆ ಮಾಡಲಾಗಿದೆ.

ಪ್ರಾಚೀನ ಮಹಾಕಾವ್ಯಗಳಲ್ಲಿ ಸ್ವಾಮಿಭಕ್ತಿ ಮಿಗಿಲಾದ ಮೌಲ್ಯವಾಗಿತ್ತು. ರಾಜರು ಸಾವಿಗೆ ಅಂಜದವರಾಗಿದ್ದು, ಅಂದಿನ ವೀರಗಾಥೆಗಳು ಸ್ವಾಮಿಭಕ್ತಿ ಮತ್ತು ವೀರತ್ವದ ಬಗೆಗೆ ಇದ್ದು ಅನುಷ್ಠಾನದಲ್ಲಿದ್ದ ಮಾನಸಿಕ ಮತ್ತು ಸಾಮಾಜಿಕ ಮೌಲ್ಯಗಳಾಗಿದ್ದವು. ಸಮಾಜ ಎಂಬುದು ತೀರಸಂಕೀರ್ಣವಾದ ಆಚಾರ-ವಿಚಾರಗಳಿಂದ ಕೂಡಿದ ಜನಸಮೂಹವಾಗಿತ್ತು. ಒಂದು ಕಾಲದ ಪರಿಮಿತವಾದ ಮೌಲ್ಯಗಳು, ಅರೆಮೌಲ್ಯಗಳೆನಿಸುವ ನಂಬಿಕೆಗಳೂ ಇಂಥ ಜನಾಂಗವನ್ನು ಮುನ್ನಡೆಸುವ ಸೂತ್ರಗಳಾಗಿರುತ್ತವೆ.

ವಿಶಿಷ್ಟತೆ, ವಿಭಿನ್ನತೆಗಳೇ ಜನಾಂಗದ ಲಕ್ಷಣವಾಗಿದ್ದು ಎಲ್ಲಾ ದೇಶ, ಜನಾಂಗಗಳಿಗೂ ಅನ್ವಯಿಸುವ ಆದರ್ಶಗಳಿದ್ದರೂ **"ಒಂದು ದೇಶಕ್ಕೆ ಒಂದು ಕಾಲಕ್ಕೆ ಸೀಮಿತವಾದ ಅದರದೇ ಆದ ಮೌಲ್ಯಗಳು ಬದಲಾವಣೆ ಸ್ವರೂಪ ಕಂಡಾಗ ಮಾತ್ರ ಆ ದೇಶ, ಜನಾಂಗ ಮುಂದುವರಿಯುತ್ತದೆ"**[೮] ಎಂಬುದು ಸಾರ್ವಕಾಲಿಕ ಸತ್ಯವಾಗಿದೆ.

ಪಂಪ, ರನ್ನ ಮೊದಲಾದ ಹಳಗನ್ನಡ ಕವಿಗಳ ಕಾಲದ ಪರಾಕ್ರಮ, ದಾನ, ಶರಣಾಗತರ ರಕ್ಷಣೆ ಎಂಬ ಪ್ರಮುಖ ಮೂರು ಮೌಲ್ಯಗಳು ಪ್ರಸ್ತುತವೇ? ಕಾಲದೇಶಗಳಿಗೆ ಅನುಗುಣವಾಗಿ ಮೌಲ್ಯಗಳಲ್ಲಿ ಚಲನೆ, ಪುನರ್‌ಮೌಲ್ಯೀಕರಣ ಸಾಮಾಜಿಕ ಬದುಕಿಗೆ ಪೂರಕವೆನಿಸುತ್ತದೆ.

೩.೩ ವಚನ ಮತ್ತು ದಾಸ ಸಾಹಿತ್ಯದಲ್ಲಿ ಮೌಲ್ಯಗಳು:

ಮೌಲ್ಯಗಳ ಅಗರವಾದ ವಚನಸಾಹಿತ್ಯ ಉದಾತ್ತ ಚಿಂತನೆಯನ್ನು ಮಾನವನ ಶ್ರೇಯೋಭಿವೃದ್ಧಿಯನ್ನು ಒಳಗೊಂಡು ತನಗೆ ತಾನೆ ಮಹತ್ವದ ಮೌಲ್ಯವಾಗಿದ್ದು ಸಮಾಜಕ್ಕೆ ಪ್ರಯೋಜನಕಾರಿಯಾಗಿದೆ.

---

೭ ವೆಂಕಟಾಚಲ ಶಾಸ್ತ್ರಿ. ಡಿ.ವಿ., 'ಶಾಸ್ತ್ರೀಯ-೩', ಸಪ್ನ ಪ್ರಕಾಶನ, ಬೆಂಗಳೂರು, ೧೯೯೯, ಪು : ೧೮೯.

೮ ತಾರಾನಾಥ ಎನ್.ಎಸ್. (ಸಂ) 'ಪಂಪನ ಅಧ್ಯಯನಗಳು', ಸಂವಹನ ಪ್ರಕಾಶನ, ಮೈಸೂರು, ೨೦೧೧, ಪು : ೧೦೫.

ಹನ್ನೆರಡನೇ ಶತಮಾನದ ಮಾನವಪರ ಕಾಳಜಿಯ ಶರಣರಕ್ರಾಂತಿಯಿಂದ ಬಹಳಷ್ಟು ಸುಧಾರಣೆಗಳಾದವು. ವಿವೇಚನೆಯನ್ನೇ ಬದುಕಾಗಿಸಿಕೊಂಡಿದ್ದ ಶರಣರಲ್ಲಿ ಸಾಹಿತ್ಯ ಪ್ರಜ್ಞೆಗಿಂತ ಸಮಷ್ಟಿಹಿತವೇ ಮುಖ್ಯವಾಗಿತ್ತು. ಶರಣರು ತಮ್ಮ ಚಿಂತನೆ, ಮುಂದಾಲೋಚನೆಗಳಿಂದ ಸಮಾಜದಲ್ಲಿ ಕ್ರಾಂತಿಯನ್ನೇ ಮಾಡಿದರು, ಜೊತೆಗೆ ಅವರು ತೋರಿದ ದಿಕ್ಸೂಚಿ ಇಂದಿಗೂ ಪ್ರಸ್ತುತವೇ ಆಗಿದೆ.

ಶರಣರದು ರಾಜಪ್ರಭುತ್ವ ಪುರೋಹಿತಶಾಹಿಯನ್ನು ಎದುರಿಸುವ ಶಕ್ತಿಯನ್ನು ಜನಸಾಮಾನ್ಯರಿಗೆ ದೊರಕಿಸಿಕೊಡುವುದಾಗಿತ್ತು. ಮೇಲ್ವರ್ಗದವರಿಂದ ಆಗುತ್ತಿದ್ದ ಶೋಷಣೆಗೆ ಮದ್ದನ್ನು ಕಂಡುಕೊಳ್ಳುವುದು ಅವಶ್ಯಕವಾಗಿತ್ತು. ಶರಣರಿಗೆ ಸಮಸಮಾಜ ನಿರ್ಮಾಣದ ಆಶಯವಿತ್ತು. ವಚನಕಾರರ ಸಾಮಾಜಿಕ ಪ್ರಜ್ಞೆ ಪ್ರಶ್ನಾತೀತವಾಗಿದ್ದು, ಸಮಾನತೆಯ ಚಿಂತನೆ ಮಾನವಕುಲಕ್ಕೆ ವಚನಕಾರರು ನೀಡಿದ ಬಹುದೊಡ್ಡ ಕೊಡುಗೆಯಾಗಿದೆ.

ಬೌದ್ಧಿಕ, ವೈಚಾರಿಕ, ಆಧ್ಯಾತ್ಮಿಕ ಚಿಂತಕರಾದ ವಚನಕಾರರು ಧಾರ್ಮಿಕ ಆಂದೋಲನದ ಮೂಲಕ ಸಾಮಾಜಿಕ, ಆರ್ಥಿಕ ಆಯಾಮಗಳನ್ನು ಜೊತೆಗೂಡಿಸಿದರು. ಇದರಿಂದಲೇ ವಚನಗಳು ಅನನ್ಯವಾಗಿದ್ದು, ಇಹಪರಗಳನ್ನು ಬೇರೆಯಾಗಿಸದೆ ನೋಡಿದ ಶರಣರು ಬದುಕಿನ ಅಂಧಶ್ರದ್ಧೆ, ಶೋಷಣೆ, ಬಡತನದ ವಿಮುಕ್ತಿಗಾಗಿ ಶ್ರಮಿಸಿದರು.

ಶರಣರ ಅಧ್ಯಾತ್ಮಿಕತೆಯನ್ನೊಳಗೊಂಡ ಸಾಮಾಜಿಕ ಪ್ರಜ್ಞೆ ಸಾಮಾನ್ಯನ ಬದುಕಿಗೆ ಆತ್ಮವಿಶ್ವಾಸ, ಘನತೆಯನ್ನು ತಂದುಕೊಟ್ಟಿದ್ದು ಅವರ ಅಸಾಮಾನ್ಯ ಸಾಧನೆಯಾಗಿದೆ. ಮಾನವೀಯ ನೆಲೆಯ ಅವರ ಚಿಂತನೆ ಸರಳವಾಗಿದ್ದು 'ದಯಯೇ ಧರ್ಮದ ಮೂಲವಯ್ಯ' ಎಂಬ ಮಾನವ ಧರ್ಮವನ್ನು ಸ್ಥಾಪಿಸಿದರು.

ಮಾನವೀಯ ದೌರ್ಬಲ್ಯಗಳನ್ನು ಸಹಜವಾಗಿ ಒಪ್ಪಿದ ವಚನಕಾರರು ಅಪರಿಪೂರ್ಣತೆಯಿಂದ ಪೂರ್ಣತೆಗೆ ಸಾಗಬಹುದೆಂದು ವಿಶ್ವಾಸದ ಹಾದಿತೋರಿಸಿದರು. ಶಿವನಿಗೆ ಸವಾಲು ಹಾಕುವ ದಿಟ್ಟತನದ ವಚನಕಾರರು **"ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ... ನೀನೆನ್ನಯೊಮ್ಮೆ ಒಡಲುಗೊಂಡು ನೋಡಾ"**[೯] ಎನ್ನುತ್ತಾರೆ. ಅಪಾರ ಜೀವನ ಪ್ರೀತಿಯುಳ್ಳ ಶರಣರು ದೇವರು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದರು. ಧರ್ಮ, ವ್ಯಕ್ತಿ, ಸಮಾಜವನ್ನು

---

೯ ಮಹದೇವಯ್ಯ ಓ.ಆರ್., 'ವಚನಗಳಲ್ಲಿ ಜೀವನಮೌಲ್ಯಗಳು, ಜಗದ್ಗುರು ಶ್ರೀ ಶಿವರುದ್ರೇಶ್ವರ ಗ್ರಂಥಮಾಲೆ, ಮೈಸೂರು, ೨೦೧೧, ಪು : ೫೪.

ಶುದ್ಧೀಕರಣ ಮಾಡಲು ಪ್ರಯತ್ನಿಸಿದರು. ಸಾಮಾಜಿಕ, ಧಾರ್ಮಿಕ ಸ್ತರದಲ್ಲಿ ಸಮಾನತೆಯ ಪ್ರಯತ್ನದಿಂದಾಗಿ ಜಾತಿಭೇದ, ಅಸ್ಪೃಶ್ಯತೆ ದೂರಸರಿಸಿ ನೀತಿಗೆ ಪ್ರಾಧಾನ್ಯತೆ ನೀಡಿ ಎಲ್ಲರಿಗೂ ಅಧ್ಯಾತ್ಮಿಕ ಸಾಧನೆ ಮಾಡಬಹುದಾದ ದಾರಿತೋರಿಸಿದರು.

"ವಚನ ಸಾಹಿತ್ಯ ಮೌಲ್ಯಗಳ ಒಂದು ಸಂಕೀರ್ಣ. ಅದು ಹಲವಾರು ಶ್ರೇಯಸ್ಕರ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದೆ ಮಾತ್ರವಲ್ಲ, ತನಗೆ ತಾನೇ ಒಂದು ಮಹತ್ವದ ಮೌಲ್ಯವಾಗಿದೆ. ಈ ಮೌಲ್ಯ ಸಮುಚ್ಚಯದ ಅನುಸಂಧಾನ ಇಂದಿಗೂ ಪ್ರಸ್ತುತ ಮತ್ತು ಪ್ರಯೋಜನಕರ"[೧೦] ಬಸವಣ್ಣನವರು ಸಮಾಜದಲ್ಲಿ ನಿಂತನೀರಾಗಿದ್ದ ಸ್ಥಾವರ ಮೌಲ್ಯಗಳನ್ನು ಬಿಟ್ಟು ಬದುಕಿಗೆ ಬೇಕಾದ ಮೌಲ್ಯಗಳನ್ನು ಪರಿಷ್ಕರಿಸಿ ಅಸಂಗತವಾದದ್ದನ್ನು ಖಂಡಿಸಿದರು. ಕಾಲಕ್ಕೆ ತಕ್ಕಂತೆ ಅನುವುಗೊಳಿಸಲು ಪ್ರಯತ್ನಿಸಿದ ಅವರು ಹೊಸದೃಷ್ಟಿ ಚಿಂತನೆಯತ್ತ ಸಮಾಜವನ್ನು ಸಿದ್ಧಗೊಳಿಸಿದರು. ಮೌಲ್ಯಗಳನ್ನು ನೆಲೆಗೊಳಿಸುವ ಅವರ ಪ್ರಯತ್ನದಲ್ಲಿ ಬಹಳಷ್ಟು ಅಡತಡೆಗಳು ಎದುರಾದರೂ ಅವೆಲ್ಲವನ್ನು ಎದುರಿಸಿ ಸಾಮಾಜಿಕ ಸಹ ಜೀವನಕ್ಕೆ ಅಡಿಪಾಯ ಹಾಕಿದರು.

ವ್ಯಕ್ತಿನೆಲೆಯಿಂದ ಸಮಾಜಸುಧಾರಣೆ ಆರಂಭಿಸಿದ ವಚನಕಾರರಿಗೆ ಜೀವನವೇ ಅತ್ಯುನ್ನತ ಮೌಲ್ಯ. ವ್ಯಕ್ತಿಯನ್ನು ಹುಟ್ಟು, ಹುದ್ದೆ, ಹಣದಿಂದ ತೂಗದೆ ಗುಣದಿಂದ ಗುರುತಿಸಿದರು. ಸಾಮಾನ್ಯ ಜನರನ್ನು ಕೀಳರಿಮೆಯಿಂದ ಹೊರತಂದು ಲಿಂಗಭೇದ ಹೊರತಾದ ಸರ್ವಸಮಾನತೆಯ ಮೌಲ್ಯವನ್ನು ಸಮಾಜದಲ್ಲಿ ತರಲು ಶ್ರಮಿಸಿದ ಕ್ರಾಂತಿಕಾರಿಗಳು. ವಚನಕಾರರು ಅಂತರಂಗ – ಬಹಿರಂಗ ಶುದ್ಧತೆ, ಸತ್ಯಸಂಧತೆ, ಮಾನವ ಸಂಬಂಧಗಳನ್ನು ಬೆಸೆಯುವ ಮಾನವೀಯಮೌಲ್ಯಗಳನ್ನು ಬಿತ್ತಿದರು. ಇವನಾರವ ಎನ್ನದ ಬಾಂಧವ್ಯ, ಸ್ವಾರ್ಥರಹಿತ ಬದುಕು ಸಾಧ್ಯವೂ ಹೌದು ಎಂದು ತೋರಿಸಿಕೊಟ್ಟರು.

ವೈದಿಕ ಧರ್ಮದ ಸ್ವರ್ಗದ ಕಲ್ಪನೆ ನಿರಾಕರಿಸಿದ ಶರಣರು ಇಹದ ಬದುಕಿಗೆ ಒತ್ತುಕೊಟ್ಟು ಇಲ್ಲದ ವೈರಾಗ್ಯದಿಂದ ಕಾಯಕತ್ವ ಮರೆಯುವುದು ಸರಿಯಲ್ಲ ಎಂದರು. ಅವರು ಲೌಕಿಕದಲ್ಲಿದ್ದೇ ಅಧ್ಯಾತ್ಮಿಕ ಸಾಧನೆ ಮಾಡಿ ಶಾಂತಿ ನೆಮ್ಮದಿ ಪಡೆಯಬಹುದೆಂದು ತೋರಿಸಿಕೊಟ್ಟರು. ಭೌತಿಕ ಆಕಾರಕ್ಕಿಂತ ಅಂತಃಶಕ್ತಿ ಮುಖ್ಯ ಎಂದ ಅವರು ಅಂಗವಿಕಲರನ್ನು ಕಡೆಗಣಿಸಬಾರದೆಂಬ ಮಾನವೀಯ ಕರೆ ನೀಡಿದರು. ಶರಣರು ವ್ಯಕ್ತಿ ಸುಧಾರಣೆಯಿಂದ ಸಮಷ್ಟಿ ಸುಧಾರಣೆ ಸಾಧ್ಯ ಎಂದು ಮನಗಾಣಿಸಿದರು.

---

೧೦ ಸಿ.ಪಿ.ಕೆ. 'ಸಾಹಿತ್ಯ ಶೀಲನ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು : ೧೩೮.

ಹನ್ನೆರಡನೆಯ ಶತಮಾನದಲ್ಲಿ ಸಮಾಜದಲ್ಲಿದ್ದ ತರತಮದಿಂದಾಗಿ ನಲುಗುತ್ತಿದ್ದ ಅಮಾಯಕ ಜನರಿಗೆ ಘನತೆಯ ಬದುಕು ಕಟ್ಟಿಕೊಡಲು ವ್ಯವಸ್ಥೆಯನ್ನೇ ಪ್ರಶ್ನಿಸಿದರು. ಮಾನವ ಬದುಕಿಗೆ ಸಲ್ಲದ್ದನ್ನು ಕಿತ್ತೆಸೆದು ಮೌಲ್ಯಯುತವಾದದ್ದನ್ನು ನೆಲೆಗೊಳಿಸಲು ಕಾರ್ಯೋನ್ಮುಖರಾಗಿ ಸಮಾಜವನ್ನು ಹೊಸ ಭರವಸೆಯತ್ತ ಒಯ್ದರು. **"ವ್ಯಕ್ತಿಯ ಮತ್ತು ಸಮಾಜದ ಉತ್ಥಾನಕ್ಕೆ, ಕಾಯಕವೇ ಶ್ರೇಷ್ಠ ಸಾಧನ, ಅದು ಜಾತಿ ವಿನಾಶಕ್ಕೂ ಸಮಾನತೆಗೂ ನೆರವಾಗಬಲ್ಲದು. ಅರ್ಥ ವ್ಯವಸ್ಥೆಗಂತೂ ದೊಡ್ಡ ಕೊಡುಗೆಯಾಗಬಲ್ಲದು"**[೧೧]ಎಂಬ ಮಾತು ಕಾಯಕದ ಬಹುಮುಖ ಆಯಾಮವನ್ನು ಸೂಚಿಸುತ್ತದೆ. ವಚನಕಾರರು ಜಗತ್ತಿಗೆ ನೀಡಿದ ಮಹೋನ್ನತ ಚಿಂತನೆ ಕಾಯಕ ತತ್ತ್ವ ಮತ್ತು ದಾಸೋಹ ತತ್ತ್ವ, ಹಂಚಿ ಉಣ್ಣುವ ಸುಖದ ಪರಿಕಲ್ಪನೆ ಮಾಡಿಸಿದವರು ವಚನಕಾರರು, ಬಸವಣ್ಣನವರ 'ಕಾಯಕವೇ ಕೈಲಾಸ', ಆಯ್ದಕ್ಕಿ ಮಾರಯ್ಯನ 'ಲಿಂಗವಾದರೂ ಕಾಯಕದೊಳಿಗು' ಕಾಯಕದ ಮಹತ್ವದ ಸಾರಿದವು. ಸಂಗ್ರಹ ಮನೋಭಾವವೇ ಸಮಾಜದ ಅಸಮಾನತೆಗೆ ಮೂಲ ಎಂದು ಕಂಡುಕೊಂಡ ಅವರು ಯಾವ ಕಾಯಕವನ್ನೂ ಕಡೆಗಣಿಸಲಿಲ್ಲ.

ಅಡುಗೆ ಕೋಣೆಗೆ ಸೀಮಿತವಾಗಿದ್ದ ಸ್ತ್ರೀಗೆ ಘನತೆ, ಗೌರವ ದೊರಕಿಸಿಕೊಡಲು ಮಾಡಿದ ಅವರ ಪ್ರಯತ್ನ ಐತಿಹಾಸಿಕವೆನ್ನಬಹುದು. ಲಿಂಗತಾರತಮ್ಯದ ಸೂಕ್ಷ್ಮ ವಿಶ್ಲೇಷಣೆಯೇ ಸಮಾನತೆಯ ತುಡಿತಕ್ಕೆ ನಾಂದಿಯಾಗಿದ್ದು ಮಹಿಳೆ ಆತ್ಮಶಕ್ತಿಯನ್ನು ಸಮಾಜ ಮನಗಾಣಲು ಸಾಧ್ಯವಾಗಿ ಸ್ತ್ರೀ ಬೌದ್ಧಿಕವಾಗಿ, ಅಧ್ಯಾತ್ಮಿಕವಾಗಿ ಎತ್ತರಕ್ಕೇರಬಲ್ಲಳು ಎಂದು ಸಾಬೀತುಪಡಿಸಿದರು. ಕೀಳಾಗಿ ಪರಿಗಣಿಸಲ್ಪಟ್ಟಿದ್ದ ಸತಿ 'ವಿಚಾರಶೀಲ' ಪತ್ನಿಯೂ ಆದಳು. ದಿನವಿಡೀ ದುಡಿದರೂ ದಾರಿದ್ರ್ಯ ಹರಿಯದ ವರ್ಗ ಇನ್ನೊಂದೆಡೆ ಇದ್ದಾಗ ಸಮಾನತೆಯ ಸಮಾಜ ಸೃಷ್ಟಿ ಸಾಧ್ಯವಿಲ್ಲವೆಂದು ಮನಗಂಡವರು. ದುಡಿದುಣ್ಣುವರ ಶ್ರಮದ ಮೌಲ್ಯವನ್ನು ಗೌರವಿಸುವ ಅರಿವನ್ನುಂಟು ಮಾಡಿದರು. ವಚನಕಾರರ ಸಮನ್ವಯ ದೃಷ್ಟಿಯ ಜನಭಾಷೆಯ ವಚನಗಳು ಜನ ಜಾಗೃತಿ, ಸಮಾಜದಲ್ಲಿ ಪರಿವರ್ತನೆಗೆ ಪ್ರಯತ್ನಿಸಿದರು. ಅಚ್ಚಗನ್ನಡದ ವಚನಗಳು ಪ್ರಾಮಾಣಿಕ ಅಭಿವ್ಯಕ್ತಿಯಿಂದ, ಸೂಕ್ಷ್ಮತೆಯಿಂದ ಸತ್ವದಿಂದ ಬೆಳಗಿದವು.

ವೈಚಾರಿಕತೆಯನ್ನು ಒಳಗೊಂಡ ನೈತಿಕತೆಯನ್ನು ಅನುಸರಿಸಿದ ಶರಣರ ಅರಿವಿನ ಪರಿಧಿ ವಿಸ್ತಾರನೋಟದ್ದು, ಬೋಧಕರಾಗದೆ ಸಾಧಕರಾದ ಶರಣರು ನೈತಿಕಮೌಲ್ಯಗಳನ್ನು ವಚನಗಳ ಮೂಲಕ ಪರಿಶುದ್ಧ ಬದುಕಿಗೆ ಅಗತ್ಯವೆಂಬುದನ್ನು ಮನಗಾಣಿಸಲು

---

೧೧ ಅದೇ, ಪು : ೧೪೨.

ಪ್ರಯತ್ನಿಸಿದರು. ತಾವು ಬದುಕಿ ಬೇರೆಯವರನ್ನು ಬದುಕಗೊಡುವ ಸನ್ನಡತೆ, ಸಚ್ಚಾರಿತ್ರ್ಯ, ನೀತಿನಿಷ್ಠತೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಮುಖ್ಯವೆಂದು ಮನಗಾಣಿಸಿದರು. ನಡೆಯೊಂದು ಪರಿ, ನುಡಿಯೊಂದು ಪರಿ ಇಲ್ಲದ ವಚನಕಾರರು ಕಟ್ಟಿದ ಮೌಲ್ಯಗಳನ್ನು ತೂಗುವುದು ಕಷ್ಟವೇ.

ಸಂಸ್ಕೃತ ಭೂಯಿಷ್ಠವಾದ ಸಾಹಿತ್ಯದ ಬದಲಿಗೆ ಸರಳವಾದ ವಚನಗಳ ರಚನೆಯ ಹಿಂದೆ 'ಜನಬದುಕಲಿ' ಎಂಬ ಸದಾಶಯವೇ ಆಗಿತ್ತು. ಮೌಲ್ಯಗಳ ಅಗರವಾದ ವಚನಗಳು ವಚನಕಾರರ ದೂರದೃಷ್ಟಿ, ಪ್ರತಿಗಾಮಿದೃಷ್ಟಿ ಇಂದಿಗೂ ಪ್ರಸ್ತುತವೆನಿಸುತ್ತದೆ. ಮನಸ್ಸಿಗೆ ಪ್ರಸನ್ನತೆ, ಅರಿವಿನ ಬೆಳಕನ್ನು, ಆತ್ಮವಿಕಾಸವನ್ನುಂಟು ಮಾಡುವ ವಚನಗಳು ವಿಶ್ವಸಾಹಿತ್ಯದ ನೆಲೆಯಲ್ಲೇ ನಿಲ್ಲುತ್ತವೆ. ಜನರನ್ನು ಎಚ್ಚರಿಸುವ, ಸಮಷ್ಟಿ ಪ್ರಜ್ಞೆ ಮೂಡಿಸುವ, ಸಮಾನತೆಯ ಶ್ರೇಷ್ಠತೆಯಲ್ಲಿ ಮಿಂದೇಳುವ, ಸರಳವಾದ, ವೃತ್ತಿಯ ಬದುಕಿನ ನೆಲೆಯಲ್ಲಿ ಅಧ್ಯಾತ್ಮಿಕ ಚಿಂತನೆ ನಡೆಸುವ ಬೌದ್ಧಿಕತೆಯನ್ನು ಹರಿತಗೊಳಿಸುವ ಬೆಡಗಿನ ವಚನಗಳು ವಚನಗಾರರು ಮನುಕುಲಕ್ಕೆ ನೀಡಿದ ಅಪೂರ್ವ ಕೊಡುಗೆಯೆನಿಸಿವೆ.

ಶರಣರ ನಂತರ ಹಿಂದೂ ಧರ್ಮದ ಪುನರ್ ಜೀವನದಿಂದ ಒಡ ಮೂಡಿದ ಕೃಷ್ಣ ಭಕ್ತಿಯು ಕನ್ನಡ ಸಾಹಿತ್ಯದಲ್ಲಿಯೂ ಕಾಣಿಸಿಕೊಂಡಿತು. ಕುಮಾರವ್ಯಾಸ, ಕುಮಾರವಾಲ್ಮೀಕಿ, ಲಕ್ಷ್ಮೀಶ ಮೊದಲಾದವರು ಮಹಾಭಾರತ ಮತ್ತು ರಾಮಾಯಣದ ಕಥೆಗಳನ್ನು ಭಕ್ತಿಯ ನೆಲೆಯಲ್ಲಿ ನಿರೂಪಿಸಿದರು. ಕುಮಾರವ್ಯಾಸ ಹಾಗೂಲಕ್ಷ್ಮೀಶರರು ಕೃಷ್ಣ ಭಕ್ತಿ ಅಡಿಪಾಯದಲ್ಲಿ ಕಾವ್ಯ ರಚಿಸಿದರು. ಭಕ್ತಿಯೇ ಮೌಲ್ಯವಾಗಿದ್ದ ಅಂದಿನ ಸಂದರ್ಭದಲ್ಲಿ ಸಾಮಾಜಿಕ ಮೌಲ್ಯ ಸಾಂದರ್ಭಿಕವಾಗಿ ನಿರೂಪಿಸಲ್ಪಟ್ಟಿವೆ ಎಂದರೆ ತಪ್ಪಾಗಲಾರದು. ಕುಮಾರವ್ಯಾಸ ಲಕ್ಷ್ಮೀಶರು ತಮ್ಮ ಕಾವ್ಯದೊಳಗೆ ಅಂದಿನ ಬದುಕಿನ ಹಲವಾರು ಚಿತ್ರಣಗಳನ್ನು ನೀಡಿರುವುದನ್ನು ನಾವು ಗಮನಿಸಬಹುದಾಗಿದೆ.

ದಾಸ ಸಾಹಿತ್ಯವು ಭಕ್ತಿಪರವಾಗಿದ್ದು, ಭಕ್ತನಾದವನು ದೇವರ ಸ್ಮರಣೆಯಿಂದ ಆತ್ಮಶೋಧನೆಮಾಡಿಕೊಂಡು ತನ್ನ ಅರಿವಿನ ವಿಸ್ತಾರದ ಚಿಂತನೆಗಳನ್ನು ಜನರಿಗೆ ತಿಳಿಸುತ್ತಾ ಸಾಮಾಜಿಕ ಬದುಕಿನ ಓರೆ-ಕೋರೆಗಳನ್ನು ತಿದ್ದಲು ಪ್ರಯತ್ನಿಸಿದರು. ಸಮಾಜದ ಅನಂತ ಮುಖಗಳನ್ನು ದಾಸರವಾಣಿಯಲ್ಲಿ ಕಾಣಬಹುದಾಗಿದೆ.

"ಭಗವಂತನ ನಾಮಸ್ಮರಣೆ, ಬಾಲಲೀಲಾ ವೈಭವ, ಸಂಸಾರ ನಿರಸನ, ನಿಂದೆಸ್ತುತಿ, ಸಮಾಜ ವಿಡಂಬನೆ, ಮತತತ್ವ ಪ್ರತಿಪಾದನೆಗಳೇ ಕೀರ್ತನೆಯಲ್ಲಿ ಪ್ರಧಾನ ವಸ್ತುಗಳಾಗಿದ್ದವು.

ಸಾಮಾಜಿಕ ಬದುಕಿನಲ್ಲಿನ ನೈತಿಕ ಮಟ್ಟದ ಉನ್ನತಿಗೆ ದಾಸಸಾಹಿತ್ಯ ಶ್ರಮಿಸಿದ್ದು ಅದೇ ಅಂದಿನ ಕಾಲದ ಮೌಲ್ಯವೆನಿಸಿತು”[೧೨] ಎಂದರೆ ತಪ್ಪಾಗಲಾರದು.

೩.೪ ಆಧುನಿಕ ಕನ್ನಡ ಸಾಹಿತ್ಯದಲ್ಲಿ ರೂಪುಗೊಂಡ ಜೀವಪರ ಮೌಲ್ಯಗಳು

ನವೋದಯ ಕಾಲದ ಸಾಹಿತ್ಯ ಹೊಸದರ ಹಿಂದೆ ಪ್ರೇರಣೆಯೊಂದಿರುವಂತೆ ಆಧುನಿಕ ಕನ್ನಡ ಸಾಹಿತ್ಯ ಪಾಶ್ಚಾತ್ಯರ ಪ್ರೇರಣೆ ಪ್ರಭಾವಗಳಿಂದ ರೂಪುಗೊಂಡಿತು. ಋಷಿ ಸಂಸ್ಕೃತಿ ಹೊರತಾದ ಹೊಸತನಕ್ಕೆ ಹಾತೊರೆಯಿತು. ಅಧ್ಯಾತ್ಮಿಕತೆ, ಪ್ರಕೃತಿ, ಮನುಷ್ಯ ಸಂಬಂಧವನ್ನು ಒಳಗೊಂಡ ವಾಸ್ತವ ಬದುಕಿನ ಕಾಲಮಾನ ಚಿಂತನೆಗಳಿಗೆ, ದೃಷ್ಟಿಧೋರಣೆಗಳಿಗೆ ಅನುಗುಣವಾಗಿ ಹೊಸಸಾಹಿತ್ಯ ತೆರೆದುಕೊಂಡಿತು.

ಬಹುಮುಖಿಯಾದ ಪ್ರಕೃತಿ ವರ್ಣನೆ, ವೈಚಾರಿಕ ಚಿಂತನೆಯ ನೆಲೆಗಟ್ಟಿನ ಮೇಲೆ, ಬಿಡದ ಪರಂಪರೆಯೊಂದಿಗೆ ಎಲ್ಲವನ್ನೂ ಆದರ್ಶದ ಚೌಕಟ್ಟಿನಲ್ಲಿಟ್ಟು ನೋಡಲಾಯಿತು. ಅಧ್ಯಾತ್ಮಿಕ ಪ್ರಖರತೆಯ ಹಿನ್ನೆಲೆಯಲ್ಲಿ ಬುದ್ಧ, ಗಾಂಧಿ, ಪರಮಹಂಸ, ವಿವೇಕಾನಂದರ ಗುಂಗಿನಲ್ಲಿ ಪ್ರೀತಿ, ತ್ಯಾಗ, ರಾಷ್ಟ್ರೀಯತೆ, ನೈತಿಕತೆ ಮೊದಲಾದ ಜೀವನಪ್ರೀತಿಯ ಮೌಲ್ಯಗಳು ನವೋದಯ ಸಾಹಿತ್ಯದಲ್ಲಿ ರೂಪುಗೊಂಡವು.

ಪ್ರಗತಿಶೀಲ ಸಾಹಿತ್ಯವು ಸಮಾಜದ ಹೊರಪದರವನ್ನು ಕಳಚುತ್ತಾ, ವಾಸ್ತವಿಕತೆ ಇದೆಂದು ತೋರಿಸುತ್ತಾ ಉದಾರಮಾನವೀಯ ಚಿಂತನೆಯ ಮೌಲ್ಯದ ಬೆಳಕಿನಲ್ಲಿ ರೂಪಿತವಾದ ಸಮಾಜಮುಖಿ ಸಾಹಿತ್ಯವೆನಿಸಿತು. ಜನಸಾಮಾನ್ಯರ ಬದುಕನ್ನು ಸಾಹಿತ್ಯದಲ್ಲಿ ತಂದು ವ್ಯಕ್ತಿನೆಲೆಯಲ್ಲಿ ಮನಸ್ಸಿನ ಶೋಧ ನಡೆಸುತ್ತಾ ಸಾಮಾಜಿಕ ಸಮಾನತೆಯ ಮೌಲ್ಯಗಳಿಗೆ ಪ್ರಯತ್ನಿಸಿತು.

ಹೊಸತೆನಿಸಿಕೊಳ್ಳುತ್ತಲೇ ಸೃಷ್ಟಿಯಾದ ನವ್ಯ ಸಾಹಿತ್ಯ ಸ್ವಾತಂತ್ರ್ಯಾನಂತರ ಹೊಸ ಹೊಣೆಗಾರಿಕೆಯ ಸಂದರ್ಭದಲ್ಲಿ ರೂಪುಗೊಂಡಿತು. ಪಾಶ್ಚಾತ್ಯ ಶಿಕ್ಷಣ–ಪ್ರೇರಣೆಯೊಂದಿಗೆ ಹೊಸಚಿಂತನೆಯ ಕಾಲದಲ್ಲಿ ಅದುವರೆಗಿನ ಮೌಲ್ಯಗಳ ಬಗೆಗಿನ ನಂಬಿಕೆ ಸಡಿಲವಾಗತೊಡಗಿದ ಸಮಯದಲ್ಲಿ ನವ್ಯಸಾಹಿತ್ಯ ಉಗಮವಾಯಿತು. ಪರಂಪರೆಯ ಸತ್ವದಲ್ಲಿ ರುಚಿಕಡಿಮೆ ಎನಿಸಿ ದೋಷಗಳೇ ಢಾಳಾಗ ತೊಡಗಿದಾಗ ವರ್ತಮಾನಕ್ಕೆ ಬೇಕಾದುದನ್ನು

---

೧೨ ಹೊನ್ನು ಸಿದ್ಧಾರ್ಥ, ಸಿ.ಬಿ.(ಪ್ರಸಂ) 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಕನ್ನಡ ಅಧ್ಯಯನಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ೨೦೧೪, ಪು : ೧೧೩.

ಹುಡುಕತೊಡಗಿದ್ದು ನವ್ಯ ಸಾಹಿತ್ಯ ಸೂಕ್ಷ್ಮವಾಗಿ ವೈಯಕ್ತಿಕ ನೆಲೆಯಲ್ಲಿ ಹೊಸ ಆಲೋಚನೆ, ಚಿಂತನೆಯ ಮೂಲಕ ಹೊಸಮೌಲ್ಯದತ್ತ ಸಾಗುತ್ತಾ ವಾಸ್ತವವನ್ನು ಭಿನ್ನನೆಲೆಯಲ್ಲಿ ಗ್ರಹಿಸತೊಡಗಿತು. ಪರಂಪರೆಯ ಮೌಲ್ಯಗಳನ್ನು ತೀವ್ರಪರಿಶೀಲನೆಗೆ ಒಳಗಾಗಿಸಿದ ನವ್ಯ ಸಾಹಿತ್ಯ ಜೀವಪರವಲ್ಲದ್ದನ್ನು ಬಲವಾಗಿ ವಿರೋಧಿಸಿದಾಗ ಆದರ್ಶ ನೆಲೆಯ ಮೌಲ್ಯಗಳು ನವ್ಯದ ಶೈಲಿಯಲ್ಲಿ ವಿಡಂಬನೆಗೆ ಒಳಗಾಗಬೇಕಾಯಿತು.

ಸಿದ್ಧಮೌಲ್ಯಗಳ ಮರುಪರಿಶೀಲನೆ, ನಿರ್ಧಿಷ್ಟ ಮೌಲ್ಯಗಳ ಸ್ಥಿತ್ಯಂತರದಲ್ಲಿ ವ್ಯಕ್ತಿಯೇ ಮೌಲ್ಯ ಕಂಡುಕೊಳ್ಳಬೇಕಾದ ಅನಿವಾರ್ಯತೆ ಕಂಡುಬಂದಿತು. ಪರಂಪರೆಯಲ್ಲಿನ ಮೌಲ್ಯಗಳು ಗಟ್ಟಿ ಅಂಶಗಳಿಗಿಂತ ಟೊಳ್ಳನ್ನೇ ಎತ್ತಿತೋರಿಸಲು ಆಸಕ್ತಿ ತೋರಿತು.

ದಲಿತ-ಬಂಡಾಯ ಸಾಹಿತ್ಯ ಮನೋಧರ್ಮದ ಮೂಲದಿಂದ ಒಂದೇ ಆಗಿದ್ದು ಮನುಷ್ಯನೇ ಇದರ ಕೇಂದ್ರ ಬಿಂದುವೆನಿಸಿದನು. ಮಾನವೀಯ ಸಂಬಂಧವನ್ನೇ ಮುಖ್ಯವಾಗಿಸಿಕೊಂಡ ದಲಿತ - ಬಂಡಾಯ ಸಾಹಿತ್ಯಗಳ ನಡುವೆ ಕೆಲವು ವಿಚಾರಗಳಲ್ಲಿ ಭಿನ್ನತೆಯಿದ್ದರೂ ಸಮುದಾಯದ ಹಿತದೃಷ್ಟಿಯ ಸಂದರ್ಭದಲ್ಲಿ ಸಮಾನ ಮನಸ್ಸಿನಿಂದ ತೊಡಗಿಸಿಕೊಂಡವು. ದಲಿತ ಸಾಹಿತ್ಯದಲ್ಲಿ ದಲಿತಸಂವೇದನೆ ಮತ್ತು ಭಾಷೆಯ ಅನನ್ಯತೆ ಸಾಹಿತ್ಯದ ಮೌಲ್ಯಗಳೆನಿಸಿದವು.

ದಲಿತ, ಬಂಡಾಯ ಸಾಹಿತ್ಯ ಪ್ರತಿಭಟನೆ, ಪ್ರಶ್ನಿಸುವುದನ್ನು ಮೂಲೋದ್ದೇಶವಾಗಿಸಿ-ಕೊಂಡಿದ್ದಾಗಿದೆ. ಜೀವನ ಪ್ರೀತಿ, ಸಾಮಾಜಿಕ ಕಳಕಳಿ, ರಾಜಕೀಯ ಪ್ರಜ್ಞೆ ಒಳಗೊಂಡಿರುವ ದಲಿತ-ಬಂಡಾಯ ಸಾಹಿತ್ಯದ ಮೂಲ ಪ್ರೇರಣೆ ಲೋಹಿಯಾ ಸಿದ್ಧಾಂತ ಆಗಿದ್ದರೂ ಹೆಚ್ಚು ಪ್ರಭಾವಿತಗೊಂಡಿರುವುದು ಅಂಬೇಡ್ಕರ್ ಚಿಂತನೆಗಳಿಂದ ಎನ್ನಬಹುದು.

"ಹೊಸ ಮನುಷ್ಯನ ಹೊಸಮಾನವೀಯತೆಯ ದೃಷ್ಟಿ ಕ್ರಿಯೆಯೇ ಬಂಡಾಯದ ಕನಸುಗಾರಿಕೆ"[೧೩] ಎಂಬ ಎಸ್. ಶಿವಾನಂದ ಅವರ ಬಂಡಾಯದ ದನಿಯ ಆಶಯದ ಮಾತು ಸೂಕ್ತವಾದುದು. ಶೋಷಿತರ ಬದುಕು ಉತ್ತಮಗೊಳ್ಳಬೇಕೆಂಬ ಸದಾಶಯವನ್ನು ಹೊಂದಿರುವ ಸಾಹಿತ್ಯ ನೊಂದವರ ನೋವನ್ನು, ಬದುಕಿನಲ್ಲಿಯೇ ಮೌಲ್ಯ ತೋರುವ ಜನರನ್ನು ಕುರಿತಾಗಿದೆ. ನೇರ-ನಿಷ್ಠುರ ಅಭಿವ್ಯಕ್ತಿಯ ದಲಿತ-ಬಂಡಾಯ ಸಾಹಿತ್ಯ ತಾರತಮ್ಯ ಹೊರತಾದ ಹೊಸಮನುಷ್ಯ, ಮಾನವೀಯ ಮೌಲ್ಯಗಳಿಗಾಗಿ ತುಡಿಯುತ್ತದೆ.

---

೧೩ ರಹಮತ್ ತರೀಕೆರೆ, 'ಮಾತು ತಲೆಯೆತ್ತುವ ಬಗೆ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧, ಪು : ೨೭೨.

ಒಟ್ಟಿನಲ್ಲಿ ಮೌಲ್ಯಗಳು, ನಂಬಿಕೆ ಮತ್ತು ಆದರ್ಶಗಳು ಸಮಾಜವನ್ನು ಮುನ್ನಡೆಸುವ ಶಕ್ತಿಗಳಾಗಿದ್ದು ಸಾಹಿತ್ಯ ಮೌಲ್ಯವನ್ನು ಪ್ರತಿಪಾದಿಸುತ್ತಲೇ ಬಂದಿದೆ. ಕಾಲ, ದೇಶ, ಪರಿಸರಕ್ಕೆ ಅನುಗುಣವಾಗಿ ಒಂದು ಜನಾಂಗ ತನ್ನದೇ ಆದ ಮೌಲ್ಯಗಳನ್ನು ರೂಪಿಸಿಕೊಂಡಿರುತ್ತದೆ. ಆ ಮೌಲ್ಯಗಳು ಸಮಾಜವನ್ನು ನಿಯಂತ್ರಿಸುವ ಕಾರ್ಯವನ್ನೂ ಮಾಡುತ್ತವೆ.

ಸಮಕಾಲೀನ ಜೀವನಮೌಲ್ಯಗಳನ್ನು ಸಾಹಿತ್ಯ ಕೃತಿಯೊಂದು ಎಷ್ಟರಮಟ್ಟಿಗೆ ನಿರ್ವಹಿಸಿದೆ ಎಂಬುದು ಮುಖ್ಯವಾದಾಗ ಅಲ್ಲಿ ವ್ಯಕ್ತಿಶೋಧ, ಸಮಾಜಶೋಧ, ಮೌಲ್ಯಾದರ್ಶದ ಶೋಧವೂ ನಡೆದಿರುತ್ತದೆ. ಸಾಮಾಜಿಕ ಮೌಲ್ಯದ ವಿಮರ್ಶೆ ಇಂದು ಮುಖ್ಯವೆನಿಸುತ್ತದೆ. ಇಂದಿನ ಜಾಗತೀಕರಣ, ಅಸಹಿಷ್ಣುತೆ, ಹಿಂಸೆಯಿಂದ ನಲುಗುತ್ತಿರುವಾಗ ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟುಹಾಕುವ ಸಾಹಿತ್ಯ ಅಗತ್ಯವೆನಿಸುತ್ತದೆ. ನಮಗೆ ಇಂದು ಬೇಕಾಗಿರುವುದು ಸಹಿಷ್ಣುತೆಯಿಂದ ಕೂಡಿದ ಮಾನವೀಯ ಸಮಾಜ. ಮಾನವ ಬೆಳೆಸಿಕೊಂಡು ಬಂದಿರುವ ಅಪಾರವಾದ ಜ್ಞಾನಸಂಪತ್ತು ಮತ್ತು ಮೌಲ್ಯಗಳು ಇಂದಿನ ಮೌಲ್ಯಯುತ ಸಮಾಜಕ್ಕೆ ಆಧಾರಸ್ತಂಭವಾಗಬೇಕಾದುದು ಅಗತ್ಯವೆನಿಸಿದೆ.

ಇಂದು ಎಲ್ಲಾ ರಂಗಗಳಲ್ಲೂ ದಿನೇ ದಿನೇ ಮೌಲ್ಯ ಕುಸಿಯುತ್ತಿರುವ ಸಂದರ್ಭದಲ್ಲಿ ಅದರ ಪುನರ್ ಅಸ್ಥಿತ್ವಕ್ಕಾಗಿ ಹೊಸರೂಪ ಕೊಡಬೇಕಾಗಿದೆ. ಮೌಲ್ಯಗಳನ್ನು ಕುರಿತು ಚಿಕಿತ್ಸಕ ಚಿಂತನೆ ಆಗಬೇಕಾಗಿದೆ. ಪರಂಪರೆಯ ನೆಲೆಗಟ್ಟಿನ ಮೇಲೆ ನಾವು ಮೌಲ್ಯಗಳನ್ನು ಕುರಿತು ಚಿಂತನೆ ನಡೆಸಿ ಬೇಡವಾದ ಕಲ್ಮಶವನ್ನು ತೆಗೆಯಬೇಕಾಗಿದೆ. ಜೀವಪರವಾದ ಮೌಲ್ಯಗಳನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಪುನರ್ ರೂಪಿಸಿಕೊಳ್ಳಬೇಕಾಗಿದೆ. ಇಂತಹ ಮೌಲ್ಯಗಳನ್ನು ನಮ್ಮ ಕನ್ನಡ ಸಾಹಿತ್ಯ ತನ್ನೊಳಗೆ ಅಂತರ್ಗತಗೊಳಿಸಿಕೊಂಡಿದೆ. ನಾವು ಈ ಮೌಲ್ಯಗಳನ್ನು ಗುರುತಿಸಿ ಸಾಹಿತ್ಯದ ಶ್ರೇಷ್ಠತೆಯನ್ನು ಸಾರಬೇಕಾಗಿದೆ. ಇದರಿಂದ ಕನ್ನಡ ಸಾಹಿತ್ಯದ ಶ್ರೇಷ್ಠತೆಯನ್ನು ಕಂಡುಕೊಂಡಂತಾಗುತ್ತದೆ.

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಇಬ್ಬರು ಕೂಡ ಸಮಕಾಲೀನ ಸಮಾಜದಲ್ಲಿ ಮೌಲ್ಯಗಳನ್ನು ಬಿತ್ತುವ ಕಾರ್ಯದಲ್ಲಿ ತೊಡಗಿಕೊಂಡ ಸಾಹಿತಿಗಳಲ್ಲಿ ಪ್ರಮುಖರಾಗಿದ್ದಾರೆ. ಇರ್ವರು ಕೂಡ ಜೀವ ಪರವಾದ ಮೌಲ್ಯಗಳನ್ನು ತಮ್ಮ ಕಥೆಗಳಲ್ಲಿ ಪ್ರತಿಪಾದಿಸುವ ಮೂಲಕ, ಸಮಾಜವಾದಿ-ದೇಸಿಸಂವೇದನೆಗಳಿಗೆ ಜೀವ ತುಂಬಿರುವರು. ತಳವರ್ಗದ ಜನರ ಬದುಕಿನ ಬವಣೆಗಳನ್ನು ಚಿತ್ರಿಸುತ್ತಾ ಜನರಿಗೆ ಚೈತನ್ಯದಾಯಕವಾದಂತಹ

ಶಕ್ತಿಯನ್ನು ತುಂಬುವಲ್ಲಿ ಇಬ್ಬರೂ ಶ್ರಮಿಸಿದ್ದಾರೆ. ಜಾತಿ ನಿರ್ಮೂಲನೆ, ಸ್ತ್ರೀ ಸ್ವಾತಂತ್ರ್ಯ, ಮೂಢನಂಬಿಕೆಗಳ ನಿರ್ಲಕ್ಷ, ಹಸಿವು ಮತ್ತು ಬಡತನಗಳ ನಿವಾರಣೆ, ಸಮಸಮಾಜ ನಿರ್ಮಾಣದಂತಹ ಮೌಲಿಕ ಸಂದೇಶಗಳನ್ನು ನೀಡಿ ಆರೋಗ್ಯಪೂರ್ಣ ಸಮಾಜದಲ್ಲಿ ಮನುಷ್ಯ ಮನುಷ್ಯನ ನಡುವಿನ ಸಂಬಂಧವು ಗಟ್ಟಿಯಾಗಬೇಕು ಮತ್ತು ಶಾಶ್ವತವಾಗಿರಬೇಕೆಂಬ ಆಶಯವನ್ನು ನೀಡಿರುತ್ತಾರೆ.

ಅಧ್ಯಾಯ : ೪

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ

ಅಧ್ಯಾಯ – ೪

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ

ಸಾಹಿತ್ಯದಲ್ಲಿ ಬದುಕಿನ ಮೌಲ್ಯಗಳು ಹಲವಾರು ರೂಪದಲ್ಲಿ ಹುದುಗಿದ್ದು ಸಹೃದಯನಿಗೆ ಮೌಲ್ಯಗಳ ಸಂವೇದನೆ ಉಂಟುಮಾಡುವುದು ಸಾಹಿತ್ಯದ ಸಾರ್ಥಕತೆಯೂ ಆಗಿದೆ. ಕಲಾಪ್ರಕಾರಗಳು ಮೌಲ್ಯದ ಅರಿವನ್ನುಂಟು ಮಾಡಿದರೂ ಸಾಹಿತ್ಯ ಪರಿಣಾಮಕಾರಿ ಆಗಿ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಎನ್ನಬಹುದು. ಸಾಹಿತ್ಯದಲ್ಲಿ ಬರುವ ಪಾತ್ರಗಳು ಓದುಗನಿಗೆ ಮೌಲ್ಯದ ನೆಲೆಯ ಆಳ, ಎತ್ತರ, ಅಗಾಧತೆಯನ್ನು ತಿಳಿಸಬಲ್ಲವು.

ಜನಜೀವನ ಪ್ರತಿಫಲಿಸುವುದು ಸಾಹಿತ್ಯದಲ್ಲಿ ಬಹಳ ಮುಖ್ಯವಿಚಾರವೆನ್ನಿಸಿದ್ದು ಇದು ಸಾಹಿತ್ಯಕ್ಕೆ ಜೀವಂತಿಕೆಯ ಅಂಶವೂ ಆಗಿರುತ್ತದೆ. ಮೌಲ್ಯಪ್ರಜ್ಞೆಯುಳ್ಳ ಸಾಹಿತ್ಯದಿಂದ ವಾಚಕನಿಗೆ ಮೌಲ್ಯದ ಅರಿವಿನಿಂದ ಮನಸ್ಸು ಸಂಸ್ಕಾರಗೊಂಡು, ಆತ್ಮಶೋಧನೆಯಿಂದ ತನ್ನ ಮತ್ತು ಸಮಾಜದ ಬದುಕಿನ ಉತ್ತಮಿಕೆಗೆ ಚಿಂತಿಸುತ್ತಾನೆ.

ಬದುಕನ್ನು ಉದಾತ್ತಗೊಳಿಸಿ, ಮಾನವನನ್ನು ವಿಚಾರಪರನನ್ನಾಗಿ, ಜ್ಞಾನವಂತನನ್ನಾಗಿ ಮಾಡುವ ಸಾಹಿತ್ಯ ಬದುಕಿನ ದೀವಿಗೆಯಾಗುವುದು ಕವಿಯ ಸಾಮಾಜಿಕ ವಿಮರ್ಶೆಯಿಂದೆನ್ನಬಹುದು. ಸಾಮಾಜಿಕ ವಾಸ್ತವದ ಕಲಾತ್ಮಕ ಅಭಿವ್ಯಕ್ತಿಯಾದ ಸಾಹಿತ್ಯ ಸಹೃದಯ ಮನಸ್ಸನ್ನು ಅವನರಿಯದಂತೆ ತಿದ್ದುವ ಮೂಲಕ ಸಮಾಜದ ಬಾಳಿನ ಮಟ್ಟವನ್ನೇ ಎತ್ತರಿಸಿ ಲೋಕವಿಕಾಸವನ್ನು ಮಾಡಬಲ್ಲದು.

ಕನ್ನಡ ಸಾಹಿತ್ಯವು ಅಂದಿನಿಂದ ಇಂದಿನವರೆಗೂ ಸಮಾಜಮುಖಿಯಾಗಿ ಸಂರಚನೆಗೊಂಡು ಸಮಾಜದ ಜನಮಾನಸದಲ್ಲಿ ಉನ್ನತ ಚಿಂತನೆಗಳಿಗೆ ದಾರಿಮಾಡಿಕೊಟ್ಟಿದೆ. ಲೌಕಿಕ-ಅಲೌಕಿಕ ಎಂಬ ಎರಡು ಪಾತಳಿಯ ಮೂಲಕ ಹರಿದುಬಂದು ವಿಸ್ತರತೆಯನ್ನು ಪಡೆದುಕೊಂಡು ಸಮಾಜದ ನೆಲ-ಮೂಲ ಸಂಸ್ಕೃತಿಯನ್ನು ತನ್ನೊಳಗೆ ಮೈಗೂಡಿಸಿಕೊಂಡಿದೆ. ಆ ಮೂಲಕ ಕನ್ನಡ ಸಾಹಿತ್ಯ ಮಾಧುರ್ಯದೊಂದಿಗೆ ಸದೃಢತೆಯನ್ನು ರೂಢಿಸಿಕೊಂಡಿದೆ. ಸಂಸ್ಕೃತದ ಎರವಲು ಛಂದಸ್ಸುಗಳಾದ ಕಂದ, ರಗಳೆ, ಷಟ್ಪದಿಗಳ ಜೊತೆಗೆ ಕನ್ನಡದ ಅಪ್ಪಟ ದೇಸಿ ಛಂದಸ್ಸು, ತ್ರಿಪದಿಯನ್ನು ಅಭಿವ್ಯಕ್ತಗೊಂಡು ಆಧುನಿಕಯುಗಕ್ಕೆ ಪಾಶ್ಚಾತ್ಯ ಸಾಹಿತ್ಯ ಪ್ರಕಾರಗಳಾದ ಭಾವಗೀತೆ, ಕಾದಂಬರಿ, ಸಣ್ಣಕತೆ ಮೊದಲಾದ ಪ್ರಕಾರಗಳನ್ನು ತನ್ನ ಅಭಿವ್ಯಕ್ತಿಮಾಧ್ಯಮವಾಗಿ ಅಳವಡಿಸಿಕೊಂಡಿತು.

ಶ್ರೇಷ್ಠವಾದುದೆಲ್ಲಾ ಸ್ವಲ್ಪವಾಗಿರುತ್ತದೆ ಎಂಬಂತೆ ಕತೆಗೆ ಅದರ ಆಕಾರವೇ ಮೌಲ್ಯವೆನ್ನಬಹುದು. ತನ್ನ ಸೀಮಿತ ಪರಿಧಿಯಲ್ಲಿ ಬದುಕಿನ ದ್ರವ್ಯವನ್ನು ತುಂಬಿಕೊಂಡಿರುವುದು ಕತೆಯ ವಿಶಿಷ್ಟತೆಯೂ ಆಗಿದೆ. ಸಣ್ಣಕತೆಯಲ್ಲಿ ಅಡಗಿರುವುದು ದೊಡ್ಡ ವಿಲಾಸವಾದ್ದರಿಂದ ಕತೆಗಾರ ವಿಶ್ಲೇಷಣಾತ್ಮಕ ದೃಷ್ಟಿಯಿಂದ ಸಾಮಾಜಿಕ ಸನ್ನಿವೇಶಗಳನ್ನು ಅವಲೋಕಿಸುತ್ತಾನೆ.

ಬದುಕಿನ ಸಂಕೀರ್ಣತೆಯನ್ನು ಗ್ರಹಿಸಿ ಕಲ್ಪನೆಯಲ್ಲಿ ಘನೀಕೃತವಾಗಿ ಪುನರ್ ಸೃಷ್ಟಿಯಾಗುವ ಬದುಕಿನ ಪ್ರತಿಬಿಂಬವೆನಿಸುವ ಕಥಾದರ್ಶನಕ್ಕೂ ಮತ್ತು ಜೀವನದರ್ಶನಕ್ಕೂ ವ್ಯತ್ಯಾಸ ಹೆಚ್ಚಿರುವುದಿಲ್ಲ. ಕಥಾರಚನೆಯ ಮೂಲಕ ಕಥೆಗಾರ ತಾನೂ ಕೂಡ ತನ್ನ ವ್ಯಕ್ತಿತ್ವವನ್ನು ವಿಕಾಸಕ್ಕೆ ಒಡ್ಡಿಕೊಳ್ಳುತ್ತಾನೆ. ಅಂದರೆ ತನ್ನ ಸಾಹಿತ್ಯರಚನೆಯ ಜೊತೆ ತಾನೂ ಕೂಡ ಅಭಿವ್ಯಕ್ತಗೊಳ್ಳುತ್ತಾ ಬೆಳೆಯುತ್ತಾನೆ. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಬರಹ ವಿಕಾಸವನ್ನು ನಾವು ಅವಲೋಕಿಸಬಹುದು.

೪.೧ ಬೆಸಗರಹಳ್ಳಿ ರಾಮಣ್ಣ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ :

ಬೆಸಗರಹಳ್ಳಿ ರಾಮಣ್ಣ ಅಗಾಧವಾದ ಜೀವನ ಪ್ರೀತಿ ಇರುವ ಕಥೆಗಾರ. ವೃತ್ತಿಯಲ್ಲಿ ವೈದ್ಯರಾಗಿದ್ದ ರಾಮಣ್ಣರವರು ಬಹುಮುಖ ಪ್ರತಿಭೆಯ ವ್ಯಕ್ತಿ. ಬಹುಶ್ರುತಸಾಧನೆಯಿಂದ ವಿಶಿಷ್ಟ ಕತೆಗಾರರಾಗಿ ಛಾಪುಮೂಡಿಸಿದ್ದಾರೆ.

ಸಾಹಿತ್ಯ ಮತ್ತು ವೈದ್ಯ ವೃತ್ತಿಯಲ್ಲಿ ಅಪೂರ್ವ ಸಮತೋಲನ ಸಾಧಿಸಿದ ಬೆಸಗರಹಳ್ಳಿ ರಾಮಣ್ಣ ಸೂಕ್ಷ್ಮ ಸಂವೇದನೆಯ ಕತೆಗಾರರು. ಮಂಡ್ಯದ ಕಲಿತ ಹಳ್ಳಿಗರಾದ ರಾಮಣ್ಣ ನಾಗರೀಕ ಪ್ರಪಂಚದಲ್ಲಿದ್ದೂ ಹಳ್ಳಿತನ ಬಯಸಿದ ಲೇಖಕರು. ಗ್ರಾಮ ಪರಿಸರದಲ್ಲಿ ಬದುಕಿನ ಸಂಕೀರ್ಣತೆಯನ್ನು ಆಪ್ತವಾಗಿ ಶೋಧಿಸುವ ರಾಮಣ್ಣ ಮೌಲ್ಯಗಳ ತಳಹದಿಯನ್ನು ಗ್ರಾಮೀಣ ಜಗತ್ತಿನಲ್ಲಿ ಕಂಡವರು. ಅವರ ಓದಿನ ವಿಸ್ತಾರ, ಕೃಷಿ ಬದುಕಿನ ಬಿಕ್ಕಟ್ಟುಗಳನ್ನು ಅರ್ಥೈಸಿಕೊಳ್ಳಲು ಬಳಸುವ ಎಚ್ಚರ, ಒಂದು ಸಂಗತಿಯನ್ನು ಬಹುಮುಖಿ ಸೂಕ್ಷ್ಮತೆಯಿಂದ ಪರಿಶೀಲಿಸುವ ರೀತಿ ಅವರ ಬರವಣಿಗೆಯನ್ನು ರೂಪಿಸಿದೆ.

ನೆಲದ ಬಸಿರಿನಿಂದ ಬಂದ ಕಥೆಗಳು ಸಹಜವಾಗಿಯೇ ನೆಲದ ಉಸಿರನ್ನು ಒಳಗೊಂಡಿವೆ. ಕಥೆಗಾರರಾದ ಸುಧಾಕರ ಅಭಿಪ್ರಾಯದಂತೆ **"ಬೆಸಗರಹಳ್ಳಿ ರಾಮಣ್ಣನವರ ಸುಸಂಸ್ಕೃತ ಚಿಂತನೆಯಿಂದಲೇ ಮಂಡ್ಯದ ಸಮೃದ್ಧ ಬದುಕು ಕತೆಗಳಾಗಿ ರೈತ ಬದುಕಿನ ಜಗತ್ತನ್ನು**

ಹಿಡಿದ ಮಾಗಿದ ಕತೆಗಳಾಗಿವೆ. ಮಂಡ್ಯದ ಸಂಸ್ಕೃತಿಯಿಂದ ಪ್ರೇರಣೆಗೊಂಡ ರಾಮಣ್ಣನವರಲ್ಲಿದ್ದ ಸೂಕ್ಷ್ಮ ಪರಿಶೀಲನೆಯೇ ಅವರ ಬದುಕು ಬರಹದಲ್ಲಿ ತಮ್ಮತನ ಉಳಿಸಿಕೊಂಡಿರುವುದೇ ಬಹುದೊಡ್ಡ ಮೌಲ್ಯ".[೧]

೪.೧.೧ ಜನನ – ಬಾಲ್ಯ :

ಒಬ್ಬ ಸಾಹಿತಿ, ವಿಜ್ಞಾನಿ ಯಾರೇ ಆದರೂ ಸಮಾಜ ಗುರುತಿಸುವಂತಹ ಸಾಧನೆಯನ್ನು ವೈಯಕ್ತಿಕ ಮಟ್ಟದಲ್ಲಿ ಮಾಡಿದ್ದರೂ ಅದಕ್ಕೆ ಪ್ರೇರಣೆ, ಪೂರಕವಾದ ಸಂಗತಿಗಳು ಇದ್ದೇ ಇರುತ್ತವೆ. ಬಾಲ್ಯದ ಅನುಭವಗಳು ವ್ಯಕ್ತಿತ್ವ ರೂಪಿಸುವಲ್ಲಿ ಬಹಳ ಮುಖ್ಯವಾಗುತ್ತದೆ. ಸಾಹಿತ್ಯಾಭಿಮಾನಿಗಳಿಗೆ ಕಥೆಗಾರರ ಕೃತಿಯೊಂದಿಗೆ ಅವರ ಜೀವನದ ಬಗ್ಗೆ ತಿಳಿಯಬೇಕೆಂಬ ಕುತೂಹಲ ಇರುವುದು ಸಹಜ.

ಸಣ್ಣ ಕಥಾ ಪರಂಪರೆಯಲ್ಲಿ ತಮ್ಮದೇ ಛಾಪನ್ನು ಮೂಡಿಸಿದ ಬೆಸಗರಹಳ್ಳಿ ರಾಮಣ್ಣರವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯವರು. ತಂದೆ ಚಿಕ್ಕ ಎಲ್ಲೇಗೌಡ, ತಾಯಿ ದೊಡ್ಡತಾಯಮ್ಮ, ಆಗಸ್ಟ್ ೧೫, ೧೯೩೮ ರಂದು ಜನಿಸಿದರು. ತಂದೆ ಕೃಷಿಕರಾದ್ದರಿಂದ ಬಾಲ್ಯ ಹಳ್ಳಿಯಲ್ಲೇ ಕಳೆಯಿತು. ಬೆಸಗರಹಳ್ಳಿ ರಾಮಣ್ಣನವರ ತಂದೆಯ ಸೋದರಮಾವ, ಸೋದರ ಮಾವನ ಹೆಂಡತಿ, ತಮ್ಮ ಸೋದರಮಾವ ಹೀಗೆ ಸೋದರಿಕೆಯ ರಕ್ತದಲ್ಲಿ ಸಾಹಿತ್ಯದ ಅಂಶ ಸೇರಿದ್ದು ಅದು ರಾಮಣ್ಣನವರಲ್ಲಿ ಮುಂದುವರಿಯಿತೆನ್ನಬಹುದು.

ಬೆಸಗರಹಳ್ಳಿ ರಾಮಣ್ಣನವರು ಹೇಳುವಂತೆ ಅವರಿಗೆ ಹತ್ತಿದ ಸಾಹಿತ್ಯದ ಗೀಳು ಕತೆಗಳ ಮೂಲಕ ಅಭಿವ್ಯಕ್ತಗೊಳ್ಳಲು ಮೂಲಕಾರಣ ಮತ್ತು ಪ್ರೇರಣೆ ತಂದೆಯ ಸೋದರಮಾವನ ಹೆಂಡತಿ ದೇಸಳ್ಳಿ ಅಮ್ಮ. ಎದೆಯಲ್ಲಿ ಅಮೃತವನ್ನಿಟ್ಟುಕೊಂಡು, ತರತಮವಿಲ್ಲದೆ ಅಕ್ಕರೆ ತೋರುತ್ತಿದ್ದ, ಬದುಕಿನಲ್ಲಿ ಉಂಡ ನೋವುಗಳನ್ನು ನುಂಗಿ ಮಕ್ಕಳನ್ನು ಕತೆಗಳ ಕಲ್ಪನಾ ಲೋಕಕ್ಕೆ ಒಯ್ಯುತ್ತಿದ್ದ ಐಬಿನ ಅಪೂರ್ವ ಮುದುಕಿ ದೇಸಳ್ಳಿ ಅಮ್ಮನ ಪ್ರಭಾವ ರಾಮಣ್ಣನವರ ಮೇಲೆ ಹೆಚ್ಚು. ಕುವೆಂಪು ಅವರ ಕತೆಗಾರ ಮಂಜಣ್ಣನ ರೀತಿ ಈ ಮುದುಕಿ ರಾಮಣ್ಣನವರಿಗೆ ಕಥಾ ಸರಿತ್ಸಾಗರ. ರಾಮಣ್ಣನವರು ಕತೆಗಾರರಾಗಿ ಪ್ರಸಿದ್ಧರಾಗುತ್ತಿದ್ದುದನ್ನು ಕಂಡು ಸಂಭ್ರಮಿಸಿದ ಉದಾರ ಜೀವ. ರಾಮಣ್ಣನವರಿಗೆ ಸಾಹಿತ್ಯದ ರುಚಿ ತೋರಿಸಿ, ಸಾಹಿತ್ಯಾಸಕ್ತಿ ಮೂಡಿಸಿದವರು ಅವರ ಸೋದರಮಾವ ತಿಮ್ಮಯ್ಯ ಮತ್ತು ಅಣ್ಣ ಬಿ.ಸಿ. ಪುಟ್ಟಸ್ವಾಮಿಗೌಡ.

---

೧ ಕನ್ನಂಬಾಡಿ, ಪಲ್ಲವಿ ಪ್ರಕಾಶನ, ಮಂಡ್ಯ, ೧೯೮೬, ಪು : ೪೬೩

ಬೆಸಗರಹಳ್ಳಿ ರಾಮಣ್ಣನವರನ್ನು ಪ್ರಶ್ನಿಸುತ್ತಲೇ ಓದಿನ ಬಗ್ಗೆ ಅವರಿಗೆ ಅರಿವು, ಆಸಕ್ತಿ ಮೂಡಿಸಿದವರು. ಇಂಗ್ಲೀಷ್ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಿದ ಇವರು ರಾಮಣ್ಣನವರ ಜ್ಞಾನದ ಮೂಲೆ ಮೂಲೆಗಳನ್ನು ಬಡಿದೆಬ್ಬಿಸಿದವರು. ಇಳಿವಯಸ್ಸಿನಲ್ಲಿ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದ ಈ ಛಲಗಾರ ಬದುಕಿನಲ್ಲಿ ವಿಫಲಗೊಂಡವರಾದರೂ ರಾಮಣ್ಣನವರ ಸಾಹಿತ್ಯದ ಮೂಲ ಪ್ರೇರಕರು.

ಸಾಹಿತ್ಯ ಮತ್ತು ಸಿನಿಮಾಗೀಳಿನ ಅಣ್ಣ ಪುಟ್ಟಸ್ವಾಮಿ ಅವರಿಗೆ ತಮ್ಮ ರಾಮಣ್ಣನ ಮೇಲೆ ಚಿಕ್ಕಂದಿನಿಂದಲೂ ಬಹುವಾದ ಪ್ರೀತಿ. ಮಹಾಭಾರತದ ಪಾತ್ರಗಳನ್ನು ತಾನೇ ಎಂಬಂತೆ ಅಭಿನಯಿಸಿ ರಾಮಣ್ಣನವರನ್ನು ದಿಗ್ಮೂಢರನ್ನಾಗಿ ಮಾಡುತ್ತಿದ್ದರಲ್ಲದೆ ತಮ್ಮ ಸಾಹಿತ್ಯ ಪ್ರೀತಿಯನ್ನು ತಮ್ಮನಿಗೆ ಧಾರೆಯೆರೆದು ರಾಮಣ್ಣನವರ ಎಳೆಮನಸ್ಸನ್ನು ಸಾಹಿತ್ಯದ ಕಡೆಗೆ ತಿರುಗಿಸಿದ ಪ್ರತಿಭಾನ್ವಿತ ಸಾಹಿತ್ಯದ ಗುರು. ಹೀಗಾಗಿ ಬಾಲ್ಯದಲ್ಲೇ ಸಾಹಿತ್ಯಿಕ ಪ್ರೇರಣೆ ರಾಮಣ್ಣನವರಿಗೆ ದೊರಕಿದ್ದು ಮುಂದೆ ಸಾಹಿತ್ಯದ ಬೀಜ ಮೊಳೆಯಲು ಅನುವಾಯಿತು.

೪.೧.೨ ಶೈಕ್ಷಣಿಕ ಹಾದಿಯಲ್ಲಿ ಸಾಹಿತ್ಯ ಲೋಕಕ್ಕೆ ಪ್ರವೇಶ :

ರಾಮಣ್ಣನವರಿಗೆ ಸಾಹಿತ್ಯದ ಮೂಲ ಪ್ರೇರಣೆ ದೊರೆತಿದ್ದು ಕೃಷಿಕ ಕುಟುಂಬದಿಂದಲೇ. ಇವರ ಸಾಹಿತ್ಯಾಸಕ್ತಿಗೆ ನೀರು ಎರೆದಿದ್ದು ಮೈಸೂರಿನ ಸಾಹಿತ್ಯಿಕ ವಾತಾವರಣ. ಯುವರಾಜ ಕಾಲೇಜಿಗೆ ೧೯೫೭ರಲ್ಲಿ ವಿದ್ಯಾರ್ಥಿಯಾಗಿ ಸೇರಿದ ರಾಮಣ್ಣನವರಿಗೆ ಪ್ರಸಿದ್ಧ ಕನ್ನಡ ಲೇಖಕರು, ವಿದ್ವಾಂಸರ ಭಾಷಣಗಳು ಅವರ ಸಾಹಿತ್ಯದ ಬಗೆಗಿನ ಒಲವು ಹೆಚ್ಚಾಗಲು ಪೂರಕ ವಾತಾವರಣ ಒದಗಿಸಿತು.

ಯುವರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಾಹಿತ್ಯಾಸಕ್ತಿ ಚಿಗುರಿಸಲು 'ವಸಂತ' ಎಂಬ ವಾರ್ಷಿಕ ಪತ್ರಿಕೆಯನ್ನು ಜಿ.ಎಸ್.ಎಸ್. ಅವರು ಪ್ರಕಟಿಸಲು ಯೋಜಿಸಿ ಅದಕ್ಕಾಗಿ ವಿದ್ಯಾರ್ಥಿಗಳಿಂದ ಕತೆ, ಕವನ, ಪ್ರಬಂಧವನ್ನು ಆಹ್ವಾನಿಸಿದ್ದರು. ಇದರಿಂದ ಉತ್ತೇಜಿತರಾದ ರಾಮಣ್ಣ 'ಹಸಿವಿನಕಹಳೆ' ಎಂಬ ಚೊಚ್ಚಲ ಕತೆಯನ್ನು ಬರೆದು ಭಯ, ಭಕ್ತಿ, ತುಸು ಧೈರ್ಯದಿಂದ ಜಿ.ಎಸ್.ಎಸ್. ರವರಿಗೆ ತಲುಪಿಸಿದಾಗ ಬೆಸಗರಹಳ್ಳಿ ರಾಮಣ್ಣನವರು ಪ್ರಕಟಗೊಳ್ಳುವ ಭರವಸೆ ಇಟ್ಟುಕೊಂಡಿದ್ದರು. ಆದರೆ 'ವಸಂತ' ಪ್ರಕಟವಾಗದೆ ಜಿ.ಎಸ್.ಎಸ್. ಕತೆಯನ್ನು ಹಿಂತಿರುಗಿಸುವಾಗ "ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ, ಹೀಗಾಯ್ತು ಅಂತ ಬೇಜಾರು ಮಾಡಿಕೊಳ್ಳದೆ ಸಾಹಿತ್ಯವನ್ನು ಓದುವುದನ್ನಾಗಲೀ, ಬರೆಯಬೇಕೆಂಬ ಇಚ್ಛೆಯನ್ನಾಗಲೀ ತುಚ್ಛವಾಗಿ

ಕಾಣಬಾರದು"[೨] ಎಂದು ಹೇಳಿದರು. ಬೆಸಗರಹಳ್ಳಿ ರಾಮಣ್ಣನವರ ಸಾಹಿತ್ಯದ ಹಾದಿಯನ್ನು ರೂಪಿಸಿದ್ದು ಮಹಾರಾಜ ಕಾಲೇಜಿನ ಜೂನಿಯರ್ ಬಿ.ಎ. ಹಾಲ್‌ನಲ್ಲಿ ನಡೆದ ಕನ್ನಡ ಸಾಹಿತ್ಯಿಕ ಚಟುವಟಿಕೆಗಳು, ವಿದ್ವಾಂಸರು, ಲೇಖಕರು ಭೇಟಿ-ಭಾಷಣಗಳು ಅವರಲ್ಲಿ ಸಾಹಿತ್ಯದ ಬಗ್ಗೆ ಒಲವು ಭಕ್ತಿ – ಭಾವಗಳು ಬೆಳೆಯಲು ಆರಂಭವಾದಾಗ ಒಲ್ಲದ ವೈದ್ಯಕೀಯ ಶಿಕ್ಷಣಕ್ಕೆ ಸೇರಬೇಕಾಯಿತು. ಅವರೇ ಹೇಳುವಂತೆ **"ಮೂಳೆ, ನರ, ಮಾಂಸ, ಸೂಕ್ಷ್ಮದರ್ಶಕ ಯಂತ್ರಗಳ, ಕಪ್ಪೆಗಳ ಒಡನಾಟದ ನಡುವೆಯೂ ಕನ್ನಡ ಸಾಹಿತ್ಯ ಪ್ರೇಮ ಚಿಗುರೊಡೆಯುತ್ತಲೇ ಇತ್ತು".**[೩] ಒಳಗಿನ ಪ್ರೇರಣೆ ಒಂದಾದರೆ ಶೈಕ್ಷಣಿಕ ಒತ್ತಡವೇ ಬೇರೆಯಾಗಿದ್ದರೂ ಅವರ ಸಾಹಿತ್ಯದ ತುಡಿತ ಹೆಚ್ಚುತ್ತಲೇ ಇದ್ದ ಸಂದರ್ಭದಲ್ಲಿ ಸ್ನೇಹಿತನ ಹಾಸ್ಯವೂ ಪ್ರೇರಣೆಯಾಗಿ ದೀಪಾವಳಿ ಕಥಾಸ್ಪರ್ಧೆಗಾಗಿ 'ಹಾವಿನ ಹುತ್ತ' ಕತೆ ಬರೆದಾಗ ಅಚ್ಚರಿಯಾಗುವಂತೆ ತೀರ್ಪುಗಾರರ ಮೆಚ್ಚುಗೆಯನ್ನು ಪಡೆಯಿತು. ನಿರಂಜನರು 'ಹಾವಿನಹುತ್ತ' ಕತೆಯ ಬಗ್ಗೆ ಹೇಳಿದ ಮೆಚ್ಚುಗೆಯ ಮಾತು ಅವರ ಒಳಗಿನ ಪ್ರೇರಣೆಯನ್ನು ಇಮ್ಮಡಿಸಿತು. ಆಗ ಪ್ರಥಮ ಬಹುಮಾನ ಪಡೆದ ಕತೆ ಸುಧಾಕರರ 'ಹೊರಲಾರದ ಹೊರೆ' ಬೆಸಗರಹಳ್ಳಿ ರಾಮಣ್ಣನವರಿಗೆ ಕಥಾಬರವಣಿಗೆಯಲ್ಲಿ ನೆಲದ ಭಾಷೆ ಬಳಸಲು ಮೂಲ ಪ್ರೇರಣೆಯಾಯಿತು ಎನ್ನಬಹುದು. ಜೊತೆಗೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಗಳಿಸಬೇಕೆಂಬ ಹಂಬಲ, ತೀವ್ರತೆ ಹೆಚ್ಚಾಯಿತು.

ಇದೇ ಕಾಲದಲ್ಲಿ ಜೀಶಂಪ, ಲಂಕೇಶ್, ಕೆ. ಸದಾಶಿವ, ತರಾಸು, ಚದುರಂಗರ ಕತೆ-ಕಾದಂಬರಿಗಳು ಪ್ರಸಿದ್ಧವಾಗಿದ್ದವು. ಬೆಸಗರಹಳ್ಳಿ ರಾಮಣ್ಣನವರು ಅವುಗಳಿಂದ ಪ್ರಭಾವಿತರಾಗಿ ಗೆಳೆಯ ಬಿ.ವಿ. ಕೃಷ್ಣಪ್ಪನವರ ಒತ್ತಾಯದ ಮೇರೆಗೆ 'ಮಳೆಗೆರೆಯಿತು ಬಾನು ಹಗುರಾಯಿತು ಮನ' ಕತೆ ಬರೆದರು. ಮಂಡ್ಯದ ವಿದ್ಯಾರ್ಥಿ ಸಂಘ ಹೊರತಂದ 'ಲೋಕಾಪಾವನಿ' ಪತ್ರಿಕೆ ಬಿಡುಗಡೆ ಸಂದರ್ಭದಲ್ಲಿ ದೇಜಗೌ ಅವರು ಹೇಳಿದ ಮೆಚ್ಚುಗೆ ಮಾತು, ಪ್ರಕಟವಾದ ಕತೆಯನ್ನೇ ಪ್ರಕಟಿಸಿದ ಸುಧಾಪತ್ರಿಕೆ ಅವರ ಆತ್ಮ ವಿಶ್ವಾಸ ಹೆಚ್ಚಿಸಿತು.

ಬೆಸಗರಹಳ್ಳಿ ರಾಮಣ್ಣನವರಿಗೆ ಕಾಲೇಜಿನಲ್ಲಿ ದೊರೆತ ಸಾಹಿತ್ಯಿಕ ವಾತಾವರಣ ಅದನ್ನು ಪೂರಕವಾಗಿ ಬಳಕೆ ಮಾಡಿಕೊಂಡ ಬಗೆ ಹಲವು. ಖ್ಯಾತ ಲೇಖಕರ ಮೆಚ್ಚುಗೆ, ಸ್ನೇಹಿತರ ಒತ್ತಾಸೆ, ಪತ್ರಿಕೆಯ ಬೆಂಬಲ ಒಬ್ಬ ಬರಹಗಾರನಾಗಲು ಬೇಕಾದ ಪ್ರೇರಣೆ, ಸ್ಫೂರ್ತಿ,

---

೨ ಕನ್ನಂಬಾಡಿ, ಪಲ್ಲವಿ ಪ್ರಕಾಶನ, ಮಂಡ್ಯ, ೧೯೮೬, ಪು : ೭

೩ ಅದೇ, ಪು : ೮

ಬೆಂಬಲ, ಅವಕಾಶ, ಸಂದರ್ಭಗಳು ಬೆಸಗರಹಳ್ಳಿ ರಾಮಣ್ಣ ದೊರಕಿದ್ದು ಅವರಿಗಿದ್ದ ಸಾಹಿತ್ಯದ ಬಗೆಗಿನ ಒಲವು – ತುಡಿತ ಕತೆಗಾರರಾಗಲು ಬೇಕಾದ ವಾತಾವರಣ ಅವರಿಗೆ ದೊರಕಿತೆನ್ನಬಹುದು. ಅದೇ ಸಂದರ್ಭದಲ್ಲಿ ಕಥಾ ಸಾಹಿತ್ಯ ಪ್ರಬಲವಾಗುತ್ತಿದ್ದು ಲಂಕೇಶ್, ಜೀಶಂಪ, ಕೆ. ಸದಾಶಿವ, ತರಾಸು, ಚದುರಂಗರ ಕತೆ–ಕಾದಂಬರಿಗಳು ಮಾದರಿಯಾಗಿ ಅವರ ಮುಂದಿದ್ದವು. ಇವೆಲ್ಲವನ್ನು ಬಹುಸಮರ್ಥವಾಗಿ ಬಳಸಿ ನಿಭಾಯಿಸಿಕೊಂಡ ಬೆಸಗರಹಳ್ಳಿ ರಾಮಣ್ಣ ಅವರ ಪ್ರತಿಭೆ ಕತೆಗಾರರಾಗಿ ರೂಪುಗೊಳ್ಳಲು ಕಾರಣವಾಯಿತೆನ್ನಬಹುದು.

ಬೆಸಗರಹಳ್ಳಿ ರಾಮಣ್ಣ ಅವರಿಗೆ ಸ್ನೇಹಿತರಾದ ವೀರಭದ್ರ, ಶಿವರಾಮ ಐತಾಳ, ರಮಾಕಾಂತ, ಆಲನಹಳ್ಳಿಕೃಷ್ಣ, ಶಿವತೀರ್ಥನ್ ಇವರೊಂದಿಗಿನ ಒಡನಾಟ ಹೆಚ್ಚು ಅನುಕೂಲವಾಯಿತು. ಸಾಹಿತ್ಯದ ಬಗೆಗಿನ ಮಾತು, ಚರ್ಚೆ, ವಾದ, ವಿವಾದಗಳು ಅವರ ಸಾಹಿತ್ಯ ಅರಿವನ್ನು ವಿಸ್ತರಿಸಿದವು. ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಬೆಸಗರಹಳ್ಳಿ ರಾಮಣ್ಣರವರ ಒಡನಾಟ ಮಾತ್ರ ಸಾಹಿತ್ಯ ಮಿತ್ರರೊಂದಿಗೆ ಹೆಚ್ಚಾಗಿತ್ತು. ಸಾಹಿತ್ಯ ಮಿತ್ರರ ಒಡನಾಟದಲ್ಲಿದ್ದಾಗಲೇ 'ಸುಗ್ಗಿ' ಕತೆ ಬರೆದಿದ್ದರು. ಕತೆಗೆ ಪ್ರಥಮ ಬಹುಮಾನ ದೊರೆತ ದಿನ ಅವರ ಮುಗ್ಧ ಮನಸ್ಸಿನ ಗತ್ತು ಗಮ್ಮತ್ತು ಹೇಳತೀರದಾಗಿತ್ತು. ನವೋದಯ, ಪ್ರಗತಿಶೀಲ ಮತ್ತು ನವ್ಯದ ಪಂಥಗಳಲ್ಲಿ ಕನ್ನಡ ಸಾಹಿತ್ಯ ಸಿಲುಕಿದ್ದಾಗಲೂ ಯಾವುದೇ ಹಣೆಪಟ್ಟಿ ಹಚ್ಚಿಕೊಳ್ಳದೆ ಕತೆ ಬರೆಯಬೇಕೆಂಬ ಪ್ರೇರಣೆಯಾದಾಗ ತಮಗೆ ಮುಖಾಮುಖಿಯಾದ ಬದುಕಿನ ಅನುಭವಗಳನ್ನೇ ಕತೆಯಾಗಿಸಿದರು. ಕನ್ನಡದ ಗಟ್ಟಿಯಾದ ಸಾಹಿತ್ಯದ ಆಳವಾದ ಅಧ್ಯಯನದಿಂದ ಉಂಟಾದ ಆತ್ಮವಿಕಾಸ, ಬದುಕಿನಲ್ಲಿ ಅನುಭವಗಳೆಡೆಗಿನ ಸೂಕ್ಷ್ಮನೋಟ, ಮೌಲ್ಯಗಳ ಬಗೆಗಿನ ತುಡಿತ, ಎಚ್ಚರ, ಅವರನ್ನು ನಿಜ ಕತೆಗಾರರನ್ನಾಗಿಸಿದವು.

೪.೧.೩ ಕೌಟುಂಬಿಕ ಬದುಕು :

ವ್ಯಕ್ತಿತ್ವವನ್ನು ಗಟ್ಟಿಗೊಳಿಸಿ ಬದುಕಿಗೆ ಸ್ಪಷ್ಟ ಗುರಿ, ನಿರ್ದೇಶನ ನೀಡುವ ವೈವಾಹಿಕ ಬದುಕು ಜೀವನದ ಪ್ರಮುಖಘಟ್ಟವಾಗಿದೆ. ಜೀವನಕ್ಕೆ ಭದ್ರತೆ, ಪ್ರೀತಿ, ನಂಬಿಕೆ, ವಿಶ್ವಾಸ, ಜವಾಬ್ದಾರಿ, ವಾತ್ಸಲ್ಯಗಳನ್ನು ನೀಡುವ ಕೌಟುಂಬಿಕ ಪರಿಸರ ಅನನ್ಯವಾದುದು. ತಮ್ಮ ಸೀಮೆಯ ಮದ್ದೂರು ತಾಲ್ಲೂಕಿನ ದೇಶಹಳ್ಳಿಯ ರಾಜಮ್ಮನವರು ಬೆಸಗರಹಳ್ಳಿ ರಾಮಣ್ಣನವರ ಧರ್ಮಪತ್ನಿ, ಬೆಸಗರಹಳ್ಳಿ ರಾಮಣ್ಣನವರಿಗೆ ಪುನರ್ ಜನ್ಮ ನೀಡಿದ ರಾಜಮ್ಮ ಬದುಕಿನಲ್ಲಿ ಕಂಡುಂಡ ಸುಖಸಂತೋಷಗಳು ಗೌಣವೇ. ಉದಾರತೆಯ ಬೆಸಗರಹಳ್ಳಿ ರಾಮಣ್ಣ ಅವರ ಸ್ನೇಹಿತರ ಬಳಗ ಬಹುದೊಡ್ಡದಾಗಿದ್ದು, ಅತಿಥಿ ಸತ್ಕಾರವೇ ಅವರ ಕುಟುಂಬದಲ್ಲಿ

ಪ್ರಮುಖವಾಗಿದ್ದಾಗ ರಾಜಮ್ಮ ನಿಭಾಯಿಸಿದ ಬಗೆ ಅವರಿಗೆ ಗೊತ್ತು. ಯಾವ ಕೊಂಪೆ, ಕುಗ್ರಾಮದಲ್ಲಿ ವೈದ್ಯವೃತ್ತಿಯನ್ನು ಸಮರ್ಥವಾಗಿ ನಿಭಾಯಿಸಿದ ರಾಮಣ್ಣ ಹಣವನ್ನು ಸಮರ್ಥವಾಗಿ ನಿಭಾಯಿಸದವರಲ್ಲ. ಉದಾರ ಸ್ವಭಾವದಿಂದ ಅವರ ಕುಟುಂಬ ಹಲವಾರು ಕಷ್ಟ-ಕೋಟಲೆಗಳಲ್ಲಿ ಸಿಲುಕಿತು.

ಬೆಸಗರಹಳ್ಳಿ ರಾಮಣ್ಣ ಮತ್ತು ರಾಜಮ್ಮ ದಂಪತಿಗಳಿಗೆ ರವಿಕಾಂತೇಗೌಡ, ಅಣ್ಣಾದೊರೆ, ಪೂರ್ಣಿಮ ಮೂವರು ಮಕ್ಕಳು. ತಂದೆ-ತಾಯಿಯರ ಬೆಚ್ಚನೆ ಪ್ರೀತಿ-ವಾತ್ಸಲ್ಯಗಳಲ್ಲಿ ಬೆಳೆದ ಮಕ್ಕಳಲ್ಲಿ ಅಣ್ಣಾದೊರೆಯ ದುರಂತ ಅಂತ್ಯ ಹೊರತುಪಡಿಸಿದರೆ ರವಿಕಾಂತೇಗೌಡ ಉನ್ನತ ಪೋಲೀಸ್ ವರಿಷ್ಠಾಧಿಕಾರಿಯಾಗಿ, ಮಗಳು ಪೂರ್ಣಿಮ ಕಂದಾಯ ಇಲಾಖೆಯಲ್ಲಿ ಉನ್ನತಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

ತಂದೆಯ ಕತೆಗಳ ಕಟುವಿಮರ್ಶಕರಾಗಿ, ಮೆಚ್ಚುವ ಸಹೃದಯರಾಗಿದ್ದ ಮಗ ರವಿಕಾಂತೇಗೌಡ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಸಕ್ರೀಯರಾಗಿದ್ದಾರೆ. ಬೆಸಗರಹಳ್ಳಿ ರಾಮಣ್ಣ ಸಾಹಿತ್ಯ ಮತ್ತು ವೈದ್ಯಕೀಯ ಸೇವೆಯಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಮನೆ, ಮಕ್ಕಳ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ ರಾಜಮ್ಮ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು ಅಪರೂಪ.

ಮಕ್ಕಳಲ್ಲಿ ತಪ್ಪು ಕಂಡಾಗ ರೇಗಿ ಮುದ್ದಿಸುವ ತಂದೆ ರಾಮಣ್ಣ ಮಗಳಲ್ಲಿ ಅವ್ವನನ್ನು ಕಂಡವರು. ಕುಟುಂಬವನ್ನು ಪ್ರೀತಿಸುವಷ್ಟೇ ಸ್ನೇಹಿತರ ಬಳಗವನ್ನು ಪ್ರೀತಿಸುತ್ತಿದ್ದ ರಾಮಣ್ಣನವರ ಮಾತಿಗಿಂತಲೂ ಮಿಗಿಲಾದ ಪ್ರೀತಿ ಅವರ ಭಾವದಲ್ಲಿತ್ತು. ಎಲ್ಲರಿಂದ ಒರಟರೆನ್ನಿಸಿಕೊಂಡಿದ್ದ ರಾಮಣ್ಣನವರನ್ನು ಹತ್ತಿರದಿಂದ ಕಂಡವರಿಗಷ್ಟೇ ಅವರ ಸೊಗಡಿನ ಒರಟು ಭಾಷೆಯ ಹಿಂದಿನ ಹೃದಯದ ಮೃದುತನ ಅರಿವಾಗುವುದು.

ರಾಮಣ್ಣನವರ ಮನೆ 'ನೆಲದ ಒಡಲು'. ಮಂಡ್ಯದ ಭಾಷೆಯೊಂದಿಗೆ ಮಂಡ್ಯದ ವೇಷದಲ್ಲಿ ವಿರಾಜಮಾನರಾಗುತ್ತಿದ್ದ ಬೆಸಗರಹಳ್ಳಿ ರಾಮಣ್ಣ ಅವರಿಗೆ ಮನೆಗೆ ಬಂದವರೆಲ್ಲರೂ ಆಪ್ತರೇ. ಯಾರನ್ನೂ ಹಾಗೆ ಕಳುಹಿಸಿದವರಲ್ಲ.

ಸಾಹಿತ್ಯ ಲೋಕದ ಈ ಅಸಲೀ ಡಾಕ್ಟರ್ ತಮ್ಮ ಆರೋಗ್ಯವನ್ನು ಅಲಕ್ಷಿಸಿ ತಮ್ಮ ಆಸೆ-ಕನಸುಗಳನ್ನು ಬಿಟ್ಟು ೬೦ ತುಂಬುವ ಮೊದಲೇ ಎಲ್ಲರನ್ನು ಅಗಲಿದರು. ಮಂಡ್ಯದ

ಸಂಸ್ಕೃತಿಯೇ ಅವರಾಗಿದ್ದು ಅವರು ಬಿಟ್ಟು ಹೋದ ಕತೆಗಳು ದಾರಿ ಅರಸುವವರಿಗೆ ಮಿಂಚುಕೋಲಿನ ಬೆಳಕನ್ನು ನೀಡುತ್ತವೆ.

೪.೧.೪ ವೃತ್ತಿ ಜೀವನ

ವೃತ್ತಿ ಮತ್ತು ಪ್ರವೃತ್ತಿಯನ್ನು ಸರಿದೂಗಿಸಿಕೊಂಡು ವೈದ್ಯವೃತ್ತಿಯನ್ನು ನಿರ್ವಹಿಸಿದ ರಾಮಣ್ಣನವರು ಹಳ್ಳಿಯ ವೈದ್ಯರು. ಜಡಗೊಂಡ ಹಳ್ಳಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾನವೀಯ ಸೆಲೆಯಾಗಿ ತನ್ನದೇ ಆಸ್ಪತ್ರೆ, ತನ್ನವರೇ ರೋಗಿಗಳು ಎಂಬಂತೆ ಪ್ರೀತಿಯಿಂದ ದುಡಿದವರು. ತಮ್ಮ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಿದ್ದ ರಾಮಣ್ಣ ಸಮಯದ ಮಿತಿಯಿಲ್ಲದೆ, ಹಗಲು ಇರುಳೆನ್ನದೆ ಸಮುದಾಯದ ಆರೋಗ್ಯಕ್ಕಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡ ಅವರು ಇಂದಿಗೂ ಹಳ್ಳಿಗರ ಮನದಲ್ಲಿ ನೆಲೆಸಿದ್ದಾರೆ. ೧೯೬೯ ರ ಮೇ ೨೬ರಂದು ರಾಮಣ್ಣ ವೈದ್ಯಾಧಿಕಾರಿಯಾಗಿ ಹರದನಹಳ್ಳಿಯಲ್ಲಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಕತೆ ಬರೆಯೋ ಈ ಡಾಕ್ಟ್ರು ಹಳ್ಳಿಗರ ಬದುಕಲ್ಲಿ ತಮ್ಮನ್ನು ಕಂಡುಕೊಂಡವರು. ಹಳ್ಳಿಗಾಡಿನ ವೈದ್ಯ ವೃತ್ತಿಯ ಸರಳ ಸತ್ಯಗಳನ್ನು ಮನಗಂಡಿದ್ದ ಅವರು ವೃತ್ತಿ ನಿಷ್ಠೆಯಿಂದ ಆಚೀಚೆ ಬಂದವರಲ್ಲ. ರಾಮಣ್ಣ ಹಗಲು-ರಾತ್ರಿ ದುಡಿದ ಸಂಬಳದ ಹಣವನ್ನು ದುಂದುವೆಚ್ಚ ಮಾಡಿ ತಂದೆಯ ಬಳಿ ಕೈನೀಡಿದರೂ ರೋಗಿಗಳಿಂದ ಹಣಪಡೆದವರಲ್ಲ. ಕಷ್ಟದಲ್ಲಿದ್ದ ರೋಗಿಗಳಿಗೆ, ಬಡವರಿಗೆ ಹಣವನ್ನು ಹೊಂದಿಸಿಕೊಡುತ್ತಿದ್ದ ರಾಮಣ್ಣ ಎಂದೂ ಕಮರ್ಷಿಯಲ್ ಆಗಲೇ ಇಲ್ಲ. ಈ ವಿಷಯದಲ್ಲಿ ರಾಮಣ್ಣನವರಿಗೆ ರಾಮಣ್ಣನವರೇ ಸಾಟಿ.

ತಮ್ಮ ವೃತ್ತಿಯ ಜೊತೆ ಜೊತೆಯಲ್ಲಿ ಸಾಮಾಜಿಕ ಆರೋಗ್ಯದ ಬಗ್ಗೆ ಜನರಿಗೆ ತಮ್ಮ ಸೇವೆಯ ಉದ್ದಕ್ಕೂ ಅರಿವು, ಜಾಗೃತಿಯನ್ನು ಅತೀವ ಕಾಳಜಿಯಿಂದ ಮೂಡಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದರು. ತಮಗೆ ನಿಗದಿಯಾದ ಯಾವ ಕೆಲಸವನ್ನು ತಮ್ಮ ಕೈಕೆಳಗಿನ ಸಿಬ್ಬಂದಿಗೆ ವರ್ಗಾಯಿಸದೆ ತಾವೇ ಮುಂದಾಗಿ ಸಿಬ್ಬಂದಿಯೊಡಗೂಡಿ ಕಾರ್ಯನಿರ್ವಹಿಸುತ್ತಾ ವೈದ್ಯಕೀಯ ವೃತ್ತಿಯ ಘನತೆಯನ್ನು ಹೆಚ್ಚಿಸಿದರು. ತಮ್ಮ ಬಹುಮುಖಿ ಆಸಕ್ತಿಗಳಾದ ಓದು, ಬರಹ, ಪ್ರಕೃತಿ ಬಗೆಗಿನ ಕಾಳಜಿ, ಸಂಚಾರಗಳ ನಡುವೆ ಹಳ್ಳಿಗರಿಗೆ ತಿನ್ನಲೇಬೇಕಾದ ಆಹಾರ, ಕೈತೋಟದಲ್ಲಿ ಬೆಳೆಯಲೇ ಬೇಕಾದ ಗಿಡಗಳು, ಆರೋಗ್ಯ, ನೈರ್ಮಲ್ಯದ ಬಗ್ಗೆ ರೋಗಿಗಳನ್ನು ತಪಾಸಣೆ ಮಾಡುತ್ತಲೇ ಪಾಠ ಹೇಳುತ್ತಾ ತಿದ್ದುವ ತಾಯ್ತತನದೊಂದಿಗೆ ಪ್ರೀತಿಯಿಂದ ಗದರುತ್ತಿದ್ದರು.

ತುರ್ತು ಪರಿಸ್ಥಿತಿಯ ವಿರುದ್ಧ ದನಿಯೆತ್ತಿ ಕತೆ ಬರೆದು ರಾಮಣ್ಣನವರು ರಾತ್ರೋರಾತ್ರಿ ಗಡುವಿನ ವರ್ಗಾವಣೆ ಅನುಭವಿಸಬೇಕಾಯಿತು. ಶ್ರೀಸಾಮಾನ್ಯನ ಸೇವೆಯಲ್ಲಿ, ವೃತ್ತಿಯಲ್ಲಿ ಸಂತೋಷಕಾಣುತ್ತಿದ್ದ ರಾಮಣ್ಣನವರಿಗೆ ಮನೆಗೆಲ್ಲುವುದಕ್ಕಿಂತ ಮಾರು ಗೆಲ್ಲುವುದರಲ್ಲೇ ಆಸಕ್ತಿ. ಬಡರೋಗಿಗಳನ್ನು ಉಪಚರಿಸುತ್ತಲೇ ಅವರ ಬದುಕಿನ ವಾಸ್ತವವನ್ನು ಅರಿಯುತ್ತಾ, ಕತೆಯಾಗಿಸುತ್ತಾ ತಮ್ಮದೇ ಶೈಲಿಯ ದೇಸಿ ಬೈಗುಳ - ಭಾಷೆಯಲ್ಲಿ ತಿದ್ದುತ್ತಿದ್ದ ರಾಮಣ್ಣ ಎಂದೂ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡವರಲ್ಲ. ರಾಮಣ್ಣನವರೊಂದಿಗೆ ಅಂತರಕಾಯ್ದುಕೊಂಡಿದ್ದ ಬಹಳ ಮಂದಿ ಅವರ ಸಂಪರ್ಕಕ್ಕೆ ಬಂದ ಕೆಲವೇ ಕ್ಷಣಗಳಲ್ಲಿ ತಮ್ಮ ನಿಲುವು ಬದಲಿಸಿ ಅವರಿಗೆ ಹತ್ತಿರವಾಗುತ್ತಿದ್ದರು.

ನೋವುಗಳನ್ನೇ ಹೊತ್ತು ಆಸ್ಪತ್ರೆಗೆ ಬರುವ ರೋಗಿಗಳನ್ನು ತಮ್ಮ ಹಾಸ್ಯ ಪ್ರಜ್ಞೆ, ವ್ಯಂಗ್ಯ -ಲೇವಡಿಯಿಂದ ಅವರ ದೈಹಿಕ, ಮಾನಸಿಕ ನೋವು-ಆತಂಕವನ್ನು ಮರೆಯುವಂತೆ ಮಾಡುತ್ತಿದ್ದರು. ತಮ್ಮ ಕೈಕೆಳಗಿನ ಸಿಬ್ಬಂದಿಯನ್ನು ಪ್ರೀತಿ-ವಿಶ್ವಾಸಗಳಿಂದ ನಡೆಸಿಕೊಳ್ಳುತ್ತಾ ಅವರನ್ನು ತಿದ್ದುತ್ತಿದ್ದ ರಾಮಣ್ಣನವರೊಂದಿಗೆ ಕೆಲಸ ಮಾಡಲು ಹಾತೊರೆಯುತ್ತಿದ್ದವರೇ ಹೆಚ್ಚು. ರೋಗಿಗಳನ್ನು ಉಪಚರಿಸುವುದರೊಂದಿಗೆ ಆಸ್ಪತ್ರೆಯ ಆವರಣ, ಸುತ್ತಲಿನ ಪರಿಸರ, ಕುಡಿಯುವ ನೀರು, ನೈರ್ಮಲ್ಯದ ಬಗ್ಗೆ ವಹಿಸುತ್ತಿದ್ದ ಕಾಳಜಿಗೆ ಉದಾಹರಣೆ ಅವರ ಕೊಡಿಯಾಲದ ಪ್ರಾಥಮಿಕ ಆರೋಗ್ಯ ಕೇಂದ್ರದ ಸಸ್ಯವನ.

ರೋಗಿಗಳೊಂದಿಗೆ ಆಪ್ತ ಸಮಾಲೋಚನಕಾರರಾಗಿದ್ದ ರಾಮಣ್ಣ ಸಮಾಜದ ವೈದ್ಯರೂ ಆಗಿ ತಮ್ಮ ಹಳ್ಳಿಗಾಡಿನ ವೈದ್ಯವೃತ್ತಿಯ ಅನುಭವಗಳೆಲ್ಲವನ್ನೂ ಮಾನವೀಯ ನೆಲೆಯಲ್ಲಿ ಕಂಡು ಕತೆಗಳಾಗಿಸಿದರು. ಹಳ್ಳಿಗರ, ಬಡವರ, ರೋಗಿಗಳ ಕಷ್ಟ ನಷ್ಟ, ತಂಟೆ-ತಕರಾರು, ಅರಿವು-ಅಜ್ಞಾನಗಳ ಹಿನ್ನೆಲೆಯ ರಾಮಣ್ಣನವರ ಕತೆಗಳು ಮನುಷ್ಯರನ್ನು ಮನುಷ್ಯರನ್ನಾಗಿಸುವ ಕತೆಗಳು.

ವೃತ್ತಿಯಲ್ಲಿ ಯಾವ ಬಗೆಯ ಒತ್ತಡ ಬಂದರೂ ನಿಭಾಯಿಸುತ್ತಿದ್ದ ರಾಮಣ್ಣ ಆರೋಗ್ಯ ಇಲಾಖೆಯಲ್ಲಿದ್ದು ತಮ್ಮ ಆರೋಗ್ಯ ಕಡೆಗಣಿಸಿದರೂ ರೋಗಿಗಳ ಆರೈಕೆಯನ್ನು ಪ್ರೀತಿ-ಶ್ರದ್ಧೆಯಿಂದ ಮಾಡಿದವರು. ಬಿಡುವಿಲ್ಲದ ಕರ್ತವ್ಯದ ನಡುವೆ ಬರಹವನ್ನು ಸರಿತೂಗಿಸಿಕೊಂಡು ಹೋಗುತ್ತಿದ್ದ ರಾಮಣ್ಣ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಿದರು. ಅನಾರೋಗ್ಯದ ನಡುವೆಯೂ ಅಧ್ಯಯನ-ಬರಹದಲ್ಲಿ ತೊಡಗಿಸಿಕೊಂಡಿದ್ದು, ಅತಿಕಾರ್ಯಭಾರ ನಿರ್ವಹಿಸಿ ರೋಗಿಗಳಿಗಾಗಿ ಹಗಲು-ರಾತ್ರಿ ದುಡಿದು ಹೈರಾಣಾಗಿ ತೀವ್ರ

ಅನಾರೋಗ್ಯದೊಂದಿಗೆ ನಿವೃತ್ತರಾದರು. ಆದರೂ ಜೀವನೋತ್ಸಾಹದಲ್ಲಿ, ಬರವಣಿಗೆಯಲ್ಲಿ ಸ್ನೇಹಿತರನ್ನು ಪ್ರೋತ್ಸಾಹಿಸುವಲ್ಲಿ, ಸ್ನೇಹಿತರ ಬಳಗದೊಂದಿಗೆ ಮಾತು, ಚಟಾಕಿ, ಚರ್ಚೆಯಲ್ಲಿ, ಸಭೆ ಸಮಾರಂಭದ ಭಾಗವಹಿಸುವಿಕೆಯಲ್ಲಿ, ಬಾಡೂಟ–ಉಪಚಾರಗಳಲ್ಲಿ ಆಸಕ್ತಿ ಕಡಿಮೆಯಾಗಲಿಲ್ಲ. ಹತ್ತು ವೈದ್ಯರು ಮಾಡುವ ಕೆಲಸವನ್ನು ತಾವೊಬ್ಬರೇ ಮಾಡಿದರೂ ಅದನ್ನು ಕಷ್ಟವೆಂದು ಹೇಳಿಕೊಳ್ಳಲೂ ಇಲ್ಲ, ಬೇಸರಿಸಲೂ ಇಲ್ಲ. ಮನುಷ್ಯ ಸಂಬಂಧಗಳಿಗೆ ಸೋಲುತ್ತಿದ್ದ ರಾಮಣ್ಣನವರಿಗೆ ವೃತ್ತಿಯ ಅನುಭವಗಳು ಕತೆಗಳಿಗೆ ಪ್ರೇರಣೆ ಮತ್ತು ಕಥಾ ವಸ್ತುಗಳಾಗಿ ಆಕಾರ ಪಡೆದುಕೊಂಡಿರುವುದನ್ನು ಕಾಣಬಹುದು.

ವೈದ್ಯರಾದ ರಾಮಣ್ಣ ಕಾಯಿಲೆಯ ಬಗ್ಗೆ ಅರಿವಿಲ್ಲದ ರೋಗಿಗಳ ಸಾವಿನಭಯ, ಆರ್ಥಿಕಸಂಕಷ್ಟ, ಆರೈಕೆಯಕೊರತೆ, ಅಸಹನೀಯ ನೋವು, ಏಕಾಂಗಿಭಾವ ದೀರ್ಘಕಾಲದ ಆಸ್ಪತ್ರೆಯವಾಸ, ಅಸಮತೋಲನವಾದ ಬದುಕು, ನಿತ್ಯಕರ್ಮಗಳಿಗೂ ಪರರ ಅವಲಂಬನೆ ಹೀಗೆ ಹಲವಾರು ಸಮಸ್ಯೆಗಳನ್ನು ರೋಗಿಗಳಲ್ಲಿ ಕಂಡವರು. ಇಂತಹ ಮಾನವ ಸಹಜವರ್ತನೆಯನ್ನು ಅವಲೋಕಿಸಿದ ರಾಮಣ್ಣನವರಿಗೆ ಜನರ ಬದುಕಿನ ಭಿನ್ನ ಮುಖದ ಗ್ರಹಿಕೆಗಳು ಕಥಾವಸ್ತುಗಳಾಗಿ ರೂಪಿತವಾದವು.

೪.೧.೫ ಬೆಸಗರಹಳ್ಳಿ ರಾಮಣ್ಣ ಅವರ ಸಾಹಿತ್ಯದ ಸಾಧನೆ :

ಬದುಕು ಸಾಹಿತ್ಯದ ಮೂಲನೆಲೆಯಾಗಿದ್ದು, ತಮ್ಮ ಪರಿಸರದ ಪ್ರೇರಣೆಯಿಂದಲೇ ಕಥೆಗಾರರಾಗಿ ರೂಪುಗೊಂಡವರು ಬೆಸಗರಹಳ್ಳಿ ರಾಮಣ್ಣ. ಕನ್ನಡ ಸಾಹಿತ್ಯದ ಲೋಕದಲ್ಲಿ ಹೊಸ ಒಲವು – ನಿಲುವು, ವಾದ – ವಿವಾದಗಳ ಸಂದರ್ಭದಲ್ಲಿ ಕತೆ ಬರೆಯಲಾರಂಭಿಸಿದ ರಾಮಣ್ಣನವರ ಸಾಹಿತ್ಯ ಭಿನ್ನ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿದ್ದರೂ ಕಥೆಗಾರರೆಂದೇ ಸಾಹಿತ್ಯ ಲೋಕದಲ್ಲಿ ಪರಿಚಿತರು. ಸಾಮಾಜಿಕ ಮೌಲ್ಯವುಳ್ಳ ಇವರ ಕಥೆಗಳ ಸತ್ವ ಗ್ರಾಮೀಣ ಸಂಸ್ಕೃತಿಯಿಂದ ಕೂಡಿದೆ.

ವೈದ್ಯ ವೃತ್ತಿಯ ರಾಮಣ್ಣನವರು ಸಾಹಿತ್ಯೇತರ ಪರಿಸರದಲ್ಲಿದ್ದು ಮಾಡಿದ ಸಾಹಿತ್ಯಿಕ ಸಾಧನೆ ಮಹತ್ವವಾದುದು, ಬರೆದುದೆಲ್ಲವೂ ಗುಣಾತ್ಮಕವೆನಿಸಲು ಮುಖ್ಯಕಾರಣ ಅವರಿಗೆ ಬಾಲ್ಯದಲ್ಲಿ ಸಿಕ್ಕ ಸುಸಂಸ್ಕೃತ ಕೌಟುಂಬಿಕ ವಾತಾವರಣ. ತಮ್ಮ ನೆಲೆಯ ಸಂಸ್ಕೃತಿಯನ್ನು ಗಂಟು ಹಾಕಿಕೊಂಡೇ ವೈದ್ಯ ವೃತ್ತಿಯಲ್ಲಿ ಕ್ರಿಯಾಶೀಲರಾದ ಬೆಸಗರಹಳ್ಳಿ ರಾಮಣ್ಣ ಅವರಿಗೆ ಬಾಲ್ಯದಲ್ಲೇ ಕತೆಗಳಿಂದ ಆಕರ್ಷಿತರಾಗಲು ಮುಖ್ಯವಾಗಿ ಅವರೇ ಹೇಳುವಂತೆ ಹಳ್ಳಿಗಾಡಿನ ಮುದುಕಿ ದೇಸಳ್ಳಿ ಅಮ್ಮನ ವಿಸ್ತಾರವಾದ ಕಥಾಲೋಕ. ಸಾಹಿತ್ಯದ ಬಗ್ಗೆ ಒಲವಿದ್ದ ತಂದೆ,

ಸೋದರಮಾವ, ಅಣ್ಣ, ಪ್ರೀತಿ-ವಾತ್ಸಲ್ಯದ ಕೂಡುಕುಟುಂಬ, ಮಮತೆಯನ್ನು ಸೂಸುವ ಸಂಬಂಧಗಳು ಅವರನ್ನು ಸದಾಶಯದ ಕತೆಗಾರರನ್ನಾಗಿ ರೂಪಿಸಿದ್ದು, ಅವರು ಹುಟ್ಟಿ ಬೆಳೆದ ಪರಿಸರವೇ ಅವರ ಸಾಹಿತ್ಯಿಕ ಸಾಧನೆಯಲ್ಲಿ ಮಹತ್ವದ ಪಾತ್ರವಹಿಸಿದೆ ಎನ್ನಬಹುದು.

ರಾಮಣ್ಣನವರೇ ಹೇಳುವಂತೆ **"ನನ್ನ ಮೇಲೆ ನಿಸ್ಸಂದೇಹವಾಗಿ ಕುವೆಂಪು, ಟಾಲ್‌ಸ್ಟಾಯ್, ದೋಸ್ತೋವಸ್ಕಿ, ಮೈಕೆಲ್ ಶೊಲ್‌ಕೊವ್, ಚೆಕಾವ್, ಪ್ರೇಮ್‌ಚಂದ್ ಪ್ರಭಾವ ಬೀರಿದ್ದಾರೆ"** [೪] ಎಂದಿದ್ದಾರೆ. ಅಂತೆಯೇ ಗುಣಮಟ್ಟದ ಸಾಹಿತ್ಯರಚನೆಗೆ ಕಾರಣರಾಗಿದ್ದಾರೆ ಎನ್ನಬಹುದು.

ಬೆಸಗರಹಳ್ಳಿ ರಾಮಣ್ಣನವರು ಕತೆಗಾರರಾಗಿಯೇ ಸಾಹಿತ್ಯಲೋಕಕ್ಕೆ ಪರಿಚಿತರಾಗಿದ್ದು, 'ಹಾವಿಲ್ಲದ ಹುತ್ತ' ಅವರ ಮೊದಲ ಕಥೆ. ರಾಮಣ್ಣನವರು ನಾಲ್ಕು ಕಥಾಸಂಕಲನಗಳನ್ನು, ಎರಡು ಕಾದಂಬರಿಗಳನ್ನು ಮತ್ತು ಒಂದು ಕವನ ಸಂಕಲನವನ್ನು ರಚಿಸಿದ್ದಾರೆ. ನೆಲದ ಒಡಲು (೧೯೬೮) ಗರ್ಜನೆ (೧೯೭೨), ಹರಕೆಯ ಹಣ (೧೯೭೬), ಒಂದು ಹುಡುಗನಿಗೆ ಬಿದ್ದ ಕನಸು (೧೯೭೯), ಕನ್ನಂಬಾಡಿ (೧೯೮೬) ಸಮಗ್ರ ಕಥಾ ಸಂಕಲನವಾಗಿದೆ. ರಕ್ತ ಕಣ್ಣೀರು (೧೯೭೪), ತೋಳಗಳ ನಡುವೆ ಕಾದಂಬರಿಗಳಾಗಿವೆ, ಶೋಕ ಚಕ್ರ (೧೯೯೦), ಓರೆಗಲ್ಲು (೨೦೦೫) ಬಿಡಿ ಲೇಖನಗಳ ಸಂಗ್ರಹವಾಗಿದೆ.

'ಕಣಜ' ಬೆಸಗರಹಳ್ಳಿ ರಾಮಣ್ಣ ನವರ ಈವರೆಗಿನ ಸಮಗ್ರ ಕಥೆಗಳ ಸಂಕಲನವಾಗಿದೆ. ೬೦ ದಶಕದಲ್ಲಿ ಪ್ರಥಮವಾಗಿ ಪ್ರಕಟವಾದ 'ಹಾವಿಲ್ಲದ ಹುತ್ತ'ದಿಂದ ಆರಂಭವಾಗಿ ಸುಮಾರು ೪೮ ಕತೆಗಳು ಪ್ರಾದೇಶಿಕ ಸತ್ವವನ್ನು ಮೀರಿದ ಮಾನವೀಯ ಸತ್ವದ ನೆಲೆಯ ಕತೆಗಳನ್ನು ಬರೆದಿದ್ದಾರೆ. ಮೊದಲಕತೆ ಪಡೆದ ಮೆಚ್ಚುಗೆ ಅವರಲ್ಲಿನ ಕಥೆಗಾರರನ್ನು ಹುರಿದುಂಬಿಸಿತೆನ್ನಬಹುದು. ಇವರ ಸಮಗ್ರ ಕಥಾಸಂಕಲನದಲ್ಲಿ ಲೋಕವನ್ನು ಹಿಡಿದಿಡುವ ಪ್ರಯತ್ನವನ್ನು ಕಾಣಬಹುದು. ಬದುಕಿನ ಬಹುಮುಖಿನೆಲೆಯನ್ನು ಪರಿಚಯಿಸುವ ಹೊಣೆಗಾರಿಕೆಯನ್ನು ಕತೆಯ ಮೂಲಕ ವಹಿಸಿಕೊಂಡಂತೆ ಬೆಸಗರಹಳ್ಳಿ ರಾಮಣ್ಣ ಬರವಣಿಗೆಯನ್ನು ನಿರ್ವಹಿಸಿದರು. ಅವರ ಸಮಗ್ರ ಕಥೆಗಳು ಮಾನವೀಯ ಸೆಲೆ ಬತ್ತದಂತೆ ನೀರೆರೆಯುವ ಕಾಯಕವನ್ನು ನಿರ್ವಹಿಸುತ್ತವೆ. ಅವರು ಮೆಚ್ಚಿಕೊಂಡ ಪ್ರೇಮಚಂದ್, ಶರಶ್ಚಂದ್ರಚಟರ್ಜಿ ಟಾಲ್‌ಸ್ಟಾಯ್, ದೋಸ್ತೋವಸ್ಕಿ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಲೇಖಕರೇ ಆಗಿದ್ದಾರೆ.

---

[೪] ಅದೇ, ಪುಟ : ೧೬

"ರಾಮಣ್ಣ ನೆಲದೊಡಲಿನಿಂದ ಮೂಡಿದ ಕತೆಗಾರ. ಎಲ್ಲಕ್ಕಿಂತ ಮಿಗಿಲಾಗಿ ಅವರ ಕಥೆಗಳು ಅಂತಃಕರಣದ ಚಿಲುಮೆಗಳು"[೩] ಎಂಬ ಕೇಶವರೆಡ್ಡಿ ಹಂದ್ರಾಳ ಅವರ ಅಭಿಪ್ರಾಯ ಉಲ್ಲೇಖಾರ್ಹವಾಗಿದೆ. ಹಳ್ಳಿ ತಾಲ್ಲೂಕಿಗೆ ರಾಮಣ್ಣನವರ ಕತೆಗಳು ಸೀಮಿತವೆನಿಸಿದರೂ ಸಂಬಂಧಗಳನ್ನು ಕಟ್ಟುವುದರೊಂದಿಗೆ ನೈತಿಕಹಾದಿ ತೋರಿಸುವ ಕತೆಗಳಾಗಿವೆ. ನಿಸರ್ಗ ಸಮೃದ್ಧಿ ಮತ್ತು ಮಾನವ ಸಂಬಂಧಗಳ ಸಮೃದ್ಧಿಯನ್ನು ಬಹು ಉತ್ಸುಕತೆಯಿಂದ ಹೇಳುವ ಕತೆಗಳಲ್ಲಿ ಅಂತರ್ಗತವಾಗಿರುವುದು ಜೀವಪರನಿಲುವೊಂದೇ, ರಾಮಣ್ಣ ವೈದ್ಯರಾಗಿ ಕಳ್ಳು-ಬಳ್ಳಿಯ ಸಂಬಂಧದೊಡನೆ ಅಧ್ಯಾತ್ಮಿಕತೆ ಎಡೆಗೆ ಸಾಗುವುದೂ ಉಂಟು.

ಹಳ್ಳಿಗಳಲ್ಲಿ ನೈತಿಕತೆ ಒಂದು ಶಕ್ತಿಯಾಗಿ ಕಟ್ಟುವ ಕಾರ್ಯನಿರ್ವಹಿಸುವುದು ಅವರ ಕತೆಗಳಲ್ಲಿ ಮಹತ್ವದ ಅಂಶವಾಗಿದ್ದು, ಇದ್ದುದ್ದನ್ನು ಇದ್ದಂತೆ ಚಿತ್ರಿಸುವ ರಾಮಣ್ಣನವರು ಭಾಷೆಯನ್ನು ಇದ್ದ ಹಾಗೆ ಬಳಸಿದ, ರಾಮಣ್ಣನವರ ಕತೆಗಳು ತೂರಿ ಉಳಿದ ಗಟ್ಟಿಕಾಳಿನ ಕತೆಗಳಾಗಿವೆ.

೪.೨ ಕುಂ.ವೀರಭದ್ರಪ್ಪ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ :

ಸಾಹಿತಿಯೊಬ್ಬರ ಸಮಗ್ರ ಕೃತಿಗಳ ಅವಲೋಕನದಿಂದ ಒಂದು ಕಾಲಘಟ್ಟದ, ಒಂದು ಸಮಾಜದ ಸಂಸ್ಕೃತಿಯ, ಸಂವೇದನೆಯ ಚಿತ್ರಣ ದೊರಕುವಂತೆಯೇ ಆಕೃತಿಗಳ ಹಿನ್ನೆಲೆಯಲ್ಲಿ ಅವರ ಬದುಕಿನ ಹೆಜ್ಜೆಗಳನ್ನು ಗುರುತಿಸುವುದು ಮುಖ್ಯವೆನಿಸುತ್ತದೆ.

ಅನಕ್ಷರಸ್ಥ ತಂದೆ ತಾಯಿ, ಬಡತನದ ಪಾಲೇ ಹೆಚ್ಚಿದ್ದ ಬಾಲ್ಯ, ಹಳ್ಳಿಗಾಡಿನ ಬದುಕು ಮತ್ತು ವೃತ್ತಿಯ ಅನುಭವಸಂವೇದನೆ ಕತೆಗಳಾಗಿ ರೂಪುಗೊಂಡವು. ಅವರ ಕತೆಗಳ ವಿಶಿಷ್ಟತೆಯಲ್ಲಿ ಒಂದಾದ ಭಾಷೆಯನ್ನು ತಮಗೆ ಬೇಕಾದಂತೆ ಬಾಗಿಸಿ, ಉಬ್ಬಿಸಿ ಕರಗಿಸಿ, ಬೇಕಾದಷ್ಟು ಮೊನಚುಮಾಡಿ, ಭಾಷೆಯ ಗಾಂಭಿರ್ಯಕ್ಕಿಂತ ಜನಸಾಮಾನ್ಯರ ಭಾಷೆಗೆ ಒತ್ತು ಕೊಟ್ಟು ಬಳಸಿದವರು.

ಅಕ್ಷರದ ಮಹತ್ವ ಅರಿಯದ ಕುಗ್ರಾಮಗಳಲ್ಲಿ ಕುಂ.ವೀರಭದ್ರಪ್ಪ ಅವರು ಅಧ್ಯಯನಶೀಲರಾಗಿ, ದೈತ್ಯ ಓದುಗರಾಗಿ ಕತೆಗಾರರಾಗಿ, ಸೃಜನಶೀಲ ಸಾಹಿತಿಯಾಗಿ ರೂಪುಗೊಂಡ ಬಗೆ ಪರಿಸರಕ್ಕಿಂತ ಅವರ ಅಂತಃ ಶಕ್ತಿಯಿಂದಲೇ ಎನ್ನಬಹುದು.

---

[೩] ಕಾಡುಗಿಣಿ, ಸಂ : ಡಾ ಕೆ ಪುಟ್ಟಸ್ವಾಮಿ, ರವಿ ಬೆಸಗರಹಳ್ಳಿ, ಡಾ. ಬೆಸಗರಹಳ್ಳಿ ರಾಮಣ್ಣ, ಪ್ರತಿಷ್ಠಾನ (ರಿ), ಬೆಂಗಳೂರು, ೨೦೦೯, ಪು : ೧೦೫.

೪.೨.೧ ಜನನ-ಬಾಲ್ಯ :

ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲ್ಲೂಕಿನ ಹೊಸಪೇಟೆಗೆ ೬೪ ಕಿ.ಮೀ. ದೂರದಲ್ಲಿರುವ ಕೊಟ್ಟೂರಿನ ವಲಸೆಗಾರ ಕುಟುಂಬದಲ್ಲಿ ಅಕ್ಟೋಬರ್ ೧ ರಂದು ೧೯೫೩ ರಂದು ಕುಂ.ವೀರಭದ್ರಪ್ಪ ಜನಿಸಿದರು. ರುದ್ರಮ್ಮ ಮತ್ತು ಮಹಾದೇವಮ್ಮರೆಂಬ ಸೋದರಿಯರು, ಈರಣ್ಣ ಮತ್ತು ಶಿವಮೂರ್ತಿ ಎಂಬ ತಮ್ಮಂದಿರು ಜೊತೆಯಲ್ಲಿ ಹುಟ್ಟಿದವರು.

ತಂದೆ ಹಾಲಪ್ಪನದು ವಿವರಿಸಲಾಗದ, ವಿಶದೀಕರಿಸಲಾಗದ ಬಹುರಂಜಿತ ವ್ಯಕ್ತಿತ್ವ ರಾಕ್ಷಸ ಕೋಪದ ತನ್ನದೇ ಸರಿಯೆನ್ನುವ ದುರಭಿಮಾನಿ ಅಪ್ಪನಿಂದ ಕುಂ.ವೀರಭದ್ರಪ್ಪ ಅವರ ಬಾಲ್ಯ ನುಗ್ಗಾಗಿ ಆ ನೆನಪೇ ಅಸಹನೀಯವಾಗಿತ್ತು. ಆಕರ್ಷಕ ವ್ಯಕ್ತಿತ್ವದ, ಕಟ್ಟು ಮಸ್ತಾದ, ಕುಂಬಾರಿಕೆಯಲ್ಲಿ ಕುಶಲಿಯಾದ, ಶ್ರಮಿಕನಾದ, ಮಾತುಗಾರ, ನಟ, ಹಾಡುಗಾರ, ಕತೆಗಾರ, ಶೋಕಿಲಾಲ, ಸ್ಪುರದ್ರೂಪಿ ಉದಾರಿ, ವಿದ್ಯಾನುರಾಗಿ, ಅಲೆಮಾರಿ ಅಪ್ಪನ ಪ್ರಭಾವ ಕುಂ.ವೀರಭದ್ರಪ್ಪ ಅವರ ಮೇಲೆ ಬೀರಿದ್ದು ಕಡಿಮೆಯದ್ದೇನಲ್ಲ.

ಕುಂ.ವೀರಭದ್ರಪ್ಪ ಅವರೇ ಆತ್ಮಕತೆ **'ಗಾಂಧಿಕ್ಲಾಸು'** ಇದರಲ್ಲಿ ಹೇಳುವಂತೆ **"ಆತನ ಸೃಜನಶೀಲ ವ್ಯಕ್ತಿತ್ವದಿಂದ ಮುಖ್ಯವಾಗಿ ಪ್ರಭಾವಿತನಾಗುತ್ತಿದ್ದವನೆಂದರೆ ನಾನು, ಎಷ್ಟೇ ಭಯೋತ್ಪಾದಕನಾಗಿದ್ದರೂ ಅಪ್ಪ ಕಲಿಕೆಯ ವಿಷಯದಲ್ಲಿ ನನಗೆ ಅತ್ಯುಚ್ಚ ಮಾದರಿಯಾಗಿದ್ದ. ಆದರೂ ಆತ ನನಗೆ ಆಕರ್ಷಕ ವ್ಯಕ್ತಿ ಆಗಿದ್ದಂತೆಯೇ ಭಯೋತ್ಪಾದಕ ವ್ಯಕ್ತಿಯೂ ಆಗಿದ್ದ. ತಂಗಾಳಿ ಮತ್ತು ಚಂಡಮಾರುತಗಳೆರಡನ್ನೂ ಸಮಪ್ರಮಾಣದಲ್ಲಿ ಜೀರ್ಣಿಸಿಕೊಂಡಿದ್ದುದೇ ಅದಕ್ಕೆ ಕಾರಣ. ಮೂರನೇ ತರಗತಿ ಪಾಸಾಗುವ ಹೊತ್ತಿಗೆ ನನ್ನ ಮೇಲೆ ಅಗಣಿತ ಪ್ರಭಾವ ಬೀರಿದ್ದ, ಅವುಗಳಲ್ಲಿ ಮುಖ್ಯವಾದುದೆಂದರೆ ನಿರರ್ಗಳವಾಗಿ ಮಾತನಾಡುವುರು".**[೬]

ಬದುಕನ್ನು ಎದುರಿಸುವ ಛಾತಿ ಅಪ್ಪನಿಂದ ಬಂದಿದ್ದು ಎನ್ನುವ ಕುಂ.ವೀರಭದ್ರಪ್ಪ ಅವರ ಬದುಕಿನಲ್ಲಿ ನಡೆದು ಮುಂದೆ ಬಂದವರಲ್ಲ. ಗುದ್ದಾಡಿ ಎದ್ದು ಎಡವಿ ಬಿದ್ದು ದೃಢವಾಗಿ ನಿಂತವರು. ಆ ಬಾಲ್ಯ, ಕಷ್ಟ, ನೋವುಗಳ ಅನುಭವವೇ ಕತೆಯ ಕಣಜಕ್ಕೆ ಕಾರಣವಾಯಿತೇನೋ, ಹಿಂಜರಿಕೆಯಿಲ್ಲದ ಮನದಾಳದ ನಿಜದನಿ ಸವಾಲಿನ ಬದುಕು ಅವರನ್ನು ವಿಶಿಷ್ಟವಾಗಿಯೇ ರೂಪಿಸಿತು. ಹೊಗಳಿಕೆಗಾಗಿ ಹಾತೊರೆಯುತ್ತಿದ್ದ ಹಾಲಪ್ಪನ ದುರಭಿಮಾನದಿಂದ ಸ್ಥಿರಚರಾಸ್ತಿಯನ್ನು ಕಳೆದುದು ಕುಂ.ವೀರಭದ್ರಪ್ಪ ಅವರ ಬಾಲ್ಯ

---

೬ ಕುಂ. ವೀರಭದ್ರಪ್ಪ, ಗಾಂಧಿಕ್ಲಾಸು, ಸಪ್ನಬುಕ್ ಹೌಸ್, ೨೦೧೩, ಪು : ೩೭.

ಕಡುಕಷ್ಟಕ್ಕೆ ಈಡಾಗಬೇಕಾದರೂ ಹಂಪಮ್ಮಜ್ಜಿ, ತಂದೆ ಹೇಳುತ್ತಿದ್ದ ಕತೆಗಳು ಬಾಲ್ಯವನ್ನು ಅಪ್ಯಾಯಮಾನವಾಗಿಸಿದ್ದವು.

ಕೋಪಿಷ್ಟ ತಂದೆ, ಪತಿಯನ್ನೇ ದೈವವೆಂದು ನಂಬಿದ ಅಮಾಯಕ ತಾಯಿ, ಸದಾ ಮನೆಯಲ್ಲಿ ಜಗಳ, ಹೊಡೆತ, ಕೋರ್ಟು – ಕೇಸು, ಒಣಪ್ರತಿಷ್ಠೆ, ಸಂಪತ್ತಿನ ಅಸಮರ್ಪಕ ನಿರ್ವಹಣೆ, ಊಟಕ್ಕೂ ತತ್ವಾರ, ಇವುಗಳ ನಡುವೆ ಹಂಪಮ್ಮಜ್ಜಿಯ ಪ್ರೀತಿಯ ಆದ್ರತೆ, ಮಾರಣಾಂತಿಕ ಕಾಯಿಲೆಯಿಂದ ಬದುಕುಳಿದಿದ್ದು, ಕಲಿಕೆಯ ಕಿರುಕುಳಗಳಿಂದ ಅವರ ಎಳೆಮನಸ್ಸಿಗೆ ಘಾಸಿಯಾಗಿದ್ದು ನಿಜ.

ವಿದ್ಯಾಭ್ಯಾಸ: ಕೊಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಗಚ್ಚಿನ ಮಠಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ ಕುಂ.ವೀರಭದ್ರಪ್ಪ ಅವರು ಜಾತಿ ಸೂಚಕ ಅವಹೇಳನಕ್ಕೆ ಗುರಿಯಾಗಿ ಕೀಳರಿಮೆ ಅನುಭವಿಸಿದರೂ ಮುಂದೆ ಆ ಅಂಶವೇ ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸಿಕೊಳ್ಳಲು ಕಾರಣವೂ ಆಯಿತು. ಜಾತಿ ಎಂಬುದು ಕಠೋರ ವಾಸ್ತವವೆಂದು ಅಂದೇ ಅರಿವಾಗಿತ್ತೆನ್ನಬಹುದು. ತರಗತಿಯಲ್ಲಿ ತಮ್ಮನ್ನು ಕೀಳಾಗಿ ಕಂಡ ಸಹಪಾಠಿಗಳನ್ನು ಓದಿನ ಮೂಲಕ ಹಿಂದಿಕ್ಕುವ ಛಲ ಅವರಲ್ಲಿದ್ದು ಅದಕ್ಕಾಗಿ ನಿರಂತರ ಅಭ್ಯಾಸ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಕುಂ.ವೀರಭದ್ರಪ್ಪ ಅವರೇ ಹೇಳಿರುವಂತೆ ನೋಡಲು ಚೆಂದವಿಲ್ಲದ ವೀರಭದ್ರಪ್ಪನವರನ್ನು ಶೈಕ್ಷಣಿಕವಾಗಿ ಚೆಂದದ ವಿದ್ಯಾರ್ಥಿಯಾಗಿ ರೂಪಿಸಿದ್ದು ಗಚ್ಚಿನಮಠ.

ಶಾಲೆಯಲ್ಲಿ ಮಾಡಿದ ಎರಡು ವರ್ಷ ವ್ಯಾಸಂಗದಲ್ಲಿ ಅವರು ಕಲಿತಿದ್ದು ಬಹಳವಾಗಿತ್ತು. ಅಲ್ಲಿನ ಪ್ರತಿಶಿಕ್ಷಕರೂ ಆದರ್ಶಪ್ರಾಯರಾಗಿದ್ದು ಕುಂ.ವೀರಭದ್ರಪ್ಪ ಅವರನ್ನು ಸೃಜನಾತ್ಮಕವಾಗಿ ರೂಪಿಸಿದರೆನ್ನಬಹುದು.

ಕುಂ.ವೀರಭದ್ರಪ್ಪ ಅವರೇ ಹೇಳುವಂತೆ **"ಪಂಚೇಂದ್ರಿಯಗಳು ತಮ್ಮ ಎರಡನೇ ವಯಸ್ಸಿಗೇನೇ ಮೆಚ್ಚುರಾಗಿದ್ದವೇನೋ ಎಂಬ ಅನುಮಾನ ನನ್ನದು"** [೭] ಎಂಬ ಮಾತು ಬಾಲ್ಯದಲ್ಲಿನ ಸೂಕ್ಷ್ಮಗ್ರಹಿಕೆಯನ್ನು ಅವರು ಗುರುತಿಸಿಕೊಂಡಿದ್ದರೆನ್ನಿಸುತ್ತದೆ. ಅಲ್ಲದೆ ಪ್ರತಿಭಾವಂತರಾಗಿ ರೂಪುಗೊಳ್ಳಲು ಗಚ್ಚಿನಮಠ ಶಾಲೆಯು ಮುಖ್ಯವೆನಿಸುತ್ತದೆ. ತಾವು ಓದಿದ ಕೇಳಿದ ಕತೆಯನ್ನು ತಮಗೆ ಬೇಕಾದಂತೆ ಪುನರ್‌ರಚಿಸಿ, ಬೆಳೆಸುತ್ತಾ, ಅತಿರಂಜಕವಾಗಿ ಹೇಳುವ ಶೈಲಿ ಪ್ರಾಥಮಿಕ ಶಾಲೆಯಲ್ಲೇ ಸಿದ್ದಿಸಿದ್ದು ಶಿಕ್ಷಕರೂ ಬೆರಗಾಗುವಂತೆ ಕತೆ

---

೭ ಕುಂ.ವೀರಭದ್ರಪ್ಪ, 'ಗಾಂಧಿಕ್ಲಾಸು', ಸಪ್ನ ಬುಕ್ ಹೌಸ್, ೨೦೧೩, ಪು : ೩೪.

ಹೇಳುತ್ತಿದ್ದರು. ತಂಗಳು – ಪಂಗಳು ಉಂಡರೂ ಹೇಳುವುದರಲ್ಲೇ ಆತ್ಮವಿಶ್ವಾಸ ತುಂಬಿತುಳುಕುತ್ತಿತ್ತು. ಬಾಲ್ಯ ತಂದೆಯ ಒಣ ಪ್ರತಿಷ್ಠೆಯಿಂದ ಕಡುಕಷ್ಟಕ್ಕೆ ಈಡಾಗಿದ್ದರೂ ಹಂಪಮ್ಮಜ್ಜಿ ಹೇಳುತ್ತಿದ್ದ ಕತೆಗಳು ಬಾಲ್ಯದ ಸಿಹಿ ನೆನಪುಗಳಾಗಿದ್ದವು. ಸಾಹಿತ್ಯದ ಗೀಳು ತಂದೆಯ ಬಳವಳಿಯೆನ್ನಬಹುದು.

ಕೋಪಿಷ್ಠ ತಂದೆ ಓದಲು ಉತ್ತೇಜನ ನೀಡಿದರೂ, ಕುಂ.ವೀರಭದ್ರಪ್ಪ ಅವರ ಸಾಮರ್ಥ್ಯವನ್ನು ಗುರಿತಿಸಿದ್ದರೂ, ಭಯದ ವಾತಾವರಣದ ನಡುವೆ, ಕಿರುಕುಳದ ಓದಿನ ನಡುವೆ ಕುಂ.ವೀರಭದ್ರಪ್ಪ ಅವರು ಕಮರದೆ ಅರಳಿದರೂ ವ್ಯಾಸಂಗದಲ್ಲಿ ಭಯಮುಕ್ತ ವಾತಾವರಣವಿದ್ದರೆ, ಬಾಲ್ಯನವಿರಾಗಿದ್ದರೆ ಇನ್ನೆಂಥ ಕತೆಗಳು ರೂಪಿತವಾಗುತ್ತಿದ್ದವೋ? ಅಚ್ಚುಮೆಚ್ಚಿನ ಜಾತಪ್ಪ ಮಾಸ್ತರರ ಚುರುಕಿನ ಪ್ರಿಯಶಿಷ್ಯ ಬೆರಳು ತೋರಿಸಿದರೆ ಹಸ್ತನುಂಗುವ ಶಿಷ್ಯನಾಗಿದ್ದರೂ ಜಿಲ್ಲಾ ಬೋರ್ಡ್ ಹೈಸ್ಕೂಲ್‌ನ ಭಯ, ಕಾಯಿಲೆಯಿಂದ ಕುಂ.ವೀರಭದ್ರಪ್ಪ ನರಳುವಂತೆ ಮಾಡಿದರೂ ಹೈಸ್ಕೂಲ್ ಸೇರದಿರಲಿಲ್ಲ.

ಕುಂ.ವೀರಭದ್ರಪ್ಪ ಅವರೇ ಹೇಳಿಕೊಳ್ಳುವಂತೆ ತಾವು ಮಹಾಮಳ್ಳಿಗ, ತಲೆಹರಟೆ, ಬುದ್ಧಿವಂತ, ಅಸಾಧ್ಯ ಹುಡುಗನೆನಿಸಿಕೊಂಡಿದ್ದ ಅವರು ಭಯದಿಂದಲೇ ಎಂಟನೇ ತರಗತಿ ಪಾಸಾದರು. ಒಂಭತ್ತನೇ ತರಗತಿಯಲ್ಲಿ ನಪಾಸಾದ ನಂತರ ಕಲಾವಿಭಾಗಕ್ಕೆ ಸೇರಿದಾಗ ಅವರಲ್ಲಿದ್ದ ಕೀಳಿರಿಮೆ ಅಲ್ಪಮಟ್ಟಿಗೆ ಕಡಿಮೆಯಾಗಿ ತಮಗಿದ್ದ ಸಂಶಯಗಳನ್ನು ನಿವಾರಿಸಿಕೊಳ್ಳಲು ಶಿಕ್ಷಕರನ್ನು ಪ್ರಶ್ನಿಸುವ ಮನೋಭಾವ ಬೆಳೆಯತೊಡಗಿತು. ಕಷ್ಟಕೋಟಲೆಗಳ ನಡುವೆ ಒಂಭತ್ತನೇ ತರಗತಿಯನ್ನು ಮೇಲಿರಿಮೆ ಮತ್ತು ಕೀಳಿರಿಮೆಗಳ ಗುದ್ದಾಟಗಳ ನಡುವೆ ಮುಗಿಸಿದರು. ಮನೆಯಲ್ಲಿ ಊಟಕ್ಕೂ ತತ್ವಾರ, ತಂಗಿ ನಾಗರತ್ನಳು ಹಸಿವಿನಿಂದ ಸತ್ತದ್ದು, ಗೊಂದಲ ಗೋಜಲುಗಳ ನಡುವೆ ಮೂರನೇ ದರ್ಜೆಯಲ್ಲಿ ಹತ್ತನೇ ತರಗತಿ ಪಾಸಾದಾಗ ಕಾಲೇಜಿನ ಕನಸು ಚಿಗುರೊಡೆಯದಿರಲಿಲ್ಲ. ಬಡತನದ ಕಾರಣ ವ್ಯಾಸಂಗದ ಬದಲು ರೈಲ್ವೆಯಲ್ಲಿ ದಿನಗೂಲಿಯಾಗಿ ಸೇರಿದ ಕುಂ.ವೀರಭದ್ರಪ್ಪ ಅವರಿಗೆ ಆದ ಜೀವನಪಾಠ ಕಾಲೇಜಿನ ಓದನ್ನು ಮೀರಿಸಿದ್ದರೂ ಹಸಿವು ಕಲಿಸಿದ ಪಾಠ ಮರೆಯುವಂತಿರಲಿಲ್ಲ.

ಬದುಕಿನ ಏರಿಳಿತಗಳ ನಡುವೆ ಓದುವ ಹಂಬಲ ನಿರಂತರವಾಗಿ ಮುಂದುವರಿಯುತ್ತಿದ್ದರೂ ಬರವಣಿಗೆ ಕುಂಟುತ್ತಾ ಸಾಗುತ್ತಿತ್ತು. ಹಿರಿಯರ ನಿರ್ಧಾರದ ಮೇರೆಗೆ ಕುಂ.ವೀರಭದ್ರಪ್ಪ ಅವರಿಗೆ ಓದಲು ಅನುಮತಿ ಸಿಕ್ಕಿದ್ದಲ್ಲದೆ, ತಂದೆ ತಮ್ಮ ಮಗನನ್ನು

ಡಾಕ್ಟರ್, ಇಂಜಿನೀಯರ್, ವಕೀಲನಾಗಿಸುವ ಕನಸನ್ನು ಬಿಟ್ಟು ಶ್ರೀ ಸಿದ್ಧಗಂಗಾಮಠದ ಶಿಕ್ಷಕತರಬೇತಿ ಶಿಕ್ಷಣಕ್ಕೆ ಸೇರಿಸಲು ಒಪ್ಪಿಗೆ ನೀಡಿದರು. ಹತ್ತನೇ ತರಗತಿಯಲ್ಲಿ ಮೂರನೇ ದರ್ಜೆಯಲ್ಲಿ ಉತ್ತೀರ್ಣರಾದ್ದರಿಂದ ಶಿಕ್ಷಕರ ತರಬೇತಿಗೆ ಸೀಟು ದುರ್ಲಭವಾದಾಗ ತಮ್ಮ ಸಾಹಿತ್ಯಾಸಕ್ತಿಯ ಪ್ರತಿಭೆಯಿಂದ ಸೀಟನ್ನು ಗಿಟ್ಟಿಸಿಕೊಂಡ ಕುಂವೀ ಮೇಷ್ಟ್ರಾಗುವ ಮನದಾಳದ ಕನಸಿಗೆ ರೆಕ್ಕೆ ಕಟ್ಟಿಕೊಂಡರು.

ಕುಂ.ವೀರಭದ್ರಪ್ಪ ಅವರ ಬಾಲ್ಯಸ್ಮೃತಿಗಳು ಮಧುರ ನೆನಪಾಗಿಲ್ಲದಿದ್ದರೂ ಅವರ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖಪಾತ್ರವಹಿಸಿವೆ. ಅವರ ಬಾಲ್ಯವನ್ನು ರೂಪಿಸಿದ ಊರುಗಳು, ಅವರು ಬಾಲ್ಯವನ್ನು ಹಿಂತಿರುಗಿ ನೋಡುವ ನೆಪದಲ್ಲಿ ಆ ಊರುಗಳ ಒಂದು ಕಾಲಘಟ್ಟದ ಪರಿಸರದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಅವರ ಬಾಲ್ಯದ ಕಹಿ ಪ್ರಸಂಗಗಳು ಬದುಕಿಗೆ ಬೇಕಾದ ದ್ರವ್ಯವಾಗಿ ಕಾಣಿಸುತ್ತದೆ. ಹಾಲಪ್ಪನವರು ಆಸ್ತಿ ಕಳೆದುಕೊಂಡಿದ್ದರೂ ಬಡತನವನ್ನೇ ಹಾಸಿ ಹೊದ್ದ? ಹೃದಯವಂತ ಕುಟುಂಬ. ಹಾಲಪ್ಪನದು ಘನತೆಯ ವಿಚಿತ್ರ ಬದುಕಾಗಿತ್ತು, ಒಬ್ಬನೇ ವ್ಯಕ್ತಿ ಪ್ರತಿನಿಧಿಸಬಹುದಾದ ಉದಾತ್ತತೆ ಮತ್ತು ಸಣ್ಣತನವನ್ನು ಪ್ರತಿನಿಧಿಸುವಂತಿದೆ.

ಕುಂ.ವೀರಭದ್ರಪ್ಪ ಅವರಿಗೆ ಸಿದ್ಧಗಂಗಾಮಠ ಕಾವ್ಯಪ್ರತಿಭೆ ಚಿಗುರೊಡೆಯಲು ವೇದಿಕೆಯಾಯಿತು. ತಮಗೆ ಉತ್ತೇಜನ ನೀಡಿದ ಮಲ್ಲೇಪುರಂರವರನ್ನು ಕೃತಜ್ಞತೆಯಿಂದ ನೆನೆಪಿಸಿಕೊಳ್ಳುತ್ತಾರೆ. ಕುಂ.ವೀರಭದ್ರಪ್ಪ ಚುರುಕಿನ ಪ್ರತಿಭಾವಂತ ವಿದ್ಯಾರ್ಥಿಯಾದರೂ ವಿಜ್ಞಾನದ ಓದು ತೇಜಸ್ವಿಯವರಂತೆ ತಲೆಗೆ ಹತ್ತಲಿಲ್ಲವೆನಿಸುತ್ತದೆ. ಶೈಕ್ಷಣಿಕವಾಗಿ ಶ್ರೀಮಂತವಾಗಿದ್ದ ಮಠ ಕುಂ.ವೀರಭದ್ರಪ್ಪ ಅವರ ಓದಿನ ಆಸೆಗೆ ಪೂರಕವಾಗಿ ಮಲ್ಲೇಪುರಂ ವೆಂಕಟೇಶ್ ಅವರು ನೀರೆರೆದು ಅವರಲ್ಲಿ ಭರವಸೆಮೂಡಿಸಿದರು. ಬಾಲ್ಯದಲ್ಲಿ ಸಾಹಿತ್ಯದ ರುಚಿ ತೋರಿಸಿದ್ದು ತಂದೆಯಾದರೂ ಹಳಗನ್ನಡಸ್ವಾದ ಹೆಚ್ಚಿದ್ದು ಸಿದ್ಧಗಂಗಾ ಮಠದಲ್ಲಿ ಮಲ್ಲೇಪುರಂ ವೆಂಕಟೇಶ್ ಅವರ ಸಾನಿಧ್ಯದಿಂದ ಎನ್ನಬಹುದು.

ಕುಂ.ವೀರಭದ್ರಪ್ಪ ಅವರು ಹೇಳುವಂತೆ **"ಹಳಗನ್ನಡ ಕಾವ್ಯಗಳನ್ನು, ವೇದೋಪನಿಷತ್ತುಗಳನ್ನೂ, ಅಷ್ಟಾದಶ ಪುರಾಣಗಳನ್ನೂ ಜೀರ್ಣಿಸಿಕೊಂಡಿದ್ದ ಸಂಸ್ಕೃತ ಸಾಹಿತ್ಯ ಲೋಕದ ವಾತಾಪಿಗಳು"**[೮] ಹಳೆಗನ್ನಡ ಭದ್ರಬುನಾದಿ ಕುಂ.ವೀರಭದ್ರಪ್ಪ ಅವರಿಗೆ ಮಲ್ಲೇಪುರಂ ಅವರಿಂದ ಲಭಿಸಿತಲ್ಲದೆ ಸಾಹಿತ್ಯಿಕವಾಗಿ ಬೆಸೆದ ಅವರ ಸ್ನೇಹ-ಗುರುತನದಿಂದ ಮುಂದುವರಿಸಿದ್ದಲ್ಲದೆ ಕುಂ.ವೀರಭದ್ರಪ್ಪ ಅವರ ಸೃಜನಾತ್ಮಕ ಬೆಳವಣಿಗೆಗೆ ಪೂರಕವಾಯಿತು.

---

೮ ಅದೇ, ಪುಟ : ೧೬೭

ಕುಂವೀ ಮಠದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಳಗನ್ನಡದಲ್ಲಿ ಪದ್ಯ ರಚನೆಗೆ ಪ್ರಯತ್ನಿಸಿದರಲ್ಲದೆ ಸಂಸ್ಕೃತ ಕೃತಿಗಳ ಅಧ್ಯಯನವನ್ನು ಸ್ವಲ್ಪ ಮಟ್ಟಿಗೆ ಮಾಡಿದರು. ತದನಂತರ ಹಳಗನ್ನಡ ಸಾಹಿತ್ಯದಿಂದ ನವೋದಯ ಸಾಹಿತ್ಯದೆಡೆಗೆ ಒಲವು ತೋರಿದ ಅವರು ಕೃತಿಚೌರ್ಯ ಮತ್ತು ಸ್ವಂತಿಕೆಯೊಂದಿಗೆ ಪದ್ಯಗಳನ್ನು ಬರೆದು ಪತ್ರಿಕಾ ಪ್ರಕಟಣೆಗೆ ವಶೀಲಿಯನ್ನು ಮಾಡಿದರೂ ಪ್ರಕಟಗೊಳ್ಳದಿದ್ದಾಗ ಸಣ್ಣಪುಟ್ಟ ಪತ್ರಿಕೆಗಳಲ್ಲಿ ಪ್ರಕಟವಾಗಿ ಬೀಗಿದರೂ ದೊಡ್ಡ ಪತ್ರಿಕೆಯಲ್ಲಿ ಪ್ರಕಟಗೊಳಿಸಲು ಅವರ ನಿರಂತರ ಪ್ರಯತ್ನ ಮುಂದುವರಿದಿತ್ತು.

ಕುಂ.ವೀರಭದ್ರಪ್ಪ ತಾವು ಬರೆದ ಕವಿತೆಗಳ ಕಟ್ಟನ್ನು ಹಿಡಿದು ಸಾಹಿತಿಗಳ ಅಭಿಪ್ರಾಯಕ್ಕಾಗಿ, ಪ್ರಕಟನೆಗಾಗಿ ಎಡತಾಕಿ ಅವಮಾನಕ್ಕೀಡಾದರೂ ಪ್ರಯತ್ನ ಬಿಡಲಿಲ್ಲ. ಗಾಂಧೀ ಕ್ಲಾಸಿನಲ್ಲಿ ಕುಂ.ವೀರಭದ್ರಪ್ಪ ಹೇಳಿರುವಂತೆ "ಎರಡು ವರ್ಷಗಳ ಕಾಲ ನನ್ನ ವ್ಯಾಸಂಗಕ್ಕೆ ಶ್ರೀಮಠ ಆಸನ, ವಸನ ಮತ್ತು ಜೀವನೋಪಯೋಗಿ ಶಿಕ್ಷಣ ನೀಡಿ ಸಹಕರಿಸಿತು. ನನ್ನೊಳಗೆ ಸಾಹಿತ್ಯದ ಬೀಜ ಬಿತ್ತನೆಯಾಗಿದ್ದು ಅದು ಹಲವು ಟೊಂಗೆಗಳನ್ನು ಚಾಚಿದ್ದು ಅಲ್ಲಿಯೇ...." ಎಂದಿದ್ದಾರೆ.

ಕುಂ.ವೀರಭದ್ರಪ್ಪ ಅವರ ವ್ಯಕ್ತಿತ್ವ ರೂಪುಗೊಳ್ಳತೊಡಗಿದ್ದು ಶ್ರೀಮಠದಲ್ಲಿಯೇ ಎನ್ನಬಹುದು. ಅವರ ಓದಿನ ಹಸಿವಿನ ತೀವ್ರತೆ, ಸಾಧಿಸುವ ಛಲ, ಅದಕ್ಕಾಗಿ ಅನವರತ ಪ್ರಯತ್ನ, ಧನಾತ್ಮಕಚಿಂತನೆ, ಕಷ್ಟಗಳ ನಡುವೆ ಇಂಗದ ಉತ್ಸಾಹ, ಧೈರ್ಯ, ಸಿಗುವ ಅವಕಾಶಗಳನ್ನು ಕಬಳಿಸುವ ಮನೋಭಾವ, ಶ್ರೀಮಠದ ಶೈಕ್ಷಣಿಕವಾತಾವರಣ ಅವರನ್ನು ಸೃಜನಾತ್ಮಕವಾಗಿ ರೂಪಿಸಿತೆನ್ನಬಹುದು.

ತಂದೆಯ ಭಯದಿಂದ ಬಿಡುಗಡೆ ಪಡೆದಿದ್ದು, ತಮಗಿರುವ ಆಸಕ್ತಿ ಅವರಿಗೆ ಸ್ಪಷ್ಟವಾಗಿದ್ದು ಅವರ ಸಾಹಿತ್ಯಾಸಕ್ತಿ ಚಿಗುರತೊಡಗಿದ್ದು, ಅವರ ಆಸಕ್ತಿಗೆ ನೀರೆರೆದಿದ್ದು ಶ್ರೀಮಠವಾಗಿದ್ದು, ಶಿಕ್ಷಕ ತರಬೇತಿ ಶಿಕ್ಷಣ ಅವರ ಸಾಹಿತ್ಯ ಬದುಕಿನ ಪ್ರಮುಖ ಘಟ್ಟವೆನ್ನಬಹುದು.

೪.೨.೩ ವೃತ್ತಿ ಜೀವನ :

ಕುಂ.ವೀರಭದ್ರಪ್ಪ ಅವರಿಗೆ ವಿದ್ಯಾಭ್ಯಾಸದೆಡೆಗೆ ಒಲವಿದ್ದರೂ ಮನೆಯ ಬಡತನ, ಊರಿನ ವಾತಾವರಣ, ಅಪ್ಪನ ವರ್ತನೆಯಿಂದ ಕೆಲಸ ಹುಡುಕುವ ಅನಿವಾರ್ಯತೆಯಿಂದ

ಹೊಸಪೇಟೆಗೆ ಬಂದು ೧೬ನೇ ವಯಸ್ಸಿನಲ್ಲಿ ರೈಲ್ವೆಯಲ್ಲಿ ದಿನಗೂಲಿ ನೌಕರರಾಗಿ ಸೇರಬೇಕಾಯಿತು. ಅನಿಶ್ಚಿತ, ಅರೆಹೊಟ್ಟೆಯ ರೈಲ್ವೆ ನೌಕರಿ, ಕೆಳವರ್ಗದ ಬದುಕಿನ ಮಗ್ಗಲನ್ನು ಪರಿಚಯಿಸಿತು. ಲೈಬ್ರರಿ ಓದಿನಿಂದ ದೂರಸರಿದ ಕುಂ.ವೀರಭದ್ರಪ್ಪ ಅವರಿಗೆ ದಿನಗೂಲಿ ನೌಕರಿ ಕಲಿಸಿದ ಪಾಠ, ಕೆಳವರ್ಗದ ನೌಕರರು ಬದುಕಿಗಾಗಿ ನಡೆಸುತ್ತಿದ್ದ ಬಂಡಾಯ ಕುಂವೀ ಅವರಲ್ಲಿ ಬಂಡಾಯದ ಚಿಗುರಿಗೆ ಕಾರಣವಾಯಿತೆನ್ನಬಹುದು. ದಿನಗೂಲಿಯಾಗಿ ಕುಂವೀ ಅವರು ತೀರಾ ನಿಕೃಷ್ಟವೆನಿಸಿದ ಕೆಲಸವನ್ನು ಮಾಡಿದರೂ ಸಹ ಅವರ ತಾತ್ಕಾಲಿಕ ಕೆಲಸಕ್ಕೂ ಸಂಚಕಾರ ಬಂದಾಗ ಹಸಿವಿನ ವಿರಾಟ್‌ರೂಪದ ದರ್ಶನವಾಗಿ ಅವರ ಜೀವ ಉಳಿದಿದ್ದೇ ಹೆಚ್ಚು. ಸುಡು ಹಸಿವಿನಲ್ಲೂ ಇನ್ನೊಬ್ಬರ ಮುಂದೆ ಕೈಚಾಚದಂತೆ ಮಾಡಿದ್ದು ಅವರ ಸಾಹಿತ್ಯದ ಓದು ಎನ್ನಬಹುದು. ಕುಂ.ವೀರಭದ್ರಪ್ಪ ಅವರಿಗಾದ ಹಸಿವಿನ ವಿರಾಟ್ ದರ್ಶನವೇ ಕತೆಗಳಲ್ಲಿ ಕೆಳವರ್ಗದವರ ಹಸಿವಿನ ತೀವ್ರತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ಸಾಧ್ಯವಾದದ್ದು ಎನಿಸುತ್ತದೆ.

ತಂದೆಯ ವಶೀಲಿ ಮತ್ತು ಹಣದ ಪ್ರಭಾವದಿಂದ ಹೊಸಪೇಟೆಯ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಆರಂಭಿಸಿದರು. ಸಂಬಳ ರಹಿತ ಶಿಕ್ಷಕ ವೃತ್ತಿ ಕುಂ.ವೀರಭದ್ರಪ್ಪ ಅವರಿಗೆ ದಿನದೂಡಲು ಕಷ್ಟವಾದಾಗ ಚಿತ್ರಕಲೆ ಅವರಿಗೆ ಅಲ್ಪಮಟ್ಟಿಗೆ ನೆರವಾಯಿತು. ಸಂಬಳರಹಿತ ಕೆಲಸ, ಉಪವಾಸ–ವನವಾಸದಿಂದ ರೋಸಿದ ಕುಂ.ವೀರಭದ್ರಪ್ಪ ಕೆಲಸಕ್ಕಾಗಿ ಮತಾಂತರಗೊಳ್ಳಲು ಮನಸ್ಸು ಮಾಡಿದ್ದು, ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಅವರಿದ್ದ ಸ್ಥಿತಿಯ ಗಂಭೀರತೆಯನ್ನು ತಿಳಿಸುತ್ತದೆ.

ತಮ್ಮ ಪ್ರತಿಭೆಯಿಂದಲೇ ಟಿ.ಸಿ.ಎಚ್. ಸೀಟು ಮತ್ತು ರಾಯಚೂರಿನಲ್ಲಿ ಖಾಸಗಿ ನೌಕರಿ ಪಡೆದ ಕುಂ.ವೀರಭದ್ರಪ್ಪ ಬಾರ್‌ನಲ್ಲಿ ದಿನಗೂಲಿಯಾಗಿ ದುಡಿದವರು. ಇವೆಲ್ಲವುಗಳ ನಡುವೆಯೂ ಬರವಣಿಗೆಯಿಂದ ವಿಮುಖರಾಗದೆ ಚಳವಳಿಗಳಲ್ಲಿ ಭಾಗವಹಿಸುವುದು ನಡದೇ ಇತ್ತು. 'ಬಹಿರಂಗ' ಪತ್ರಿಕೆಯನ್ನು ಸ್ನೇಹಿತರೊಂದಿಗೆ ಕೆಲದಿನ ನಡೆಸಿದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ತಮ್ಮದೇ ಆದ ರೀತಿಯಲ್ಲಿ ಸಕ್ರಿಯರಾದಾಗ ಕೊಟ್ಟೂರಿನಿಂದ ಕಾಲ್ತೆಗೆದು ಅಕ್ಕನ ಊರಿಗೆ ಸ್ಥಳಾಂತರಗೊಂಡ ಸಂದರ್ಭದಲ್ಲಿ ಚೊಚ್ಚಲಕತೆ 'ಕೂಳು' ಮಯೂರದಲ್ಲಿ ಪ್ರಕಟಗೊಂಡಿತು. "ಮನುಷ್ಯನನ್ನು ಮನುಷ್ಯನನ್ನಾಗಿ ರೂಪಿಸುವುದು ಅವನು

ಹೊಂದಿದ ಸವಲತ್ತುಗಳಲ್ಲ ಎಡರು ತೊಡರು ಮತ್ತು ದುಃಖದುಮ್ಮಾನಗಳು"[೯] ಎಂಬ ಮ್ಯಾಥ್ಯೂಸ್ ಅವರ ಮಾತು ಕುಂ.ವೀರಭದ್ರಪ್ಪ ಅವರಿಗೆ ಅನ್ವಯಿಸುತ್ತದೆ.

ಈ ಎಲ್ಲಾ ಗೊಂದಲದ ಬದುಕಿನ ನಡುವೆ ೧೯೮೧ ರಲ್ಲಿ ಆಂಧ್ರಪ್ರದೇಶದ ವಾಗಿಲಿಯಲ್ಲಿ ಸರ್ಕಾರಿ ಶಿಕ್ಷಕರಾಗಿ ನೇಮಕಗೊಂಡಾಗ ಅವರ ಬದುಕು ನವೀಕರಣಗೊಂಡು ಶಿಕ್ಷಕವೃತ್ತಿ ಆರಂಭವಾಯಿತು.

ವಾಗಿಲಿ ಹೆಸರಲ್ಲೇ ಅಪ್ರಸನ್ನತೆ, ಹೆದರಿಸಿದ ಮಂದಿ ಮಾತು, ಸುಡುಗಾಡಿಗೂ ಹೆದರದ, ಹೋರಾಟವೇ ಬದುಕಾಗಿದ್ದ ಕುಂ.ವೀರಭದ್ರಪ್ಪ ಅವರು ಆ ಊರಿನಲ್ಲೇ ಮನೆಹಿಡಿಯಲು ನಿರ್ಧರಿಸಿ ಇದ್ದ ಊರನ್ನೇ ಉದ್ಧಾರಮಾಡಲು ಹೊರಟ ಅವರ ಆದರ್ಶಕ್ಕೆ ಎದುರಾದ ಸಮಸ್ಯೆ-ಸವಾಲುಗಳು ಕಡಿಮೆಯೇನಲ್ಲ. ವಾಗಿಲಿಯಲ್ಲಿ ಜಂಘಾಬಲ ಉಡುಗಿಸುವ ಘಟನೆಗಳು ನಡೆದರೂ ನಟೋರಿಯಸ್ ಶಿಕ್ಷಕ ಹಿಮ್ಮೆಟ್ಟಲಿಲ್ಲ.

ಶಾಲೆಗೆ ಮಕ್ಕಳನ್ನು ಪ್ರಯತ್ನಪೂರ್ವಕವಾಗಿ ಸೇರಿಸಿಕೊಳ್ಳುವುದು, ಶಾಲೆಯಲ್ಲಿ ಕಲಿಸುವುದರ ಜೊತೆಗೆ ಸಂಜೆ ಮನೆಪಾಠದ ಮೂಲಕ ಮಕ್ಕಳ ಕಲಿಕೆ ಮುಂದುವರಿಸಲು ಕಾಳಜಿವಹಿಸುತ್ತಿದ್ದ ಕುಂ.ವೀರಭದ್ರಪ್ಪ ಪೋಷಕರಲ್ಲೂ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವ ಅವರ ನಿರಂತರ ಪ್ರಯತ್ನ ಸಾಮಾಜಿಕ ಹೊಣೆಗಾರಿಕೆಯ ಪ್ರಜ್ಞೆಯೇ ಆಗಿತ್ತು.

ಏನೂ ಅಲ್ಲದ ವಾಗಿಲಿಯಲ್ಲಿ ಏನನ್ನೊ ಸಾಧಿಸ ಹೊರಟ ಕುಂ.ವೀರಭದ್ರಪ್ಪ ಪಡೆದ ಅನುಭವಗಳಿಂದ ಕಟ್ಟಿದ ಕತೆಗಳು ಕಡಿಮೆಯೇನಲ್ಲ. ಇಂಚಿಂಚಾಗಿ ವಾಗಿಲಿಯನ್ನು ಅರ್ಥೈಸಿದ್ದ ಕುಂ.ವೀರಭದ್ರಪ್ಪ ಅದನ್ನು ಅನಾವರಣಗೊಳಿಸಿದ್ದು ವಿಸ್ತುತವಾಗಿ ಎನ್ನಬಹುದು.

ಸರ್ಕಾರಿ ಶಾಲಾವೃತ್ತಿಯ ಜೊತೆಗೆ ವಾಗಿಲಿಯಲ್ಲಿದ್ದ ಸಾಮಾಜಿಕ ಅಸಮಾನತೆ ಬಗ್ಗೆ ಕೆಳವರ್ಗದವರಲ್ಲಿ ಅರಿವು ಮೂಡಿಸುವ ಪ್ರಯತ್ನದಲ್ಲಿ ವಾಗಿಲಿಯನ್ನೇ ಕಾರ್ಯಕ್ಷೇತ್ರವಾಗಿಸಿಕೊಂಡರು. ಕುಂವೀ ಊರವರ ಪ್ರಬಲ ವಿರೋಧದೊಡನೆ ಶಾಲೆಯನ್ನು ಮಾದಿಗರೋಣಿಗೆ ತಂದು, ಊರ ಮುಖಂಡರಿಂದ ಬಹಿಷ್ಕಾರ ಹಾಕಿಸಿಕೊಂಡರೂ ಅಂಜದೆ ಕೆಳವರ್ಗದ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ಸಫಲರಾದರು. ಸವರ್ಣೀಯರ ಮಕ್ಕಳು ಶಾಲೆಗೆ ಬರಲಾರಂಭಿಸಿದ್ದು ಅವರ ಅವಿರತ ಪ್ರಯತ್ನ, ಆತ್ಮವಿಶ್ವಾಸದಿಂದಲೇ ಪ್ರಾಥಮಿಕ ಶಾಲಾ ಶಿಕ್ಷಕರಾದ ಅವರ ಗುರಿ-ಉದ್ದೇಶ, ಸಂವೇದನೆಗಳ ವಿಸ್ತಾರ ಊಹೆಗೆ

---

[೯] ಪ್ರಜಾವಾಣಿ, ೪.೬.೨೦೧೭, ಪು : ೬

ನಿಲುಕುವಂತದ್ದಾಗಿರಲಿಲ್ಲ. ಕೆಳವರ್ಗದವರ ಬಗ್ಗೆ ಕನವರಿಸುತ್ತಿದ್ದ ಕುಂ.ವೀರಭದ್ರಪ್ಪ ಅವರು ಸವರ್ಣೀಯರ ಮನೋಭಾವದಲ್ಲೂ ಬದಲಾವಣೆ ತಂದರೆನ್ನಬಹುದು.

ಮುಗ್ಧ ಜೀವಿಗಳಿಗೆ ಬರವಿಲ್ಲದ ವಾಗಿಲಿಯಲ್ಲಿ ಕುಂ.ವೀರಭದ್ರಪ್ಪ ಅವರು ಹೆಸರಿಲ್ಲದವರಿಗೆ ಹೆಸರಿಟ್ಟು, ಉಡಿಸಿ, ಕೊಡಿಸಿ, ಕಣ್ತುಂಬಿಕೊಂಡ ಕುಂ.ವೀರಭದ್ರಪ್ಪ ಅವರ ಮಾನವೀಯ ಸೆಲೆ ಊಹಾತೀತ. ಹೊರಲಾರದ ಅನುಭವದ ಹೊರೆ ಹೊರಿಸಿದ ವಾಗಿಲಿ, ಕೆಳವರ್ಗದವರಲ್ಲಿ ಪ್ರತಿರೋಧದ ಪ್ರಜ್ಞೆ ಮೂಡಿಸಿದ ಕುಂವೀ, ವಾಗಿಲಿಯಲ್ಲಿ ಮಕ್ಕಳ ಓದು, ಬರಹ, ಭವಿಷ್ಯದ ಬಗ್ಗೆ ಅಸ್ಥೆವಹಿಸಿ ಅದಕ್ಕಾಗಿ ಮಾಡಿದ ಹೋರಾಟ, ಅನುಭವಿಸಿದ ಸಂಕಷ್ಟಗಳು, ವಾಗಿಲಿಯ ಚಿತ್ರ ಬದಲಿಸುವ ಹಂಬಲದಿಂದ ಕುಂ.ವೀರಭದ್ರಪ್ಪ ಶಿಕ್ಷಕರಾಗಿ ಮಾಡಿದ್ದು ಅಲ್ಪವಲ್ಲ. ಇಷ್ಟಕ್ಕೆಲ್ಲಾ ಕಾರಣವಾಗಿದ್ದ ವಾಗಿಲಿಯನ್ನು ಅನಿವಾರ್ಯವಾಗಿ ಬಿಡಬೇಕಾಗಿ ಬಂದು ಆಂಧ್ರದ ಗೂಳ್ಯಂ ಹೈಸ್ಕೂಲ್ ಶಿಕ್ಷಕರಾಗಿ ವರ್ಗವಾದರು.

ಗೂಳ್ಯಂ ಕನ್ನಡ ಪ್ರೌಢಶಾಲೆ ಸಮಸ್ಯೆಗಳ ಅಗರವಾಗಿದ್ದು ಶಾಲೆಯನ್ನು ಉಳಿಸಿಕೊಳ್ಳಲು ಕುಂ.ವೀರಭದ್ರಪ್ಪ ಮತ್ತು ಸಹಶಿಕ್ಷಕರು ಮಾಡಿದ ಪ್ರಯತ್ನ ಕಡಿಮೆಯೇನಲ್ಲ, ವೃತ್ತಿಯ ನಡುವೆ ಕನ್ನಡ ಎಂ.ಎ. ಮಾಡಿಕೊಂಡ ಕುಂ.ವೀರಭದ್ರಪ್ಪ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ೧೯೯೩-೧೯೯೪ ರಲ್ಲಿ ಸಂದರ್ಶಕ ಪ್ರಾಧ್ಯಾಪಕರೆಂದು ನೇಮಕಗೊಂಡದ್ದು ಅವರ ಪ್ರತಿಭೆಗೆ ಸಿಕ್ಕ ಮನ್ನಣೆಯಾಗಿದೆ.

ಹದಿನಾಲ್ಕು ವರ್ಷ ಗೂಳ್ಯಂನಲ್ಲಿ ಸೇವೆಸಲ್ಲಿಸಿದ ಕುಂ.ವೀರಭದ್ರಪ್ಪ ಅವರು ತಮ್ಮ ವೃತ್ತಿಯ ನಡುವಿನ ರಜಾದಿನಗಳಲ್ಲಿ ಸಿನಿಮಾ-ನಿರ್ದೇಶನ ಎಂದು ಗಾಂಧಿನಗರದಲ್ಲಿ ಸುತ್ತಾಟ, ಸಾಹಿತಿಗಳ ಒಡನಾಟ, ಹರಟೆ-ಚರ್ಚೆ, ಚಿತ್ರರಂಗದ ಒಳಹೊರಗಿನ ನೋಟದ ಜೊತೆಗೆ ಕುಂ.ವೀರಭದ್ರಪ್ಪ ಅವರ ಕತೆ-ಕಾದಂಬರಿ ಸಿನಿಮಾ ಆದವು. ನಂತರ ೧೯೯೮ ರಲ್ಲಿ ಹಿರೇಹಾಳಿಗೆ ವರ್ಗಾವಣೆಯಾಗಿ ಅಲ್ಲಿ ಹನ್ನೊಂದು ವರ್ಷ ಸೇವೆಸಲ್ಲಿಸಿ ನಿವೃತ್ತರಾದರು. ತಮ್ಮ ವೃತ್ತಿಬದುಕಿನ ಉದ್ದಕ್ಕೂ ಗ್ರಾಮೀಣ ಮಕ್ಕಳಿಗಾಗಿ ದುಡಿದ ಕುಂ.ವೀರಭದ್ರಪ್ಪನವರಿಗೆ ಅವರ ಬಗ್ಗೆ ಇದ್ದ ಕಾಳಜಿ, ಅಂತಃಕರಣ ಅಪಾರ. ತಾವು ಇದ್ದ ಊರಿನ ಬಗ್ಗೆ ಅವರಿಗಿದ್ದ ತಾದ್ಯಾತ್ಮಕತೆ, ಸಾಮಾಜಿಕ ಹೊಣೆಗಾರಿಕೆ ಅವರ ಕತೆಗಳನ್ನು ಮೀರಿಸುವಂತಿದೆ. ಕುಂ.ವೀರಭದ್ರಪ್ಪ ಅವರೇ ಹೇಳುವಂತೆ **“ಅವರ ಆಂಧ್ರದ ಅನುಭವಗಳು ಹಂಚಿಕೊಳ್ಳುವುದರ ಮೂಲಕ ಹೃದಯವನ್ನು ಹಗುರಮಾಡಿಕೊಳ್ಳಲು ಗೆಳೆಯರ ತಲಾಷೆ ನಡೆಸಿ ನಿರಾಶನಾಗುತ್ತಿದ್ದೆನು. ಅನುಭವದ ಭಾರದಿಂದ ಹೃದಯವೆಲ್ಲಿ ಸ್ಫೋಟಿಸುವುದೋ ಎಂಬ ಭಯದಿಂದ ಕತೆ-ಕವಿತೆಗಳಿಗೆ**

ಮೊರೆಹೋಗುವುದು ಅನಿವಾರ್ಯವಾಗಿತ್ತು. ವಸ್ತುಗಳಿಗೆ ಬರವಿರಲಿಲ್ಲ. ಪ್ರತಿಯೊಂದು ಅನುಭವವೂ ನನ್ನನ್ನು ತರುಬಿ ತಮ್ಮ ಬಗ್ಗೆ ಬರೆಯುವಂತೆ ಅಂಗಲಾಚುತ್ತಿದ್ದವು ಎಂದಿದ್ದಾರೆ."[೧೦] ಕರ್ನಾಟಕದಲ್ಲಿ ಶಿಕ್ಷಕವೃತ್ತಿ ದೊರಕಿದ್ದರೆ ಕುಂ.ವೀರಭದ್ರಪ್ಪ ಕತೆಗಳು ಕರ್ನಾಟಕದ ಗಡಿ ಮೀರುತ್ತಿರಲಿಲ್ಲವೇನೋ? ಕರ್ನಾಟಕಾಂಧ್ರದ ಬದುಕಿನ ವಿಭಿನ್ನ ನೋಟ ಓದುಗರಿಗೆ ದೊರಕಿದ್ದರಲ್ಲಿ ತೆಲುಗುಭಾಷೆಯ ಸಿಂಚನದ ಅವರ ಕನ್ನಡದ ಕತೆಗಳಿಗೆ ಆಂಧ್ರಪ್ರದೇಶದ ವೃತ್ತಿ ಬದುಕು ಮುಖ್ಯವೆನಿಸುತ್ತದೆ.

೪.೨.೪ ಸಾಂಸಾರಿಕ ಬದುಕು :

ಕುಂ.ವೀರಭದ್ರಪ್ಪ ಅವರ ಸಾಂಸಾರಿಕ ಬದುಕು ಅವರ ಸಾಹಿತ್ಯಕ್ಕೆ ಪ್ರೇರಕ ಶಕ್ತಿಯಾಗಿತ್ತು. ಕುಟುಂಬ ಪ್ರೇಮಿಯಾದ ಕುಂ.ವೀರಭದ್ರಪ್ಪ ಶಿಕ್ಷಕರಾಗಿ ನೆಲೆನಿಂತ ಮೇಲೆ ಹಾಸನದ ಯಮಸಂಧಿಯ ಅರೆಮಲೆನಾಡಿನ ಅನ್ನಪೂರ್ಣ ಅವರನ್ನು ೧೯೮೩ರಲ್ಲಿ ಮದುವೆಯಾದರು. ಸಮೃದ್ಧ ಪ್ರಕೃತಿಮಡಿಲಲ್ಲಿ ಬೆಳೆದ ಅನ್ನಪೂರ್ಣ ಮೂಲಸೌಕರ್ಯಗಳಿಲ್ಲದ ಸಮಸ್ಯೆಗಳ ಅಗರವಾಗಿದ್ದ ಕುಗ್ರಾಮದ ಬೆಂಗಾಡಿನ ಬದುಕಿನಲ್ಲೂ ಪತಿಯ ಬರವಣಿಗೆಗೆ ಸ್ಫೂರ್ತಿಯಾದರು. ಸಾತ್ವಿಕ ಸ್ವಭಾವದ, ಸರಳ ಸಜ್ಜನಿಕೆಯ ಅನ್ನಪೂರ್ಣ ಕುಂ.ವೀರಭದ್ರಪ್ಪ ಅವರ ಬದುಕನ್ನು ಅರ್ಥಪೂರ್ಣಗೊಳಿಸಿದರು. ಎರಿಕ್ ಫ್ರಾಮ್ ವಿಶ್ಲೇಷಿಸುವಂತೆ ಸಂಗಾತಿಯಾಗಿ ತಾಯ್ತನ ತೋರಿದವರು.

ಕುಂ.ವೀರಭದ್ರಪ್ಪ ಅವರೇ ಹೇಳುವಂತೆ, ಗೃಹಸ್ಥಾಶ್ರಮ ಅವರಿಗೆ ಸರ್ಕಸ್‌ಡೇರೆಯಾಗಿ ಕಂಡಿತಲ್ಲದೆ, ಆ ಸಂಸಾರ ತೂಗಿಸಲು ಕೈಯಲ್ಲಿ ಹಣವಿಲ್ಲದೆ ಪಡಿಪಾಟಲು ಪಟ್ಟಿದ್ದೇ ಹೆಚ್ಚು. ಸಂಸಾರಿಯಾಗುವ ಮೊದಲೇ ಸಾಹಿತಿಯಾಗಿ ಗುರುತಿಸಲ್ಪಟ್ಟಿದ್ದ ಕುಂ.ವೀರಭದ್ರಪ್ಪ ಅವರು ಕತೆ ಕಾದಂಬರಿ ಬರೆದಿದ್ದಲ್ಲದೆ ಅಕಾಡಮಿ ಅವಾರ್ಡ್‌ನ್ನು ಪಡೆದಿದ್ದರು. ನೌಕರಿ ಇರುವ ಊರಿನಲ್ಲಿ ಟಿಕಾಣಿ ಹೂಡುವ ಜಾಯಮಾನದ ಕುಂ.ವೀರಭದ್ರಪ್ಪ ವಾಗಿಲಿಯಲ್ಲಿ ಸಂಸಾರ ಹೂಡಿದಾಗ ಪತ್ನಿ ಅನ್ನಪೂರ್ಣರಿಗೆ ವಾಗಿಲಿಯ ಪರಿಸರ ಅಸಹನೀಯವಾಗಿ ಬದುಕು ದುಸ್ತರವೆನಿಸಿ ಬೇರೆ ಊರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಒತ್ತಾಯಿಸಿದರು. ಪತ್ನಿಯ ಒತ್ತಾಯಕ್ಕೆ ಮಣಿಯಬೇಕಾಗಿ ಬಂದ ಕುಂ.ವೀರಭದ್ರಪ್ಪ ಹೈಸ್ಕೂಲ್ ಶಿಕ್ಷಕರಾಗಿ ಗೂಳ್ಯಂಗೆ ತೆರಳಬೇಕಾಗಿ ಬಂದಾಗ ತಮ್ಮನ್ನು ಸೃಜನಶೀಲವಾಗಿ ರೂಪಿಸಿದ ವಾಗಿಲಿಯನ್ನು ಸಂಸಾರದ ದೃಷ್ಟಿಯಿಂದ ಅನಿವಾರ್ಯವಾಗಿ ತೊರೆಯಬೇಕಾಯಿತು.

---

೧೦ ಅದೇ, ಪು : ೨೧೪.

೧೯೮೮ ರ ನವೆಂಬರ್ ತಿಂಗಳಲ್ಲಿ ವಾಗಿಲಿಯಿಂದ ಗೂಳ್ಯಂಗೆ ಪತ್ನಿಯೊಂದಿಗೆ ತೆರಳುವ ದಿನವೇ ಇಂದಿರಾಗಾಂಧಿಯವರ ಕಗ್ಗೊಲೆಯಾಗಿದ್ದು ಕಾಕತಾಳೀಯವಾಗಿ ಮತ್ತೆ ಪಡಿಪಾಟಲು ಪಟ್ಟು ಊರು ಸೇರಿದರು. ಗೂಳ್ಯಂನ ಪರಿಸರ ಅನ್ನಪೂರ್ಣ ಅವರು ಎಣಿಸಿದಂತೆ ಸಮಾಧಾನಕರವಾಗಿರಲಿಲ್ಲ. ಕೊಲೆ-ಸುಲಿಗೆಗಳ ಭಯದಿಂದ ಅವರಿಗೆ ಭಯಾನಕ ಲೋಕದಲ್ಲಿ ಸಂಸಾರ ನಡೆಸುವಂತಾಯಿತು. ಕೆಲವೊಮ್ಮೆ ಅವರಿಗೆ ಸುಡುಗಾಡೆನಿಸಿದ್ದೂ ಉಂಟು. ಆಂಧ್ರಪ್ರದೇಶದ ಶಿಕ್ಷಕವೃತ್ತಿಯ ಪಗಾರವು ಕೋರ್ಟು-ಕಛೇರಿ ಇತ್ಯಾದಿ ಕಾರಣಗಳಿಂದ ಸಾಲದಿದ್ದಾಗ ತಿಂಗಳಿಗೆ ಒಂದೆರಡು ಕತೆಯ ಪ್ರಕಟನೆಯ ಸಂಭಾವನೆಯಿಂದ ಸಂಸಾರವನ್ನು ಹೇಗೋ ಸರಿದೂಗಿಸುತ್ತಿದ್ದರು. ಕುಂ.ವೀರಭದ್ರಪ್ಪ ಅವರ ತಂದೆಯ ಆಸ್ತಿಯ ಮೇಲೆ ಮಾಡಿದ್ದ ಸಾಲ ತೀರಿಸುವ ಪ್ರಯತ್ನದಲ್ಲಿ ಕುಂ.ವೀರಭದ್ರಪ್ಪ ತಮ್ಮಂದಿರ ಅಸಹಕಾರ, ನಿಂಗಮ್ಮಜ್ಜಿಯ ಅತಿಯಾದ ನಿರೀಕ್ಷೆಗಳ ನಡುವೆ ಬೆಂಬಲವಾಗಿ ನಿಂತ ಸಹಧರ್ಮಿಣಿ ಅನ್ನಪೂರ್ಣ. ಆದರೂ ಗೂಳ್ಯಂನ ಕೆಲ ಹೆಂಗಸರ ನಡವಳಿಕೆಯಿಂದ ತಾಳ್ಮೆ ಕಳೆದುಕೊಂಡದ್ದು ಉಂಟು. ಕುಂ.ವೀರಭದ್ರಪ್ಪ ಅವರ ವೃತ್ತಿ-ಬರವಣಿಗೆ, ಓಡಾಟ, ಅವರ ಬಹುಶ್ರುತ ಚಟುವಟಿಕೆಗಳ ನಡುವೆ ಕುಟುಂಬವನ್ನು ಸಮರ್ಥವಾಗಿ ಸರಿದೂಗಿಸಿಕೊಂಡು ಹೋದವರು ಅನ್ನಪೂರ್ಣ. 'ಅನ್ನಪೂರ್ಣ' ನಿವಾಸದ ದಂಪತಿಗಳಿಗೆ ಪುರುರವ, ಶಾಲಿವಾಹನ ಮತ್ತು ಪ್ರವರ ಎಂಬ ಮೂವರು ಪುತ್ರರು. ಅವರಿಬ್ಬರೂ ಒಬ್ಬರ ಬದುಕನ್ನು ಮತ್ತೊಬ್ಬರು ತುಂಬಿದವರು.

೪.೨.೫ ಕುಂ.ವೀರಭದ್ರಪ್ಪ ಅವರ ಸಾಹಿತ್ಯ ಸಾಧನೆ :

ಸಾಹಿತಿಯೊಬ್ಬರ ಕೃತಿಗಳೆಲ್ಲವೂ ಪ್ರಸಿದ್ಧ ಆಗಿರಬಹುದು ಅಥವಾ ಆಗಿಲ್ಲದೆಯೂ ಇರಬಹುದಾದರೂ ಅವರ ಸಾಹಿತ್ಯದ ಹರವು ಓದುಗನಿಗೆ ಅವಶ್ಯವೆನಿಸುತ್ತದೆ. ಹಳಗನ್ನಡ, ಆಧುನಿಕ ಕನ್ನಡ ಸಾಹಿತ್ಯ ಮತ್ತು ಇಂಗ್ಲಿಷ್ ಸಾಹಿತ್ಯಗಳ ಆಳವಾದ ಮತ್ತು ಸೂಕ್ಷ್ಮವಾದ ಓದಿನ ಹಿನ್ನಲೆಯಲ್ಲಿ ಸಾಹಿತ್ಯಕೃಷಿಯಲ್ಲಿ ಕವನಸಂಕಲನಗಳು, ಕಥಾಸಂಕಲನಗಳು ಕಾದಂಬರಿಗಳು, ವಿಮರ್ಶೆ, ಜೀವನಚರಿತ್ರೆಗಳು, ಅನುವಾದಿತ ಕೃತಿಗಳು ಹೀಗೆ ಸೃಜನ ಹಾಗೂ ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಕುಂ.ವೀರಭದ್ರಪ್ಪ ಅವರ ಸಾಹಿತ್ಯ ಸಂಖ್ಯಾತ್ಮಕವಾಗಿ ಗುಣಾತ್ಮಕವಾಗಿ ಸಾಕಷ್ಟು ಸಮೃದ್ಧಿಯಾಗಿದ್ದು ಅನುಭವ ಗ್ರಹಿಕೆ ಮತ್ತು ಆಲೋಚನಾ ವಿಧಾನದ ವಿಶಿಷ್ಟ ನೆಲೆಯಲ್ಲಿ ಹೊಸ ಆಯಾಮ ಒದಗಿಸುತ್ತಾ ನಡೆದಿದೆಯೆನ್ನಬಹುದು.

ಕುಂ.ವೀರಭದ್ರಪ್ಪ ಅವರು ಸಾಹಿತ್ಯ ಸೃಷ್ಟಿಗೆ ಸಂಬಂಧಿಸಿದಂತೆ "ನಮ್ಮ ಪರಂಪರೆಯನ್ನು, ಇತಿಹಾಸವನ್ನೂ ಆಧುನಿಕವಾಗಿ ಹೇಗೆ ನೋಡಬಹುದು, ಹೇಗೆ ಪುನರ್ ವಿಮರ್ಶಿಸಬಹುದು, ಪುನರ್ ರೂಪಿಸಬಹುದು ಎಂಬುದರ ಕಡೆ ಇಂದಿನ ಲೇಖಕ ಆಲೋಚಿಸುವುದು ಮುಖ್ಯ ಜೊತೆಗೆ ನಮ್ಮ ಜನಪದ ಸಾಹಿತ್ಯವನ್ನೂ ಮೌಖಿಕ ಪರಂಪರೆಯನ್ನೂ ಸಹ ಹಳೆ ಬೇರಿನ ಸಹಾಯವಿರದಿದ್ದಲ್ಲಿ ಹೊಸಚಿಗುರಿಗೆ ಅರ್ಥವೇ ಇರುವುದಿಲ್ಲ. ಅಂತಃಕರಣ ಸ್ಥಾಯಿಯಾದ ನಮ್ಮ ಹಳೆಗನ್ನಡ ಸಾಹಿತ್ಯ ಅರ್ಥಮಾಡಿಕೊಳ್ಳದ ಹೊರತು, ಅರಗಿಸಿಕೊಳ್ಳದ ಹೊರತು, ಹೊಸಸೃಷ್ಟಿ ಕಡೆ ಕೈಚಾಚುವುದು ಎಷ್ಟರ ಮಟ್ಟಿಗೆ ಸರಿ?[೧೧] ಎಂಬ ರಹಮತ್ ತರೀಕೆರೆಯವರ ಮಾತು ಉಲ್ಲೇಖನೀಯವಾಗಿದೆ.

ಕಾವ್ಯದ ಮೂಲಕ ಸಾಹಿತ್ಯ ಸೃಷ್ಟಿಗೆ ತೊಡಗಿದ ಕುಂ.ವೀರಭದ್ರಪ್ಪ ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡಿದ್ದು ಕತೆಗಾರರೆಂದೇ. ಕತೆಯ ನಂತರ ಕಾದಂಬರಿಯಲ್ಲಿ ತೊಡಗಿಸಿ-ಕೊಂಡವರು. ಕುಂವೀ ಅವರು ೧೯೭೯ ರಲ್ಲಿ ಮೊದಲ ಕವನ ಸಂಕಲನ 'ದೀವಿಸೀಮೆಯ ಹಾಡು' ಅನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೨೭ ಕವನಗಳಿದ್ದು ಅಸಹಾಯಕರ ಬದುಕು-ಬವಣೆ, ಸಾಮಾಜಿಕ ಅಸಮಾನತೆ ಕುರಿತು ಚಿತ್ರಿಸಲಾಗಿದೆ. ಮಾನವ ಬದುಕಿನ ವಿಶ್ಲೇಷಣೆ, ಕೆಳವರ್ಗದವರ ನಿಕೃಷ್ಟ ಬದುಕಿನ ಧ್ವನಿಯಾಗಿ ಕವನ ರಚಿಸಿದ್ದಾರೆ. 'ನೀನಿಲ್ಲದ ಮನೆ' ಎರಡನೇ ಕವನಸಂಕಲನವಾಗಿದೆ.

ಸಾಮಾಜಿಕ ಬದುಕಿನ ವಿವಿಧ ಆಯಾಮಗಳನ್ನು ವಸ್ತುವಾಗಿಸಿಕೊಂಡ ಕುಂ.ವೀರಭದ್ರಪ್ಪ ಕಾದಂಬರಿಗಳನ್ನು ಬರೆದಿದ್ದಾರೆ. ಕಪ್ಪು (೧೯೮೧), ಆಸ್ತಿ (೧೯೮೩), ಬೇಲಿ ಮತ್ತು ಹೊಲ (೧೯೮೩), ಕೆಂಡದ ಮಳೆ (೧೯೮೬), ಮನಮೆಚ್ಚಿದ ಹುಡುಗಿ (೧೯೮೭), ಬೇಲಿಯ ಹೂಗಳು (೧೯೮೭), ಪಕ್ಷಿಗಳು (೧೯೮೭), ಪ್ರತಿದ್ವಂದಿ (೧೯೮೯), ಪ್ರೇಮವೆಂಬ ಹೊನ್ನುಡಿ (೧೯೮೯), ಕೊಟ್ರ ಹೈಸ್ಕೂಲಿಗೆ ಸೇರಿದ್ದು (೧೯೯೩), ಹನುಮ (೧೯೯೬), ಶ್ಯಾಮಣ್ಣ (೧೯೯೮), ಯಾಪಿಲ್ಲು (೨೦೦೧), ಅರಮನೆ (೨೦೦೬) ಕೆಲವು ಕಥೆಗಳು ವಿಸ್ತಾರಗೊಂಡು ಕಾದಂಬರಿಯಾಗಿ ಪ್ರಕಟಗೊಂಡಿವೆ. ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ಕುಂ.ವೀರಭದ್ರಪ್ಪ ಅವರು ಕೃಷಿಯನ್ನು ಕೈಗೊಂಡಿದ್ದಾರೆ. 'ರಾಹುಲ ಸಾಲಂಕೃತ್ಯಾಯನ', 'ಚಾಂಪ್ಲಿನ್', 'ಮನ್ಸೂರ ಸುಭದ್ರಮ್ಮ', 'ಸುಭಾಸಚಂದ್ರ ಭೋಸ', 'ಶ್ರೀಕೃಷ್ಣದೇವರಾಯ', ಜೀವನಚರಿತ್ರೆಗಳನ್ನು ರಚಿಸಿದ್ದಾರೆ.

---

೧೧ ಮಾತು ತಲೆಯೆತ್ತುವ ಬಗೆ, (ಸಂ) : ರಹಮತ್ ತರೀಕೆರೆ, ಪ್ರಸಾರಾಂಗ, ಹಂಪಿ, ೨೦೧೧, ಪು : ೩೧೦.

ಕುಂ.ವೀರಭದ್ರಪ್ಪ ಅವರು ೨೫೦ ಕ್ಕೂ ಹೆಚ್ಚು ಕತೆಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಮಲೆಯಾಳಂ ಕವಿ ಕೆ.ಜಿ. ಶಂಕರಪಿಳ್ಳೆಯವರ 'ಬಂಗಾಳ' ಕವನವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಯುಗೋಸ್ಲೋವ್ ಕವಿಯ ಜ್ಯುರೇಕಾಸ್ತಲಾವರ್ ಕವನ ಸಂಕಲವನ್ನು 'ಅವರು' ಹೆಸರಿನಲ್ಲಿ ಅನುವಾದಿಸಿದ್ದಾರೆ.

ಕಥಾಸಾಹಿತ್ಯ ಕುರಿತು ಒಲವುಂಟಾದ ಬಗ್ಗೆ ಕುಂ.ವೀರಭದ್ರಪ್ಪ **"ನಾನು ಮೊದಲು ಕಾವ್ಯ ಬರೆದೆ, ಕ್ರಮೇಣ ಗೊತ್ತಾಯ್ತು ಕಾವ್ಯದ ಮೂಲಕ ಒಂದು ಹಿಡಿ ಬರಹಗಾರರನ್ನು ಮುಟ್ಟಬಲ್ಲನೇ ಹೊರತು ಜನಸಾಮಾನ್ಯರ ಎದೆಯನ್ನು ಕಲಕಲಾರೆ ಅಂತ. ಆದ್ದರಿಂದ ಕಾವ್ಯ ಕೃಷಿ ಕಡಿಮೆ ಮಾಡಿ ಕಥೆ ಬರೆಯಲು ಶುರುಮಾಡಿದೆ. ನಂತರ ಕಾದಂಬರಿಗಳನ್ನು ಬರೆದೆ"**[೧೨] ಎಂದು ವಿವರಿಸುತ್ತಾರೆ.

"ದೇಸಿತನ ನಮ್ಮ ಮಣ್ಣಿಂದ ಹುಟ್ಟಬೇಕು. ಆ ಕೃತಿಯು ಕಲಾತ್ಮಕತೆಯಲ್ಲಿ ಅರಳಿ ಘಮುಲು ಪಡೆಯಬೇಕು, ಶ್ರೇಷ್ಠ ರಚನೆಗಳೆಲ್ಲಾ ದೇಸಿಯವೇ! ಆ ಕಾಲ, ಸ್ಥಳಗಳು ಒಟ್ಟಿಗೆ ಸಮರಸ-ಗೊಂಡಿರುತ್ತವೆ"[೧೩] ಎಂಬ ಬಾಲಚಂದ್ರ ನೆಮಾಡೆಯವರ ಮಾತಿನಂತೆ ಕುಂ.ವೀರಭದ್ರಪ್ಪ ಅವರ ಕತೆಗಳು ದೇಸಿಸತ್ವದಲ್ಲಿ ಓದುಗರನ್ನು ಸೆಳೆಯುತ್ತಿರುವ ನಮ್ಮ ನಡುವಿನ ಮಹತ್ವದ ಕತೆಗಾರರಾಗಿದ್ದಾರೆ.

ಕುಂ.ವೀರಭದ್ರಪ್ಪ ಅವರ ಮೊದಲಕಥೆ 'ಕೂಳು' ಮಯೂರ ಪತ್ರಿಕೆಯಲ್ಲಿ ೧೯೭೫ ರಲ್ಲಿ ಪ್ರಕಟಗೊಂಡಿತು. ದಣಿವಿಲ್ಲದ ಬರಹಗಾರರೆಂದೇ ಹೇಳಬಹುದಾದ ಕುಂ.ವೀರಭದ್ರಪ್ಪ ಇನ್ನಾದರೂ ಸಾಯಬೇಕು (೧೯೮೨) ಡೋಮ ಮತ್ತಿತರ ಕಥೆಗಳು (೧೯೮೫) ಕುಂ.ವೀ ಕಥೆಗಳು(೧೯೮೫) ಭಗವತಿ ಕಾಡು (೧೯೯೦) ನಿಜಲಿಂಗ (೧೯೯೪) ಸುಶೀಲೆ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ (೧೯೯೪) ಅಪೂರ್ವ ಚಿಂತಾಮಣಿ ಕಥೆ (೧೯೯೪) ಭಳಾರೆ ವಿಚಿತ್ರಂ (೨೦೦೪) ಬರಿ ಕಥೆಯಲ್ಲೋ ಅಣ್ಣ (೨೦೧೦).

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಭಿನ್ನ ನೆಲೆಗಳಲ್ಲಿದ್ದ ಕತೆಗಾರರು. ಅವರು ಬೆಳೆದ ಪರಿಸರ, ಅವರು ಕತೆಯಲ್ಲಿ ಕಟ್ಟಿಕೊಟ್ಟ ಪರಿಸರ, ಬಳಸಿದ ಭಾಷೆ ವಿಭಿನ್ನವಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಓದು-ಬರಹವನ್ನು ವಿದ್ಯಾರ್ಥಿ ದೆಸೆಯಲ್ಲೇ ಆರಂಭಿಸಿದವರು.

---

೧೨ ಮುಂಜಾನೆ ಕನ್ನಡ ದಿನಪತ್ರಿಕೆ, ಶಿವಪ್ರಕಾಶ ಎಚ್.ಕೆ, ೧೩.೫.೧೯೮೪.

೧೩ ಬಾಲಚಂದ್ರ ನೇಮಾಡೆ. ಪ್ರಜಾವಾಣಿ, ೧೫.೩.೨೦೧೫, ಸಾಪ್ತಾಹಿಕ ಪುರವಣಿ.

ಇಬ್ಬರೂ ಬಾಲ್ಯದಲ್ಲೇ ಚುರುಕುತನದಿಂದ ತಮ್ಮ ವಲಯದಲ್ಲಿ ಗುರುತಿಸಿಕೊಂಡಿದ್ದವರು. ಸಾಹಿತ್ಯಾಭಿರುಚಿ ಬಾಲ್ಯದಲ್ಲೇ ಅಂಟಿಕೊಂಡಿದ್ದು ಜಾನಪದ ಮತ್ತು ಶಿಷ್ಟ ಸಾಹಿತ್ಯಗಳೆರಡೂ ಅವರ ಮನೋಧರ್ಮವನ್ನು ಹದಗೊಳಿಸಿದ್ದವು. ರಾಮಣ್ಣ ಕಾವೇರಿ ನದಿಯ ಅಸ್ಮಿತೆಯ ಪ್ರಭಾವಳಿಯ ಸಮೃದ್ಧ ಮಂಡ್ಯ ಜಿಲ್ಲೆಯವರು. ಮಂಡ್ಯದ ಸಂಸ್ಕೃತಿಯ ಪ್ರಭಾವ ಅವರ ಬೌದ್ಧಿಕ ಮತ್ತು ಸಾಮಾಜಿಕ ಪ್ರೇರಣೆಗೆ ಆ ನೆಲೆಯಿಂದಲೇ ಅವರಿಗೆ ಬಂದಿದೆ. ಕುಂವೀ ಹೈದರಾಬಾದ್ ಕರ್ನಾಟಕದ ಒಣಭೂಮಿ ಪ್ರದೇಶದವರು. ಪಕ್ಕದಲ್ಲೇ ನದಿ ಇದ್ದರೂ ತಮ್ಮ ಹೊಲಕ್ಕೆ ಏಕೆ ನೀರು ಹರಿಯುತ್ತಿಲ್ಲ ಎಂದು ಕೇಳದ ಮುಗ್ಧ ಜನರು. ಕೆರೆ-ಬಾವಿ ಆಶ್ರಯಿಸಿ ನದಿಜೊತೆ ಸಂಬಂಧ-ಹೋರಾಟ ಕಡಿಮೆಯೆನ್ನಬಹುದು. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಬಾಲ್ಯದಲ್ಲಿ ಅಜ್ಜಿ ಮತ್ತು ಹಿರಿಯರ ಪ್ರೀತಿ ಮಮತೆಯಲ್ಲಿ, ಬೆಳೆದವರು. ಅವರಿಂದ ಕತೆಕೇಳುವ, ಪದಗಳನ್ನು ಕಟ್ಟಿಹಾಡುವ ವಾತಾವರಣದಲ್ಲಿ ಇದ್ದವರು. ಇಬ್ಬರೂ ಬರಹಗಾರರಾಗಲೂ ಬಾಲ್ಯದ ಪ್ರೇರಣೆ ಮುಖ್ಯ ವಿಚಾರವಾಗಿದೆ.

ಬಾಲ್ಯದಲ್ಲಿದ್ದ ಬಂಡಾಯದ ಮನೋಧರ್ಮ ಇಬ್ಬರಲ್ಲೂ ನಂತರ ಪ್ರಖರವಾಗುತ್ತಾ ಹೋಯಿತು. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕಟ್ಟಿಕೊಟ್ಟ ಬರಹ ಪ್ರಾರಂಭದಲ್ಲಿ ಏಕಮುಖವಾಗಿದ್ದರೂನಂತರ ಬಹುಮುಖವಾಗಿ ಸಾಮಾಜಿಕ, ಸಾಂಸ್ಕೃತಿಕ, ನೈತಿಕ, ಕ್ರಾಂತಿಕಾರಿನೆಲೆಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಇಬ್ಬರೂ ಸಮಾಜಕ್ಕೆ ಒಳಿತನ್ನು ಬಯಸಿ, ನ್ಯೂನತೆಯನ್ನು ಗುರುತಿಸುವ ಪ್ರಯತ್ನದಲ್ಲಿ ತೊಡಗಿದವರು.

ಈ ಹಿನ್ನೆಲೆಯಲ್ಲಿ ಇಬ್ಬರೂ ಬರಹಗಾರರ ಬದುಕು-ಬೆಳವಣಿಗೆ ಗಮನಿಸಿದಾಗ ಕತೃಕೇಂದ್ರಿತವಾದರೂ ಕೃತಿಕೇಂದ್ರಿತವಾಗಿ ಭಿನ್ನ ಹಿನ್ನೆಲೆಯ ಲೇಖಕರಾಗಿದ್ದಾರೆ. ಇಬ್ಬರೂ ಕಟ್ಟಿಕೊಟ್ಟ ಪರಿಸರ, ಭಾಷೆಯಲ್ಲಿ ಹಿನ್ನಲೆ ಅತಿಮುಖ್ಯ ಅಂಶವೆನಿಸುತ್ತದೆ. ರಾಮಣ್ಣ ಅವರಿಗೆ ಶ್ರೀಮಂತ ಸಾಂಸ್ಕೃತಿಕ ಹಿನ್ನಲೆ ಇದ್ದರೆ ಕುಂ.ವೀರಭದ್ರಪ್ಪ ಅವರಿಗೆ ಹಸಿವು ಮತ್ತು ಬಡತನದ ಹಿನ್ನಲೆ ಇದ್ದು ಆ ನೆಲೆಯಲ್ಲಿ ಕತೆಗಳನ್ನು ಕಟ್ಟಿಕೊಡುತ್ತಾರೆ.

ಅಧ್ಯಾಯ : ೫

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯಪ್ರಜ್ಞೆಯ ವಿಭಿನ್ನ ನೆಲೆಗಳ ತೌಲನಿಕ ವಿವೇಚನೆ

ಅಧ್ಯಾಯ – ೫

ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯಪ್ರಜ್ಞೆಯ ವಿಭಿನ್ನ ನೆಲೆಗಳ ತೌಲನಿಕ ವಿವೇಚನೆ

೫.೧ ಸಾಮಾಜಿಕ ನೆಲೆ

ಸಾಹಿತ್ಯ ಸಮಾಜದ ಪ್ರಜ್ಞೆಯನ್ನು ಜಾಗೃತಗೊಳಿಸಿ ಮಾನವರನ್ನು ಮಾನವರನ್ನಾಗಿಸಿ ಅರ್ಥಪೂರ್ಣವಾದ ಸಂಬಂಧಗಳನ್ನು ಬೆಳೆಸಿ ಗಟ್ಟಿಗೊಳಿಸುತ್ತದೆ. ಮನಸ್ಸಿನ ಕಲ್ಮಶಗಳನ್ನು ಕರಗಿಸುತ್ತ ಸಾಮಾಜಿಕ ಬದುಕನ್ನು ಉತ್ತಮಗೊಳಿಸುತ್ತಾ ಅಂತರಂಗದ ಖಾಲಿತನವನ್ನು ದೂರವಾಗಿಸಿ ಸೃಜನಾತ್ಮಕ ಚೈತನ್ಯವನ್ನು ನೀಡುತ್ತದೆ. ಸಾಹಿತ್ಯ ಮನುಷ್ಯನನ್ನು ಸಹೃದಯರನ್ನಾಗಿಸಿ, ಆತನ ಮಾನಸಿಕ ಆರೋಗ್ಯ ಕಾಪಾಡುತ್ತಾ ಇಂದಿನ ಗಣಕ ಯುಗದಲ್ಲಿ ಆಪ್ತಭಾವ ಮೂಡಿಸಬಲ್ಲದು.

ಸಾಹಿತ್ಯ ಮೊದಲು ಲಕ್ಷಿಸಬೇಕಾದದ್ದು ಮೂಲಭೂತವಾಗಿ ಸಾಮಾಜಿಕ ಮನುಷ್ಯನನ್ನು ಎಂಬನಿಲುವು ಇತ್ತೀಚೆಗೆ ಗಟ್ಟಿಗೊಂಡಿದೆ. ಆತನನ್ನು ಇನ್ನಿತರ ಸಾಧ್ಯತೆಗಳ ಚೌಕಟ್ಟಿನಲ್ಲಿ ಇರಿಸಿ ನೋಡುವುದನ್ನು ಅರ್ಥೈಸಬೇಕಾಗಿದೆ. ಮನುಷ್ಯನ ಸಾಮಾಜಿಕ ವಾಸ್ತವ ಎಷ್ಟು ಮುಖ್ಯವೋ, ಅವನು ಆಂತರಿಕವಾಗಿ ಏರಬೇಕಾದ ಎತ್ತರಗಳು ಇನ್ನೂ ಮುಖ್ಯವೆಂದು ಪರಿಗಣಿಸಬೇಕಾಗಿದೆ. ಸಾಮಾಜಿಕ ಕಳಕಳಿಯ, ಬರಹಗಾರರಿಗೆ ಅವರ ಕಣ್ಣೆದುರಿನ ಸಮಾಜದ ಘಟಕದಲ್ಲಿರುವ ಮನುಷ್ಯ ಮುಖ್ಯನಾಗುತ್ತಾನೆ. ಮನುಷ್ಯನ ನಿಜವಾದ ಸಾಮಾಜಿಕ ವಾಸ್ತವಗಳಾದ ಬಡತನ, ಶೋಷಣೆ, ಅಸಮಾನತೆ, ವರ್ಣಭೇದ, ಲಿಂಗ ತಾರತಮ್ಯ ಸಮಾಜದಲ್ಲಿದ್ದು ಅದನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ.

ಸಾಹಿತಿಯೊಬ್ಬರು ತಮ್ಮ ಬದುಕಿನ ಸನ್ನಿವೇಶದಲ್ಲಿ ಕಂಡುಕೊಳ್ಳುವ ವಾಸ್ತವ ಸಂಗತಿಗಳನ್ನು, ವೈಚಾರಿಕ ತಿಳುವಳಿಕೆಯನ್ನು ಸಾಮಾಜಿಕ ಪ್ರಜ್ಞೆಯೆನ್ನಬಹುದಾಗಿದೆ. ಸಾಮಾಜಿಕ ನಿಲುವು ಎನ್ನುವುದು ಸಾಮಾಜಿಕ ಪ್ರಜ್ಞೆಯ ಮುಂದುವರಿದ ಹಂತವೆನ್ನಲಾಗುತ್ತಿದೆ.

'ಬಹುಜನಹಿತಾಯ, ಬಹುಜನಸುಖಾಯ' ಎಂಬ ಪ್ರಾಚೀನ ಹಿತೋಕ್ತಿಯಂತೆಸಮಾಜದ ಚೌಕಟ್ಟಿನಲ್ಲಿ ಬದುಕುವುದೇ ಸಾಮಾಜಿಕತೆಯೆನಿಸಿದೆ. ಇಂದು ಸಮಾನತೆಯ ಮೌಲ್ಯದ ಉಳಿವಿಗಾಗಿ ಸಾಮಾಜಿಕ ಮನುಷ್ಯನ ಹುಡುಕಾಟದ ಹೊಸ ಸಾಧ್ಯತೆಗಳತ್ತ ನೋಡಬೇಕಾಗಿದೆ.

ವ್ಯಕ್ತಿ ಸಮಾಜದ ಅಂಗವಾಗಿರುವುದರಿಂದ ಅವನ ವೈಯಕ್ತಿಕ ಅನುಭವ, ಸಮಸ್ಯೆ ಸಮಾಜದ್ದೂ ಆಗಿದ್ದು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಸಾಮಾಜಿಕರಣಗೊಂಡ ಯಾವುದೇ ಒಂದು ಅಂಶ ಅರಿವಿನಿಂದ ಪ್ರಜ್ಞೆಯ ಹಂತಕ್ಕೆ ಹೋದಾಗ ಸಾಮಾಜಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ಶೋಧಿಸಿದಾಗ ಸಾಮಾಜಿಕ ಪ್ರಜ್ಞೆಯೆನಿಸುತ್ತದೆ. ಪ್ರಜ್ಞೆಯ ನೆಲೆಯಲ್ಲಿನ ಸಂವೇದನಾಶೀಲತೆಯನ್ನು ವೈಚಾರಿಕ ನೆಲೆಯಲ್ಲಿ ಕಂಡುಕೊಂಡಿದ್ದಾದರೆ ಅದು ಮೌಲ್ಯಯುತ ವಿಚಾರವೆನಿಸುತ್ತದೆ. ಒಂದು ನಿರ್ದಿಷ್ಟ ಪ್ರದೇಶದ ಸಾಹಿತ್ಯ ಅಲ್ಲಿನ ಸಾಮಾಜಿಕ ಬದುಕನ್ನು ಅನನ್ಯವಾಗಿ ಕಟ್ಟಿಕೊಡುತ್ತದೆ. ಅಲ್ಲದೆ ಬರಹಗಾರರ ಧೋರಣೆ, ಚಿಂತನೆಗಳೂ ಅಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಸಾಮಾಜಿಕತೆಯಲ್ಲಿ ಮಿಳಿತವಾಗಿರುವ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳು ಬದುಕಿನ ಸಮಗ್ರ ಚಿತ್ರಣ ನೀಡುತ್ತವೆ. ಸಮಷ್ಠಿ ಪ್ರಜ್ಞೆಯ ಸಾಮಾಜಿಕ ಪರಿಸರದಲ್ಲಿ ಮನುಷ್ಯ ತನ್ನ ಅಗತ್ಯತೆ ಅನಿವಾರ್ಯತೆಗನುಗುಣವಾಗಿ ಹಲವು ಸಂಘ-ಸಂಸ್ಥೆಗಳನ್ನು ರೂಪಿಸಿಕೊಳ್ಳುತ್ತಾನೆ. ಅದಕ್ಕೆ ಸಾಧ್ಯವಾದಷ್ಟು ನಿಷ್ಠನಾಗಿ ಸಾಗಲು ನಿರಂತರವಾಗಿ ಪ್ರಯತ್ನಿಸುತ್ತಾನೆ. ಬದುಕಿನ ಸಮಸ್ತ ವಿಚಾರಗಳೆನಿಸುವ ಧರ್ಮ, ಆಚಾರ-ವಿಚಾರ, ಕುಟುಂಬ, ನಂಬಿಕೆ, ಸಂಪ್ರದಾಯ, ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಮದುವೆ - ಮುಂಜಿ, ಉಡುಗೆ-ತೊಡುಗೆ, ಒಡವೆ-ವಸ್ತ್ರ, ಊಟ-ಉಪಚಾರಗಳೆಲ್ಲವೂ ಬಹುಭಾಷೆ, ಬಹುಸಂಸ್ಕೃತಿ, ಬಹುನಂಬಿಕೆಗಳ ನೆಲೆಯಲ್ಲಿ ಸಾಗುತ್ತಾ ಚಲನಶೀಲತೆಯನ್ನು ಪಡೆದುಕೊಂಡಿರುತ್ತದೆ.

ಕುವೆಂಪು ಅವರು, **"ಶರೀರ, ಮನಸ್ಸು, ಆತ್ಮ ಇವುಗಳ ಸಹಜ ಸಮರಸ ಸಂಸ್ಕೃತಿ ಮತ್ತು ಸಂಸ್ಕೃತಿ ಘನಿಕರಿಸಿ ನಾಗರೀಕತೆಯಾಗುತ್ತದೆ"**[೧] ಎನ್ನುತ್ತಾರೆ. ಮಾನವ ಬದುಕಿಗೆ ಸೀಮಿತವಾಗಿರುವ ಸಂಸ್ಕೃತಿ ಸಮಾಜಕ್ಕೆ ವಿಶಿಷ್ಟವಾದ ಮೌಲ್ಯವಾಗಿದ್ದು ಪ್ರದೇಶಾನುಸಾರ ವಿಭಿನ್ನತೆಯಿಂದ ಕೂಡಿರುತ್ತದೆ. ಜನರಿದ್ದೆಡೆ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿ ದೇಶೀಯ ಜ್ಞಾನಪರಂಪರೆಯೂ ಆಗಿದ್ದು ಭಾಷಿಕ, ಸಾಂಸ್ಥಿಕ, ಪ್ರಾದೇಶಿಕ, ಸೈದ್ಧಾಂತಿಕ ಆಚರಣೆಯಲ್ಲಿ ಅನನ್ಯತೆಯಿಂದ ಕೂಡಿರುತ್ತದೆ. ಜನಜೀವನದಲ್ಲಿನ ಸೂಕ್ಷ್ಮವಾದ ಮತ್ತು ಸಂಕೀರ್ಣವಾದ ಸಂಗತಿಗಳನ್ನು ಸಂಸ್ಕೃತಿ ಅಧ್ಯಯನದಿಂದ ಅರಿಯಬಹುದು. ಸಂಸ್ಕೃತಿ ತನ್ನ ಗುರುತುಗಳನ್ನು ಸಮಷ್ಠಿ ಪ್ರಜ್ಞೆಯ ಮೂಲಕ ಪ್ರತಿಪಾದಿಸುತ್ತದೆ. ಸಮಕಾಲೀನ ನಾಗರೀಕತೆ, ಅಭಿವೃದ್ಧಿಯಲ್ಲೂ ಸಕಾರಾತ್ಮಕ ಸಾಂಸ್ಕೃತಿಕ ಅಂಶಗಳು ಇದ್ದು ಅವನ್ನು ಉಳಿಸಿಕೊಳ್ಳಬೇಕಾಗಿದೆ.

---

[೧] ಪುಟ್ಟಪ್ಪ ಕೆ.ವಿ. ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ, ಪು : ೧೯೬.

"ಮನಸ್ಸನ್ನು ಉದಾತ್ತಗೊಳಿಸುವ ಸಂಸ್ಕೃತಿ ಮಾನವಸಂಸ್ಕೃತಿಯೆಂದೇ ಅರ್ಥ ಸೂಚಿಸುವುದಲ್ಲದೆ ಸಂಸ್ಕೃತಿ, ಸಂಸ್ಕಾರ, ಸಂಸ್ಕರಣ ಒಂದೇ ಮಾತಿನ ರೂಪಗಳಾಗಿದ್ದರೂ ಆತ್ಮಸಂಸ್ಕೃತಿ ಬಹಳ ಮುಖ್ಯವೆನಿಸಿದ್ದು ಮನಸ್ಸನ್ನು ಶುದ್ಧಗೊಳಿಸಿ ಹದಗೊಳಿಸುವುದು ಆತ್ಮವಿಕಾಸವಾಗಿದೆ. ಸಂಸ್ಕೃತಿ ಎಂದರೆ ಮಾನವಸಂಸ್ಕೃತಿ ಎಂಬುದೇ ಸಾಧಾರಣವಾದ ಅರ್ಥ"[೨] ಎನ್ನಲಾಗಿದೆ. ಸಂಸ್ಕೃತಿ ಅಸಂಖ್ಯಾತಸ್ತರಗಳನ್ನು ಹೊಂದಿದ್ದು ವಿಭಿನ್ನ ನೆಲೆಯಲ್ಲಿ ಅಭಿವ್ಯಕ್ತಗೊಂಡು ತನ್ನ ಜೀವಸತ್ವ ಚಲನಶೀಲತೆಯಿಂದ ಸೃಜನಾತ್ಮಕ ಬದುಕನ್ನು ರೂಪಿಸುತ್ತದೆ. ಅಲ್ಲದೆ ಸಾಮಾಜಿಕ ಅವಶ್ಯಕತೆಯನ್ನು ಪೂರೈಸುತ್ತದೆ.

ಡಿ.ಆರ್. ನಾಗರಾಜ್ ಅವರು **"ಸಂಸ್ಕೃತಿ ದೈನಂದಿನ ಕ್ರಿಯೆಗಳ ಸಾಧಾರಣಲಯಗಳು ಅಸಾಧಾರಣ ಕ್ರಿಯೆಗಳ ಜೊತೆಗೆ ಬೇರ್ಪಡಿಸಲಾಗದಂತೆ ಬೆರೆತಾಗ ಹುಟ್ಟುವ ವ್ಯವಸ್ಥೆ. ಅದಕ್ಕೆ ಸಂಸ್ಕೃತಿಯೊಂದರಲ್ಲಿ ಪ್ರತಿದಿನದ ಹಿಟ್ಟು, ಹೋಳಿಗೆ, ಸಂಜೆಯ ಕಬ್ಬಡ್ಡಿ ಆಟ, ಸಂಕ್ರಾಂತಿಯ ಸಾಂಕೇತಿಕತೆ, ಬಯಲಾಟಗಳು ಮತ್ತು ವೃಕ್ಷ ಪೂಜೆಗಳೆಲ್ಲವೂ ಸೇರಿರುತ್ತದೆ. ಒಂದು ಸಂಸ್ಕೃತಿಯೆಂದರೆ ಆ ಜನಾಂಗದ ಜೀವನವಿಧಾನ"**[೩] ಎನ್ನುತ್ತಾರೆ. ಸಂಸ್ಕೃತಿ ಹತ್ತು-ಹಲವು ದಿಕ್ಕುಗಳ ಜ್ಞಾನದಿಂದ ವಿಸ್ತರಿಸಿಕೊಂಡಿದೆ. ಸಾಮಾಜಿಕ ಬದುಕಿನಲ್ಲಿ ಗಾಢ ಎಚ್ಚರವಿರುವ ಬರಹಗಾರ ಸಂಸ್ಕೃತಿಯಲ್ಲಿ ಹೊಸತನ್ನು ಹುಡುಕುತ್ತಾ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಹಂಬಲಿಸುತ್ತಾನೆ. ಸಂಸ್ಕೃತಿಯಲ್ಲಿ ಸಮಾಜ, ಸಾಮಾಜಿಕ ಚಿಂತನೆ ಮುಖ್ಯವೆನ್ನಬಹುದು.

ಕನ್ನಡ ಸಾಹಿತ್ಯ ಪರಂಪರೆ ಅದರಲ್ಲೂ ಆಧುನಿಕ ಕನ್ನಡ ಸಾಹಿತ್ಯ ಸಾಮಾಜಿಕ ಮೌಲ್ಯವನ್ನು ಹೆಚ್ಚಾಗಿ ಪ್ರತಿನಿದಿಸುತ್ತದೆ. ಕಥೆ, ಕಾದಂಬರಿ ಸಾಹಿತ್ಯ ಪ್ರಕಾರಗಳು ಹೆಚ್ಚಾಗಿ ಸಾಮಾಜಿಕ ಬದುಕನ್ನು ಕಟ್ಟಿಕೊಡುವುದರಲ್ಲಿ ಸಫಲವಾಗಿವೆ. ಸಾಮಾಜಿಕ ಬದುಕಿನ ಸಮಸ್ಯೆ, ತವಕ-ತಲ್ಲಣಗಳು ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮುಖ್ಯ ಭೂಮಿಕೆಯನ್ನು ಪಡೆದಿರುವುದು ವಿಶೇಷ. ಇವರ ಕತೆಗಳಲ್ಲಿ ಬಡತನ, ಹಸಿವು, ಶೋಷಣೆ, ನಿಕೃಷ್ಟ ಬದುಕಿನ ವಿಚಾರಗಳಿದ್ದು ತಳವರ್ಗದ ಬದುಕಿನ ಒಳನೋಟವನ್ನು ಕಾಣಿಸುತ್ತಾರೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕತೆಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ದಟ್ಟವಿವರಗಳನ್ನು ಕಾಣಬಹುದು. ಇವರ ಕಥೆಗಳಲ್ಲಿರುವ ಬಂಡಾಯ ಮನೋಧರ್ಮ, ವೈವಿಧ್ಯತೆ ಮತ್ತು ವೈರುಧ್ಯತೆ ಸಮಗ್ರತೌಲನಿಕ ಅಧ್ಯಯನಕ್ಕೆ ಕಾರಣವಾಗಿದೆ.

---

೨ ಎಲ್.ಎಸ್. ಶೇಷಗಿರಿರಾವ್, ವಸಂತ ಪ್ರಕಾಶನ, ೧೯೮೧, ಪು : ೨೧೬.

೩ ಎಂ.ಆರ್. ವಾಸವಿ (ಸಂ) ಒಳಗನ್ನಡಿ, ೨೦೧೧, ಪು : ೮.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ವಿಚಾರ ಏನು, ಎಂತಹುದು, ಅದು ಎಷ್ಟರಮಟ್ಟಿಗೆ ನಮ್ಮದು, ಸಾಮಾಜಿಕ ಬದಲಾವಣೆಯ ಬಗೆಗೆ ಕತೆಯ ಕಾಳಜಿ ಏನು, ಸಾಮಾಜಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ಕಟ್ಟಿಕೊಡುವ ಬಗೆ ಏನು ಎನ್ನುವುದನ್ನು ಕತೆಗಳ ಮೂಲಕ ತಿಳಿಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಕಾಣಬಹುದು.

ರಾಮಣ್ಣ ಅವರ ಬಹಳಷ್ಟು ಕತೆಗಳು ಮನುಷ್ಯನ ಅಂತರಂಗದಲ್ಲಿ ಸ್ಪಂದನೆಯನ್ನುಂಟು ಮಾಡುತ್ತದೆ. ಹೃದಯದಿಂದ ಹೃದಯ ತಲುಪುವ, ಬಾಂಧವ್ಯ ಬೆಸೆಯುವ ಕತೆಗಳಾಗಿವೆ. ಅವರ ಗದ್ದೆಸೀಮೆಯ ತುಂಬಿ ತಲೆದೂಗುವ ಭತ್ತದ ಗದ್ದೆಗಳ ಚಿತ್ರಣದ, ಪ್ರಕೃತಿ ಸಮೃದ್ಧಿಯ ಕತೆಗಳು ಮನಸ್ಸನ್ನು ಹಸಿರಿನಲ್ಲಿಯೇ ನಿಲ್ಲಿಸಿಬಿಡುತ್ತವೆ. ಪ್ರಕೃತಿ ಮತ್ತು ಮಾನವ ಸಂಬಂಧಗಳನ್ನು ಬೆಸೆಯುವ ಕತೆಗಳು ಮನುಷ್ಯ ಸಂಬಂಧ ಸವಕಲುಗೊಳ್ಳುತ್ತಿರುವ ದಿನಗಳಲ್ಲಿ ಸಾಮಾಜಿಕ ಹೊಣೆಹೊರಬಲ್ಲವಾಗಿವೆ.

ಕುಂ.ವೀರಭದ್ರಪ್ಪ ಅವರ ಕಥೆಗಳು ದಲಿತ ಬದುಕಿನ ದರ್ಶನಮಾಡಿಸುವ ಕಥೆಗಳಾಗಿವೆ. ತಳವರ್ಗದ ಜನರ ಹಸಿವು, ಬಡತನ, ಮೌಢ್ಯತೆ ಮತ್ತು ಮೇಲ್ವರ್ಗದವರ ಶೋಷಣೆ ನಡುವೆ ಮಿನುಗುವ ಮಾನವೀಯತೆಯನ್ನು ಕತೆಗಳಲ್ಲಿ ಕಾಣಬಹುದು. ಪ್ರತಿರೋಧ ಸಂಘರ್ಷಗಳ ನಡುವೆ ಅವರ ಬದುಕಿನ ಸಫಲತೆ – ವಿಫಲತೆಗಳನ್ನು ಕಟ್ಟಿಕೊಡುತ್ತಾರೆ. ಹಸಿವಿನ ಭೀಕರ ಚಿತ್ರಣದಲ್ಲಿ ಸಾಮಾಜಿಕ ಅಸಮಾನತೆ ದೂರವಾಗಬೇಕೆಂಬ ಲೇಖಕರ ಆಶಯವನ್ನು ಬಂಡಾಯದನಿಯಾಗಿ ಕಾಣಬಹುದು.

ಒಮ್ಮತದ ಚಿಂತನೆಯ ಪ್ರಜ್ಞೆಯನ್ನು ಜಾಗೃತಗೊಳಿಸುವ ರಾಮಣ್ಣ ಅವರ 'ಮಹಾನವಮಿ' ಕತೆಯನ್ನು ಪರಂಪರೆಯ ಚೌಕಟ್ಟಿನಲ್ಲಿ ನೋಡಬಹುದು. ಕುಂವೀ ಅವರ 'ರತ್ನ ಎಂಬ ಹುಡುಗಿ'ಯೂ ಉಗಾದಿ ಎಂಬ ಆಟವೂ' ಕತೆ ಅತ್ತೆ ಸೊಸೆಯರಲ್ಲಿ ಭಿನ್ನಾಭಿಪ್ರಾಯವಿದ್ದರೂ ಹಬ್ಬದ ಆಚರಣೆಯಲ್ಲಿ ಒಮ್ಮತ ಕಾಣಬಹುದು.

ಹಬ್ಬ ಪರಂಪರೆಯ ಭಾಗವಾಗಿದ್ದು ಹಬ್ಬದ ದಿನದ ವರೆಗಿನ ಮನುಷ್ಯ ಸ್ವಭಾವದಲ್ಲಿನ ತಲ್ಲಣ–ತಾಕಲಾಟ, ಯೋಚನೆ–ಯೋಜನೆ, ಸಿಟ್ಟು–ಸಿಡುಕು, ಅಸಹನೆ–ಅಸಹಾಯಕತೆ ಸಂಬಂಧಿಸಿದವರಿಗೆಲ್ಲಾ ಉಂಟಾಗುತ್ತದೆ. ಮನುಷ್ಯ ಸ್ವಭಾವದ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. ಕಡೆಗೆ ಎಲ್ಲರ ಮನಸ್ಸು ಸಮಸ್ಥಿತಿಗೆ ಬರುವ ನೆಲೆ ಜೀವಪರವಾಗಿದ್ದು ಹಬ್ಬ ಸಾರ್ಥಕತೆಯನ್ನು ಪಡೆಯುವುದನ್ನು 'ಮಹಾನವಮಿ' ಕತೆಯಲ್ಲಿ ಕಾಣಬಹುದು. ರಾಮಣ್ಣ

ಅವರ ಕತೆಯಲ್ಲಿ ಹಬ್ಬ ಹಲವು ಚಿಂತನೆಗಳ, ಭಾವಬಂಧಗಳ ಬೆಸುಗೆಯಲ್ಲಿ ಉಲ್ಲಾಸಗೊಳಿಸಿ ಬದುಕಿಗೆ ಚೈತನ್ಯ ನೀಡಿದರೆ ಕುಂ.ವೀರಭದ್ರಪ್ಪ ಅವರ ಕತೆಯ 'ರತ್ನ' ಮತ್ತು 'ಶಂಭು'ವಿಗೆ ತಲ್ಲಣವುಂಟುಮಾಡುತ್ತದೆ.

ರಾಮಣ್ಣ ಅವರ ಕತೆಯ ಚಿಕ್ಕಣ್ಣ ಚಿಕ್ಕರೈತ. ಅವನು ಶ್ರಮಜೀವಿಯಾದರೂ ಬದುಕಿನ ಬವಣೆ ಅವನನ್ನು ಹೈರಾಣಾಗಿಸಿತ್ತು. ತನ್ನ ಕಷ್ಟ ಕೋಟಲೆ ಮರೆಸುವುದು ಮೋಟುಬೀಡಿ ಎನ್ನುವುದು ಅವನ ತರ್ಕ. ಮುದುಕಿ ತನ್ನ ಲೋಟಗಾಲೆ ಮೂಲಕ ಮಗಸೊಸೆಯನ್ನು ಹಬ್ಬ ಹರಿದಿನ ಮಾಡಲು ಒತ್ತಾಯಿಸುತ್ತಾ ಪರಂಪರೆಯ ಮುಂದುವರಿಕೆಗೆ ಹಂಬಲಿಸುತ್ತಾಳೆ.

ಕುಂ.ವೀರಭದ್ರಪ್ಪ ಅವರ ಕತೆಯ 'ತಿಪ್ಪವ್ವ'ಳ ಅತ್ತೆ ಕಿರಿಕಿರಿ ಮುದುಕಿಯಾಗಿದ್ದು ಸೊಸೆಯನ್ನು ಹಬ್ಬ ಆಚರಣೆಗಾಗಿ ಒತ್ತಾಯಿಸುತ್ತಾ ತನ್ನ ಅಧೀನ ಅಂಕೆಯಲ್ಲಿ ಇಟ್ಟುಕೊಂಡಿರುತ್ತಾಳೆ. ಎರಡೂ ಕತೆಗಳಲ್ಲಿ ಹಬ್ಬಕ್ಕೆ ಹಣವಿಲ್ಲದ ಚಿಂತೆ, ತಾಯಿ ಮತ್ತು ಅತ್ತೆಯ ಜಗಳ, ಹೆಣ್ಣಿನ ಅಸಹಾಯಕತೆ ಇವು ಮೊದಲಿನಿಂದ ಬಂದ ಕ್ರಮವನ್ನು ಉಳಿಸಿಕೊಳ್ಳಲು ಬಡಜನತೆ ಪಡುವ ಪಾಡನ್ನು ಕತೆ ತುಂಬಿಕೊಡುತ್ತದೆ.

ರಾಮಣ್ಣ ಅವರ ಕತೆಯ ಲೊಟಗಾಲೆ ಮುದುಕಿ **"ನಾನು ಈ ಮನೇಲಿ ಯಾರ್ಗು ಲೆಕ್ಕಕ್ಕಿಲ್ಲ, ಕಸಕಸ ನಾನು! ಮಾರ್ಲಮ್ಮಿ ಹಬ್ಬಕ್ಕೆ ಇನ್ನೆಂಟು ದಿನ ಅವೆ, ಮನೆಗೆ ಸುಣ್ಣ, ಬಣ್ಣ ತುಂಬುಹೊಡೀವ ಅಂತ ಈ ಮಾತಾಯಿಗೂಯಿಲ್ಲ. ಬಟ್ಟೆ ಬರೆ ಸಾಮಾನು ಸರಂಜು ನೋಡುವ ಅನ್ನೊ ಅಳಕು ಗಂಡ್ಲೂ ಅನ್ನಿಸಿಕೊಂಡೋನ್ನೊಯಿಲ್ವಲ್ಲ! ಹುಟ್ಟಿಸಿದ ಅಪ್ಪನಿಗೆ 'ಯಡೆ' ಹಾಕಬೇಕು ಅನ್ನೋಗ್ಯಾನ ಬ್ಯಾಡವೇ ಈಗ್ರಾಸ್ತನಿಗೆ । ನಾನೂ 'ಗೊಟಕ್' ಅಂದಮೇಲೆ ಈ ಮನೆ ದೀಪ ನಿಲ್ಲೋದು ಕಾಣೆ ಕಣೆ ತಿಮ್ಮಿಯೋ!"**[೪]

"ಇನ್ನೆಂಟು ದಿನ ಅದಲ್ಲ ಅಮವಾಸೆ, ಮಾರ್ನಮ್ಮಿ ಹಬ್ಬ ಇನ್ನೂ ಒಂದು ವರ್ಷ ಅದೇ ಅಂತ ತಿಳ್ಕಂಡೆನೋ ನಾಮರ್ದ । ಮನೆಗೆ ಸುಣ್ಣಬಣ್ಣ ಇಲ್ಲ : ಹಬ್ಬದ ಮೇಲೆ ಅವಳಿಗೂ ಗ್ಯಾನಯಿಲ್ಲ, ನಿನಗಂತೂ ಯಿಲ್ವೇಯಿಲ್ಲ. ಉಂಡುಬುಟ್ಟು ಕತ್ತಿನಗಂಟ ಕೈ 'ಕೊರಕೊರ' ಅಂತ ಬೀಸ್ಕಂಡು ಹೊಂಟೋಯ್ತಿ ಆಚ್ಗೆ. ಅದ ಕೇಳಬಾರ್ದೇನೋ ನನ್ನ ಮಗನೈದನೆ? ಮನೇಲೇನು ಭತ್ತ, ದುಡ್ಡು, ಕೊಳೀತಾ ಬಿದ್ದಿದ್ದಾ ಅಂದೆ? ಎಲ್ಲಾನು ಮಾರಿ ಉರುಬುಟ್ಟಲ್ಲ.[೫] ಹಬ್ಬಕ್ಕೆ ಹಣವಿಲ್ಲ ಚಿಂತೆ,

---

೪ ಕಣಜ, ಲೋಹಿಯಾ ಪ್ರಕಾಶನ, ಪು : ೪೧, ೨೦೧೧.

೫ ಅದೇ, ಪುಟ, ೪೨, ೨೦೧೧.

ತಾಯಿಯ ಪಿರಿಪಿರಿ, ದೇಶಕ್ಕಾಗಿ ಹಣನೀಡಬೇಕೆಂಬ ಆಸೆಯಿದ್ದರೂ ತಾನು ಏನೂಮಾಡಲಾಗದ ಅಸಹಾಯಕತೆಗೆ ತಳಮಳಗೊಳ್ಳುತ್ತಾನೆ ಚಿಕ್ಕಣ್ಣ. ಚಿಕ್ಕಣ್ಣನ ಹೆಂಡತಿ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಅತ್ತೆಯ ಬಗ್ಗೆ ಕಾಳಜಿಹೊಂದಿದ್ದು, ಗಂಡನ ಕಷ್ಟಕ್ಕೂ ಸ್ಪಂದಿಸುವ, ಸಂಸಾರ ನಿಭಾಯಿಸುವ ಗೃಹಿಣಿಯಾಗಿ ನಮ್ಮ ಸಮಾಜದಲ್ಲಿ ಕಂಡುಬರುವ ಪಾತ್ರವಾಗಿದ್ದಾಳೆ. ಕುಟುಂಬದವರಲ್ಲಿ ಪರಸ್ಪರ ವಿರೋಧಭಾಸವಿದ್ದರೂ ಪುನಃ ಒಬ್ಬರಿಗೊಬ್ಬರು ಭಾವನಾತ್ಮಕವಾಗಿ ಸ್ಪಂದಿಸುವುದು, ಅವರ ಅಂತರಂಗದಲ್ಲಿರುವ ಪ್ರೀತಿ, ಕಾಳಜಿ, ಕಕ್ಕುಲಾತಿಗಳು ಹೊರಹೊಮ್ಮುವ ಬಗೆ ಜೀವಪರವಾಗಿದ್ದು, ಕೃಷಿ ಬದುಕಿಗೆ ಸಂಚಲನೆಯನ್ನು ಉಂಟುಮಾಡುತ್ತದೆ.

ಚಿಕ್ಕಣ್ಣ ಮನೆ ಬಿಟ್ಟು ಹೊರಡುವಾಗ ಅವ್ವನಿಗೆ,

> **"ಮದ್ದೂರಿ ಗೋಯ್ತೀನಿಕನವ್ವ ಹಬ್ಬದ ಸಾಮಾನು ತರೋಕೆ, ನಿನಗೆ ಎಂಥ ಸೀರೆ ತರ್ಲಿ?'**
> **'ನನಗೆ ಎಂಥಾದಾದ್ರೂ ಆಯ್ತತೆ!**
> **ನಿನ್ನ ಹೆಂಡತೀಗೆ ಚೆನ್ನಾಗಿರೋದು ನೋಡಿ ತಕ್ಕಂಡ್ ಬಾ ।**
> **'ಅವಳಿಗೆ ಸೀರೆಯೇ ಬ್ಯಾಡವಂತೆ !'**

'ಹಂಗಾದ್ರೆ ನನಗೂ ಬ್ಯಾಡ. ಸೀರೆಗೆ ಕೊಡುವ ದುಡ್ಡನ್ನೇ ಸರ್ಕಾರಿ ಖಜಾನೆಗೆ ಯುದ್ಧದ ಫಂಡ್‌ಗೆ ಕಟ್‌ಬುಡು ಅಂದೆ'

ಹೂಂಕನೋಗ್ಲ ರಾತ್ರಿ ಗಂಡಹೆಂಡತೀಯರು ಮಾತಾಡ್ತಾಯಿದ್ದದು ನಾನು ಕೇಳಿಸ್ಕೋಲಿಲ್ಲವೆ? ಕಷ್ಟ ಬಂದರೂ ಅದ್ಯಾಕೆ ಹೊಸ ಸೀರೆ ಸಿರಿ[೬] ಎಂದಾಗ ಚಿಕ್ಕಣ್ಣನ ಮನ ಅವ್ವನ ನಿಷ್ಕಲ್ಮಷ ಮನಸ್ಸನ್ನು ಕಂಡು ಮೆಚ್ಚಿತು. ಒಬ್ಬರಿಗೊಬ್ಬರು ಅರ್ಥಮಾಡಿಕೊಳ್ಳುವ ಬಗೆ ಚೇತೋಹಾರಿಯಾಗಿದ್ದು ಕೂಡುಕುಟುಂಬದ ಅಗತ್ಯತೆಯನ್ನು ರಾಮಣ್ಣ ಕಾಣಿಸುತ್ತಾರೆ. ಸಂಬಂಧಗಳ ಒಳನೋಟ, ದೇಶದ ಬಗೆಗಿನ ಕಾಳಜಿಯಿಂದ ಪಾತ್ರಗಳು ಎತ್ತರದಲ್ಲಿ ನಿಲ್ಲುತ್ತವೆ.

ಉಗಾದಿಹಬ್ಬದ ಆಚರಣೆಯಲ್ಲಿ ತಲ್ಲಣಿಸುವ ಮಕ್ಕಳ ಮನಸ್ಥಿತಿಯನ್ನು ಅನಾವರಣಗೊಳಿಸುವ ಕುಂವೀ ಅವರ ಕತೆ 'ರತ್ನ ಎಂಬ ಹುಡುಗಿಯೂ : ಉಗಾದಿ ಎಂಬ ಆಟವೂ' ಮುಗ್ಧ ಮಕ್ಕಳ ಮೂಲಕ ಕತೆ ಬೆಳೆದು ಆವೇಶದಲ್ಲಿ ಮುಕ್ತಾಯವಾಗುತ್ತದೆ.

"ಪೀಡಿಸಿ ಪೀಡಿಸಿ ಕೇಳಲು ರತ್ನದಂತಹ ಹುಡುಗಿ ರತ್ನವ್ವ ಉಗಾದಿಗೆ ನಮ್ ಮನ್ಯಾಗ ಹೋಳಿಗೆ ಮಾಡ್ತೀವಿ ಎಂದು ತನ್ನ ಪುಟ್ಟಬಾಯಿ ಅರಳಿಸಿ ಗುಟ್ಟನ್ನು ಸ್ಫೋಟಿಸಿಯೇ ಬಿಟ್ಟಳು.

---

೬ ಅದೇ, ಪುಟ : ೪೯, ೨೦೧೧.

ಅದನ್ನು ಕೇಳಿ ಎಲ್ಲರಿಗೂ ಆಶ್ಚರ್ಯ ಹ್ವಾಂ ! ಶಂಭನ ಮನೆಯಲ್ಲಿ ಹೋಳಿಗೆ ! ಎಲ್ಲರೂ ಅವನನ್ನು ನಖಶಿಖಾಂತ ನೋಡಲು ಅವನು ಥೇಟ್ ಹೋಳಿಗೆ ಥರ ಗೋಚರಿಸಿದನು."[೭]

ಮಕ್ಕಳ ಸಂಭ್ರಮ ಒಂದೆಡೆಯಾದರೆ ತಿಪ್ಪವ್ವನ ಅತ್ತೆ ಸೊಸೆಗೆ ತನ್ನ ಮನೆಯ ಕೇಡು ಕೆಡುಕುಗಳ ಸಮಸ್ತವನ್ನೂ ಹೊರಿಸಿ ದಿನಕ್ಕೆರಡು ಬಾರಿ ಹೀನಾಯವಾಗಿ ಬೈಯ್ಯುವುದು ದಿನಚರಿಯಾಗಿತ್ತು. ನೆರೆಹೊರೆಯವರ ಕುಮ್ಮಕ್ಕು ಸೇರಿದರೆ ಆರ್ಭಟ ಇನ್ನೂ ಜೋರಾಗುತ್ತಿತ್ತು.

ಮುದುಕಿ ಮಾತ್ರ ಅಂಗಳದಲ್ಲಿ ಮೊಣಕಾಲಿಗೆ ಕೈ ಊರಿನಿಂತು **"ಅಲಲಲಾ ಏನೇ..... ಇನ್ ಕಟ್ಕಂಡಿದ್ದೇ ನನ್ ಮಮ್ಮಗ ಎಳೀವಯಸ್ಗೆ ವಂಟೋದ್ನಲ್ಲೆ..... ತಾಟಗಿತ್ತಿ"**[೮] ಎಂದು ಮುಗಿಲಿಗೆ ಕೇಳಿಸುವಂತೆ ಕೂಗಿತು. ಸೊಸೆ ತಿಪ್ಪವ್ವಳಿಗೆ ಹಸಿದ ಮಕ್ಕಳ ಜೊತೆಗೆ ಅತ್ತೆಯನ್ನು ಸಂಬಾಳಿಸುವುದು ಕಷ್ಟದಾಯಕವಾಗಿತ್ತು. ರಾಮಣ್ಣ ಮತ್ತು ಕುಂವೀ ಇಬ್ಬರ ಕತೆಗಳಲ್ಲೂ ಘಟವಾಣಿ ಅತ್ತೆಯರನ್ನು ಸಹಿಸಿಕೊಂಡು ಹಬ್ಬ ಮಾಡಬೇಕಾದ ಅನಿವಾರ್ಯತೆ ಸೊಸೆಯರಿಗಿತ್ತು. ಎರಡೂ ಕತೆಗಳಲ್ಲಿ ಅತ್ತೆಯ ಅಣತಿ ಮತ್ತು ನಿರಂತರ ಬೈಗುಳದ ನಡುವೆ ಹಬ್ಬದ ಕೆಲಸ ಮಾಡುತ್ತಿದ್ದುದರಲ್ಲಿ ಸಂಸ್ಕೃತಿಯ ಚಹರೆಯನ್ನು ಉಳಿಸಿಕೊಳ್ಳುವ ಕಾಳಜಿಯೇ ಕಂಡುಬರುತ್ತದೆ. ಹಬ್ಬದ ಕಟ್ಟಲೆಯನ್ನು ಚಾಚೂತಪ್ಪದಂತೆ ಜಾಗ್ರತೆವಹಿಸಿದ ಅವಳಿಗೆ ಮಕ್ಕಳ ಹಸಿವಿಗಿಂತಲೂ ಸಾಂಪ್ರದಾಯಿಕ ಹಿಡಿತವೇ ಹೆಚ್ಚಾಗಿತ್ತು. ಇಷ್ಟಾದರೂ ಅವರು ಕಟ್ಟಲೆ ಉಳಿಸುವಲ್ಲಿ ಅತ್ತೆಯೊಂದಿಗೆ ಒಳ ಒಪ್ಪಂದವೇನೋ ಎಂಬಷ್ಟು ಹೊಂದಾಣಿಕೆಯಿತ್ತು.

ಹೋಳಿಗೆ ಮಾಡುವ ತಯಾರಿಯಿಂದಲೇ ಮಕ್ಕಳಾದ ರತ್ನ ಮತ್ತು ಶಂಭುವಿಗೆ ಟೆನ್‌ಶನ್ ಹುಟ್ಟಿಕೊಂಡಿತು. ಹೋಳಿಗೆಯ ಬಹುಪಾಲು ತಿಂದುಮುಗಿಸಿದ ಅಯ್ನೋರು ಶಂಕರಯ್ಯನನ್ನು ಕಂಡಾಗ ಆ ದುಗುಡ ರತ್ನಳ ಕಣ್ಣಲ್ಲಿ ನೀರಾಗಿ ಹರಿಯುತ್ತದೆ.

ಹೋಳಿಗೆ ತಿಂದು ಭಿನ್ನಹಕ್ಕೆ ಕಾಸುಕಿತ್ತ ಶಂಕರಯ್ಯನಿಗೆ ಸಣಮಾಡಲು ಒಪ್ಪದೆ ಹಿಂದೆಸರಿದಿದ್ದು ಮುಗ್ಧ ಮಕ್ಕಳಲ್ಲಿ ಪ್ರತಿರೋಧದ ಅಂಕುರವೆನಿಸುತ್ತದೆ. **'ಏಯ್ ಶಂಭೂ; ರತ್ನ ಬರ್ರೋ ಅಡ್ಡಬೀಳಿ ಮುದುಕಿಯ ಕೂಗು ಕೇಳಿಯೂ ಕೇಳಿಸದಂತೆ ಹಿಂದೆ ಸರಿದರು.'**[೯] ಹಬ್ಬದ

---

೭ ಕುಂ.ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು : ೨೧೬, ೨೦೧೦.

೮ ಅದೇ, ಪುಟ : ೨೧೬.

೯ ಅದೇ, ಪುಟ : ೨೨೬.

ಮಾರನೇ ದಿನ ಆಟದಲ್ಲಿ ಸಮಾಧಾನಿಯಾದ ರತ್ನ ಶಂಭುವನ್ನು ಓಡಾಡಿಸಿ ಬಡಿದಿದ್ದರಲ್ಲಿ ಉಗಾದಿ ದಿನದ ಆಕ್ರೋಶವೇ ಮಡುಗಟ್ಟಿರುತ್ತದೆ.

"ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ' ಉಗಾದಿ ಎಂಬ ಆಟವೂ' ಕತೆಯಲ್ಲಿ ಅತ್ಯಂತಸರಳ ವಿಚಾರದ ಮೂಲಕ ಮಹತ್ವದ ಸಂಗತಿಯನ್ನು ಹೇಳುವ ಪ್ರಯತ್ನವಿದೆ. ಸಂಸ್ಕೃತಿಯೊಳಗಿನ ಮೋಸವನ್ನು ಧ್ವನಿಸುತ್ತದೆ. ಕುಂ.ವೀರಭದ್ರಪ್ಪ ತಮ್ಮ ಬಂಡಾಯದನಿಯನ್ನು ಕುಳಿತು ತಿನ್ನುವ ಅಯ್ನೋರನ್ನು ಟೀಕಿಸುವ ಮೂಲಕ ಪ್ರತಿಷ್ಠಾಪಿಸುತ್ತಾರೆ. ಶ್ರಮಸಂಸ್ಕೃತಿ ಮತ್ತು ಮನುಷ್ಯಸಂಸ್ಕೃತಿ ಸಂಘರ್ಷವನ್ನು ಹೇಳುತ್ತಾರೆ. ಶೂದ್ರ ಸಂಸ್ಕೃತಿ ತನಗಿಂತಲೂ ಕೆಳ ಜಾತಿಗಳನ್ನು ಕುರಿತಾದ ಆಕ್ರಮಣಕಾರಿಯಾಗಿರುವಂತೆಯೇ ತನಗಿಂತ ಮೇಲ್ಜಾತಿಗೆ ಶರಣಾಗಿರುವ ಒಂದು ಬಗೆ ಇದರಿಂದ ತಿಳಿಯುತ್ತದೆ"[೧೦]ವೆಂಬ ವಿದ್ವಾಂಸರ ಅಭಿಪ್ರಾಯ ಸೂಕ್ತವಾದುದು. ಮೇಲ್ಜಾತಿ, ಮೇಲ್ವರ್ಗಗಳ ಪರವಾಗಿರುವ ಆಚರಣೆ ಟೊಳ್ಳೆಂದು ರುಜುವಾತಾಗುತ್ತಿದ್ದರೂ ಕಟ್ಟುಪಾಡನ್ನು ಅನುಸರಿಸದೆ ವಿಧಿಯಿಲ್ಲ ಎಂಬ ಧೋರಣೆಯನ್ನು ಕುಂ.ವೀರಭದ್ರಪ್ಪ ತಾಳುತ್ತಾರೆನಿಸುತ್ತದೆ. ಕುಂ.ವೀರಭದ್ರಪ್ಪ ಅವರಿಗೆ ಪರಂಪರೆಯನ್ನು ಪ್ರಶ್ನಿಸಿ ಅದನ್ನು ನಿರಾಕರಿಸುವಂತೆ ತಮ್ಮ ಕಥೆಯಲ್ಲಿ ನಿರೂಪಿಸುವುದು ಮುಖ್ಯವಾಗಿದೆ.

ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ: ಉಗಾದಿ ಎಂಬ ಆಟವೂ' ಕತೆ ಸಾಮಾಜಿಕವಾಗಿ ಮೇಲ್ವರ್ಗದಲ್ಲಿದ್ದರೂ ಆರ್ಥಿಕ ಅಸಮಾನತೆಯಿಂದ ನಲುಗುವ ಕುಟುಂಬದ ತೊಡಕುಗಳ ಚಿತ್ರಣ ನೀಡುತ್ತದೆ. ಹಬ್ಬದ ಆಚರಣೆ ಮಕ್ಕಳಲ್ಲಿ ಅಸಮಾಧಾನ, ಅಸಹಾಯಕತೆಯನ್ನು ಉಂಟು ಮಾಡಿದರೆ, ಅತ್ತೆ ಮತ್ತು ಸೊಸೆಯ ನಡುವಣ ಯಾವ ಸಂಬಂಧವೂ ಭಾವನಾತ್ಮಕ ನೆಲೆಗೆ ಬರುವುದೇ ಇಲ್ಲ. 'ಮಹಾನವಮಿ' ಕತೆಯಲ್ಲಿ ಬಡತನವಿದ್ದರೂ ಹಬ್ಬದ ಆಚರಣೆ ಸುಸೂತ್ರವಾಗುತ್ತದೆ. ಕುಂ.ವೀರಭದ್ರಪ್ಪ ಅವರ ಕತೆಯಲ್ಲಿ ಹಬ್ಬದ ಆಚರಣೆಯಾದರೂ ಆಚರಣೆಯಲ್ಲಿನ ನ್ಯೂನತೆಯು ವಾಸ್ತವದ ಶೋಧನೆಯನ್ನು ಕತೆ ಮಾಡುತ್ತದೆ.

ರಾಮಣ್ಣ ಅವರ 'ಕಕರನ ಯುಗಾದಿ' ಯಲ್ಲಿ ಕಕರ ಯಾವುದೂ ನೆಟ್ಟಗಿಲ್ಲದ ತನ್ನ ಸಂಸಾರದ ಬಗೆಗೆ ಚಿಂತಿಸುತ್ತಲೇ ಇದ್ದಾಗ ಯುಗಾದಿ ಹಬ್ಬವೂ ಬರುತ್ತದೆ. ಕುಡಿಯಲು ನೀರಿಲ್ಲದ ಬಿರುಬೇಸಿಗೆ, ಹೆಂಡತಿ–ಮಕ್ಕಳ ಹೊಟ್ಟೆ ತುಂಬಿಸಲು ದಿನವೂಪರದಾಟ, ಹೆಂಡತಿಯ

೧೦ ಎಲ್. ಹನುಮಂತಯ್ಯ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು : ೧೮೦.

ಕಾಯಿಲೆ, ಪುಡಿಹೈಕಳು, ದಾರಿತಪ್ಪಿದ ಬಸುರಿಮಗಳು, ಸಾಲದಕ್ಕೆ ಉಗಾದಿಯಹಬ್ಬ ಕಕರ ಜಂಜಾಟದಿಂದ ತತ್ತರಿಸಿಹೋಗಿದ್ದ.

ಜೋಯಿಸರು ಎದುರಾದಾಗ ಕಕರ "ಸ್ವಾಮಿ, ಈ ಯುಗಾದಿಗಾದ್ರೂ ಮಳೆ ಆದಾತ್ರ"?

'ಮಳೆ ಮನೆ ಮಾರೊತ್ತು ಹೋಯ್ತು, ಹಾಲುಗೂಡಿಗೆ ನಾಲ್ಕು ಹೆಜ್ಜೆ ಮಾತು ಹೋಗೋ ಅಂದ್ರೆ ಒಳ್ಳೆ ಐನಾತಿ ಊಟ' 'ಅದಿರಲಿ ಸ್ವಾಮಿ ಮಳೆ ವಿಷ್ಯ ಮಾತಾಡಿ, ದನಕರು ಗೋಳು, ಹಕ್ಕಿಪಕ್ಷಿಗೋಳ್ಗೆಲ್ಲ ಬೋ ಕಷ್ಟ ಆಗೋಯ್ತು. ಧರೆಯೇ ಉರಿತಾ ಅದೆ."[೧೧] ಕಕರ ಕೇಳಿದ್ದನ್ನು ಬಿಟ್ಟು ಜೋಯಿಸಹೇಳುವುದೇ ಬೇರೆಯಾಗಿರುತ್ತದೆ. ರಾಮಮನೋಹರ ಲೋಹಿಯಾ ಅವರು ಹೇಳುವಂತೆ "ಶ್ರಮಿಕ ಸಮಾಜ ಅಸಮಾನತೆ ಮತ್ತು ಶೋಷಣೆಯ ವಿಷಯವಾಗಿ ಬಹು ಆಯಾಮಗಳು, ನಿರ್ಧಿಷ್ಟತೆ ಮತ್ತು ತುಲನಾತ್ಮಕತೆಯಿಂದ ಕೂಡಿದ ಅಭಿಪ್ರಾಯಗಳನ್ನು ಮುಂದಿಡುತ್ತಾರೆ. ಐಕ್ಯತೆ ಮತ್ತು ಸಂಘಟಿತ ಹೋರಾಟದ ಮೂಲಕ ಸಮಸಮಾಜವನ್ನು ನಿರ್ಮಿಸುವ ಸಾಧ್ಯತೆ ಬಗ್ಗೆ ಚಿಂತಿಸುತ್ತಾರೆ"[೧೨] ಎಂಬ ಮಾತು ಉಲ್ಲೇಖನೀಯವಾಗಿದೆ. ದಲಿತವರ್ಗ ದಿನನಿತ್ಯದ ಜಂಜಾಟದಲ್ಲಿ ಹೈರಾಣಾಗಿ ಹೊಟ್ಟೆಗಾಗಿ ಪರದಾಟದಲ್ಲಿದ್ದರೆ ಇದಾವುದರ ಪರಿವೆಯಿಲ್ಲದೆ ಶೋಷಿಸುವ ವರ್ಗ ಬಡವರ ಬೆವರಲ್ಲಿ ಸುಖದ ಬದುಕನ್ನು ನಡೆಸುವುದು ಕಂಡುಬರುತ್ತದೆ. ಇಂತಹದರ ನಡುವೆ ಪುಟ್ಟೇಗೌಡ ಮದುವೆ ಊಟಮಾಡಿ, ಸುಧಾರಿಸಿಕೊಂಡು ಸೌದೆತೆಗೆದುಕೊಂಡು ಹೋಗು ಎಂದಿದ್ದು ಕಕರನ ಮನಸ್ಸನ್ನು ತುಸುಸಂತೈಸಿತು.

ತನ್ನೆಲ್ಲಾ ಜಂಜಾಟದಲ್ಲೂ ಮಳೆಯಿಂದ ಪ್ರಕೃತಿಯಲ್ಲಾಗುವ ಬದಲಾವಣೆ ನೆನೆದು ಮನ ಮುದಗೊಳ್ಳುವುದು, ಮದುವೆ ಜೋಡಿ ಸರಿಯಿಲ್ಲ ಎನಿಸಿದ್ದು, ಮಗಳಿಗೆ ಗಂಡುಕೂಸು ಹುಟ್ಟಿದಾಗ ಸಂತೋಷಪಡಲು ಆಗದ ಮನಸ್ಥಿತಿಯ ಕಕರ ಪೆಚ್ಚಾಗಿದ್ದೇ ಹೆಚ್ಚು. ಅವ್ಯಕ್ತ ಸಂತಸ ಮನದ ಮೂಲೆಯಲ್ಲಿ ಮೂಡಿದ್ದು, ಮಗುನೋಡುವ ಕುತೂಹಲ, ಬದುಕು ಸಾಗಿದಂತೆ ಸಾಗುವ ಪರಿಯಿಂದಲೇ ಕಕರನಂತಹವರು ಸಮಾಜದಲ್ಲಿ ಬದುಕಲು ಸಾಧ್ಯವಾಗಿರುವುದು.

ಮದುವೆ ಮನೆ ಬಳಿ ನೆರೆದಿದ್ದ ಹೊಲಗೇರಿ ಮಕ್ಕಳನ್ನು ಕಂಡು ಕಕರನಿಗೆ ಕಸಿವಿಸಿಯಾಯಿತು. ಕಕರನ ಮಗ ದೇವರಸ

---

೧೧ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೯೫.

೧೨ ಪ್ರಭಾಕರ ಎ.ಎಸ್. ಲೋಹಿಯಾ : ವರ್ತಮಾನದ ಮುಖಾಮುಖಿ, ೨೦೧೨, ಪು : ೧೫೮,

"ಅಪ್ಪೋ!"
"ಏನ್ಲ ಅದು!"
"ನಾಳಾಕೆ ಉಗಾದಿ ಹಬ್ಬವಂತೆ"
"ಅದ್ಕೇನ್ಮಾಡ್ಲಿ? ಕತ್ತುಕುಯ್ಕೊಳ್ಲ"
"ನಂಗೊಂದು ಹೆಗಲಮ್ಯಾಕೆ ಚೌಕವ"

"ಅಪ್ಪೋ, ಚೌಕವ!" ದೇವರಸನ ಮೊರೆ ಕೇಳಿದರೂ ಕೇಳಿಸದವನಂತೆ ಹೊರಲಾರದ ಹೊರೆಯನ್ನು ಹೊತ್ತು ಹೊರಟ".[೧೩]

ಇಂತಹ ಸಂದರ್ಭದಲ್ಲಿ ಕೆಳಸ್ತರದ ಜನಾಂಗದ ನೋವುಗಳು ಹೇಗೆ ಅಭಿವ್ಯಕ್ತಗೊಳ್ಳುತ್ತವೆ ಎಂದು ಗಮನಿಸಿದಾಗ ಅವರ ಅಂತರಾಳದ ತುಡಿತ ನಮಗೆ ಅರಿವಾಗುತ್ತದೆ. ತನ್ನ ಮಗನಿಗೆ ಹಬ್ಬದಲ್ಲೂ ಒಂದು ಚೌಕವನ್ನು ಕೊಡಿಸಲಾಗದ ದುಸ್ಥಿತಿ ಕಕರನದು ಮಾತ್ರವಲ್ಲ. ಇಡೀ ಜನಾಂಗದ ವ್ಯವಸ್ಥೆಯನ್ನು ಕಥೆಗಾರರು ಕಕರನ ಮೂಲಕ ನೀಡಿ ಸಾಮಾಜಿಕ ಅಸಮತೋಲನದ ಪರಿಣಾಮವನ್ನು ನಿರೂಪಿಸುತ್ತಾರೆ. ಅದಕ್ಕಾಗಿಯೇ ಕಕರನಲ್ಲಿ 'ಕತ್ತು ಕುಂಯ್ಕೊಡ್ತ್ರಿ' ಮಗನ ಆಸೆಯನ್ನು ಪೂರೈಸಲು ಸಾಧ್ಯವಿಲ್ಲವೆಂಬುದು ಇಲ್ಲಿನ ಧ್ವನಿ. ಇಂತಹ ಸಾಮಾಜಿಕ ಚಿತ್ರಣದ ಮೂಲಕ ರಾಮಣ್ಣನವರ ಸ್ಪಂದನೆ ಹೆಚ್ಚು ಮೌಲಿಕವಾಗಿ ನಮಗೆ ಗೋಚರವಾಗುತ್ತದೆ.

ಜೋಯಿಸ ಸಾಲಕೊಡದೆ ಸತಾಯಿಸಿದರೆ, ಜೋಯಿಸನ ತಾಯಿ ಕುಡಿಯಲು ನೀರನ್ನೂ ಕೊಡಲಿಲ್ಲ. ಸಾಲ ಕೇಳಿದ ಅಂಗಡಿಯವನ ಹೀಯಾಳಿಕೆ, ಉಗಾದಿದಿನ ಸಾಲಕ್ಕಾಗಿ ಪರದಾಟ, ಉಗಾದಿ ದಿನ ಮಗಳಿಗೆ ಗಂಡುಕೂಸು ಹುಟ್ಟಿದ್ದು, ಹೆರಿಗೆ ಖರ್ಚಿಗಾಗಿ ಪೇಚಾಟ, ಕಕರನ ಬದುಕನ್ನು ಹೈರಾಣಗೊಳಿಸಿತು. ಎಲ್ಲವನ್ನೂ ಮರೆತು ಬೇರೆ ಜಾತಿಯವರ ಜೀವ ಉಳಿಸಲು ಹೋದಾಗ ಬಂದೆರಗಿದ ಸಾವು, ಕಕರನ ಸಂಸಾರವನ್ನು ಬೀದಿ ಪಾಲಾಗುವಂತೆ ಮಾಡಿತು. ಇದೆಲ್ಲ ಜಾತಿಯ, ಆರ್ಥಿಕ ಅಸಮಾನತೆಯ ಕಾರಣದಿಂದಲೇ ಎನ್ನಬಹುದಾಗಿದೆ.

"ರಾಮಣ್ಣನವರು ಗ್ರಾಮೀಣ ಲೋಕದ ಅನುಭವಗಳನ್ನು ಅಥೆಂಟಿಕ್ ಆಗಿ ನೀಡಿದವರಾಗಿದ್ದಾರೆ. ಅವರ ಕತೆಗಳಲ್ಲಿ ಬರುವ ಒಕ್ಕಲಿಗ ಜನಾಂಗದ ಕುಟುಂಬಗಳ ಘರ್ಷಣೆಯ ಚಿತ್ರದ ಜೊತೆಗೆ ಪ್ರಧಾನಭೂಮಿಕೆಯಾದ ಒಕ್ಕಲಿಗ ಕುಟುಂಬದ ಸುತ್ತ ಸಂಬಂಧಿಸಿದ ಎಲ್ಲಾ ಪ್ರಧಾನ ಜಾತಿಗಳ ಸಂಪರ್ಕ ಸಂಬಂಧವನ್ನು ವಿವರಿಸುತ್ತಾರೆ. ಈ ಕತೆಗಳಲ್ಲಿ ದಲಿತಪಾತ್ರ, ಕುಟುಂಬಗಳ ವಿವರಗಳನ್ನು ನೀಡುವ ಅವರ ಕಕರನಯುಗಾದಿ, ಕಳೆ ಮುಂತಾದ ಕತೆಗಳು ಚರ್ಚೆಗೆ ಸಾಕಷ್ಟು ಗ್ರಾಸ

---

೧೩ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೯೭.

ಒದಗಿಸುತ್ತವೆ. ಸಾಹಿತ್ಯ ನಡಿಗೆ ದಿಕ್ಕನ್ನೇ ಸೂಕ್ಷ್ಮವಾಗಿ ಗಮನಿಸುವಂತೆ ಮಾಡುತ್ತದೆ. **'ಕಕರನ ಮನೆಯೇ ಪುಟ್ಟ ದಲಿತಭಾರತ', 'ಮಗಳ ಮಗು ಹೊಸಬೆಳಕಿನ ಸಂಕೇತ' ಬಂಡಾಯಮಾದರಿ. ರಾಮಣ್ಣನವರ ಬರವಣಿಗೆ ಘೋಷಣೆಯಾಗದೆ ವಾಸ್ತವದಿಂದ ಹುಟ್ಟಿದ ಬಂಡಾಯ ದನಿಯಾಗಿರುವುದರಿಂದ, ಗ್ರಾಮೀಣ ಲೋಕದ ಕ್ರೌರ್ಯವನ್ನು ಬಿಚ್ಚಿಡುತ್ತಲೆ ಜನಪರದನಿಯನ್ನು ಅದರಲ್ಲಿ ಹುದುಗಿಸಿರುತ್ತಾರೆ"**[೧೪] ಎಂಬ ವಿದ್ವಾಂಸರ ಅಭಿಪ್ರಾಯ ಹೆಚ್ಚು ಸಮಂಜಸವಾದುದು. ಏಕೆಂದರೆ ಕಕರ ತನ್ನ ಬದುಕಿನ ಎಲ್ಲಾ ಸಂದರ್ಭದಲ್ಲೂ ತಾಳ್ಮೆಕಳೆದುಕೊಳ್ಳದೆ ಪ್ರಬುದ್ಧವಾಗಿ ನಡೆದುಕೊಳ್ಳುವುದು ಅವನ ವ್ಯಕ್ತಿತ್ವದ ಚೆಲುವೆನ್ನಿಸುತ್ತದೆ. ದಲಿತ ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸುತ್ತಾ ಕಕರನ ವ್ಯಕ್ತಿತ್ವವನ್ನು ಮಾನವೀಯನೆಲೆಯಲ್ಲಿ ಕತೆ ಕಾಣಿಸುತ್ತದೆ. ಉಗಾದಿ ಹಬ್ಬ, ಹಸಿವು, ಬಡತನ ಕಕರನ ಬದುಕನ್ನು ದುರಂತವಾಗಿಸಿತು. ಅಂದು ಮಾನವೀಯತೆ ಮತ್ತು ಪ್ರಾಮಾಣಿಕ ಬದುಕು ಸೋಲುತ್ತದೆ.

"ಸಾಮಾಜಿಕ ಬದಲಾವಣೆಯೊಂದು ಸಂಭವಿಸಲು ಮೂರು ತಲೆಮಾರುಗಳು ಬೇಕಾಗುತ್ತದೆ ಎಂದು ಫ್ರೆಂಚರಲ್ಲಿ ಒಂದು ಮಾತಿದೆ - ಬದಲಾದಷ್ಟು ಹಾಗೆ ಇರುತ್ತದೆ.[೧೫] ಭಾರತದಲ್ಲಿ ಅಸಮಾನತೆ ಸ್ವರೂಪ ಭಿನ್ನವಾಗಿದ್ದು ಜಾತಿ ಮತ್ತು ಬಡತನದ ಮಧ್ಯೆ ನಿಕಟಸಂಬಂಧವಿದೆ. ಕತೆಯಲ್ಲಿ ಮೇಲ್ವರ್ಗದ ಬ್ರಾಹ್ಮಣರ ಮನೆಯಲ್ಲಿ ಮೋಸ, ಕಪಟ ಢಾಳಾಗಿದ್ದರೆ, ಕಕರನ ಹಟ್ಟಿಯಲ್ಲಿ ಮುಗ್ಧತೆ ಮತ್ತು ಶ್ರಮ ಪ್ರಕಾಶಮಾನವಾಗಿ ಕಾಣುತ್ತದೆ. ಮೇಲ್ವರ್ಗದವರು ಕೆಳವರ್ಗದವರನ್ನು ಜಾತಿಯ ಹೊರತಾಗಿ ಮಾನವೀಯತೆಯ ನೆಲೆಯಲ್ಲಿ ಕಂಡಾಗ ಮಾತ್ರ ಅವರ ಬದುಕು ಸಹನೀಯವಾಗಬಹುದೇನೋ?

ರಾಮಣ್ಣ ಅವರ 'ಮಹಾನವಮಿ' ಕತೆ ಪರಂಪರೆ ಉಳಿಸಿಕೊಳ್ಳುತ್ತಾ, ದೇಶದ ಬಗೆಗಿನ ಚಿಂತನೆ ನಡೆಸುತ್ತಲೇ ಸಂಬಂಧಗಳನ್ನು ಉಳಿಸಿಕೊಳ್ಳುವ ಬಗೆಗೆ ಸರಳಸತ್ಯವನ್ನು ಮನಗಾಣಿಸುತ್ತದೆ.

'ಕಕರನ ಯುಗಾದಿ' ಕತೆಯಲ್ಲಿ ಕಕರನ ವ್ಯಕ್ತಿತ್ವದ ಚೆಲವುಮೌಲ್ಯದ ನೆಲೆಯಲ್ಲಿ ಇಮ್ಮಡಿಸುವುದಾದರೂ ಅರ್ಥಹೀನ, ಜೀವಪರವಲ್ಲದ ನಂಬಿಕೆಗಳನ್ನು ರಾಮಣ್ಣ ಪ್ರಶ್ನಿಸುತ್ತಾರಾದರೂ ಅಂತ್ಯದಲ್ಲಿ ತಣ್ಣಗಾಗಿ ಹತಾಶೆಯನ್ನುಂಟು ಮಾಡುತ್ತದೆ.

---

೧೪ ಎಲ್. ಹನುಮಂತಯ್ಯ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು : ೧೯೦.

೧೫ ಪ್ರಜಾವಾಣಿ, ೨೦.೪.೨೦೧೬, ಪು : ೬.

ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ : ಉಗಾದಿ ಎಂಬ ಆಟವೂ' ಕತೆ ಪರಂಪರೆಯ ಲೋಪಗಳನ್ನು ಪ್ರಶ್ನಿಸಿದರೂ, ಆಕ್ರೋಶದಲ್ಲಿ ಬದಲಾವಣೆಯ ಸೂಚನೆ ಕಾಣುವುದಿಲ್ಲ.

ಕೊರಡ್ಕಲ್ ಶ್ರೀನಿವಾಸ್‌ರಾವ್ ಅವರ 'ಧನಿಯರ ಸತ್ಯನಾರಾಯಣ' ಕತೆಯಲ್ಲಿ ಮುಗ್ಧ ಮಕ್ಕಳ ಪ್ರತಿರೋಧ ಮೇಲ್ವರ್ಗ ತಲುಪುವ ಸಾಧ್ಯತೆ ಕಂಡುಬರುತ್ತದೆ. ರತ್ನ ಮತ್ತು ಶಂಭುವಿನ ಪ್ರತಿರೋಧ ಕುಟುಂಬಕ್ಕೆ ಸೀಮಿತವೆನಿಸಿದರೂ ಹಲವು ಪ್ರಶ್ನೆಗಳನ್ನು ಉಳಿಸುತ್ತದೆ. ಸಾಮಾಜಿಕ ಸಮಾನತೆಯ ಚಿಂತನೆಯನ್ನು ಹಚ್ಚುವ ಕತೆಗಳು ಪರಂಪರೆಯಹಿನ್ನಲೆಯಲ್ಲಿ ಸಂಬಂಧ ಉಳಿಸಿಕೊಳ್ಳಬೇಕಾದ ಅಗತ್ಯತೆ ಕಾಣಿಸುತ್ತದೆ. ಕಕರ, ದೇವರಸ, ರತ್ನಳ ಪಾತ್ರಗಳು ಕಾಡುತ್ತಲೇ ಇರುತ್ತವೆ.

ರಾಮಣ್ಣ ಅವರ 'ಚೆಲುವನ ಪರಂಗಿಗಿಡಗಳು' ರಾಮಣ್ಣನವರು ಹಳೆಬೀಡಿನಲ್ಲಿದ್ದಾಗ ಬರೆದ ಕತೆ. ರಾಮಣ್ಣನವರೇ ಹೇಳಿರುವಂತೆ **"ನಾನು ಹಳೇಬೀಡಿನಲ್ಲಿ ವೈದ್ಯನಾಗಿದ್ದಾಗ ರಷ್ಯದ ಮಹಾನ್‌ಲೇಖಕರಲ್ಲಿ ಒಬ್ಬರಾದ 'ANTON CHEKOU ರ ಮಾತೊಂದರಿಂದ ಪ್ರಭಾವಿತನಾಗಿ, ನನ್ನ ಮನೆಯ ಸುತ್ತ ಇದ್ದ ಕಪ್ಪು ನೆಲದಲ್ಲಿ ನೆಟ್ಟು ಬೆಳೆಸಿದ ಇಪ್ಪತ್ತಾರು ಪರಂಗಿ ಸಸಿಗಳ ಹಿನ್ನಲೆಯಲ್ಲಿ ಮೂಡಿಬಂದದ್ದು."** [೧೬] ಕತೆಯ ಚೆಲುವ ಮಹತ್ವಾಂಕ್ಷಿಯಾದ ಚುರುಕಿನ ಹುಡುಗ. ಭಾಷಣಗಳಿಂದ ಪ್ರಭಾವಿತನಾಗಿ ಪರಂಗಿ ಸಸಿಗಳನ್ನು ಪೋಷಕರ ಬೆಂಬಲದೊಂದಿಗೆ ನೆಟ್ಟನು. ವಿಚಾರಪರನಾಗಿದ್ದ ಚೆಲುವ ಸರ್ಕಾರಿ ಯೋಜನೆಗಳನ್ನು ಅರ್ಥಮಾಡಿಕೊಳ್ಳಬಲ್ಲವನಾದ ಮಹತ್ವಾಂಕ್ಷಿಯೂ ಆಗಿದ್ದ. ತೋಟಗಾರಿಕಾ ಕ್ಷೇತ್ರದ ಸುಬ್ಬಣ್ಣ ಜನಪರಕಾಳಜಿಯುಳ್ಳವನಾದರೆ ಪುಢಾರಿ ಗೋವಿಂದಸ್ವಾಮಿ ಪ್ರಗತಿ ಪರಧೋರಣೆಗೆ ತೊಡಕಾಗಿದ್ದನು.

ಕುಂ.ವೀರಭದ್ರಪ್ಪ ಅವರ 'ಡೋಮ' ಕತೆಯ ಹರಕು ದೋತರದ ಡೋಮನಿಗೆ ಮನೆತುಂಬಾ ಮಕ್ಕಳು, ಮನಸ್ಸಿನ ನೆಮ್ಮದಿಗಾಗಿ ನಾಯಿಮರಿಯೊಂದನ್ನು ಸಾಕಿದ್ದ. ತನ್ನ ಹಿತ್ತಲಲ್ಲಿ ಒಂದು ಹಣ್ಣಿನಗಿಡನೆಡಬೇಕೆಂದು ಗ್ರಾಮಸೇವಕ ಸೀನಪ್ಪನ ಬೆನ್ನುಬಿದ್ದರೂ ಪ್ರಯೋಜನವಾಗದಿದ್ದಾಗ ಕದ್ದು ಸಸಿತಂದು ನೆಟ್ಟು ಆರೈಕೆಮಾಡತೊಡಗಿದ. ಗೌಡ ಮತ್ತು ಸೀನಪ್ಪ ಸಸಿಕೊಡದಿರಲು ಕಾರಣ ಡೋಮನ ಕಣ್ಣಿನ ಬೆಳಕು. ಹೊಸ ಆಶಯದೆಡೆಗೆ

---

೧೬. ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು : ೧೬.

ಅಡ್ಡಗಾಲು ಹಾಕುವ ಹುನ್ನಾರವನ್ನು ಅರಿತ ಡೋಮ ಸಸಿಕದ್ದು ಪ್ರತಿರೋಧಿಸಿದ್ದು ಸಾಮಾಜಿಕ ಮುಂಚಲನೆ ಎನಿಸುತ್ತದೆ.

ರಾಮಣ್ಣನವರ 'ಚೆಲುವ'ನದು ನೇರದಾರಿಯಾದರೆ ಕುಂ.ವೀರಭದ್ರಪ್ಪ ಅವರ 'ಡೋಮ' ನೇರದಾರಿಯಲ್ಲಿ ಹೋದಾಗ ಸಫಲನಾಗದಿದ್ದಾಗ ಅಡ್ಡದಾರಿ ಹಿಡಿದು ತನ್ನ ಆಕಾಂಕ್ಷೆ ಪೂರೈಸಿಕೊಂಡಿದ್ದು ಪ್ರತಿರೋಧದ ನೆಲೆಯಿಂದೆನ್ನಬಹುದು. ಕೃಷಿ–ಋಷಿ ಎಂಬಂತೆ ಆ ಸಸಿಗಳನ್ನು ನೆಟ್ಟಾಗಿನಿಂದ ಅವು ಬೆಳೆಯುತ್ತಾ ಹೋದಂತೆ ಚೆಲುವನ ಕುಟುಂಬದಲ್ಲಿ ಉಂಟಾದ ಉಲ್ಲಾಸ, ಸಂತಸ, ಸಹಕಾರ, ಹೊಂದಾಣಿಕೆಯ ಅಭೂತಪೂರ್ವ ಭಾವಲಹರಿಯನ್ನೇ ಉಂಟುಮಾಡಿದರೆ ಕುಂವೀ ಅವರ 'ಡೋಮ' ಸಸಿ ಯಾರಿಗೂ ಕಾಣದಂತೆ ಮರೆಮಾಡಿ ಅದನ್ನು ನೋಡಿ ತಾನೊಬ್ಬನೇ ಬೀಗುತ್ತಿದ್ದ. ಬಾಳು ಇರುವುದು ಬದುಕುವುದಕ್ಕಾಗಿ, ಬದುಕಿ ಬೆಳೆಯುವುದಕ್ಕಾಗಿ ಎಂಬ ಶಿವರಾಮಕಾರಂತರ ಮಾತಿನಂತೆ ಸಸಿಗಳು ರಾಮಣ್ಣನವರ 'ಚೆಲುವ' ಮತ್ತು ಕುಂವೀ ಅವರ 'ಡೋಮ'ನಿಗೆ ಪ್ರೇರಕ ಶಕ್ತಿಯಾಯಿತು.

ಡೋಮನಿಗೆ ಸಮಾಧಾನಕೊಡುವ ಮಗ ದ್ಯಾವನಾದರೆ, ರಂಗ ತನ್ನಾಸೆಯಂತೆ ಓದದಿದ್ದಾಗ ಅರಗಿಸಿಕೊಳ್ಳಲಾಗದೆ ಒದ್ದಾಡಿದ. ರಂಗ ಅಡ್ಡದಾರಿ ಹಿಡಿಯಲು ಊರವರ ಕುಮ್ಮಕ್ಕು ಇದ್ದು ಕೆಳವರ್ಗದವರ ಬದುಕು ಸಮಸ್ಯೆಗಳ ತಾಣವಾಗಿಯೇ ಇರಬೇಕೆಂದು ಬಯಸುವ ಮನೋಭಾವ ಕಾರಣವಾಗುತ್ತದೆ. ಮೂರೂ ಹೊತ್ತು ಚೆಲುವ ಮತ್ತು ಡೋಮ ಎಳೆಮಗುವಿನಂತೆ ಗಿಡಜೋಪಾನ ಮಾಡುತ್ತಾ ಬದುಕಿನ ನೆಲೆ, ಭರವಸೆ ಕಂಡುಕೊಳ್ಳಲು ಪ್ರಯತ್ನಿಸಿದರು. ಕೊರಡ್ಕಲ್ ಶ್ರೀನಿವಾಸರಾಯರು ಬರೆದ 'ಧನಿಯರ ಸತ್ಯನಾರಾಯಣ' ಕತೆ ನೆನಪಾಗುತ್ತದೆ.

"ಬಹುಶಃ ಕನ್ನಡದ ಶ್ರೇಷ್ಠಕತೆಗಳಲ್ಲಿ ಒಂದಾದ ಇದು ದಲಿತಬದುಕನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿದೆ. ಜೀತಪದ್ಧತಿಯಲ್ಲಿ ನರಳುತ್ತಿರುವ ಕುಟುಂಬದ ಮಕ್ಕಳಲ್ಲಿ ಮೂಡುವ ಬೆಳೆಯುವ ಹಂಬಲ, ಬೆಳೆದ ಬೆಳೆಯನ್ನು ಕಬಳಿಸುವ ಜಮೀನ್ದಾರಿಕೆ ಕ್ರೌರ್ಯದಿಗಿಲು ಹುಟ್ಟಿಸುತ್ತದೆ. ದಲಿತ ಮಕ್ಕಳಿಬ್ಬರು ಬಾಳೆಕಂದನ್ನು ಜತನಮಾಡಿ ಬೆಳೆಸುವರೀತಿ, ಬೂದ ತುಕ್ರಿಯರ ಕನಸುಗಳು ಬೆಳೆಯುವ ಗಿಡದ ಪ್ರತಿಮೆಯಾಗುತ್ತವೆ. ಬಾಳೆಗೊನೆಯನ್ನು ಕಳೆದುಕೊಂಡ ನಂತರ ಬೂದನ ಅಮಾಯಕ ಕುಣಿತ ಅವನ ಅಸಹಾಯಕತೆ, ನೋವು ಕನಸುಗಳ ಜರ್ಜರಿತ ನಾಶಕ್ಕೆ ಸಂಕೇತವಾಗುತ್ತದೆ. ಊಳಿಗ ಮಾನ್ಯ ವ್ಯವಸ್ಥೆಗೆ ಹಿಡಿದ ಪರಿಣಾಮಕಾರಿ ಕನ್ನಡಿಯ ರೀತಿ ಕತೆ ಅಭಿವ್ಯಕ್ತಗೊಂಡಿದೆ. ರಾಮಣ್ಣನವರ ದಲಿತಾಭಿವ್ಯಕ್ತಿಗಳಲ್ಲಿ ಈ ಕತೆಯ ಪ್ರಭಾವವಿದೆ ಎಂಬುದು

ತೋರುತ್ತದೆ"[೧೭] ಎಂಬ ಲಿಂಗದೇವರು ಅವರ ಅಭಿಪ್ರಾಯಕ್ಕೆ ಎರಡೂ ಕತೆಗಳು ಪೂರಕವೆನಿಸುತ್ತವೆ.

ಪರಂಗಿಹಣ್ಣಿನ ಕನಸಿನಲ್ಲಿದ್ದ ಚೆಲುವನಿಗೆ ಯಾರೋ ಪರಂಗಿಕಾಯಿ ಕೀಳುತಿದ್ದಾರೆನಿಸಿದಾಗ ಅವ್ವ, ಅಪ್ಪನನ್ನು ಎಚ್ಚರಮಾಡಿದನು. ಮೂಗೂರ "ಅವ್ನಯಾವೋನೋ ಕಳ್ಳನಿಗೆ ಹುಟ್ಟಿದೋನು ಪರಂಗಿಕಾಯಿ ಕೀಳೋಕೆ ಬಂದಿರೋನು? ನಿಮ್ಮಪ್ಪ ಬೇಲಿ ಹಾಕಿ, ನೆಟ್ಟನೀರೂದು ಸಾಕಿಸಲವಿದ್ನ ? ಗಿಡಗೋಳ್ನ,

'ಅದ್ಯಾವೋನೋ ಕಳ್ಳನನ್ನಮಗ ಪರಂಗಿಕಾಯಿ ಕದ್ದುಕೀಳ್ತಾ ಇರೋನು?'

'ಕಳ್ಳನನ್ನ ಮಕ್ಕಳ ಕಾಯಿಕೀಳಬ್ಯಾಡಿ ಕಣ್ರೋ! ಗಿಡಗಳ ನಿಮ್ಮಪ್ಪ ಬೆಳೆದಿದ್ನ? ಕದೀಕೆ ನಾಚಿಕೆ ಹೇಸ್ಗೆ ಆಗೋದಿಲ್ವ? ತಾಯಿ ಗಂಡಂದಿರ !' ಎಂದು ತೀವ್ರವಾಗಿ ಪ್ರತಿರೋಧಿಸಿದ.

ಗಣೇಶ 'ಏನ್ಲಾ ಮಾತು ಬರ್‍ತವೆ ಅಂತ ಬಲು ಮಾತಾಡ್ತಿ, ಮರ ನಿಮ್ಮಪ್ಪವೇನ್ಲ?' ಎಂದಾಗ ಮೂಗೂರ ಬೆಳೆದಿದ್ದು ನಾವಲ್ಲವೇ ಇದೆಂಥಾ ವಿಚಿತ್ರ ನ್ಯಾಯವೆಂದು ತಬ್ಬಿಬ್ಬಾದರೂ ಚೇತರಿಸಿಕೊಂಡು. 'ಇಲ್ಲಾ ನಿಮ್ಮಪ್ಪ ನೆಟ್ಟು ಸಾಕಿದ್ದ ಗಿಡಗಳ್ನ ಅಲ್ವೆ' ಎಂದಾಗ ಗಣೇಶ ಜಾತಿಯನ್ನು ಎತ್ತಿ ಮೂಗೂರನನ್ನು ದುರ್ಬಲನಾಗಿಸಲು ಪ್ರಯತ್ನಿಸಿದಾಗ ಮೂಗೂರ ಬಗ್ಗಲಿಲ್ಲ. ತನ್ನನ್ನು ತಡೆಯಲು ಬಂದ ಜನರಿಗೆ,

"ಇಲ್ಲ ಅವನಿಗೆ ಮಣೆಹಾಕಿ ಕುಂಡರಿಸಿ ಪರಂಗಿಕಾಯಿ ಕಿತ್ತುಕೊಡಬೇಕಿತ್ತು ಅಲ್ವೇ ! ಹೋಗ್ರಯ್ಯ ಎಷ್ಟು ದಿನ ನೋಡೋದು, ಸಹಿಸೋದು ಇವರ ಆಟನೆಲ್ಲ!"[೧೮] ಎಂಬ ಮಾತುಗಳಲ್ಲಿ ಶತಮಾನದಿಂದ ಸಹಿಸಿಕೊಂಡ ನೋವು ವ್ಯಕ್ತವಾದಂತೆನಿಸುತ್ತದೆ. ಶ್ರಮವರ್ಗದ ಜನರ ಬದುಕಿನ ಸಂಘರ್ಷದ ಸಾಮಾಜಿಕ ಚಿತ್ರಣವನ್ನು ಕತೆಯಲ್ಲಿ ಕಾಣಬಹುದು.

ಕುಂ.ವೀರಭದ್ರಪ್ಪ ಅವರ 'ಡೋಮ'ನಂತೆ ರಾಮಣ್ಣನವರ 'ಮೂಗೂರ' ಏಕಾಂಗಿಯಾಗಿ ಗೋವಿಂದಸ್ವಾಮಿಗೆ ಜಗ್ಗದೆ ನಿಂತನು. ತಾನು ಬೆಳೆದ ಪರಂಗಿಸಸಿಗಳನ್ನು ಉಳಿಸಿಕೊಳ್ಳಲು ಹಕ್ಕು ಚಲಾಯಿಸಲಾಗದಿದ್ದರೂ ಕತ್ತರಿಸಿ ನಾಶಮಾಡುವ ಹಕ್ಕು ತನಗಿದೆ ಎಂದು ಮಚ್ಚಿನಿಂದ ಎಲ್ಲರೆದುರು ಗಿಡಗಳನ್ನು ಕತ್ತರಿಸಿಹಾಕಿ ಎಲ್ಲರೂ ಬೆಚ್ಚುವಂತೆ ಮಾಡಿದ. ನಂತರ ಆತ್ಮಹತ್ಯೆಯ

---

೧೭ ಲಿಂಗದೇವರು ಹಳೇಮನೆ, ನಿಲುವು, ಪು : ೭.

೧೮ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೩೦೯-೩೧೧.

ಯೋಚನೆ ಮೂಗೂರನಿಗೆ ಬಂದರೂ ಬದುಕನ್ನು ಎದುರಿಸಿಯೇ ತೀರಬೇಕೆಂದು ನಿರ್ಧರಿಸಿದ. ಚೆಲುವನಿಗೆ ಅಗೆಯುವ ಸಪ್ಪಳ ಕೇಳಿದಾಗ ನೋಡಿದ ನೋಟ ಊಹೆಗೆ ನಿಲುಕದ ಸಂತಸನೀಡಿತು. ಸುಬ್ಬಣ್ಣ, ಮೂಗೂರ ಎಲ್ಲರೂ ಸೇರಿ ಗಿಡ ಕೊಚ್ಚಿದ ಜಾಗದಲ್ಲಿ ಹೊಸಪರಂಗಿಸಸಿ ನೆಟ್ಟಿದ್ದು ಬದುಕಿನ ಆಶಾವಾದದ ಸಂಕೇತವೆನಿಸಿತು. ಬಿದ್ದ ಪರಂಗಿಕಾಯಿಗಳನ್ನು ಶಾಲೆಗೆ ಕೊಡಲು ನಿರ್ಧರಿಸಿದ ಚೆಲುವ, ಮುಗೂರ, ಸುಬ್ಬಣ್ಣ ಬದುಕಿನ ಎತ್ತರಕ್ಕೆ ಬೆಳೆದುನಿಂತರು. ಕುಂ.ವೀರಭದ್ರಪ್ಪ ಅವರ 'ಡೋಮ' ಗಿಡದ ಸಾಂಗತ್ಯದಲ್ಲಿ ದೈವಿಕಭಾವವನ್ನೇ ಕಾಣತೊಡಗಿದ. ಅವನ ಮತ್ತು ಪ್ರಕೃತಿಯ ನಡುವಿನ ಬಂಧ ಬೇರಿಳಿಯತೊಡಗಿದಂತೆ ಅಧ್ಯಾತ್ಮಿಕ ಚಿಂತನೆಯೇ ಅವನಲ್ಲಿ ಮೂಡತೊಡಗಿತು.

ಗೌಡ ಸಹಿಸಲಾರದೆ ಡೋಮನ ಮಗರಂಗನಿಗೆ ಪುಡಿಗಾಸಿನ ಆಸೆ ತೋರಿಸಿ ಗಿಡಕತ್ತರಿಸಿ ವಿಲಕ್ಷಣ ಸಮಾಧಾನ ಪಡೆದ. ಎಂದಿನಂತೆ ಡೋಮ ಹಿತ್ತಿಲಿಗೆ ಹೋದಾಗ ಕತ್ತರಿಸಿದ ಗಿಡನೋಡಿ ಅವನಗೋಳು ಹೇಳತೀರದಾಯಿತು. ರಂಗನೇ ಗಿಡಕತ್ತರಿಸಿದ್ದು ಎಂದು ತಿಳಿದಾಗ ಸಂಕಟ ಎಲ್ಲೆ ಮೀರಿತು.

ಡೋಮ ತನಗೆ ಹಣ್ಣಿನಗಿಡ ಕೊಡಲು ನಿರಾಕರಿಸಿದ ವ್ಯವಸ್ಥೆಯನ್ನು ದಿಕ್ಕರಿಸಿ ಕದ್ದುಗಿಡ ತಂದು ನೆಟ್ಟಿದ್ದು ಆತನ ಹಕ್ಕನ್ನು ಪ್ರತಿಪಾದಿಸುತ್ತದೆ. ಡೋಮ ಮತ್ತು ಚೆಲುವ ಆ ಗಿಡದಲ್ಲಿ ಪಡೆಯುತ್ತಿರುವ ಸಮಾಧಾನವನ್ನು ಸಹಿಸದ ಗೌಡ ಮತ್ತು ಗೋವಿಂದಸ್ವಾಮಿ ವರ್ತನೆ ಬದುಕನ್ನು ಚಿವುಟುವ ಪ್ರತಿಗಾಮಿಧೋರಣೆ ಸಾಮಾಜಿಕ ಸ್ವಾಸ್ಥ್ಯ ಹಾಳುಮಾಡುವಂತಹದು. ಗೌಡ ಮತ್ತು ಗೋವಿಂದಸ್ವಾಮಿಯಂತಹವರು ತಳವರ್ಗದವರ ಸಣ್ಣಪುಟ್ಟ ಸಂತೋಷವನ್ನು ಅಮಾನವೀಯವಾಗಿ ಹೊಸಕಿಹಾಕುವ ಮೇಲ್ವರ್ಗದವರ ಮನಸ್ಥಿತಿ ಬದಲಾಗಬೇಕಾದ ಅಗತ್ಯತೆಯನ್ನು ಕತೆಯ ಭಿತ್ತಿ ಕಾಣಿಸುತ್ತದೆ.

ಡೋಮನ ಮಗ ರಂಗ ತನ್ನ ಜನರಿಗಿಂತ ಭಿನ್ನವಾಗಿ ನಾಗರೀಕನಾಗಿ ಬದಲಾದರೂ ಡೋಮನಿಗೆ ಅವನನ್ನು ವಿದ್ಯಾವಂತನನ್ನಾಗಿ ಮಾಡಲಾಗದಿದ್ದದ್ದು ದಲಿತವರ್ಗದ ಆಶಯದ ಹಿನ್ನಡೆ ಎನ್ನಬಹುದು.

ಮಗಳ ಅನೈತಿಕತೆ, ಮಗನಿಂದಾದ ಅವಮಾನ, ನಿರಾಶೆ, ದ್ಯಾವಗ ಹೊಲದ ಆಸೆಗೆ ಸ್ವಾಭಿಮಾನ ಬಿಟ್ಟು ಮದುವೆಯಾದದ್ದು, ಹೆಂಡತಿಸಾವು ಎಲ್ಲವನ್ನೂ ಸಹಿಸಿದ್ದ ಡೋಮ ರೊಚ್ಚಿಗೆದ್ದಿದ್ದು ಗಿಡಕತ್ತರಿಸಿದ ವಿಚಾರದಲ್ಲಿ ಮಾತ್ರ.

"ಕುಂ.ವೀರಭದ್ರಪ್ಪ ಚಿತ್ರಿಸುವ ಲೋಕ ದಲಿತರ ಜೀವನದ್ದು, ಅಲ್ಲಿಯ ಶೋಷಣೆಗೆ ಹೋಲಿಕೆ ಬೇರೆ ಸಿಗುವುದಿಲ್ಲ. ಊಳಿಗಮಾನ್ಯ ವ್ಯವಸ್ಥೆಯ ರೋಗಗ್ರಸ್ಥ ಅಧಿಕಾರವನ್ನು ಪ್ರತಿಭಟಿಸಲು ಅಲ್ಲಿ ಜನ ಸಂಘಟಿತರಾಗದ, ವರ್ಗ ಪ್ರಜ್ಞೆ ಕೆಲಸಮಾಡದ ಪ್ರಾದೇಶಿಕತೆಯ ಸಂದರ್ಭವನ್ನು ಕುಂವೀ ಚಿತ್ರಿಸುತ್ತಾರೆ. ಅಲ್ಲಿಯ ಶೋಷಣೆಯ ಒಡಲಲ್ಲೇ ವೈಯಕ್ತಿಕ ಮಟ್ಟದ ಪ್ರತಿಭಟನೆ ಅನಿವಾರ್ಯವಾಗಿ ಸಕಾರಣವಾಗಿ ಸ್ಫೋಟಿಸುವುದನ್ನು ಅವರು ಕಾಣಿಸುತ್ತಾರೆ"[೧೯] ಎಂಬ ಆರ್.ವಿ. ಭಂಡಾರಿ ಅಭಿಪ್ರಾಯ ದಲಿತ ಬದುಕಿನ ವಾಸ್ತವಿಕ ನೋಟ ನೀಡುತ್ತದೆ.

ಎರಡೂ ಕತೆಗಳಲ್ಲಿ ಹತಾಶೆ, ಆಕ್ರೋಶ, ಆವೇಶ ಅಡ್ಡಜಿಗಿತಗಳಿದ್ದರೂ 'ರಾಮಣ್ಣ; ನವರ 'ಮೂಗೂರ' ಹೊಸ ಆಶಯದ ಭರವಸೆ ನೀಡಿದರೆ 'ಡೋಮ' ತನ್ನ ಕ್ರೋಧವನ್ನು ಸಮಾಧಾನಿಸಿಕೊಂಡಿದ್ದು ಸಾಮಾಜಿಕ ಬದುಕಿಗಾಗಿ ಎನ್ನಬಹುದು. ಕುಂ.ವೀರಭದ್ರಪ್ಪ ಅವರ ಕತೆ ಪ್ರತಿರೋಧವನ್ನು ಬದುಕಿನ ನೆಲೆಯಿಂದ ಪ್ರತಿಪಾದಿಸುತ್ತದೆ. ರಾಮಣ್ಣ ಅವರ 'ನಂಜಿನಕೊನೆ' ಕತೆಯ ಮರಿನಂಜ ಜಮೀನ್ದಾರರ ಮನೆಯ ನಿಷ್ಠಾವಂತ ಆಳು. 'ಬದುಕಿದರೆ ಬದುಕಬೇಕು ಹರಿಶ್ಚಂದ್ರ ಮಹಾರಾಜನಂಗ' ಎಂಬ ಆದರ್ಶದ ನೆಲೆಗೆ ಬಂದು ನಿಲ್ಲಬಲ್ಲವನಾಗಿದ್ದನು.

ಕುಂ.ವೀರಭದ್ರಪ್ಪ ಅವರ 'ಹತ್ಯೆ' ಕತೆಯ ಬಲರಾಮ ಒಡೆಯನಿಗೆ ನಿಷ್ಠನಾಗಿರುವ ಕಲಾತ್ಮಕ ಕೊಲೆಗಾರ. ಕೊಲೆಗಾರ ಅಂತಃಕರಣ, ಪ್ರೀತಿ, ವಾತ್ಸಲ್ಯಗಳಿಗೆ ಸೋತು ಮಾನವೀಯ ನೆಲೆಗೆ ಬಂದು ನಿಲ್ಲುತ್ತಾನೆ. ರಾಮಣ್ಣ ನವರ 'ನಂಜಿನಕೊನೆ' ಮತ್ತು ಕುಂ.ವೀರಭದ್ರಪ್ಪ ಅವರ 'ಹತ್ಯೆ' ಕತೆಗಳೆರಡೂ ದಾಸ್ತೋವಸ್ಕಿಯ "ಅಪರಾಧ ಮತ್ತು ಶಿಕ್ಷೆ" ಕಾದಂಬರಿಯಿಂದ ಪ್ರೇರಣೆ ಪಡೆದವನ್ನೆಬಹುದು. ಇಲ್ಲಿ ರಾಸ್ಕೋಲ್ನಿಕೋವ್‌ಗೆ ಗಿಲ್ಟ್ ಕಾಂಪ್ಲೆಕ್ಸ್‌ನಿಂದ ಹೊರಬರುವುದೇ ಮುಖ್ಯವೆನಿಸಿ ಮಾಡಿದ ಅಪರಾಧವನ್ನು ಸಮಾಜದ ಮುಂದೆ ಒಪ್ಪಿಕೊಳ್ಳುವ ಮನಸ್ಸು, ಆತ್ಮಸಾಕ್ಷಿ ಮಹತ್ವದ್ದೆನಿಸುತ್ತದೆ.

ರಾಮಣ್ಣನವರ ಮರಿನಂಜನಿಗೆ ಗೌಡರ ಅವ್ವ ತಾಯಕ್ಕ. "ಇದ್ಯಾಕೆ ಹಿಂಗೆ ಯೋಚಿಸಿ ಮರಿನಂಜ, ಹುಟ್ಟಿಸಿದ ದೇವ್ರು ಹುಲ್ಲು ಮೇಯಿಸ್ತನ? ನಿಯತ್ತೊಂದು ಮನ್ಸನ ತಾವು ಸರಿಯಾಗಿದ್ದು ಬುಟ್ರೆ ಎಲ್ಲಾದರೂ ಬದುಕಬೋದು, ಯಾವುದಕ್ಕೂ ನಿಯತ್ತು ಮುಖ್ಯ. ಉಂಡಮನೆಗೆ ಎರಡು ಬಗೀದೇಹೋದ್ರೆ ದೇವ್ರು ಸದಾ ಬೆನ್‌ಹಿಂದೆ ಇರ್ತಾನೆ"[೨೦]

---

೧೯ ಆರ್.ವಿ. ಭಂಡಾರಿ, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಪುಟ : ೧೬೫.

೨೦ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೫೧.

ನಿಯತ್ತಿನ ಪಾಠವನ್ನು ಉಳ್ಳವರು ಬಡವರಿಗೆ, ತಳವರ್ಗದವರಿಗೆ ಬೋಧಿಸಬಲ್ಲರಷ್ಟೇ. ಕೊಲೆಗಾಗಿ ಮುಂಗಡ ಹಣ ಪಡೆದ ಮರಿನಂಜ ಸರಿ ತಪ್ಪುಗಳ ತೀವ್ರ ಜಿಜ್ಞಾಸೆಗೆ ಒಳಗಾಗುತ್ತಾನೆ. ಒಳಿತು-ಕೆಡುಕುಗಳ ಬಗ್ಗೆ ಸಮರ್ಥವಾಗಿ ವಿಚಾರಮಾಡಬಲ್ಲವನಾಗಿದ್ದರೂ ಖಚಿತನಿಲುವಿಗೆ ಬರಲು ತೊಳಲಾಡಿ ಕೊನೆಗೆ ಕೆಡುಕಿದಾರಿ ಹಿಡಿದು ಒಪ್ಪಿದಂತೆ ಕೊಲೆಮಾಡುತ್ತಾನೆ.

"ಗಾಂಧೀಜಿ ಕೌರವ ಮತ್ತು ಪಾಂಡವರ ನಡುವಿನ ಕುರುಕ್ಷೇತ್ರದಲ್ಲಿ ನಡೆಯುವ ವಾಸ್ತವದ ಯುದ್ಧವೆಂದು ನೋಡುವುದಿಲ್ಲ. ಬದಲಿಗೆ ನಮ್ಮ ದೇಹ ಮನಸ್ಸುಗಳೊಳಗೆ ನಡೆಯುತ್ತಿರುವ ಒಳಿತು-ಕೆಡುಕಿನ ಶಕ್ತಿಗಳ ನಡುವಿನ ಸಮರ ಎಂದು ಅರ್ಥೈಸುತ್ತಾರೆ. ಅರ್ಜುನನ ಸಮಸ್ಯೆ ತನ್ನ ಬಂಧು-ಬಾಂಧವರನ್ನು ಕೊಲ್ಲಬೇಕು ಎಂಬುದೇ ಹೊರತು, ಹಿಂಸೆಯ ಬಗೆಗಿನ ಜಿಗುಪ್ಸೆಯಲ್ಲ ಅಂತೆಯೆ ಅಹಿಂಸೆ ಧೈರ್ಯಶಾಲಿಯ ಆಧ್ಯಾತ್ಮಿಕ ಶಕ್ತಿ"[೨೧] ಎಂದು ಹೇಳುತ್ತಾರೆ ಪೃಥ್ವಿಚಂದ್ರದತ್ತಶೋಭಿ ಅಭಿಪ್ರಾಯ ಕತೆಗೆ ಪೂರಕವೆನಿಸುತ್ತದೆ.

ರಾಮಣ್ಣನವರ ಮರಿನಂಜ ಕೊಲ್ಲುವ ಮುನ್ನ ದಶದಿಕ್ಕುಗಳ ಯೋಚನೆ ಮಾಡಿದರೂ ಒಡತಿ ತಾಯಕ್ಕನಲ್ಲಿ ತಾಯ್ತನದ ಅಂತಃಕರಣ ಪ್ರೀತಿ, ವಾತ್ಸಲ್ಯಗಳನ್ನು ಕಂಡರೂ ಮಾಡಿದ್ದು ಕೊನೆಗೆ ಕೊಲೆಯೇ. ಕೊಲ್ಲುವ ಮೊದಲು ಅವನ ನಡೆಗಳೆಲ್ಲವೂ ಮಾನವೀಯವಾಗಿದ್ದು ಕೊಲೆಯೇ ಎಲ್ಲಕ್ಕೂ ಅಂತಿಮವೆನಿಸುವುದಿಲ್ಲ. ಏನೇ ಆದರೂ ನೀತಿ ನೀತಿಯೇ, ಅನೀತಿ ಅನೀತಿಯೇ ಎಂಬುದು ರುಜುವಾತಾಗುತ್ತದೆ. ರಾಮಣ್ಣನವರ 'ನಂಜಿನಕೊನೆ'ಯ ನಿಷ್ಠೆಯ ಆಳು ಮರಿನಂಜ' ಕೊಲೆಗಾರನೆಂಬ ಪಟ್ಟ ಪಡೆದುಕೊಳ್ಳುತ್ತಾನೆ. ಕುಂ.ವೀರಭದ್ರಪ್ಪ ಅವರ 'ಹತ್ಯೆ' ಕತೆಯ ಕೊಲೆಗಾರ ಬಲರಾಮನಲ್ಲಿ ಪರಿವರ್ತನೆಯಾಗಿ ಮನುಷ್ಯನೆನಿಸಿಕೊಳ್ಳಲು ಬಯಸುತ್ತಾನೆ. ಕೊಲ್ಲಲು ಆ ಮನೆಗೆ ಬಂದ ಬಲರಾಮ, ಆ ಮನೆಯಲ್ಲಿ ಕೂಸು ಹುಟ್ಟುವ ಸಂಭ್ರಮ ಎರಡು ವಿರುದ್ಧ ಧ್ರುವಗಳಾಗಿರುತ್ತವೆ. ಬಲರಾಮನ ಮನಃಪರಿವರ್ತನೆಗೆ ಕಾರಣವಾದದ್ದು ಅಕ್ಕ-ತಮ್ಮನ ಬಗ್ಗೆ ತೋರಿಸಿದ ಮಮತೆಯ ವಾತ್ಸಲ್ಯದ ವಿರಾಟ್ ಸ್ವರೂಪ ಪ್ರಕಟಿಸುವ ಮಾನವ ಸಂಬಂಧಗಳು, ಆ ಮನೆಯ ಪ್ರೀತಿ-ವಿಶ್ವಾಸ, ಅಪ್ಯಾಯಮಾನವಾದ ವಾತಾವರಣ ಅವನ ಹೃದಯವನ್ನು ಸಂಸ್ಕರಿಸತೊಡಗಿದವು.

ಸುಕ್ಕಿನ ಮುದುಕಿಯ ವಾತ್ಸಲ್ಯಭರಿತ ನೋಟ ಅವನಲ್ಲಿರುವ ಕ್ರೌರ್ಯವನ್ನು ಅಲ್ಲಾಡಿಸತೊಡಗಿತು. ಅರಿಯದ ಬಂಧ ಸುತ್ತಿಕೊಳ್ಳುತ್ತಿದೆ ಎನಿಸತೊಡಗಿದಾಗ ಬಲರಾಮ ತಾನು

---

೨೧ ಪೃಥ್ವಿಚಂದ್ರದತ್ತ ಶೋಭಿ, ಪ್ರಜಾವಾಣಿ, ೯.೧೦.೨೦೧೫, ಪು : ೬.

ಕಳೆದುಕೊಂಡಿದ್ದೇನೆಂದು ಅರಿವಾಗುತ್ತಿದ್ದಂತೆ ಹೊಸ ಬದುಕಿನೆಡೆಗೆ ಬಹುದೂರ ಹೊರಡುತ್ತಾನೆ. ಕತೆಯಲ್ಲಿ ಬರುವ ದೂರ, ಮೌನ, ಸಂವೇದನೆ ಬೆಲೆಕಟ್ಟಲಾಗದ ಮೌಲ್ಯವಾಗಿ ಭಾವನಾಪ್ರಪಂಚವನ್ನು ಪಕ್ವವಾಗಿಸುತ್ತದೆ ಎಂದು ಹೇಳುತ್ತಾರೆ. ಅವರು ರಾಮಣ್ಣನವರಂತೆ ಭಾವನಾಪ್ರಪಂಚಕ್ಕೆ ಸೇರಿಬಿಡುತ್ತಾರೆ. ರಾಮಣ್ಣನವರ 'ನಂಜಿನ ಕೊನೆ'ಯಲ್ಲಿ ನಂಜು ಮುಂದುವರಿಯುವ ಸಾಧ್ಯತೆ ಕಂಡುಬಂದರೆ ಎಂದು ಹೇಳುತ್ತಾರೆ ಅವರ 'ಹತ್ಯೆ' ಕತೆಯಲ್ಲಿ ವೃತ್ತಿ ಪರ ಕೊಲೆಗಾರನ ಮನಸ್ಸು ಪರಿವರ್ತನೆಯಾಗುತ್ತದೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮಾನವ ಸಹಜಪ್ರವೃತ್ತಿಯಲ್ಲಿ ಒಂದಾದ ಲೈಂಗಿಕತೆ ಚಿತ್ರಿತವಾಗಿದೆ. ಅವರ ಕತೆಗಳಲ್ಲಿ ಮೇಲ್ವರ್ಗದ ಲೈಂಗಿಕ ಶೋಷಣೆಗೆ ಹೆಚ್ಚಾಗಿ ತಳವರ್ಗದ ಕೂಲಿಹೆಣ್ಣು ಮಕ್ಕಳು ಬಲಿಯಾಗುತ್ತಾರೆ. ಈ ಅನೈತಿಕ ಸಂಬಂಧಗಳು ಕೆಲವೊಮ್ಮೆ ಒಪ್ಪಿತವಾದರೆ, ಕೆಲವೊಮ್ಮೆ ಅಸಹಾಯಕತೆ, ಬಡತನ, ಬಲವಂತವೂ ಕಾರಣವಾಗುತ್ತದೆ.

ರಾಮಣ್ಣನವರ 'ಬಾವಿಗೆ ಬಿದ್ದದ್ದು ದೆವ್ವ', 'ಗರ್ಜನೆ', 'ಕಣಿವೆಯ ಅಂಚು', 'ಕಳೆ' ಕತೆಗಳು ಮತ್ತು ಕುಂವೀ ಅವರ 'ಪಾವಲಿ', 'ಎಂಜಲು', 'ಕಳೇಬರ', 'ನಾಯಿಗಳು', 'ಸಮನ್ವಯ', 'ಕತ್ತಲನು ತ್ರಿಶೂಲಹಿಡಿದ ಕಥೆ' ಕತೆಗಳು ಲೈಂಗಿಕ ವಿಚಾರವನ್ನು ಸಾಮಾಜಿಕ ನೆಲೆಯಲ್ಲಿ ಚರ್ಚಿಸುತ್ತವೆ.

ರಾಮಣ್ಣನವರ 'ಬಾವಿಗೆ ಬಿದ್ದದ್ದು ದೆವ್ವ' ಕಥೆಯಲ್ಲಿ ವಿಧವೆ ಸುಶೀಲಮ್ಮ ತನ್ನ ತಪ್ಪಿಗೆ ನೊಂದು ಪಶ್ಚಾತ್ತಾಪದಿಂದ ಅಂಜಿ ಅಳುಕಿ ನಡೆದರೂ ಸಾಮಾಜಿಕವಾಗಿ ತುಳಿಯಲ್ಪಡುತ್ತಾಳೆ. ಸುಶೀಲಮ್ಮನ ಮದುವೆ ಮುದುಕನೊಟ್ಟಿಗೆ ಆಗದಿದ್ದರೆ ಬಹುಶಃ ಆಕೆ ದಾರಿತಪ್ಪುತ್ತಿರಲಿಲ್ಲ. ದೈಹಿಕ ಕಾಮನೆಗಳನ್ನು ಕೆಲವೊಮ್ಮೆ ಕೆಲವರಿಗೆ ನಿಯಂತ್ರಿಸಲಾಗದಿದ್ದಾಗ ಸಮಾಜ ಒಪ್ಪದ ತಪ್ಪುಗಳಾಗುತ್ತವೆ. ಸುಶೀಲಮ್ಮನ ಅನೈತಿಕ ಸಂಬಂಧಕ್ಕೆ ಇಡೀ ಸಮಾಜವೇ ನಿಂದಿಸತೊಡಗಿದಾಗ ಅಧೀರಳಾದಳು. ಒಮ್ಮೆ ಸುಶೀಲಮ್ಮ ಮಾಡಿದ ತಪ್ಪನ್ನು ಸಮಾಜ ಕ್ಷಮಿಸಿದ್ದರೆ ಅವಳು ತನ್ನ ಪಾತ್ರೆ-ಬಟ್ಟೆ ತೊಳೆಯಲು ಜನರಿಲ್ಲದೆಡೆಗೆ ಮಗುವನ್ನು ಕರೆದುಕೊಂಡು ಹೋಗುತ್ತಿರಲಿಲ್ಲ. ಮಗು ಸಾಯುತ್ತಿರಲಿಲ್ಲ, ಅನಾಹುತ ತಪ್ಪಿ ಅವಳ ಬದುಕು ಹಸನಾಗಬಹುದಿತ್ತು. ಆದರೆ ಸಮಾಜ ಅದಕ್ಕೆ ಅವಕಾಶ ನೀಡದೆ ಅವಳ ಬದುಕನ್ನೇ ಬಲಿ ತೆಗೆದುಕೊಂಡಿತು.

ಅನೈತಿಕ ಸಂಬಂಧ ಬಗ್ಗೆ ಜನರು, "ಮಲ್ಲಿಕಾರ್ಜುನಪ್ಪನ ಅದೃಷ್ಟವೇ ಅದೃಷ್ಟ. ಒಳ್ಳೆ ಮಿಕವನ್ನೇ ಹೊಡೆದ. ಬೇಟೆಯ ದಾಹ ಮುಗಿದವನಂತೆ ಕಾರ್ಯಕೈಮಿಂಚಿದಾಗ ತಲೆತಪ್ಪಿಸಿಕೊಂಡ.

ಆಸ್ತಿಯಲ್ಲಿ ಒಂದು ಕವಡೆಯನ್ನೂ ದಕ್ಕಿಸಿಕೊಳ್ಳಲು ಸಾಧ್ಯವಿಲ್ಲವೆಂದ ಮೇಲೆ ಮನೆಕಡೆ ಹೆಜ್ಜೆ ಇಡಲಿಲ್ಲ. ಎಲ್ಲ ಗುಟ್ಟಿನಲ್ಲಿಯೇ ಜರುಗಿತು. ಆಮೇಲೆ ಗಂಡುಮಗುವಾದದ್ದು ಮಗುವಾದ ಮಾರನೇ ದಿನವೇ ರಟ್ಟಾಯಿತು. ಆದರೂ ಜಗ್ಗಲಿಲ್ಲ. ಮನಸ್ಸು ಕಲ್ಲಾಯಿತು, ಆಸ್ತಿಗೊಬ್ಬ ಹಕ್ಕುದಾರ ಬಂದನೆಂದು"[೨೨] ಆಡಿಕೊಂಡರು. ಇದು ಗ್ರಾಮೀಣ ಬದುಕಿನಲ್ಲಿ ಸಹಜ, ಆದರೆ ಸುಶೀಲಮ್ಮ ಕಂಡ ಜಗತ್ತಿನಲ್ಲಿ ಅವಳಿಗೆ ಅದೇ ಸತ್ಯ, ಸರಿಯೆನಿಸಿತು. ಮಲಮಗಳು, ಮಗಳು, ಹೆತ್ತವರು, ಒಡಹುಟ್ಟಿದವರು ಯಾರಿಂದಲೂ ಸಣ್ಣ ಬೆಂಬಲ, ಸಹಾಯ ಸಿಗಲಿಲ್ಲ, ಒಂಟಿಯಾಗಿ ಮಗುವನ್ನು ಬೆಳೆಸತೊಡಗಿದಳು. ಸುಶೀಲಮ್ಮ ತನ್ನ ಬದುಕನ್ನು ಭಿನ್ನವಾಗಿ ನೋಡಿದಾಗ ಅವಳು ಆರಿಸಿಕೊಂಡ ಬದುಕಿನ ಮಾರ್ಗ ಅವಳಿಗೆ ಸರಿಯೆನ್ನಿಸಿದ್ದರಲ್ಲಿ ತಪ್ಪಿರಲಿಲ್ಲವೆನಿಸುತ್ತದೆ. ಅವಳು ತನ್ನ ಬದುಕಿಗೆ ಆಸರೆ ಬೇಕೆನಿಸಿದಾಗ ಅನೈತಿಕತೆ ಅವಳಿಗೆ ತಪ್ಪೆನಿಸಲಿಲ್ಲ. ಇಷ್ಟೆಲ್ಲಾ ಗಟ್ಟಿತನರೂಢಿಸಿಕೊಂಡರೂ ಮಗು ಕೊಳಕ್ಕೆ ಬಿದ್ದು ಸತ್ತಾಗ ಅಧೀರಳಾದರೂ ಜೀವಕಳೆದುಕೊಳ್ಳುವ ಯೋಚನೆ ಮಾಡಲಿಲ್ಲ.

ಆದರೆ ಕುಂ.ವೀರಭದ್ರಪ್ಪ ಅವರ 'ಪಾವಲಿ' ಕತೆಯ ತಿಮ್ಮಕ್ಕ ಸರ್ಕಾರಿ ನೌಕರ ಎಂಟೇಸಿಯನ್ನು ಡಾಣಾಡಂಗುರವಾಗಿ ಇಟ್ಟುಕೊಂಡಿದ್ದಳು. ಖುಲ್ಲಂ ಖುಲ್ಲಾ ಬದುಕಿನ ಅವಳು ಕೂಲಿ ಮಾಡಿ ಊರವರು ತನ್ನ ಸುದ್ದಿಗೆ ಬರದಂತೆ ವರ್ಚಸ್ಸು ಬೆಳೆಸಿಕೊಂಡು ತನ್ನ ನೆಲೆಯಲ್ಲಿ ನಿಯತ್ತಾಗಿ ಬದುಕುತ್ತಿದ್ದಳು.

ರಾಮಣ್ಣನವರ ಕತೆಯ ಸುಶೀಲಮ್ಮ ತಿಮ್ಮಕ್ಕನಷ್ಟು ದಿಟ್ಟೆಯಾಗಿರಲಿಲ್ಲ. ತಳವರ್ಗದ ಹೆಣ್ಣುಮಗಳ ಧೈರ್ಯ ಇಲ್ಲದಿದ್ದರೂ ತನ್ನ ನಿರ್ಧಾರಸರಿ ಎನಿಸಿದ್ದನ್ನು ಮಾಡಿದ್ದರೂ ಸಮಾಜದ ಕಟುನುಡಿಗಳನ್ನು ಎದುರಿಸುವಲ್ಲಿ ಸೋತಳು. **"ಬದುಕಿನಲ್ಲಿ ದಾರಿತಪ್ಪಿ, ಸಂಪೂರ್ಣ ಹದಗೆಟ್ಟ, ಒಂದು ವಿಧದಲ್ಲಿ ತನ್ನನ್ನೂ ಮೀರಿಸಿದ ಮಗಳನ್ನು ನೆನೆದು ನೊಂದುಕೊಂಡಳು. ಸತ್ತ ಮಗು, ಬಾಳ್ವೆಯ ನಿಯಮದ ಗಡಿರೇಖೆಯನ್ನು ಉಲ್ಲಂಘಿಸಿದ ಮಗಳು, ಕಾದಸೀಸವನ್ನುಯ್ದು ಜನ"**[೨೩] ಸುಶೀಲಮ್ಮನಿಗೆ ಮನುಷ್ಯರ ಸಹವಾಸವೇ ಬೇಡವೆನಿಸಿತು. ಸುಶೀಲಮ್ಮನ ಒಂದು ತಪ್ಪಿಗೆ ಸಮಾಜ ಬದುಕುವ ಹಕ್ಕನ್ನೇ ಕೊಡಲಿಲ್ಲ. ಮತಿಭ್ರಮಣೆಯಾಗಿ ತುತ್ತು ಅನ್ನಕ್ಕಾಗಿ ಬೊಗಸೆ ನೀರಿಗಾಗಿ, ಗಂಟಿನ ಸೀರೆಯುಟ್ಟು ಅಲೆದರೂ ಸಮಾಜಕ್ಕೆ ಸಮಾಧಾನ ಸಿಗಲಿಲ್ಲ.

---

[೨೨] ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೨೧೭.

[೨೩] ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೨೧೯.

ಕುಂ.ವೀರಭದ್ರಪ್ಪ ಅವರ 'ಪಾವಲಿ' ಕತೆಯ ತಿಮ್ಮಕ್ಕ ಗಂಡನನ್ನು ಚಿಕ್ಕಪ್ರಾಯದಲ್ಲೇ ಕಳೆದುಕೊಂಡು ದುಡಿದು ಮಕ್ಕಳನ್ನು ಸಾಕಬೇಕಾದ ಅವಳು ಬಾಯಿಜೋರಿಲ್ಲದಿದ್ದರೆ ಬದುಕು ಸಾಧ್ಯವಿಲ್ಲ ಎಂದು ಕಂಡುಕೊಂಡವಳು. **"ಮೂರನ್ನೇ ಕಳ್ಕೊಂಡಿರೋಳ್ಗೆ, ಸಾಕನೇದು ಕಳ್ಕೋಳ್ಳೋದು ಕಷ್ಟವಲ್ಲ, ಒಂದಕ್ಕಿದ್ರೆ ಒಂದಕ್ಕಿಲ್ಲರ ಬಾಳೇವು"**[೨೪] ಅವಳ ಬಡತನ ಬದುಕಿಗಾಗಿ ಏನನ್ನೂ ಕಳೆದುಕೊಳ್ಳಲು ತಯಾರಿರಬೇಕಾದ ನಿಷ್ಠೂರ ಸತ್ಯ ಅವಳ ಅರ್ಭಟವನ್ನು ಜೋರಾಗಿಸುತ್ತದೆ. ಬದುಕಿನ ದಾರಿ ಹುಡುಕಿಕೊಂಡು ಹೋದ ಮಕ್ಕಳನ್ನು ನಿರ್ಲಿಪ್ತ, ನಿರಾಶೆ, ಸ್ವಾತಂತ್ರ್ಯದ ನೆಲೆಯಲ್ಲಿ ನೋಡಿದವಳು ತಿಮ್ಮಕ್ಕ. ಇದ್ದೊಬ್ಬ ಮಗ ನಾರಾಣಿಯನ್ನು ಓದಿಸುವ ಕನಸು ಕಂಡಿದ್ದು ಅವಳ ಪ್ರಗತಿಪರ ಆಶಯವೆನಿಸುತ್ತದೆ.

ರಾಮಣ್ಣನವರ ಕಥೆಯ 'ಸುಶೀಲಮ್ಮ' ಗುಟ್ಟಾಗಿ ಅನೈತಿಕಸಂಬಂಧ ಇಟ್ಟುಕೊಂಡಿದ್ದಳು. ಆದರೆ ಕುಂ.ವೀರಭದ್ರಪ್ಪ ಅವರ ಕತೆಯ 'ತಿಮ್ಮಕ್ಕ' ತನ್ನ ಬದುಕಿಗೆ ಸಂಗಾತಿಬೇಕೆಂದು ಅಂಜದೆ ಮುಚ್ಚುಮರೆಯಿಲ್ಲದೆ ಅನೈತಿಕಸಂಬಂಧವನ್ನು ಇಟ್ಟುಕೊಂಡಿದ್ದಳು. ಎಂಟೇಸಿ ಕಾಸಿಗಾಗಿ ಸಲ್ಲದ ಜಗಳ ತೆಗೆದಾಗ,

"ಯಂಗಸ್ತು ದುಡಿದಿನ್ನ ಹರಕೊಂಡು ತಿಂಬಲಕ ನಾಚ್ಕೆ ಆಗಲ್ಲೇನಲೋ ಬಾಡ್ಯಾ... ನಾನ್ ನಿನ್ನ ತಾಳಿಕಟ್ಟಿರಗಂಡನಿಗಿಂತ ಹೆಚ್ಚಾಗಿ ನೋಡ್ಕೊಂಡೆ ನೋಡು, ಎಂಥಾ ಟೇಮಿನಾಗ ಜೊತೆಯಾದ್ನೋ ಏನೋ ! ಹಾಳು ಮಾಡಲಿಕ್ಕತ್ತಿಬಿಟ್ಟೆ. ಒಂದಿನಾದ್ರು ಉಂಡ್ಯಾ ಅಂತ ಕೇಳ್ಲಿಲ್ಲ.. ಉಪಾಸ ಅದೀಯಂತನೂ ಕೇಳ್ಲಿಲ್ಲ. ಇನ್ನು ಮ್ಯಾಲ ನನ್ನಗೂ ನಿನ್ಗೂ ರುಣ ತೀರ್ತು"[೨೫] ಎಂದು ಕೈಯಲ್ಲಿ ಕಾಲ್ಮರಿ ಹಿಡಿದ ತಿಮ್ಮಕ್ಕ ಯಾವ ಸಂಬಂಧಕ್ಕೂ ಅಂಟದ ಛಾತಿಯವಳಾಗಿದ್ದಳು. ಆದರೂ ಎಂಟೇಸಿ ಹೋದಾಗ ತನ್ನನ್ನು ಶಪಿಸಿಕೊಂಡಳು. ತನ್ನ ಬಿಟ್ಟುಹೋದ ಮಗನನ್ನು ನೆನೆದು ನೊಂದಳು, ಬೀಡು ಬೀಸು ನಡತೆಯವಳು ಎನಿಸುವ ತಿಮ್ಮಕ್ಕನಂತಹವರು ಸಮಾಜವನ್ನು ಎದುರಿಸಬಲ್ಲರು. ರಾಮಣ್ಣನವರ ಸುಶೀಲಮ್ಮ ಸಾಮಾಜಿಕನಿಂದನೆಗೆ ಅಂಜಿ ಬದುಕನ್ನು ಕೊನೆಗಾಣಿಸಿಕೊಂಡಳು. ತಿಮ್ಮಕ್ಕ ಮತ್ತು ಸುಶೀಲಮ್ಮನಂತಹವರು ಸಮಾಜದಲ್ಲಿ ಇರುವ, ಇರಬಹುದಾದ ಪ್ರಸಂಗಗಳನ್ನು ಲೇಖಕರಿಬ್ಬರೂ ಕಣ್ಮುಂದೆ ತರುತ್ತಾರೆ. ತಿಮ್ಮಕ್ಕನಿಗೆ ಸಮಾಜ ಎದುರಿಸುವ ಧೈರ್ಯವಿದ್ದುದರಿಂದ ಅವಳ ಬದುಕು ಅವಳದಾಗಿ ಉಳಿಯುತ್ತದೆ.

---

೨೪ ಕುಂ.ವೀರಭದ್ರಪ್ಪ, ಬರೀಕಥೆಯಲ್ಲೋ ಅಣ್ಣಾ, ೨೦೧೦, ಪು : ೩೪೦.

೨೫ ಅದೇ, ಪು : ೩೪೩.

ಆರ್.ವಿ. ಭಂಡಾರಿಯವರು ಹೇಳುವಂತೆ **"ಅಸಮಾನತೆ ಅನ್ಯಾಯ, ಶೋಷಣೆಯನ್ನು ಮೂಲಧನ ಮಾಡಿಕೊಂಡು ಯುಗಯುಗಗಳಿಂದ ಬಡವರನ್ನು ಮತ್ತು ಜಾತಿದೃಷ್ಟಿಯಿಂದ ಹೀನರಾದವರನ್ನು ತುಳಿಯುವುದು"**[೨೬] ಎಂಬ ಅಭಿಪ್ರಾಯ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿನ ಗ್ರಾಮೀಣಕೇಂದ್ರಿತ ವಸ್ತುವಿಗೆ ಪೂರಕವಾಗಿದೆ.

ರಾಮಣ್ಣನವರ 'ಕಣಿವೆಯ ಅಂಚು' ಕತೆಯಲ್ಲಿ ಸರೋಜ ತಾಯ್ತತನಕ್ಕಾಗಿ ಹಂಬಲಿಸಿ ಅನೈತಿಕ ಸಂಬಂಧದಿಂದಾದರೂ ಮಗು ಪಡೆಯಲೇಬೇಕು ಎಂದು ನಿರ್ಧರಿಸುವಲ್ಲಿ ಸಮಾಜದ ಒತ್ತಡವೇ ಇರುತ್ತದೆ. ಮಕ್ಕಳಿಲ್ಲದ ಸ್ತ್ರೀಯರನ್ನು ಚುಚ್ಚುಮಾತಿನಿಂದ ನೋಯಿಸುವುದು ಸಾಮಾಜಿಕನೆಲೆಯಲ್ಲಿ ಸಹಜವೇ ಆಗಿದೆ. ಸರೋಜಳಲ್ಲಿ ತಾಯ್ತನ ಮಮತೆ, ಅಂತಕರಣವಿದ್ದರೂ ಅದು ಗಣನೆಗೆ ಬರುವುದೇ ಇಲ್ಲ. ಮಕ್ಕಳಿಗಾಗಿ ಹಲುಬುವಂತೆ ಮಾಡಿರುವ ವ್ಯವಸ್ಥೆಯಲ್ಲಿನ ಸಾಮಾಜಿಕ ಲೋಪವನ್ನು ರಾಮಣ್ಣ ಕತೆಯ ಮೂಲಕ ಕಟ್ಟಿಕೊಡುತ್ತಾರೆ. ಸರೋಜ ತಿರುಪತಿಗೆ ತಾನು ಬರುವ ಆಸೆ ವ್ಯಕ್ತಪಡಿಸಿದಾಗ ಗಂಡ, **"ಲೇ! ನೀನೂ ಈ ಸಾರಿ ನಿನ್ನ ಸವತಿಮೇಲಿನ ಹಠಕ್ಕೆ ಒಂದು ಮಗ ಹೆತ್ತುಬುಡೇ, ಆ ಕ್ಷಣವೇ ತಿರುಪತಿ ಕಂಚಿಕಾಳೇಶ್ವರಿಗೆಲ್ಲ ಹೋಗಿದ್ದು ಬಂದುಬುಡವ!"**

"ಯಾಕೆಹಿಂಗೆ ನನ್ನ ಹೊಟ್ಟೆ ಉರಿಸೀರಿ? ನಾನು 'ಬಂಜೆ' ಅನ್ನೋದ ಸನ್ನೆ ಸಕ್ಕಲೇ **ಆಡಿತೋರಿಸಬೇಕೆ. ಮಕ್ಕಳು ಹೆತ್ತೋಳಿಗೆ ಮಾತ್ರ ತಿರುಪತಿ ಭಾಗ್ಯ, ಇಲ್ಲದೋಳಿಗೆ ಇಲ್ಲವೇನೋ?"**[೨೭] ಅತ್ತೆ, ಗಂಡನ ಕುಹಕ, ತಾಯ್ತನದ ಹಂಬಲ, ಸುತ್ತಮುತ್ತಲಿನವರ ವ್ಯಂಗ್ಯ ಸರೋಜಕ್ಕಳನ್ನು ಅನೈತಿಕವಾಗಿ ಯೋಚಿಸುವಂತೆ ಮಾಡಿತೆನ್ನಬಹುದು. ಕಡೆಗೆ ತಾಯ್ತತನದ ಅತ್ಯಾಸೆ, ಸಾಮಾಜಿಕ ಒತ್ತಡದಿಂದ ತಮ್ಮ ಮನೆಯ ಕೆಲಸದಾಳು ಕೆಂಗಣ್ಣನಿಂದ ತನ್ನ ಬಂಜೆತನ ನೀಗಬೇಕೆಂದು ಮುಂದಡಿಯಿಡುತ್ತಾಳೆ. 'ನಿನ್ನ ಕೈಯಿಂದ ವಿಷಬೇಕಾದ್ರೂ ನಗ್ತಾನಗ್ತಾ ತಿಂದೇನೂ. ಆದ್ರೆ ಉಂಡ ಮನೆಗೆ ..... ನಂಬಿದೋರ್ಗೆ ಎರಡು ಬಗಿ ಅಂತ ನಮ್ಮವ್ವ ನನ್ನ ಹೆತ್ತಿಲ್ಲ ಕಣಕ್ಕ' ಕೆಂಗಣ್ಣನ ಒಂದೊಂದು ಮಾತು ಸರೋಜಕ್ಕಳ ಅಂತರಂಗವನ್ನು ಕುಟುಕಿದವು.

"ಕತ್ತಲೆಯಲ್ಲಿ ಕೆಂಗಣ್ಣನ ರೂಪು, ವ್ಯಕ್ತಿತ್ವ ಮೇಲೆ ಮೇಲೆ ಏರಿದಂತೆ, ತಾನು ಅವನ ಮುಂದೆ ಅತಿಕುಬ್ಜಳಾದಂತೆ ಅನ್ನಿಸಿ, ಮೇಲೆದ್ದು ಹಜಾರದ ಕಡೆ ಹೆಜ್ಜೆ ಹಾಕಿದಳು. ಅವಳ ಎದೆಯಲ್ಲಿ

---

೨೬ ಆರ್.ವಿ. ಭಂಡಾರಿ, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಪು : ೧೭೨.

೨೭ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೫೫,

ಅವಮಾನದ ಕುದಿಯ ಬದಲುಕೆಂಗಣ್ಣನ ಕೃತಜ್ಞಮೂರ್ತಿ ಕೈಜೋಡಿಸನಿಂತಿತ್ತು."[೨೮] ಇಲ್ಲಿ ಮೇಲ್ಮಟಕ್ಕೆ ಏರಿದ ವ್ಯಕ್ತಿತ್ವ ಪುರುಷನದೇ ಹೊರತು ಮಹಿಳೆಯದಲ್ಲ.

ಕೆಂಗಣ್ಣ ತನ್ನ ಹೆಂಡತಿ ಪಟೇಲನೊಂದಿಗೆ ಅನೈತಿಕಸಂಬಂಧವಿಟ್ಟು ಕೊಂಡಿದ್ದನ್ನು ಕಣ್ಣಾರೆ ಕಂಡಾಗ ಸಹಿಸಲಾರದೆ ಅವಳನ್ನು ಕೊಂದು ಜೀತಕ್ಕೆ ಸೇರಿದ್ದ. ಅಲ್ಲಿ ಆ ಗುಟ್ಟು ಬಯಲಾಗಲಿಲ್ಲ. ಇಲ್ಲಿ ಸರೋಜಕ್ಕಳ ಗುಟ್ಟು ಬಯಲಾಗಬಹುದೆಂದು ಮನೆಯನ್ನೇ ತೊರೆದನು. ಮಕ್ಕಳಿಲ್ಲದ ಸ್ತ್ರೀಯ ಅಸಹಜವರ್ತನೆಯಲ್ಲಿ ಒತ್ತಡವೇ ನೈತಿಕತೆಯ ಅಂಚನ್ನು ದಾಟುತ್ತಿದ್ದ ಸರೋಜಳನ್ನು ಕೆಂಗಣ್ಣ ಪಾರು ಮಾಡಿದ್ದರಲ್ಲಿಯೇ ಕತೆಯ ಸತ್ವ ಅಡಗಿದೆ. ಸರೋಜಳದು ಲೈಂಗಿಕ ತೃಷೆಯಲ್ಲ. ಅವಳು ಬಯಸುವುದು ತಾತ್ಕಾಲಿಕ ಲೈಂಗಿಕ ಸಂಬಂಧವಷ್ಟೆ. ರಾಮಣ್ಣನವರ 'ಕಳೆ' ಕತೆಯ ಜಮೀನ್ದಾರ ಶಿವಲಿಂಗೇಗೌಡ ಇಡೀ ಊರನ್ನೇ ಹೆದರಿಸಿಕೊಂಡು, ಎಲ್ಲರನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ಕಣ್ಣಿಗೆ ಬಿದ್ದ ಹೆಣ್ಣು ಮಕ್ಕಳನ್ನು ಬಿಡುತ್ತಿರಲಿಲ್ಲ. ಎಲ್ಲರನ್ನೂ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದ ಅವನಲ್ಲಿ ದುರಾಸೆ, ದರ್ಪ, ಹೆಣ್ಣಿನ ಹುಚ್ಚು, ಅಸೂಯೆ, ಗೌಡಿಕೆಯ ಗತ್ತು ಶೋಷಣೆಯ ಹತ್ತು ಹಲವು ಮುಖಗಳನ್ನು ಕಾಣಿಸುತ್ತದೆ. ಎಲ್ಲರೂ ಗೌಡನಿಗೆ ಹೆದರಿದರೆ ಆಳು ನಿಂಗ ಹೆದರಿದಂತೆ ಇದ್ದನಷ್ಟೆ.

ಶಿವಲಿಂಗೇಗೌಡನ ಮಗಳು ಲಲಿತ ಮನೆಯ ಆಳು ಹೊಲೆಯರ ನಿಂಗನ ಜೊತೆ ಒಣಹುಲ್ಲಿನ ರಾಶಿಯ ಮೇಲೆ ಮಲಗಿರುವುದನ್ನು ಕಂಡಾಗ ಅವನ ದರ್ಪ ಮೂರಾಬಟ್ಟೆಯಾಯಿತು. ಶಿವಲಿಂಗೇಗೌಡ ಹೊಲೆಯರ ಕೆಂಪಿಯನ್ನು ಅನುಭವಿಸಿದ್ದರಲ್ಲಿ ಅವಳ ತಾಯಿ ಬೇಲೂರಿಯ ಬೆಂಬಲವೂ ಇತ್ತು. ಬೇಲೂರಿಯ ಬಡತನ ಅಸಹಾಯಕತೆ ಅನೈತಿಕ ಸಂಬಂಧವನ್ನು ಒಪ್ಪುವಂತೆ ಮಾಡುವ ವ್ಯವಸ್ಥೆಯನ್ನು ಜಮೀನ್ದಾರಿ ಸಂಸ್ಕೃತಿ ನಿರ್ಮಿಸಿಕೊಂಡಿರುತ್ತದೆ. ಜಮೀನ್ದಾರಿಕೆಯ ಮೂಲಕ ಗ್ರಾಮೀಣ ಬದುಕಿನ ನೋಟ ನಿರಾಶದಾಯಕವೆನಿಸಿದರೂ ಸಾತ್ವಿಕಗುಣದ ಹೆಂಡತಿಯ ಅಸಹಾಯಕತೆ, ತಮ್ಮನ ಅಸಹಾಯಕತೆ ಮನವನ್ನು ಮುದುಡುವಂತೆ ಮಾಡಿದರೂ ನಿಂಗನ ಧೈರ್ಯ, ಪ್ರತಿರೋಧ ವಿಚಿತ್ರವಾದ ಸಮಾಧಾನ ಸ್ಥಿತಿಗೆ ಒಯ್ಯುತ್ತದೆ. ಕಬ್ಬಿನ ಕಳೆಗಿಂತ ಮನಸ್ಸಿನ ಕಳೆ ತೆಗೆಯಬೇಕಾದ ಅಗತ್ಯತೆಯನ್ನು ಕತೆ ಕಾಣಿಸುತ್ತದೆ. ಸಾಮಾಜಿಕ ಪರಿವರ್ತನೆಯ ಮೌಲ್ಯಯುತ ಸೂಕ್ಷ್ಮ ನೆಲೆಗಳನ್ನು ಕತೆಯಲ್ಲಿ ಕಾಣಬಹುದಾಗಿದೆ.

---

[೨೮] ಅದೇ, ಪು : ೧೬೩.

ಕುಂವೀ ಅವರ 'ಎಂಜಲು' ಕತೆ ರಾಮಣ್ಣನವರ 'ಕಳೆ' ಕತೆಯಂತೆ ಜಮೀನ್ದಾರನ ಲೈಂಗಿಕ ಶೋಷಣೆಗೆ ಕೆಳವರ್ಗ ಸ್ತ್ರೀ ಬಲಿಯಾಗುತ್ತಾಳೆ. ಗೌಡರ ಮನೆಯ ನಿಯತ್ತಿನ ವಿಧೇಯ ಆಳಾಗಿ ಅವರ ಮನೆಯ ಚಾಕರಿಯೇ ತನ್ನ ಬದುಕು ಎಂದು ಭಾವಿಸಿದ್ದ ಕಿವುಡ ಗೌಡನನ್ನು ಭಯಭಕ್ತಿಯಿಂದ ಕಾಣುತ್ತಿದ್ದ. ಕಿವುಡನ ಮುಗ್ಧತೆಯನ್ನೂ, ಅವನ ಹೆಂಡತಿಯನ್ನೂ ಬಳಸಿಕೊಂಡ ಗೌಡ ಕಿವುಡನಿಗೆ ಮೋಟುಬೀಡಿ, ಹೆಂಡಕ್ಕೆ ಕಾಸುಕೊಟ್ಟು ಇವನ್ನು ಬಿಟ್ಟು ಬೇರೆ ಯೋಚಿಸದಂತೆ ಮಾಡಿದ್ದನು. ದೇವನೂರು ಮಹಾದೇವ ಅವರ 'ಮಾರಿಕೊಂಡವರು' ಕತೆಯಲ್ಲಿನ ಚಿತ್ರಣವನ್ನು ಇದು ನೆನಪಿಗೆ ತರುತ್ತದೆ. ಅಲ್ಲಿಯೂ ಕೂಡ ಗೌಡನ ಎಂಜಲಿಗೆ ಗಂಡ-ಹೆಂಡತಿ ಬದುಕನ್ನೇ ಮಾರಿಕೊಳ್ಳುತ್ತಾರೆ.

ಗೌಡ ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುವುದು ತಿಳಿದಾಗ ತೀವ್ರ ತಳಮಳಗೊಂಡರೂ ಕಿವುಡ ಯಾರಲ್ಲಿಯೂ ಹೇಳಿಕೊಳ್ಳಲಿಲ್ಲ. ಹೆಂಡತಿಯನ್ನೂ ಪ್ರಶ್ನಿಸಲಿಲ್ಲ, ಅಧಿಕಾರ, ಹಣ, ದರ್ಪ, ಜಾತಿ ಬಲದಿಂದ ದನಿಯೆತ್ತದಂತೆ ವ್ಯವಸ್ಥೆ ಮಾಡಿಕೊಂಡಿರುವಾಗ ಮೇಲ್ವರ್ಗದ ಗೌಡನ ವಿರುದ್ಧ ದನಿಯೆತ್ತುವ ಧೈರ್ಯ ಕಿವುಡನಿಗೆ ಎಲ್ಲಿಂದ ಬರುತ್ತದೆ? ಇಕ್ಕಟ್ಟುಗಳಲ್ಲಿ ಬದುಕುತ್ತಿರುವ ಅಸಹಾಯಕ ಜೀವಿಗಳು ಎದುರು ಬೀಳುವ ಸಂಭವ ಕಡಿಮೆಯೇ ಆಗಿರುತ್ತದೆ. ಹೊತ್ತಾರೆ ಬಾಗಿಲಿಗೆ ಬಂದ ಕಿವುಡನ ನೋಡಿ, ಬೇವಿನ ಕಡ್ಡಿಯಿಂದ ಹಲ್ಲುಜ್ಜುತ್ತಿದ್ದ ಗೌಡರು ಏನ್ ಬಂದೆ.... ಕಿವುಡ... ಅಂತ ತೊದಲುತ್ತ ನುಡಿದರು. "ನೋಡ್ರಿ ದಣೀರ ಮಂತ್ರ ಹಾಕಿದಂಗ ನೀಂ ಹೊಸ ಕರಗೊಳು ನಂ ಹಟ್ಟಿ ಮುಂದ ಬಂದ್ ಕುಂತಾವ..... ಕಳವು ಮಾಡ್ಯಾನಂತ ತಿಳ್ಕಂಡೇರೀ ಅಂತ ಬಿಟ್ಟುದ ಬಿಟ್ಟು ತಂದೇರಿ" ಸೆಲ್ಲೇವಿನಿಂದ ಚಪ್ಪಲಿ ತೆಗೆದು ಹುಷಾರಕಿಲೆ ಕೆಳಗಿಟ್ಟ. ಚಪ್ಪಲಿಗಳನ್ನು ನೋಡಿ ಗೌಡರು ಹೌಹಾರಿ ಸಾವರಿಸಿಕೊಂಡು, "ನಿನ್ನೆ ಚಂಜೇ ಮುಂದ ನಿನ್ನಾಯಿ ಮಂತ್ಯಾಕೆ ಬಂದಿತ್ತು. ಅದೇನಾರ ಹೊತ್ಕೊಂಡೊಯ್ದಿರಬಹುದು... ನಿನ್ನ ಮನೀ ಮುಂದ ಬಿಟ್ಟಿರಬಹ್ದು ನೋಡ್ಲೆ"[೨೯] ಎಂದ ಅಪರಿಮಿತ ಜೀವನೋತ್ಸಾಹದಿಂದ ಸಂಸಾರ ಹೂಡಿದ ಚಂದ್ರಿಯ ಸಂಸಾರ ಹಾಳುಮಾಡುವಲ್ಲಿ ಗೌಡನಿಗೆ ಯಾವ ಅಳುಕು, ಅಂಜಿಕೆ, ಹಿಂಜರಿಕೆ ನುಸುಳುವುದೇ ಇಲ್ಲ. ಒಳಗೊಳಗೆ ಕೊರಗಿದ ಕಿವುಡ ಆಡಲಾರ, ಅನುಭವಿಸಲಾರ. ಕಿವುಡ ಅಸಹಾಯಕನಾಗಿ ದುರ್ಬಲ ಜೀವಿಯೊಬ್ಬ ಅನುಭವಿಸುವ ನೋವನ್ನು ಅನುಭವಿಸುತ್ತಾನೆ.

---

೨೯ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು : ೩೮೨.

ರಾಮಣ್ಣನವರ 'ಕಳೆ' ಕತೆಯಲ್ಲಿ ಕೆಂಪಿ ಅವ್ವ ಮೈಲಾರಿ ಅನೈತಿಕ ವ್ಯವಹಾರಕ್ಕೆ ಬೆಂಬಲ, ಪ್ರೋತ್ಸಾಹ ಕೊಡುತ್ತಾಳೆ. ಕುಂ.ವೀರಭದ್ರಪ್ಪ ಅವರ ಕಿವುಡ ಕಿವುಡನೇ ಆಗಿಬಿಡುತ್ತಾನೆ. ಚಂದ್ರಿಗೆ ತನ್ನ ಗಂಡನಿಂದ ಈಡೇರಿಸಲಾಗದ ಬಯಕೆಗಳ ಜೊತೆಗೆ ಬದುಕಿನ ಅನಿವಾರ್ಯತೆಗೂ ದೇಹ ಒದಗಿಬರುತ್ತದೆ. ಚಂದ್ರಿಗೆ ತನ್ನ ಸಂಸಾರದ ಬಗೆಗೆ ವಿಷಾದವೂ ಇಲ್ಲ, ಅಳಕೂ ಇಲ್ಲ. ಗಂಡನನ್ನೂ ಅಸಡ್ಡೆಯಿಂದ ಕಾಣಲಾರಂಭಿಸುತ್ತಾಳೆ. ಹಣಚಿಕ್ಕಿ ನಾಯಿ ಸಹವಾಸ ಮಾತ್ರ ಕಿವುಡನಿಗೆ ತುಸು ಸಮಾಧಾನ ಆಗುತ್ತದೆ. ತನ್ನ ಆಕ್ರೋಶವನ್ನು ಹಣಚಿಕ್ಕ ನಾಯಿಯನ್ನು ಚಚ್ಚಿಕೊಂದು ತೀರಿಸಿಕೊಂಡ. ನಿಟ್ಟುಸಿರು, ಹುಡುಕಾಟ, ತಳಮಳ, ಹೇಳಲಾರದ ಅನುಭವಿಸಲಾರದ ವೇದನೆ ಅನುಭವಿಸುತ್ತಿದ್ದವನಿಗೆ ಗೌಡನ ಹುಚ್ಚುನಾಯಿ ಕಡಿಯುತ್ತದೆ. ಮಾನಸಿಕವಾಗಿ ಹುಚ್ಚನಂತಾಗಿದ್ದವನು ದೈಹಿಕವಾಗಿ ಹುಚ್ಚನಂತೆ ವರ್ತಿಸತೊಡಗಿದಾಗ ಚಂದ್ರಿ ಅವನನ್ನು ಸಲೀಸಾಗಿ ಕೊಡವಿಕೊಳ್ಳುವ ಹಂತಕ್ಕೆ ಬರುತ್ತಾಳೆ. ನಳನಳಿಸಬೇಕಾದ ಸಂಸಾರ ಎಂಜಲಿನಿಂದ ಮೂರಾಬಟ್ಟೆಯಾಯಿತು. ಕಿವುಡನು ಅನುಭವಿಸಿದ್ದು ಕಣ್ಣಿಗೆ ಕಾಣದ ಶೋಷಣೆಯಾಗಿ ಅನುಭವಿಸಿದವನಿಗೆ ಅಷ್ಟೇ ಗೊತ್ತಾಗುವಂತಿತ್ತು. ಹುಚ್ಚುನಾಯಿ ರೀತಿ ಮೇಗಳ ಕೇರಿ ಕಡೆಗೆ ಮುಖಮಾಡಿ ಬೊಗಳುವುದು ಕಿವುಡನ ಸಾಂಕೇತಿಕ ಪ್ರತಿಭಟನೆಯಾಗಿ ಉಳಿಯುತ್ತದೆ.

"ಕಥೆಗಾರರಿಗೆ ವಾಸ್ತವವನ್ನು ಕಟ್ಟಿಕೊಡುವುದಕ್ಕಿಂತ ವಾಸ್ತವವನ್ನು ನೋಡುವ, ನೋಡಿದ್ದನ್ನು ಕಥೆ ಮಾಡುವ ಕುತೂಹಲ ಮುಖ್ಯವಾಗಿದೆ. ಹಾಗಾಗಿ ಕನ್ನಡ ಕಥೆಗಳ ಕಾಮನಬಿಲ್ಲಿನ ಒಂದು ತುದಿಯಲ್ಲಿ ತೇಜಸ್ವಿ ದೇವನೂರು ಮಹಾದೇವರ ಕಥೆಗಳ ಬಣ್ಣವಿದ್ದರೆ ಇನ್ನೊಂದು ತುದಿಯಲ್ಲಿ ಕುಂ.ವೀರಭದ್ರಪ್ಪ ಬರವಣಿಗೆಯ ಬಣ್ಣ ಕಾಣುತ್ತೇವೆ"[೩೦] ಎಂಬ ಓ. ಎಲ್. ನಾಗಭೂಷಣಸ್ವಾಮಿ ಅವರ ಮಾತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ವಾಸ್ತವದ ಶೋಧಕ್ಕೆ ಪೂರಕವಾಗಿದೆ. ಸಮಾಜದಲ್ಲಿ ವೇಶ್ಯೆಯರ ಮಕ್ಕಳು, ಅನೈತಿಕ ಸಂಬಂಧ ಅತ್ಯಾಚಾರದಿಂದ ಹುಟ್ಟಿದ ಮಕ್ಕಳು, ಅವರ ಹುಟ್ಟಿನ ಬಗ್ಗೆ ಅವರ ತಪ್ಪಿಲ್ಲದಿದ್ದರೂ ಅನುಭವಿಸುವ ಸಂಕಟ, ವೇದನೆ, ಅವಮಾನ ಅವಹೇಳನ ಅಪಾರ. ಚಿಕ್ಕವರು ದೊಡ್ಡವರೆನ್ನದೇ ಎಲ್ಲರ ಚುಚ್ಚುಮಾತು ಕೇಳಬೇಕಾಗುತ್ತದೆ. ಆದರೆ ಇದೆಲ್ಲವನ್ನು ಮನಸ್ಸುಗಳ ಸಂಸ್ಕಾರದಿಂದ ಮಾತ್ರ ಸಾಮಾಜಿಕ ಅಪಹಾಸ್ಯವನ್ನು ದೂರಮಾಡಬಹುದು.

---

೩೦ ಓ.ಎಲ್. ನಾಗಭೂಷಣ ಸ್ವಾಮಿ, ಮಯೂರ ಮಾಸಪತ್ರಿಕೆ, ಪು : ೧೨.

ರಾಮಣ್ಣನವರ 'ಗರ್ಜನೆ' ಕತೆಯ ಮರಿನಂಜ ತನ್ನ ಹುಟ್ಟಿನ ಕಾರಣದಿಂದ ಎಲ್ಲರ ಲೇವಡಿಗೆ ತುತ್ತಾಗುತ್ತಾನೆ. ಒಂದು ಹಂತದವರೆಗೆ ಸಹಿಸಿದ ಮರಿನಂಜ ಅಕ್ರೋಶಗೊಳ್ಳುತ್ತಾನೆ. ತನ್ನ ತಾಯಿ ಚಾರಿತ್ರ್ಯದ ಬಗೆಗೆ ಅಪಹಾಸ್ಯಮಾಡಿದಾಗ ಅಲ್ಲಿ ಲಿಂಗಭೇದವಿರಲಿಲ್ಲವೆಂಬುದು ಮರಿನಂಜನವಿಚಾರದಲ್ಲಿ ದಿಟವೇ ಆಗಿತ್ತು.

ಆಸೆಯಿಂದ ಕುಳ್ಳನನ್ನು ಕಜ್ಜಾಯ ಕೇಳಿದಾಗ ನಿಮ್ಮಪ್ಪ ಯಾರು ಎಂದು ಅಣಕಿಸಿದ.

"ನನ್ನ ಅವರಿವರು ಹಾದರಕ್ಕೆ ಹುಟ್ಟಿದೋನೆ ಅಂದ್ರೆ ನಿಮಗೇನೂ ಅನ್ನಿಸೋದೆ ಇಲ್ವೆ? ಮರಿನಂಜ ಅನ್ನೋ ಬದಲು ಕುರಿನಂಜ, ಕುರಿನಂಜ ಅಂತ ಕೂಗಿ ಹಂಗಿಸಿದ್ರೆ ನಿಮಗೆ, ಹೊಟ್ಟೆ ತಣ್ಣಗಾದದೇ" [೩೧] ಎಂದು ಪಟೇಲರನ್ನು ಜಗ್ಗಿಸಿಕೇಳಬೇಕೆಂದುಕೊಂಡ, ಪಟೇಲನ ಮಗನಾಗಿದ್ದರೂ ಅವನ ಮನೆ ಜೀತದಾಳಾಗಿರುತ್ತಾನೆ. ತಾಯಿಯನ್ನು ಊರೆಲ್ಲಾ ಗೇಲಿ ಮಾಡಿದಾಗ, ತನ್ನನ್ನು ಹಾದರಕ್ಕೆ ಹುಟ್ಟಿದವನೆಂದು ಹೀಯಾಳಿಸಿದಾಗ ಅಸಹಾಯಕನಾಗಿ, ಶಕ್ತಿಹೀನನೆನ್ನಿಸಿದರೂ ತನ್ನ ಅಸ್ತಿತ್ವವನ್ನು ಸಮಾಜಕ್ಕೆ ತೋರಿಸಲು ಗಟ್ಟಿಯಾಗುತ್ತಾನೆ. ಇಲ್ಲಿ ಮರಿನಂಜ ನೇರವಾಗಿ ಊರವರನ್ನೆಲ್ಲಾ ಎದುರಿಸುತ್ತಾನೆ. ಕೀಳರಿಮೆಯೇ ಅವನ ಮಾನಸಿಕ ಪರಿವರ್ತನೆಗೆ ಕಾರಣವಾಗುತ್ತದೆ. 'ಗರ್ಜನೆ' ಕತೆಯ ಸಾಮಾಜಿಕ ಪರಿಸರ ಮರಿನಂಜನನ್ನು ಕುರಿತು ಚುಚ್ಚು ಮತ್ತು ವ್ಯಂಗ್ಯ ಮಾತುಗಳಾಡುತ್ತಾರೆಯೇ ಹೊರತು ಯಾರೊಬ್ಬರೂ ಅವನೊಂದಿಗೆ ಸಹಾನುಭೂತಿಯಿಂದ ವರ್ತಿಸುವುದಿಲ್ಲ.

ಮಾಸ್ತಿಯವರ 'ವೆಂಕಟಿಗನ ಹೆಂಡತಿ' ಕತೆಯೂ ಕೂಡ ಇಂತಹ ಸನ್ನಿವೇಶವನ್ನು ಒಳಗೊಂಡಿದೆ. ಆದರೆ ಕತೆಯಲ್ಲಿನ ವೆಂಕಟಿಗನ ಮನಸ್ಸಿನ ಉದಾರತೆ ಸಮಾಜದಲ್ಲಿ ದುರ್ಲಭವಾದರೂ ಅಂತಹವರು ಒಬ್ಬೊಬ್ಬರಿದ್ದರೂ ಸಮಾಜದ ಪಾಪತೊಳೆದು ಹೋಗುತ್ತದೆ. ವೆಂಕಟಿಗ ಅರಿಯದ ಹುಡುಗಿ ಮಾಡಿದ ತಪ್ಪು ಎಂದೇ ಭಾವಿಸುತ್ತಾನೆ. ಆದ್ದರಿಂದ ಅವನಲ್ಲಿ ಸಿಟ್ಟು ಆಕ್ರೋಶಗಳ ಜಾಗದಲ್ಲಿ ತಾಳ್ಮೆ, ಬೇಸರ, ಸಮಾಧಾನ ಇದ್ದು ಬದುಕನ್ನು ಸಹನೀಯವಾಗಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ವೆಂಕಟಿಗನ ತಾಯಿ ಮತ್ತು ಅತ್ತೆ ಹೆಂಡತಿಯ ಬಗ್ಗೆ ಎಷ್ಟೇ ಕೋಪದಿಂದ ಪ್ರತಿಕ್ರಿಯಿಸಿದರೂ ವೆಂಕಟಿಗ ಬುದ್ಧಿಯನ್ನು ಹಿಡಿತದಲ್ಲಿಟ್ಟುಕೊಂಡು ವ್ಯವಹರಿಸುತ್ತಾನೆ.

---

೩೧ ಕಣಜ, ಲೋಹಿಯಾ ಪ್ರಕಾಶನ, ಪು : ೧೮೬.

ಆದರೆ ಮರಿನಂಜನನ್ನು ಅವಮಾನಿಸಿ ಕೆರಳಿಸುವುದರಲ್ಲೇ ಸಾಮಾಜಿಕಪರಿಸರ ತೊಡಗುತ್ತದೆ. ಸಹಾನುಭೂತಿಯನ್ನು ಸಮಾಜ ತೋರಿಸಿದ್ದರೆ ಅವನು ಶಾಂತಚಿತ್ತದಿಂದ ಬದುಕಬಹುದಿತ್ತು, ಆಕ್ರೋಶಗೊಳ್ಳಬೇಕಿರಲಿಲ್ಲ. ತನ್ನನ್ನು ಅಪಹಾಸ್ಯ ಮಾಡಲು ಬಂದವರೆನ್ನೆಲ್ಲಾ ಉಡಾಯಿಸಿಬಿಡುತ್ತಾನೆ. ಕಂಡಕಂಡವರೆಲ್ಲಾ ಸಿಕ್ಕ ಅವಕಾಶ ಬಿಡದೆ ಮರಿನಂಜನ ಹುಟ್ಟಿನ ಬಗ್ಗೆ ಅವಹೇಳನ ಮಾಡಿ ಒಂದು ಯುವಮನಸ್ಸು ಮುದುಡಿಹೋಗಲು ಆ ಸಾಮಾಜಿಕ ಪರಿಸರ ಕಾರಣವಾಗುತ್ತದೆ. ಆದರೂ ಮರಿನಂಜ ಗಟ್ಟಿಯಾಗಿ ತನ್ನ ಅಸ್ಥಿತ್ವ ತೋರಿದ್ದರಿಂದಲೇ ತಾನು ಪಾರ್ವತಿಯನ್ನೇ ಮದುವೆಯಗುವೆನೆಂದೂ ಹೇಳುತ್ತಾನೆ. ಯಾರಾದರೂ ಕೊಂಕುಮಾತಾಡಿದರೆ ಪಟೇಲನ ಮುಂದೆ ನಿಲ್ಲಿಸುತ್ತೇನೆ ಎಂದು ಸವಾಲು ಹಾಕುತ್ತಾನೆ.

ಕುಂ.ವೀರಭದ್ರಪ್ಪ ಅವರ 'ಸಿದ್ದನುಗುರಿ ಇಟ್ಟದ್ದು' ಕತೆಯಲ್ಲಿನ ಸಿದ್ಧನ ಪಾತ್ರ ರಾಮಣ್ಣನವರ 'ಗರ್ಜನೆ' ಕತೆಯ ಮರಿನಂಜನನ್ನೇ ಹೋಲುವ ಪಾತ್ರವಾಗಿದೆ. ಕೆಲವೊಮ್ಮೆ ಪ್ರತಿರೋಧ ಹುಟ್ಟಿನಿಂದಲೇ ಬರಬಹುದಾದ ಸಾಧ್ಯತೆಯನ್ನು ಕತೆಕಾಣಿಸುತ್ತದೆ. ಸಿದ್ದ ತರಗತಿಯಲ್ಲಿ ಪಾಠವನ್ನು ಏಕಾಗ್ರತೆಯಿಂದ ಕೇಳಿ ವಿಚಾರಮಾಡುವ ಬುದ್ಧಿವಂತ. 'ಗರ್ಜನೆ'ಯ 'ಮರಿನಂಜ' ದೈಹಿಕ ಬಲಾಢ್ಯನಾಗಿದ್ದರೆ 'ಸಿದ್ದ' ಚುರುಕಿನ ಹುಡುಗ. ಮೀನು ತಿಂದು ತಾನು ಶಕ್ತಿರೂಢಿಸಿಕೊಳ್ಳಬೇಕಾದ ಬಗ್ಗೆ ಚಿಂತಿಸುತ್ತಾ ಮೇಲ್ವರ್ಗದ ಗುರುವನನ್ನು ಆಟದಲ್ಲಿ ಸೋಲಿಸುವುದು ಅವನ ಬಾಲ್ಯದ ಪ್ರತಿರೋಧಾತ್ಮಕ ನಡವಳಿಕೆಯಾಗಿದೆ. ಮರಿನಂಜ ಪಾರ್ವತಿಯನ್ನೇ ಮದುವೆಯಾಗುತ್ತೇನೆಂದು ಖಚಿತವಾಗಿ ಹೇಳಿದರೆ ತಾನು ಮಠದ ಶಾಲೆಯಲ್ಲೇ ಕಲಿಯಬೇಕು, ತನ್ನ ಹೆಸರನ್ನೇ ಮಠಕ್ಕಿಟ್ಟಿರಬಹುದು ಎಂದು ಯೋಚಿಸುವ ಸಿದ್ದ ಪ್ರಗತಿಯ ಸಂಕೇತವೆನಿಸುತ್ತಾನೆ.

ಸಿದ್ದನು ಮೀನು ತಿಂದರೆ ವಕ್ರಾಣಿಯ ಮೀನನ್ನೇ ತಿನ್ನಬೇಕೆಂದು ಸಂಕಲ್ಪ ಮಾಡಿದ್ದು ಕೊಳದ ಬಾವಿಗೆ ಉಗುಳಿದ್ದು ಆಕ್ರೋಶದ ನಡವಳಿಕೆಯಾಗಿದೆ. ದೇವನೂರು ಮಹಾದೇವ ಅವರು ಹೇಳಿಕೊಂಡಿರುವಂತೆ ಶಾಲೆಯಲ್ಲಿ ಮೇಲ್ವರ್ಗದ ಮಕ್ಕಳಿಗಿಟ್ಟಿದ್ದ ನೀರಿನ ಹೂಜಿಗೆ ಉಗುಳಿದ್ದನ್ನು ನೆನಪಿಗೆ ತರುತ್ತದೆ. ಪ್ರತಿರೋಧ ಹುಟ್ಟುಗುಣವೇನೋ ಎನಿಸುತ್ತದೆ. ಭಯ, ಧೈರ್ಯ, ಮಿಳಿತಗೊಂಡು ಸಿದ್ದ ಗಾಳದೊಂದಿಗೆ ಕೊಳದಲ್ಲಿನ ದೇವರಮೀನು ಹಿಡಿದು, ಸಿಕ್ಕಿಬಿದ್ದು ಒದಿಸಿಕೊಂಡನು. ಆದರೂ ಅವನಿಗೆ ವಿಷಾದವಾಗಲೀ, ಬೇಸರವಾಗಲೀ ಆಗದೆ ಏನೋ ಸಾಧಿಸಿದ ಹಮ್ಮು ಅವನ ನಡವಳಿಕೆಯಲ್ಲಿದ್ದುದು ಸಾಮಾಜಿಕ ಸಂಚಲನೆಯನ್ನುಂಟು ಮಾಡುತ್ತದೆ.

ರಾಮಣ್ಣನವರ ಕತೆಯ 'ಮರಿನಂಜ' ನ ಹುಟ್ಟಿಗೆ ಪಟೇಲ ಕಾರಣನಾಗಿರುವಂತೆ ಕುಂವೀ ಅವರ ಕತೆಯ 'ಸಿದ್ದನ' ಹುಟ್ಟಿಗೆ ಮಠದ ದೊಡ್ಡ ಸ್ವಾಮಿ ಕಾರಣರಾಗಿರುತ್ತಾರೆ. ಮರಿನಂಜ ಮತ್ತು ಸಿದ್ದನಿಗೆ ತಮ್ಮ ಹುಟ್ಟಿಗೆ ಕಾರಣರಾದವರಾರು ಎಂದು ತಿಳಿದಿದ್ದರೂ ಬಾಯಿಬಿಡಲಾರದ ಅಸಹಾಯಕತೆ ಆಕ್ರೋಶವನ್ನು ಉಂಟುಮಾಡಿರುತ್ತದೆ. ದೊಡ್ಡಸ್ವಾಮಿ ಪಾದುಕೆಗಳಿಂದ ಒದ್ದು **"ಮೀನಿನಂಥ ಅಮಾಯಕ ಪ್ರಾಣಿಗಳನ್ನು ಹಿಂಸಿಸುತ್ತೀಯಾ, ಮಠವನ್ನು ಅಪವಿತ್ರಗೊಳಿಸಿದ್ದಿಯಾ"**೩೨ ಮಾತುಗಳು ಕಾಕತಾಳೀಯವಾಗಿ ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ. ಬಡಹೆಂಗಸಿಗಾದ ಅನ್ಯಾಯದ ಇನ್ನೊಂದು ಮುಖವನ್ನು ಕಾಣಿಸುತ್ತದೆ.

ಸಿದ್ದನು ತನ್ನ ಹುಟ್ಟಿಗೆ ಕಾರಣರಾದವರ ಬಗ್ಗೆ ಗೊತ್ತಿದ್ದು, ತನಗೆ ಬಿದ್ದ ಹೊಡೆತ, ಅವಮಾನವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು. ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಸ್ವಾಮಿಗೆ ಗುರಿಯಿಟ್ಟು ಕಲ್ಲಿನಿಂದ ಹೊಡೆದು ತನಗೆ, ತನ್ನ ತಾಯಿಗಾದ ಅನ್ಯಾಯ, ಅವಮಾನವನ್ನು ಶಮನಗೊಳಿಸಿಕೊಳ್ಳುವ ಪ್ರಯತ್ನಮಾಡುತ್ತಾನೆ. ರಾಮಣ್ಣನವರ 'ಮರಿನಂಜ' ಕುಂ.ವೀರಭದ್ರಪ್ಪ ಅವರ 'ಸಿದ್ದನ' ಬಂಡಾಯದಲ್ಲಿ ಗಟ್ಟಿತನವಿದ್ದು ಉಳಿಯುವ ಸಾಧ್ಯತೆ ಕಾಣಬಹುದಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಎರಡೂ ಕತೆಗಳಲ್ಲಿ ಮಕ್ಕಳ ಮನಸ್ಸು ಚುಚ್ಚುಮಾತು, ವ್ಯಂಗ್ಯದಿಂದ ಘಾಸಿಗೊಳ್ಳುತ್ತದೆ. ಅವರ ನೋವು ಪ್ರತಿರೋಧದಲ್ಲಿ ವ್ಯಕ್ತವಾದರೂ ಸುಂದರವಾಗಿ ಬೆಳೆಯಬೇಕಾದ ದಲಿತಮಕ್ಕಳ ಬಾಲ್ಯ ರೊಚ್ಚಿಗೇಳುವುದು ಸಾಮಾಜಿಕವಾಗಿ ಸ್ವಸ್ಥ ಸಮಾಜಕ್ಕೆ ಪೂರಕವಲ್ಲವೆನಿಸುತ್ತದೆ. ಮರಿನಂಜ ಮತ್ತು ಸಿದ್ದನನ್ನು ಅವಮಾನಿಸಿ ಕೆರಳಿಸುವುದರಲ್ಲೇ ಸಾಮಾಜಿಕ ಪರಿಸರ ತೊಡಗುವುದು ದಲಿತ ಬದುಕು ಸಂಘರ್ಷಾತ್ಮಕವಾಗಿ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಸಾಗುತ್ತಿರುವ ಬಗ್ಗೆ ಆಶಾದಾಯಕವಲ್ಲವೆನಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಕಳೇಬರ' ಕಥೆಯಲ್ಲಿ ನಡತೆ ಸುಮಾರಿರುವ ಗಂಡ ಊರಿಗೆ ಬರುತ್ತಿದ್ದುದೇ ಅಪರೂಪ. ಘಟವಾಣಿ ಅತ್ತೆ ನಿಂಗವ್ವ ಗಂಡ ಹೆಂಡತಿ ನಡುವೆ ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಅಂತರಕಾಯ್ದು ಮಗನನ್ನು ಸಾಗಹಾಕುತ್ತಿದ್ದುದು ಅವಳ ಪೂರೈಸದ ಲೈಂಗಿಕ ಅತೃಪ್ತಿಯ ಕಾರಣದಿಂದೆನ್ನಬಹುದು. ತನ್ನ ದೊಡ್ಡ ಮಾವ ತಂಬೂರಿ ಚಿನ್ನಪ್ಪನ ಸಾವಿನಲ್ಲಿ ಗಂಡನನ್ನು ಸೇರಬಯಸುವ ಭಾಗಿರಥಿ ತನ್ನ ಅಸ್ತಿತ್ವದ ಗುರುತಿಗಾಗಿ ಕಳೇಬರದ ಸಮ್ಮುಖದಲ್ಲಿ ಪರದಾಡುತ್ತಾಳೆ.

---

೩೨ ಕುಂ.ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು : ೩೯೧.

ರಾಮಣ್ಣನವರ 'ಸ್ವಾರ್ಥ' ಕತೆಯ ಪುಟ್ಟಸ್ವಾಮಿಗೌಡರು ತಾಯಿ ಸತ್ತ ದುಃಖದಲ್ಲಿದ್ದ ಪುಟ್ಟಮ್ಮನನ್ನು ಬಯಸಿದ್ದರಲ್ಲಿ ಲೈಂಗಿಕ ತೃಷೆಯೇ ಮುಖ್ಯವಾಗುತ್ತದೆ. ಪುಟ್ಟಮ್ಮಳೂ ನಿರಾಕರಿಸಲಿಲ್ಲ. **"ಹೆತ್ತವಳನ್ನು ನೆನ್ನೆತಾನೆ ಮಣ್ಣುಮಾಡಿ ಬಂದವಳೊಡನೆ ತಾನು ಸೇರುವುದೇ? ಇನ್ನೂ ಹನ್ನೊಂದು ದಿನಗಳ ಸೂತಕ ಬೇರೆ ಕಳೆದಿಲ್ಲ. ಸ್ವಲ್ಪ ನಿಶ್ಚಲರಾದರು. ಸಿಕ್ಕಿದ್ದನ್ನು ಗೆಲ್ಲುವುದು ದಕ್ಕಿಸಿಕೊಳ್ಳುವುದು, ಅನುಭವಿಸುವುದು ಒದಗಿ ಬಂದುದನ್ನು ಒದೆಯುವುದೇಕೆ ಎಂದುಕೊಂಡರು".**[೩೩]

ಮಠಕಟ್ಟಿಕೊಂಡಿದ್ದ ಪುಟ್ಟಸ್ವಾಮಿಗೌಡರನ ವರ್ತನೆ ಹೀಗಿರುವಾಗ 'ಕಳೇಬರ' ಕತೆಯ ಭಾಗಿರಥಿ ದೊಡ್ಡಮಾವನ ಸಾವಿನಲ್ಲಿ ಗಂಡನನ್ನು ಬಯಸಿದ್ದು ಹೇಗೆ ಅಸಂಬದ್ಧವೆನಿಸುತ್ತದೆ. ಅತ್ತೆಯ ಚಿತಾವಣೆಯಿಂದ ಗಂಡ ಬಸ್ಸುಹತ್ತಿದಾಗ ಭಾಗಿರಥಿಗೆ ಅತ್ತೆಯ ಮೇಲಿನ ಹಟದಿಂದ, ತನ್ನ ಚಹರೆ ಉಳಿಸಿಕೊಳ್ಳಲು ಗಂಡನ ಅಣ್ಣನ ಮಗನನ್ನು ಬಯಸುತ್ತಾಳೆ. ತನ್ನ ಮತ್ತು ಗಂಡನ ನಡುವೆ ಗೋಡೆಯಾಗಿದ್ದ ಅತ್ತೆಯನ್ನು ಭಾಗೀರಥಿ ಸಾರಾಸಗಟಾಗಿ ತಿರಸ್ಕರಿಸುವುದು ಅವಳ ನೆಲೆಯಲ್ಲಿ ತಪ್ಪೆನಿಸುವುದಿಲ್ಲ. ತನ್ನ ದೈಹಿಕ ಬಯಕೆ ತೀರಿಸಿಕೊಳ್ಳಲು ನೈತಿಕವಾದ, ಸಹಜನೆಲೆಯಲ್ಲಿ ಪ್ರಯತ್ನಿಸಿದರೂ ಈಡೇರದಿದ್ದಾಗ ಪ್ರತಿರೋಧಾತ್ಮಕವಾಗಿ ಅನ್ಯಮಾರ್ಗ ಹುಡುಕುತ್ತಾಳೆ.

ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲ ಹಿಡಿದ ಕತೆ'ಯಲ್ಲಿ ಗೌಡ ಲೈಂಗಿಕ ಹಸಿವನ್ನು ಈಡೇರಿಸಿಕೊಂಡರೆ ಕತ್ತಲ ಹೊಟ್ಟೆಯ ಹಸಿವು ನೀಗಲು ಹೋರಾಡುತ್ತಾನೆ. **"ಗೌಡ ಸುಂಕಲಿಯನ್ನು ಉಂಡಿರುವುನೆಂದು ಕೂಡ ಅವನಿಗೆ ಗೊತ್ತು. ಸುಂಕುಲಿ ಕತ್ತಲನ ಬಳಿ ಗೋಳಾಡಿದ್ದಳು. ಇದರಂತೆ ಎಷ್ಟು ಸಾರಿ ಮುಟ್ಟಿರುವನೋ ಎಂಬ ಅನುಮಾನ ಮೊನ್ನೆವರೆಗೆ ಇತ್ತು. ಮೊದಲಿನೆರಡು ಕೂಸು ಹುಟ್ಟಿದಾಗ ಕತ್ತಲ ಕೂಸುಗಳ ಮುಖಗಳನ್ನು ತಿಕ್ಕಿ ತಿಕ್ಕಿ ನೋಡಿದ್ದ, ಕೆಂಪಗಿದ್ದವು. ತಾನಿರೋದು ಕರ್‍ರಗೆ ಸುಂಕಲಿ ಬಣ್ಣ ಕೂಡ ಥೇಟ್ ಕತ್ತಲನದೆ, ಮೂಗು, ಕಣ್ಣು, ಎಲ್ಲ ಬದಲು ಯಾವೂ ತನ್ನವಲ್ಲ ಯೋಚಿಸುತ್ತಾ ಹೋದಂತೆ ಕತ್ತಲನಿಗೆ ಸಿಟ್ಟಿನ ಜೊತೆಗೆ ಎಲ್ಲವೂ ಅರ್ಥವಾಗಿತ್ತು".**[೩೪]

ಕತ್ತಲ ಗೌಡನಿಗೆ ಹುಟ್ಟಿದ್ದ ತನ್ನ ಕೂಸುಗಳನ್ನು ನಿರ್ದಯವಾಗಿ ಕುತ್ತಿಗೆಹಿಚುಕಿ ಕೊಂದು ಹುಟ್ಟಿಸೋನು ಅವನು ಸಾಕೋರು ನಾವು ಅಂತ ಸಿಟ್ಟನ್ನು ತಣಿಸಲು ಪ್ರಯತ್ನಮಾಡಿದನು. ತನ್ನ

---

೩೩ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೧೩.
೩೪ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು : ೬.

ಸೇಡನ್ನು ಶಮನಮಾಡಿಕೊಂಡಿದ್ದು ಅಮಾನವೀಯ ನೆಲೆಯಲ್ಲಾದರೂ ಅವನಿಗೆ ತಪ್ಪೆನಿಸಲಿಲ್ಲ. ಮೇಲ್ವರ್ಗದ ಗೌಡ ಎರಡು ತೆನೆಯನ್ನು ಹೊಟ್ಟೆಗಾಗಿ ಕದ್ದಿದ್ದಕ್ಕೆ ಹೊಡಿದಿದ್ದ. ತನ್ನ ಹಸಿವಿಗಾಗಿ ದೇವಾಲಯವನ್ನು ಪೂಜಾರಿ ಮುಂದೆ ಪ್ರವೇಶಿಸಿ ಮುಖಾಮುಖಿಯಾಗಿ ಮೇಲ್ವರ್ಗದವನ್ನು ಎದುರಿಸಿದ್ದು ವೈಯಕ್ತಿಕವಾಗಿ ಪ್ರತಿರೋಧದ ನೆಲೆಯಲ್ಲೇ ಆಗಿದೆ. ರಾಮಣ್ಣನವರ ಕತೆಗಳಲ್ಲಿ ದಲಿತವರ್ಗದ ಈ ಮಟ್ಟದ ಪ್ರತಿರೋಧ ವಿರಳವೆನ್ನಬಹುದು.

ರಾಮಣ್ಣನವರ 'ಗಂಗಾ' ಮತ್ತು 'ಮಾನಭಂಗ' ಕುಂವೀ ಅವರ 'ಕಮಲೆ ಪ್ರೌಢೆಯಾದದ್ದು', 'ನಾಯಿಗಳು' ಕೆಡುಕಿನ ಚಿತ್ರಣದ ಕತೆಗಳಾಗಿದ್ದು, ಭಿನ್ನರೀತಿಯಲ್ಲಿ ಗುರುತಿಸಿಕೊಂಡು ಕತೆಗಾರರು ಪರಿಹಾರಹುಡುಕಲು ಪ್ರಯತ್ನಿಸಿದ್ದಾರೆನ್ನಬಹುದು. ಸಾಮಾಜಿಕ ನೆಲೆಯಲ್ಲಿ ಕ್ರೌರ್ಯ, ಶೋಷಣೆಯ ಉರುಳಿಗೆ ಸಿಕ್ಕ ಹೆಣ್ಣು ಮಕ್ಕಳ ಬದುಕಿನ ಚಿತ್ರಣವಾಗಿದೆ. ಮಾನವಸ್ವಭಾವದ ವಿಕೃತಿಗಳು ಭೀತಿಹುಟ್ಟಿಸುತ್ತವೆನ್ನಬಹುದು.

"ಎರಡು ಬೇರೆ ಬೇರೆ ಸಂಸ್ಕೃತಿಯ ಜಾತಿಯ ಹಿನ್ನೆಲೆಯ ಉನ್ನತಮನಸ್ಸಿನ ಎರಡು ಪಾತ್ರಗಳು ಮುಖಾಮುಖಿಯಾಗುವ 'ಗಂಗಾ' ಕಥೆ ಇದನ್ನು ಬಹಳ ಸಮರ್ಥವಾಗಿ ದುಡಿಸಿಕೊಳ್ಳುತ್ತದೆ. ಮಾನವೀಯತೆಗೆ, ಸಿದ್ಧಾಂತಕ್ಕೆ, ತಾತ್ವಿಕ ತಿರುವಿಗೆ ಇಲ್ಲಿಅವಕಾಶವಿದೆ. ಸಂಕೀರ್ಣವಾಗಿ ಮನಸ್ಸನ್ನು ಹಿಡಿಯಲು ಈ ಕತೆ ಪ್ರಯತ್ನಿಸುತ್ತದೆ"[೩೫] ಎಂಬ ಕಿಕ್ಕೇರಿನಾರಾಯಣ ಅವರ ಮಾತು ಉಲ್ಲೇಖನೀಯವಾಗಿದೆ. ರಾಮಣ್ಣನವರ 'ಗಂಗಾ' ಕತೆಯಲ್ಲಿ ತಂದೆ-ತಾಯಿ ಕಳೆದುಕೊಂಡ ಗಂಗಾ ಮಲತಾಯಿಯ ಹಿಡಿತದಲ್ಲಿಯೇ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದರೂ ಹಿಂಸೆ ತಪ್ಪಿರಲಿಲ್ಲ. ಬಾಸುಂಡೆ ಬರುವಂತೆ ಬೆನ್ನಿಗೆ ಹೊಡೆದು ಕೈತಿರುಚಿದಾಗ ಅಂಗವಿಕಲೆಯಂತಾದರೂ ಚಿಕ್ಕಮ್ಮನನ್ನು ದೂಷಿಸದ ಗಂಗಾ ಮೃದುಮನಸ್ಸಿನ ಒಳ್ಳೆಯಹುಡುಗಿ.

"ಏನೋ ಕೋಪದಲ್ಲಿ ಚಿಕ್ಕಮ್ಮ ಹೊಡದ್ರು ಬಿಡಿ, ನಂತಾಯಿ ಇದ್ದಿದ್ರೆ ಹೊಡೀತಿರಲಿಲ್ವೆ"[೩೬]

ಎಂದು ನೋವು ನುಂಗುತ್ತಿದ್ದ ಹುಡುಗಿ ಗಂಗಾ. ಇಂತಹ ೧೫ ಪ್ರಾಯದ ಹುಡುಗಿಯನ್ನು ಮಾನಭಂಗ ಮಾಡಿ, ಕೊಂದು ಕೊಳಕ್ಕೆ ಎಸೆದು ಸಂಬಂಧಿಸಿದವರಿಗೆ ಹಣ ಕೊಟ್ಟು, ಪೋಸ್ಟ್ ಮಾರ್ಟಂಗೂ ಅವಕಾಶಕೊಡದೆ ವ್ಯವಸ್ಥಿತವಾಗಿ ಮುಚ್ಚಿಹಾಕಿದವರಿಗೆ ಆತ್ಮಸಾಕ್ಷಿ ಇದೆಯೇ? ಹುಡುಗಿ ಚೆಂದವಾಗಿದ್ದು ತಪ್ಪೇ? ತಂದೆ-ತಾಯಿ ಕಳೆದುಕೊಂಡಿದ್ದು ಅವಳ ತಪ್ಪೇ? ಏನೂ

---

೩೫ ಆಲೆಮನೆ, ಜಿ.ಟಿ. ವೀರಪ್ಪ (ಸಂ.) ೧೯೯೫, ಪು: ೩೪

೩೬ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೪೨೭.

ಅರಿಯದ ಹುಡುಗಿ ಇಂತಹ ದುಷ್ಕ್ರಿಯೆಗೆ ಕ್ರೌರ್ಯಕ್ಕೆ ಬಲಿಯಾಗಬೇಕೆ? ಸಮಾಜ ಎತ್ತ ಸಾಗುತ್ತಿದೆ? ಇಂತಹವರಿಗೆ ಅಧಿಕಾರರೂಢರು ಬೆಂಬಲಕ್ಕೆ ನಿಲ್ಲುತ್ತಾರೆಂದರೆ ಏನೆನ್ನಬೇಕು? ಹಲವು ಹತ್ತಾರು ಪ್ರಶ್ನೆಗಳು ಸಂಭಾಷಣೆ ನಡೆಸುವರ ನಡುವೆ ದುತ್ತೆಂದು ನಿಲ್ಲುತ್ತವೆ. ನಿರೂಪಕ ಎಳೆಹೆಣ್ಣು ಕುಡಿಗಾದ ಘೋರ ಅನ್ಯಾಯಕ್ಕೆ ಎಂಥ ಶಿಕ್ಷೆ ನಿರೀಕ್ಷಿಸುತ್ತೀರಾ ಎಂದಾಗ,

"ಇಲ್ಲ ಶಿಕ್ಷೆಯಿಂದ ಪಾಪದ ಕ್ಷಯಸಾಧ್ಯವಿಲ್ಲ. ಕೆಲವು ದೇಶಗಳಲ್ಲಿ ಮಾನಭಂಗ ಮಾಡಿದವರಿಗೆ ಕಲ್ಲಿನಿಂದ ಹೊಡೆದುಕೊಲ್ಲುವ ಶಿಕ್ಷೆ ಈಗಲೂ ಜಾರಿಯಲ್ಲಿಲ್ಲವೆ? ಇಂಥ ದೇಶಗಳಲ್ಲೂ, ಇನ್ನೂ ಮಾನಭಂಗಗಳು ನಡೆಯುತ್ತಿಲ್ಲವೆ? ನಮ್ಮ ದೇಶದಲ್ಲೂ ಇತ್ತೀಚೆಗೆ ಕೊಲೆ ಅಪಾದನೆ ಮೇಲೆ ಬಹುಮಂದಿಯನ್ನು ನೇಣುಗಂಭಕ್ಕೇರಿಸಲಿಲ್ಲವೆ? ಈ ಶಾಂತಿಪ್ರಿಯ ರಾಷ್ಟ್ರದಲ್ಲಿ ಕೊಲೆಗಳು ನಡೆಯುತ್ತಿಲ್ಲವೆ? ರಾಷ್ಟ್ರದ ಕಾನೂನು ಏನಾದರೂ ಶಿಕ್ಷೆ ಕೊಟ್ಟುಕೊಳ್ಳಲಿ, ಆದರೆ ನಮ್ಮಂಥವರು ಇಂಥ ಪಾಪಿಗಳನ್ನು ಕ್ಷಮಿಸೆಂದೇ ದೇವರನ್ನು ಕೇಳುವುದು ಧರ್ಮ"[೩೭] ಎನ್ನುತ್ತಾರೆ. "ಮನೆಗೆ ಬಂದು 'ಕರುಮಜಾವ್ ಸಹೋದರರು ಕಾದಂಬರಿಯ ಮೊದಲನೆಯ ಸಂಪುಟವನ್ನು ತೆಗೆದು ಅಯ್ಯಂಗಾರ್ ಹೇಳಿದ್ದ ಘಟನೆಯನ್ನು ಓದಿದೆ. ಮತ್ತೆ ಮತ್ತೆ ಓದಿದಾಗ ಪಾದ್ರಿ ಜೋಷಿಯಾ ಗಂಡನ ಸಾವಿಗೆ ಕಾರಣಳಾಗಿ ಚಿತ್ತಶಾಂತಿ ಕಳೆದುಕೊಂಡಿದ್ದ ವಿಧವೆಗೆ ಹೇಳಿದ **Man cannot commit a sin so great as to tax God's boundless live. Can there be any such sin that will exceed God's love?** ಎಂಬ ವಾಕ್ಯಗಳು ನನ್ನ ಮೆದುಳಿನಲ್ಲಿ ಅಚ್ಚಾದವು. ಆ ಪುಸ್ತಕವನ್ನು ಮುಚ್ಚಿದೆ. ಗಂಗಾಳ ಅಲ್ಪ ಜೀವಿತದಲ್ಲೇ ಅವಳಿಂದ ನೋವು, ಪಡೆದ ಸಾವು ನೆನೆದು ಮನಸ್ಸು ವ್ಯಾಕುಲಗೊಂಡಿತು. ಕಮರಿಹೋದ ಜೀವಕ್ಕೆ ಸದ್ಗತಿ ದೊರಕಲೆಂದು ಹಾರೈಸಿದೆ. ಅವಳನ್ನು ಮಾನಭಂಗ ಮಾಡಿ, ಕೊಲೆ ಮಾಡಿದವರೆಷ್ಟು ಕಾಮುಕರು ಹಾಗೂ ಪಾಪಾತ್ಮರಿರಬಹುದೆಂದು ನೆನೆಯುತ್ತಿದ್ದಂತೆಯೇ ನನಗರಿವಿಲ್ಲದಂತೆಯೇ ನನ್ನ ಬಾಯಿಂದ ಪಾಪಿಗಳನ್ನು ಕ್ಷಮಿಸು ಪ್ರಭು"[೩೮] ಎಂಬ ವಾಕ್ಯವು ಹೊರಬಂತು. ಬಸ್‌ಪ್ರಯಾಣದಲ್ಲಿ ಪರಿಚಿತ ಸಹಪ್ರಯಾಣಿಕರ ನಡುವೆ ಅಮಾನವೀಯ ಘಟನೆ ಕುರಿತ ಸಂಭಾಷಣೆಯಲ್ಲಿ ಮಾನವೀಯತೆಯೇ ಮೆರೆಯುತ್ತದೆ. ಆತ್ಮಸಾಕ್ಷಿ, ಪಶ್ಚಾತ್ತಾಪ, ಪಾಪಪ್ರಜ್ಞೆಗಳು ಚಿತ್ತವನ್ನು ಶುದ್ಧಗೊಳಿಸಬಲ್ಲದು, ಶಿಕ್ಷೆಯಲ್ಲ ಎಂಬ ಒಮ್ಮತದ ಅಭಿಪ್ರಾಯದಲ್ಲಿ ಗಾಂಧಿಯವರ ಚಿಂತನೆ ಹುದುಗಿದೆ ಎನಿಸುತ್ತದೆ. ಕೆಡುಕಿನ ಕತೆ ಮಾನವೀಯ ನೆಲೆಗೆ ಬರತೊಡಗುತ್ತದೆ.

---

೩೭ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೪೩೦.

೩೮ ಅದೇ, ೨೦೧೧, ಪು: ೪೩೧.

ಕುಂ.ವೀರಭದ್ರಪ್ಪ ಅವರ 'ಕಮಲೆ ಪ್ರೌಢೆಯಾಗಿದ್ದು' ಕತೆಯಲ್ಲಿ ರಾಮಣ್ಣನವರ 'ಗಂಗಾ' ಕತೆಯಂತೆ 'ಕಮಲೆ' ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಗಂಗಾ ಕಥೆಯಲ್ಲಿ ಅಪರಾಧಿಗಳು ಯಾರೆಂದು ತಿಳಿಯುವುದಿಲ್ಲ. ಆದರೆ ಕಮಲೆಯ ಪರಿಚಿತರು ಅವಳನ್ನು ನಯವಾಗಿ ಮಾತಿನ ಬಲೆಯಲ್ಲಿ ಸಿಕ್ಕಿಸಿ ಕುತಂತ್ರದಿಂದ ಅತ್ಯಾಚಾರ ಎಸಗುತ್ತಾರೆ.

"ಬಾ ಕಮ್ಲಿ... ಅದರರ್ಥ ಹೇಳೋಕೆ ನಾನೊಂದು ಅಲ್ಲ. ಇವ್ರೆಲ್ಲಾ ಇದ್ದಾರೆ. ಆ ಶಬ್ದಕ್ಕೆ ನಾವೆಲ್ಲ ಸೇರಿ ತಲಾ ಒಂದೊಂದು ನಮೂನೆ ಅರ್ಥ ಹೇಳ್ತೀವಿ. ಕಮಲಿಗೆ ಮುಂದೆ ಹೆಜ್ಜೆ ಇಡಲು ಧೈರ್ಯವಾಗಲಿಲ್ಲ. ತನಗೂ ಶಬ್ದ ನೆನಪಾಗದಿದ್ದರೆ ಎಷ್ಟೋ ವಾಸಿತ್ತು ಹಿಂಜರಿದಳು. ಮತ್ತೆ ಈಶ ರಮಿಸಿ ಕರೆದ... ಬಾ ಯಾಕೆ ಹೆದ್ರಕ್ಕೊಂತಿ..... ನಾವೆಲ್ಲ ನಿಂ ಒಡಹುಟ್ಟಿದ ಅಣ್ಣೋರಿದ್ದಂಗೆ;... ಮತ್ತಷ್ಟು ಹೆದರಿದಳು. ಅರ್ಥವನ್ನು ಪರಮೇಶಿಯಿಂದ ತಿಳಿದರಾಯಿತು ಹಿಂದಕ್ಕೋಡಲು ನೋಡಿದಳು.

ದಾರಿಗೆ ಡುಬ್ಬಾ ಇಬ್ರಾಹಿಂ ನಿಂತಿದ್ದು ಮುಂದಕ್ಕೆ ತಳ್ಳಿದರು. ಈಶನ ತೆಕ್ಕೆ ಬಿದ್ದಳು. ಆತ ಅವುಚಿಕೊಂಡ, ಆತನೆದೆಯ ಕೂದಲು ಕಮಲಿಯ ಮುಖಕ್ಕೆ ಸೂಜಿಯಂತೆ ಚುಚ್ಚಿದವು. ಸ್ವಲ್ಪ ಹೊತ್ತಿನ ನಂತರ ವಯರ್ ಬ್ಯಾಗ್‌ನು ಹೆಗಲಿಗೆ ನೇತು ಹಾಕ್ಕೊಂಡು ಪರಮೇಶಿ ಬೆವರು ಸುರಿಸುತ್ತ ಬಂದ. ಆತಗೆ ಈಗಲೋ ಆಗಲೋ ಸಾಯಲಿದ್ದ ನಾಯಿ ಕಂಡೊಡನೆ ಬೆಟ್ಟದ ಪರಶಪ್ಪನ ಮಗಳು ಕಮಲಿ ನೆನಪಾದಳು. ಪರಮೇಶಿಯನ್ನು ಕಂಡಕೂಡಲೇ ನಾಯಿ ಕುಯ್ ಕುಯ್ ಅಂತ ತನ್ನ ನಾಯಿಭಾಷೆಯ ಮೂಲಕ ಏನೇನೋ ಹೇಳತೊಡಗಿದ್ದು ತೆವಳುತ್ತ ನಡೆದ. ಅಂದರೆ ತೋಪಿನ ಕಡೆಗೆ ಜಿಗಿದ. ಅದರೊಳಗಿಂದ ಹೆಣ್ಣೊಂದು ನರಳುತ್ತಿರುವ ಸದ್ದು ಸ್ಪಷ್ಟವಾಗಿ ಕೇಳಿಬರುತ್ತಿತ್ತು."[೩೯]

ಕಮಲೆಯ ಮೇಲಾದದ್ದು ಸಾಂಘಿಕ ಕ್ರೌರ್ಯವಾಗಿದ್ದು ಬಡಪಾಯಿ ಪರಮೇಶಿ ಕಮಲೆಗೆ ನ್ಯಾಯದೊರಕಿಸಲು ಪ್ರಯತ್ನಿಸುತ್ತಾನೆ. ಕಡೆಗೆ ವ್ಯವಸ್ಥೆಗೆ ತಿರುಗಿಬಿದ್ದ ಪರುಶಪ್ಪ ಅತ್ಯಾಚಾರಿಗಳ ತಲೆತರಿದು ಪೊಲೀಸ್ ಠಾಣೆಗೆ ಹೋಗುವ ಬೀಭತ್ಸ ಚಿತ್ರಣವಿದೆ.

ಕುಂ.ವೀರಭದ್ರಪ್ಪ ಅವರ 'ಬೆಟ್ಟದಾಚೆ' ಕತೆಯಲ್ಲಿ ಅಮಾಯಕ ಹೆಣ್ಣುಮಕ್ಕಳನ್ನು ಬೇರೆಯವರ ಹೆಸರಲ್ಲಿ ಹೆದರಿಸಿ ತಮ್ಮ ಕಾಮತೃಷೆಗೆ ಪೊಲೀಸರು ಬಳಸಿಕೊಳ್ಳುವುದನ್ನು ಕಂಡ ರಿಸ್ಕು ಸ್ವೀಕರಿಸುವ ಸಂಶೋಧನೆ ಬಿಟ್ಟು ಲೇಖಕರು ಅಲ್ಲಿಂದ ಪಲಾಯನ ಮಾಡುತ್ತಾರೆ. ವ್ಯವಸ್ಥೆಯ ಭೀಕರತೆ ಅವರಿಗೆ ದಿಗಿಲುಹುಟ್ಟಿಸುತ್ತದೆ.

೩೯ ನಿಜಲಿಂಗ, ೧೯೯೩, ಪು: ೧೪೬.

ರಾಮಣ್ಣನವರ 'ಮಾನಭಂಗ' ಕತೆಯಲ್ಲಿ, ಆಸ್ಪತ್ರೆಯಲ್ಲಿ ಕಳ್ಳತನವಾಗಿದ್ದ ಬಗ್ಗೆ ಅಟೆಂಡರ್ ಶಿವರಾಜ ರಶೀದ ಕಳ್ಳತನಮಾಡಲು ಬಂದಿದ್ದ ಎಂದು ಸುಳ್ಳು ಸಾಕ್ಷಿ ಹೇಳಿದ್ದರಿಂದ ರಶೀದನಿಗೆ ಜೈಲಾಯಿತು. ಇದನ್ನು ಕೇಳಿದ ನಿವೇದಕರಾದ ಡಾಕ್ಟರ್ ಶಿವರಾಜನಿಗೆ ವಾಚಾಮಗೋಚರ ನಿಂದಿಸಿ, ಬಾರಿಸಿದರೂ ಅವರ ಕೋಪಶಮನವಾಗುವುದಿಲ್ಲ. 'ನಾನೇನ್ ಮಾಡನೆ ಸಾರ್. .. ಆ ಕರಿಕೋಟಿನೋನು ಪೊಲೀಸ್ನೋರು ನೋಡು ನನ್ನ ಹೇಳ್ಕೇಲಿ ನೀನು ಏನು ತಿಳ್ಸಿದ್ದೀಯೋ; ರುಜುಹಾಕಿದ್ದೀಯೋ ಹಂಗೆ ಹೇಳ್ಬೇಕು. ಇಲ್ದೆ ಹೋದ್ರೆ ಒದ್ದು ಒಳಹಾಕಿ ನಿನ್ನ ಜೀವಮಾನಾನೆ, ನಿನ್ನ ಮನೆತನಾನೇ ತೊಳ್ದುಬುಡ್ತೀನಿ ಅಂದರು' ಎಂದು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಲೇ ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ. ಅಷ್ಟಾದರೂ ಡಾಕ್ಟ್ರುಸಿಟ್ಟು ಕಡಿಮೆಯಾಗಲಿಲ್ಲ.

"ಅವ್ರು ಅನ್ನಬ್ಯಾಡ. . . ಅಮಾದಿ ತಿನ್ನು ಅಂತಾರೆ.. ತಿನ್ನು ನೀ ಬಚಾವಾಗೋಕೆ ಒಬ್ಬನ ಜೈಲಿಗೆ ಕಳುಸ್ದೆ. . . ಎಂದು ಸುಳ್ಳಿನಿಂದ ಒಂದು ಮನೆಹಾಳು ಮಾಡಿದೆ. ಸತ್ಯ ಹೇಳು ಅಂದರೂ ಸುಳ್ಳು ಸಾಕ್ಷ್ಯಹೇಳಿದೆ ಎಂದು ತಡೆಯಲಾರದ ಸಿಟ್ಟಿನಲ್ಲಿ ಶಿವರಾಜನನ್ನು ಹೋಗಿ ಬಾವಿಗೆ ಬಿದ್ದು ಸಾಯಿ" [೪೦] ಎಂದು ಆಕ್ರೋಶದಿಂದ ಹೇಳಿದ್ದರಲ್ಲಿ ನೈತಿಕತೆಯ ಮಾನದಂಡದ ನೆಲೆ ಕಂಡುಬರುತ್ತದೆ.

ರಶೀದನಿಗೆ ಜೈಲಾದದ್ದು ಕೇಳಿ ರಶೀದನ ಹೆಂಡತಿ ಸೋನಿಯಾ ಮತ್ತು ಅವಳ ಮಗಳು ಮಮತಾಜಳು ಶವಗಳು ಆಸ್ಪತ್ರೆಯ ಕುಡಿಯುವ ನೀರಿನ ಬಾವಿಯಲ್ಲಿ ದೊರೆಯುತ್ತವೆ. ತನ್ನ ಗಂಡನಿಗೆ ಅನ್ಯಾಯಆದ ಸ್ಥಳದಲ್ಲಿ ಸತ್ತಿದ್ದು ಸೋನಿಯಾಳ ಪ್ರತಿರೋಧವೆನ್ನಬಹುದು. ಪೋಸ್ಟ್‌ಮಾರ್ಟಂ ಮಾಡಿದ ನಿವೇದಕ ಡಾಕ್ಟರ್‌ಗೆ ಮಮ್ತಾಜ್‌ಳದು ಆತ್ಮಹತ್ಯೆಯಲ್ಲ ಕೊಲೆ ಎಂದು ತಿಳಿದಾಗ ಅವರಿಗೆ ಧರ್ಮಸಂಕಟ ಶುರುವಾಗುತ್ತದೆ. ನಿಜನುಡಿದರೆ ಇನ್ಯಾವ ಅಮಾಯಕ ಶಿಕ್ಷೆ ಅನುಭವಿಸುತ್ತಾನೋ, ಏನು ಮಾಡಬೇಕೆಂದು ತಿಳಿಯದೆ ನೈತಿಕಭಯದಿಂದ ತತ್ತರಿಸಿಹೋಗುತ್ತಾನೆ. ಸತ್ತಿರುವ ಸೋನಿಯಾ ಬೇಗಂಳನ್ನು ಅಪರಾಧಿಯಾಗಿಸಲು ಒಪ್ಪದ ಮನಸ್ಥಿತಿ, ನಿಲುವು ಕೊನೆಗೆ ಸತ್ಯಮುಚ್ಚಿ ಹಾಕುವುದೇ ಲೇಸೆಂದು ಆತ್ಮಹತ್ಯೆಯೆಂದು ವರದಿ ನೀಡುತ್ತಾರೆ. ಆದರೆ ಆತ್ಮಸಾಕ್ಷಿ ಚುಚ್ಚತೊಡಗಿದಂತೆ ಮಾನಸಿಕನೆಮ್ಮದಿ ಕಳೆದುಕೊಳ್ಳುತ್ತಾರೆ.

ಮಾಸ್ತಿ ಅವರ "ಜೋಗ್ಯೋರ ಅಂಜಪ್ಪನ ಕೋಳಿ ಕತೆ"ಯಲ್ಲಿ ಜೋಳಿಗೆಯಲ್ಲಿ ಕೋಳಿ ಇಟ್ಟುಕೊಂಡು ಒಳ್ಳೆಯ ಉದ್ದೇಶದಿಂದ ಸತ್ಯಹೇಳಲಾಗದೆ ಅಂಜಪ್ಪ ಚಡಪಡಿಸಿಹೋಗುತ್ತಾನೆ.

---

೪೦ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೪೩೭.

ಆದರೆ ಅವನಲ್ಲಿ ಒಂದು ಖಚಿತತೆ ಸ್ಥಿತಪ್ರಜ್ಞತೆಯಿತ್ತು. ಹಾಗೆಯೇ ಈ ಕಥೆಯಲ್ಲಿ ಡಾಕ್ಟರ್ ಸಂಕಟವನ್ನು ಅನುಭವಿಸುತ್ತಾನೆ.

ಇಲ್ಲಿ ವೈದ್ಯರು ಹೆಣಕುಯ್ಯಲು ಶಿವರಾಜನಿಗೆ ಹೇಳಿದಾಗ ಕುಯ್ಯಲಾರದೆ ಕತ್ತಿನ ಬಳಿ ಇದ್ದ ಉಗುರಿನ ಗುರುತುಗಳನ್ನು ಕಂಡು ಮೂರ್ಛೆಹೋದ. ಸುಳ್ಳುವರದಿ ನೀಡಿದ ವೈದ್ಯರು ಮಾಡಿದ್ದನ್ನು ಅರಗಿಸಿಕೊಳ್ಳಲಾಗದೆ, ಚಡಪಡಿಕೆ ತಾಳಲಾರದೆ ರಶೀದನನ್ನು ಭೇಟಿ ಮಾಡಲು ಜೈಲಿಗೆ ಹೋದರು. ರಶೀದ ಬಂದಾಗ ವೈದ್ಯರು ಅವರಿಗೆ ಅರಿವಿಲ್ಲದೆ ಎದ್ದು ನಿಂತಿದ್ದು ಅವರ ಪಾಪಪ್ರಜ್ಞೆಯಿಂದಲೇ ಎನ್ನಬಹುದು. ರಶೀದ ತನ್ನನ್ನು ಸಮರ್ಥಿಸಿಕೊಳ್ಳುತ್ತಾ **"ಈ ಅಲಾಲ್ಕೋರ್ ಪ್ರಪಂಚಕ್ಕೆ ಸುಖಕೊಡೋಕೆ ಈಗ ಇರೋ ಸೂಳೆಯರು ಸಾಕಲ್ವೆ ಸಾಬ್, ನನ್ನ ಮಗಳೂ ಒಬ್ಬ ಸೂಳೆ ಆಗೋದ ಒಬ್ಬ ಅಪ್ಪ ಆಗಿ ನಾನು ಹೆಂಗೆ ಸಹಿಸಿಕ್ಕೊಳ್ಳಿ. ಪೊಲೀಸೋರ್ನೇ ಕೇಳಿ ಬೇಕಾದ್ರೆ"**[೪೧] ಎನ್ನುತ್ತಾನೆ.

ಶಿವರಾಜ **"ನಮ್ಮವ್ವನ ಆಣೆಗೂ ಬದ್ಕೋಕೆ ಇಷ್ಟ ಇಲ್ಲ ಸಾರ್. ನಿಮ್ಮ ಕಣ್ ಎದುರ್ಗೆ ಬಾವಿಗೆ ಬೀಳ್ತೀನಿ"**[೪೨] ಎಂದವನು ಮಾರನೇ ದಿನ ನೇಣುಹಾಕಿಕೊಂಡು ಸತ್ತ.

ರಶೀದ ಸಮಾಜದ ಬಗ್ಗೆ ನಂಬಿಕೆಯನ್ನೇ ಕಳೆದುಕೊಂಡಿದ್ದ. ಶಿವರಾಜನನ್ನು ಪಾಪಪ್ರಜ್ಞೆ ಬಿಡದೆ ಕಾಡತೊಡಗಿದಾಗ ಬದುಕನ್ನೇ ಮುಗಿಸಿಕೊಂಡ. ವೈದ್ಯರನ್ನು ಆತ್ಮಸಾಕ್ಷಿ ಚುಚ್ಚುತ್ತಲೇ ಇತ್ತು. ಇವರೆಲ್ಲರೂ ನೈತಿಕತೆಯ ಮಾನದಂಡದಲ್ಲಿ ತಮ್ಮನ್ನು ತೂಗಿಕೊಂಡರು. 'ಕಮಲೆ ಪ್ರೌಢೆಯಾದಳು' ಕತೆಯಲ್ಲಿ ನಕ್ಸಲೈಟ್ ಮಾದರಿಯ ಪ್ರತಿರೋಧ, ಸೇಡು ಕಂಡುಬರುತ್ತದೆ. ಅಪರಾಧಿಗಳ ತಲೆಕತ್ತರಿಸುವ ಬೀಭತ್ಸ ಚಿತ್ರ ಮನಸ್ಸಿಗೆ ಘಾಸಿಯನ್ನುಂಟುಮಾಡಿದರೆ ರಾಮಣ್ಣನವರ 'ಮಾನಭಂಗ' ಕತೆ ಕೆಡುಕಿನಲ್ಲೂ ಮಾನವೀಯತೆಯ ಲೇಪವನ್ನು ಕಾಣಬಹುದಾಗಿದೆ. ಸಮಾಜದಲ್ಲಿ ಘಟಿಸಬಹುದಾದ ದುರಂತದಲ್ಲೂ ಬದುಕಿನ ಭರವಸೆ ಮೂಡಿಸುವ ಪಾತ್ರಗಳು ಕಾಡುತ್ತವೆ.

ಕುಂ.ವೀರಭದ್ರಪ್ಪ ಅವರ 'ನಾಯಿಗಳು' ಕತೆಯಲ್ಲಿ ರಕ್ಷಣೆಕೊಡಬೇಕಾದ ಪೊಲೀಸರು ದುರ್ಮಾರ್ಗಿಗಳಾದಾಗ ಸ್ತ್ರೀ ಯಾರ ಮೊರೆಹೋಗಬೇಕೆಂಬ ಖಾರವಾದ ಪ್ರಶ್ನೆಯನ್ನು ಎತ್ತುತ್ತದೆ. ಅಸಹಾಯಕ ಹೆಣ್ಣುಮಗಳು ಪೊಲೀಸರಿಂದ ತಪ್ಪಿಸಿಕೊಂಡು ರಕ್ಷಣೆಗಾಗಿ ಅಂಗಲಾಚುತ್ತಾಳೆ.

---
[೪೧] ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೪೪೭.

[೪೨] ಅದೇ, ೪೩೮.

ಸಿಕ್ಕ ತಾತ್ಕಾಲಿಕ ಆಸರೆಯನ್ನೇ ಬಿಗಿಯಾಗಿ ಹಿಡಿಯುತ್ತಾಳೆ. ಪೊಲೀಸ್ ಠಾಣೆಯಲ್ಲಿ ಅವಳನ್ನು ನಡೆಸಿಕೊಂಡ ರೀತಿ ಮನುಷ್ಯ ಜೀವಿಯ ಬಗೆಗೆ ಅಸಹ್ಯ ಹುಟ್ಟಿಸುತ್ತದೆ. ಮನುಷ್ಯನ ಕ್ರೌರ್ಯ, ಅಸಹಾಯಕತೆಗಳೇ ಕತೆಯಕೇಂದ್ರವನ್ನು ನಿರ್ಧರಿಸುವಂತೆ ಕಾಣುತ್ತದೆ. ಬೇರು ಶಿಥಿಲವಾಗಿ ಸೋಲು ಅನುಭವಿಸಬೇಕಾದ ಸ್ಥಿತಿ ಅಸಹಾಯಕ ಹೆಣ್ಣುಮಗಳದಾಗುವುದು. ಆ ಸಮಾಜಕ್ಕೆ ಆದ ಸಾಮಾಜಿಕ ಅವಮಾನವೆನ್ನಬಹುದು.

ರಾಮಣ್ಣ ಅವರ 'ಬೇಲಾ' ಮತ್ತು 'ನೆರಳುಗಳು' ಕತೆಗಳು ವೇಶ್ಯಾಸಮಸ್ಯೆಯನ್ನು ಕುರಿತಂತೆ ಭಿನ್ನವಾದ ಚಿತ್ರಣ ನೀಡುತ್ತವೆ. ವಿಶ್ವ ಆರೋಗ್ಯ ಸಂಸ್ಥೆ ಅಡಿಯಲ್ಲಿ ಬಾಗಲ್ಪುರ ಜಿಲ್ಲೆಯ ಸಿಡುಬುರೋಗಕ್ಕೆ ಸಂಬಂಧಪಟ್ಟಂತೆ ನಿಸ್ಪೃಹರಾಗಿ ಪ್ರಾಮಾಣಿಕವಾಗಿ, ಬದ್ಧತೆಯಿಂದ ಕಾರ್ಯನಿರ್ವಹಿಸಿದ ತಂಡ ವೈದ್ಯವೃತ್ತಿಗೆ ಘನತೆ ತಂದಿತು. ಆ ತಂಡದಲ್ಲಿದ್ದ ವೈದ್ಯರಿಗೆ ಅಲ್ಲಿ ಪರಿಚಯವಾದ ಗ್ರಾಮನರ್ತಕಿಯ ಸ್ನೇಹದ ಫಲವೇ 'ಬೇಲಾ' ಕತೆ. ನರ್ತಕಿ ಬೇಲಾ ಮತ್ತು ಅವಳ ಮನೆಯವರು ಸುಸಂಸ್ಕೃತ ನಡವಳಿಕೆಯವರು. ನೆಮ್ಮದಿಯ ಬದುಕಿಗೆ ಬೇಕಾದ ಹೊಲಗದ್ದೆಗಳಿದ್ದರೂ ಅನಿಷ್ಟ ಸಂಪ್ರದಾಯದಲ್ಲಿ ಸಿಲುಕಿದ್ದರು. ವೈದ್ಯರಿಗೆ ಮೊದಲ ಭೇಟಿಯಲ್ಲೇ ಕಲೆ, ಸಾಹಿತ್ಯ, ಸಂಗೀತ, ಸಂಸ್ಕಾರ, ಸೌಂದರ್ಯಗಳ ಸಂಗಮವೆನಿಸಿದ್ದ ಬೇಲಾಳ ಬದುಕು ಕಟ್ಟುಪಾಡಿನಲ್ಲಿ ಸಿಲುಕಿ ಶೋಷಣೆಯಾಗುತ್ತಿತ್ತು. ತಲೆತಲಾಂತರದಿಂದ, ಮಾಢ್ಯ ಸಂಪ್ರದಾಯದ ಬಲೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವ... ಗೌರವದಿಂದ ವಂಚಿತರಾಗಿ ಬದುಕುತ್ತಿರುವ ತನ್ನ ಜನಾಂಗದ ಹೆಣ್ಣುಗಳು ಗೌರವವಾಗಿ ಸಮಾಜದಲ್ಲಿ ತಲೆಯೆತ್ತಿ ಬದುಕುವಂತೆ ಮಾಡಿ... ಅದೇ ದೊಡ್ಡ ಕ್ರಾಂತಿ!

"ಡಾಕ್ಟರ್! ವೇಶ್ಯಾವೃತ್ತಿಯನ್ನು ನಿರ್ಮೂಲಮಾಡುವುದು ಸಿಡುಬನ್ನು ನಿರ್ಮೂಲ ಮಾಡುವಷ್ಟು ಸುಲಭವಲ್ಲ! ಸಿಡುಬಿಗೆ ಒಂದು ವಿಷಕ್ರಿಮಿ ಕಾರಣ. ಆದರೆ ನಮ್ಮ ವೃತ್ತಿಗೆ ಮೂಲಕಾರಣ 'ಗಂಡು'। ಅಂದರೆ ಗಂಡಸಿನ ದಬ್ಬಾಳಿಕೆ ಮತ್ತು ಹೆಣ್ಣಿನ ಅಸಹಾಯಕತೆ।"[೪೩] ಎಂದು ಚಾಟಿ ಬೀಸಿದಂತೆ ಮಾತನಾಡಿದ್ದು ಸಮಷ್ಟಿಯ ನೆಲೆಯಲ್ಲಿ ಹೆಣ್ಣಿನ ಬದುಕನ್ನು ಸರಿಪಡಿಸಿ ಎಂದು ಮಾರ್ಮಿಕವಾಗಿ ಹೇಳುತ್ತಾಳೆ. ಹೆಣ್ಣಿನ ಬದುಕನ್ನು ನೇರ್ಪುಗೊಳಿಸಿ ನಂತರ ಜನಾಂಗದ ವಿಷಯಕ್ಕೆ ಹೋಗಿ ಎಂದು ಮೂಲದಲ್ಲಿರುವ ಲೋಪವನ್ನು ಎತ್ತಿ ಹಿಡಿಯುತ್ತಾಳೆ. ಬೇಲಾ ವೇಶ್ಯಾವೃತ್ತಿಗೆ ಮೂಲಕಾರಣ ಗಂಡಸು, ಮೊದಲು ನಿಮ್ಮನ್ನು ಸರಿಪಡಿಸಿಕೊಳ್ಳಿ, ಉಳಿದವೆಲ್ಲವೂ ಸರಿಹೋಗುತ್ತವೆಂದು ಬೇಲಾ ಹೇಳಿದಾಗ ವೈದ್ಯರು ಮಾತನ್ನು ಕಳೆದುಕೊಂಡಂತಾದರು. ತನ್ನ

---

೪೩ ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು: ೩೨೦.

ಜನರ ನೋವನ್ನು ಹೇಳಿಕೊಂಡು ಬೇಲಾ ವ್ಯಥೆಪಡುತ್ತಾಳೆ. ಬೇಲಾ ತನ್ನ ಸುಸಂಸ್ಕೃತನಡವಳಿಕೆಯಿಂದ ಪ್ರತಿಭೇಟಿಯಲ್ಲೂ ಎತ್ತರಕ್ಕೇರಿದರೆ ಘನತೆಯ ವೈದ್ಯರು ಅಧಃಪತನಕ್ಕೆ ಇಳಿಯುತ್ತಾ ಹೋಗುತ್ತಾರೆ.

"ಬೇಲಾ ಕಥೆಯನ್ನು ಓದಿ ತುಂಬ ಆನಂದಪಡುವ ವಾಚಕನಿಗೆ ಮೌಲ್ಯವಿವೇಚನೆ ಕಾಡುತ್ತದೆ. ನಾಯಕ ಬೇರೆ ಹೆಣ್ಣಿನೊಡನೆ ಕಳೆದ ಆತ್ಮೀಯಗಳಿಗೆಗಳನ್ನು ನೆನೆದು ಹೆಮ್ಮೆಪಡುವಂತೆ ತನ್ನ ಹೆಂಡತಿ ಪರಪುರುಷನ ಸಹವಾಸದಲ್ಲಿ ಸುಖಪಡೆದರೆ ಅದನ್ನು ಭರಿಸುವ ಶಕ್ತಿ ಅವನಿಗಿದೆಯೇ? ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿ ತಾರತಮ್ಯವಲ್ಲವೆ? ಸಮಾನತಾಭಾವದಿಂದ ಪ್ರೇರಿತವಾಗುವ ಈ ಪ್ರಶ್ನೆಗಳನ್ನು ಎದುರಿಸುವ ತಾತ್ವಿಕತೆ ಕತೆಯಲ್ಲಿ ಇಲ್ಲವಾದ್ದರಿಂದ ಅದು ಎಷ್ಟೇ ಮನೋಹರವಾಗಿದ್ದರೂ ಕಳಪೆ ಕೃತಿಯಾಗಿ ಬಿಡುತ್ತದೆ. ದಲಿತರ ಉದ್ಧಾರದ ಬಗ್ಗೆ ವ್ಯಕ್ತವಾಗುವ ಕತೆಗಾರನ ತೀವ್ರತೆ ಸ್ತ್ರೀಯ ಸಮಾನತೆ ವಿಷಯದಲ್ಲಿ ಕಾಣುವುದಿಲ್ಲ"[೪೪] ಎಂದು ಭಗವಾನ್ ಅವರು ಅಭಿಪ್ರಾಯಪಡುವುದು ಉಲ್ಲೇಖನೀಯವಾಗಿದೆ. ಬೇಲಾಳ ಬದುಕಿನಲ್ಲಿ ಭಕ್ತಿಮಾರ್ಗ, ಜ್ಞಾನ ಮಾರ್ಗಳೆಲ್ಲವೂ ಇದ್ದು ತನ್ನ ಕರ್ಮಮಾರ್ಗ ಸರಿಯಾದುದಲ್ಲವೆಂದು ಅವಳ ಅಂತಃಪ್ರಜ್ಞೆ ಎಚ್ಚರಿಸುತ್ತಲೇ ಇತ್ತು. ವೈದ್ಯರು ಅವಳಿಗಾಗಿ ಮರುಗಿದರಷ್ಟೇ ಹೊರತು ಅವಳನ್ನು ಉದ್ಧರಿಸುವ ಯಾವ ಯೋಚನೆಯೂ ಅವರಲ್ಲಿ ಸುಳಿಯಲಿಲ್ಲ. ಶತಮಾನಗಳ ಕಾಲದ ಹೆಣ್ಣಿನ ಸಾಮಾಜಿಕ ಸಂಕಟ ನಿವಾರಣೆ ಯಾವಾಗ ಎಂಬ ಪ್ರಶ್ನೆ ಉಳಿಯುತ್ತದೆ.

ರಾಮಣ್ಣ ಅವರ 'ನೆರಳುಗಳು' ಕತೆಗಾರನೋರ್ವ ನಗರವೀಕ್ಷಣೆಗೆ ಹೋದಾಗ ಬದುಕಿನ ವಿವಿಧ ಮುಖಗಳನ್ನು ಕಾಣುವ ಗ್ರಹಿಸುವ ಕತೆಯಾಗಿದೆ. ಪುರುಷ ಪ್ರಧಾನ ಸಮಾಜ ಅಸಹಾಯಕ ಹೆಣ್ಣನ್ನು ತನ್ನ ಕಾಮತೃಷೆಗೆ ಬಳಸಿಕೊಂಡು ಹಿಂಸಿಸುವುದನ್ನು ಕತೆ ಧ್ವನಿಸುತ್ತದೆ.

"ನೀನೇನು ಹೆಂಗಸರನ್ನೇ ಕಾಣ.. ಅಕ್ಕತಂಗೀರಿಲ್ವ...... ಅಲ್ಲಾಗೋಳ...... ದುಡ್ಡು ಕೊಟ್ಟಿದ್ದೀಅಂತ ಪ್ರಾಣತೆಗಿತೀಯ? "ಏನೋ ಹಾಳುದೇವ್ರು ನಮಗೆ ಹಿಟ್ಟುಬಟ್ಟೆಗೆ ನೇರವಾಗಿ ಕೊಟ್ಟಿದ್ರೆ ಯಾವ ಗುಲಾಮನನ್ನ ಮಗಳು ಬತ್ತಿದ್ದಲು. ಈ ಲುಚ್ಚಾಕಸ್‌ಬ್‌ಗೆ । ನಾನೇನು ಖುಷಿ ಬಂದು ಇಲ್ಲಿ ನಿನಗೆ ಕಾಯ್ಕಂಡ್ ಕುಂತಿದ್ನ..... ಈ ಹಾಳು ಹೊಟ್ಟೇಯಿಂದ ಈ ಗತಿ.[೪೫]

---

೪೪ ಭಗವಾನ್, ಕನ್ನಂಬಾಡಿ, ೧೯೮೬, ಪು : ೨೪.

೪೫ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪುಟ : ೨೦೭.

ವೇಶ್ಯಾವೃತ್ತಿ ಸಾಮಾಜಿಕ ಅನಿಷ್ಟ ಎಂಬುದನ್ನು ಕತೆ ಸಾಂಕೇತಿಕವಾಗಿ ನಿರೂಪಿಸುತ್ತಾ ಹೋಗುತ್ತದೆ. ಕೊನೆಗೆ ಕತೆಗಾರರನಿಗೆ ಹಲವು ಮೂಲಭೂತ ಪ್ರಶ್ನೆಗಳು ಎದುರಾಗಿ ಪಲಾಯನಮಾಡಬೇಕೆನ್ನಿಸಿದಾಗ ಅನಾಥ ಹೆಣ ಎದುರಾಗುತ್ತದೆ. ನಿರಂಜನರ 'ಕೊನೆಯಗಿರಾಕಿ' ಕತೆಯ ಹೆಣದನೆರಳು ಅನಾಥಹೆಣದಲ್ಲೂ ಕಾಣುತ್ತದೆ. ವೇಶ್ಯಾ ವೃತ್ತಿಯ ಸುಳಿಯಲ್ಲಿ ಸಿಕ್ಕ ಹೆಣ್ಣು ಅದರಿಂದ ಹೊರಬರಲಾಗದಂಥ ಒತ್ತಡ ಸಮಾಜದಲ್ಲಿರುವುದನ್ನು ಕಥೆ ಅನಾವರಣಮಾಡುತ್ತದೆ. ಅಸಹಾಯಕ ದುರ್ಬಲ ಸ್ತ್ರೀಯ ಗೋಳನ್ನು ಕತೆ ಕಟ್ಟಿಕೊಡುತ್ತದೆ.

ಕುಂ.ವೀರಭದ್ರಪ್ಪ ಅವರು ಮೇಲ್ವರ್ಗ ಜಮೀನ್ದಾರರು. ರಾಜಕಾರಣಿ, ಪುರೋಹಿತರು, ಅರಕ್ಷಕರು, ಹೆಣ್ಣನ್ನು ಕಾಮತೃಷೆಗೆ ಬಳಸಿಕೊಳ್ಳುವ ನೀಚತನವನ್ನು ಕತೆಗಳಲ್ಲಿ ಕಾಣಿಸಿದ್ದಾರೆ. ಅಸಹಾಯಕ ಹೆಣ್ಣುಮಕ್ಕಳು ಮಾನಸಿಕ, ದೈಹಿಕ ಕಿರುಕುಳಕ್ಕೆ ಒಳಗಾಗುವುದನ್ನು ಕಾಣಬಹುದಾಗಿದೆ. ಅಧಿಕಾರಸ್ಥರ ಕಾಮದಾಹಕ್ಕೆ ಬಡ, ಅನಕ್ಷರಸ್ಥ, ಕೂಲಿಕಾರ್ಮಿಕ ಹೆಣ್ಣು ಮಕ್ಕಳು ಬಲಿಯಾವುಗುವುದನ್ನು ಕುಂ.ವೀರಭದ್ರಪ್ಪ ಕತೆಗಳಲ್ಲಿ ಕಾಣಬಹುದು.

ಜಮೀನ್ದಾರಿಕೆಯೆ ಶೋಷಣೆಯಾಗಿರುವಾಗ ಅವರಲ್ಲಿರುವ ಪರಸ್ತ್ರೀ ವ್ಯಾಮೋಹ, ಕಾಮದಾಸೆ, ಲಂಪಟತನಕ್ಕೆ ಮಿತಿಯೇ ಇಲ್ಲದಿರುವುದನ್ನು ಕುಂ.ವೀರಭದ್ರಪ್ಪ ವಾಸ್ತವಿಕ ನೆಲೆಯಲ್ಲಿ ಕಾಣಿಸುತ್ತಾರೆ, ಅಧಿಕಾರಸ್ಥರ ನೈತಿಕ ಅಧಃಪತನವನ್ನು ಅವರ ಕಪಟತನವನ್ನು, ಕುಕೃತ್ಯಗಳನ್ನು ಚಿತ್ರಿಸಿದ್ದಾರೆ. ಆದರೆ ರಾಮಣ್ಣನವರು ಸಾಮಾಜಿಕ ಪಿಡುಗಾದ ವೇಶ್ಯೆಯರ ಬದುಕಿನ ಸೂಕ್ಷ್ಮ ಒಳನೋಟವನ್ನು ಕತೆಗಳಲ್ಲಿ ನೀಡುತ್ತಾರೆ. ಕೆಳವರ್ಗದ ಸ್ತ್ರೀಯರು ಪ್ರತಿಭಟಿಸಲಾಗದೆ ದಬ್ಬಾಳಿಕೆ, ದೌರ್ಜನ್ಯ, ಅನ್ಯಾಯವನ್ನು ಅಸಹಾಯಕರಾಗಿ ಅನುಭವಿಸುವ ಸ್ತ್ರೀಪಾತ್ರಗಳನ್ನು ಇವರ ಕತೆಗಳಲ್ಲಿ ಕಾಣುತ್ತೇವೆ. ಪುರುಷ ಪ್ರಧಾನ ಸಮಾಜ ಅಸಹಾಯಕ ಹೆಣ್ಣನ್ನು ತನ್ನ ಕಾಮತೃಷೆಗೆ ಬಳಸುವುದನ್ನು ಕತೆಗಳು ಧ್ವನಿಸುತ್ತವೆ. ಸ್ತ್ರೀಯರ ಮೇಲಾಗುವ ಶೋಷಣೆ ಮತ್ತು ವಿಮೋಚನೆಯ ಸಾಧ್ಯತೆಯನ್ನು ಭಿನ್ನ ನೆಲೆಯಲ್ಲಿ ಇಬ್ಬರೂ ಕತೆಗಾರರು ಚಿತ್ರಿಸಿದ್ದಾರೆ.

ರಾಮಣ್ಣನವರ 'ಒಂದು ಹುಡುಗನಿಗೆ ಬಿದ್ದ ಕನಸು' ಮತ್ತು 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಕತೆಗಳು ಪ್ರಜಾಪ್ರಭುತ್ವ, ಗಾಂಧಿತತ್ವವನ್ನು ಒಳಗೊಂಡಂತೆ ಪ್ರಭುತ್ವವನ್ನು ಪ್ರಶ್ನಿಸುತ್ತಾ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

'ಒಂದು ಹುಡುಗನಿಗೆ ಬಿದ್ದ ಕನಸು' ಕತೆಯಲ್ಲಿ ಲೇಖಕರು ಒಂದು ಪ್ರೇಕ್ಷಣೀಯ ನಗರಕ್ಕೆ ಮಗನೊಂದಿಗೆ ಭೇಟಿಕೊಡುತ್ತಾರೆ. ಊರಿನ ಪರಿಚಯ ಮಾಡಿಕೊಡುತ್ತಾ ಸಮಸ್ತ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಅನಾವರಣಗೊಳಿಸುತ್ತಾ ದೇಶದ ಪ್ರಸ್ತುತ ಸ್ಥಿತಿಯನ್ನು ಕಣ್ಣುಮುಂದೆ ತರುತ್ತಾರೆ.

ವ್ಯವಸ್ಥೆಯನ್ನು ಪ್ರಶ್ನಿಸುವ ಮನೋಭಾವ ಮುಖ್ಯವಾದ ಸಂದರ್ಭದಲ್ಲಿ ತಮ್ಮ ಮಗನ ಮೂಲಕ ಮುಂದಿನ ಪೀಳಿಗೆಗೆ ಸಂದೇಶ ರವಾನಿಸಿ ಸಮಾಧಾನ ಪಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ. ಸಾಹಿತಿಯಾದವರು ಮಾಡಬೇಕಾದ ಜವಾಬ್ದಾರಿಯನ್ನು ಕತೆಯಲ್ಲಿ ವ್ಯಕ್ತಗೊಳಿಸಿದ್ದಾರೆ. ರಾಮಣ್ಣನವರೇ ಹೇಳುವಂತೆ **"ತುರ್ತು ಪರಿಸ್ಥಿತಿಯಂತಹ 'ಅನಿಷ್ಟ' ಕಾಲದಲ್ಲಿ ಅನೇಕ ಮೌಲ್ಯಗಳಿಗೆ ಬಿದ್ದಿದ್ದ ಪೆಟ್ಟನ್ನು ಈ ಕಥೆಗಳು ಗುರುತಿಸಿವೆ, ಪ್ರತಿಭಟಿಸಿವೆ, 'ಒಂದು ಹುಡುಗನಿಗೆ ಬಿದ್ದ ಕನಸು', ನನ್ನ ಮಗ ರವಿಕಾಂತಗೌಡನಿಗೆ, ನಾನು ತುರ್ತು ಪರಿಸ್ಥಿತಿ ಕಾಲದಲ್ಲಿ ಕೊಡಿಯಾಲ ಎಂಬ ಹಳ್ಳಿಯಲ್ಲಿ ವೈದ್ಯನಾಗಿದ್ದಾಗ ಬಿದ್ದ ಕನಸು, ಆ ಕಾಲದಲ್ಲಿ ನನ್ನ ಮಗನ ಮನಸ್ಸಿಗೆ ಉಂಟಾಗಿದ್ದ ಅಘಾತ ಮತ್ತು ಅಘಾತಕ್ಕೆ ಕಾರಣವಾದ ವಿಷಯಗಳ ಬೆಳಕಿನಲ್ಲಿ ಈ ಕತೆ ಮೂಡಿಬಂತು".**[೪೬]

ರಾಮಣ್ಣನವರು ಭಾರತದ ಬಗೆಗೆ ತಮ್ಮ ಕನಸುಕನವರಿಕೆಗಳನ್ನು, ಆಶಾವಾದವನ್ನು ಬಾಲಕನಿಗೆ ಜಾಗರೂಕತೆಯಿಂದ ದಾಟಿಸಲು ಪ್ರಯತ್ನಿಸುತ್ತಾರೆ. ತಂದೆ ಮಗನ ಸಂಭಾಷಣೆ ಹೀಗೆ ಸಾಗುತ್ತದೆ.

"ಅಪ್ಪಾ ! ಅಪ್ಪಾ !! ಇದೇನಪ್ಪಾ...... ?"
"ಅರಮನೆ ಕಣೋ. ನಮ್ಮನ್ನು ಆಳುತ್ತಿದ್ದ ಅರಸರಮನೆ'
"ಇಂಥ ಮನೇಲಿ ಎಷ್ಟು ಜನ ಇರಬೋದು, ಎಷ್ಟು ಜನ ಅರಸರು ಇದ್ದರು. ಇಲ್ಲಿ....."

"ಹೋಗೋ ಕಮಂಗಿ ! ಒಬ್ಬರೇ, ಇನ್ನೇನು ಒಂದು ರಾಜ್ಯಕ್ಕೆ ಸಾವಿರ ರಾಜರು ಇರ್ತಾರೆ ಎಂದುಕೊಂಡ....."

ಈ ಉತ್ತರದಿಂದ ಹುಡುಗನ ಉತ್ಸಾಹ ಕುಗ್ಗಬಹುದೆಂದು ಭಾವಿಸಿದ್ದ ಅಪ್ಪನ ನಿರೀಕ್ಷೆ ತಪ್ಪಾಯಿತು.

"ಒಂದು ರಾಜ್ಯಕ್ಕೆ ಒಬ್ಬ ರಾಜ ಸರಿ. ಆದರೆ ಅವನಿಗೆ ಲೆಕ್ಕವಿಲ್ಲದಷ್ಟು ಜನ ಹೆಂಡತೀರು ಇರಬೇಕು. ಅಲ್ವಾ"[೪೭]

---

೪೬ ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು: ೧೩.

೪೭ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೨೩೯.

ಬಾಲಕನ ಕುತೂಹಲದ ಪ್ರಶ್ನೆಗಳು ಭಾರತವನ್ನು ಸಮಷ್ಟಿನೆಲೆಯಲ್ಲಿ ಕಾಣಲು ಸಾಧ್ಯವಾಗಿಸುವ ರಾಮಣ್ಣ ಪ್ರಜಾಪ್ರಭುತ್ವ, ಗಾಂಧಿತತ್ವ ನೆಲೆಯಲ್ಲಿ ರೂಪಿತವಾಗಬೇಕಾಗಿರುವ ಭಾರತ ಅನ್ಯಾಯ, ಶೋಷಣೆ, ಅನೈತಿಕತೆ, ವರ್ಗ, ಜಾತಿತಾರತಮ್ಯಗಳಿಂದ ನಲುಗುತ್ತಿದ್ದು ಸುಸ್ಥಿರ ಭಾರತಕ್ಕೆ ಹಂಬಲಿಸುತ್ತಾರೆ. ದುಡಿದುಣ್ಣುವ ವರ್ಗ ಭಾರತದ ಸತ್ವವಾಗಬೇಕೆಂದು ಬಯಸುವ ರಾಮಣ್ಣ ಅವರ ಕತೆಯಲ್ಲಿ ಪ್ರಾಮಾಣಿಕವಾಗಿ ಬದುಕುವ ಮೇಷ್ಟ್ರ ಕೊಲೆ ನೈತಿಕ ಪ್ರಜ್ಞೆಯ, ಸಾಕ್ಷಿ ಪ್ರಜ್ಞೆಯ ಕೊಲೆಯಾಗಿ ಸಾಮಾಜಿಕ ಪ್ರಜ್ಞೆಯನ್ನು ಅಲುಗಾಡಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಬಸವನೂ.... ಕನಸೂ...' ಕತೆಯಲ್ಲಿ ಬಸವ ಅಪ್ರಾಪ್ತ ಬಾಲಕನಾಗಿದ್ದು ತಾನು ಕಂಡ ಕನಸಿನಲ್ಲಿ ಅರಮನೆಗೆ ಬೆಂಕಿಬಿದ್ದಂತೆ ಕಾಣುತ್ತಾನೆ. ತನ್ನ ಕನಸನ್ನು ಯಾರಿಗೆ ಹೇಳಲಾರದೆ ಚಡಪಡಿಸುತ್ತಾನೆ. ತಾನು ಹೊದಿದ್ದ ಕೌದಿಯ ಹಲವು ತುಂಡುಗಳ ಹೆಣಿಗೆ ಎಷ್ಟೋ ಅದ್ಭುತ ಕನಸುಗಳನ್ನು ಹುದುಗಿಸಿಕೊಂಡಿರುವಂತೆ ಭ್ರಮಿಸುತ್ತಾನೆ. ಜಗತ್ತಿನ ಭೂಪಟದಂತೆ ಕೌದಿ ಅವನಿಗೆ ಭಾಸವಾಗುತ್ತದೆ.

"ಕೋಮಟಿಗರ ಇಟೋಬಯ್ಯನ ಹೆಂಡತಿ ರಿಂಧಕ್ಕನ ಸೀರೆಯ ತುಂಡು, ಕುಲಕರ್ಣಿ ಅಮ್ಮನವರ ಸೀರೆ ತುಂಡು, ಶಿವಪೂಜೆಗೆ ಕೊಟ್ಟ ಗೌಡರ ಸೂಳೆ ಸಾವಿತ್ರಿಯ ಸೀರೆ, ಅವ್ವ, ಅಜ್ಜಿಯರ ಸೀರೆತುಂಡು, ಅಪ್ಪನ, ತಾತನ, ಹರಕು ದೋತರದ ತುಂಡು, ಕಮತದ ಯಜಮಾನರ ತರಹಾವರಿ ದೋತರದ ತುಂಡು"[೪೮] ಎಲ್ಲವೂ ಸೇರಿ ದ್ರೌಪದಿ ಕೌದಿಯಾಗಿ ದ್ವಾಪರಯುಗಕ್ಕೆ ಅವನ ಕನಸು ಬಂದು ನಿಲ್ಲುತ್ತದೆ. ಕಿನ್ನರ ಲೋಕವನ್ನು ಕನಸಿನಲ್ಲಿ ಬಸವ ಕಾಣುತ್ತಾನೆ. ಸಮಾಜದ ಸಮಸ್ತವನ್ನೂ ಕನಸಿನಲ್ಲಿ ಕಂಡ ಬಸವ ಜನರ ಮೂಢನಂಬಿಕೆ, ಜಾತಿ ತಾರತಮ್ಯ, ವರ್ಗತಾರತಮ್ಯ, ಕಂದಾಚಾರದ ಸಾಮಾಜಿಕ ಬದುಕಿಗೆ ತೊಡಕಾಗಿರುವ ಅಂಶಗಳು ನಿವಾರಣೆಯಾಗಬೇಕೆಂದು ಬಯಸುತ್ತಾನೆ.

ಬಾಲಕನ ಕನಸಿನ ಮೂಲಕ ಸಾಮಾಜಿಕ ಬದಲಾವಣೆಗೆ ಲೇಖಕರು ಹಾತೊರೆಯುತ್ತಾರೆ. ಗೋಜಲಾಗಿರುವ ಕನಸನ್ನು ಅರ್ಥೈಸುವುದು ಕಠಿಣವಾದರೂ ವಿಚಾರಣೀಯ ಅಂಶಗಳು ಇದ್ದು ಸಾಮಾಜಿಕ ಬದುಕು ಕಾಲಕ್ಕೆ ಅನುಗುಣವಾಗಿ ಪುನರ್ ಮೌಲ್ಯೀಕರಣವಾಗಬೇಕೆಂಬ ಇಂಗಿತ ಕತೆಯಲ್ಲಿ ವ್ಯಕ್ತವಾಗುತ್ತದೆ. ರಾಮಣ್ಣನವರು 'ಒಂದು ಹುಡುಗನಿಗೆ ಬಿದ್ದ ಕನಸು' ಜನಮುಖಿ, ಸಮಾಜಮುಖಿ ಚಿಂತನೆಗಳು ಸಂಭಾಷಣೆ

---

೪೮ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು: ೮೦೬.

ಪ್ರಶ್ನೋತ್ತರಗಳ ಮೂಲಕ ಕತೆ ಸುಸ್ಪಷ್ಟವಾಗಿ ಸಾಗುತ್ತದೆ. ನಿರ್ಧಿಷ್ಟ ತಾತ್ವಿಕತೆಗೆ ಬಂದುನಿಲ್ಲುತ್ತದೆ. ಆದರೆ ಕುಂವೀ ಅವರ 'ಬಸವನೂ ಕನಸೂ' ಗೋಜಲಾಗಿ ಅಸ್ಪಷ್ಟವೆನಿಸುತ್ತದೆ.

ಇತಿಹಾಸದ ಹಿನ್ನೆಲೆಯಲ್ಲಿ ವರ್ತಮಾನವನ್ನು ವಿಶ್ಲೇಷಿಸುವ ಕುಂ.ವೀರಭದ್ರಪ್ಪ ಅವರ 'ಕುರ್ಮಾವತಾರ' ಕತೆ ಕೌಟುಂಬಿಕ ಬದುಕು ಮತ್ತು ಗಾಂಧಿತತ್ವಗಳ ಚಿಂತನೆಯನ್ನು ಸಮಾನಾಂತರವಾಗಿ ಒಯ್ಯುತ್ತದೆ. ಕತೆಯ ಆನಂದರಾಯರು ಗಾಂಧಿತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಸರಳವ್ಯಕ್ತಿ. ಕೌಟುಂಬಿಕ ಬದುಕಿನ ಬಗೆಗಿನ ಅವರ ಅನಾಸಕ್ತಿಯನ್ನು ಹೆಂಡತಿ ಹೇಗೋ ಸಹಿಸಿಕೊಂಡರೂ ಮಗನ ಸಹನೆಯನ್ನು ಪರೀಕ್ಷಿಸುವಂತಿತ್ತು.

"ಮನೆಯಲ್ಲಿ ಹೆಂಡತಿ ಮಗ ಇದ್ದಾರೆನ್ನುವುದು ಜ್ಞಾಪಕವಿದೆಯೇ ಎಂದು ನೋವಿನಿಂದ ಹೆಂಡತಿ ಕೇಳಿದರೆ ಏನನ್ನು ಉತ್ತರಿಸುತ್ತಿರಲಿಲ್ಲ. ಮಗ ಉದ್ದೇಶಪೂರ್ವಕವಾಗಿ ಮುಕುಂದನ ಮಾಂಸದಂಗಡಿಗೆ ಕೆಲಸಕ್ಕೆ ಸೇರಿದ. ಆನಂದರಾಯರು ಉಂಡು ಉಪ ವಾಸಿಯಂತೆಯೂ, ಬಳಸಿ ಬ್ರಹ್ಮಚಾರಿಯಂತೆಯೂ ಬದುಕುತ್ತಿದ್ದ ರಾಯರಿಗೆ ತಮಗೊಬ್ಬ ಮಗನಿರುವನೆಂಬ ಸಂಗತಿಯೂ ಸರಿಯಾಗಿ ತಿಳಿದಿರಲಿಲ್ಲ. ತ್ರಿಭುಜದ ಮೂರು ಮೂಲೆಗಳಂತೆ ಪರಸ್ಪರ ವಿರುದ್ಧ ದಿಸೆಯಲ್ಲಿ ನೋಡುತ್ತ ಆ ಮೂವರು ಒಂದು ಕುಟುಂಬವನ್ನು ಪಾಲಿಸಿ ಪೋಷಿಸುತ್ತಿದ್ದರು. ಹೆಂಡತಿ ಮತ್ತು ಮಗನಿಗಿಂತ ಕಛೇರಿಯ ಕಡತಗಳನ್ನೇ ಬಹುವಾಗಿ ಪ್ರೀತಿಸುತ್ತಿದ್ದ ರಾಯರು. ತಮ್ಮನ್ನು ತಾವು ಎಂದೂ ಕನ್ನಡಿಯಲ್ಲಿ ನೋಡಿಕೊಂಡವರಲ್ಲ".[೪೯] ರಾಯರು ತಮ್ಮ ಭಾಷಣ, ತತ್ವ, ಓದು-ಬರಹ ಅಭಿನಯಗಳಲ್ಲಿ ತೊಡಗಿಸಿಕೊಂಡು ಕೌಟುಂಬಿಕ ಸಂಬಂಧಗಳನ್ನು ಉಳಿಸಿಕೊಳ್ಳಬೇಕೆಂಬ ಸರಳಸತ್ಯವನ್ನು ಅರಿಯಲೇ ಇಲ್ಲ. ಆದರೆ ಇದಕ್ಕೆಲ್ಲಾ ಅವರಲ್ಲಿ ಸಮರ್ಥನೆ ಇತ್ತು.

"ಕುಂ.ವೀರಭದ್ರಪ್ಪ ಅವರ ಹೆಚ್ಚಿನ ಬರವಣಿಗೆಯು ಕೆಳವರ್ಗದ ಬದುಕಿನ ಸ್ಥಿತಿ ಮತ್ತು ಸಾಧ್ಯತೆಗಳ ನಿರೂಪಣೆ. ಈದೃಷ್ಟಿಯಿಂದ 'ಕುರ್ಮಾವತಾರ' ಕುಂ.ವೀರಭದ್ರಪ್ಪ ಕಥಾ ಪ್ರಪಂಚದಲ್ಲಿ ತುಸು ಭಿನ್ನವಾದ ಕೃತಿ"[೫೦] ಎಂಬ ಟಿ.ಪಿ. ಅಶೋಕ ಅವರ ಮಾತು ಕಥಾವಸ್ತುವನ್ನು ಕುರಿತು ಹೇಳಿರುವುದು ಸಮಂಜಸವೆನ್ನಿಸುತ್ತದೆ. ರಾಯರ ಕುಟುಂಬದಲ್ಲಿ ಕೌಟುಂಬಿಕ ಸೌಹಾರ್ದತೆ ಇಲ್ಲದ ಕಾರಣ ಸದಸ್ಯರಲ್ಲಿ ಒಬ್ಬರ ಮೇಲೆ ಒಬ್ಬರಿಗೆ ಸಂದೇಹವಿದ್ದು ಸಂಬಂಧಗಳಲ್ಲಿ ಗಟ್ಟಿತನ ಇರಲಿಲ್ಲ. ರಾಯರೂ ಕೂಡ ಹಿಂಸೆ-ಅಹಿಂಸೆಯ ಬಗೆಗೆ ಸ್ಪಷ್ಟತೆಯಿಲ್ಲದೆ ತೊಳಲಾಡುತ್ತಿದ್ದರು.

---

೪೯ ಅದೇ, ೨೦೧೦, ಪು : ೩೦೯.

೫೦ ಟಿ.ಪಿ. ಅಶೋಕ, ಕಥನಪ್ರೀತಿ, ೨೦೧೩, ಪು : ೩೦೮.

ಆದರೆ ರಾಮಣ್ಣನವರ 'ಕರೆ' ಕತೆ ಅಪ್ಪಟ ಕೌಟುಂಬಿಕ ಚಿತ್ರಣ ನೀಡುವ ಕತೆ. ಹಿರಿಯರ ಹಬ್ಬದಲ್ಲಿ ಎಡೆ ಇಟ್ಟು ಸತ್ತವರನ್ನು ಸ್ಮರಿಸುವ ಹಬ್ಬವಾಗಿದೆ. ಎಡೆಯಿಡುವ ದಿನ ಸತ್ತವರೊಂದಿಗೆ ಆಪ್ತತೆ ಹೊಂದಿದವರ ಮನಸ್ಥಿತಿ ಮನುಷ್ಯ ಸಂಬಂಧದ ಮೌಲ್ಯವನ್ನು ಎತ್ತಿಹಿಡಿಯಿತ್ತದೆ.

ಹೆಂಡತಿಸತ್ತ ದಾಸೇಗೌಡರಿಗೆ ಮಗಳು ತಾಯಿಯೇ ಆಗುವ ನಮ್ಮ ಸಂಸ್ಕೃತಿಯ ಸೂಕ್ಷ್ಮತೆಯನ್ನು ತಾಯಕ್ಕನಲ್ಲಿ ಕಾಣಬರುತ್ತದೆ. ಜೀವಕ್ಕೆ ಜೊತೆಯಾದವಳು ಸಾವನ್ನಪ್ಪಿದಾಗ ಇದ್ದ ಜೀವಕ್ಕೆ ಆಗುವ ನೆನಪು ವೇದನೆ ಸಂಕಟವನ್ನು ಅಳೆಯಲಾದಿತೆ? ದಾಸೇಗೌಡರು ಹೆಂಡತಿ ಬದುಕಿದ್ದಾಗಲೂ ಅವಳನ್ನು ಪ್ರೀತಿಯಿಂದ ನಡೆಸಿಕೊಂಡವರು, ಪತ್ನಿಯ ಒಪ್ಪ-ಓರಣ, ಅಂದ-ಚೆಂದ, ಉಡುಗೆ-ತೊಡುಗೆ, ಗುಣವನ್ನು ಮೆಚ್ಚಿಕೊಂಡ ಅವರದು ಅನ್ಯೋನ್ಯ ದಾಂಪತ್ಯ, ಹಬ್ಬದ ದಿನ ಮೊಮ್ಮಗ ರಮೇಶನ ತಮಾಷೆಗೆ ದಾಸೇಗೌಡರು

"ಅಂದ್ರೆ ಅಂತಾನೆ ಕಣೋ, ನನ್ನ ಅನ್ದೆ ಇನ್ಯಾರ ಅನ್ದಾನು? ಇವತ್ತು ನಿಮ್ಮಮ್ಮ ಬತ್ತಾಳೆ, ಅವಳ ಕಣ್ಗೆ ನಾನು ಅಂದವಾಗಿ ಕಾಣುತಿಲ್ಲ್ವಾನ ರಮೇಶ"[೫೧] ಎಂದು ಮನೆಯಲ್ಲಿ ನಗೆಗಡಲನ್ನೇ ಎಬ್ಬಿಸಿದರು. ದಾಸೇಗೌಡರು ಬೆಳಗಿನಿಂದ ತೊಟ್ಟು ನೀರುಕುಡಿಯದೆ ಇದ್ದದ್ದು, ಹೆಂಡತಿ ಅಗಲಿಕೆಯ ನೋವು-ನೆನಪು, ದುಃಖ ಅದನ್ನು ದೈಹಿಕ ಮಾನಸಿಕವಾಗಿ ಭಾದಿಸಿ ಹಬ್ಬದ ದಿನವೇ ಸಾವನ್ನಪ್ಪಿದರು. ಸಂಬಂಧಗಳ ಆದ್ರತೆ ಮತ್ತು ಅಗಲಿಕೆಗಳು ಮನಸ್ಸನ್ನು ತೇವವಾಗಿಸುತ್ತದೆ. ಕುಂ.ವೀರಭದ್ರಪ್ಪ ಕತೆಯ 'ಆನಂದರಾಯರು' ಹೆಂಡತಿ ಪುಷ್ಕರಿಣಿಯಲ್ಲಿ ಬಿದ್ದು ದುರ್ಮರಣಕ್ಕೀಡಾದರೂ ಅವರ ಕಣ್ಣಿಂದ ಒಂದು ಹನಿ ನೀರು ಬರಲಿಲ್ಲ. **"ಮಗ ಮೃತ್ಯುಂಜನಿಗೆ ತಮ್ಮ ತಂದೆಯವರಿಗೆ ಹೃದಯ ಇರುವುದರ ಬಗ್ಗೆ ಅನುಮಾನವಾಯಿತು."**[೫೨]

ರಾಮಣ್ಣನವರ ಕತೆಯ ಇಳಿವಯಸ್ಸಿನ ದಂಪತಿಗಳಿಗಿದ್ದ ಅನ್ಯೋನ್ಯತೆಯಿಂದ ಹೆಂಡತಿ ಸಾವು ಅವರಿಗೆ ಒಳಗೆ ಇರಿಯುತ್ತಿತ್ತು. ವೃದ್ಧ ದಂಪತಿಗಳ ಪ್ರೀತಿ ಮನಮಿಡಿಸುತ್ತದೆ.

ಸಂಬಂಧಗಳು ಸವಕಳಿಯಾಗುತ್ತಿರುವ ಇಂದಿನ ದಿನಮಾನದಲ್ಲಿ ರಾಮಣ್ಣನವರ ಕತೆಗಳು ಜೀವನಪ್ರೀತಿ ತುಂಬುವ ಕಣಜಗಳಾಗಿವೆ. ರಾಮಣ್ಣನವರ 'ಶೂಲ' ಸವಿರಾದ ಪ್ರೇಮಕತೆ. ಪ್ರೇಮಕತೆಯಲ್ಲೂ ತೆಂಗು, ಬಾಳೆ, ಅಡಿಕೆ ಮರಗಳ ಸಮೃದ್ಧ ನೋಟವೇ

---

೫೧ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೧೪೭.

೫೨ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು: ೫೧೯.

ಮೇಲಾಗುತ್ತದೆ. ಕೃಷಿ ಬದುಕಿನ, ಪ್ರಕೃತಿ ಸಂಪತ್ತಿನ ನಡುವೆ ಮಿಂದೇಳುವ ಪ್ರೇಮಕತೆ ದುರಂತದಲ್ಲಿ ಕೊನೆಯಾಗುತ್ತದೆ.

ರಾಮಣ್ಣನವರು ಶೂಲ ಕತೆ ಕುರಿತು **" 'ಶೂಲ' ಕತೆ ಮಂಡ್ಯ ಜಿಲ್ಲೆಯ ಅರಕೆರೆ ಗ್ರಾಮದಲ್ಲಿ ನಡೆಯುವ ವಿಶಿಷ್ಟ ಹಬ್ಬವೊಂದರ ಹಿನ್ನೆಲೆಯಲ್ಲಿ ರಚಿತವಾದ ದುರಂತ ಪ್ರೇಮಕತೆ. ಅಪರೂಪಕ್ಕೊಮ್ಮೆ ನಡೆಯುವ ಈ ಹಬ್ಬವನ್ನು ಡಾ. ಎಂ. ಚಿದಾನಂದ ಮೂರ್ತಿ ಹಾಗೂ ನನ್ನ ಅನೇಕಸ್ನೇಹಿತರೊಡನೆ ನೋಡುವ ಅದೃಷ್ಟ ನನಗೆ ೧೯೭೮ ರಲ್ಲಿ ಲಭಿಸಿತ್ತು"**[೫೩] ಎಂದು ಕತೆಯ ಹಿನ್ನೆಲೆಯನ್ನು ಹೇಳಿರುವುದು ಕತೆಗೆ ನೈಜತೆಮೌಲ್ಯ ಲಭಿಸಿದೆಯೆನ್ನಬಹುದು.

ಗೌರಿ ಮತ್ತು ಜಯರಾಮರ ನಡುವಿನ ಪ್ರೇಮ ಚಿಗುರುತ್ತಿದ್ದಾಗ ಶೂಲ ಹಬ್ಬ ಬರುತ್ತದೆ. ಶೂಲದ ಹಬ್ಬ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು ಪ್ರೀತಿ-ವಿಶ್ವಾಸ, ನಂಬಿಕೆ, ಹೋರಾಟ, ನಚ್ಚು-ಕೆಚ್ಚು, ಹೊಂದಾಣಿಕೆ, ಒಮ್ಮತ, ಸಡಗರ- ಸಂಭ್ರಮ ಭಯ-ಭಕ್ತಿ, ಸಂಪ್ರದಾಯ, ಕಟ್ಟುಪಾಡುಗಳ ಸಮಷ್ಟಿಯೇ ಆಗಿದೆ. ಪ್ರೀತಿ-ಪ್ರೇಮ ಮೂಡಿಸುವ, ದ್ವೇಷ ಅಳಿಸುವ ಹಬ್ಬ-ಹರಿದಿನ ಜಾತ್ರೆಗಳು ಗ್ರಾಮೀಣ ಬದುಕಿಗೆ ಜೀವನೋತ್ಸಾಹ ನೀಡುತ್ತದೆ.

ಹಬ್ಬದ ನಿಯಮಕ್ಕೆ ಊರವರೆಲ್ಲರೂ ನಿಷ್ಠೆಯಿಂದ ನಡೆದುಕೊಂಡು ಶೂಲ ಆಡುವರು ಭಯ-ಭಕ್ತಿಯಿಂದ ಆಡಲು ಆರಂಭಿಸಿದರೂ ಗೌರಿಯ ಅಣ್ಣ ಪುಟ್ಟಸ್ವಾಮಿ ಕಂಬ ಹತ್ತಿ ಶೂಲ ಆಡದೆ ಹೆದರಿ ಕಂಗಾಲಾದ. ಜಯರಾಮ ಅವನನ್ನು ಕಾಪಾಡಲು ಮರ ಏರಿ ಜೋಪಾನವಾಗಿ ಇಳಿಸಿ ಶೂಲ ಆವೇಶದಿಂದ ಶೂಲ ಆಡತೊಡಗಿದಾಗ ಮರ ಮುರಿದು ಕೆಳಗೆ ಬಿದ್ದು ಸತ್ತನು. ಗೌರಿ ಪವಿತ್ರಪ್ರೇಮದ ಸಂಕೇತವೆಂಬಂತೆ ಜಯರಾಮನನ್ನು ಅಪ್ಪಿ ಪ್ರಾಣಬಿಟ್ಟಳು. ಚಿಗುರಬೇಕಾಗಿದ್ದ ಕೊಂಬೆ ಮುರಿದು ಬಿದ್ದಿತು. ಹಳ್ಳಿಯಲ್ಲಿ ಎರಡು ಕುಟುಂಬದವರ ನಡುವಿನ ದ್ವೇಷ, ಅಸಮಾನತೆ, ಆತ್ಮಪ್ರತಿಷ್ಠೆಗೆ ಪವಿತ್ರ ಪ್ರೇಮ ಮಣ್ಣಾಯಿತು. ಎರಡು ಯುವಜೀವಗಳ ಬದುಕು ನಾಶವಾಯಿತು. ಸಾಂಸ್ಕೃತಿಕವಾಗಿ ಮೌಲ್ಯ ಪಡೆಯಬೇಕಾಗಿದ್ದ ಊರಿನ ಹಬ್ಬದ ವಾತಾವರಣ ದುರಂತದಲ್ಲಿ ಕೊನೆಗೊಂಡಿದ್ದು ಮೌಲ್ಯದ ಕುಸಿತ ಎನ್ನಬಹುದು.

ಕುಂ.ವೀರಭದ್ರಪ್ಪ ಅವರ 'ಲೋಹಿಯಾವಾದಿಯೊಬ್ಬನ ಕತೆ'ಯಲ್ಲಿ ಪ್ರತಿಭಾನ್ವಿತನಾಗಿದ್ದ ಬಸವರಾಜ ವಿದ್ಯಾರ್ಥಿಯಾಗಿದ್ದಾಗಲೇ ಓದು-ಬರವಣಿಗೆಯಲ್ಲಿ ತೊಡಗಿ ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತನಾಗಿದ್ದನು. ಉದ್ಯೋಗಕ್ಕಾಗಿ ಮದುವೆಯಾದ ಬಸವರಾಜ

---

೫೩ ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು : ೧೬.

ಸಂಸಾರಹೂಡಿ ಇನ್ನಷ್ಟು ಪೇಚಾಟಕ್ಕೆ ಸಿಲುಕಿದ. ಬಸವರಾಜನ ಅಪ್ಪ ಹಣದ ಸಹಾಯಕೇಳಿದಾಗ ಅವನು ಸಾಧ್ಯವಿಲ್ಲವೆಂದಾಗ. **"ಅದೇ ಒಂದು ಸಾವಿರವಿದ್ದರೆ ನಮ್ಮ ಮಣ್ಣಿನ ಮನೆಯಲ್ಲಿ ಚಿನ್ನದ ಹೊಗೆ ಹಾಯಿಸುತ್ತಿದ್ದೆ... ನಿನ್ನಂಥ ಮಗ ಇದ್ದರೆಷ್ಟು ಸತ್ತರೆಷ್ಟು' ಎಂದು ಶಪಿಸಿ ಸಂಬಂಧಕ್ಕೆ ತಿಲಾಂಜಲಿಯಿಟ್ಟಿದ್ದ. ಮಾವ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲ. "ನಂದೇ ನಂಗೆ ಮಸ್ತು ಐತಪ್ಪಾ"**[೫೪] ಎಂದು ಕೈಚೆಲ್ಲಿದ್ದ. ಹೆಂಡತಿ ಲಲಿತಾ ಗಂಡನಿಗೆ ಮೂಗುದಾರ ಹಾಕಿ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಳು. ಬಸವರಾಜನ ಪ್ರತಿಭೆ – ಪಾಂಡಿತ್ಯಕ್ಕೆ ಲಲಿತ ಮೂರುಕಾಸಿನ ಬೆಲೆ ಕೊಡದೆ ಅವನ ಕೆಲಸಕಾರ್ಯಗಳಿಗೆ ತಣ್ಣೀರೆಚುತ್ತಿದ್ದಳು. ಬಸವರಾಜನ ಗೆಳೆಯ ಪರಮೇಶ ಮನೆಗೆ ಬಂದಾಗ ಅವನ ದೈನೇಸಿವರ್ತನೆ ಪರಮೇಶನಿಗೆ ಬೇಸರತಂದಿತು. ಗೆಳೆಯನ ಮನೆಯನ್ನು ಅರ್ಥೈಸಿಕೊಂಡ ಪರಮೇಶ ಯಾವ ಭಾವನೆಯನ್ನೂ ತೋರದೆ **"ತಂಗೀ..... ನಾನಿನ್ನು ಬರ್ತೀನಮ್ಮ"**[೫೫] ಎಂದು ಹೊರಟಿದ್ದು ಗಂಡಹೆಂಡಿರ ನಡುವೆ ವೈಮನಸ್ಸು ಬರಬಾರದೆಂದು, ತನಗೇನೂ ತಿಳಿದಿಲ್ಲ ಎಂಬಂತೆ ವರ್ತಿಸಿ ಹೊರಟನು. ಕೌಟುಂಬಿಕ ಸಂಬಂಧ ಶಿಥಿಲಗೊಳಿಸಬಾರದೆಂಬ ಆಶಯದಲ್ಲಿ ಎಲ್ಲವನ್ನೂ ಮರೆತು ಹೊರಟನು. ಕುಂ.ವೀರಭದ್ರಪ್ಪ ಅವರ ಕೌಟುಂಬಿಕ ಚಿತ್ರಣದ ದಾಂಪತ್ಯದಲ್ಲಿ ಬಿರುಕುಗಳೇ ಹೆಚ್ಚು. ಸಂಬಂಧಗಳು ಜಟಿಲವಾಗುತ್ತವೇ ಹೊರತು ಬಿರುಕುಬಿಟ್ಟ ಸಂಬಂಧಗಳು ಒಂದು ಮಾಡುವ ಪ್ರಕ್ರಿಯೆ ವಿರಳವೆನ್ನಬಹುದು.

ರಾಮಣ್ಣನವರ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಕತೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಬರೆದ ಕತೆ, ತುರ್ತುಪರಿಸ್ಥಿತಿಯ ಕಾಲದಲ್ಲಿ ತಮ್ಮದೇ ರೀತಿಯಲ್ಲಿ ಪ್ರತಿಭಟಿಸಿದ ರಾಮಣ್ಣ ಗಾಂಧಿತತ್ವಗಳು ಸ್ವಾತಂತ್ರ್ಯಾನಂತರ ನಶಿಸುತ್ತಿರುವುದಕ್ಕೆ ಕಾರಣಗಳನ್ನು ಹುಡುಕಲು ಪ್ರಯತ್ನಿಸುತ್ತಾರೆ. ಅಂದಿನ ರಾಜಕೀಯ ಸ್ಥಿತಿಯನ್ನು 'ಪ್ರಜಾ ಪ್ರಭುತ್ವ ಮತ್ತು ಮೂರು ಮಂಗಗಳು – ನನ್ನ ಸ್ನೇಹಿತರೊಬ್ಬರು ತುರ್ತು ಪರಿಸ್ಥಿತಿಯ ಕಾಲದಲ್ಲಿ ದೆಹಲಿಯಲ್ಲಿ ಅವರು ಕಂಡಸತ್ಯಘಟನೆಯನ್ನು ಹೇಳಿದಾಗ, ಪ್ರೇರಿತನಾಗಿ, ತುರ್ತು ಪರಿಸ್ಥಿತಿಯ ಕಾಲದಲ್ಲಿ 'ಅಂದೋಲನ' ಕ್ಕಾಗಿ ಬರೆದ ಕತೆ' ಎಂದು ರಾಮಣ್ಣ ಕತೆಯ ಹಿನ್ನಲೆ ಬಗ್ಗೆ ಹೇಳಿದ್ದಾರೆ.

---

೫೪ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು: ೫೦೪.

೫೫ ಅದೇ ೨೦೧೦, ಪು: ೫೧೩.

ಕತೆ ಕುರಿತು ರಾಮಚಂದ್ರದೇವ ಅವರು **"ರಾಮಣ್ಣ ಕೆನ್ನೆಗೆ ಹೊಡೆದಂತೆ ಕತೆ ಹೇಳಬಲ್ಲರೆಂದು"**[೫೬] ಅಭಿಪ್ರಾಯ ಸೂಚಿಸಿರುವುದು ಉಲ್ಲೇಖನೀಯವಾಗಿದೆ. ಪೊಲೀಸ್ ಠಾಣೆಯಲ್ಲಿ ಮಂಜನನ್ನು ದಫೇದಾರ ಅವನ ಎದುರುತ್ತರಕ್ಕೆ ಗುದ್ದಿದಾಗ ಕೋತಿಗಳ ಅವನ ಮೇಲೆ ಎರಗಿದವು. ಆಗ ಮಂಚ ಕೋತಿಗಳಿಗೆ, 'ಗಾಂಧಿ ತಾತ ಏನು ಹೇಳಿದ್ರು' ಎಂದ ಕೂಡಲೇ ಅವುಗಳ ವರ್ತನೆ ಬದಲಾಗಿ ಗಾಂಧಿತತ್ವದಂತೆ ಮೂರುಕೋತಿಗಳು ಸತ್ಯಾಗ್ರಹದ ಭಾಗಿಯಲ್ಲಿ ಕುಳಿತವು. ಇನ್ಸ್‌ಪೆಕ್ಟರ್ ಕಂಗಾಲಾಗಿ ಅವುಗಳ ವರ್ತನೆಗೆ ಮಾರುಹೋಗಿ ಮೇಲಾಧಿಕಾರಿಗೆ **"ಸಾರ್ ! ಈ ಕೋತಿ ಆಡಿಸುವ ಮಂಚ, ಈ ಕೋತಿಗಳ ಮುಖಾಂತರ ಮಹಾತ್ಮಗಾಂಧಿಯವರು ಅಹಿಂಸೆಯ ಬಗ್ಗೆ ಜನರಿಗೆ ಬೋಧಿಸಿದ ತತ್ವಗಳನ್ನು ಅದ್ಭುತವಾಗಿ ಪ್ರಸಾರ ಮಾಡುತ್ತಿದ್ದಾನೆ. ನನಗಂತೂ ಇವನು ಜನರನ್ನು ಶಾಂತಿಶಿಸ್ತುಗಳ ಕಡೆಗೆ ಕೊಂಡೊಯ್ಯುತ್ತಿರುವ ಒಳ್ಳೆಯ ದೇಶಪ್ರೇಮಿ ಅನಿಸ್ತು ಸಾರ್"**[೫೭] ಎಂದನು.

ಮನುಷ್ಯರು ರೂಪಿಸಿದ ತತ್ವಗಳನ್ನು ಪ್ರಾಣಿಗಳ ಮೂಲಕ ಕಲಿಯಬೇಕಾದ ಸ್ಥಿತಿಗೆ ವಿಷಾದವೆನಿಸಿದರೂ ಪೊಲೀಸ್ ಅಧಿಕಾರಿ ಮನಸ್ಸು ಅಹಿಂಸೆ, ಒಳಿತಿನೆಡೆಗೆ ಸಾಗುವುದನ್ನು ಕಾಣಬಹುದು. ಮಂಚನನ್ನು ಬಂಧಿಸಿ ಜೈಲಿಗೆ ಹಾಕಿದಾಗ ಹುಡುಕಿಕೊಂಡು ಬಂದ ಕೋತಿಗಳು ಜೈಲಿನ ಮುಂದೆ ಗಾಂಧಿಯವರ ತತ್ವಪಾಲಿಸುತ್ತಲೇ ಪ್ರಾಣಬಿಡುವುದು ವ್ಯವಸ್ಥೆ ವ್ಯಂಗ್ಯವೆನಿಸುತ್ತದೆ. ಗಾಂಧಿಯ ಆದರ್ಶಗಳು ತೂರಿಹೋಗಿ ಕಛೇರಿಗಳಲ್ಲಿ ಚಿತ್ರಪಟ ಹಾಕಿಕೊಳ್ಳುವುದಕ್ಕೆ ಸೀಮಿತವಾಗಿರುವುದು ವಾಸ್ತವದ ಸಂಗತಿ. ಆರಕ್ಷಕ ಇಲಾಖೆ ಮಾನವೀಯವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ನಡೆದುಕೊಳ್ಳದಿದ್ದರೆ ಜನರ ವಿಶ್ವಾಸಗಳಿಸಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಯೋಚಿಸಬೇಕಾಗಿದೆ. ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕಾದುದು ಜನಸಾಮಾನ್ಯರ ಕರ್ತವ್ಯ ಎಂಬ ಮೌಲಿತ ವಿಚಾರಗಳನ್ನು ಕಥೆ ಸಮರ್ಥವಾಗಿ ನಿರೂಪಿಸಿದೆ.

ಕುಂ.ವೀರಭದ್ರಪ್ಪ ಅವರ 'ಮುಳ್ಳುಗಳು' ಕತೆ ಸ್ವಾತಂತ್ರ್ಯ ಪೂರ್ವದ ಕತೆಯಾಗಿದೆ. ಉದಾರಮನಸ್ಸಿನ ನೂಕಯ್ಯ ಬಹಳ ನಿರೀಕ್ಷೆಯನ್ನಿಟ್ಟುಕೊಂಡು ಊರವರಿಗೆ ಒಳಿತುಮಾಡುವ ಮಗನಿದ್ದಾನೆ ಎಂಬ ಭರವಸೆ ಹೊಂದಿದ್ದನು. ಬ್ರಿಟೀಷರ ಹಂಗಿನಲ್ಲಿ ಉನ್ನತ ಶಿಕ್ಷಣ ಪಡೆದ ಬೀರಪ್ಪನಾಯಕ ಮುಳ್ಳಿನಗಿಡ ಬೆಳೆಸುವಲ್ಲಿ ಅವರ ಹಕೀಕತ್ತು ಇದ್ದು ನೂಕಯ್ಯನಿಗೆ ತೀವ್ರನಿರಾಸೆಯಾಯಿತು.

---

೫೬ ಡಾ. ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು: ೧೪.
೫೭ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೩೬೭.

'ಯಜ್ಞೋ..... ಇದರಲ್ಲಿ ಯಾವ ಹಣ್ ಬುಡ್ತಾವೆ? ಎಂದು ಕೇಳಿದರೆ ನೂಕಯ್ಯ' ನಾನ್ ನಿನ್ನಂಗೆ ಕಣಪ್ಪಾ ಅವು ಏನೇನು ಬುಡತಾವಂತ ಮುಂದೆ ನಿಂಗೆ ಗೊತ್ತಾತೈತೆ' ಎಂಬ ಮಾತಿನಲ್ಲಿ ಅವನಿಗಾಗಲೇ ಸಂಶಯಬಂದಿತ್ತು.

"ನೀನ ಮೇರಿಕಾ ಅಂಬೋ ದೇಸಕ್ಕೆ ಹೋಗಿ ಏಳೆಂಟು ವರ್ಷ ಕಲ್ತು ತಂದಿದ್ದು ಇವೆ ಏನಪ್ಪಾ... ನಮ್ಮ ಭೂಮಮ್ತಾಯಿ ಮೈಮ್ಯಾಲಮುಳ್ ನೆಟ್ಟು ಪಾಪ ಕಟ್ಕೊಂಡಿಯಲ್ಲೋ.... ನಿನ್ ಮಗ ಅಂತ ಹೇಳಾಕ ನಂಗೆ ನಾಚ್ಕೆ ಆಯ್ತದೆ ಹೊಂಡು... ಎದ್ರೂಗೆ ನಿಲ್ ಬ್ಯಾಡ"[೫೮] ಎಂದು ಮುದುಕ ಅಬ್ಬರಿಸಿದ್ದರಲ್ಲಿ ಸಾಮಾಜಿಕ ಪ್ರಜ್ಞೆ ಕಂಡುಬಂದರೂ, ಮಗ ಸ್ವಾರ್ಥಿಯಾಗಿದ್ದನು. ಪ್ರಗತಿಪರ ಚಿಂತನೆಯ ನೂಕಯ್ಯ ಮಗ ಮಾಡಿದ ಅನಾಹುತವನ್ನು ಸರಿಪಡಿಸಲು ಯತ್ನಿಸಿದಾಗ ಬ್ರಿಟಿಷ್ ಸರ್ಕಾರ ನಗೆಯಾಡಿತು. ಪ್ರತಿಭಾವಂತನನ್ನು ಬಳಸಿಕೊಂಡು ಅಮಾಯಕರನ್ನು ವಂಚಿಸಿತು. ಇಂಗ್ಲೀಷರ ಕುತಂತ್ರಕ್ಕೆ ಮುಳ್ಳಿನಗಿಡ ಸಾಕ್ಷಿಯಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರಿಂದ ಆದ ಅನಾಹುತವನ್ನು ಸ್ವಾತಂತ್ರ್ಯಾನಂತರ ಸರ್ಕಾರ ಸರಿಪಡಿಸಿಕೊಳ್ಳಲಿಲ್ಲ. ಸರ್ಕಾರದ ನಡವಳಿಕೆ ವಿವೇಚನಾರಹಿತವಾಗಿದ್ದು ಮುಳ್ಳಿನಗಿಡ ಬೆಂಬಲಿಸಿದ್ದರಲ್ಲಿ ಉಳ್ಳವರ ಹಿತಾಸಕ್ತಿಯೇ ಪ್ರಬಲವಾಯಿತು. ಸಾಮಾಜಿಕ ಕಳಕಳಿಯ ಶಿವರಾಮಶಾಸ್ತ್ರಿಗಳು ಮುಳ್ಳಿನ ಗಿಡದಿಂದ ಆಗಿರುವ, ಆಗಬಹುದಾದ ಅನಾಹುತಗಳನ್ನು ಮನಗಂಡು ಅದರ ನಾಶಕ್ಕೆ ಕ್ರಿಯಾಶೀಲವಾದರೂ ಅವರ ಪ್ರಯತ್ನ ಅರಣ್ಯರೋಧನವಾಯಿತು. ಸರ್ಕಾರದೊಂದಿಗೆ ಶಾಮೀಲಾಗಿದ್ದ ಬೀರಪ್ಪನಾಯಕ ತನ್ನ ಸಂಶೋಧನೆ, ಅವಾರ್ಡ್‌ಗಳಲ್ಲಿ ಮುಳುಗಿ ತನ್ನದೇ ಸಮಜಾಯಿಸಿ ಕೊಡುತ್ತಿದ್ದನು. ಸ್ವಾರ್ಥಿಯಾಗಿದ್ದ ಬೀರಪ್ಪನಾಯಕನ ಮಗನಿಗೆ ಅದೇ ಮುಳ್ಳು ಚುಚ್ಚಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದಾಗ ದುಃಖಿತನಾಗಿ ತನ್ನ ಯೋಚನೆಯದಿಕ್ಕು ಬದಲಿಸಿ ಸಮಾಜಮುಖಿಯಾದರು. ಜನರು ಒಪ್ಪಲಿಲ್ಲ ಮತ್ತು ನಂಬಲಿಲ್ಲ. ಇಷ್ಟೆಲ್ಲಾ ಆದರೂ ಜನಮುಖಿಯಾಗಿದ್ದ ಶಿವರಾಮ ಶಾಸ್ತ್ರಿಗಳು ಪ್ರಶಸ್ತಿನಿರಾಕರಿಸಿ ತಮ್ಮ ನಿಲುವಿಗೆ ಬದ್ಧರಾದರು.

ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ 'ಲೋಹಿಯಾವಾದಿಯೊಬ್ಬನ ಕತೆ'ಯ ಆದರ್ಶ ಸಮಾಜವಾದಿ ಪರಮೇಶ, 'ಕುರ್ಮಾವತಾರದ' ಆನಂದರಾಯರು 'ಮುಳ್ಳುಗಳು' ಕತೆಯ ನೂಕಯ್ಯ, ಶಿವರಾಮಶಾಸ್ತ್ರಿಗಳು ಆದರ್ಶದ ನೆಲೆಯಲ್ಲಿ ಗಾಂಧಿತತ್ವ ಚಿಂತನೆಯ

---

೫೮ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು: ೪೯೫ – ೪೯೬.

ಪ್ರತಿಪಾದಕರಾಗಿದ್ದು ಹೊಸ ಗುರಿ ಮತ್ತು ಮಾರ್ಗದ ಸಾಧ್ಯತೆಯ ಬಗ್ಗೆ ಭರವಸೆ ಮೂಡಿಸುತ್ತಾರೆನ್ನಬಹುದು. ಬೆಸಗರಹಳ್ಳಿ ರಾಮಣ್ಣ ಅವರ 'ಮಳೆಗರೆಯಿತು ಬಾನು, ಹಸುರಾಯಿತು ಮನ' ಕತೆಯಲ್ಲಿ ಗದ್ದೆಗೆ ನೀರು ಹಾಯಿಸುವ ವಿಚಾರದಲ್ಲಿ ಸಣ್ಣ ಮತ್ತು ಪುಟ್ಟರಾಮರ ನಡುವೆ ವೈಮನಸ್ಸು ಬರುತ್ತದೆ. ಅದಕ್ಕೆ ಕುಮ್ಮಕ್ಕು ಕೊಡುವವರು ಇದ್ದರೂ ಗೆಳೆತನದ ಹಿಂದಿನ ಬಾಂಧವ್ಯ ನೆನೆದಾಗ ಮನಸ್ಸು ಮೃದುವಾಗುತ್ತದೆ. ಆದರೆ ಮನುಷ್ಯ ಸ್ವಭಾವ ಅಸಮಾಧಾನದ ಎಳೆಗಳನ್ನೇ ನೆನೆದು ಅದರಲ್ಲೇ ನಿಲ್ಲುವುದು ಸಹಜವಾದರೂ ರಾಮಣ್ಣ ಒಳಿತಿನೆಡೆಗೆ ಒಯ್ಯಲು, ಸ್ನೇಹ ಸಂಬಂಧಗಳು ಉಳಿಸಲು ಕತೆಗಳ ಮೂಲಕ ಪ್ರಯತ್ನಿಸುತ್ತಾರೆ.

ಸಣ್ಣ ಮತ್ತು ಪುಟ್ಟರಾಮರ ನಡುವಿನ ವೈಮನಸ್ಸು ಪ್ರಕೃತಿ ಮಳೆ ಸುರಿಸಿ ಸಾಥ್ ನೀಡುವುದರೊಂದಿಗೆ ಅಸಮಾಧಾನ ಕೊಚ್ಚಿಹೋಗುತ್ತದೆ ಮತ್ತೆ ಮೊದಲಿನ ಬಾಂಧವ್ಯ ಮೂಡುವ ಸೊಗಸು ಆಪ್ತವೆನಿಸಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವೆನಿಸುತ್ತದೆ.

ರಾಮಣ್ಣ ಅವರ 'ಸುಗ್ಗಿ' ಕತೆ ಒಟ್ಟು ಮಾಡುವ ಕಣದಲ್ಲಿ ಒಟ್ಟು ಕುಟುಂಬದ ಆಶಯಕ್ಕೆ ವಿರುದ್ಧವಾಗಿ ಬೇರೆ ಮಾಡುವ ಕಾರ್ಯವೂ ನಡೆಯತೊಡಗಿದಾಗ ಪುಟ್ಟಸ್ವಾಮಿಯ ತಾಯಿ ಮತ್ತು ಅಣ್ಣ ಬಹುವಾಗಿ ನೊಂದುಕೊಳ್ಳುತ್ತಾರೆ. ಹೊಸಹುಟ್ಟು ಸಂಬಂಧವನ್ನು ಗಟ್ಟಿಗೊಳಿಸುವುದರೊಂದಿಗೆ ಅವಿಭಕ್ತ ಕುಟುಂಬದ ಬೇರು ಶಿಥಿಲವಾಗದಂತೆ ಕಾಯುವ ಕೆಲಸ ಕತೆಯಲ್ಲಿ ಕಾಣಬಹುದು. ಒಡಕು ಮೂಡಿದ್ದ ಸಂಬಂಧ ಕೊನೆಗೆ ಕೂಡಿಕೊಳ್ಳುತ್ತದೆ. ಸಂಬಂಧಗಳನ್ನು ಉಳಿಸುವ ಕಾಳಜಿಯ ರಾಮಣ್ಣನವರ ಆಶಯ ಓದುಗನನ್ನು ಸಮಾಧಾನದ ನೆಲೆಗೆ ತಂದು ನಿಲ್ಲಿಸುತ್ತದೆ. ಒಟ್ಟು ಕುಟುಂಬದ ಸಾರ್ವಭೌಮತ್ವವನ್ನು ಧ್ವನಿಸಿ ಸೋದರತ್ವದ ಶ್ರೇಷ್ಠತೆಯನ್ನು ಮತ್ತು 'ಸುಗ್ಗಿ' ಹಬ್ಬದ ನೆನೆಪಿನೊಂದಿಗೆ ಕೃಷಿಯ ಸುಗ್ಗಿಯನ್ನು ನಿರೂಪಿಸುತ್ತದೆ. ಬಾಂಧವ್ಯದ ಮುಂದೆ ಮಿಕ್ಕಿದೆಲ್ಲ ಗೌಣ ಎಂಬ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯವನ್ನು 'ಸುಗ್ಗಿ' ಕತೆ ತನ್ನೊಳಗೆ ಅಳವಡಿಸಿಕೊಂಡಿದೆ.

ಇದೇ ದಾಟಿಯಲ್ಲಿರುವ ರಾಮಣ್ಣ ಅವರ 'ನೆಲದ ಉಸಿರು' ಕತೆಯಲ್ಲಿ ಕುಟುಂಬದ ಯಜಮಾನ ವೆಂಕಟೇಗೌಡ ಹಿರಿತನಕ್ಕೆ ಘನತೆ ತಂದುಕೊಡುವಂತಹ ಮನುಷ್ಯ. ತನ್ನ ಮಕ್ಕಳು ತಮ್ಮನ ಮಕ್ಕಳು, ಮೊಮ್ಮಕ್ಕಳಲ್ಲಿ ಬೇಧ ಎಣಿಸಿದವನಲ್ಲ. ಕಲಿತ ಹಿರಿಯಮಗ ರಮೇಶ ತನಗೆ ಪಾಲುಕೊಡುವುದಾದರೆ ಮಾತ್ರ ಹಬ್ಬಕ್ಕೆ ಬರುವನೆಂದು ಷರತ್ತು ಹಾಕಿದಾಗ ಎಪ್ಪತ್ತರ ಹಿರಿಯಜೀವ ದುಗುಡದಿಂದ ಕಳವಳಕ್ಕೀಡಾಗುತ್ತದೆ. ಒಟ್ಟು ಕುಟುಂಬದ ಆಶಯದ ರಾಮಣ್ಣ ಬಿಡಿಗಂತ ಇಡಿಯನ್ನೇ ಬಯಸುವಲ್ಲಿ ಬದುಕಿನ ಅರ್ಥಪೂರ್ಣತೆ ಕಾಣಬಯಸುವರಾಗಿದ್ದಾರೆ.

ಕೃಷಿಬದುಕಿನಲ್ಲಿ ತೀರ ಸಹಜವಾಗಿರುವಂತೆ ಬೆಳಗ್ಗೆ ಎದ್ದು ಗದ್ದೆ, ತೋಟಕ್ಕೆ ತಿರುಗಾಡಲು ಹೋಗುವುದು, ಬೆಳೆ ನೋಡಿ ಸಂತೃಪ್ತಿಯಿಂದ ಬೀಗಿ ಫಸಲಿನ ಲೆಕ್ಕಾಚಾರ ಹಾಕುವುದು, ಕಾಲುವೆಯಲ್ಲಿ ಮುಖ ತೊಳೆದು ಸೂರ್ಯನಿಗೆ ಕೈಮುಗಿಯುವುದು, ಮರದಲ್ಲಿ ಕಾಯಿ ಕಟ್ಟಿರುವ, ಬಲಿತಿರುವ ಲೆಕ್ಕಾಚಾರ, ನಶ್ಯ ಏರಿಸಿ ಮೂಗು ಒರೆಸಿ ಹಳೆಮಂಚದ ಮೇಲೆ ಮೈಚೆಲ್ಲುವುದು ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿ, ಅರ್ನೆಸ್ಟ್ ಹೆಮ್ಮಿಂಗ್‌ವೇ ಅವರ 'ವೃದ್ಧ ಮತ್ತು ಸಮುದ್ರ' ಕೃತಿಯ ಮುದುಕನನ್ನು ನೆನಪಿಗೆ ತರುತ್ತದೆ. ಹಬ್ಬದ ದಿನ ಮನಸ್ಸು ಬದಲಿಸಿ ಹಿರಿಮಗ ಕುಟುಂಬ ಸಮೇತನಾಗಿ ಬಂದಾಗ ಹಬ್ಬಕ್ಕೆ ಹೊಸರಂಗೇ ಬಂದಿತು. ಕುಟುಂಬಕ್ಕೆ ಸಂಬಂಧಿಸಿದ ಹಬ್ಬ-ಹರಿದಿನ ಮದುವೆ-ಮುಂಜಿಗಳಲ್ಲಿ ಸಂಬಂಧಿಕರ ಗೈರುಹಾಜರಿ ಮನಸ್ಸನ್ನು ಮುದುಡಿಸುತ್ತದೆ. ಎಲ್ಲರೂ ಒಟ್ಟಾಗಿ ಸೇರುವ ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯ ಮರೆತು ಒಂದಾದರೆ ಕಳೆಗಟ್ಟುವ ಸಮಾರಂಭದಲ್ಲಿ ಒಂದಾಗಿ ಬಾಳುವ ಸುಖದ ಆಶಯವನ್ನು ಕತೆಯಲ್ಲಿ ರಾಮಣ್ಣ ಕಾಣಿಸುತ್ತಾರೆ.

ರಾಮಣ್ಣ ಅವರ ಕಥೆಗಳು ಮನುಷ್ಯನ ಅಂತರಂಗದಲ್ಲಿ ಸ್ಪಂದನೆಯನ್ನುಂಟು ಮಾಡಿ ಹೃದಯದಿಂದ ಹೃದಯಕ್ಕೆ ತಲುಪುವ ಬಾಂಧವ್ಯ ಬೆಸೆಯುವ ಕತೆಗಳಾಗಿವೆ. ಭಾವಗಳ ಪಕ್ವತೆ ಅಪಕ್ವತೆಯ ಪರಿಣಾಮವನ್ನು ಮನಗಾಣಿಸುವ ಕತೆಗಳು ಸಂಬಂಧದ ಬಿರುಕಿನಿಂದ ಉಂಟಾಗುವ ಸಂಕಟ, ತಳಮಳ, ಅಭದ್ರತೆ, ಅನಿಶ್ಚಯತೆ ಹರಿದುಹೋಗುವ, ಸಂಬಂಧವನ್ನು ಉಳಿಸಿಕೊಳ್ಳುವ ಪರದಾಟ ಸಾಮಾಜಿಕ ಚೌಕಟ್ಟಿನಲ್ಲಿ ರಾಮಣ್ಣನವರ ಅವಿಭಕ್ತ ಕುಟುಂಬದ ಆಶಯದ ವಿಶ್ಲೇಷಣೆಯೂ ಆಗಿದೆ.

ಪ್ರಕೃತಿ ಮತ್ತು ಮಾನವಸಂಬಂಧಗಳನ್ನು ಬೆಸೆಯುವ ಕತೆಗಳುಇಬ್ಬರೂ ಕಥೆಗಾರರಲ್ಲಿ ಅತ್ಯಂತ ಸೊಗಸಾಗಿ ರಚಿತಗೊಂಡಿವೆ. ಮನುಷ್ಯ ಸಂಬಂಧಗಳು ಸವಕಲುಗೊಳ್ಳುತ್ತಿರುವ ಇಂದಿನ ದಿನಮಾನದಲ್ಲಿ ಇಂದಿನ ಕತೆಗಳು ಸಾಮಾಜಿಕ ನೆಲೆಯಲ್ಲಿ ಅತ್ಯಗತ್ಯವಾದ ಹೊಣೆಗಾರಿಕೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಬಿತ್ತರಿಸುತ್ತವೆ. ಪ್ರಕೃತಿ ಹಾಗೂ ಮಾನವ ಸಂಬಂಧ ಅತ್ಯಂತ ಶ್ರೇಷ್ಠವಾದ ಅನುಸಂಧಾನವಾಗಿದ್ದು, ಒಂದರ ಹೊರತು ಮತ್ತೊಂದು ಇರಲಾರದು. ಇಂತಹ ಪ್ರಕೃತಿಯೊಳಗಿನ ಸಮಾಜದಲ್ಲಿರುವ ಮಾನವ ತನ್ನ ಬದುಕನ್ನು ಉನ್ನತವಾಗಿ ರೂಪಿಸಿಕೊಳ್ಳಬೇಕೆಂಬ ಆಶಯ ಇಬ್ಬರು ಕಥೆಗಾರರ ಕಥೆಗಳಲ್ಲಿ ಕಂಡುಬರುತ್ತದೆ. ಆರೋಗ್ಯವಂತ ಸಮಾಜ ನಿರ್ಮಿಸಿ ಮಾನವ ಬದುಕನ್ನು ಮೌಲ್ಯಯುತ ಗೊಳಿಸುವ ನಿಟ್ಟಿನಲ್ಲಿ ಅದಕ್ಕೆ ಅಡ್ಡಿಯಾಗಿರುವ ಜಾತಿ, ಧರ್ಮ, ಆಚಾರ ವಿಚಾರ, ಮೂಢನಂಬಿಕೆ ಮೊದಲಾದ

ಅನಿಷ್ಟಗಳನ್ನು ಕತೆಗಳಲ್ಲಿ ನಿರೂಪಿಸಿ ಅದರಿಂದಾಗುವ ಅನಾಹುತದಿಂದ ಮಾನವ ಬದುಕು ನೋವಿಗೆ, ಸಂಕಷ್ಟಕ್ಕೆ ಸಿಲುಕಬಾರದು ಎಂಬ ಸಾಮಾಜಿಕ ಮೌಲ್ಯವನ್ನು ಇಬ್ಬರ ಕತೆಗಳು ತಮ್ಮೊಳಗೆ ಅಂತರ್ಗತಗೊಳಿಸಿ ಕೊಟ್ಟಿರುವುದನ್ನು ನಾವು ಗುರುತಿಸಬಹುದು.

೫.೨ ಸ್ತ್ರೀ ಸಂವೇದನೆ

ನಮ್ಮ ಸಮಾಜದ ಜೀವ ಚೈತನ್ಯ ಮಹಿಳೆ. ಹೆಣ್ಣೆಂದರೆ ಕಣ್ಮುಂದೆ ಬರುವುದು ಸಾಂಪ್ರದಾಯಿಕ ಮಹಿಳೆಯೇ ಆಗಿದ್ದು ವರ್ತಮಾನಕ್ಕಿಂತ ಭೂತಕಾಲದಲ್ಲಿಟ್ಟು ಮಹಿಳೆಯನ್ನು ನೋಡುವುದೇ ಹೆಚ್ಚು. ಬದುಕನ್ನು ಕಟ್ಟಿಕೊಡುವ ಮಹಿಳೆಗೆ ಪ್ರಕೃತಿ ಸಮಾನತೆ ನೀಡುವ ಜೊತೆಗೆ ಅನನ್ಯತೆಯನ್ನು ನೀಡಿದ್ದರೂ ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳಲಾಗುತ್ತಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆ ಪುರುಷ ಪ್ರಧಾನವಾಗಿರುವುದರಿಂದ ಅವಳ ಶಕ್ತಿ, ಸಾಮರ್ಥ್ಯ ಗುರುತಿಸುವುದಕ್ಕಿಂತ ಅವಳಿಗೆ ಕಟ್ಟುಪಾಡುಗಳೇ ಹೆಚ್ಚಾಗಿರುತ್ತವೆ. ಸ್ತ್ರೀಶಕ್ತಿ ಎಂಬುದು ನೈಸರ್ಗಿಕ ಶಕ್ತಿ, ಉತ್ಪಾದನೆ ಮತ್ತು ಸಂರಕ್ಷಣೆಯ ಘಟಕ, ಗಂಡಿನ ಬೇಕು ಬೇಡಗಳ ಸಾಧನ, ತನ್ನ ಅಸ್ತಿತ್ವವನ್ನು ಪುರುಷನ ನೆರಳಲ್ಲಿ ಹುಡುಕಬೇಕಾದವಳು ಎಂಬ ಮನೋಭಾವ, ಅದಕ್ಕೆ ತಕ್ಕಂತೆ ಸಾಮಾಜಿಕ ವ್ಯವಸ್ಥೆ ಪುರುಷನ ಪರವಾಗಿದ್ದರಿಂದ ಹೆಣ್ಣಿನ ಬೌದ್ಧಿಕತೆಯನ್ನು ನಿರಾಕರಿಸಲಾಯಿತು.

ಆಧುನಿಕ ಜಗತ್ತಿನಲ್ಲಿ ಮಹಿಳೆ ಬಹುಮುಖಿ ನೆಲೆಗಳಲ್ಲಿ ಪುರುಷರಿಗೆ ಸರಿಸಮನಾಗಿ ನಿಂತಿದ್ದರೂ ಜಗತ್ತಿನಾದ್ಯಂತ ಅವಳನ್ನು ಎರಡನೇ ದರ್ಜೆ ಪ್ರಜೆಯಾಗಿ ಕಾಣುವುದಲ್ಲದೆ ಅವಳನ್ನು ಹತ್ತಿಕ್ಕುವ ಮತ್ತು ಶೋಷಿಸುವ ಕಾರ್ಯನಿರಂತರವಾಗಿ ನಡೆಯುತ್ತಲೇ ಇದೆ. ಜೀವನ ವ್ಯಾಪಾರದಲ್ಲಿ ಪುರುಷರೊಂದಿಗೆ ಸಮಾನವಾಗಿ ಭಾಗಿಯಾಗಿದ್ದಾಳೆ. ಮಹಿಳೆಯರಿಗೆ ಅನ್ವಯವಾಗುವ ಕಾನೂನಿನ ಬೆಂಬಲವಿದ್ದರೂ ಮಹಿಳೆಯರ ಶೋಷಣೆ ಗೋಚರವಾಗಿ ಮತ್ತು ಅಗೋಚರವಾಗಿ ನಡೆಯುತ್ತಿದೆ. ಬಹಳಷ್ಟು ಮಹಿಳೆಯರಿಗೆ ತಾವು ಶೋಷಣೆಗೆ ಒಳಗಾಗುತ್ತಿರುವ ವಿಚಾರವೇ ಅರಿವಾಗದಂತೆ ಜಾಗ್ರತೆ ವಹಿಸಲಾಗುತ್ತದೆಯೆನ್ನಬಹುದು. ಅರಿವಾದರೂ ಹೆಚ್ಚಿನ ಮಹಿಳೆಯರ ಬೆಂಬಲ ಪುರುಷರೆಡೆಗೆ ಇರುತ್ತದೆ.

"ಮಹಿಳೆಯರನ್ನು ಮೂಲೆಗುಂಪು ಮಾಡಿ ಪ್ರಪಂಚದಲ್ಲಿ ಯಾವುದೇ ಪ್ರಜಾಪ್ರಭುತ್ವವು ನಿಜವಾದ ಪ್ರಜಾಪ್ರಭುತ್ವವೆನ್ನಿಸಿಕೊಳ್ಳಬಾರದು ಮತ್ತು ಸಮಾಜದ ಅರ್ಧದಷ್ಟಿರುವ ಮಹಿಳೆಯ ಸಹಭಾಗಿತ್ವಕ್ಕೆ ಅವಕಾಶ ನೀಡದಿದ್ದರೆ ಅಲ್ಲಿನ ಅಭಿವೃದ್ಧಿಯನ್ನು, ಪ್ರಗತಿಯನ್ನು ಮತ್ತು ಭೌತಿಕ ಸಮೃದ್ಧಿಯನ್ನು ಪರಿಪೂರ್ಣವೆಂದಾಗಲಿ ಅಥವಾ ಅರ್ಥಪೂರ್ಣವೆಂದಾಗಲಿ ಹೇಳಲು

ಬರುವುದಿಲ್ಲ"[೫೯] ಎನ್ನುತ್ತಾರೆ ರಾಮಮನೋಹರ ಲೋಹಿಯಾ. ಆದುದರಿಂದ ಮಹಿಳೆಯರಿಗೆ ಪ್ರಾಧಾನ್ಯತೆ ಕೊಡಬೇಕೆಂಬುದು ಅವರ ಪ್ರಧಾನ ಆಶಯವಾಗಿತ್ತು. ಮಹಿಳೆ ತನ್ನ ಬದುಕು ಉತ್ತಮವಾಗಲೀ ಎನ್ನುವುದಕ್ಕಿಂತ ಪುರುಷರೊಂದಿಗೆ ತಮ್ಮ ಬದುಕು ಉತ್ತಮವಾಗಿರಲಿ ಎಂಬ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲವೆನ್ನಬಹುದು. ಏನೇ ಇದ್ದರೂ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಮಾರ್ಪಾಟುಗಳಾಗಿವೆ ಎಂಬ ಸಕಾರಾತ್ಮಕ ಚಿಂತನೆ ಮಹಿಳೆಯರ ಆತ್ಮಬಲ ಹೆಚ್ಚಿಸಿದೆ.

ಜನರಿಗೆ ಬದುಕಲು ಒಂದು ಯೋಜನೆ, ವಿನ್ಯಾಸವನ್ನು ಸಂಸ್ಕೃತಿ ಒದಗಿಸಿದರೂ ಬಹು ಸಾಂಸ್ಕೃತಿಕ ನೆಲೆಯ ಭಾರತದಲ್ಲಿ ಸ್ತ್ರೀ ಶೋಷಣೆ ಬಹುರೂಪದಲ್ಲೇ ಆಗುತ್ತಿದೆ. ಪ್ರಾಚೀನ ಕಾಲದಿಂದಲೂ ಹೆಣ್ಣಿಗೆ ಹೊರಿಸಿರುವಷ್ಟು ಹೊಣೆಗಾರಿಕೆಯನ್ನು ಗಂಡಿಗೆ ಹೊರಿಸಿಲ್ಲ. ಅಲ್ಲದೆ ಅವನು ಜವಾಬ್ದಾರಿಯಿಂದ ನುಣುಚಿಕೊಳ್ಳಬಲ್ಲ. ಆದರೆ ಸಮಾಜ ಹೆಣ್ಣಿಗೆ ಸ್ಥಾನಮಾನವನ್ನು ನಿರಾಕರಿಸುತ್ತದೆ. ಬಹಳಷ್ಟು ಹೆಣ್ಣುಮಕ್ಕಳು ಬದುಕು ತಂದೆ, ಗಂಡ, ಸಹೋದರ, ಮಗ ಇವರ ಆಶ್ರಯದಲ್ಲಿ ಚಹರೆಯೇ ಇಲ್ಲದೆ ಅಧೀನತೆಯಲ್ಲೇ ಸಾಗುತ್ತಿದೆ. ಹೆಣ್ಣಿನ ಸಾಮಾಜಿಕ ಅಸ್ತಿತ್ವವನ್ನು ಅವಳಿರುವ ಪರಿಸರದ ನೆಲೆಯಲ್ಲಿ ನೋಡಿದಾಗ ಮಾತ್ರ ವಾಸ್ತವದ ಚಿಂತನೆ ಸಾಧ್ಯವಾಗುತ್ತದೆ. **"ಸುಕೋಮಲತೆ ಹೆಣ್ಣಿನ ದೌರ್ಬಲ್ಯವಲ್ಲ, ಅದೇ ವಿಶಿಷ್ಟತೆ ಮತ್ತು ಅನನ್ಯತೆ"**[೬೦] ಎಂಬ ಮಾತಿನಂತೆ ಮಹಿಳೆ ಬದುಕಿನ ಪಯಣದಲ್ಲಿ ಅವಳಿಗೆ ವೈಫಲ್ಯಗಳ ಸಾಲೇ ಎದುರಾದರೂ ಅವಳು ದೊಡ್ಡ ಕನಸುಗಳನ್ನೇ ಕಾಣುತ್ತಾಳೆ ಹಾಗೂ ಅದಕ್ಕಾಗಿ ನಿರಂತರವಾಗಿ ಪ್ರಯತ್ನಿಸುತ್ತಾಳೆ. ಆಧುನಿಕ ಮಹಿಳೆಯನ್ನು ಹೊಸ ವಿಭಿನ್ನ ಬಗೆಯಲ್ಲಿ ಅಂಕೆಯಲ್ಲಿಟ್ಟುಕೊಳ್ಳುತ್ತಾ ತಮ್ಮ ಆಶೋತ್ತರಗಳಿಗೆ ಹೆಣ್ಣನ್ನು ಬಳಸುತ್ತಿದ್ದಾರೆ. ಶ್ರಮತತ್ವ ಮಹಿಳೆಯರ ಪಾಲಿಗೆ ನಿಜವಾಗುತ್ತಿದ್ದು, ಮಹಿಳೆ ಕುರಿತಾದ ಸಾಮಾಜಿಕ ಸುಳ್ಳುಗಳು ಅವಳನ್ನು ದುರ್ಬಲಳನ್ನಾಗಿಸಲು ಶತಪ್ರಯತ್ನ ನಡೆಯುತ್ತಿದೆ. ಬಡ ಶ್ರಮಿಕ ಮಹಿಳೆಯನ್ನಂತೂ ಯಥಾಸ್ಥಿತಿಯಲ್ಲಿಡಲು ಬಯಸುವುದು ಸಾಮಾಜಿಕ ಹಿನ್ನಡೆಯಾಗಿದ್ದು ಭಾರತೀಯ ಸಾಂಪ್ರದಾಯಿಕ ಮನಸ್ಸುಗಳು ಬದಲಾಗಬೇಕಾದ ಅಗತ್ಯತೆಯಿದೆ.

"ಹಸಿವು, ಜಾತಿ, ಬಡತನ ಮಹಿಳೆಯೊಂದಿಗೆ ಅಂತರಸಂಬಂಧ ಹೊಂದಿದ್ದು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲವಾಗಿದೆ. ಸ್ವಾತಂತ್ರ್ಯೋತ್ತರದಲ್ಲೂ ಮಹಿಳೆ ದೇಸಿಯತೆ ಮತ್ತು ಆಧುನಿಕತೆಯ

---

೫೯ ಎ.ಎಸ್. ಪ್ರಭಾಕರ (ಸಂ.) ಲೋಹಿಯಾ, ವರ್ತಮಾನದ ಮುಖಾಮುಖಿ, ೨೦೧೨, ಪು: ೧೭೪.
೬೦ ಎಂ.ಎಸ್. ಆಶಾದೇವಿ, ಪ್ರಜಾವಾಣಿ. ೯.೮.೨೦೧೫, ಪು: ೨.

ಕವುದಿಯಲ್ಲಿ ಅವಿತಿದ್ದಳೇ ಹೊರತು ತನ್ನ ಸ್ವತಂತ್ರ್ಯವ್ಯಕ್ತಿತ್ವದಲ್ಲಿ ಅಲ್ಲ. ಎಲ್ಲಕ್ಕೂ ಯಜಮಾನ ಸಂಸ್ಕೃತಿಯೇ ಮೂಲಬೇರು ಎನ್ನುತ್ತಾರೆ ಲೋಹಿಯಾ. ಮಹಿಳೆಗೆ ಹಸಿವು ಮತ್ತು ಲೈಂಗಿಕತೆಯಲ್ಲಿ ಪುರುಷನಿಗೆ ಇರುವ ಸ್ವಾತಂತ್ರ್ಯವಿಲ್ಲದೆ ಬಡತನ ಮತ್ತು ಸಂಪ್ರದಾಯದ ಕಾರಣ ಮಹಿಳೆಯ ಹಸಿವಿನ ಸಮಸ್ಯೆ ಸಾಮಾಜೀಕರಣವಾಗಿದೆ, "ನಿಶ್ಚಿತವಾಗಿ ಮಾನವ ಜನಾಂಗದಲ್ಲಿ ಅತ್ಯಂತ ತೀವ್ರಶೋಷಣೆಗೆ ಒಳಗಾಗಿರುವ ವರ್ಗವೆಂದರೆ ಮಹಿಳೆಯರು"[೬೧] ಎನ್ನುವ ಲೋಹಿಯಾ ಅವರ ಮಾತು ಉಲ್ಲೇಖನೀಯವಾಗಿದೆ. ಮಹಿಳೆಯರ ದುಸ್ಥಿತಿ ಬಗೆಗೆ ಅವರು ನಿರಂತರವಾಗಿ ಚಿಂತಿಸುತ್ತಿದ್ದರು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬದುಕುತ್ತಿರುವ ಮಹಿಳೆ ಅನುಭವಿಸುತ್ತಿರುವ ಸಮಸ್ತವಿಧವಾದ ತುಳಿತ, ಶೋಷಣೆಗಳ ಶೋಧನೆ ಇನ್ನೂ ಆಗಬೇಕಾಗಿದೆ. ಶ್ರೇಷ್ಠತೆಯಿಂದಲೇ ಪುರುಷನನ್ನು ಬಿಂಬಿಸುವ ವ್ಯವಸ್ಥೆ ಮಹಿಳೆಯನ್ನು ಅಸಮಾನ ದೃಷ್ಟಿಯಿಂದಲೇ ನೋಡಲಾಗುತ್ತದೆ. ಹೆಣ್ಣು ಮಗುವಾಗಲೀ, ಮಹಿಳೆಯಾಗಲೀ ಅವಳನ್ನು ಸಮಸ್ಯೆಯೆಂದೇ ಸಾಮಾಜಿಕವಾಗಿ ಬಿಂಬಿಸಲಾಗುತ್ತಿದೆ.

ಗ್ರಾಮೀಣ ಮಹಿಳೆಯರು ನಿರಂತರ ಶೋಷಣೆಗೆ ಒಳಗಾದರೂ ಜೀವನಪ್ರೀತಿ ಕಳೆದುಕೊಂಡವರಲ್ಲ. ದುಡಿಯದ, ಕುಡುಕ, ದುರ್ಬಲ, ಅಶಕ್ತ ಗಂಡಂದಿರನ್ನು ಬದಿಗಿಟ್ಟು ಸಂಸಾರದ ನೊಗವನ್ನು ಹೆಗಲಿಗೇರಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯವು ತನ್ನೊಳಗೆ ಶೋಷಣೆ, ದಬ್ಬಾಳಿಕೆ, ಅಸಮಾನತೆಗಳಿಗೆ ಯಾವಾಗಲೂ ಪ್ರತಿಭಟನೆಯ ಪ್ರತಿಕ್ರಿಯೆಯನ್ನು ನೀಡುತ್ತಾ ಬಂದಿದೆ. ಕಥಾ ಪರಂಪರೆಯಲ್ಲಿ ಶೋಷಣೆಯನ್ನು ಕುರಿತು ಚಿತ್ರಿಸಲು ಹೆಚ್ಚು ಸಾಧ್ಯತೆ ಇದ್ದುದರಿಂದ ನವೋದಯ, ನವ್ಯ, ಪ್ರಗತಿಶೀಲ ದಲಿತ ಮತ್ತು ಬಂಡಾಯ ಎಲ್ಲಾ ಪ್ರಕಾರಗಳಲ್ಲೂ ಹೆಚ್ಚಿನ ಮಟ್ಟದಲ್ಲಿ ಇಂತಹ ಸಾಮಾಜಿಕತೆಯನ್ನು ಬಳಸಲಾಗಿದೆ. ಅದರಲ್ಲೂ ಸ್ತ್ರೀಲೋಕದ ಬದುಕನ್ನು ಕುರಿತಂತೆ ಹೆಚ್ಚು ಸಾಹಿತ್ಯ ನಮ್ಮ ಕನ್ನಡ ಭಾಷೆಯಲ್ಲಿ ಪ್ರಕಟವಾಗಿದೆ. ಹೆಣ್ಣಿನ ಸೌಂದರ್ಯವನ್ನು ಕಟ್ಟಿಕೊಡುವ ನವೋದಯ ಸಾಹಿತ್ಯ ಬಿಟ್ಟರೆ ಸ್ವಾತಂತ್ರ್ಯೋತ್ತರದಲ್ಲಿ ರಚಿತವಾದ ಕನ್ನಡ ಸಾಹಿತ್ಯ ಹೆಣ್ಣಿನ ಸಂಕಷ್ಟದ ಬಾಳನ್ನು ಭಿನ್ನರೀತಿಯಲ್ಲಿ ಕಟ್ಟಿಕೊಟ್ಟಿದೆ. ಪೂರ್ಣಚಂದ್ರ ತೇಜಸ್ವಿ, ನಿರಂಜನ, ಪಿ. ಲಂಕೇಶ್, ತ್ರಿವೇಣಿ, ಅನಂತಮೂರ್ತಿ, ಆಲನಹಳ್ಳಿಕೃಷ್ಣ, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ದೇವನೂರು ಮಹಾದೇವ, ಮೊಗಳ್ಳಿ ಗಣೇಶ, ಬರಗೂರು ರಾಮಚಂದ್ರಪ್ಪ, ಮೊದಲಾದ ಕಥೆಗಾರರು ಹೆಣ್ಣಿನ ಬದುಕಿನ ವಿವಿಧ ಮಜಲುಗಳನ್ನು ಕಟ್ಟಿಕೊಟ್ಟಿದ್ದಾರೆ. ಹೆಣ್ಣು ಎಷ್ಟೇ ಶೋಷಣೆಗೆ ಒಳಗಾದರೂ

---

೬೧ ಲೋಹಿಯಾ : ವರ್ತಮಾನದ ಮುಖಾಮುಖಿ, ಎ.ಎಸ್. ಪ್ರಭಾಕರ (ಸಂ) ೨೦೧೨, ಪು: ೧೬೨.

ಮಾನವೀಯ ನೆಲೆಯಲ್ಲಿ ಅವಳಿಗೆ ಶ್ರೇಷ್ಠವಾದ, ಮೌಲಿಕ ಸ್ಥಾನಮಾನಗಳು ಇದ್ದೇ ಇರುತ್ತದೆ. ಅವಳ ಸಂಕಷ್ಟಗಳ ಬದುಕೇ ಮೌಲ್ಯಯುತವಾದುದಾಗಿದೆ. ಅದಕ್ಕಾಗಿಯೇ ಹೆಣ್ಣು ಸರ್ವಶ್ರೇಷ್ಠವಾಗಿ ಅಂದಿಗೂ ಇಂದಿಗೂ ಪ್ರತಿಯೊಂದು ಕುಟುಂಬದಲ್ಲೂ ನೆಲೆ ನಿಂತಿದ್ದಾಳೆ. ಅವಳ ಬದುಕಿನ ಪಯಣವನ್ನು ಅಧ್ಯಯನ ಮಾಡುವುದರ ಮೂಲಕ ಹೆಣ್ಣಿನ ಬಾಳಿಗೆ ಸಾರ್ಥಕತೆಯನ್ನು ತಂದುಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥಾ ಸಾಹಿತ್ಯದೊಳಗೆ ಚಿತ್ರಿತವಾಗುವ ಸ್ತ್ರೀಕುಲವನ್ನು ಅಧ್ಯಯನವ್ಯಾಪ್ತಿಗೆ ತರಲಾಗಿದೆ.

ವ್ಯವಸ್ಥೆ ಎನ್ನುವ ಸೃಷ್ಟಿಯೇ ಹಿಂಸೆಯ ಮೂಲವಾಗಿದ್ದು ಅದರಲ್ಲೂ ಮಹಿಳೆಯರ ಬದುಕನ್ನು ಆಕ್ರಮಿಸುವ ಕ್ರೌರ್ಯ ಉಳಿದೆಲ್ಲ ನೆಲೆಗಳ ಹಿಂಸೆಯನ್ನು ಮೀರಿಸುವಂತದ್ದಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಸ್ತ್ರೀವಾದಿ ನೆಲೆಯಲ್ಲಿ ಮಹಿಳೆಯ ಕುರಿತ ಗ್ರಹಿಕೆ, ಚಿಂತನೆಗಳ ಹೊಳಹುಗಳಿಗಾಗಿ ಅವರ ಕಥಾಸಾಹಿತ್ಯವನ್ನು ಅಧ್ಯಯನ ಮಾಡುವುದು ಉಪಯುಕ್ತವೆನಿಸುತ್ತದೆ. ಇಬ್ಬರು ಕಥೆಗಾರರ ಕತೆಗಳಲ್ಲಿನ ಮಹಿಳೆಯರು ಗ್ರಾಮೀಣ ಪ್ರದೇಶದವರೇ ಆಗಿದ್ದಾರೆ. ತಳವರ್ಗದ ಹೆಣ್ಣುಮಕ್ಕಳ ಬದುಕನ್ನು ತಮ್ಮ ಕಥೆಗಳಲ್ಲಿ ವಿಭಿನ್ನ ನೆಲೆಯಲ್ಲಿ ಕಾಣಿಸಿದ್ದಾರೆ.

ಬೆಸಗರಹಳ್ಳಿ ರಾಮಣ್ಣ ಅವರ 'ಸುಗ್ಗಿ', 'ಮಹಾನವಮಿ' ಕತೆಗಳು ಮನುಷ್ಯನ ಉದಾರಗುಣ ಅವನ ಸಣ್ಣತನವನ್ನು ಮೀರಿ ಉದಾರನೆಲೆಗೆ ತರುವ ಸಮಷ್ಠಿ ಪ್ರಜ್ಞೆಯ ಕತೆಗಳಾಗಿವೆ. ದುಡಿಮೆಯ ಫಲ ದೊರೆತಾಗ ಶ್ರಮದ ಸಾರ್ಥಕತೆಯಿಂದ ರೈತನ ಮನಸ್ಸು ಹಗುರಾಗಿ, ಹೂವಾಗಿ ಬೀಗುವ ಸುಗ್ಗಿಯಲ್ಲಿ ಅಣ್ಣ ಮತ್ತು ತಮ್ಮನ ನಡುವೆ ಭಿನ್ನಾಭಿಪ್ರಾಯಗಳುಂಟಾಗುತ್ತವೆ. ತಮ್ಮ ಪುಟ್ಟಸ್ವಾಮಿಗೆ ಮನೆ ಒಡೆಯುವ ಮಾತುಗಳು ಹಿತವಾದಾಗ ಅವನ ಮಾತು ನಡವಳಿಕೆಯಲ್ಲಿ ಒರಟುತನ, ಸಣ್ಣತನ ಕಂಡುಬರುತ್ತದೆ.

ಒಟ್ಟು ಮಾಡುವ ಸುಗ್ಗಿಕಣದಲ್ಲೆ ಬೇರೆಯಾಗುವ ಸೂಚನೆ ಕಂಡುಬಂದಾಗ ಬಹುವಾಗಿ ನೊಂದುಕೊಳ್ಳುವುದು ತಾಯಕ್ಕ. "ನಿಮ್ಮಿಬ್ಬರನ್ನು ಹೆತ್ತುದಕ್ಕೆ ಈ ಒಡಲು ಸಾರ್ಥಕವಾಯಿತು" ಎಂದು ಎದೆ ಎದೆ ಚಚ್ಚಿಕೊಂಡಳು. ಚಿಕ್ಕ ಮಗನ ತಪ್ಪಿದ್ದರೂ ಇಬ್ಬರನ್ನೂ ಸೇರಿಸಿ ದೂಷಿಸುವುದು ಬಿರುಕು ಬಿಗಡಾಯಿಸಬಾರದೆಂಬ ಕಾರಣದಿಂದೆನ್ನಬಹುದು.

ಸೊಸೆ ಸರೋಜ ಗಂಡನಿಗೆ ಅಡ್ಡಲಾಗಿ ನಿಂತು **"ಬೇಡೀಂದ್ರೆ... ಇದರ ಅಪವಾದವೆಲ್ಲ ನನ್ನ ಮೇಲೆ ಬತ್ತದೆ. ಮನೆ ಮುರ್ಕಿ ಅಂತ ಊರೆಲ್ಲ ಕುಣೀತದೆ... ನಿಮ್ಮ ದಮ್ಮಯ್ಯ"**[೬೨] ಎಂದು ಕೈಹಿಡಿದುಕೊಂಡಳು. ಅವನು ಕೊಸರಿಕೊಂಡು **'ಕೋಣೇಲಿ ಮಡಿಕೆ ಅಂಡುಸೀಯೋ** ನಿನಗೇಕೆ ಈ ಕಾರ್ಬಾರ, ಹೋಗು ನಿನ್ನ... ಆಮೇಲೆ' ಎಂದರೂ ಅವಳು ಬಿಡಲಿಲ್ಲ, ಹಿಡಿದುಕೊಂಡಳು... ಪುರುಷರ ಜಗಳ, ವ್ಯವಹಾರದ ನಡುವೆ ಸ್ತ್ರೀ ಪ್ರವೇಶ ಅನಗತ್ಯ ಎಂಬುದು ಗ್ರಾಮೀಣ ಸಮುದಾಯದಲ್ಲಿ ಇರುವುದಾದರೂ ಲೇಖಕರ ಇಂಗಿತವೂ ಅದೇ ಎನಿಸುತ್ತದೆ. **"ಬೇಡಿ ಅಂದ್ರೆ, ಕಾಲಿಗೆ ಬೀಳ್ತೀನಿ, ಎಲ್ಲ ನನ್ನ ಮನೆಮುರ್ಕಿ ಅಂತಾರೆ"** ಎಂದು ಬಗೆಬಗೆಯಲ್ಲಿ **ಬೇಡಿಕೊಂಡಳು. ಎಷ್ಟು ಸಾರಿ ಹೇಳಿದ್ರು, ನಾನು ನನ್ನ ಮಾತೇ ಲೆಕ್ಕಕ್ಕಿಲ್ಲ. ನೀನೂ ಅವರ ಕಡೆ ಸಾಮೀಲಾದ"**[೬೩] ಎಂದು ಮುಂದಲೆಯನ್ನು ಹಿಡಿದು ಜೋರಾಗಿ ನೂಕಿದ.

ಸರೋಜ ಅಪವಾದ ತನ್ನ ಮೇಲೆ ಬರಬಾರದೆಂಬ ಎಚ್ಚರಿಕೆ, ತನ್ನ ಗಂಡನಿಂದ ಮನೆ ಒಡೆಯಿತೆಂಬ ಕೆಟ್ಟ ಅಭಿಪ್ರಾಯ ಬರಬಾರದೆಂದು ವಿಚಾರಮಾಡುವುದರಿಂದ ಅವಳನ್ನು ಉದಾರತ್ವದ ನೆಲೆಗೆ ರಾಮಣ್ಣ ತರುವುದಿಲ್ಲ. ಆದರೆ ತಾಯಕ್ಕ ಸಂಬಂಧ ಉಳಿಸುವ ಸಲುವಾಗಿ ಯಾವ ಮಗನ ಪರವಾಗಿಯೂ ಮಾತನಾಡದೆ ಒಟ್ಟಾಗಿ ಇಬ್ಬರನ್ನೂ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಪುಟ್ಟ ಸ್ವಾಮಿ ಕಣಕ್ಕೆ ಹೊರಟಾಗ ತಾಯವ್ವ 'ಲೋ ನಾನು ಬತ್ತೀನಿ ಕಣದ ತಾಕೆ' ಎಂದು ತಾನೇ ಮಗನನ್ನು ಮಾತನಾಡಿಸಿ ಅವನೊಂದಿಗೆ ಹೊರಡುವುದು ಕೂಡುಕುಟುಂಬ ಉಳಿವಿಗಾಗಿ ಎಂಬಲ್ಲಿ ಸಂಬಂಧಗಳನ್ನು ಉಳಿಸುವ ಕಾಳಜಿ ಭಾವದ ನೆಲೆಗೆ ಬಂದು ನಿಲ್ಲುತ್ತದೆ.

ರಾಮಣ್ಣ ಅವರ 'ಮಹಾನವಮಿ' ಸಂಬಂಧಗಳ ನಡುವೆ ಔದಾರ್ಯವಿದ್ದಾಗ ಮಾತ್ರ ಗುಣಾತ್ಮಕ ಬದುಕು ಸಾಧ್ಯವೆನ್ನುವುದನ್ನು ಬಿಂಬಿಸುತ್ತದೆ. ಮಹಾನವಮಿ ಹಬ್ಬ ಐದು ದಿನ ಇರುವಾಗ ಚಿಕ್ಕಣ್ಣನ ಅವ್ವ ಹಬ್ಬ ಮಾಡುವ ಬಗ್ಗೆ ಸುಮ್ಮನಿರುವ ಮಗನನ್ನು ಕುರಿತು ಲೊಟಗಾಲೆ ತೆಗೆದಿದ್ದರಲ್ಲಿ ಪರಂಪರೆಯ ಭಾಗವಾದ ಹಬ್ಬವನ್ನು ಮುಂದುವರೆಸಿಕೊಂಡು ಹೋಗುವ ಒತ್ತಡದಿಂದೆನ್ನಬಹುದು.

ಅವ್ವ ಮನೆಗೆ ಬಂದವರ ಜೊತೇಲೆಲ್ಲ **"ನಾನು ಮನೇಲಿ ಯಾರ್ಗು ಲೆಕ್ಕಕ್ಕಿಲ್ಲ, ಕಸ ಕಸ ನಾನು! ನನ್ನ ಬಳಗದ್ದೆ ನನ್ನ ಮನೆಬಾಗಿಲು ದಾಟಿ ಬಂದಿದ್ದರೆ ನಿನ್ನ ಕಷ್ಟವೇನು? ನೀನು ಬದುಕ್ದ, ಸತ್ತ**

---

೬೨ ಕಣಜ, ಲೋಹಿಯಾ ಪ್ರಕಾಶನ, ೨೦೧೧. ಪು: ೨೯,
೬೩ ಅದೇ, ಪು : ೨೯.

ಅಂತ ಕೇಳ್ತಿತ್ತು. ಇವಳಿಗೇನು ತೀಟೆ ಏನವ್ವ? ಕೈಕಾಲು ಗಟ್ಟಿಮುಟ್ಟಾಗಿದ್ರೆ ಕೂಲಿನಾಲಿ ಮಾಡ್ಕಂಡ್ ಬೇರೆ ಬೇಯಿಸ್ಕಂಡ್ ತಿನ್‌ತಿದ್ದೆ. ಇಲ್ಲಿ ಮೇಲಿರೋನು ನೋಡ್ತಾನೆ. ಯಾವ ಗಳಿಗೇಲಿ ಈ ನಮ್ಮವ್ವ ಮನೆ ಒಳಕ್ಕೆ ಕಾಲಿಟ್ಟಳೋ ದರಿದ್ರ ಮನೆ ಮಾಡುಬುಡ್ತಲ್ಲ. ಅದೆನಿರಬೋದು, ಇವಳ ಕಾಲುಗುಣ ಅಂತೀನಿ ಮಾರ್ಲಮ್ಮಿ ಹಬ್ಬಕ್ಕೆ ಇನ್ನೆಂಟು ದಿನ ಅದೆ, ಮನೆಗೆ ಸುಣ್ಣ, ಬಣ್ಣ ದುಂಬುಹೊಡೀವ ಅಂತ ಈ ಮಾತಾಯಿಗೂಯಿಲ್ಲ. ಬಟ್ಟೆ ಬರೆ ಸಾಮಾನು ಸರಂಜು ನೋಡುವ ಅನ್ನೊ ಅಳುಕು ಗಂಡ್ಸು ಅನ್ನಿಸಿಕೊಂಡೋನ್ಗೂಯಿಲ್ವಲ್ಲ! ಹುಟ್ಟಿಸಿದ ಅಪ್ಪನಿಗೆ 'ಯಡೆ' ಹಾಕಬೇಕು ಅನ್ನೋಗ್ಯಾನ ಬ್ಯಾಡವೇ ಈ ಗ್ರಾಸ್ತನಿಗೆ! ನಾನು 'ಗೊಟ್ಟಕ್' ಅಂದ ಮೇಲೆ ಈ ಮನೆ ದೀಪ ನಿಲ್ಲೋದು ಕಾಣೆ ಕಣೆ ತಿಮ್ಮಿಯೋ!"[೬೪]

ಮುದುಕಿಗೆ ತಮ್ಮನ ಮಗಳನ್ನು ಮಗ ಒಪ್ಪಲಿಲ್ಲ ಎಂಬು ಸಿಟ್ಟು ಸಿಡುಕನ್ನು ವ್ಯಕ್ತಪಡಿಸಲು ಯಾವ ಸಂದರ್ಭವನ್ನೂ ಬಿಡುತ್ತಿರಲಿಲ್ಲ. ಅಸಮಾಧಾನವನ್ನು ಕಾರಿ ಮುದುಕಿ ಸಮಾಧಾನ ತಂದುಕೊಳ್ಳಲು ಮಗನೊಡನೆ ಕಾಲುಕೆದರಿ ಜಗಳಕ್ಕೆ ನಿಂತರೂ ಸೊಸೆ ತಾಯಿ–ಮಗನ ನಡುವೆ ಬರದಿರುವುದು ವಾಸ್ತವಿಕತೆಗೆ ಹತ್ತಿರದ ಪಾತ್ರವಾಗಿದೆ.

ಚಿಕ್ಕಣ್ಣ ಅವ್ವನಿಗೆ,

"ಮದ್ದೂರಿಗೋಯ್ತೀನಿಕನವ್ವ ಹಬ್ಬದ ಸಾಮಾನು ತರೂಕೆ, ನಿನಗೆ ಎಂಥ ಸೀರೆ ತರ್ಲಿ?"
"ನನಗೆ ಎಂಥದಾದ್ರೂ ಆಯ್ತದೆ! ನಿನ್ನ ಹೆಡತೀಗೆ ಚೆನ್ನಾಗಿರೋದು ನೋಡಿ ತಕ್ಕಂಡ್ ಬಾ।
"ಅವಳಿಗೆ ಸೀರೆಯೇ ಬ್ಯಾಡವಂತೆ!"
'ಹಂಗಾದ್ರೆ ನನಗೂ ಬ್ಯಾಡ. ಸೀರೆಗೆ ಕೊಡೂದುಡ್ಡನ್ನೇ ಸರ್ಕಾರಿ ಖಜಾನೆಗೆ ಯುದ್ಧದ ಪಂಡ್‌ಗೆ ಕಟ್ಟುಬುಡು ಅಂದೆ।"[೬೫]

ಮಗ, ಸೊಸೆ, ಮತ್ತು ಅತ್ತೆಯ ನಡುವಣ ಅಸಮಾಧಾನ ತಿಳಿಯಾಗಿ ಪ್ರೀತಿ, ಕಾಳಜಿ, ಕಕ್ಕುಲಾತಿ ಹೊರಹೊಮ್ಮುವ ಬಗೆ ಜೀವಪರವಾಗಿದ್ದು ಕೂಡುಕುಟುಂಬದ ಅಗತ್ಯತೆಯನ್ನು ಕತೆ ಕಾಣಿಸುತ್ತದೆ.

'ಸುಗ್ಗಿ' ಮತ್ತು 'ಮಹಾನವಮಿ' ಕತೆಗಳು ಕೇಡು ತಿಳಿಯಾಗಿ ಸಾಮರಸ್ಯನೆಲೆಗೆ ಬರುವಲ್ಲಿ ಸ್ತ್ರೀಪಾತ್ರಗಳು ಮುಖ್ಯವೆನಿಸಿವೆ. ಸುಗ್ಗಿಯ ಸಮೃದ್ಧಿ, ಜಾನಪದೀಯ ಅಂಶ, ಪರಿಸರ, ಕೃಷಿಕರ ಚಿಂತನೆಯ ಮೂಲಕ ಕತೆ ಬೆಳೆಯುತ್ತಾ ಹೋಗುತ್ತದೆ. ಸುಗ್ಗಿ, ಹಬ್ಬಕ್ಕೆ ಮತ್ತು ಸ್ತ್ರೀಗೆ ಬದುಕಿನ

---

೬೪ ಅದೇ, ಪು : ೪೧.
೬೫ ಅದೇ, ಪು : ೪೯.

ಸಮೀಕರಣವಿದೆಯೆನ್ನಬಹುದು. ‘ಸುಗ್ಗಿ’ಯಲ್ಲಿ ಧಾನ್ಯ ಒಟ್ಟಾಗುತ್ತಿದ್ದಂತೆ ಮನಸ್ಸು ಬಿಡಿಯಾಗುತ್ತಿರುವಾಗ ರಾಮಣ್ಣನವರ ಹಂಬಲ ಒಟ್ಟು ಮಾಡುವುದೇ ಆಗಿದೆ. **“ಮನುಷ್ಯನ ಔದಾರ್ಯ ಅವನ ಸಣ್ಣತನವನ್ನು ಮೀರಿ ಗೆದ್ದು ನಿಲ್ಲುವ ಸಂದರ್ಭದಲ್ಲೆಲ್ಲಾ ಪ್ರಕೃತಿಯ ಪರವಾಗಿ ಬರುವ ಮಳೆಯಾಗಲಿ, ಒಕ್ಕಲು ಮಕ್ಕಳು ನಂಬುವ ಗ್ರಾಮದೈವವಾಗಲಿ, ದುಡಿಮೆಯ ಫಲವಾದ ಪೈರಾಗಲಿ ಸಾಕ್ಷಿಯಾಗಿ ನಿಲ್ಲುವುದು ಸಮಷ್ಠಿ ಪ್ರಜ್ಞೆ ಇನ್ನೂ ಜಾಗೃತವಾಗಿರುವ ಗ್ರಾಮ ಸಮಾಜದಿಂದ ಬಂದ ಕಥೆಗಳಿವು ಎಂಬುದಕ್ಕೆ ದ್ಯೋತಕವಾಗಿದೆ”**[೬೬] ಎಂಬ ಯು.ಆರ್. ಅನಂತಮೂರ್ತಿಯವರ ಮಾತು ಉಲ್ಲೇಖನೀಯವಾಗಿದೆ.

ಕುಂ.ವೀರಭದ್ರಪ್ಪ ಅವರ ‘ಕುಬುಸ’ ಕತೆಯ ಬಂಡೆವಜ್ಜಿ ಮೊಮ್ಮಗನನ್ನು ಸತ್ತ ಮಗಳ ನೆನಪಿನಲ್ಲಿ ಬಹುಕಷ್ಟದಿಂದಲೂ, ಅಕ್ಕರೆಯಿಂದಲೂ ಸಾಕಿತು. ನಗರದಲ್ಲಿ ಅಟೆಂಡರ್ ಕೆಲಸ ಸಿಕ್ಕಿದ ಮೇಲೆ ನೆಟ್ಕಲ್ಲು ಆಧುನಿಕ ಮನೋಭಾವದವನಾದರೂ ಸಲುಹಿದ ಮುದುಕಿಗೆ ತಪ್ಪದೆ ಹಣಕಳುಹಿಸುತ್ತಿದ್ದ. ಅಂಚೆಯಣ್ಣ ಮುದುಕಿ ಹೆಸರಿಡಿದು ಕರೆದಾಗ, **“ಯಾವನೋ ನನ್ನಾಟಗಳ್ಳ ಮಾಡ್ಕೆಂಡೆಣ್ತೆನ ಕರದಂಗ ಯಸರಿಡಿದು ಕರೆಯೋನು ಎಂದಬ್ಬರಿಸುತ್ತ ಕಾಮನ ಬಿಲ್ಲಿನಂಥ ಮುದುಕಿ ಒಂದೇ ನೆಗೆತಕ್ಕೆ ಅಂಗಳದಲ್ಲಿ ನಿಂತು ಅಂಚೆಯಣ್ಣನನ್ನು ದುರುಗುಟ್ಟಿ ನೋಡಿತು.”**[೬೭]

ನಡುಗುವ ಕೈಗಳಿಂದ ಕಾಗದ ತೆಗೆದುಕೊಂಡು, ನೋಟುಗಳನ್ನು ನೋಡಿ ಕಣ್ಣೀರು ಸುರಿಸಿ ನೆಟ್ಕಲ್ಲೂ... ನೆಟ್ಕಲ್ಲೂ... ಎಂದು ಉದ್ಗರಿಸಿತ್ತು. ಇಂತಹ ಕುಗ್ರಾಮದ ಮುದುಕಿ ಪಟ್ಟಣಕ್ಕೆ ಹೋಗುವಾಗ ಮತ್ತು ಹೋದಾಗ ಎಲ್ಲವನ್ನೂ ಸಹಿಸಿಕೊಂಡಿತು. ಆಧುನಿಕ ಮನೋಭಾವದ ಸೊಸೆ–ಮಗ–ಮೊಮ್ಮಕ್ಕಳೊಂದಿಗೆ ಹೊಂದಿಕೊಳ್ಳಲು ಕಷ್ಟವಾದರೂ ಹಳ್ಳಿಗೆ ಹಿಂತಿರುಗುವ ಮಾತೆತ್ತಲಿಲ್ಲ. ಕುಬುಸ ತೊಡದ ಮುದುಕಿ ಪ್ರೇಕ್ಷಣೀಯ ವಸ್ತುವಾಗಿ ಬಿಟ್ಟಳು. ‘ಏನ್ರೀ ಕಮಲಾರವ್ರೆ.... ನಿಮ್ಮನೇಲಿ ಓಲ್ಡೆಸ್ಟ್ ವುಮ್ಯಾನ್ ಇದೆ ಅಂತಲ್ಲ... ನೋಡ್ಕೊಂಡು ಹೋಗೋಣಾಂತ ಬಂದ್ವಿ’ ಎಂದು ಮುದುಕಿಯನ್ನು ನೋಡುವುದು, ಪ್ರಶ್ನೆ ಕೇಳುವುದನ್ನು ಮಾಡಿದರೂ ಚಕಾರವೆತ್ತದೆ ಸಹಿಸಿಕೊಂಡಿತು. ನೆಟ್ಕಲ್ಲು ಮತ್ತು ಕಮಲಾ ಮುದುಕಿಗೆ ಕುಬುಸ ತೊಡಿಸಲು ಇನ್ನಿಲ್ಲದ ಪ್ರಯತ್ನಮಾಡಿದರೂ ಸುತಾರಾಂ ಒಪ್ಪಲಿಲ್ಲ. ಅತ್ತೆ ಮತ್ತು ಸೊಸೆಗೆ ಕುಬುಸದ ವಿಚಾರದಲ್ಲಿ ತೀವ್ರ ಭಿನ್ನಾಭಿಪ್ರಾಯ ಬಂದರೂ ಮುದುಕಿ ಬಗ್ಗಲಿಲ್ಲ.

---

೬೬ ಯು.ಆರ್. ಅನಂತಮೂರ್ತಿ, ‘ನೆಲದ ಒಡಲು’ ಕೃತಿಯ ಬೆನ್ನುಡಿ.

೬೭ ಅದೇ, ೨೦೧೦, ಪು: ೩೨೯.

ರಾಮಣ್ಣನವರ 'ಮಹಾನವಮಿ' ಯಲ್ಲಿ ಮುದುಕಿಗೆ ಸೊಸೆಯ ಮೇಲೆ ಹಲವು ಕಾರಣದಿಂದ ಅಸಮಾಧಾನವಿದ್ದು ನಿತ್ಯ ಕಾರುತ್ತಲೇ ಇದ್ದರೆ 'ಕುಬುಸ'ದ ಬಂಡೆವ್ವಜ್ಜಿ ಸೊಸೆಯ ಉಸಾಬರಿಗೆ ಹೋಗದೆ ತನ್ನ ಪಾಡಿಗೆ ತಾನಿದ್ದರೂ ಸೊಸೆ ಕುಬುಸ ತೊಡಿಸಲು ಒತ್ತಾಯಿಸಿದ್ದು ಇರುಸು ಮುರುಸಾಯಿತು. ಕುಬುಸದ ವಿಚಾರದಲ್ಲಿ 'ಗಯ್ಯಾಳೇರ, ತಾಟಗಿತ್ತೇರ' ಎಂದು ಬೈಯ್ಯಲು ತೊಡಗಿತು. ಯಾವ ತಂತ್ರಕ್ಕೂ ಮಣಿಯದೆ ಮುದುಕಿ ಪರಂಪರೆಯ ಬಗೆಗಿನ ನಂಬಿಕೆಯನ್ನು ಸಡಿಲವಾಗಲೂ ಬಿಡಲಿಲ್ಲ.

"ಕುಬುಸ ತೊಡ್ಕೊಂಡಾಕ್ಷಣ ನಂಗೇನು ಹರೇವು ಮತ್ತೆ ಬರ್ತದಾ... ನಾನೆಂಥೋರ ವಂಸದೋಳು ಏನು ಕಥೆ... ಇಲ್ಲಾ ನಾನೊಂದು ಚಣ ಈ ಊರಾಗಿರಾಕಿಲ್ಲ... ಇಲ್ಲೆ ಪಿರಾಣ ಬಿಟ್ಟೆ ಅಂದ್ರೆ ನೀನೂ ನಿನ್ನೇಣ್ತೆ ಸೇರ್ಕೊಂಡು ನನ್'ಯಣಕ್ಕೆ ಕುಬುಸದ ಸಿಂಗಾರ ಮಾಡಿ ಮಣ್ಣಾಗಿ ಇಕ್ಕೋರೆ..."[೬೮] ಎಂದು ಗರ್ಜಿಸಿತು. ಆಧುನಿಕತೆ ಮತ್ತು ಪರಂಪರೆಯ ಸಂಘರ್ಷದಲ್ಲಿ ಮುದುಕಿ ತನ್ನ ನಂಬಿಕೆ, ಚಹರೆಗೆ ಬದ್ಧವಾಯಿತು. ಉಳಿದ ವಿಚಾರಗಳಲ್ಲಿ ಬೆರಗಾಗುವಷ್ಟು ಸಹಕಾರ ಕೊಟ್ಟಿತು. ತಾನು ಸತ್ತನಂತರವೂ ತನ್ನ ನಂಬಿಕೆಗೆ ದಕ್ಕೆಯಾಗಬಾರದೆಂದು ಜಾಗ್ರತೆಯಿಂದ ತನ್ನ ಹಳೆ ಪಳೆ ಸೀರೆ ಗಂಟು ಹಾಕಿಕೊಂಡು ತನ್ನ ನೆಲೆಗೆ ಹೊರಟಿತು.

"ಕುಂ.ವೀರಭದ್ರಪ್ಪ ಕತೆ ನಮ್ಮ ಕಾಲದ ಅತ್ಯುತ್ತಮರಚನೆಗಳಲ್ಲಿ ಒಂದು. ಏಕೆಂದರೆ ಅದು ಈ ಪ್ರಶ್ನೆಗಳಿಗೆ ಸರಳ ಉತ್ತರಗಳನ್ನಾಗಲೀ ಪರಿಹಾರಗಳನ್ನಾಗಲೀ ಸೂಚಿಸದೆ ಇಡೀ ಪ್ರಕ್ರಿಯೆಯನ್ನು ಸಮಸ್ಯಾತ್ಮಕಗೊಳಿಸುತ್ತದೆ. ಅದು ನೆಟ್ಟಕಲ್ಲುವಿನ ಅಕ್ಷರ ಮೋಹವನ್ನು ಅಲ್ಲಗೆಳೆಯುವುದಿಲ್ಲ. ಹಾಗೆಯೇ ಬಂಡೆವ್ವಜ್ಜಿಯ ಅಸ್ಮಿತೆಯ ಮೋಹವನ್ನೂ ಕೀಳಾಗಿ ನೋಡುವುದಿಲ್ಲ. 'ಪ್ರಗತಿಪರ' ಲೇಖಕರೆಂದು ಸಾಮಾನ್ಯವಾಗಿ ಗುರುತಿಸಲ್ಪಡುವ ಕುಂ.ವೀ. ಅವರ ಈ ಕಥನದಲ್ಲಿ ಲೇಖಕರ ಭಾವಪಕ್ಷಪಾತವು ತುಸು ಬಂಡೆವ್ವಜ್ಜಿಯ ಕಡೆ ವಾಲಿರುವುದು ಕುತೂಹಲಕಾರಿಯಾಗಿದೆ"[೬೯] ಎಂಬ ಟಿ.ಪಿ. ಅಶೋಕ ಅವರ ಮಾತುಗಳು ಸಮಂಜಸವೆನಿಸುತ್ತದೆ. 'ಮಹಾನವಮಿ'ಯ 'ಲೊಟಗಾಲೆ ಮುದುಕಿ' ಮತ್ತು 'ಕುಬುಸ'ದ 'ಬಂಡೆವ್ವಜ್ಜಿ'ಯರ ನಂಬಿಕೆ, ಮತ್ತು ದೈವಗಳಲ್ಲಿ ಬದಲಾವಣೆ ತರುವುದು ಸುಲಭವಲ್ಲ ಮತ್ತು ಅವರು ತಮ್ಮ ಸಾಂಸ್ಕೃತಿಕ ಚಹರೆಯನ್ನು ಬಿಟ್ಟುಕೊಡುವುದೂ ಇಲ್ಲ.

---

[೬೮] ಅದೇ, ಪು : ೩೩೮.

[೬೯] ಟಿ.ಪಿ. ಅಶೋಕ, ಕಥನ ಪ್ರೀತಿ, ೨೦೧೩, ಪು: ೩೦೭.

ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ'; ಉಗಾದಿ ಎಂಬ ಆಟವೂ' ಕತೆಯಲ್ಲಿ ಮುದುಕಿ ಸೊಸೆ ತಿಪ್ಪವ್ವನೊಂದಿಗೆ, ಮೊಮ್ಮಕ್ಕಳೊಂದಿಗೆ ಬದುಕು ನಡೆಸಿತ್ತು. ಮಗನನ್ನು ಕಳೆದುಕೊಂಡಿದ್ದರೂ ಎಲ್ಲಕ್ಕೂ ಸೊಸೆಯೇ ಕಾರಣವೆಂದು ಇಡೀ ದಿನ ದೂಷಿಸುತ್ತಾ ಅವಳ ಮೇಲೆ ಕೆಂಡಕಾರುತ್ತಿತ್ತು. ಮುದುಕಿ ತನ್ನ ಮನೆಯ ಕೇಡು-ಕೆಡಕುಗಳ ಸಮಸ್ತವನ್ನೂ ಸೊಸೆಗೆ ಹೊರಿಸಿ ದಿನಕ್ಕೆರಡು ಬಾರಿ ಹೀನಾಯವಾಗಿ ಬೈಯ್ಯುವುದು ದಿನಚರಿಯಾಗಿದ್ದು, ನೆರೆಹೊರೆಯವರ ಕುಮ್ಮಕ್ಕಿನಿಂದ ಅರ್ಭಟ ಇನ್ನೂ ಜೋರಾಗುತ್ತಿತ್ತು. ಸೊಸೆ ತಿಪ್ಪವ್ವ ದುಡಿದು ಅತ್ತೆ ಮತ್ತು ಮಕ್ಕಳ ಹೊಟ್ಟೆ ತುಂಬಿಸುತ್ತಿದ್ದರೂ ನೆಮ್ಮದಿ ಇರಲಿಲ್ಲ. ಗಂಡನನ್ನು ಕಳೆದುಕೊಂಡ ದುಃಖಕ್ಕಿಂತಲೂ ಅತ್ತೆಯ ಮಾತಿನ ಮೊನೆ ಇರಿಯುತ್ತಿತ್ತು.

ದುಶ್ಚಟಗಳಿಂದ ಆಸ್ತಿ ಕರಗಿಸಿ ಸತ್ತ ಗಂಡ, ಮಗಳ ಚಿಂತೆಯಲ್ಲಿ ಸತ್ತ ಅಪ್ಪ, ಚಿಕ್ಕ ಮಕ್ಕಳು, ಘಟವಾಣಿ ಅತ್ತೆ, ಬದುಕುವದಾರಿ ಮಂಜಾಗಿದ್ದರೂ ತಿಪ್ಪವ್ವ ತಾಳ್ಮೆ ಕಳೆದುಕೊಂಡವಳಲ್ಲ. ಅತ್ತೆಯ ಅಧೀನ-ಅಂಕೆಯಲ್ಲಿ, ಕಷ್ಟ-ನಿಷ್ಠುರಗಳ ನಡುವೆ ಸಾಲ ಪಡೆದು ಉಗಾದಿ ಹಬ್ಬ ಮಾಡಲು ಹೊರಟಿದ್ದು ಜೀವನ ಪ್ರೀತಿಗಿಂತ ಸಾಮಾಜಿಕ ಕಟ್ಟಲೆಮೀರಲಾಗದ ಅಭದ್ರ ಮನಸ್ಥಿತಿಯಿಂದೆನ್ನಬಹುದು.

ತಿಪ್ಪವ್ವ ಇನ್ನೂ ಮಧ್ಯ ವಯಸ್ಸು ಸಮೀಪಿಸಿದ ಆಕರ್ಷಕ ಮೈಕಟ್ಟಿನ ಹೆಂಗಸು. ಎಪ್ಪಾ.... ಎಣ್ಣಾ ಎಂದು ಕೂಲಿನಾಲಿ ಹುಡುಕಿಕೊಂಡು ಮನೆ ಮನೆ ಅಲೆದು ಕೆಲಸ ದೊರಕಿಸಿಕೊಂಡಿರುವುದುಂಟು. ಪಾತರದ ಎಂಕಣ್ಣ ಮಟಕಾ ಆಡಿ, ಆಡಿಸಿ ನಾಕು ಕಾಸು ಸಂಪಾದಿಸಿಕೊಂಡಿರುವಾತ. ಬೇ ತಿಪ್ಪವ್ವ... ಮರಾಣಿ ಯಂಗಿಡ್ರೀನಿನಾನೇಳ್ದಂಗೆ ಕೇಳ್ಕಂಡು ಇದ್ದುಬಿಡು ಎಂದು ಆಸೆ ತೋರಿಸಿದಾಗ ತಲೆ ಎತ್ತಿ ನೋಡಿದಾಕಿಯಲ್ಲ. ದೊಡ್ಡ ಮನುಷ್ಯೆ ತಿಪ್ಪವ್ವ.. ದೇವರು ಕೊಟ್ಟಿರುವ ಒಂದು ಗಂಡು ಒಂದು ಹೆಣ್ಣು ಮಕ್ಕಳನ್ನು ತನ್ನೆರಡು ಕಣ್ಣುಗಳಂತೆ ಇಟ್ಟುಕೊಂಡು ಅದಕ್ಕೆ ಹೊಟ್ಟೆ ತುಂಬಿಸಲು ಅಹರ್ನಿಶಿ ಶ್ರಮಿಸುತ್ತಿರುವ ಶ್ರಮ ಜೀವಿ ತಿಪ್ಪವ್ವ ಜೊತೆಗೆ ಲೊಟ ಲೊಟ ಹಚ್ಚುವ ಮುದುಕಿ ಬೇರೆ. ಆಗಲೇ ನೂರು ದಾಟಿದ ಹಣ್ಣು ಹಣ್ಣು ಮುದುಕಿ... ಅಂದರೆ ತಿಪ್ಪವ್ವಗೆ ಭೂಮಿ ತೂಕದ ಮನಸ್ಸಿದೆ. ಆಕೆ ಜಾಗದಲ್ಲಿ ಮೂಲಿಮನೆ ಸಿದ್ದಪ್ಪನ ಚಿಕ್ಕ ಸೊಸೆ ಇದ್ದಿದ್ದರೆ ಎಂದೋ ಕುತ್ತಿಗೆ ಹಿಚಿಕಿ ಕಣಗಿಲೆಬೇರು ತೇದು ಅಂಬಳಿಯಲ್ಲಿ ಮಿಕ್ಸುಮಾಡಿ ಕುಡಿಸಿ ಸುಡುಗಾಡಿಗೆ ಕಳಸಿಬಿಡುತ್ತಿದ್ದಳು.

ಕಿವಿಗೊಡದಿದ್ದರೂ ತಲೆಹೊಕ್ಕು ಮುದುಕಿಯ ಮಾತುಗಳು ಕಿಚ್ಚೆಟ್ಟವು. ಒಡಲು ಧಗಧಗ ಉರಿಯುತ್ತಿರುವ ಅನುಭವ. 'ಅಯ್ಯೋ ನನ್ನ ಕರುಮವೇ ದೇವ್ರೇ, ನನ್ನೂ ಸುಡ್ಗಾಡಿಗಿಟ್ಟು

ಉದ್ಧಾರ ಮಾಡೊ' ಎಂದು ದೈನ್ಯತೆಯಿಂದ ಬೇಡುವ ಮನಸ್ಸು. ಸೊಸೆ ತಿಪ್ಪವ್ವನಿಗೆ ದನಿಯಾಗ ಬಹುದಾಗಿದ್ದ ಅತ್ತೆ ಸೊಸೆಯ ಪ್ರತಿಯೊಂದು ನಡೆಗೂ ವ್ಯಂಗ್ಯ ವಿರೋಧ, ಆಕ್ರೋಶಗಳಿಂದ ಪ್ರತಿಕ್ರಿಯಿಸುವುದರಿಂದ ತಿಪ್ಪವ್ವನಿಗೆ ಮನೋಬಲ ನೀಡುವ ಆಸರೆಯಾಗಲೇ ಇಲ್ಲ.

"ಮನರಾ–ಉಗಾದಿ ಹಬ್ಬ ನೀನೇನು ನಂಗೆ ಸೀರೆ ತಂದೀಯಾ – ಕುಬುಸ ತಂದೀಯಾ, ನನ್ನ ಗಂಡನ ಕಾಲ್ದಾಗೆ... ನಿನ್ನ ಗಂಡನ ಕಾಲ್ದಾಗೆ ಹೊಸ ಬಟ್ಟೆ ತರದೆ ಹಬ್ಬ ಮಾಡ್ತೀದ್ರಾ ನೀನು ಸಣಿಯಂತೆ ಹೊಕ್ಕೊಂಡು ಮನ್ತದ ಮರ್ವಾದಿನ ಮಣ್ ಮಾಡಿಬುಟ್ಟಲ್ಲೇ... ನನ್ನ ಜಳಕಾಕ್ಕೆ ಕರೀತಿದಾಳಲಪ್ಪೋ. ನಿನ್ ನಾಲಿಗೆ ಸೇದಿಹೋಗ... ನಿನ್ನ ಸುಡುಗಾಡಿಗಿಕ್ಲಿ..."[೨೦] ಎಂದು ಮುದುಕಿ ಲಟಲಟ ಮುರಿದು ಸಾಪಳಿಸಿತು. ಶತ್ರುವಿನೊಂದಿಗಿನ ವ್ಯವಹಾರದಂತೆ ಸೊಸೆಯೊಂದಿಗೆ ವ್ಯವಹರಿಸುವ ಅತ್ತೆಗೆ ಮೊಮ್ಮಕ್ಕಳ ಜೊತೆಯಲ್ಲೂ ಭಾವನಾರಹಿತ ಸಂಬಂಧವೆನ್ನಬಹುದು.

"....ಶೂದ್ರ ಸಂಸ್ಕೃತಿ ತನಗಿಂತಲೂ ಕೆಳಜಾತಿಗಳನ್ನು ಕುರಿತಾದ ಆಕ್ರಮಣಕಾರಿಯಾಗಿರುವಂತೆಯೇ ತನಗಿಂತ ಮೇಲ್ಜಾತಿಗೆ ಶರಣಾಗಿರುವ ಒಂದು ಬಗೆ ಇದರಿಂದ ತಿಳಿಯುತ್ತದೆ"[೨೧] ಎಂಬ ಎಲ್ ಹನುಮಂತಯ್ಯ ಅವರ ಅಭಿಪ್ರಾಯವನ್ನು 'ಮಹಾನವಮಿ' ಮತ್ತು 'ರತ್ನ ಎಂಬ ಹುಡುಗಿಯೂ; ಉಗಾದಿ ಎಂಬ ಆಟವೂ' ಕತೆಗಳು ಪುಷ್ಟಿಕರಿಸುತ್ತವೆನ್ನಬಹುದು. ತಿಪ್ಪವ್ವ ತನ್ನ ಹಸಿದ ಮಕ್ಕಳಿಗಿಂತಲೂ ಅತ್ತೆಯ ಮಾತನ್ನು ವೇದವಾಕ್ಯದಂತೆ ಚಾಚೂ ತಪ್ಪದೆ ಪಾಲಿಸುವ ಅವಳಲ್ಲಿ ಸಂಪ್ರದಾಯದ ಹಿಡಿತವೇ ಬಿಗಿಯಾಗಿರುತ್ತದೆ.

"ಹೆಣ್ಣು ಶ್ರಮ ಜೀವಿ ವರ್ಗಕ್ಕೆ ಸೇರಿದ್ದಾಗಲೂ ಒಟ್ಟು ಹೋರಾಟದಲ್ಲಿ ಅವಳು ಹೆಣ್ಣು ಎಂಬ ಕಾರಣದಿಂದಾಗಿಯೇ ಗುರಿ ಅಥವಾ ಸಾಧನೆಗಳ ಅವಕಾಶದಿಂದ ವಂಚಿತಳಾಗುತ್ತಾಳೆ. ವ್ಯವಸ್ಥೆ ಎನ್ನುವ ದೃಷ್ಟಿಯೇ ಹಿಂಸೆಮೂಲದ್ದು, ಅದರಲ್ಲೂ ಮಹಿಳೆಯರ ಬದುಕನ್ನು ಆಕ್ರಮಿಸುವ ಕ್ರೌರ್ಯ ಉಳಿದೆಲ್ಲ ನೆಲೆಗಳ ಹಿಂಸೆಯನ್ನು ಮೀರಿಸುವಂತದ್ದು"[೨೨] ಎಂಬ ಮಾತು ಇಲ್ಲಿ ಉಲ್ಲೇಖನೀಯ. ಸೊಸೆ, ಮೊಮ್ಮಕ್ಕಳಿಗಿಂತ ಮುದುಕಿ ಜತನವಾಗಿ ಕಾಪಾಡಲು ಪ್ರಯತ್ನಿಸಿದ್ದು ಅರ್ಥಹೀನ ಆಚರಣೆಗಳನ್ನು ಎನ್ನಬಹುದು. ತನ್ನ ಗತಬದುಕಿನ ಬಗ್ಗೆ ಕೊಚ್ಚಿಕೊಳ್ಳುವ ಆಕೆಗೆ ಸೊಸೆ – ಮೊಮ್ಮಕ್ಕಳ ಭವಿಷ್ಯ, ಬದುಕಿನ ಬಗ್ಗೆ ಚಿಂತೆ ಕಾಡುವುದಿಲ್ಲ.

---

೨೦ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦. ಪು: ೨೧೮.
೨೧ ಎಲ್. ಹನುಮಂತಯ್ಯ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ೧೯೯೩. ಪು: ೩೨.
೨೨ ಅಕ್ಕರೆ, ವಿಜಯಾ ಚಿ. ಶ್ರೀನಿವಾಸರಾಜು (ಸಂ), ೧೯೯೯. ಪು: ೪೪.

ಕುಂ.ವೀರಭದ್ರಪ್ಪ ಅವರ 'ಭಗವತಿ ಕಾಡು' ಕತೆ ಪಿರಿಪಿರಿಯಿಂದಲೇ ಪ್ರಾರಂಭವಾಗಿ ಅತ್ತೆ-ಸೊಸೆಯ ಜಟಾಪಟಿಯಿಂದ ಸಾಗುತ್ತದೆ. ತಳವಾರನ ಮಗಳೆಂಬ ಹೆಮ್ಮೆಯನ್ನು ಅನುಕ್ಷಣವೂ ತಲೆಯಲ್ಲಿಟ್ಟುಕೊಂಡೇ ಸಂಸಾರ ನಡೆಸುತ್ತಿದ್ದಳು ನಾಗಮ್ಮ. ಅತ್ತೆ ಬಾಯಿಗೆ ಹೆದರದೆ ಎದುರುತ್ತರ ಕೊಡುತ್ತಾ ಗಂಡ-ಅತ್ತೆಗೆ ಬಗ್ಗದಿದ್ದರೂ ತನ್ನ ಸೋಮಾರಿ ಗಂಡನನ್ನು ಸರಿದಾರಿಗೆ ತರುವ ಬಗ್ಗೆ ಚಿಂತಿತಳಾಗುತ್ತಿದ್ದಳು.

'ರತ್ನ ಎಂಬ ಹುಡುಗಿಯೂ, ಉಗಾದಿ ಎಂಬ ಆಟವೂ' ಕತೆಯ ಸೊಸೆ ತಿಪ್ಪವ್ವನಂತಹವಳಲ್ಲ ನಾಗಮ್ಮ.

'ಆಗ್ಲ ರಾತ್ರಿ ಇಸಪೀಟೂ ಇಸಪೀಟು... ಯ್ಯೋನು ಕರುಮಾ ಮಾಡಿದ್ನೋ ಈ ಮುದುಕಿ ಮಗನ ಕೈಯಿ ಯಿಡಿಯಾಕೆ... ಬೊರ್ಲಿ... ಬೊರ್ಲಿ ದೋತ್ರಯಿಡ್ದು ಕ್ಯೋಳೇ ಬುಡ್ತೀನಿ... ನಿಂಗೇನು ಯೆಂಡ್ರೂ ಮಕ್ಳು ಬ್ಯೇಕಾ ಬ್ಯಾಡಾ ಅಂತ... ಬ್ಯಾಡಾ ಅಂತ ಯ್ಯೋಳಿ ಬುಡ್ಲಿ ... ಕಣಗ್ಲಿಬ್ಯೇರು ತೇದು ಮೊಕ್ಳಿಗೂ ಕುಡಿಸಿ ನಾನು ಸಾಯ್ತಿನಿ' ಎನ್ನುತ್ತಿರುವಾಗಲೇ ಅತ್ತೆ....

'ನನ್ನೂ ನನ್ ಮಗನ್ನೂ ಆಡಿಕೆಂತೀಯಾ... ನನ್ ಮೊಗ ಗಂಡ್ಸಲೇ... ಅವ್ನು ಇಸಿಪೀಟಾದ್ರು ಆಡ್ತಾನೆ ಟೇಮು ಬಂದ್ರೆ ಸೂಳ್ಯಾರ್ನಾರ ಮಾಡ್ತಾನೆ... ಅದ್ನ ಕ್ಯೇಳಾಕೆ ನೀನ್ಯಾವೂರ ಅಪ್ಪಾಜೆಪ್ನ ಮೊಗ್ಳೇ....'

"ಯಾವೋಳು ಯಾಕಾತೀನ್ಯೇ ... ನಾಗವ್ವ ಸೀರೆ ಮೇಲಿತ್ತಿ ಕಟ್ಟಿದಳಲ್ಲದೆ ತುರುಬನ್ನೂ ಬಿಗಿದು ಸಜ್ಜಾಗಿ ಹೇಳಿದಳು. ಥಾಳಿ ಕಟ್ಟಿಸ್ಕಂಡೀರೋವತ್ಗೆ ನಿನ ಕೂಟಾಗೆ ಥೂ ಛೀ ಅನ್ಸಿಗಂಸ್ಗಂತ ಬಿದ್ದಿದ್ದೀನಿ... ಮನಿ ಸ್ವಸಿ ಅನ್ನೋ ಖಬರಿಲ್ದೆ ಮಾತಾಡ್ತೀಯಾ.. ಆತ ನಿಂಗ ಮೊಗ ಆಗಿರಬವ್ದು. ನಾನಾತ್ನ ಹೆಂಡ್ತಿ... ಇಗೋ ಸ್ವಾಡು... ಕ್ವಳ್ಯಾಗ ಥಾಳಿ ಯಂಗ ಥಳಾ ಥಳಾ ಅಂತೈತಿ"....[೭೩] ಎಂದಳು.

"ಯ್ಯಾಳೂರು ಕಾಗೆ ಯೆಬುಸೋವ್ಕೆ ಥಾಳಿ ಒಂದ್ಕೇಡು... ಹ್ಹ್... ಹ್ಹ್... ಕ್ವಕ್... ಕ್ವಕ್... ಮುದುಕಿ ಹೇಳಿತು. ಸದಾ ಜಗಳ ತೆಗೆಯುತ್ತಿದ್ದ ಅತ್ತೆಗೆ ಮಾರುತ್ತರ ಕೊಡುತ್ತಲೇ ಇದ್ದ ತುಸು ಆಧುನಿಕತೆಯ ಮತ್ತು ಓದಿದ ನಾಗಮ್ಮ ತನ್ನ ಚಹರೆಗಾಗಿ ಅನುದಿನವೂ ಹೋರಾಟಮಾಡುತ್ತಲೇ ಎಲ್ಲವನ್ನೂ ತನ್ನ ಹತೋಟಿಗೆ ತರಲು ಪ್ರಯತ್ನಿಸುತ್ತಿರುತ್ತಾಳೆ. ಮುರುಕು ಕನ್ನಡಿಯಲ್ಲಿ ಪೌಡರ್ ಹಾಕಿಕೊಳ್ಳುತ್ತಾ ಮನೆ ಮುಂದಿನ ಬೇವಿನ ಮರಕ್ಕೆ ಹಗ್ಗ ಕಟ್ಟಿ ತನ್ನ ಮಗುವನ್ನು ತೂಗಬೇಕೆನ್ನುತ್ತಾ

---

೭೩ ಕುಂ.ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೫೦.

ಭರವಸೆಯಿಲ್ಲದ ಬದುಕಿನಲ್ಲಿ ಜೀವನ ಪ್ರೀತಿ ಕಳೆದುಕೊಳ್ಳದೆ ಸಂಸಾರ ನೂಕುತ್ತಿದ್ದಳು. ಪುಟ್ಟ ಮಗು, ಜಗಳಗಂಟಿ, ನಡತೆಯನ್ನೇ ಶಂಕಿಸುವ ಅತ್ತೆ, ಮೈಗಳ್ಳ ಗಂಡ, ನೆಮ್ಮದಿಕೊಡುವ ವಾತಾವರಣವಿಲ್ಲದಿದ್ದರೂ ತಾಳಿ ತೋರಿಸುತ್ತಾ, ರಟ್ಟೆ ಮುರಿದು ಸಂಸಾರ ಸಾಗಿಸುತ್ತಿದ್ದರೂ ಕಿಮ್ಮತ್ತಿನ ಬೆಲೆಯಿಲ್ಲದ ನಾಗಮ್ಮ ಗ್ರಾಮೀಣ ಸಮುದಾಯ ಹೆಣ್ಣು ಮಗಳಾಗಿದ್ದು ಬದುಕಿನುದ್ದಕ್ಕೂ ಹೋರಾಟ ಮಾಡಿಯೇ ಬದುಕುವುದು ವಾಸ್ತವದ ನೋಟ ಬೀರುತ್ತದೆ. ಗಂಡ ಕೊಡಬೇಕಾದ ಸಾಲಕ್ಕೆ ಬೇವಿನ ಮರ ಮಾರಿ ಮುಂಗಡ ಪಡೆದಿದ್ದನ್ನು ತಿಳಿದಾಗ ಅತ್ತೆ-ಸೊಸೆ ಭರಮ್ಯಾನನ್ನು ತರಾಟೆಗೆ ತೆಗೆದುಕೊಂಡಿದ್ದು ಸ್ತ್ರೀಯ ಸಂಗೋಪನಾ ಭಾವ ಮತ್ತು ಅಸ್ಮಿತೆಯೆನ್ನಬಹುದು.

ಸೆವುಡವ್ವ **"ಯ್ಯೋ ನಲೋ ಬಾಡ್ಯಾ...ಯಿಲ್ಲಿ ತಂಕ ಬಂದ್ಯಾ... ಇವತ್ತು ಮರಾಮಾರ್ತಿ ... ನಾಳೆ ಕಟ್ಕೊಂಡ ಹೆಂಡ್ತಿನ ಮಾರ್ತಿ... ಥೂ... ನಿನ ಜನಮಕಷ್ಟು ಬೆಂಕಿ ಆಕ..."**[೭೪]

ನಾಗವ್ವ 'ಬೈ ಮುದುಕಿ ಇಂಥೋನ ಕಟ್ಟಿಕೊಂಡು ಅದೆಂಗೆ ಬಾಳುವೆ ಮಾಡ್ಲಿ' ಎಂದಾಗ ಭರಮ್ಯಾಗೆ ತಲೆತಿರುಗಿದಂತಾಯಿತು. ಸೆವುಡವ್ವ ಸಡ್ಡು ಹೊಡೆದು ನಿಂತಾಗ, ಬೆಂಬಲಕ್ಕೆ ಸೊಸೆ ನಿಂತಾಗ ಗೌಡ ಅಂಜಿ ಪಿ.ಸಿ. ಕರೆಸಿದರೂ ಸೋಲು ಅನುಭವಿಸಿದ್ದು ಶ್ರಮಿಕರ, ದಲಿತರ ತೀವ್ರ ಪ್ರತಿರೋಧದಿಂದ ಗಳಿಸಿದ ಗೆಲುವೆನ್ನಬಹುದು. ಪ್ರಕೃತಿ-ಪರಂಪರೆ ಉಳಿಸಲು ಅತ್ತೆ-ಸೊಸೆ ಅನಿವಾರ್ಯವಾಗುವುದು ಸ್ತ್ರೀಯ ಅಸ್ಮಿತೆಯೆನ್ನಬಹುದು. ಸೂಕ್ಷ್ಮಗ್ರಹಿಕೆಯ ನಾಗಮ್ಮ ತನ್ನ ನಡೆಯ ಬಗ್ಗೆ ಸ್ಪಷ್ಟತೆಯಿದ್ದುದರಿಂದಲೇ ಎಲ್ಲ ತೊಡಕುಗಳ ವಿರುದ್ಧ ಹೋರಾಟ ನಡೆಸಿದ್ದು ಸಶಕ್ತದನಿಯಾಯಿತು. ಆದರೆ 'ರತ್ನ ಎಂಬ ಹುಡುಗಿಯೂ : ಉಗಾದಿ ಎಂಬ ಆಟವೂ' ಕತೆಯ ತಿಪ್ಪವ್ವ ಅನಕ್ಷರಸ್ಥೆಯಾದ್ದರಿಂದಲೋ ಏನೋ ನಾಗವ್ವಳಷ್ಟು ದಿಟ್ಟತನ ತೋರಿಸಲು ಆಗಲೇ ಇಲ್ಲ.

"ಮಹಿಳೆ ಎಂದರೆ ಹಾವ-ಭಾವಗಳಲ್ಲಿ ನಯವಂತಿಕೆಯುಳ್ಳವಳು, ಮೃದು ಸ್ವಭಾವದ ಜೀವಪೋಷಕ ಅಂತಃಕರಣವುಳ್ಳವಳು ಎಂದೇ ಅವಳ ಮೂಲಪ್ರವೃತ್ತಿಯನ್ನು ವಿವರಿಸಲಾಗುತ್ತದೆ ಮಹಿಳೆ ದಿಟ್ಟತನ ತೋರಿದರೂ ಅವಳನ್ನು ನೋಡುವ ಬಗೆ ಬದಲಾಗಿಲ್ಲ"[೭೫] ಎಂಬ ಉಲ್ಲೇಖ ಸಮಂಜಸವೆನಿಸುತ್ತದೆ.

---

೭೪ ಅದೇ, ಪು : ೭೨.

೭೫ ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳವಳಿಗಳು, ಪು: ೯.

ರಾಮಣ್ಣ ಅವರ 'ಮಹಾನವಮಿ' ಕತೆಯ ಮುದುಕಿ 'ನಿಂಗಕ್ಕ' ಕುಂವೀ ಅವರ ರತ್ನ ಎಂಬ ಹುಡುಗಿಯೂ; ಉಗಾದಿ ಎಂಬ ಆಟವೂ', ಕತೆಯ 'ಮುದುಕಿ', 'ಭಗವತಿ ಕಾಡಿನ' ಕತೆಯ 'ಸೆವುಡವ್ವ', ಮುದುಕಿಯರು ಸೊಸೆಯರೊಂದಿಗೆ ಮಾನವೀಯ ನಡವಳಿಕೆಯಲ್ಲಿ ಹಿಂದೆ ಸರಿಯುತ್ತಾರೆ. ಆದರೆ ತಳವರ್ಗದ 'ಕುಬುಸ' ಕತೆಯ ಮುದುಕಿ ಬಂಡೆವ್ವಜ್ಜಿ ಕುಗ್ರಾಮ ವಾಸಿಯಾಗಿದ್ದರೂ ಬದುಕಿನ ನೆಲೆಯಲ್ಲಿ ಎತ್ತರದಲ್ಲಿ ನಿಲ್ಲುತ್ತಾಳೆನ್ನಬಹುದು. ಒಟ್ಟಿನಲ್ಲಿ ಇಬ್ಬರು ಕಥೆಗಾರರು ತಮ್ಮ ಕಥೆಗಳಲ್ಲಿ ಸಂಸ್ಕೃತಿಯ ಬೇರುಗಳಾಗಿ ವಯಸ್ಸಾದ ಮುದುಕಿಯರನ್ನು ಚಿತ್ರಿಸಿರುವುದು ಮೌಲಿಕವಾದ ಅಂಶವೆನ್ನಬಹುದು. ಸೊಸೆಯರ ಬದುಕಿಗೆ ಭದ್ರವಾದ ನೆಲೆಯನ್ನು ನೀಡುವುದರಲ್ಲಿ ಇವರುಗಳ ನಖರಾತ್ಮಕ ಗುಣಗಳು ಸಕಾರಾತ್ಮಕ ಅಂಶಗಳಾಗಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದು.

ಕುಂ.ವೀರಭದ್ರಪ್ಪ ಅವರ 'ಕಳೇಬರ' ಕತೆಯ ಭಾಗೀರಥಿ ವಾದ್ಯ ರಿಪೇರಿ ಮಾಡುವ ಬಸ್ರಾಜವನ್ನು ಇಷ್ಟ ಪಟ್ಟು ಲಗ್ನವಾಗಿದ್ದು ಸಂಗೀತದ ಮೋಹದಿಂದ. ಉಳ್ಳವರ ಮನೆ ಹುಡುಗಿ ಹರಕುಬಾಯಿ, ಮುರುಕು ಬಾಯಿ, ಕೊಳಕುಬಾಯಿಯ ಅತ್ತೆ ನಿಂಗವ್ವನಿಗೆ ಆಹಾರವಾಗಬೇಕಾಯಿತು. ತನಗೊಂದು ಮಗುವಾದರೆ ತನ್ನತ್ತೆ ಶಾಂತವಾಗಬಹುದೆಂದು ಹಲುಬುತ್ತಿದ್ದಳು. ಗಂಡನ ಪ್ರೀತಿ-ಕಾಳಜಿಯಿಲ್ಲದೆ, ಗಯ್ಯಾಳಿ ಅತ್ತೆ ಜೊತೆ ಅನುದಿನವೂ ಬೇಯುತ್ತಿದ್ದರೂ ತಂಬೂರಿ ಚಿನ್ನಪ್ಪನ ಸಾವಿನಲ್ಲಿ ತನ್ನ ಗಂಡನೊಂದಿಗೆ ನಾಲ್ಕು ಮಾತಾಡಬಹುದೆಂದು ಕಾಯುತ್ತಿದ್ದವಳಿಗೆ ಅತ್ತೆಯ ಚಿತಾವಣೆಯಿಂದ ಅದೂ ಇಲ್ಲವಾಯಿತು.

"ನಿಶ್ಚಿತವಾಗಿ ಮಾನವ ಜನಾಂಗದಲ್ಲಿ ಅತ್ಯಂತ ತೀವ್ರ ಶೋಷಣೆಗೆ ಒಳಗಾಗಿರುವ ವರ್ಗವೆಂದರೆ ಮಹಿಳೆಯರು"[೭೬] ಎಂಬ ಲೋಹಿಯಾ ಅವರ ಅಭಿಪ್ರಾಯದಂತೆ ಸೊಸೆ ಒಂದು ಸಹಜೀವಿ ಎಂದು ಪರಿಗಣಿಸದ ಅತ್ತೆ, ಬೇಜವಾಬ್ದಾರಿ ಗಂಡನಿಂದ ಶೋಷಣೆಗೆ ಒಳಗಾಗುತ್ತಾಳೆ. ಭಾಗೀರಥಿಗೆ ಪ್ರಶ್ನಿಸುವ, ಪ್ರತಿಭಟಿಸುವ ನೈತಿಕ ಹಕ್ಕು ಇದ್ದರೂ ಪ್ರಶ್ನಿಸಲಾರದ ಮನಸ್ಥಿತಿಗೆ ಬರಲು ಸಮಾಜವೇ ಕಾರಣವೆನಿಸುತ್ತದೆ.

ಮಗನನ್ನು ಉದ್ದೇಶಪೂರ್ವಕವಾಗಿ ಬಸ್ಸು ಹತ್ತಿಸಿ ತಾನೇ ಸೊಸೆಗೆ **"ಹಾಳಾದೋಳು, ಮುಂಡೆ, ಚಿನಾಲಿ"**[೭೭] ಎಂದು ಜಡಿಮಳೆಯಂತೆ ಬೈಯ್ಯಲು ಶುರುಮಾಡಿದ್ದು ಹೆಣ್ತನಕ್ಕೆ ಆದ

---

೭೬ ಎ.ಎಸ್. ಪ್ರಭಾಕರ (ಸಂ), ಲೋಹಿಯಾ ವರ್ತಮಾನದ ಮುಖಾಮುಖಿ, ೨೦೧೨, ಪು: ೧೭೨.

೭೭ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೧೬೭.

ಅವಮಾನವೆನ್ನಬಹುದು. ಅಧೀನ ಬದುಕಿನ ಭಾಗೀರಥಿಯ ಶೋಷಣೆ ಬಹುಮುಖಿಯಾಗಿದ್ದು ಅತ್ತೆ ನಿಂಗವ್ವ ಸೊಸೆಯನ್ನು ಗ್ರಹಿಕನೆಲೆಯಲ್ಲೇ ಶೋಷಿಸುತ್ತಿದ್ದಳು. ಭಾಗೀರಥಿ ತನ್ನ ಮೇಲಿನ ಹಿಡಿತವನ್ನು ಸಡಿಲಿಸಿಕೊಳ್ಳಲು ಹುಡುಕಿದ ದಾರಿ ಮಾತ್ರ ನೈತಿಕನೆಲೆಗಟ್ಟಾಗಿರಲಿಲ್ಲ. ಹೆಣ್ಣು ಹೆಣ್ಣಿನೊಂದಿಗಿನ ಸುಲಲಿತ ಬದುಕು ಸಾಧ್ಯವಾಗಬೇಕಾದ ಸಾಧ್ಯತೆ ಕುರಿತು ಕತೆ ವಿಚಾರ ಮಾಡುವಂತಿದೆ. ಅತ್ತೆಯ ಪಾತ್ರವು ಶೋಷಣೆಯ ಪರವಾಗಿ ಚಿತ್ರಿತವಾಗಿದ್ದರೆ, ಸೊಸೆ ನೈತಿಕವಾಗಿ ಉನ್ನತವಾಗಿ ಚಿತ್ರಿತವಾಗಿ, ಅವಳು ದುಡಿದು ಸಂಸಾರ ನಡೆಸಬೇಕೆಂಬುದು ಅಲಿಖಿತ ಒಪ್ಪಂದದಂತೆ ಕಾಣುತ್ತದೆ. ಅತ್ತೆಯ ಶೋಷಣೆಯಲ್ಲೂ ಜೀವನ ಪ್ರೀತಿ ಕಳೆದುಕೊಳ್ಳದಿರುವ ಸೊಸೆ ಪಾತ್ರಗಳು ಮಹತ್ವವೆನಿಸುತ್ತವೆ.

ರಾಮಣ್ಣ ಅವರ 'ಸ್ವಾರ್ಥ' ಕತೆಯ ಪುಟ್ಟಸ್ವಾಮಿಗೌಡ ಮಕ್ಕಳ ಮದುವೆಯಾಗಿ ಸೊಸೆಯರು ಬಂದಿದ್ದರೂ ಹೆಣ್ಣಿನ ಚಪಲದಿಂದ ಹೊರತಾಗಿರಲಿಲ್ಲ. ಸಮಾಜದಲ್ಲಿ ದ್ವಿಮುಖ ವ್ಯಕ್ತಿತ್ವಕ್ಕೆ ಉದಾಹರಣೆಯಾಗಿರುವ ಆತ ಗುರುಬೋಧನೆ ತೆಗೆದುಕೊಂಡು ಊರಹೊರಗೆ ಮಠದವಾಸಿಯಾಗಿದ್ದರೂ ಎಲ್ಲಾ ದೌರ್ಬಲ್ಯಗಳು ಅವನಲ್ಲಿದ್ದು ಹೊರಗೆ ಕಾಣುವ ಸಾತ್ವಿಕತೆ ಒಳಗಿರಲಿಲ್ಲ. ಹೆಂಡತಿ ಸತ್ತಿದ್ದರೂ ಅಮಾಯಕ ಪುಟ್ಟಮ್ಮಳನ್ನು ತನ್ನೆಡೆಗೆ ಸೆಳೆದುಕೊಂಡು ದೈಹಿಕತೃಷೆ ತೀರಿಸಿಕೊಳ್ಳುತ್ತಿದ್ದ. ಪುಟ್ಟಸ್ವಾಮಿಗೌಡನ ಇನ್ನೊಂದು ಮುಖದ ಅರಿವಿದ್ದ ಮಗ ಮೂರುಕಾಸಿನ ಬೆಲೆ ಕೊಡದೆ ಎಲ್ಲರೆದುರು ತಂದೆಯ ಮಾನತೆಗೆಯುತ್ತಿದ್ದನು.

"ನಿನ್ನ ಬೇಳೆ ಎಲ್ಲಾನೂ ಬಯಲಿಗೆಳೀತೀನಿ, ಲೇ ! ಕಳ್ಳ ಗುರುಬೋಧನೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಚ್ಚೋಕೆ ನೋಡೀಯಾ? ನಿನ್ನ ಹಣೆ ವಿಭೂತಿ ಬೇರೆ ಕೇಡು"[೭೮] ಎಂದು ಕೈ ಮುಂದಕ್ಕೆ ತಂದು ನಡು ಬೀದಿಯಲ್ಲಿ ಹಂಗಿಸಿದ ಮಗ ರಾಮಚಂದ್ರನ ಮಾತುಗಳಿಗೆ ಪುಟ್ಟಸ್ವಾಮಿಗೌಡ ನೊಂದುಕೊಂಡರೂ ತನ್ನ ನಡವಳಿಕೆ ಸರಿಪಡಿಸಿಕೊಳ್ಳಲು ತಯಾರಿರಲಿಲ್ಲ. ಗುರುಬೋಧನೆ ತೆಗೆದುಕೊಂಡ ಮೇಲೆ ಸಂತನಂತಿರಬೇಕಾದ ಆತ ತನ್ನ ಕಾಮನೆಗಳನ್ನು ಹತ್ತಿಕ್ಕಿರಲಿಲ್ಲ. ಮಠ ಕಟ್ಟಿಕೊಂಡು ತನ್ನ ಮನೆಯವರನ್ನು ಸಮಾಜವನ್ನು ವಂಚಿಸುತ್ತಿದ್ದನು.

ಕುಂ.ವೀರಭದ್ರಪ್ಪ ಅವರ 'ಸಿದ್ದನು ಗುರಿ ಇಟ್ಟಿದ್ದು' ಕತೆಯಲ್ಲೂ ಮಠದ ಸ್ವಾಮಿ ದೈಹಿಕ ಕಾಮನೆಗಳಿಗೆ ಸೋತವನಾಗಿದ್ದು ಜನರನ್ನು ಸ್ವಾಮಿ ವೇಷದಿಂದಲೇ ವಂಚಿಸುತ್ತಿದ್ದ. ಮಠದ

---

೭೮ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೧೧೦.

ಕಲ್ಯಾಣಿಯಲ್ಲಿ ಮೀನು ಹಿಡಿಯಲು ಹೋಗಿ ಬಾಲಕ ಸಿದ್ದ ಸಿಕ್ಕಿಬಿದ್ದಾಗ ಧರಧರನೆ ಎಳೆದೊಯ್ದು ಸ್ವಾಮಿಗಳ ಮುಂದೆ ನಿಲ್ಲಿಸಿದರು. 'ತಾನು ಯಾರ ವರಪ್ರಸಾದದಿಂದ ಹುಟ್ಟಿದ್ದನೋ ಅಂತಹ ಸ್ವಾಮಿಗಳಿಗೆ ತೀರಸನಿಹದಲ್ಲಿ ನಿಂತಿರುವುದು ತನ್ನ ಪೂರ್ವ ಜನುಮದ ಸುಕುರುತ ಎಂಬುದಾಗಿ ಭಾವಿಸುವಷ್ಟರಲ್ಲಿ ಬಲವಾದ ಬಲಗಾಲು ಜಾಡಿಸಿ ಆ ಸ್ವಾಮಿ ಒದ್ದು ಬಿಟ್ಟಿದ್ದ'.

'ಕಳೆ' ಕತೆಯ ರಾಮಚಂದ್ರ ತಂದೆಯನ್ನು ಮುಖಾಮುಖಿಯಾಗಿ ಅವಮಾನ ಮಾಡುತ್ತಿದ್ದನು. ತಂದೆಯ ಯೋಗ್ಯತೆಯನ್ನು ಎಲ್ಲರ ಮುಂದೆ ಹರಾಜು ಹಾಕುತ್ತಿದ್ದರು. ಆದರೆ ಕುಂವೀ ಕತೆಯ 'ಸಿದ್ದ' ಎಲ್ಲಾ ಗೊತ್ತಿದ್ದರೂ ಗೊತ್ತಿಲ್ಲದಂತೆ ವರ್ತಿಸಬೇಕಾದ ಅನಿವಾರ್ಯತೆಯಿಂದ ಒಳಗೆ ಅಸಹನೆಯನ್ನು ತಡೆಹಿಡಿದಿದ್ದ. ಮಠದಸ್ವಾಮಿಯನ್ನು ಹುಡುಗನಾದವನು ಎದುರಿಸಲು ಸಾಧ್ಯವಿಲ್ಲ ಎಂಬ ಸತ್ಯ ಅವನಿಗೆ ತಿಳಿದಿತ್ತು.

"ಅವನವ್ವ ಆ ಒಂದು ದಿನ ಮಠ ಆವರಣದಲ್ಲಿಯೇ ಲಟಕ್ಕನೆ ಹಡೆದಿದ್ದ ಗಂಡುಕೂಸೇ ಸಿದ್ದನೆಂಬ ಅಭಿದಾನಧರಿಸಿ ದೊಡ್ಡವನಾಗಿದ್ದು ಮತ್ತು ಅದೇ ಸ್ವಾಮಿಗಳಿಂದ ಒದೆ ತಿಂದಿದ್ದು ಏನಕೇನ ಪ್ರಕಾರೇಣ ಪುಣ್ಯವೇ ಸರಿ"[೭೯] ತನ್ನ ಹುಟ್ಟಿಗೆ ಕಾರಣನಾದ ಸ್ವಾಮಿ 'ಮೀನಿನಂಥ ಅಮಾಯಕ ಪ್ರಾಣಿಗಳನ್ನು ಹಿಂಸಿಸುತ್ತೀಯಾ, ಮಠವನ್ನು ಅಪವಿತ್ರಗೊಳಿಸಿದಿಯಾ' ಮಾತುಗಳು ಅವನ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ. ಬಡಹೆಂಗಸಿಗಾದ ಅನ್ಯಾಯದ ಮುಖ ಯಾರಿಗೂ ತಿಳಿಯುವುದೇ ಇಲ್ಲ.

'ಸ್ವಾರ್ಥ' ಕತೆಯ ರಾಮಚಂದ್ರ ಗುಡಿಸಲಿಗೆ, ಹುಲ್ಲಿನ ಮೆದೆಗೆ ಬೆಂಕಿ ಹಾಕಿ ತನ್ನ ಆಕ್ರೋಶ ತೀರಿಸಿಕೊಂಡರೆ 'ಸಿದ್ದನು ಗುರಿ ಇಟ್ಟದ್ದು' ಕತೆಯ ಸಿದ್ದ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಸ್ವಾಮಿಗೆ ಕಲ್ಲಿನಿಂದ ಗುರಿಯಿಟ್ಟು ಹೊಡೆದು ತನ್ನ ತಾಯಿಗಾದ ಅನ್ಯಾಯ, ತನಗಾದ ಅವಮಾನ, ಹೊಡೆತಗಳಿಗೆ ಪ್ರತ್ಯುತ್ತರ ನೀಡಿ ಆಕ್ರೋಶವನ್ನು ತಣಿಸಲು ಯತ್ನಿಸಿದ. ರಾಮಚಂದ್ರನದು ನೇರ ಪ್ರತಿರೋಧವಾದರೆ ಬಾಲಕನಾದ ಸಿದ್ದನದು ಪರೋಕ್ಷ ಪ್ರತಿರೋಧವೆನಿಸಿದರೂ ರಾಮಚಂದ್ರನ ಪ್ರತಿರೋಧ ಅವನ ತಂದೆ ತಲುಪುವ ಸಾಧ್ಯತೆಯಿದ್ದರೆ, ಸಿದ್ದನದು ತಲುಪುವ ಸಾಧ್ಯತೆ ಕ್ಷೀಣವೆನಿಸುತ್ತದೆ. **"ಮಹಿಳೆಯರು ಶೂದ್ರರು, ಯಾಕೆಂದರೆ ಅವರು ವ್ಯವಸ್ಥಿತವಾಗಿ ಅನ್ಯಾಯವನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ"**[೮೦] ಎಂಬ ಲೋಹಿಯಾರವರ ಅಭಿಪ್ರಾಯ ಕತೆಗೆ

---

೭೯ ಕುಂವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣ, ೨೦೧೦, ಪು: ೩೯೧.

೮೦ ಎ.ಎಸ್. ಪ್ರಭಾಕರ (ಸಂ), ಲೋಹಿಯಾ ವರ್ತಮಾನದ ಮುಖಾಮುಖಿ, ೨೦೧೨, ಪು: ೧೭೩.

ಪೂರಕವೆನಿಸುತ್ತದೆ. ಪುಟ್ಟಸ್ವಾಮಿಗೌಡ ಮತ್ತು ಮಠದ ಸ್ವಾಮಿಯ ಅನೀತಿಯುತ ಸೋಗಿನ ಬದುಕು ಹಲವಾರು ವೇಳೆ ಗುಟ್ಟಾಗಿಯೇ ಸಮಾಜದಲ್ಲಿ ಉಳಿದುಬಿಡುತ್ತದೆ.

ರಾಮಣ್ಣ ಅವರ 'ಗರ್ಜನೆ' ಕತೆಯ ಮರಿನಂಜ ತನ್ನ ಹುಟ್ಟಿನ ವಿಚಾರ ತಿಳಿದಾಗ ಕಾದಕಲ್ಲಿನ ಮೇಲೆ ಮಲಗಿದವನಂತೆ ಹೊರಳಾಡಿದ. ನಮ್ಮಪ್ಪ ಯಾರು? ಹೇಳು ಎಂದು ಸುಬ್ಬಮ್ಮನಿಗೆ ದುಂಬಾಲು ಬಿದ್ದಾಗ,

"ನಿಮ್ಮವ್ವನ ಮೊದಲನೆ ಗಂಡಸತ್ತ ಮೇಲೆ, ನಿಮ್ಮವ್ವನ ಆಸ್ತಿಪಾಸ್ತಿ ಎಲ್ಲಾ ಪಟೇಲನ ಪಾಲಾಯ್ತು. ಆಮೇಲೆ ನೀನು ಹುಟ್ಟಿದೆ. ನೀನು ನಾಲ್ಕು ವರ್ಷದವನಿದ್ದಾಗ ನಿಮ್ಮವ್ವ ಕಾಲರ ತಗುಲಿ ಸತ್ತೋದ್ಲು"[೮೧] ಎಂದು ಹೇಳಿದ ಮಾತುಗಳನ್ನು ಕೇಳಿ ಬೆಟ್ಟ ಮೇಲೆ ಬಿದ್ದಂತಾಗಿ ಕಣ್ಣು ಕೆಂಪಾಗುವವರಗೂ ಅತ್ತಿದ್ದ.

ಕುಂ.ವೀರಭದ್ರಪ್ಪ ಅವರ 'ಸಿದ್ದ', ರಾಮಣ್ಣನವರ 'ಮರಿನಂಜ' ನಂತಹ ಹುಡುಗರು ತಮ್ಮ ಹುಟ್ಟಿನ ಬಗ್ಗೆ ತಮ್ಮ ತಪ್ಪಿಲ್ಲದಿದ್ದರೂ ಅವಮಾನ, ಚುಚ್ಚುಮಾತು, ನಿಂದನೆಯನ್ನು ಅನುಭವಿಸಬೇಕಾಗುತ್ತದೆ. ಸಮಾಜದಲ್ಲಿ ವೇಶ್ಯೆಯರ ಮಕ್ಕಳು, ಅತ್ಯಾಚಾರದಿಂದ ಹುಟ್ಟುವ ಮಕ್ಕಳು, ಅನೈತಿಕ ಸಂಬಂಧದಿಂದ ಹುಟ್ಟುವ ಮಕ್ಕಳು ಅನುಭವಿಸುವ ಸಂಕಟ-ವೇದನೆ, ಅವಹೇಳನ ಸಾಮಾಜಿಕ ಅವಮಾನವೆನ್ನಬಹುದು. ಅಪಹಾಸ್ಯ ಮಾಡುವಾಗ ಸಮಾಜದಲ್ಲಿ ಲಿಂಗಬೇಧವಿಲ್ಲದಿದ್ದರೂ ಸಾಮಾಜಿಕ ನಿಂದನೆ ಯುವ ಮನಸ್ಸುಗಳನ್ನು ಘಾಸಿಗೊಳಿಸುವುದು ಸಾಮಾಜಿಕ ಸ್ವಾಸ್ಥಕ್ಕೆ ಪೂರಕವಲ್ಲ.

ರಾಮಣ್ಣನವರ 'ಕಣಿವೆಯ ಅಂಚು' ಕತೆಯ ಸರೋಜ ಬಂಜೆ ಎಂಬ ಸಾಮಾಜಿಕ ನಿಂದನೆ ಸಹಿಸಲಾಗದೆ ಹೇಗಾದರೂ ಮಗು ಪಡೆಯಲೇಬೇಕೆಂದು ನಿರ್ಧರಿಸುತ್ತಾಳೆ. **"ಅವಳಿಗೆ ಮಗುವಿನ ಬಯಕೆಯ ಒತ್ತಡ ತಡೆಯಲಾಗಲಿಲ್ಲ. ಹೆಣ್ಣಾಗಿ ಹುಟ್ಟಿದ್ದಕ್ಕೆ ಸಫಲತೆ ಪಡೆಯಲೇ ಬೇಕು, ಆಸೆ ತಡೆಯಲಾರದೆ ಸರೋಜಕ್ಕ ಮೇಲೆದ್ದು ಹಿಂದಲ ಹಟ್ಟಿಯ ಕಡೆ ಪಾದಗಳೇ ಕಣ್ಣಾಗಿ ನಡೆದಳು. ಕತ್ತಲೆಯಲ್ಲಿ ಕೆಂಗಣ್ಣ ಮಲಗಿದ್ದ ಜಾಗವನ್ನು ಪತ್ತೆ ಹಚ್ಚಿದಳು."**[೮೨]

ಸರೋಜಳಿಗೆ ಮಕ್ಕಳಾಗದಿದ್ದದ್ದು ಅವಳ ಶೋಷಣೆಗೆ ಕಾರಣವಾದಾಗ ಅವಳು ಕೆಂಗಣ್ಣನನ್ನು ಬಯಸಿದಾಗ ಅವನು ನಿರಾಕರಿಸುತ್ತಾನೆ. ಸರೋಜಳ ಕೈಯನ್ನು ಕಣ್ಣಿಗೆ

---

೮೧ ಕಣಜ, ಲೋಹಿಯಾ ಪ್ರಕಾಶನ, ೨೦೧೧. ಪು: ೧೩೫.

೮೨ ಅದೇ, ೨೦೧೧, ಪು: ೧೬೨.

ಒತ್ತಿಕೊಂಡು, "ಅಕ್ಕ ಈ ಕೈಯಿಂದ ನನಗೆ ಅನ್ನ ಹಾಕಿದ್ದೀ, ತಲೆಗೆ ಎಣ್ಣೆ ಹಾಕಿದ್ದೀರಿ ಅಣ್ಣಾರೂ ನನ್ನ ತಮ್ಮನಂಗ ಕಂಡ್‌ಕೊಂಡವ್ರೆ, ನಿನ್ನ ಕೈಯಿಂದ ವಿಷ ಬೇಕಾದ್ರೂ ನಗ್ತಾ ನಗ್ತಾ ತಿಂದೇನೂ... ಆದ್ರೆ ಉಂಡ ಮನೆಗೆ, ನಂಬಿದೋರ್ಗೆ ಎರಡು ಬಗೀ ಅಂತ ನಮ್ಮವ್ವ ನನ್ನ ಹೆತ್ತಿಲ್ಲ ಕಣಕ್ಕ"[೮೩] ಕೆಂಗಣ್ಣನ ಈ ನುಡಿಗಳ ಒಂದೊಂದು ಅಕ್ಷರವೂ ಒಂದೊಂದು ಚೂಪುಕಲ್ಲಾಗಿ ಸರೋಜಕ್ಕಳ ಅಂತರಂಗವನ್ನು ಕುಟುಕಿದವು. ಹೆಣ್ಣನ್ನು ಪ್ರಧಾನವಾಗಿ ಶೋಷಿಸುವಲ್ಲಿ ಬಂಜೆತನವೂ ಒಂದಾಗಿರುವಾಗ ಅದರ ನಿವಾರಣೆಗಾಗಿ ಅವಳು ನಾನಾ ಪ್ರಯತ್ನಗಳನ್ನು ನೈತಿಕ ಮತ್ತು ಅನೈತಿಕ ಮಾರ್ಗದಲ್ಲಿ ಪ್ರಯತ್ನಿಸುವುದುಂಟು.

'ಹೆಣ್ಣುತನವೆಂಬುದು ಮೊದಲೇ ಇರುವುದಿಲ್ಲ. ಹೆಣ್ಣಾಗಿ ರೂಪುಗೊಳ್ಳುವ ಕ್ರಿಯೆಯು ಎಡೆಬಿಡದೆ ಸಂಭವಿಸುತ್ತಲೇ ಇರುತ್ತದೆ' ಎಂದು ಸೀಮೋನ್ ಬೋವಾ ಹೇಳುತ್ತಾರೆ. ಸಮಾಜದಲ್ಲಿ ನಲುಗುವ ಹೆಣ್ಣು ಪ್ರತಿಭಟಿಸುವುದು ವಿರಳವೆಂದೇ ಹೇಳಬಹುದು, ಬಂಜೆತನವನ್ನು ತನ್ನ ತಪ್ಪು ಎಂದು ಭಾವಿಸಿದ ಸರೋಜ ಪ್ರತಿಭಟಿಸುವುದಿಲ್ಲ. ಆದರೆ ರಾಮಣ್ಣನವರು ಕೆಂಗಣ್ಣ ಮತ್ತು ಸರೋಜ ಇಬ್ಬರನ್ನೂ ಪಾಪಪ್ರಜ್ಞೆ ಕಾಡದಂತೆ ಕಾಯುತ್ತಾರೆನ್ನಬಹುದು.

ಕುಂ.ವೀರಭದ್ರಪ್ಪ ಅವರ 'ಗರ್ಭ' ಕತೆಯಲ್ಲಿ ಚಂದ್ರವ್ವಳನ್ನು ಬಂಜೆಯೆಂದು ಅತ್ತೆಯಿಂದ ಮೊದಲುಗೊಂಡು ಎಲ್ಲರೂ ಹಂಗಿಸುತ್ತಿದ್ದರು.

ಅತ್ತೆ ಚೌಡವ್ವ 'ನಾನು ಇವೊತ್ತು ಮಣ್ಣಾಕ್ತೆನೋ, ನಾಳೆ ಮಣ್ಣಾಕ್ತೆನೋ... ಮೊಮ್ಮಗನ್ನ ನೋಡೋಕಾಗ್ಲಿಲ್ಲ... ನಾನು ಬ್ಯಾಡ್ಯಾಂದ್ರೂ ಕೇಳ್ದಂಗೆ ಬಂಜೆ ಸೊಸಿ ಕಟ್ಕೊಂಬಂದಿ' ಅಂತು

"ಎಮ್ಮೆ ಬೆದೀಗೆ ಬಂದೈತಾ ಬೆದೀಗೆ ಬಂದಿದ್ರೆ ಅದೇ ಕ್ವಾಣಾನ ಉಡ್ಕೊಂಡು ಓಯ್ತಿತ್ತು..."[೮೪]

ಚೌಡವ್ವ ಸೊಸೆ ಮತ್ತು ಎಮ್ಮೆಯನ್ನು ಹೋಲಿಸಿ ಟೀಕಿಸುತ್ತಿದ್ದಾಗ ಚಂದ್ರವ್ವ ಇಷ್ಟವಿಲ್ಲದಿದ್ದರೂ ಸಿವ್ಲಿಂಗಪ್ಪನ ಜೊತೆ ದೇಹಹಂಚಿಕೊಳ್ಳುತ್ತಾಳೆ, ಗರ್ಭಿಣಿಯೂ ಆಗುತ್ತಾಳೆ. ಈ ವಿಚಾರ ಗುಟ್ಟಾಗಿ ಉಳಿಯದಿದ್ದರೂ ಚಂದ್ರವ್ವ ಯಾರನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಎಮ್ಮೆಯೂ ಸಿವ್ಲಿಂಗನ ಮನೆಯ ಕೋಣದಿಂದ ಗಬ್ಬವಾಗುತ್ತದೆ. ಅತ್ತೆ ಚೌಡವ್ವ ಸೊಸೆಗೆ ಮುಟ್ಟುನಿಂತಿದೆಯೆಂದು

---

೮೩ ಅದೇ, ೨೦೧೧, ಪು : ೧೬೩.

೮೪ ಕುಂ. ವೀರಭದ್ರಪ್ಪ, ಬರಿಕಥೆಯಲ್ಲಪ್ಪೋ ಅಣ್ಣ, ೨೦೧೧, ಪು: ೮೫೨.

ಸಂಭ್ರಮಿಸುವುದು ದಾರಿಯಾವುದಾದರೂ ಆಶಯವೇ ಅವಳಿಗೆ ಮುಖ್ಯವಾಗುತ್ತದೆ. 'ಕಣಿವೆಯ ಅಂಚು' ಕತೆಯ ಸರೋಜ ತಾಯಿಯಾಗದಿದ್ದರೂ, 'ಗರ್ಭ' ಕತೆಯ ಚಂದ್ರವ್ವ ಗರ್ಭಿಣಿಯಾದರೂ ನೈತಿಕತೆಯ ಅಂಚನ್ನು ದಾಟುವುದು ಸಮರ್ಥನೀಯವಲ್ಲವೆನಿಸುತ್ತದೆ.

ರಾಮಣ್ಣ ಅವರ 'ಬಾವಿಗೆ ಬಿದ್ದದ್ದು ದೆವ್ವ' ಕತೆಯಲ್ಲಿ ಸುಶೀಲಮ್ಮನಿಗೆ ಅನೈತಿಕ ಸಂಬಂಧದಿಂದ ಗಂಡುಮಗು ಹುಟ್ಟಿರುತ್ತದೆ. ಆ ಮಗು ಆಕಸ್ಮಿಕವಾಗಿ ಸಾವನ್ನಪ್ಪಿದಾಗ ಊರವರೆಲ್ಲರೂ ಸುಶೀಲಮ್ಮನನ್ನೇ ಸಂಶಯದಿಂದ ನೋಡಿದರು. ಹೆತ್ತೊಡಲ ಸಂಕಟವನ್ನು ಯಾರೂ ಅರ್ಥಮಾಡಿಕೊಳ್ಳದೆ ಚುಚ್ಚು ಮಾತುಗಳನ್ನಾಡತೊಡಗಿದಾಗ ಮಾನಸಿಕ ಸಮತೋಲನ ಕಳೆದುಕೊಳ್ಳುತ್ತಾಳೆ. ಹೆತ್ತ ಸಂಕಟ ಒಂದೆಡೆಯಾದರೆ ಬದುಕಿದ್ದ ಮಗಳ ಮಾತಿನ ಕೂರಂಬುಗಳು ಸೇರಿದವು. ಸುಶೀಲಮ್ಮ ಮಾನಸಿಕ ಅಸಮತೋಲನಕ್ಕೆ ಕಾರಣವಾದ ವಿಚಾರವನ್ನು ಮಾನವೀಯವಾಗಿ ನೋಡಿದ್ದರೆ ಅವಳು ಬಾವಿಗೆ ಬೀಳುತ್ತಿರಲಿಲ್ಲ. ಸಾಮಾಜಿಕ ನಿಂದನೆಯ ಒತ್ತಡ ಅವಳನ್ನು ಬದುಕಗೊಡಲಿಲ್ಲ.

"ಸವಾಲುಗಳೇ ಹೆಣ್ಣನ್ನು ಕಟ್ಟುತ್ತಾ ಹೋಗುತ್ತವೆ ಎನ್ನುವುದು ಕ್ಲೀಷೆಯಾದರೂ, ಪರಮಸತ್ಯ ಎನ್ನುವುದನ್ನು ನೂರು ಸನ್ನಿವೇಶಗಳಲ್ಲಿ ಗಮನಿಸಿಯೂ ಸ್ವತಃ ತಾನೇ ಎದುರಿಸಿಯೂ ಕೆಲವು ನಿರ್ಣಾಯಕ ಗಳಿಗೆಗಳಲ್ಲಿ ಹೆಣ್ಣು ಅಧೀರಳಾಗಿ ತತ್ತರಿಸಿ ಮತ್ತೆ ತನ್ನನ್ನು ತಾನೇ ಸಂಭಾಳಿಸಿಕೊಂಡು ಮುಂದುವರಿಯುವುದು, ಹೋಗುತ್ತಾ ಬರುತ್ತಾ ಗರಗಸದಂತೆ ನಿಂದನೆಯ ಮಾತುಗಳಿಂದ ಕೊಯ್ಯುವ ಅವಳಿಗೆ ಹೊರಗಿನ ಸಹಾಯ ಸಿಕ್ಕುವುದು ಕಡಿಮೆ"[೮೫] ಎಂಬ ಎಂ.ಎಸ್. ಆಶಾದೇವಿಯವರ ಅಭಿಪ್ರಾಯದಂತೆ ಸರೋಜಮ್ಮ ಮೊದಲಿಗೆ ಸವಾಲುಗಳನ್ನು ಎದುರಿಸಿ ಬದುಕಿದರೂ ನಂತರ ಅಧೀರಳಾಗಿ ಬಿಟ್ಟಳು. ಸ್ತ್ರೀ ತನ್ನ ಅಸ್ತಿತ್ವವನ್ನು ಪುರುಷ ಮತ್ತು ಸಮಾಜದ ನೆರಳಲ್ಲಿ ಹುಡುಕಬೇಕಾದ ಸಂದರ್ಭದಲ್ಲಿ, ಸಾಮಾಜಿಕ ಒತ್ತಡವೂ ಅವಳನ್ನು ಅನೈತಿಕತೆಗೆ ದೂಡುತ್ತದೆನ್ನಬಹುದು. ಆದರೆ ಆನಂದ ಅವರ 'ನಾನು ಕೊಂದ ಹುಡುಗಿ' ಕತೆಯಲ್ಲಿ ಅವಳ ಆತ್ಮಸಾಕ್ಷಿಯನ್ನು ಎಚ್ಚರಿಸಿದಾಗ ಜೀವವನ್ನೇ ಕೊನೆಗಾಣಿಸಿಬಿಡುತ್ತಾಳೆ.

ರಾಮಣ್ಣ ಅವರ 'ತಾಯಿ' ಕತೆಯಲ್ಲಿ ಇಬ್ಬರು ಗ್ರಾಮೀಣ ಹೆಂಗಸರಾದ ಬೋರಮ್ಮ ಮತ್ತು ಉರುಗಮ್ಮ ಅನಕ್ಷರಸ್ಥರಾಗಿದ್ದರೂ ತಮ್ಮದೇ ರೀತಿಯಲ್ಲಿ ಚಂದ್ರಸೆಟ್ಟಿ ಮಾಡುತ್ತಿರುವ ಅನ್ಯಾಯದ ಬಗ್ಗೆ, ಟೆನೆಸ್ಸಿ ಆಕ್ಟ್, ಕಾನೂನು, ನುಂಗುಬಾಕತನ, ಕಛೇರಿಗಳ ಕಾರ್ಯವೈಖರಿ,

---

೮೫ ಎಂ.ಎಸ್. ಆಶಾದೇವಿ, ಪ್ರಜಾವಾಣಿ, ೨೦.೦೯.೨೦೧೫, ಪು: ೪.

ಗ್ರಾಮಲೆಕ್ಕಿಗನ ಲಂಚಗುಳಿತನದ ಬಗ್ಗೆ ಚರ್ಚಿಸುವುದು ಊರು-ಕೇರಿಗಳಲ್ಲಿ ಮಾನವೀಯ ಅರಿವು, ಜ್ಞಾನದ ಬೇರು ಆಳವಾಗಿ, ಗಟ್ಟಿಯಾಗಿ ನಿಲ್ಲಬೇಕಾದ ಸಾಧ್ಯತೆ ಬಗ್ಗೆ ಕತೆ ವಿಚಾರ ಮಾಡುತ್ತದೆ. **"..... ಕೈಲಾಗದೋರ ಕಣ್ಣೇಲಿ ನೀರು ಕೆಡಗುದ್ರೆ.... ಆ ಪಾಪ ಏಳೇಳು ಜಲ್ಮಾನು ಬುಡ್ದೆ ಕಾಡ್ತದೆ"**[೮೬] ಎಂದು ಬೋರಮ್ಮ ಹೇಳಿದಾಗ ಉರುಗಮ್ಮನ ಸೊಸೆ ಕೆಂಡಾಮಂಡಲವಾಗುತ್ತಾಳೆ. ಉರುಗಮ್ಮ ತನ್ನ ಗ್ರಾಮಲೆಕ್ಕಿಗ ಮಗ ಪುಟ್ಟರಾಜನ ಅನ್ಯಾಯ, ಅಕ್ರಮಗಳನ್ನು ಸಹಿಸದೆ ತಿರುಗಿಬೀಳುತ್ತಾಳೆ.

"ಅದೇ ಚನ್ನಮ್ಮನ, ಸೆಟ್ಟಿ ಜಮೀನು ವ್ಯವಹಾರದೇಲಿ ನೀನು ಪಾಣೆತಿದ್ದಿ ಅವಳ ಮನೆ ಹಾಳು ಮಾಡೋಕೆ ನಿಂತಿದ್ದೀಯಂತಲ್ಲ ಹಂಗ್ ಮಾಡಬ್ಯಾಡ"

"ನಿನಗೆ ಕೂಲಿನಾಲಿ ಮಾಡಿ, ನಿಮ್ಮಪ್ಪ ಸತ್ತಮ್ಯಾಲೆ ಒಬ್ಬರ ಕೈಲಿ ಬೆಟ್ಟು ತೋರ್ಸದಂಗೆ ಓದಿಸಿದ್ದು ಒಬ್ಬರ ಮನೆ ಹಾಳು ಮಾಡ್ಲಿಕಲ್ಲಕಣ್ಲ ಮಗ, ನಮ್ಮಿಂದ ನಾಕ್ ಜನಕೆ ಉಪಕಾರ ಆಗಬೇಕು. ಸುಳ್ಳು ಬರೋದರ ಕೈಗೆ ಕ್ವಾಷ್ಟಬತ್ತದೆ ಅಂತಾರೆ"[೮೭]

'ಧರ್ಮ ಕರ್ಮ ನೋಡಪ್ಪ_ ನಿಂಗೂ ಒಂದು ಗಂಡುಮಗ ಅದೆ. ಮುಂದೆ ಅದೂ ಬಾಳಿ ಬದುಕಬೇಕು. ನಿರಪರಾಧಿಗಳ ಅಯ್ಯೋ ಅನ್ನಿಸಬಾರ್ದು'_ ಎಂದು ತಾಯಿ ಹೇಳಿದರೂ ಮಗ ಗಣನೆಗೆ ತೆಗೆದುಕೊಳ್ಳದಿರುವುದು ಮನುಷ್ಯ ಸಂಬಂಧಕ್ಕಿಂತ ಪುಟ್ಟರಾಜನಿಗೆ ಹಣ ಮುಖ್ಯವಾಗುತ್ತದೆ. ಸೊಸೆ, ಪುಟ್ಟರಾಜ, ಉರುಗಮ್ಮ ಒಟ್ಟಾಗಿದ್ದರೂ ಅಲ್ಲಿ ಇದ್ದದ್ದು ಅನುಕೂಲಸಿದ್ಧಾಂತದ ಕೃತಕಸಂಬಂಧವೆನ್ನಬಹುದು. ಒಟ್ಟಾಗಿದ್ದರೂ ಎಲ್ಲರ ಮನಸ್ಸಿನಲ್ಲಿ ಕಾಡುತ್ತಿದ್ದ ವಿಚಾರಗಳು ಬೇರೆಯಾಗಿದ್ದು ಅಪರಿಚಿತರಂತೆ ಬದುಕುತ್ತಿರುತ್ತಾರೆ. ಅಲ್ಲಿ ಭಾವನಾತ್ಮಕ ಸಂಬಂಧ ಇಲ್ಲದಿದ್ದರೂ ಒಟ್ಟಿಗೆ ಇರಬೇಕಾದ ಅನಿವಾರ್ಯತೆ ಇರುತ್ತದೆ. ಮಗ ಮಾಡುತ್ತಿರುವ ಅನ್ಯಾಯದಿಂದ ಉರುಗಮ್ಮನಿಗೆ ತಳಮಳ ಹೆಚ್ಚಾಗಿ ಅನ್ಯಾಯ ತಪ್ಪಲಿ ಎಂದು ಹರಕೆ ಹೊತ್ತು ಪಾಪ-ಪುಣ್ಯ, ಧರ್ಮ-ಕರ್ಮಗಳ ಬಗ್ಗೆ ಚಿಂತೆ ಮಾಡಿ ಹೈರಾಣಾಗುತ್ತಾಳೆ. ಎ.ಸಿ. ಸಾಹೇಬರು ವಿವಾದಗ್ರಸ್ಥ ಸ್ಥಳದಲ್ಲಿ ವಿಚಾರಣೆ ಮಾಡುತ್ತಿದ್ದಾಗ ಉರುಗುಮ್ಮ ಆವೇಶದಿಂದ ಬಂದು ಮಗನ ಅನ್ಯಾಯವನ್ನು ನಿರ್ದಾಕ್ಷಣ್ಯವಾಗಿ ಹೇಳಿ ದುಃಖಿಸುತ್ತಾಳೆ.

---

೮೬ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೪೦೧.

೮೭ ಅದೇ, ಪು : ೪೦೨.

"ನಿನ್ನಂಥ ಪಾಪಿ ನನ್ನ ಮಗನ್ನ ಹೆರೋ ಬದ್ಲು ಒಂದು ಕಲ್ಲುಗುಂಡ್ನೋ ಒಂದು ಕೊಳಕು ಮಂಡಲದ ಹಾವ್ನೊ ಹೆರಬೇಕಾಗಿತ್ತು. ನಾನೇನೋ ಸುಳ್ಳು ಬೊಗಳ್ತಾ ಇರೋಳು? ನಿನ್ನ ನಾಲಿಗೆಗೆ ಉಳಬೀಳ"[೮೮] ಎಂದು ಕಿರುಚುತ್ತಾಳೆ.

ಎ.ಸಿ. ಪುಟ್ಟಸ್ವಾಮಿಗೆ 'ನಿರಕ್ಷರ ಕುಕ್ಷಿಯಾದ ಈ ನಿಷ್ಪಾಪವ್ಯಕ್ತಿಯಿಂದ ಇಲ್ಲಿರೋರು, ನಾನು ನೀನು ಎಲ್ಲ ಕಲಿಯಬೇಕಾದ್ದು ಬಹಳ ಇದೆ' ಎಂದರು. ಮಗ ತಪ್ಪೊಪ್ಪಿಕೊಂಡಾಗ ತಾಯಿ ಹೃದಯಕರಗಿ ನೀರಾಗಿ, ತಾಯ್ತನ ನಿರುಮ್ಮಳವಾಗಿ ಮಗನನ್ನು ತಿದ್ದಿದ ಜೀವ ಸಾರ್ಥಕತೆಯಿಂದ ಜೀವ ತ್ಯಜಿಸಿದಾಗ ತಾಯಿ ಮಗನ ಸಂಬಂಧದ ಮೌಲ್ಯವೃದ್ಧಿಸಿತು. ಶುದ್ಧವಾದ ಮನಸ್ಸು, ಶುದ್ಧವಾದ ಚಿಂತನೆ, ಶುದ್ಧವಾದ ಹೃದಯದಿಂದ 'ತಾಯಿ' ಕತೆ ಹೆಣ್ಣಿನ ಧೀಶಕ್ತಿಯ ಕತೆಯೆನಿಸಿ, ಚರ್ಚೆ, ಲಹರಿ, ಸಂಭಾಷಣೆಯಿಂದ ಸಾಮಾನ್ಯತೆಯೇ ವಿಜೃಂಭಿಸುತ್ತದೆ.

ರಾಮಣ್ಣ ಅವರ 'ಕರುಣಾಳು ಬಾ ಬೆಳಕೆ' ಕತೆ ವೈದ್ಯೆಯೊಬ್ಬಳ ಧನದಾಹದಿಂದ ತಾಯಿ-ಮಗು ಸಾವನ್ನಪ್ಪುತ್ತಾರೆ. ಗರ್ಭಿಣಿ ಸರೋಜಳಿಗೆ ಸೂಕ್ತ ವೈದ್ಯೋಪಚಾರದೊರತಿದ್ದರೆ ಬದುಕುವ ಸಾಧ್ಯತೆಯಿರುವುದನ್ನು ಸುಶಿಕ್ಷಿತ ವೈದ್ಯೆ ಬಡತನದ ಬಗೆಗಿನ ತಿರಸ್ಕಾರದಿಂದ ನಿರಾಕರಿಸುವುದು ವೃತ್ತಿಯ ಘನತೆಗೆ ತಕ್ಕುದಾಗಿರಲಿಲ್ಲ. ವೈದ್ಯೆಯ ಪತಿ ಡಾ॥ ಈಶ್ವರ್ ಕೂಡ ಜೀವ ಉಳಿಸುವ ವಿಚಾರವನ್ನು ಲಘುವಾಗಿ ಪರಿಗಣಿಸುವುದು ವೈಯಕ್ತಿಕ ಹಿತಾಸಕ್ತಿಗಾಗಿ ಮೌಲ್ಯಗಳು ದೂಳೀಪಟವಾಗುತ್ತಿರುವ ಸಾರ್ವಜನಿಕ ಕ್ಷೇತ್ರದಲ್ಲಿ ಆಸ್ಪತ್ರೆಯೂ ಸೇರಿ ಹೋಗಿರುವುದು ಸಹಿಸಲಾರದ ವಿಚಾರವಾಗಿದೆ. ವೈದ್ಯದಂಪತಿಗಳ ಧನದಾಹಕ್ಕೆ, ಕ್ರೌರ್ಯಕ್ಕೆ, ಅಸಹಾಯಕ ಮುಗ್ಧ ಜೀವಿಗಳು ಬಲಿಯಾಗುತ್ತಾರೆ. 'ತಾಯಿ' ಕತೆಯ ಅನಕ್ಷರಸ್ಥ 'ಉರುಗುಮ್ಮ', 'ಕರುಣಾಳು ಬಾ ಬೆಳಕೆ' ಕತೆಯ ವೈದ್ಯೆ ಡಾ. ನೀಳಾದೇವಿ ಸಮಾಜದಲ್ಲಿ ಇರಬಹುದಾದ ಎರಡು ವಿರುದ್ಧ ಧ್ರುವಗಳಾಗಿವೆ.

ರಾಮಣ್ಣ ಅವರ 'ಕೆಂಪುಹುಂಜ' ಕತೆಯಲ್ಲಿ ನಿಂಗಕ್ಕ ತಾನು ಬಹು ಅಕ್ಕರೆಯಿಂದ ಸಾಕಿದ್ದ ಕೆಂಪು ಹುಂಜ ನಾಪತ್ತೆಯಾದಾಗ ತನ್ನ ಬದುಕನ್ನೇ ಕಳೆದುಕೊಂಡವಳಂತೆ ಹುಡುಕತೊಡಗುತ್ತಾಳೆ. ನಿಂಗಕ್ಕ ಹುಂಜವನ್ನು ಉತ್ಕಟವಾಗಿ ಪ್ರೀತಿಸುತ್ತಿದ್ದು ತನ್ನ ಬದುಕಿನ ಸುಖ-ದುಃಖಗಳನ್ನು ಅದರಲ್ಲಿ ಕಾಣಬಲ್ಲವಳಾಗಿದ್ದಳು. ಇಡೀ ಕೇರಿಯ ಮನೆಮನೆಗಳಿಗೆ ಹೋದ ನಿಂಗಕ್ಕ,

---

೮೮ ಅದೇ, ಪು : ೪೦೮.

"ನಮ್ಮ ಕೆಂಪುಂಜ ಕಂಡ್ರಾ, ನಮ್ಮ ಕೆಂಪುಂಜ ಕಂಡ್ರಾ, ಇಲ್ಲೆಲ್ಲಾರ ಬಂದಿತ್ತ?... ಯಾವೊತ್ತು ಇಂಗಾಗಿರ್ಲಿಲ್ಲ. ಮುಸ್ಸಂಜೆಗೆ ಸರಿಯಾಗಿ ಎಲ್ಲಿದ್ದರೂ ಬಂದ್ಬುಡ್‌ತಿತ್ತು. ನಿಮ್ಮ ಯಾಟೆಗೀಟೆ ಜೊತೆಲೇನಾರ ಅಡ್ಕೊಂಡು ಬಂದ್‌ಗಿಂದಿದ್ರೋ ಯಂಗವ್ವ?"[೭೯]

ಹುಂಜ ಕಣ್ಮರೆಯಾಗಿದ್ದನ್ನು ಅವಳಿಗೆ ಸಹಿಸಲು ಸಾಧ್ಯವಲ್ಲದ ವಿಚಾರವಾಗಿತ್ತು. ಹುಂಜದ ಹುಡುಕಾಟದಲ್ಲಿ ಓರಗಿತ್ತಿಯೇ ಅನುಮಾನದ ಮುಖ್ಯಗುರಿಯಾಗಿ ಬಿಡುತ್ತಾಳೆ. ಪ್ರಪಂಚವನ್ನೇ ಕಳೆದುಕೊಂಡಂತೆ ಪರದಾಡಿ ಬಿಡುತ್ತಾಳೆ. ಅವಳ ಹುಡುಕಾಟದಲ್ಲಿ ಅನುಮಾನ, ಅಸೂಯೆ, ಸಂಗೋಪನೆ, ದ್ವೇಷ ಮಾನವ ಸ್ವಭಾವದ ಹಲವು ಭಾವಗಳು ಅನಾವರಣಗೊಳ್ಳುತ್ತವೆ.

"ರಾಮಣ್ಣನವರ 'ಕೆಂಪುಹುಂಜ' ಕತೆಯ ಆರಂಭವೂ ದೇವನೂರ ಮಹಾದೇವ ಅವರ 'ಒಡಲಾಳ'ದ ಪ್ರಾರಂಭವೂ ಒಂದೇ ಆದರೂ ಎರಡೂ ಕತೆಗಳ ನಿರ್ವಹಣೆ ಮತ್ತು ಸಮಾಪ್ತಿ ಭಿನ್ನವಾಗಿದೆ. 'ಒಡಲಾಳ'ದ ಮೇಲೆ 'ಕೆಂಪುಹುಂಜ'ದ ಪ್ರಭಾವವಿರುವಂತೆ ತೋರುತ್ತವೆ"[೮೦] ಎಂಬ ಭಗವಾನ್‌ರ ಅಭಿಪ್ರಾಯ ಉಲ್ಲೇಖನೀಯವಾಗಿದೆ. ಎರಡೂ ಕತೆಗಳಲ್ಲೂ ಲೇಖಕರು ಒಂದು ಚೌಕಟ್ಟನ್ನು ನಿರ್ಮಿಸಿಕೊಂಡಿದ್ದಾರೆ. ನಿಂಗಕ್ಕ ಮತ್ತು ಸಾಕಕ್ಕ ಅವರಲ್ಲಿನ ಪಾಲನೆಯೇ ಕತೆಯಲ್ಲಿ ದೊಡ್ಡ ಥಿಯರಿಯಾಗುತ್ತದೆ. ಎರಡೂ ಕತೆಗಳ ಸಾಮಾನ್ಯ ದೈನಿಕ ವಿವರಗಳಲ್ಲಿ ಸೃಜನಶೀಲತೆ ಕಾಣಬಹುದು.

"... ಮೂಲದ್ರವ್ಯ ಗ್ರಾಮಸಂಸ್ಕೃತಿಯ ಸಮೃದ್ಧ ಬದುಕಿನಲ್ಲಿದೆ. ಥಾಮಸ್ ಹಾರ್ಡಿಯ ಕೃತಿಗಳು Wessex ಪ್ರದೇಶದ ಒಂದೇ ಆವರಣದಲ್ಲಿ ನಡೆಯುವಂತೆ ರಾಮಣ್ಣನವರ ಕತೆಗಳೂ ಕೂಡ ಬಹುತೇಕ ಮಂಡ್ಯದ ಪರಿಧಿಯೊಳಗೇ ನಡೆಯುತ್ತವೆ"[೮೧] ಎಂಬ ವಿದ್ವಾಂಸರ ಅಭಿಪ್ರಾಯದಂತೆ ರಾಮಣ್ಣನವರ ಕಥೆಗಳು ಗ್ರಾಮೀಣ ಬದುಕನ್ನು ತನ್ನ ಸುತ್ತಮುತ್ತಲಿನಲ್ಲಿಯೇ ಕಟ್ಟಿಕೊಳ್ಳುವುದರಿಂದ ಅವರ ಕತೆಗಳು ಪ್ರಾದೇಶಿಕ ನೆಲೆಗಟ್ಟಿನ ಕತೆಗಳಾಗಿವೆ.

ನಿಂಗಕ್ಕ ಹುಂಜ ಹುಡುಕುವುದರಲ್ಲಿ ಮತ್ತು ಓರೆಗಿತ್ತಿಯನ್ನು ಬೈಯ್ಯುವುದರಲ್ಲಿ ಸಮಾನಾಂತರವಾಗಿ ತೊಡಗಿಸಿಕೊಳ್ಳುತ್ತಾಳೆ. ಅವಳ ಹುಡುಕಾಟ ಓರಗಿತ್ತಿಯ ಸುತ್ತಲೇ ಗಿರಕಿ

---

೭೯ ಅದೇ, ಪು : ೧೨೮.

೮೦ ಕೆ.ಎಸ್. ಭಗವಾನ್, ಕನ್ನಂಬಾಡಿ, ೧೯೮೬, ಪು: ೨೮.

೮೧ ಚದುರಂಗ, ಅಲೆಮನೆ, ಜೆ.ಟಿ. ವೀರಪ್ಪ (ಸಂ), ೧೯೯೫. ಪು: ೫.

ಹೊಡೆಯುತ್ತದೆ. ಅವಳದು ಬದುಕಿರುವ ಸಾಧ್ಯತೆಯ ಹುಡುಕಾಟವಾಗಿಲ್ಲದೆ ಸಾವಿನ ಹುಡುಕಾಟವಾಗಿಬಿಡುತ್ತದೆ. ಗ್ರಾಮೀಣರಲ್ಲಿ ಪ್ರಾಣಿ ಪಕ್ಷಿಗಳಿಗೂ ಮನುಷ್ಯನಷ್ಟೇ ಮಹತ್ವವಿರುತ್ತದೆ ಎಂಬುದನ್ನು ಮನಗಾಣಬಹುದು. ಜೀವಪರವಾದ ಹುಡುಕಾಟ ಇಲ್ಲಿನ ಮೌಲ್ಯವಾಗುತ್ತದೆ. ಗಂಡನ ಸಮಾಧಾನದ ಮಾತುಗಳೂ ನಿಂಗಕ್ಕನಿಗೆ ಹಿಡಿಸಲಿಲ್ಲ.

"ಚೆಂದುಳ್ಳಿ ಕೆಂಪುಂಜ ಮನೇಗೆ ಬರ್ಲಿಲ್ವಲ್ಲ. ಎಲ್ಲಾನು ಹುಡ್ಕಿ ಸಾಕಾಯ್ತು. ಸಾಕ್ದೋಳು ನನಗೆ ಹೊಟ್ಟೆ ಉರಿಯೂದಿಲ್ವೆ. ಹೊಟ್ಟೇಲಿ ಹುಟ್ಟುದ್ ಮಗನ ಸಾಕಿದಂಗೆ ಸಾಕಿದ್ದೆ – ಕಣಜದ ಭತ್ತ, ವಾಡೆರಾಗಿ ಹಾಕಿ ನನಗೆ ಹೊಟ್ಟೆ ಉರಿಯೂದಿಲ್ವೆ ಅಂತೀನಿ, ಅವರ ಸುಳಿ ಹಾಳಾಗ್ಲಿ ಅಂತೀನಿ, ಸುಮಸುಮನೆ ಬೈಯ್ಯಾಕೆ ನಾನು ಅಪ್ಪನ್ಗೆ ಹುಟ್ಟಿವ್ನಿ – ಅಡನಾಡಿಯಲ್ಲ ಕನಹಾಕು."

"ಇನ್ನಾರು ಕೆಂಪುಂಜ ಮುರ್ಕೋ ಧೈರ್ಯ ಮಾಡಾರು? ಇವಳೇ ಈ ಕಲಕೇತಿಯೇ ಮುರಿದಿರೋದು ನಾ ಕಾಣನೇ ಭಗವಂತ"[೯೨] ನಿಂಗಕ್ಕ ಸಣ್ಣತನ, ಅಸೂಯೆ, ದ್ವೇಷವನ್ನು ಮೀರಿದ ಉದಾರನೆಲೆಯಲ್ಲಿ ಹುಡುಕಿದ್ದರೆ ಹುಂಜಸಿಗಬಹುದಿತ್ತಾದರೂ ಅವಳಿಗೆ ವಾರಗಿತ್ತಿಯೇ ಮುಖ್ಯಗುರಿಯಾಗಿ ಬಿಡುತ್ತಾಳೆ. ನಿಂಗಕ್ಕನ ತಲೆ ಮೇಲೆ ಹುಂಜಹಾರಿದಾಗ ತನ್ನ ಶಾಪ ತನಗೆ ತಾಗಿದಂತಾಗಿ ಅಘಾತದಿಂದ ಸಾಯುತ್ತಾಳೆ. ಹುಂಜ ಮತ್ತು ವಾರಗಿತ್ತಿ ಬದುಕಿ ಶಪಿಸಿದವಳು ಸಾಯುತ್ತಾಳೆ. ತನ್ನ ಸಂಗೋಪನೆಗೆ ಬಂದ ವಿರೋಧವನ್ನು ತೀವ್ರವಾಗಿ ಪ್ರತಿಭಟಿಸುತ್ತಾಳೆ. ಪಾಲನೆಯ ಸಂವೇದನೆಯನ್ನು ನಿಂಗಕ್ಕನಲ್ಲಿ ಕಾಣಬಹುದು.

ಕುಂ.ವೀರಭದ್ರಪ್ಪ ಅವರ 'ಭಗವತಿ ಕಾಡು' ಕತೆಯ ಅತ್ತೆ ಸೆವುಡವ್ವ ಮತ್ತು ಸೊಸೆ ನಡುವಣ ಸಂಬಂಧ ಅಷ್ಟಕಷ್ಟೇ ಆದರೂ ಮನೆ ಮುಂದಿನ ಬೇವಿನ ಮರವನ್ನು ಮಗನ ಚಿತಾವಣೆಯಿಂದ ಕಡಿಯಲು ಬಂದಾಗ ತೀವ್ರವಾಗಿ ಪ್ರತಿರೋಧಿಸುತ್ತಾರೆ. ಅತ್ತೆ ಮತ್ತು ಸೊಸೆಯಲ್ಲಿನ ಸಂಗೋಪನಾ ಸಂವೇದನೆಯೇ ಅವರನ್ನು ಒಂದುಗೂಡಿಸಿತಲ್ಲದೆ ಮರ ಉಳಿಸಲು ಎಲ್ಲಕ್ಕೂ ತಯಾರಾಗಿ ನಿಲ್ಲುವುದು ತಾಯ್ತತನ ಅಸ್ಮಿತೆಯಿಂದೆನ್ನಬಹುದು. 'ಕೆಂಪುಹುಂಜ' ಕತೆಯಲ್ಲಿ ಹುಂಜದ ಹುಡುಕಾಟದಲ್ಲಿ ನಿಂಗಕ್ಕ ವಿಫಲತೆ ಕಂಡರೆ ಕುಂ.ವೀರಭದ್ರಪ್ಪ ಅವರ 'ಭಗವತಿಕಾಡು'ಕತೆಯಲ್ಲಿ ಮರ ಉಳಿಯುವುದು ಹೊಸ ಸಾಧ್ಯತೆಯ ಹೊಳಹು ಕಂಡುಬರುತ್ತದೆ.

---

೯೨ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೧೩೦.

ರಾಮಣ್ಣ ಅವರ 'ಗಂಗಾ', 'ಮಾನಭಂಗ', ಕುಂವೀ ಅವರ 'ನಾಯಿಗಳು', ಕಮಲೆ ಪ್ರೌಢೆಯಾದದ್ದು' ಕತೆಗಳಲ್ಲಿ ಹೆಣ್ಣಿನ ಮೇಲಾಗುವ ಲೈಂಗಿಕ ಹಿಂಸೆ, ಕ್ರೌರ್ಯ, ದೌರ್ಜನ್ಯದ ಕೆಡುಕನ್ನು ಸಾಮಾಜಿಕವಾದ ಭಿನ್ನನೆಲೆಯಲ್ಲಿ ಗುರುತಿಸುತ್ತಾರೆ. ಜಗತ್ತಿನ ಪುರುಷರಿಗೆ ಬದುಕಲು, ಜೀವನ ರೂಪಿಸಿಕೊಳ್ಳಲು ಇರುವ ಹಕ್ಕು ಮಹಿಳೆಗೆ ಇದ್ದಾಗಲೂ ಪುರುಷಾಂಹಕಾರ ಅವರ ಬದುಕನ್ನು ಚಿವುಟಿಹಾಕಿಬಿಡುತ್ತದೆ. ಅವರ ವ್ಯಕ್ತಿತ್ವ ಮತ್ತು ಬದುಕನ್ನೇ ಕುಂದಿಸಿಬಿಡುತ್ತದೆ.

ರಾಮಣ್ಣ ಅವರ 'ಗಂಗಾ' ಕತೆಯ ಮುಗ್ಧ ಹುಡುಗಿ ಗಂಗಾ ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡು ಮಲತಾಯಿಯೊಂದಿಗೆ ಕಷ್ಟವೋ, ಸುಖವೋ ಹೇಗೋ ಬದುಕುತ್ತಿದ್ದಳು. ಮಲತಾಯಿಗೆ ಗಂಗಾಳ ಹುಟ್ಟೇ ಅಸಮಾಧಾನ, ಆಕ್ರೋಶಕ್ಕೆ ಕಾರಣವಾಗಿರುತ್ತದೆ. ಮಲತಾಯಿಯ ಹಿಂಸೆಯನ್ನು ಹೇಗೋ ಸಹಿಸಿಕೊಂಡು ದಿನ ಕಳೆಯುತ್ತಿದ್ದಾಗ ಗಂಗಾ ತಂದೆಯನ್ನೂ ಕಳೆದುಕೊಂಡಳು. ನಂತರ ಅನಿವಾರ್ಯವಾಗಿ ಚಿಕ್ಕಮ್ಮನೂರಿಗೆ ಅವಳು ಬರಬೇಕಾಗುತ್ತದೆ. ಅಲ್ಲಿ ಸಮಾಜ ಅವಳನ್ನು ತನ್ನ ಕ್ರೂರ ಹಸ್ತಗಳಿಂದ ಹಿಂಸಿಸಿ, ಹೊಸಕಿ ಹಾಕಿಬಿಡುತ್ತದೆ. **"ಬದುಕು ಬಿಸಿಲು, ಬರಿಬಿಸಿಲಲ್ಲ, ಉರಿಬಿಸಿಲು, ಬೆಂಕಿ ಬಿಸಿಲಾಗಿಸಿ ಬಿಡುತ್ತದೆ"**[೯೩] ಅವಳಿದ್ದ ಸಮಾಜ, ಅವಳ ದೇಹವನ್ನೇ ಸವಾಲಾಗಿ, ಪಣವಾಗಿ, ಆಯುಧವಾಗಿ ಪುರುಷಹಂಕಾರ ಬಳಸುತ್ತಾ ಹೋಗುತ್ತದೆ. ಅವಳೊಂದಿಗಿನ ಸಾಮಾಜಿಕ ಸಂಬಂಧಗಳಲ್ಲಿ ಯಾರಲ್ಲೂ ಹೃದಯವಂತಿಕೆಯನ್ನಾಗಲೀ, ಲಿಂಗ ಸೂಕ್ಷ್ಮತೆಯನ್ನಾಗಲೀ ಕಾಣಲಾಗಲಿಲ್ಲ. ಅವಳಿಗೆ ಮಾನವೀಯ ಸಾಂತ್ವನವನವೂ ದುರ್ಲಭವಾಗುವುದು ವಿಷಾದಕರ. ಗಂಗಾಳ ಮೇಲಾದ ಹಿಂಸೆ, ಅತ್ಯಾಚಾರ, ಕೊಲೆಯಿಂದ ಮನುಷ್ಯನಲ್ಲಿರುವ ಕೆಟ್ಟತನ ಎಷ್ಟಿರಬಹುದೆಂದು ಋಜುವಾತಾಗುತ್ತದೆ. ಗಂಗಾಳ ಆಶೋತ್ತರಗಳು ಪುರುಷಾಹಂಕಾರದಲ್ಲಿ ನುಚ್ಚು ನೂರಾಗುತ್ತವೆ ಎಂಬುದಂತು ಸತ್ಯ

ರಾಮಣ್ಣ ಅವರ 'ಮಾನಭಂಗ' ಕತೆಯಲ್ಲಿ ಸೋನಿಯಾ ಮತ್ತು ಅವಳ ಮಗಳು ಮಮ್ತಾಜ್ ಶವಗಳು ಆಸ್ಪತ್ರೆಯ ಬಾವಿಯಲ್ಲಿ ದೊರೆಯುತ್ತವೆ. ರಶೀದ ತಾನೇ ಹೆಂಡತಿಗೆ ಹೇಳಿ ಮಗಳ ಕೊಲೆ ಮಾಡಿಸಿದ್ದು ಎಂದು ಒಪ್ಪಿಕೊಂಡು ತನ್ನ ಕೆಲಸವನ್ನು ಸಮರ್ಥಿಸಿಕೊಳ್ಳುತ್ತಾನೆ. "ಈ ಅಲಾಲ್ಖೋರ್ ಪ್ರಪಂಚಕ್ಕೆ ಸುಖಕೊಡೋಕೆ ಈಗ ಇರೋ ಸೂಳೆಯರು ಸಾಕಲ್ವೆಸಾಬ್. ನನ್ನ ಮಗಳೂ ಒಬ್ಬ ಸೂಳೆ ಆಗೋದ ಒಬ್ಬ ಅಪ್ಪ ಆಗಿ ಹೆಂಗೆ ಸಹಿಸ್ಕೊಳ್ಳಿ" ರಶೀದ ಸಮಾಜದ

೯೩ ಅಮರೇಶ ನುಗಡೋಣಿ, ಪ್ರಜಾವಾಣಿ, ೨೩.೦೪.೨೦೧೭, ಪು: ೩.

ಬಗ್ಗೆ ನಂಬಿಕೆಯನ್ನೆ ಕಳೆದುಕೊಂಡಿರುತ್ತಾನೆ. ರಶೀದನಿಗೆ ಹೆಂಡತಿ ಮತ್ತು ಮಗಳ "ಸಾವು ಒಂದು ಬಿಡುಗಡೆಯಾಗಿ ಬಿಡುವುದು ಸಾಮಾಜಿಕ ದುರಂತವೆನ್ನಬಹುದು. ಹೆಂಡತಿ, ಮಗಳ ಸಾವಿನ ನಂತರ ರಶೀದ ನಿರುಮ್ಮಳವಾಗಿರುವುದು ವರ್ತಮಾನದ ಬಗ್ಗೆ ಭೀತಿ ಹುಟ್ಟಿಸುತ್ತದೆ. ರಶೀದನದು ಋಣಾತ್ಮಕ ಆಲೋಚನೆಯಾಗಿ ಇಬ್ಬರು ಹೆಣ್ಣುಮಕ್ಕಳ ಜೀವವನ್ನೇ ಬಲಿ ತೆಗೆದುಕೊಳ್ಳುವುದು ಸಮಾಜದ ಸ್ಥಿತಿಗೆ ಹಿಡಿದ ಕನ್ನಡಿ ಎನ್ನಬಹುದು.

ಕುಂ.ವೀರಭದ್ರಪ್ಪ ಅವರ "ಕಮಲೆ ಪ್ರೌಢೆಯಾದದ್ದು" ಕತೆಯಲ್ಲಿ ರಾಮಣ್ಣ ಅವರ ಕತೆಯ ಗಂಗಾಳಂತೆ ಕಮಲೆ ಮುಗ್ಧ ಹುಡುಗಿ. ತನ್ನ ಮುಗ್ಧತೆಯಿಂದಲೇ ಕಮಲೆ ಗೌಡ ಮತ್ತು ಅವನಸಂಗಡಿಗರ ಕಾಮ ಪಿಪಾಸೆಗೆ ಬಲಿಪಶುವಾಗುತ್ತಾಳೆ. ಕಮಲೆ ಕಂಡ ಪುರುಷನ ಹೊರಮುಖವೇ ಬೇರೆಯಾಗಿದ್ದು ಒಳಮುಖವೇ ಬೇರೆಯಾಗಿರುತ್ತದೆ, ಕಾಣಿಸದಿದ್ದದ್ದು ಇನ್ನೊಂದಾಗಿತ್ತು. ಕಾಣಿಸಿದಾಗ ಎಲ್ಲವೂ ಮೀರಿಹೋಗಿತ್ತು. ಗಂಡು-ಹೆಣ್ಣುಗಳ ಸಂಬಂಧದಲ್ಲಿ ಹೆಣ್ಣನ್ನು ಗಂಡಿನ ಉಪಭೋಗದ ದೃಷ್ಟಿಯಿಂದ ನೋಡುವ ಗ್ರಹಿಕೆಗಳು ಇರುವುದರಿಂದ, ಪುರುಷಾಹಂಕಾರಕ್ಕೆ ಯಾವ ಅಂಕುಶವೂ ಇಲ್ಲವೇನೋ ಎನಿಸಿಬಿಡುತ್ತದೆ. ಕಮಲಿಗಾದ ದೈಹಿಕ, ಮಾನಸಿಕ, ಲೈಂಗಿಕ ಹಿಂಸೆಯು ಗಂಡಸಿನ ದರ್ಪದ ಪರಾಕಾಷ್ಠೆಯಾಗುತ್ತದೆ. ಅದಕ್ಕೆ ಪ್ರತಿಯಾಗಿ ಕಮಲೆಯಂತಹವರ ಅಸಹಾಯಕರ ಜಗತ್ತಿನಲ್ಲಿ ಕಮಲೆಯ ತಂದೆಯ ಬಂಡಾಯದ ದನಿ ಕ್ಷೀಣವಾಗಿಬಿಡುತ್ತದೆ.

ಕುಂ.ವೀರಭದ್ರಪ್ಪ ಅವರ 'ನಾಯಿಗಳು' ಕತೆಯಲ್ಲಿ ಅಸಹಾಯಕ ನಿರಪರಾಧಿ ಮುಗ್ಧ ಹೆಣ್ಣು ಮಗಳು ಪೊಲೀಸರ ಕೈಗೆ ಸಿಕ್ಕಾಗ ಪಶುಗಳ ರೀತಿ ವರ್ತಿಸುತ್ತಾರೆ. ಲೈಂಗಿಕ ಹಿಂಸಾಚಾರಕ್ಕೆ ಒಳಗಾದ ಅವಳು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವಳ ಮೇಲಾಗುವ ಲೈಂಗಿಕ ಹಿಂಸೆ ಮತ್ತು ದೌರ್ಜನ್ಯ ಕಂಡಾಗ ರಕ್ಷಿಸಬೇಕಾದವರ ಅಮಾನವೀಯ ವರ್ತನೆ ಅಸಹ್ಯವನ್ನುಂಟುಮಾಡುತ್ತದೆ.

ಮಹಾಶ್ವೇತಾದೇವಿಯವರ ಕತೆಯ ನಾಯಕಿ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಅವಳಿಗೆ ಬಟ್ಟೆಹಾಕಿಕೊಳ್ಳಲು ಹೇಳಿದಾಗ ಧರಿಸಲು ತಿರಸ್ಕರಿಸಿ ಎಸೆಯುತ್ತಾಳೆ. ನಗ್ನಳಾಗಿ ಪೊಲೀಸರ ಮುಂದೆ ಬಂದಾಗ ಅವರು ಬೆಚ್ಚಿ ಬೀಳುತ್ತಾರೆ. ಆ ಮಟ್ಟಗಿನ ಪ್ರತಿರೋಧ ಹೆಣ್ಣಿನಲ್ಲಿ ಕಾಣಬರುವುದು ಅಪರೂಪವೆನ್ನಬಹುದು. ಪೊಲೀಸರ ಅಮಾನವೀಯ ಕೃತ್ಯಕ್ಕೆ ಪ್ರತಿರೋಧ ತೋರಿಸಿದ, ಅವಳಿಗೆ ತಾತ್ಕಾಲಿಕ ಆಸರೆ ಎನಿಸಿದ ಪುರುಷ ತೀವ್ರದಂಡನೆಗೆ

ಗುರಿಯಾಗಬೇಕಾಗುತ್ತದೆ. ಪುರುಷನ ಅಹಂಭಾವ ಸಮಷ್ಠಿ ಜೀವನವನ್ನು ಹೊಲಸುಗೆಡಿಸುತ್ತದೆ. ಇಂತಹ ಹೆಣ್ಣು ಮಕ್ಕಳ ನೋವು ಸಮಾಜದ ಕಣ್ಣಿಗೆ ಕಾಣದಿರುವುದೇ ಹೆಚ್ಚು.

'ಗಂಗಾ' ಸಾವು ಭೀತಿ ಹುಟ್ಟಿಸಿದರೆ, 'ಮಮ್ತಾಜ್ ಮತ್ತು ಸೋನಿಯಾ' ಸಾವು ಸರಿ–ತಪ್ಪುಗಳ ಜಿಜ್ಞಾಸೆಗೆ ಒಳಪಡಿಸುತ್ತದೆ. 'ಕಮಲೆ'ಗಾದ ಲೈಂಗಿಕ ಹಿಂಸೆ ಬದುಕಿನ ನಂಬಿಕೆಯನ್ನೇ ಅಲುಗಾಡಿಸಿದರೆ, 'ನಾಯಿಗಳು' ಕತೆಯ ಹೆಣ್ಣು ಮಗಳು ಸಾರ್ವಜನಿಕ ನೈತಿಕತೆಯ ಎಲ್ಲೆಯನ್ನು ಪ್ರಶ್ನಿಸುತ್ತದೆ. 'ಈ ಬಗೆಯ ಭಂಡತನದ ಮತ್ತು ನಿರ್ಲಜ್ಜತೆಯ ಪ್ರದರ್ಶನ ನಮ್ಮ ಸಾರ್ವಜನಿಕ ಬದುಕಿನಲ್ಲಿ ನಾವು ಕಳೆದುಕೊಂಡಿರುವ ಸೂಕ್ಷ್ಮತೆ ಮತ್ತು ನೈತಿಕತೆಯ ಸಂಕೇತವಾಗಿದೆ' ಎಂದರೆ ತಪ್ಪಾಗಲಾರದು'[೯೪] ಎಂಬ ಮಾತು ಸಮಾಜದಲ್ಲಿ ಲೈಂಗಿಕ ಹಿಂಸೆಗೆ ನಲುಗುತ್ತಿರುವ ಹೆಣ್ಣುಮಕ್ಕಳ ನೋವನ್ನು ಪರಿಗಣಿಸಿ ಅವರಿಗೆ ರಕ್ಷಣೆ ಮತ್ತು ನೈತಿಕ ಬೆಂಬಲ ದೊರಕಿಸಿಕೊಡಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

"ಹೆಣ್ಣು ಎಂದರೆ ಹೆಣ್ಣು ಅಷ್ಟೆ. ಅತ್ಯಾಚಾರಿಗಳು ಪಕ್ಷಾತೀತರು! ಅವರಿಗೆ ಹೆಣ್ಣು ಒಂದು ಭೋಗದ ವಸ್ತು ಅಷ್ಟೇ. ಆಕೆ ಪುಟ್ಟ ಬಾಲಕಿಯಾಗಲೀ, ವೃದ್ಧೆಯಾಗಲೀ ... ವ್ಯತ್ಯಾಸವಿಲ್ಲ. ದಲಿತರಿಗೆ ಆಗಲೀ, ಮೇಲ್ವರ್ಗದವರಿಗೆ ಆಗಲೀ, ಅತ್ಯಾಚಾರದಿಂದ ಉಂಟಾದ ನೋವು–ಸಂಕಷ್ಟಗಳು ವಿಭಿನ್ನವಾಗಿರಲು ಹೇಗೆ ಸಾಧ್ಯ".[೯೫] ಎಂದು ಚನ್ನು ಅ. ಹಿರೇಮಠ ಅವರು ಅತ್ಯಾಚಾರದಂತಹ ಹೀನ, ಪೈಶಾಚಿಕ ಕೃತ್ಯವನ್ನು ಖಂಡಿಸುತ್ತಾರೆ. ಪಾಪಪ್ರಜ್ಞೆ, ಆತ್ಮಸಾಕ್ಷಿ ಮಾತ್ರ ಅಮಾನವೀಯ ಕೃತ್ಯಗಳನ್ನು ಸಮಾಜದಿಂದ ದೂರವಾಗಿಸುವ ಸಾಧ್ಯತೆಯನ್ನು ಕಾಣಿಸುತ್ತದೆ.

ಬೆಸಗರಹಳ್ಳಿ ರಾಮಣ್ಣ ಅವರ 'ಕಳೆ' ಮತ್ತು 'ಸೋಲು', 'ಕಕರನಯುಗಾದಿ' 'ಹರಕೆಯ ಹಣ', ಕತೆಗಳಲ್ಲಿ ಮೇಲ್ವರ್ಗದವರು ತಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳನ್ನಾಗಿಸುವ ಶೋಷಣೆ ಮುಖಗಳನ್ನು ಕಾಣಿಸುತ್ತದೆ. 'ಕಳೆ' ಕತೆಯ ಶಿವಲಿಂಗೇಗೌಡ ದಲಿತ ಹೆಣ್ಣು ಮಕ್ಕಳನ್ನು ತನ್ನ ಲೈಂಗಿಕ ದಾಹಕ್ಕೆ ಬಳಸಿಕೊಂಡು ಅದು ತನ್ನ ಹಕ್ಕು ಎಂಬಂತೆ ವರ್ತಿಸುತ್ತಿದ್ದನು. ವಯಸ್ಸಿಗೆ ಬಂದ ಮಗಳಿದ್ದರೂ ಹೆಣ್ಣಿನ ಚಪಲ ಇನಿತೂ ಕಡಿಮೆಯಾಗಿರಲಿಲ್ಲ. ಅವನ ಕಾಮುಕ ದೃಷ್ಟಿಗೆ ತಮ್ಮನ ಹೆಂಡತಿಯೂ ಹೊರತಾಗಿರಲಿಲ್ಲ.

---

[೯೪] ಪೃಥ್ವಿದತ್ತ ಚಂದ್ರಶೋಭಿ, ಪ್ರಜಾವಾಣಿ, ೦೬.೦೮.೨೦೧೫, ಪು: ೧.

[೯೫] ಚನ್ನು ಅ. ಹಿರೇಮಠ, ಪ್ರಜಾವಾಣಿ, ೨೩.೦೪.೨೦೧೮, ಪು: ೬.

ಗೌಡ ಹೊಲೆಯರ ಕೆಂಪಿಯನ್ನು ಇಟ್ಟುಕೊಂಡಿದ್ದನು. ಕೆಂಪಿಯ ಅವ್ವ ಬೆಲೂರಿ ಬೆಂಬಲ ಕೊಡುವುದು ಅಸಹಾಯಕತೆಯಿಂದೆನ್ನಬಹುದು. **"ಶೋಷಣೆಯ ವಿಕೃತ ಅಡಿಪಾಯದ ಮೇಲೆ ನಿಂತಿರುವ ವ್ಯವಸ್ಥೆಯ ವಿರುದ್ಧ ಹೋರಾಟ-ಬಂಡಾಯ"**[೯೬] ಎನ್ನುತ್ತಾರೆ ಆರ್. ವಿ. ಭಂಡಾರಿ. ಆದರೆ 'ಕಳೆ'ಕತೆಯ ಬೇಲೂರಿ ಮತ್ತು ಕೆಂಪಿಯು ಶೋಷಣೆ ಮಾಡುವವರನ್ನೇ ಬೆಂಬಲಿಸುತ್ತಾರೆ. ಗೌಡನ ಒಬ್ಬಳೇ ಮಗಳು ಲಲಿತಾ ಮನೆಯ ಆಳು ನಿಂಗನ ಜೊತೆ ಮಲಗಿ ತಂದೆಯನ್ನು ಪರೋಕ್ಷವಾಗಿ ಪ್ರತಿಭಟಿಸುತ್ತಾಳೆನ್ನಬಹುದು. ಆಳು ನಿಂಗ ಗೌಡನಿಗೆ ಹೆದರಿದಂತೆ ಇರುತ್ತಿದ್ದು ಅಸಹಾಯಕತೆ, ಗುಲಾಮಗಿರಿಯಲ್ಲಿಯೇ ಪ್ರತಿಭಟನಾತ್ಮಕ ಬಂಡಾಯ ಮನೋಧರ್ಮವನ್ನು ಅವನಲ್ಲಿ ಕಾಣಬಹುದು. ಲೈಂಗಿಕ ವಿಚಾರ ತಳ ವರ್ಗ ಮತ್ತು ಮೇಲ್ವರ್ಗದವರ ನಡುವೆ ಸಂಘರ್ಷವಾಗಿ ರೂಪಾಂತರಗೊಳ್ಳುತ್ತದೆ.

'ಗರ್ಜನೆ' ಕತೆಯ ಮರಿನಂಜ ತನ್ನ ಹುಟ್ಟಿನ ಕಾರಣದಿಂದ ಸಾಮಾಜಿಕ ಅಪಹಾಸ್ಯಕ್ಕೀಡಾಗುತ್ತಾನೆ. ಕಡೆಗೆ ತನ್ನನ್ನು ಅವಮಾನಿಸಿದವರ ಮೇಲೆ ರೋಷದಿಂದಲೇ ಪ್ರತಿಕ್ರಿಯಿಸಲಾರಂಭಿಸಿದ್ದು, ದಲಿತನ ದಿಟ್ಟತನವಾಗಿಯೇ ಮುಂದುವರಿಯುತ್ತದೆ.

ಕುಂ.ವೀರಭದ್ರಪ್ಪ ಅವರ 'ಎಂಜಲು' ಕತೆಯಲ್ಲಿ ಕಿವುಡ ಗೌಡನ ಮನೆಯ ನಿಯತ್ತಿನ ಆಳಾಗಿ ದುಡಿಯುತ್ತಿದ್ದನು. ಗೌಡ ತನ್ನ ಹೆಂಡತಿ ಚಂದ್ರಿಯೊಂದಿಗೆ ಅನೈತಿಕಸಂಬಂಧ ಇಟ್ಟುಕೊಂಡಿರುವುದು ಗೊತ್ತಾದಾಗ ಅಸಹಾಯಕತೆಯಿಂದ ಚಡಪಡಿಸುತ್ತಾನೆ. ಚಂದ್ರಿ ಎಂಜಲಿಗಾಗಿ ತನ್ನ ಮೇಲಿನ ದಾಳಿಯನ್ನು ಒಪ್ಪಿಕೊಳ್ಳುವುದು ಕಿವುಡನ ವೇದನೆಯನ್ನು ಹೆಚ್ಚಿಸುತ್ತದೆ. ಚಂದ್ರಿಗೆ ತನ್ನ ಸಂಸಾರದ ಬಗೆಗೆ ವಿಷಾದವೂ ಇಲ್ಲ, ಅಳುಕೂ ಇಲ್ಲದೆ ಗಂಡನನ್ನೇ ತಿರಸ್ಕಾರದಿಂದ ನೋಡಲಾರಂಭಿಸುತ್ತಾಳೆ. ಅಧೀನ ಸಂಸ್ಕೃತಿಯಲ್ಲಿ ಯಜಮಾನ ಸಂಸ್ಕೃತಿಯಲ್ಲಿ, ಪ್ರಭುತ್ವ ಸಂಸ್ಕೃತಿಯಲ್ಲಿ ಸ್ತ್ರೀಯ ಶೋಷಣೆ, ಮೈಮನಸ್ಸುಗಳ ಮೇಲಿನ ಪ್ರಹಾರ ಇದ್ದು ತನಗಾದ ಅನ್ಯಾಯ, ಅವಹೇಳನ, ದೌರ್ಜನ್ಯಗಳನ್ನು ಹೇಳಲಾರದ ಮೂಗುಬ್ಬಸದ ಸ್ಥಿತಿಯಲ್ಲಿ ಹೆಣ್ಣು ಬದುಕಬೇಕಾದುದನ್ನು ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲ ಹಿಡಿದ ಕತೆ'ಯ ಸಂಕುಲಿಯ ಪಾತ್ರದಲ್ಲಿ ಕಾಣಬಹುದು. ಕತ್ತಲ ಮದುವೆಯಾದ ಹೊಸದರಲ್ಲೇ ಗೌಡ ಸಂಕುಲಿಯನ್ನು ತನ್ನ ಕಾಮದಾಹಕ್ಕೆ ಬಳಸಿಕೊಂಡಿದ್ದನ್ನು ಸಂಕುಲಿ ನೋವಿನಿಂದಲೇ ಕತ್ತಲಿನಲ್ಲಿ ಹೇಳಿಕೊಂಡಿರುತ್ತಾಳೆ. ಸಂಕುಲಿಗೆ ಇದು ಒತ್ತಾಯದ, ಒತ್ತಡದ ಸಂಬಂಧವಾಗಿ ಬೇಡವೆಂದರೂ

---

೯೬ ಆರ್.ವಿ. ಭಂಡಾರಿ, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಬರಗೂರು ರಾಮಚಂದ್ರಪ್ಪ (ಪ್ರಸಂ), ೧೯೯೩. ಪು: ೧೫೪,

ಗೌಡ ಬಿಡಲಿಲ್ಲ, ಅದು ತನ್ನ ಹಕ್ಕೆಂದೇ ಪರಿಭಾವಿಸುತ್ತಾನೆ. ಅಸಹಾಯಕ ಕತ್ತಲ ಹಸುಳೆಗಳನ್ನು ಕೊಂದು ತನ್ನ ಸಿಟ್ಟನ್ನು ತಣಿಸಿಕೊಳ್ಳುತ್ತಾನೆ. 'ಕಳೆ' ಕತೆಯಲ್ಲಿ ಯಜಮಾನ ಸಂಸ್ಕೃತಿಯ ವಿರುದ್ಧ ಪ್ರತಿರೋಧ ತೋರಿಸುವ ನಿಂಗ, 'ಗರ್ಜನೆ'ಯ ಮರಿನಂಜ ದಲಿತ ಬದುಕಿನಲ್ಲಿ ಹೊಸ ಸಾಧ್ಯತೆಯತ್ತ ಹೊರಳುವಂತೆ ಮಾಡಿದರೆ, ಕುಂ.ವೀರಭದ್ರಪ್ಪ ಅವರ 'ಕತ್ತಲ' ಮತ್ತು 'ಎಂಜಲು' ಕತೆಯ 'ಕಿವುಡ' ಪ್ರತಿಭಟಿಸಲಾಗದೆ ತೊಳಲಾಡುವುದು ನಿರಾಶೆಯೆಡೆಗೆ ತಳ್ಳುತ್ತದೆ. ಕತ್ತಲ ಮತ್ತು ಕಿವುಡ ಹೆಣ್ಣಿನ ಶೋಷಣೆಗೆ ಮೀರಿದ ನೋವು–ಸಂಕಟ ಅನುಭವಿಸುತ್ತಾರೆ, ಕಣ್ಣಿಗೆ ಕಾಣದ ಮತ್ತು ಕಿವಿಗೆ ಕೇಳದ ಶೋಷಣೆಯಾಗಿ ಅನುಭವಿಸುವವರಿಗಷ್ಟೇ ಅದು ಗೊತ್ತಿರುತ್ತದೆ.

"ಗಂಡಿಗೆ, ಅಳುವವರಿಗೆ ಇರುವ ಕಿವುಡು, ಧಿಮಾಕು, ನಿರ್ಲಕ್ಷ್ಯವಿದ್ದು, ಎಲ್ಲಕ್ಕಿಂತ ಅವನು ಹೆಣ್ಣನ್ನು 'ಅವನಭಾಷೆ'ಯಲ್ಲಿ ಗ್ರಹಿಸುತ್ತಾನೆ ಹೊರತು ಅವಳ ನೆಲೆಯಲ್ಲಿ ಅಲ್ಲ"[೯೭] ಎಂ.ಎಸ್. ಆಶಾದೇವಿಯವರು ಪುರುಷಾಹಂಕಾರವನ್ನು ಈ ರೀತಿ ದಾಖಲಿಸುತ್ತಾರೆ. ದಲಿತ ವರ್ಗದ ಹೆಣ್ಣಿನ ಬದುಕು ಇದಕ್ಕೆ ಹೊರತಾಗಿಲ್ಲವೆನಿಸುತ್ತದೆ. ರಾಮಣ್ಣ ಅವರ 'ಕಕರನ ಯುಗಾದಿ' ಕತೆಯ ಕಕರನ ಮಗಳು ಗೌಡನ ಮಗನ ಜೊತೆ ಅನೈತಿಕ ಸಂಬಂಧವಿಟ್ಟುಕೊಂಡಿರುತ್ತಾಳೆ. ಕಕರ ಅವನ ಹೆಂಡತಿಗೆ ಗೊತ್ತಿದ್ದೂ ಏನೂ ಮಾಡಲಾರದವರಾಗಿರುತ್ತಾರೆ. ಕಕರನ ಹೆಂಡತಿ ಮಗಳನ್ನು ಬೆಂಬಲಿಸಿದರೆ ಕಕರ ಅವಳ ಬಗ್ಗೆ ತಿರಸ್ಕಾರ ಭಾವನೆಯನ್ನು ಹೊಂದಿರುತ್ತಾನೆ.

ಜೋಯಿಸ ಮಗಳು ಹೆಂಗವಳೆ ಎಂದು ಕೇಳಿದಾಗ,

"ಗುಂಡ್ಕಲ್ಲು ಇದ್ದಂಗವಳೆ ! ಮುಂಡೆಗೆ ಸಾವು ಇನ್ನು ಬರಲಿಲ್ಲ" ಎನ್ನುತ್ತಾನೆ ಕಕರ.
ಕಕರನ ಹೆಂಡತಿ, "ಕೈಹಿಡಿದೋನು ನಾಮರ್ದ, ಇವ್ನುದೂ ಉಪ್ಪುಕಾರತಿಂದ ಮೈಅಲ್ಲ, ಏನೋ ಮಣ್ಣು ತಿಂದ್ಬುಟ್ಟು". "ಅನುಭವಿಸಲೀ ಬುಡು ! ಆ ಗೌಡ್ರು ಹೈದ್ನ ತಾವು ಕಿಲಿಕಿಲಿ ಅಂತ ನಗ್ತಾ ಮಾತಾಡೋಕೆ ನಿಂತ್ರೆ ನಮ್ಮ ಯಾರ್ನೂ ಒಂದು ಪೈಸೆಗೆ ಜಮಾಖರ್ಚಿಗೆ ತಗೋತಿರ್ಲಿಲ್ಲ."[೯೮]

ಕಕರನ ಮಗಳಿಗೆ ಅನಿವಾರ್ಯ, ಒಪ್ಪಿತ ಸಂಬಂಧವಾಗಿದ್ದು ಯಾರನ್ನೂ ಎದುರಿಸಬಲ್ಲಳಾಗಿರುತ್ತಾಳೆ. ಅವಳಿಗದು ಅನೈತಿಕವೆನ್ನಿಸಲಿಲ್ಲ. ನನ್ನ ಗಂಡಸರಿಯಿಲ್ಲದಿದ್ದರೆ ಇನ್ನೇನು ಮಾಡಬೇಕೆಂದು ಹೇಳಬಲ್ಲವಳಾಗಿದ್ದಳು.

---

೯೭ ಎಂ.ಎಸ್. ಆಶಾದೇವಿ, ಪ್ರಜಾವಾಣಿ, ೨೫.೧೦.೨೦೧೮, ಪು: ೨.

೯೮ ಕಣಜ, ಲೋಹಿಯು ಪ್ರಕಾಶನ, ೨೦೧೧, ಪು: ೧೯೫.

ಕುಂ.ವೀರಭದ್ರಪ್ಪ ಅವರ 'ಸಮನ್ವಯ' ಕತೆ ಭಿನ್ನವಾಗಿದ್ದು ಜಮೀನ್ದಾರ ಮತ್ತು ಬಸ್ಯನ ಹೆಂಡತಿ ಅನೈತಿಕ ಸಂಬಂಧ ಹೊಂದಿರುತ್ತಾರೆ. ಬಸ್ಯ ಗೌಡನ ಹೆಂಡತಿ ಗೌರಮ್ಮನೊಂದಿಗೆ ಸಂಬಂಧವನ್ನು ಉದ್ದೇಶಪೂರ್ವಕವಾಗಿ ಇಟ್ಟುಕೊಳ್ಳುತ್ತಾನೆ. ಗೌಡ ಮತ್ತು ಬಸ್ಯ ಇಬ್ಬರಿಗೂ ಗೊತ್ತಿದ್ದರೂ ಒಳ ಒಪ್ಪಂದವೆಂಬಂತೆ ಇರುತ್ತಾರೆ. ಆದರೆ ಶೋಷಣೆಯಾಗುವುದು ಹೆಣ್ಣಿಗೆ ಮಾತ್ರ ವೆನಿಸುತ್ತದೆ. ಅನೈತಿಕ ಬದುಕಿನಲ್ಲಿರುವ ಸಮನ್ವಯತೆ ಎಂದಿಗೂ ಸಾಧುವಾಗಲಾರದು.

ರಾಮಣ್ಣ ಅವರ "ಹರಕೆಹಣ" ಕತೆಯ ಸುಮಾನಿ ಅನಕ್ಷರಸ್ಥ ಹರಿಜನರಲ್ಲಿ ಯೋಚನಾಪರನಾಗಿದ್ದು, ಅಲ್ಪ ಸ್ವಲ್ಪ ಕಲಿತವನಾಗಿದ್ದು ಮೇಲ್ವರ್ಗದವರ ಮೋಸ-ವಂಚನೆ, ಹುನ್ನಾರವನ್ನು ತನ್ನ ಜನರಿಗೆ ಅರ್ಥಮಾಡಿಸಲು ಪ್ರಯತ್ನಿಸುತ್ತಿದ್ದನು. ಊರ ಪಟೇಲ ಬುಗುರಿಗೆ ಚೆಲುವಿಯನ್ನು ಮದುವೆ ಮಾಡಿಸಿ ನಂತರ ತಾನು ಅವಳನ್ನು ಅನುಭವಿಸುವ ಯೋಜನೆ ಹಾಕಿಕೊಂಡಿದ್ದನು. ಚೆಲುವಿಯ ತಾಯಿ ಕೆಂಪಿಯನ್ನು ಅನುಭವಿಸಿದ್ದ ಪಟೇಲ ಮಗಳನ್ನು ಬಿಡದ ವಿಕೃತ ಕಾಮಿಯೆನಿಸುತ್ತಾನೆ.

"ವ್ಯವಸ್ಥೆ ಮತ್ತು ಹಿಂಸೆ ಎಂಬೆರಡು ಪದಗಳಿಗೆ ಕರುಳಬಳ್ಳಿಯ ಸಂಬಂಧವಿದೆಯನ್ನುತ್ತಾರೆ"[೯೯] ಎಂಬ ಮಾತಿನಂತೆ, ಯಜಮಾನ ಸಂಸ್ಕೃತಿ ಮಾಡಿಕೊಂಡಿರುವ ವ್ಯವಸ್ಥೆಯಲ್ಲಿ ಆಳುವರ ಪ್ರಭುತ್ವ, ಹಿಂಸೆ ಇರುವುದು ಕತೆಯಲ್ಲಿ ಢಾಳಾಗಿ ಕಾಣುತ್ತದೆ. ಅಸಮಾನತೆ, ಅನ್ಯಾಯ, ಶೋಷಣೆಯನ್ನು ಮೂಲಧನ ಮಾಡಿಕೊಂಡು ಕಾಲಾಂತರದಿಂದ ಬಡಶ್ರಮಿಕರನ್ನು ಕೆಳವರ್ಗದವರನ್ನು ತುಳಿಯುವುದು ಜಮಿನ್ದಾರಿಕೆ ಸಂಸ್ಕೃತಿಯೆನಿಸಿಬಿಟ್ಟಿದೆ.

ರಾಮಣ್ಣ ಅವರ 'ಸೋಲು' ಕತೆಯಲ್ಲಿ ಗೌಡರು ಸುಬ್ಬಕ್ಕನೊಂದಿಗೆ ಅನೈತಿಕ ಸಂಬಂಧವನ್ನು ಹೆಂಡತಿ ಸತ್ತನಂತರ ಇಟ್ಟುಕೊಂಡಿದ್ದರು. ಸುಬ್ಬಕ್ಕನ ಮಗಳು 'ಕೆಂಪಿ'ಯನ್ನು ಬಯಸಿದ್ದು, 'ಹರಕೆಯ ಹಣ' ಕತೆಯಲ್ಲಿ 'ಕೆಂಪಿ'ಯನ್ನು ಅನುಭವಿಸಿದ್ದಲ್ಲದೆ ಅವಳ ಮಗಳು ಚೆಲುವಿಯನ್ನು ಬಯಸುತ್ತಾನೆ. ಆದರೆ ಸುಮಾನಿ ಚೆಲುವಿಯೊಂದಿಗೆ ಓಡಿಹೋಗಿ ಪಟೇಲನಿಗೆ ಅನಿರೀಕ್ಷಿತ ಪೆಟ್ಟನ್ನು ನೀಡಿ ಅವನ ಆಸೆಗೆ ಭಂಗ ತರುತ್ತಾನೆ. ಪಟೇಲರ ಕುತಂತ್ರ ಗೊತ್ತಿದ್ದ ಸುಮಾನಿ ಮೇಲ್ವರ್ಗದ ಶೋಷಣೆಗೆ ಸರಿಯಾದ ಉತ್ತರಕೊಡುತ್ತಾನೆ.

---

೯೯ ಪುರುಷೋತ್ತಮ ಬಿಳಿಮಲೆ, 'ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ೧೯೯೩, .ಪು : ೨೪೩.

"ಕಾಲದಿಂದ ಕಾಲಕ್ಕೆ ಈ ಬದುಕು ಸೋಲುತ್ತಲೇ ಬಂದಿದೆ. ಏನು ಮಾಡುವುದು ಶತ್ರು ಹೊರಗಡೆ ಇರುವನೆಂದು ತಿಳಿದಿದ್ದೇ ತಪ್ಪಾಯಿತು"[೧೦೦] ಎಂಬ ಬಸು ಅವರ ಮಾತಿನಲ್ಲಿ ಹೆಣ್ಣಿನ ಹಪಹಪಿತನ ಈಗಲೂ ಇದೆ. ಮುಂದೆಯೂ ಇರುತ್ತದೆ ಎಂದು ವ್ಯಕ್ತವಾಗುತ್ತದೆ. ಪುರುಷ ಸಂಸ್ಕೃತಿಯ ನೆಲೆಯಲ್ಲೇ, ನಿರ್ದೇಶನದಲ್ಲೇ ಹೆಣ್ಣನ್ನು ಗ್ರಹಿಸುವಾಗ ಅವಳ ಅಸ್ಮಿತೆಯನ್ನು ದಮನ ಮಾಡುತ್ತಾ ಕ್ಷಣ ಕ್ಷಣಕ್ಕೂ ಆತ್ಮವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತಿರುವ ಸಾಮಾಜಿಕತೆಯಲ್ಲಿ ಹೆಣ್ಣು ಎದುರಿಸುವುದಾದರೂ ಹೇಗೆ? ಪ್ರಶ್ನೆ ಎದುರಾಗುತ್ತದೆ. 'ಹೊಂದಿಕೊಂಡು ಹೋಗು' ಪದದಲ್ಲಿರುವುದು ನಿರ್ದೇಶನವಷ್ಟೇ, ಯಾರಿಗೆ ಎಂಬುದನ್ನು ಬಿಡಿಸಿಹೇಳುವ ಅವಶ್ಯಕತೆಯಿಲ್ಲ ಎನ್ನುವುದುಸಮಾಜದ ಧೋರಣೆಯಾಗಿದೆ. ಭಾಷೆಯಿರುವುದೇ ಹೆಣ್ಣಿನ ಬಾಯಿ ಮುಚ್ಚಿಡಲು, ಮೌನವೇ ಅವಳ ಹಕ್ಕು, ಮಾತಲ್ಲ ಎನ್ನುವಾಗ ಬುಡಕಟ್ಟು, ಕೆಳವರ್ಗ, ಮೇಲ್ವರ್ಗ, ಆಧುನಿಕ ಮಹಿಳೆಯನ್ನು ಮನುಷ್ಯಳಾಗಿ ನೋಡಿದಾಗ ಮಾತ್ರ ಸಾಮಾಜಿಕ ಮುನ್ನಡೆ ಸಾಧ್ಯವಾಗುತ್ತದೆ.

"ಜಗತ್ತು ನಿಂತಿರುವುದು ಸ್ತ್ರೀಪುರುಷರಿಂದ ಎನ್ನುವಾಗ ಸ್ತ್ರೀ ಹೇಗೆ ಕನಿಷ್ಟಳಾಗುತ್ತಾಳೆ. ಅವಳ ಅನನ್ಯತೆಗಳು ಹೇಗೆ ದೌರ್ಬಲ್ಯದ ಸಂಕೇತಗಳಾಗುತ್ತವೆ, The female is a female by vitue of a ceratain lack of qualities. We should regard the female nature as afficted with a natural defectiveness. ಎಂಬ **ಅರಿಸ್ಟಾಟಲ್‌ನಮಾತಿನಂತೆ ಹೆಣ್ಣನ್ನು ಗ್ರಹಿಸುವ ಮನೋಭಾವ ಬದಲಾಗಬೇಕಾದರೆ ತನ್ನದೇ ಆದ ಭಾಷೆಯಿಲ್ಲದೆ, ಅವಳದೇ ಆದ ಗ್ರಹಿಕೆಯಿಲ್ಲದೆ ಅಸ್ಮಿತೆಯಿಲ್ಲದೆ ಧಿಮಾಕು, ದರ್ಪ, ನಿರ್ಲಕ್ಷಗಳನ್ನು ಎಷ್ಟು ಕಾಲ ಸಹಿಸಬೇಕು"**[೧೦೧] ಎಂಬುದೇ ಈಗ ನಮ್ಮ ಮುಂದಿರುವ ಸವಾಲು ಎಂದು ಎಂ.ಎಸ್. ಆಶಾದೇವಿಯವರು ಲಿಂಗ ಅಸಮಾನತೆ ಬಹುಕಾಲ ಮುಂದುವರಿಯುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಬಹುತೇಕ ಸ್ತ್ರೀಪಾತ್ರಗಳು ಒತ್ತಡದಲ್ಲೇ ಸಾಗುತ್ತವೆ. ಅಸಮಾನತೆ ಮತು ಸ್ತ್ರೀಶೋಷಣೆಯ ವಿಷಯವಾಗಿ ಬಹು ಆಯಾಮಗಳು, ನಿರ್ಧಿಷ್ಟತೆ ಮತ್ತು ತುಲನಾತ್ಮಕತೆಯಿಂದ ಕೂಡಿದ ಪಾತ್ರಗಳನ್ನು ಕತೆಗಳಲ್ಲಿ ಕಾಣಬಹುದು. ಸ್ತ್ರೀ ಅನನ್ಯತೆ ಮತ್ತು ದುರ್ಬಲ ಪಾತ್ರಗಳು ಸಮಾಜದಲ್ಲಿರುವುದನ್ನು ಕತೆಗಳಲ್ಲಿ

---

೧೦೦ ಹಾಲತಿ ಸೋಮಶೇಖರ್, ಮಹಿಳೆ : ಒಂದು ಚಿಂತನೆ, ೨೦೧೨, ಪು : ೬೪.

೧೦೧ ಎಂ.ಎಸ್. ಆಶಾದೇವಿ, ಪ್ರಜಾವಾಣಿ, ೧೧.೧೦.೨೦೧೫, ಪು : ೨.

ಸಹಜವಾಗಿ ನಿರೂಪಿಸಲಾಗಿದೆ. ಸ್ತ್ರೀ ಅನನ್ಯತೆಯ ಮಾದರಿಯನ್ನು ರಾಮಣ್ಣ ಅವರ 'ತಾಯಿ' ಕತೆಯ ಉರುಗಮ್ಮ 'ಮಹಾನವಮಿ' ಕತೆಯ ಲೋಟಗಾಲೆ ಮುದುಕಿ, ಕುಂವೀ ಅವರ 'ಭಗವತಿಕಾಡಿನ' ಸೆವುಡವ್ವ, 'ಕುಬುಸ' ಕತೆಯ ಬಂಡೆವ್ವಜ್ಜಿ ಪಾತ್ರಗಳನ್ನು ಉದಾಹರಿಸಬಹುದು. ಇಬ್ಬರ ಕಥೆಗಳಲ್ಲಿನ ಸ್ತ್ರೀಪಾತ್ರಗಳು ಇಡೀ ಸಂಸಾರದ ಭಾರವನ್ನು, ಅದನ್ನು ಮುಂದುವರೆಸುವ ಮತ್ತು ಕಾಪಾಡುವ ಹೊಣೆಯನ್ನು ಹೊರುತ್ತವೆ. ಶ್ರಮಿಕ ಕುಟುಂಬಗಳ ಸ್ತ್ರೀಯರ ಬದುಕನ್ನು ಕಟ್ಟಿಕೊಡುವಲ್ಲಿ ಇಬ್ಬರ ಕತೆಗಳಲ್ಲೂ ಸಾಮ್ಯತೆಯಿದೆ. ಸಾಮಾಜಿಕ ಬದಲಾವಣೆಯ ಆಶಯ ಇಬ್ಬರ ಕಥೆಗಳಲ್ಲೂ ಕೇಂದ್ರಬಿಂದುವಾಗಿದೆ.

ಇಬ್ಬರ ಕಥೆಗಳಲ್ಲೂ ಮಹಿಳೆ ಬದುಕಿನ ವೈಫಲ್ಯಗಳ ನಡುವೆ ದೃಢವಾಗಿ ನಿಲ್ಲುವುದು ಕಾಣಬಹುದು. ಕತೆಗಳು ಹೆಣ್ಣಿನ ಚಿತ್ರಣ, ಅಸಾಮಾನ್ಯ ಗುಣ, ದೌರ್ಬಲ್ಯಗಳನ್ನು ಕಾಣಿಸುತ್ತವೆ. ಇಬ್ಬರೂ ಕತೆಗಾರರು ಹೆಣ್ಣಿನ ಅಂತಃಸತ್ವವನ್ನು ವಿವಿಧ ಆಯಾಮಗಳಲ್ಲಿ ನಿರೂಪಿಸಿದ್ದಾರೆ. ಆ ಮೂಲಕ ಕನ್ನಡ ಸಣ್ಣ ಕಥೆಗಳಲ್ಲಿ ಚಿತ್ರಿತವಾಗಿರುವ ಹಲವಾರು ಸ್ತ್ರೀ ಪಾತ್ರಗಳು ಸಮಾಜದ ಜೀವಸೆಲೆಯಾಗಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಚಿತ್ರಣಗೊಂಡಿವೆ.

೫.೩ ಹಸಿವು ಮತ್ತು ಬಡತನ

ಭಾರತೀಯರಿಗೆ ಬಡತನ ಸಹನೀಯ ವಿಚಾರವಾಗಿದ್ದು ಕತೆಯೂ ಆಗಬಲ್ಲದು. ಸ್ವಾತಂತ್ರ್ಯಾನಂತರ ಬಡತನದ ಪ್ರಮಾಣ ಇಳಿಯುತ್ತಿದೆಯಾದರೂ ಬಡರೈತನ ಆತ್ಮಹತ್ಯೆ ಹೆಚ್ಚುತ್ತಿದೆ. ನಮ್ಮ ದೇಶದ ಮಟ್ಟಿಗೆ ಬಡತನದ ಹಿನ್ನೆಲೆಯಲ್ಲಿ ಶ್ರೀಮಂತಿಕೆಯನ್ನು, ಶ್ರೀಮಂತಿಕೆಯ ಬೆನ್ನಲ್ಲಿ ಬಡತನವನ್ನು ಅರ್ಥೈಸಬೇಕಾಗಿದೆ. ಭಾರತೀಯರಿಗೆ ಬಡತನದ ವಿಚಾರದಲ್ಲಿರುವ ಸಹನೀಯತೆ, ಪ್ರಬುದ್ಧತೆ, ಸಮಚಿತ್ತವನ್ನು ಪ್ರಶ್ನಿಸುವಂತಿಲ್ಲ. ಭೂಮಿ ಅವಲಂಬಿಸಿದವರ ಬಡತನವೇ ಹೆಚ್ಚಾಗಿದ್ದು ಉದಾರೀಕರಣದ ಶ್ರೀಮಂತಿಕೆಯಲ್ಲಿ ನೈತಿಕತೆಯಮಟ್ಟ ಕುಸಿಯುತ್ತಲೇ ಇದೆ. ಸಮಾಜ ಸುಧಾರಣೆ ಹಾದಿಯಲ್ಲಿ ಸಾಗುತ್ತಿದ್ದರೂ ಬಡವರ, ರೈತರ ಬದುಕಿನ ಸುಧಾರಣೆ ಅಷ್ಟಕಷ್ಟೆ

ಭೂಮಿಯಲ್ಲಿ ಬೆಳೆದ ಬೆಳೆಗೆ ಬೆಲೆ ಹೆಚ್ಚಾಗದಿದ್ದರೂ ಭೂಮಿಗೆ ಬೆಲೆಹೆಚ್ಚಿ ಆರ್ಥಿಕ ಅಸಮಾನತೆಗೆ ಕಾರಣವಾಗಿ ರೈತ ಅಭದ್ರತೆ, ಅಸುರಕ್ಷತೆಯಲ್ಲಿ ಬದುಕಬೇಕಾಗಿದೆ. ಒಂದೆಡೆ ವಿಶಾಲಬಂಗಲೆಗಳು ರೂಪಿತವಾದರೆ ಸೂರಿಗೆ ಗತಿಯಿಲ್ಲದ ಬದುಕು ಇನ್ನೊಂದೆಡೆ ಇರುವುದು ಭಾರತದ ವಾಸ್ತವಿಕತೆಯಾಗಿದೆ. ವಾಹನಗಳ ಸಂಖ್ಯೆ ವೃದ್ಧಿಯಾಗುತ್ತಿರುವ ಜೊತೆಗೆ ಹಸಿದವರ ಸಂಖ್ಯೆಯೂ ವೃದ್ಧಿಯಾಗುತ್ತಿದೆ. ಎಷ್ಟು ಕಷ್ಟಪಟ್ಟರೂ ನಮ್ಮ ಬದುಕು ಹೀಗೇಕಿದೆ ಎಂಬ ಅಳಲು

ರೈತನ ನಕಾರಾತ್ಮಕ ಧೋರಣೆಗೆ ಕಾರಣವಾಗಿದೆ. ಜಾಗತಿಕ ಮಟ್ಟದಂತೆಯೇ ಭಾರತದಲ್ಲಿಯೂ ಬಡತನದ ಪ್ರಮಾಣ ಶೇಕಡವಾರು ಸಂಖ್ಯೆಯಲ್ಲಿ ಕಡಿಮೆಯಾಗಿದೆ ಎಂಬ ವರದಿಯ ಹೇಳಿಕೆ ಸಮಾಧಾನವೆನ್ನಿಸಿದರೂ ವಾಸ್ತವಿಕ ಚಿತ್ರಣ ಸ್ವಲ್ಪ ಬೇರೆಯಾಗಿದೆ. ಬಡತನದ ಮೂಲದ ಬಗ್ಗೆ ಹೆಚ್ಚು ಗಮನಹರಿಸಿದರೆ ಅದರ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನವೆನಿಸುತ್ತದೆ.

ವಿಜ್ಞಾನ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆ ಮಾಡಿದ್ದರೂ ಮಾನವನ ಬಹುಪುರಾತನವಾದ ತಲಸ್ಪರ್ಶಿಯಾದ ಸಮಸ್ಯೆ ಹಸಿವನ್ನು ಪೂರ್ಣವಾಗಿ ಪರಿಹರಿಸಲು ಯಾವ ರಾಷ್ಟ್ರದಿಂದಲೂ ಸಾಧ್ಯವಾಗಿಲ್ಲ. ಪ್ರತಿಕ್ಷಣವೂ ಎಚ್ಚರಿಸುವ ಹಸಿವು ಮನುಷ್ಯನನ್ನು ಅನಾದಿಕಾಲದಿಂದಲೂ ಕಾಡುತ್ತಿದ್ದು ನಮ್ಮ ದೇಶದಲ್ಲಿಯೂ ಈ ಸಮಸ್ಯೆ ಯಾವಾಗಲೂ ಉಲ್ಬಣವಾಗೇ ಇರುತ್ತದೆ.

"ಆರ್ಥಿಕ ಬೆಳವಣಿಗೆಯಿಂದ ಬಡತನ ನಿರ್ಮೂಲನವಾದರೂ ಮೇಲು-ಕೀಳು ಇದ್ದೇ ಇರುತ್ತದೆ. ಬಡತನ ಮತ್ತು ಜಾತಿ ಹಾಗೂ ಲಿಂಗತಾರತಮ್ಯಗಳು ಒಂದನ್ನೊಂದು ಬಳಸಿಕೊಂಡು ಬದುಕುತ್ತವೆ" [೧೦೨] ಎಂಬ ಮಾತು ಸಾಮಾಜಿಕ ಅಸಮಾನತೆ ದೂರವಾಗಬೇಕಾದ ಅಗತ್ಯತೆಯನ್ನು ಮನಗಾಣಿಸುತ್ತದೆ.

ಹಸಿದವನ ಸಂಕಟ ಹಸಿದವನಿಗೆ ಗೊತ್ತೇ ಹೊರತು ಹೊಟ್ಟೆ ತುಂಬಿದವರಿಗೆ, ಹಸಿವಿನ ಅನುಭವವಿರದವನಿಗೆ ತಿಳಿಯಲಾರದು. ಅರೆಹೊಟ್ಟೆ, ಬರಿಹೊಟ್ಟೆಯಲ್ಲಿ ನೀರುಕುಡಿದು, ಹೊಟ್ಟೆಗೆ ಬಟ್ಟೆಕಟ್ಟಿದವರು ನಮ್ಮ ದೇಶದಲ್ಲಿ ಕಡಿಮೆಯಿಲ್ಲ. ಅನ್ನವಿಲ್ಲದೆ ಪರಿತಪಿಸುವರು ಒಂದೆಡೆಯಾದರೆ ತಿಂದಿದ್ದನ್ನು ಜೀರ್ಣಿಸಿಕೊಳ್ಳಲು ಕಸರತ್ತು ಮಾಡುವರು ಇನ್ನೊಂದೆಡೆ ಇದ್ದಾರೆ. ಹಸಿವಿನ ವಿಚಾರದಲ್ಲಿ ಮನುಷ್ಯ ನಾಚಿಕೆ ಮೀರಿ ನಿಲ್ಲುವವನೇ ಆಗಿದ್ದು ಹಸಿವಿಂಗಿಸಿಕೊಳ್ಳಲು ಏನನ್ನೂ ಮಾಡಬಲ್ಲ. ಹಸಿವಿನ ಅರಿವಿರುವವರಾರು ಆಹಾರವನ್ನು ನಷ್ಟ ಮಾಡುವುದಿಲ್ಲ. ಮಾನವನ ಹಸಿವಿನ ನಿವಾರಣೆಗೆ ಸಮಾಜದಲ್ಲಿ ಒಳ್ಳೆಯ ಕೆಲಸಗಳು ನಡೆಯುತ್ತಿದ್ದರೂ ಬೆಳಕಿಗೆ ಬಾರದಿರುವುದೇ ಹೆಚ್ಚು. ಹಸಿವು ಮತ್ತು ಬಡತನದ ನಿರ್ಮೂಲನೆ ದೇಶದಲ್ಲಿ ಮೊದಲ ಆದ್ಯತೆಯಾಗಬೇಕಿದೆ.

"ಅನಾರೋಗ್ಯದಿಂದ ಸಂಪಾದಿಸಲು ಸಾಧ್ಯವಾಗದ ಮಕ್ಕಳು, ವೃದ್ಧರು, ಅನಾರೋಗ್ಯ ಪೀಡಿತರು, ಅಶಕ್ತರು ಇವರೆಲ್ಲರ ಯೋಗಕ್ಷೇಮವನ್ನು ಸಮಾಜ ನೋಡಿಕೊಳ್ಳಬೇಕು ಎಂಬ ಕಾಳಜಿ

---

೧೦೨ ಎ.ಎಸ್. ಪ್ರಭಾಕರ, ಲೋಹಿಯಾ : ವರ್ತಮಾನ ಮುಖಾಮುಖಿ, ೨೦೧೨, ಪು : ೧೪೯.

ಅದರ ಹಿಂದಿತ್ತು. ಗಾಂಧಿ ಚಿಂತನೆಯ ಹಲವು ಅಂಶಗಳು ಲೋಹಿಯಾ ವಾದದಲ್ಲಿ ಕಂಡುಬಂದರೆ, ಗಾಂಧಿ, ಲೋಹಿಯಾ ಮತ್ತು ದೀನದಯಾಳರ ಚಿಂತನೆಗಳಲ್ಲಿ ಬಹುಮಟ್ಟಿನ ಸಾಮ್ಯವನ್ನು ಗುರುತಿಸಬಹುದು"[೧೦೩] ಎಂಬ ಸುಧೀಂದ್ರ ಬುಧ್ಯ ಅವರ ಅಭಿಪ್ರಾಯ ಹಸಿವಿನ ನೆಲೆಯಲ್ಲಿ ಪೂರಕ ಅಂಶವೆನಿಸುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯವು ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಬೆಳೆದು ಬಂದಿದ್ದರಿಂದ ಅವುಗಳಲ್ಲಿ ಸತ್ಯ, ಧರ್ಮ, ನ್ಯಾಯ, ನಿಷ್ಠೆ, ಇಂತಹ ಪಾರಮಾರ್ಥಿಕ ಮೌಲ್ಯಗಳು ದಾಖಲಾಗಿ ಬರೆಯಲ್ಪಟ್ಟವು. ಹನ್ನೆರಡನೆ ಶತಮಾನದಲ್ಲಿ ಶರಣರಿಂದ ಈ ಮೌಲ್ಯಗಳು ಸಮಾಜಮುಖಿಯಾದವು. ಅಂದರೆ ಸಮಾಜದ ಸರ್ವರಿಗೂ ದಕ್ಕುವ ಸಮಾನತೆ, ಭ್ರಾತೃತ್ವ, ಸಹಿಷ್ಣುತೆಗಳು ಸಾಹಿತ್ಯದಲ್ಲಿ ಜೊತೆಗೂಡಿದವು. ಆಧುನಿಕ ಶಿಕ್ಷಣ ಕ್ರಮದಿಂದ ಕನ್ನಡ ಸಾಹಿತ್ಯವು ತನ್ನ ಪರಿಧಿಯನ್ನು ವಿಸ್ತರಿಸಿಕೊಂಡಿತು. ಪುರಾಣದ ಹಿನ್ನೆಲೆಯ ಅಡಿಪಾಯವನ್ನು ತ್ಯಜಿಸಿ ಸಮಾಜ ಮುಖಿ ಅಂಶಗಳನ್ನು ಮೈಗೂಡಿಸಿಕೊಂಡು ಪರಿಸರದೊಡನೆ ಮೇಳೈಸಿತು. ಇದರಿಂದ ಆಧುನಿಕ ಕನ್ನಡ ಸಾಹಿತ್ಯ ವಸ್ತುವೈವಿಧ್ಯತೆಯಿಂದ ಸಮೃದ್ಧಗೊಂಡಿತು. ದೇವರು, ಧರ್ಮ, ಆಚಾರ ವಿಚಾರಗಳ ಜೊತೆಗೆ ಸಮಾಜ ಮತ್ತು ಸಮಾಜದ ಜನರ ಬದುಕಿನ ಅಂಶಗಳು ಕೂಡ ಮಹತ್ವ ಪಡೆದುಕೊಂಡವು. ಸ್ವಾತಂತ್ರ್ಯೋತ್ತರ ಕನ್ನಡಸಾಹಿತ್ಯ, ಪಾಶ್ಚಿಮಾತ್ಯ ಸಿದ್ಧಾಂತಗಳು ಮತ್ತು ಆಧುನಿಕ ಚಿಂತನೆಗಳಿಂದ ಹೊಸರೂಪು ಪಡೆದುಕೊಂಡಿತು. ಅಲ್ಲಿಯವರೆಗೆ ನಗಣ್ಯವೆನಿಸಿದ ಜನರ ಬದುಕು ಕಾವ್ಯದ ವಸ್ತುವಾಗಿ ಮಾರ್ಪಟ್ಟಿತು. ಸಮಾಜ, ಸಮಾಜದಲ್ಲಿನ ಜನರ ಬವಣೆಗಳು ಸಾಹಿತ್ಯದಲ್ಲಿ ಮಹತ್ವ ಪಡೆದುಕೊಂಡವು. ಜಾತಿ ವ್ಯವಸ್ಥೆ, ಅಸ್ಪೃಷ್ಯತೆ, ಹಸಿವು, ಬಡತನ, ನಿರುದ್ಯೋಗ, ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳು ಸಾಹಿತ್ಯದ ವಸ್ತುವಾಗಿ ಹಲವಾರು ಚಳವಳಿಗೆ ಕಾರಣವಾದವು. ಹೀಗೆ ಸಾಹಿತ್ಯದ ಒಳಗೆ ಸ್ಥಾನಪಡೆದುಕೊಂಡ ಈ ಅಂಶಗಳು ಪ್ರಸ್ತುತ ಬದುಕಿನ ಜೀವಂತ ಸಮಸ್ಯೆಗಳಾದರೂ ಅವುಗಳನ್ನು ಗುರುತಿಸಿ ಬರಹದ ಮೂಲಕ ಅನಾವರಣಗೊಳಿಸಿದ ಸಾಹಿತ್ಯ ಅವುಗಳನ್ನು ಮೌಲ್ಯಗಳೆಂಬಂತೆ ದಾಖಲಿತು. ಹಸಿದವನಿಗೆ ಹಸಿವು ದೊಡ್ಡ ಮೌಲ್ಯವಾಗಿ ಪರಿಗಣಿತವಾದಾಗ ಅದನ್ನು ನಿರ್ಮೂಲನ ಮಾಡಲು ಜನಸಾಮಾನ್ಯರ ಪ್ರಜ್ಞೆಗೆ ಸಾಹಿತ್ಯದ ಮೂಲಕ ಅರಿವು ಮೂಡಿಸುವ ಪ್ರಯತ್ನವಾಗಿ ಮೌಲ್ಯವೆನಿಸಿತು. ಅದೇ ರೀತಿ ಇಂತಹ ಹಲವಾರು ಬದುಕಿನ ಸಮಸ್ಯೆಗಳು ಸಾಹಿತ್ಯದಲ್ಲಿ ಮೌಲ್ಯಗಳೆನಿಸಿತು. ಕುವೆಂಪು ಅವರ 'ಕಲ್ಕಿ' ಬೇಂದ್ರೆಯವರ

---

೧೦೩ ಸುಧೀಂಧ್ರ ಬುಧ್ಯ, ಪ್ರಜಾವಾಣಿ, ೨೫.೦೯.೨೦೧೫, ಪುಟ : ೭.

'ಕುರುಡುಕಾಂಚಾಣ' ಮತ್ತು 'ಅನ್ನವತಾರ' ಮೊದಲಾದ ಕವಿತೆಗಳು ನವೋದಯ ಕಾಲಘಟ್ಟದಲ್ಲಿಯೇ ರಚಿತಗೊಂಡು ಮಹತ್ವಪಡೆದುಕೊಂಡವು. ಅದೇ ರೀತಿ ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಕಾಲಘಟ್ಟದಲ್ಲಿ ಹಲವಾರು ಸಾಹಿತಿಗಳು ಕತೆ, ಕವನ, ನಾಟಕ, ಕಾದಂಬರಿ ಮೊದಲಾದ ಪ್ರಕಾರಗಳ ಮೂಲಕ ಆಧುನಿಕ ಚಿಂತನೆಗಳನ್ನು ಮೌಲ್ಯಗಳೆಂಬಂತೆ ತಮ್ಮ ತಮ್ಮ ಸಾಹಿತ್ಯದಲ್ಲಿ ದಾಖಲಿಸಿ ಜಾಗೃತಿಯನ್ನುಂಟು ಮಾಡಿದ್ದಾರೆ. ನಿರಂಜನ, ಪಿ. ಲಂಕೇಶ್, ಕೆ.ಪಿ. ತೇಜಸ್ವಿ, ಆಲನಹಳ್ಳಿ ಕೃಷ್ಣ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಕುಂ.ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಮೊಗಳ್ಳಿ ಗಣೇಶ, ಅಮರೇಶ ನುಗಡೋಣಿ, ವಸುಧೇಂದ್ರ, ಸುನಂದ ಕಡಮೆ, ವೈದೇಹಿ, ಸಾರಾ ಅಬೂಬುಕ್ಕರ್, ಹೆಚ್. ನಾಗವೇಣಿ, ಮೊದಲಾದ ಸಾಹಿತಿಗಳಿಗೆ ಸಾಮಾಜಿಕ ಕಳಕಳಿಯೇ ಮೌಲ್ಯವಾಗಿ ಅವರು ಹೆಚ್ಚು ಮಹತ್ವವನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಶೀರ್ಷಿಕೆಯ ಪರಿಧಿಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಚಿತ್ರಿತವಾಗಿರುವ ಸಾಮಾಜಿಕ ಜೀವನ, ಸ್ತ್ರೀಯರ ಬದುಕು, ಬವಣೆಗಳು, ಬಡಜನರ ಶೋಷಿತರ ಹಸಿವು ಮತ್ತು ಬಡತನದ ಚಿತ್ರಣ, ಬಡವರ ಬದುಕಿನಲ್ಲಿ ಬಂದು ಹೋಗುವ ಧರ್ಮಾಚರಣೆಗಳ ವ್ಯವಸ್ಥೆ ಮತ್ತು ಕೆಳವರ್ಗದ ಗಟ್ಟಿನೆಲೆಯ ಜೀವತುಂಬಿದ ಭಾಷೆಯ ಬಳಕೆ ಈ ಮೊದಲಾದ ಅಂಶಗಳನ್ನು ಪ್ರಸ್ತುತ ಆಧುನಿಕ ಕಾಲದ ಮೌಲ್ಯಗಳಾಗಿ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

"ಇಂದಿನ ಹಸಿವು, ಆಹಾರ ಧಾನ್ಯಗಳ ಅಲಭ್ಯತೆಯಿಂದ ಉಂಟಾದ ಹಸಿವಲ್ಲ. ಬಡಜನರ ಖರೀದಿಸುವ ಸಾಮರ್ಥ್ಯ ಕಡಿಮೆಯಾದ್ದರಿಂದ ಉಂಟಾದ ಸ್ಥಿತಿ"[೧೦೪] ಎಂಬ ಸ್ವಾಮಿನಾಥನ್ ಅವರ ಅಭಿಪ್ರಾಯದಂತೆ ಹಸಿವಿನ ಅರಿವಿರುವ ಯಾರೂ ಆಹಾರವನ್ನು ನಷ್ಟಮಾಡುವುದಿಲ್ಲ.

"ನಗರ–ಗ್ರಾಮ, ನಗರಾಭಿವೃದ್ಧಿ – ಗ್ರಾಮಾಭಿವೃದ್ಧಿ, ನಾಗರೀಕತೆ – ಗ್ರಾಮ ಸಂಸ್ಕೃತಿ ಪರಸ್ಪರ ವಿರೋಧ ನೆಲೆಗಳಾಗಿವೆ. ನಗರಗಳು ಗೆಲ್ಲುತ್ತಿವೆ. ಗ್ರಾಮಗಳು ಸೋಲುತ್ತಿವೆ. ಗ್ರಾಮ ಗ್ರಾಮಾಭಿವೃದ್ಧಿ, ಗ್ರಾಮ ಸಂಸ್ಕೃತಿ ನಾಮಾವಶೇಷವಾಗುತ್ತಿದೆ. ಗ್ರಾಮಗಳ ಸೋಲು ಕೇವಲ ಗ್ರಾಮಗಳ ಸೋಲಲ್ಲ. ಅದು ಸಮಗ್ರ ಮಾನವೀಯತೆಯ ಸೋಲಾಗಿದೆ"[೧೦೫] ಎಂಬ ಮಾತಿನಂತೆ ಅಭಿವೃದ್ಧಿಯ ಹೆಸರಿನಲ್ಲಿ ಸಂಸ್ಕೃತಿ, ಮಾನವೀಯತೆ ಹಿಂದೆ ಸರಿಯುತ್ತಿರುವುದರ ಬಗ್ಗೆ ಆತಂಕವ್ಯಕ್ತವಾಗಿದೆ.

---

೧೦೪ ಜನಪದ, ಅಕ್ಟೋಬರ್ ೨೦೧೫, ಪ್ರ : ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪು: ೧೮.
೧೦೫ ಪ್ರಸನ್ನ, ಪ್ರಜಾವಾಣಿ, ೨೯.೧೦.೨೦೧೫, ಪು: ೬.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಇಬ್ಬರ ಕಥೆಗಳಲ್ಲೂ ಅಧೀನ ಸಂಸ್ಕೃತಿಯ ಅಸಹಾಯಕತೆ, ಪ್ರತಿರೋಧ, ಪಲಾಯನಗಳನ್ನು ಪಾತ್ರಗಳಲ್ಲಿ ಕಾಣಬಹುದು. ಕತೆಯ ಒಳದನಿ ಬಂಡಾಯದ ಆಶಯವೇ ಆಗಿದೆ. ರಾಮಣ್ಣ ಅವರ ಕತೆಗಳು ಬಡತನ ನಿವಾರಣೆಯಾಗದಿದ್ದಲ್ಲಿ ಸಾಮಾಜಿಕ ಬದುಕಿನಲ್ಲಿ ಆಗಬಹುದಾದ ಅನಾಹುತಗಳ ಬಗ್ಗೆ ಎಚ್ಚರವಹಿಸುತ್ತಾರೆ. ಇಬ್ಬರ ಕತೆಗಳಲ್ಲೂ ಮಾನವೀಯ ಅಂತಃಕರಣ ಬಡಕುಟುಂಬದಲ್ಲಿ ಜಿನುಗುವುದನ್ನು ಕಾಣಬಹುದು. ರಾಮಣ್ಣ ಅವರು ಉಳ್ಳವರ ಮನೆಯಲ್ಲಿ ಜನಿಸಿದ್ದು ಬಡತನ ಮತ್ತು ಹಸಿವಿನ ನೇರವಾದ ಅನುಭವ ಇಲ್ಲವಾದರೂ ಬಾಲ್ಯದಲ್ಲಿ ಹಸಿವಿನ ಹಲವು ಮುಖಗಳನ್ನು ಗ್ರಹಿಸಿರುವುದನ್ನು ಕತೆಗಳಲ್ಲಿ ಕಾಣಬಹುದು. ಮೇಲ್ವರ್ಗದವರ ವರ್ತನೆ ರಾಮಣ್ಣ ಅವರಿಗೆ ಬಾಲ್ಯದಲ್ಲೇ ಇರುಸು ಮುರುಸುಮಾಡಿದ್ದು ಅವರ ಸಾಮಾಜಿಕ ಗ್ರಹಿಕೆ ಆಗಲೇ ಪಕ್ವವಾಗುತ್ತಿತ್ತು ಎಂಬ ಸೂಚನೆ ಅವರ ಕತೆಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದು.

ಕುಂ.ವೀರಭದ್ರಪ್ಪ ಅವರಿಗೆ ವೈಯಕ್ತಿಕವಾಗಿ ಹಸಿವಿನ ಕರಾಳ ಅನುಭವ ಬಾಲ್ಯದಲ್ಲಾಗಿದ್ದು ಹಸಿವಿನ ತೀವ್ರತೆಯನ್ನು ಎಳೆಎಳೆಯಾಗಿ ಪಾತ್ರಗಳ ಮೂಲಕ ಕಾಣಿಸುತ್ತಾರೆ. ಒಟ್ಟಾರೆ ಹಸಿವು ಶಮನವಾಗಬೇಕು ಎಂಬುದು ಕಥೆಗಳಲ್ಲಿ ಮುಖ್ಯವಾಗಿ ಉಳಿದಿದ್ದು ಅವರಿಗೆ ನಗಣ್ಯವೆನಿಸುತ್ತದೆ. ಕುಂವೀ ಕತೆಗಳಲ್ಲಿ ಕೊಲೆ-ಸಾವು ಅಷ್ಟಾಗಿ ಕಂಡುಬರುವುದಿಲ್ಲ. ಮನುಷ್ಯನ ಮೂಲಭೂತ ಸಮಸ್ಯೆಯಾದ ಹಸಿವು ನೀಗುವುದು ಮುಖ್ಯವೆನಿಸುತ್ತದೆ. ಕುಂ.ವೀರಭದ್ರಪ್ಪ ಅವರಿಗೆ ಹಸಿವು ಮತ್ತು ಬಡತನ ಬದುಕಿನಲ್ಲಿ ಹಲವು ಪಾಠಗಳನ್ನು ಕಲಿಸಿತ್ತು. ಆದ್ದರಿಂದ ಅವರ ಕತೆಗಳಲ್ಲಿ ಹಸಿವು ಸ್ಥಾಯಿಗುಣವಾಗಿದ್ದು, ಭಿನ್ನವಾಗಿ ಕೆಳಜಾತಿಯ ಪಾತ್ರಗಳಲ್ಲಿ ಕಾಣಿಸಿಕೊಂಡಿದೆ. ಆದರೆ ರಾಮಣ್ಣ ಅವರು ಜಮೀನ್ದಾರಿಕೆ ಮನೆತನದವರಾದ್ದರಿಂದ ಬಡತನ-ಹಸಿವಿನ ಅನುಭವ ಕಡಿಮೆಯೆನ್ನಬಹುದು. ಆದರೂ ಅವರ ಸಾಮಾಜಿಕ ಗ್ರಹಿಕೆ ಚಿಕ್ಕಂದಿನಲ್ಲೇ ಅವರಿಗೆ ಹಲವು ಪ್ರಶ್ನೆಗಳನ್ನು ಮೂಡಿಸಿದ್ದವು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕುಂವೀ ಅವರು ತಮ್ಮ ಚಿಂತನೆಯ ಹರವಿನಲ್ಲಿ ಹಸಿವನ್ನು ಪ್ರಧಾನ ಭಿತ್ತಿಯಾಗಿ ಬಳಸಿಕೊಂಡು ಅಮೂಲಕ ಅಸಮಾನತೆ, ಪ್ರತಿಭಟನೆಯನ್ನು ಆ ಕತೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ರಾಮಣ್ಣ ಅವರ 'ಗಾಂಧಿಸಂತಾನ', 'ಜೀತ', 'ಬೆಟ್ಟದ ಮೇಲೊಂದು ಮನೆಯ ಮಾಡಿ' ಕತೆಗಳು ಹಾಗೂ ಕುಂವೀ ಅವರ 'ಕತ್ತಲನು ತ್ರಿಶೂಲ ಹಿಡಿದ ಕಥೆ', 'ಕಿವುಡ ನಾಯಿಯಾದ ಪ್ರಸಂಗ', 'ದೇವರ ಹೆಣ', 'ಹುಗ್ಗಿ', 'ಶ್ರಾವಣ', 'ಉಡ' ಕತೆಗಳಲ್ಲಿ ಜೀತಪದ್ಧತಿಯ ಅಮಾನವೀಯ ಮುಖವನ್ನು ಹಸಿವಿನ ಹಿನ್ನಲೆಯಲ್ಲಿ ಕಾಣಿಸುತ್ತಾರೆ. ಸಾಮಾಜಿಕ

ಅಸಮಾನತೆಯ ಸೂಕ್ಷ್ಮನೋಟ ನೀಡುವ ಇವರ ಕಥೆಗಳು ವಿಭಿನ್ನ ನೆಲೆಯಲ್ಲಿ ಅಭಿವ್ಯಕ್ತಗೊಂಡಿವೆ.

ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲ ಹಿಡಿದ ಕಥೆ', 'ಕಿವುಡ ನಾಯಿಯಾದ ಪ್ರಸಂಗ', 'ದೇವರ ಹೆಣ' ಕತೆಗಳಲ್ಲಿ ಹಸಿದವರು ಉಂಡವರ ವಿರುದ್ಧದ ಪ್ರತಿಭಟನೆಯಲ್ಲಿ ಮೂಲಭೂತ ಅವಶ್ಯಕತೆ ಪೂರೈಸಿಕೊಳ್ಳುವುದಕ್ಕಾಗಿಯೇ ಹೋರಾಡುತ್ತಾರೆ. ಹಸಿವಿನಿಂದ ಕಂಗೆಟ್ಟ ಆಕ್ರೋಶ ಕತೆಗಳಲ್ಲಿ ಇದ್ದರೂ ಅಲ್ಲಿ ಕೆಳಸ್ತರ ಬದುಕಿನ ನೋವಿನ ಚಿತ್ರಗಳೇ ಕಾಣುವುದು. ಕಥೆಗಾರರಾದ ಎ.ಜೆ. ಸದಾಶಿವ ಅವರು ಕುಂ.ವೀರಭದ್ರಪ್ಪ ಅವರ ಕತೆಗಳನ್ನು ಕುರಿತು –

"ಹೊಟ್ಟೆಯ 'ಹಸಿವು' ಮನುಷ್ಯನ ಮೂಲಭೂತ ಅಗತ್ಯಗಳಲ್ಲೊಂದು. ಹಸಿವಿನ ಸಮಸ್ಯೆಯನ್ನು ಒಳಗೊಂಡ ಕುಂ.ವೀರಭದ್ರಪ್ಪ ಕತೆಗಳಲ್ಲಿ 'ಕಿವುಡನಾಯಿಯಾದದ್ದು', ಕತ್ತಲನು ತ್ರಿಶೂಲ ಹಿಡಿದ ಕತೆ', 'ಹುಗ್ಗಿ', 'ದೇವರಹೆಣ' ಇತ್ಯಾದಿ ಕಥೆಗಳು ಪ್ರಮುಖವಾಗಿವೆ. 'ಕತ್ತಲನು ತ್ರಿಶೂಲ ಹಿಡಿದ ಕತೆ' ಹಾಗೂ 'ಕಿವುಡ ನಾಯಿಯಾದದ್ದು' ಕಥೆಗಳಂತೂ ಹಸಿದವರ ಹೊಟ್ಟೆಯನ್ನು ಹೊಕ್ಕು ಚಿಂತಿಸಿದಂತಹವು" [೧೦೬] ಎಂದು ಹೇಳಿರುವುದು ಹಸಿವಿನ ಭೀಕರತೆಯನ್ನು ಕುರಿತದ್ದಾಗಿದೆ.

ರಾಮಣ್ಣ ಅವರ 'ಗಾಂಧಿಸಂತಾನ' ಕಥೆಯನ್ನು ಲೇಖಕರು ತಮ್ಮ ವೈಯಕ್ತಿಕ ಅನುಭವದ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಮೇಲ್ವರ್ಗ ಮತ್ತು ಕೆಳವರ್ಗಗಳ ನಡುವಿನ ಸಂಘರ್ಷಗಳು ಬಾಲ್ಯದಲ್ಲಿ ಲೇಖಕರಿಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದ್ದು ಸೂಕ್ತ ಉತ್ತರ ಸಿಗದೆ ತೊಳಲಾಡಿದ್ದರು. ಲೇಖಕರ ಓರಗೆಯ ಮೆಣಸ ತನ್ನ ಸತ್ತ ಅಪ್ಪನ ಸಾಲಕ್ಕಾಗಿ ನಿರಂತರವಾಗಿ ದುಡಿದರೂ ತೀರದಿದ್ದಾಗ ಪ್ರತಿಭಟಿಸಿದ. ಊರವರ ಚುಚ್ಚುಮಾತಿಗೆ ತನ್ನ ಹರಿತ ಉತ್ತರಗಳಿಂದ ಬಾಯಿಮುಚ್ಚಿಸಿದ್ದ. ಏಕಾಂಗಿಯಾಗಿ ಅನ್ಯಾಯದ ವಿರುದ್ಧ ನೇರವಾಗಿ ದನಿಯೆತ್ತಿದ.

ಹೊಲೆಯ ಎಂದ ಜೋಯಿಸನಿಗೆ 'ಮನೆಹಾಳ ನೀನು ನಿಮ್ಮಪ್ಪ, ಅವರು ಇವರು ಕೊಟ್ಟಿದ್ದ ಮೇದು ಮೇದು ಒಳ್ಳೆ ತೆನೆ ಹಂದಿ ಆಗಿದ್ದಿ'.

---

೧೦೬ ಕುಂ.ವೀ. ಡೋಮ ಮತ್ತಿತ್ತರ ಕಥೆಗಳು, ೧೯೮೫, ಪು : ೧೦೫.

"ಹೊಲೆಯ ಪಲೆಯ ಅನಬ್ಯಾಡ ಕನಯ್ಯೋ ! ಹೆಚ್ಚಿಗೆ ಮಾತಾಡ್ದೆ ಜನಿವಾರ ಕಿತ್ತು ನನ್ನ ವಡೇದಾರಕ್ಕೆ ಗಂಟಾಕೋತಿ ನೋಡು"[೧೦೭] ಎಂದು ಜನಿವಾರದ ಕಡೆ ಕೈ ಬೀಸಿಯೇ ಬಿಟ್ಟ, ಕ್ಯಾಕರಿಸಿ ಜೋಯಿಸನ ಮೇಲೆ ಉಗಿದು ಬಿಟ್ಟ, ವ್ಯವಸ್ಥೆಯ ವಿರುದ್ಧ ದನಿಯೆತ್ತಿದ ರೀತಿ ಅತಿರೇಕವೆನಿಸಿದರೂ ಜೋಯಿಸನ ಮಾತು ನಡವಳಿಕೆ ಸುಸಂಸ್ಕೃತವಾಗಿರಲಿಲ್ಲ. ತಡೆದಿದ್ದ ಆಕ್ರೋಶ ವ್ಯಕ್ತವಾದ ಬಗ್ಗೆ ಒಪ್ಪಿತವಲ್ಲ. ಹೆದರಿದ ಊರಿನವರಿಂದ ಯಾವ ಬೆಂಬಲವೂ ಮೆಣಸನಿಗೆ ಸಿಗದೆ ಏಕಾಂಗಿಯಾದ ಕೊನೆಗೆ ತಾಯಿಯೇ ಗುರುತಿಸಲಾಗದ ಲಿಂಗಪತ್ತೆಯಾಗದ, ವಿಕಾರ ಹೆಣವಾಗಿ ಹೋದ. ಆದರೆ 'ಜೀತ' ಕತೆಯ ಪುಟ್ಟಸ್ವಾಮಿ ಗೌಡನ ಮನೆಯಲ್ಲಿ ಜೀತಕ್ಕಿದ್ದ ತನ್ನ ತಮ್ಮ ಚಿಕ್ಕರಾಮನನ್ನು ಹೊಡೆತದಿಂದ ರಕ್ಷಿಸುವಾಗ ತೀವ್ರವಾಗಿ ಗೌಡನನ್ನು ಪ್ರತಿರೋಧಿಸಿದ.

"ನಾನು ಅವರಣ್ಣ, ತಪ್ಪು ಮಾಡ್ದ ಅಂತ ಪ್ರಾಣ ತಗದೀಯಯ್ಯಾ? ಜೀತಕ್ಕವನೆ ಅಂತ ಕೊಂದುಬಿಡಯ್ಯ, ನಿನಗೆ ಮಕ್ಕಳಿಲ್ವೆ?

"ನೀನು ಮನ್ಸನೋ ದನವಯ್ಯ" ಎಂದು ದೇವೀರಯ್ಯ ಎತ್ತಿದ ಕೈಯನ್ನು ಹಿಡಿದುಕೊಂಡ"[೧೦೮]

ಪುಟ್ಟಸ್ವಾಮಿ ಎಲ್ಲರ ಎದುರು ಗೌಡನ ಮುಖದ ನೀರಿಳಿಸುತ್ತಾನೆ. ಅವನ ಪ್ರತಿಭಟನೆಯಲ್ಲಿ ಸಾತ್ವಿಕತೆಯಿದೆ. 'ಜೀತದ' ಪುಟ್ಟಸ್ವಾಮಿ ತನ್ನ ಕುಟುಂಬದ ಬಗ್ಗೆ ಮಾತ್ರ ಚಿಂತಿಸಿದರೆ 'ಗಾಂಧಿಸಂತಾನದ' ಮೆಣಸ ತನ್ನ ಸಮುದಾಯದ ಬಗ್ಗೆ ವಿಚಾರಮಾಡುತ್ತಾನೆ. ಸೀಮಿತನೆಲೆಯ ಪುಟ್ಟಸ್ವಾಮಿ ಕುಟುಂಬ ಬದುಕಿ ಉಳಿಯುತ್ತದೆ. ವಿಸ್ತಾರದ ನೆಲೆಯ ಮೆಣಸ ಹೆಣವಾಗುತ್ತಾನೆ. ಮೆಣಸ ಮೇಲ್ಜಾತಿಯವರೊಂದಿಗೆ ಘರ್ಷಣೆಗೆ ನಿಲ್ಲಬೇಕಾಗುತ್ತದೆ. ಜೋಯಿಸ "ಲೋ ! ಮೆಣಸ ನಿನ್ನ ನಾನು ಬಲಿಹಾಕಿ ಭೂಗತ ಮಾಡದೇ ಹೋದ್ರೆ ನಮ್ಮಪ್ಪನ ಮಗ ಅಲ್ಲ. ಇದಕ್ಕೆ ಇಲ್ಲಿರೋ ಜನರೇ ಸಾಕ್ಷಿ.[೧೦೯]

ಮೆಣಸನನ್ನು ಮುಗಿಸಲು ಜೋಯಿಸ, ಪಟೇಲ, ಶ್ಯಾನುಭೋಗ, ಉಳಿದ ತಲೆಗಳ ಸಭೆಯೇ ನಡೆಯುತ್ತದೆ. ವ್ಯವಸ್ಥೆಯ ವಿರುದ್ಧ ದನಿಯೆತ್ತಿದರೆ ತನ್ನವರೆನಿಸಿಕೊಂಡವರಿಂದ

---

೧೦೭ 'ಕಣಜ', ಲೋಹಿಯಾ ಪ್ರಕಾಶನ, ೨೦೧೧, ಪು : ೧೮೮.

೧೦೮ ಅದೇ, ಪು : ೭೪.

೧೦೯ ಅದೇ, ಪು : ೧೮೯.

ಹಿಡಿದು ಯಾರ ಬೆಂಬಲವೂ ಸಿಗದೆ, ಏಕಾಂಗಿಯಾಗಿ ಪ್ರತಿರೋಧ, ಹೋರಾಟ ಮಾಡಬೇಕಾದ ಅನಿವಾರ್ಯತೆಯನ್ನು ಎದುರಿಸಿದರೂ, ಬಲಿಷ್ಠರ ಕೈಮೇಲಾಗುವುದು ವಿಪರ್ಯಾಸ. ಕ್ರೌರ್ಯ, ಹಿಂಸೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಎಂದೂ ಪೂರಕವಲ್ಲ.

ಕುಂ.ವೀರಭದ್ರಪ್ಪ ಅವರ 'ಹುಗ್ಗಿ' ಕತೆಯಲ್ಲಿ ಬಸವನ ಅಪ್ಪನಿಗೆ ಮಕ್ಕಳಿಗೆ ಕೂಳು ಹೊಂದಿಸಲಾಗದ ಅಸಹಾಯಕತೆ. 'ಜೀತ'ಕತೆಯ ಚಿಕ್ಕರಾಮ, 'ಹುಗ್ಗಿ'ಯ ಬಸವ ವ್ಯವಸ್ಥೆಗೆ ಸಿಕ್ಕಿ ನಲುಗುವ ಮುಗ್ಧ ಬಾಲಕರು. ಚಿಕ್ಕರಾಮ ಜೀತಕ್ಕಿದ್ದರೆ ಬಸವನನ್ನು ಜೀತಕ್ಕಿರಿಸುವ ಹುನ್ನಾರ ಅವನ ಮನೆಯಲ್ಲಿ ನಡೆಯುತ್ತಿರುತ್ತದೆ. ಹಸಿವಿನಿಂದ ತತ್ತರಿಸಿದ ಎರಡೂ ಕುಟುಂಬಗಳು ಮಕ್ಕಳ ಹಸಿವನ್ನು ಜೀತದಿಂದ ಮಾತ್ರ ಪರಿಹರಿಸಲು ಸಾಧ್ಯ ಎಂಬ ನಿಲುವಿಗೆ ಬಂದಿರುತ್ತವೆ.

ಬಸವನ ಅಪ್ಪ ಬೆನ್ನು ಸವರುತ್ತಾ **"ಈ ಹೊತ್ತು ನಾವೆಲ್ಲ ಊರಿಗ್ಹೋಕ್ತೀವಿ..... ನೀನೊಬ್ನೆ ಗೌಡ್ರ ಮನ್ಯಾಗಿರು.. ಅವ್ರೀಗೆ ಹೇಳ್ತೀನಿ"** ಎಂದಾಗ ಬಸ್ವ **"ಇಲ್ಲ ನನ್ನ ಗೌಡ್ರ ಮನಿಯಾಗಿರೋದಿಲ್ಲ ನಾನು ಬರ್ತೀನಿ ಊರ್ಗೆ"**[೧೧೦] ಎಂದು ಅಪ್ಪನ ಭುಜ ಹಿಡಿದು ಅಲ್ಲಾಡಿಸತೊಡಗಿದ. ಹಸಿವಿನಿಂದ ಎಲ್ಲರೂ ಕಂಗಾಲಾಗಿದ್ದಾಗ, ಅವ್ವ ಹುಗ್ಗಿಯ ತಯಾರಿಯಲ್ಲಿ ತೊಡಗಿದ್ದಾಗ ಬಸವನಿಗೆ ಏನೋ ಅನುಮಾನ ಬಂದಿತ್ತು. ಆದರೂ ತನ್ನ ಗೆಳೆಯರಿಗೆ ತಮ್ಮ ಮನೆಯಲ್ಲಿ ಹುಗ್ಗಿ ಮಾಡುವುದನ್ನು ಹೇಳುತ್ತಾ ಕುಣಿಯುತ್ತಾ ಬಂದಿದ್ದರೂ ಮನಸ್ಸು ಭಯ, ಅಂಜಿಕೆ, ಸಂತೋಷಗಳ ಗೊಂದಲಗಳ ಗೂಡಾಗಿತ್ತು. ಹೀಗಿದ್ದಾಗ ಅವ್ವ ಹುಗ್ಗಿ ನೀಡದೆ ಗೌಡನ ಮನೆಗೆ ಗುಂಡಾಲುಕೊಡಲು ಏಕೆ ಹೇಳುತ್ತಿದ್ದಾಳೆಂಬ ಚಿಂತೆಕಾಡಿತು. ಅವ್ವನನ್ನು ಕಾಡಿಸಿ ಹುಗ್ಗಿ ಹಾಕಿಸಿಕೊಂಡು ತಿಂದು ಗೌಡನ ಮನೆಗೆ ಹೊರಟ.

ಗೌಡ 'ಬಾರ್ಲೆ ಬಸ್ಯ ನಿಮ್ಮಪ್ಪ.. ಹೇಳ್ದಂಗೆ ಬಂಧ್ಬಿಡು' ಎಂದಾಗ ಹೆದರಿದ ಬಸ್ಯಾ **"ನಮ್ಮಮ್ಮ ಗುಂಡಾಲು ಕೊಟ್ಟು ಜಲ್ದಿಬಾ ಅಂದ್ಲು.. ಇಲ್ಲಿಟ್ಟೇದಿನಿ ನೋಡ್ರಿ"** ಎಂದು ಹೊರಡಲು ಅನುವಾದ. ಅವನು ತಪ್ಪಿಸಿಕೊಳ್ಳುತ್ತಿದ್ದಾನೆಂದು ಭಾವಿಸಿದ ಗೌಡ ಎದ್ದು ನಿಂತು **"ಎಲ್ಲಿಗೋಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಟಾನ, ಈಗೆಲ್ಲಿರ್ತಾರೆ ನಿಮ್ಮಪ್ಪ ನಿಮ್ಮಮ್ಮ? ಎಲ್ರೂ ಊರ್ಗೆ ಹೊಂಟೋಗಿರ್ತಾರೆ" ಎಂದಾಗಲಂತೂ ಬಸವ ನಡುಗಿದ.**

೧೧೦ ಕುಂ. ವೀರಭದ್ರಪ್ಪ "ಬರಿ ಕಥೆಯಲ್ಲೋ ಅಣ್ಣಾ", ಸಪ್ನಬುಕ್ ಹೌಸ್, ಬೆಂಗಳೂರು, ೨೦೧೦, ಪು : ೯೭.

ಗೌಡ ಇನ್ನೇನು ತನ್ನನ್ನು ಹಿಡಿದೇಬಿಡುತ್ತಾನೆಂಬ ಭಯದಿಂದ ಇಲ್ಲಾ.. ನಿಮ್ಮನಿಯಾಗ ಸಂಬ್ಳಕ್ಕೆ ಇರಾದಿಲ್ಲ.. ನಾನು.. ನಮ್ಮಪ್ಪನ್ನೊತೆ ಊರಿಗೋಕ್ಕೀನಿ, ಊರಿಗೋಕ್ಕೀನಿ"[೧೧೧] ಎಂದು ಕೂಗುತ್ತಾ ಕುಪ್ಪಳಿಸಿ ಓಡತೊಡಗಿದ. ಮನೆಗೆ ಓಡಿ ಬಂದಾಗ ಅಪ್ಪ ಅವ್ವ ಊರು ಬಿಟ್ಟಿರುವುದು ತಿಳಿದಾಗ ಬಸವನಿಗಾದ ಅಸುರಕ್ಷಿತ ಮನೋಭಾವ, ಅನಾಥ ಪ್ರಜ್ಞೆ, ಭಯಗಳಿಂದ ಮುಗ್ಧ ಮನಸ್ಸಿಗಾಗುವ ಅಘಾತ ಕಡಿಮೆಯಲ್ಲ.

'ರಾಮಣ್ಣ ಅವರ 'ಜೀತ'ದ ಚಿಕ್ಕರಾಮ ಗೌಡನ ಮನೆಯಲ್ಲಿ ಜೀತಕ್ಕಿದ್ದು ನೋವನ್ನು ಅನುಭವಿಸುತ್ತಿದ್ದರೆ, ಕುಂ.ವೀರಭದ್ರಪ್ಪ ಅವರ 'ಹುಗ್ಗಿ'ಯ ಬಸವ ಜೀತದ ಭಯದಿಂದ ವಿಹ್ವಲನಾಗುತ್ತಾನೆ. ಎರಡೂ ಕಥೆಗಳಲ್ಲಿ ಸಾಮಾಜಿಕ ಸ್ವರೂಪ ಸೀಮಿತ ಪರಿಧಿಯಲ್ಲಿ ಸ್ವಲ್ಪವೇ ಕಾಣಿಸಿಕೊಳ್ಳುತ್ತದೆ. ಚಿಕ್ಕರಾಮನಿಗೆ ಅಣ್ಣನ ಬೆಂಬಲ ದೊರೆತರೆ, ಬಸವ ತೀರ ಅಸಹಾಯಕನಾಗಿಬಿಡುತ್ತಾನೆ. ಮನೆಗೆ ಬಂದಾಗ ತಂದೆ ತಾಯಿ ಊರುಬಿಟ್ಟಿದ್ದು, ಸಾಕಿದ ನಾಯಿ ಸತ್ತು ಬಿದ್ದಿರುವುದನ್ನು ಕಂಡಾಗ ಕಂಗಾಲಾಗುತ್ತಾನೆ. ಬಸವ ಮತ್ತು ಚಿಕ್ಕರಾಮರ ತಂದೆ ತಾಯಿ ಮಕ್ಕಳಿಂದ ದೂರವಾಗುವಾಗ ಪಡುವ ಸಂಕಟ ದಲಿತರ ಬದುಕಿನಲ್ಲಿ ಸಮಸಮಾಜ, ಸಮತೆ, ಗುಣಾತ್ಮಕ ಬದುಕು ಅಮೂರ್ತ ಆಶಯವಾಗಿ ಕಾಣುತ್ತದೆ. ಅವರಿಗಾಗುವ ವ್ಯಥೆ, ಅತ್ಯಂತಿಕ ಸಂಕಟ ಹಸಿವಿನ ಹಲವು ಆಯಾಮಗಳಲ್ಲಿ ಒಂದೆನಿಸುತ್ತದೆ.

ಕುಂ. ವೀರಭದ್ರಪ್ಪ ಅವರ 'ಹುಗ್ಗಿ'ಯ ಬಸವ ಗೌಡನಿಗೆ ಸಿಗದೆ ತಪ್ಪಿಸಿಕೊಂಡಿದ್ದು, ರಾಮಣ್ಣ ಅವರ 'ಜೀತ'ದ ಚಿಕ್ಕರಾಮ ಗೌಡನ ಏಟಿಗೆ ಸಿಗದೆ ಕಬ್ಬಿನಗದ್ದೆ ನುಗ್ಗಿದ್ದು ಮುಗ್ಧ ಚೇತನಗಳ ಪ್ರತಿರೋಧ ಹೊಸ ಆಶಯದತ್ತ ಸಾಗುತ್ತದೆ. ಭರವಸೆಯಿಲ್ಲದ ಬದುಕಿನ ದಾರಿ ಆರಿಸಿಕೊಂಡ ಬಸವ ಮತ್ತು ಚಿಕ್ಕರಾಮರ ಪೋಷಕರು ದಲಿತಕೇರಿಯ ಕೊನೆಯಿರದ ಹಸಿವಿನ ನೋವಿನ ಕಥೆಯಾಗಿ ನಿಲ್ಲುತ್ತಾರೆ.

ಬಸವ, ಗೌಡ ಮತ್ತು ನಾಯಿಯಿಂದ ತಪ್ಪಿಸಿಕೊಂಡು ಬರುವುದು ಕಥೆಗೆ ಜೀವಬರುವ ಕ್ಷಣವೆನಿಸುತ್ತದೆ. ಆದರೂ ನಾಯಿಸತ್ತಿದ್ದೇಕೆ? ತಾಯಿ ಹೊಟ್ಟೆ ತುಂಬ ಹುಗ್ಗಿ ಏಕೆ ನೀಡಲಿಲ್ಲ ಎಂಬುದು ಪ್ರಶ್ನೆಯಾಗಿ ನಿಲ್ಲುತ್ತದೆ. ರಾಮಣ್ಣ ಅವರ 'ಬೆಟ್ಟದ ಮೇಲೊಂದು ಮನೆಯಮಾಡಿ' ಕತೆಯ ಉರುಗಯ್ಯ ಉತ್ಸಾಹದಿಂದ ಕೃಷಿ ಮಾಡುವ ಗೇಣೀದಾರ. ವರ್ಷವಿಡೀ ಮನೆಮಂದಿಯೆಲ್ಲಾ ಅರೆಹೊಟ್ಟೆಯಲ್ಲಿ ದುಡಿದು ಭತ್ತ ಬೆಳೆದರೂ ನಾಲ್ಕು ಕಾಳು ಭತ್ತ ಹುಟ್ಟಲಿಲ್ಲ.

---

೧೧೧ ಅದೇ, ಪು : ೯೯.

ತನ್ನ ಕಷ್ಟವನ್ನು ಪರಿಪರಿಯಾಗಿ ಹೇಳಿಕೊಂಡು ಬೇಡಿದರೂ ಜಮೀನ್ದಾರ ಕರಗಲಿಲ್ಲ. ಉಳುವವನಿಗೆ ಭೂಮಿ ದೊರಕಬೇಕೆಂಬ ಕಾಯಿದೆ ಇದ್ದರೂ ಹೆಚ್ಚಿನ ಶ್ರಮಜೀವಿಗಳಿಗೆ ದಕ್ಕುವುದೇ ಇಲ್ಲ.

"ಮಕ್ಕಳು ಮರಿ ಹೊಟ್ಟೆಗಿಲ್ಲದೆ ಗೋಳ್‌ಗರೀತಾವೆ ನಾವಿಬ್ಬರೂ ಹೆಂಗೋ ಒಂದೊತ್ತು ಇದ್ರೆ ಒಂದೊತ್ತು ಅಸ್ಕೊಂಡು ನೀರು ಕುಡ್ದು ಮಲೀಕತೀವಿ. ಐಕ್ಳು 'ಅಸ್-ಉಸ್' ಅಂತ ಅತ್ತಾಗೂ ಇತ್ತಾಗೂ ಒದ್ದಾಡ್ತವೆ.. ನಿನ್ನೆ ದಿನವಂತೂ ನಂಕೊನೆ ಹೈದ ಸಿದ್ದರಾಮನ ಕಷ್ಟನೋಡಲಾರ್ದೆ... ಸರೋತ್ತೇಲಿ ಹೋಗಿ ಗೌಡ್ರ ಮನೇಲಿ ಎರ್ಡುಸೇರು ಅಸಿಟ್ಟು ತಂದು ಮುದ್ದೆ ಮಾಡ್ದೋ ಅವನ ನೆವೆದೇಲಿ ಎಲ್ಲಾಗ್ಯೂ ಇಟ್ಟು ಹುಟ್ಟಿದಂಗಾಯ್ತು. ನಿಂತಾವು ಕೇಳ್ದೆ ಇನ್ನಾರ್ನ ಕೇಳೋದೇಳಿ.. ದೊಡ್ ಮನಸ್ ಮಾಡಿ

ದೊಡ್ ಮನಸ್ ಮಾಡಿ. . ಎರ್ಡು ವರ್ಷದಿಂದ ನಾನೂ ನನ್ನೆಂಡ್ತಿ ಮಕ್ಳೂ ಗೇದೂ ಗೇದೂ ಸತ್ತು ಸುಣ್ಣಾಗೀವಿ. ನಿಮ್ಮೆಸುರು ಏಳ್ಕೊಂಡು ಒಸಿ ಅನ್ನ ಉಣ್ಣಕತೀವಿ.. ಬಡವನ ವಟ್ಟೆ ಮೇಲೆ....."[೧೧೨] ಎಂದು ಕಾಲುಹಿಡಿಯಲು ಹೋಗಿದ್ದು ಆರ್ಥಿಕ ಸಮಾನತೆಗಾಗಿ ಅಲ್ಲ, ಹೊಟ್ಟೆಗಾಗಿ ಅಷ್ಟೆ. 'ಅನ್ಯಾಯ ಮಾಡ್ಬ್ಯಾಡಿ' ಎಂದು ಗೋಗರೆದು ಕಾಲು ಹಿಡಿದಾಗ ಮುಖದ ಮೇಲೆ ತೆಂಕಪ್ಪ ಒದ್ದನು. ಅನ್ಯಾಯ ಪರಾಕಾಷ್ಠೆ ತಲುಪಿದಾಗ ಮಗ ಊರಯ್ಯ ತೆಂಕಪ್ಪನಿಗೆ ಬಾರಿಸಿ ತಲೆಯನ್ನೇ ಕತ್ತರಿಸಿದನು. ಹಸಿವು ಪ್ರಾಣತೆಗೆಯುವ ಮಟ್ಟಕ್ಕೆ ಕೊಂಡೊಯ್ಯುವುದು ಸಮಾಜದ ಅನಾರೋಗ್ಯದ ಸ್ಥಿತಿಯನ್ನು ಬಿಂಬಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಶ್ರಾವಣ' ಕತೆಯಲ್ಲಿನ ಉಪ್ಪುಳಿ ಗೌಡರ ಮನೆಯ ಆಳು. ಇದ್ದ ಒಂದು ಹಸು ಸತ್ತಿತು, ಕಾಯಿಲೆ ಹೆಂಡತಿ, ಪುಡಿ ಹೈಕಳು, ಉಪ್ಪುಳಿಗೆ ಬದುಕು ಅಸಹನೀಯವೆನ್ನಿಸಿ ತನ್ನ ಮೇಲೆ ಸಿಟ್ಟುಗೊಂಡ. ತನ್ನ ಬದುಕನ್ನು ಮೇಲ್ವರ್ಗದವರೊಂದಿಗೆ ಹೋಲಿಸಿ ರೊಚ್ಚುಗೊಂಡ. ರಾಮಣ್ಣ ಅವರ 'ಗಾಂಧಿಸಂತಾನ' ಕತೆಯ ಮೆಣಸ ಮೇಲ್ಜಾತಿಯವರೊಂದಿಗೆ ಮುಖಾ ಮುಖಿಯಾಗಿ ಸಂಘರ್ಷಕ್ಕೆ ಇಳಿಯುತ್ತಾನೆ. ನೇರವಾಗಿ ಪ್ರಶ್ನಿಸುತ್ತಾನೆ, ತನ್ನ ಸಮುದಾಯ ಸ್ಥಿತಿ ಹೀಗೇಕೆ ಎಂದು ಚಿಂತಿಸುತ್ತಾನೆ.

ಉಪ್ಪುಳಿ ಮತ್ತು ಮೆಣಸ ಇಬ್ಬರೂ ತಮ್ಮ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುವ ಅವರಿಗೆ ಈ ಅಸಮಾನತೆಯ ಏಕೆ ಎಂಬ ಪ್ರಶ್ನೆ ಮೂಡುತ್ತಲೇ ಇತ್ತು. ಮೆಣಸ ಮತ್ತು ಉಪ್ಪುಳಿ

---

೧೧೨ ಕಣಜ, ಲೋಹಿಯಾ ಪ್ರಕಾಶನ, ಪು: ೩೮೮.

ಇಬ್ಬರೂ ತಮ್ಮ ಕೇರಿಯವರ ಹಸಿವು – ಬಡತನವನ್ನು ಹೋಲಿಕೆಯ ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸಿದ್ದ ಅವರು ತಮ್ಮ ಜನರ ಮುಂದಾಳತ್ವ ವಹಿಸಬಲ್ಲ ಗಟ್ಟಿಗರಾಗಿದ್ದರು. ಗೌಡರ ಮನೆಯ ನಾಯಿಯನ್ನು ಉಪ್ಪುಳಿ ಕೊಂದಾಗ, ಕರೆಸಿ ಅವನನ್ನು ಪ್ರಶ್ನಿಸಿದಾಗ, "ಗೌಡ: ತಿರುಬೋಕಿ ನನ್ನಮಗ್ನೆ ನಂ. ರಾಮನ್ನ ಕೊಲ್ಲೋವಷ್ಟು ಸಕ್ತಿ ಐತಾ ನಿನ ಮೈಯಾಗ.

ಉಪ್ಪುಳಿ : ಅನ್ನಕ್ಕನ ಮಗ್ನ ತಿನ್ನಾಕ ಎಳಕೊಂಡೊಯಿತು ದಣಿ

ಗೌಡ : ನಂ ನಾಯಿ ಯಾರ್ನಾರ ತಿಂಥತೆ, ಏನಾರ ಮಾಡ್ತಿತಿ, ನೀನಾವೋನ್ಲೆ ಅದ್ನ ತಡವೋಕೆ.

ಉಪ್ಪುಳಿ : ಇಂಗಂದ್ರೆ ಎಂಗೆ ಗೌಡ, ಅನ್ನಕ್ಕ ನಂಪೈಕಿ.

ಗೌಡ : ನಂ ಪೈಕಿ ಅಂದ್ರೆ ನೀನು ಇಕ್ಕಂದಿದ್ಯಾ

ಉಪ್ಪುಳಿ : ನಮ್ಗೂ ಗೋರವ ಮರುವಾದಿ ಐತೆ ಗೌಡ, ಬಾಯಿಗೆ ಬಂದಾಗ ಮಾತಾಬ್ಯಾಡ್ರಿ

ಗೌಡ : ಕೂಳಿಲ್ದಿದ್ರು ಮರುವಾದಿಯ ಬಗ್ಗೆ ಮಾತಾಡ್ತೀಯಾ ಕಾಟಿಗ.

ಉಪ್ಪುಳಿ : ನಂ ಅನ್ನ ಉಂಡು ನಂ ಬಟ್ಟೆ ಹೊದ್ದು ಬ್ಯಾರೇರು ಕುಟಾಗ ಯಾಕೆ ಅನ್ನಸೋಬೇಕು ಗೌಡ.

ಗೌಡ : ಈ ಊರಿಗೆ ಗೌಡ ನಾನು, ನಂಗೆ ಎದ್ರು ಮಾತಾಡ್ತೀಯಾ

ಉಪ್ಪುಳಿ : ಗೌಡ ಆಗಿದ್ರೆ ನಿಂಮನೀಗೆ, ನೀನಾಗಿರ್ತಿ, ನನ್ನೇನು ಸಾಕಿದ್ಯಾ ಸಲುವಿದ್ಯಾ"[೧೧೩] ಎಂದ ಉಪ್ಪುಳಿಗೆ ಚಲುಕದಲ್ಲಿ ಬಾರಿಸಿದರೂ ಶಾಪ ಹಾಕಿಯೇ ಬರುತ್ತಾನೆ. ಗಾಂಧಿ ಸಂತಾನದ 'ಮೆಣಸ'ನಿಗೆ ಹೇಗೆ ತನ್ನವರಿಂದ ಬೆಂಬಲಸಿಗುವುದಿಲ್ಲವೋ ಹಾಗೆ 'ಉಪ್ಪಳಿಯೂ' ಒಬ್ಬಂಟಿಯಾಗುತ್ತಾನೆ. ಹೆಂಡತಿ ಸತ್ತಾಗ ಗೌಡನನ್ನು ಹಣ ಕೇಳಲು ಮನಸ್ಸು ಒಪ್ಪದೆ ಇದ್ದ ಒಂದೇ ಬಿದಿರು ಮರವನ್ನು ನಾಲ್ಕು ಸೀಳು ಸೀಳಿ ಚಟ್ಟ ಮಾಡಿ ಒಬ್ಬನೇ ಒಯ್ಯುತ್ತಾನೆ. ಕಠಿಣ ಸನ್ನಿವೇಶದಲ್ಲೂ ಉಪ್ಪುಳಿ ದಿಟ್ಟತನದ ನಿರ್ಧಾರಕೈಗೊಳ್ಳುತ್ತಾನೆ.

"ಕುಂ.ವೀರಭದ್ರಪ್ಪ ಅವರು ತಮ್ಮ ಕತೆಗಳಲ್ಲಿ ಶೋಷಣೆಯ ವಿವಿಧ ಮಜಲುಗಳನ್ನು ವಿವಿಧ ಹಂತಗಳನ್ನು ಮತ್ತು ವಿವಿಧ ರೀತಿಗಳನ್ನು ಕಂಡರಿಸಿದ್ದಾರೆ. ಅದರಲ್ಲೆಲ್ಲಾ ಒಳಸೂಕ್ಷ್ಮಗಳನ್ನು ಕಣ್ಣಿಗೆ ಕಟ್ಟಿದ ಹಾಗೆ, ಮನಸ್ಸಿಗೆ ಮುಟ್ಟುವ ಹಾಗೆ, ಹೃದಯಕ್ಕೆ ತಟ್ಟುವ ಹಾಗೆ ದಟ್ಟವಾಗಿ ಮತ್ತು ಸ್ಪಷ್ಟವಾಗಿ ಚಿತ್ರಿಸುತ್ತಾರೆ. ಕುಂ.ವೀರಭದ್ರಪ್ಪ ತಮಗಿರುವ ಇಂಥ ಅನುಭವ ಸಮೃದ್ಧಿಯ ಹಿನ್ನೆಲೆಯಲ್ಲಿ ದೇವನೂರು ಮಹಾದೇವರ ಕಲೆಗಾರಿಕೆಯನ್ನು ರೂಢಿಸಿಕೊಂಡಲ್ಲಿ ಅವರನ್ನು ಮೀರಿಸಬಲ್ಲ

---

೧೧೩ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು: ೧೨೫.

ಕತೆಗಾರನಾಗಬಹುದು ಎಂದಿದ್ದಾರೆ[೧೧೪] ಎಂಬ ವಿಮರ್ಶಕರ ಮಾತಿನಂತೆ ದಲಿತೇತರ ಸಾಹಿತಿಯಾಗಿದ್ದರೂ ದಲಿತ ಬದುಕಿನ ಸೂಕ್ಷ್ಮ ಒಳನೋಟ ಕುಂ. ವೀರಭದ್ರಪ್ಪ ಅವರಿಗೆ ದಕ್ಕಿರುವುದು ಅವರ ಸಾಮಾಜಿಕ ಬದುಕಿನ ಒಡನಾಟದಿಂದ ಎನ್ನಬಹುದು. ದುಡಿತಕ್ಕೆ ಸೀಮಿತವಾಗಿರುವ ದಲಿತರ ಬದುಕು ಬಡತನ – ಹಸಿವಿನ ಸಂದರ್ಭದಲ್ಲಿ ಯಾವ ಬೆಂಬಲವೂ ಸಿಗದೆ ಅಪಾಯಕ್ಕೆ ಸಿಲುಕುವುದೇ ಹೆಚ್ಚು.

ರಾಮಣ್ಣ ಅವರ 'ಬೆಟ್ಟದ ಮೇಲೊಂದು ಮನೆಯ ಮಾಡಿ' ಕತೆಯ ಉರುಗಯ್ಯನ ಮಗ ಊರಯ್ಯ

"ಗೌಡ್ರೆ, ನಮ್ಮಪ್ಪನಿಗೆ ಪಾಲು ಕೊಡ್ಸಿ...... ಸಾಹುಕಾರರ ಜಮೀನು ಗುತ್ತಿಗೆ ಮಾಡಿರೋರ್ಗೆಲ್ಲ ಸರಿಯಾಗಿ ಪಾಲು ಕೊಡ್ಸಿ"[೧೧೫] ಎಂದು ಪೊಲೀಸ್ ಠಾಣೆಗೆ ಹೊರಡುತ್ತಾನೆ. ಊರಯ್ಯನ ಪ್ರತಿರೋಧ ರಕ್ತದಲ್ಲಿ ಕೊನೆಗಾಣುತ್ತದೆ. ಇನ್ನಿಲ್ಲದಂತೆ ಉರುಗಯ್ಯ ಬೇಡಿದಾಗ ಸಿಗದ ನ್ಯಾಯ ಊರಯ್ಯನ ದುಡುಕಿನ ಕೊಲೆಯಿಂದ ಸಿಗುವುದೇ? ಊರುಗಯ್ಯನದು ವಿಚಾರಕ್ರಾಂತಿಯಾದರೆ, ಮಗ ಊರಯ್ಯನದು ರಕ್ತಕ್ರಾಂತಿ ಎನಿಸುತ್ತದೆ. ತಾಯಿ ಮಸಣಮ್ಮ ಒಂದು ಅನ್ಯಾಯ ಸರಿಪಡಿಸಲು ಇನ್ನೊಂದು ಘೋರ ಅನ್ಯಾಯ ಎಂದಿಗೂ ಸಲ್ಲದು ಎಂದಾಗ ಮಗ ಉತ್ತರಿಸದಾದ. ಉರುಗಯ್ಯನ ದುಡಿಮೆಗೆ ಬೆಲೆ ಇಲ್ಲಿ ನಗಣ್ಯವಾಗಿದೆ. ಅವನನ್ನೇ ಹೀನಾಯವಾಗಿ ಕಾಣುವ ಅಸೂಕ್ಷ್ಮ ದುಂಡಾವರ್ತನೆ ಮಗನನ್ನು ಕೆರಳಿಸುತ್ತದೆ.

ರಾಮಣ್ಣ ಅವರ 'ಜೀತ' ಕತೆಯ ಪುಟ್ಟಸ್ವಾಮಿ ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸಿದರೆ, ಊರಯ್ಯ ನಕ್ಸಲೈಟ್ ಮಾದರಿಯಲ್ಲಿ ಪ್ರತಿಭಟಿಸಿದ. **"ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯ ಸಮಾಜದಲ್ಲಿ ಸಿಕ್ಕಿ ತೊಳಲಾಡುವ ಮಾನವ ಜೀವಿಗಳ ಘನತೆಯನ್ನು ಎತ್ತಿ ಹಿಡಿಯುವಲ್ಲಿ ಇವರ ಕತೆಗಳು ತುಡಿಯುತ್ತವೆ. ಕೆಳಜಾತಿಗಳಾದ ಮಾದರ, ಚೆಲುವಾದಿ, ಕೊರಚ, ಕುಂಬಾರ ಮುಂತಾದ ಜನಾಂಗಗಳ ನೋವುಗಳನ್ನು ಇವರ ಕಥೆಗಳು ಸಶಕ್ತವಾಗಿ ಚಿತ್ರಿಸಿವೆ"**[೧೧೬] ಎಂಬ ಕರೀಗೌಡ ಬೀಚನಹಳ್ಳಿಯವರ ಅಭಿಪ್ರಾಯ ಇಲ್ಲಿ ಉಲ್ಲೇಖನೀಯವಾಗಿದೆ.

---

೧೧೪ ಟಿ.ಪಿ. ಅಶೋಕ, ಸಾಹಿತ್ಯ ಮತ್ತು ಸಮಾಜ, ೧೯೮೦, ಪು: ೧೧೫.

೧೧೫ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೩೯೧.

೧೧೬ ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕತೆಗಳ ಸಮೀಕ್ಷೆ, ೨೦೦೩, ಪು: ೧೩೭–೧೩೮.

ಕುಂವೀ ಅವರ 'ಶ್ರಾವಣ' ಕತೆಯ ಉಪ್ಪಾಳಿ ತನ್ನ ಬಡತನ, ಹಸಿವು, ಹೆಂಡತಿಯ ಸಾವು ಎಲ್ಲದನ್ನೂ ದಿಟ್ಟವಾಗಿ ಎದುರಿಸಿ ತನ್ನ ಸಮುದಾಯಕ್ಕೆ ದನಿಯಾದರೆ, ರಾಮಣ್ಣ ಅವರ 'ಗಾಂಧಿ ಸಂತಾನ'ದಲ್ಲಿ ಮೆಣಸ ಸತ್ತರೆ, ಊರಯ್ಯ ಕೊಲೆಗಾರನ ಪಟ್ಟ ಪಡೆದರೆ ಪುಟ್ಟಸ್ವಾಮಿ ಮಾನವೀಯ ಸಂವೇದನೆ ಉಂಟು ಮಾಡಲು ಪ್ರಯತ್ನಿಸುತ್ತಾನೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರು ಬಡತನ, ಅಸ್ಪೃಶ್ಯತೆಗಳನ್ನು ಕತೆಗಳಲ್ಲಿ ಮುಖ್ಯವಾಗಿ ಕಾಣಿಸುತ್ತಾರೆ. ಕುಂವೀ ಅವರ 'ಉಡ' ಕತೆಯಲ್ಲಿ ಸಣ್ತಮ್ಮ ಗೌಡನ ಮನೆಯಲ್ಲಿ ಜೀತಕ್ಕಿದ್ದ. ಹೆಂಡತಿಯ ಚುಚ್ಚುಮದ್ದಿಗೆ ಹತ್ತು ರೂ ಕೇಳಲು ತೊಳಲಾಡುವ ಅವನಿಗೆ ಕತ್ತೆದುಡಿತದಿಂದ ಸಿಗುತ್ತಿದ್ದು ಹಳಸಲು ಅನ್ನ-ಸಾರು, ಸೇದಿ ಉಳಿದ ತುಂಡು ಬೀಡಿ. ತಳವರ್ಗದ ಶ್ರಮಿಕರು ಬಾಯಿ ಬಿಡದಂತಹ ವ್ಯವಸ್ಥೆಯನ್ನು, ವಾತಾವರಣವನ್ನು ಊಳಿಗಮಾನ್ಯ ಪದ್ಧತಿ ನಿರ್ಮಿಸಿಕೊಂಡು ಬದಲಾವಣೆಯ ಗಾಳಿಸೋಂಕದಂತೆ ಎಚ್ಚರವಹಿಸುತ್ತದೆ.

"ಗೌಡ್ತಿ ಧಾರಾಳತನ ಸೋಗುಹಾಕಿ ಪೇಪರ್‌ನಲ್ಲಿ ಒಂದು ಹೋಳಿಗೆ ಸುತ್ತಿ ತಂದು ಕೊಡುತ್ತ..... ತಿಮ್ಮಾ ..... ಮುದುಕಿಗೆ ಕ್ವಡು, ಸುಖವಾಗಿ ಸಾಯ್ಲಿ.... ಅಂದಳು....."[೧೧೭] ತಾನು ಕೊಟ್ಟ ಒಂದು ಹೋಳಿಗೆ ತಿಂದು ಸಾಯಬೇಕೆಂಬ ಹೆಚ್ಚುಗಾರಿಕೆ ಗೌಡ್ತಿಗೆ ಬೇಕಾಗಿರುವುದು ಸಂವೇದನಾಶೂನ್ಯ ನಡವಳಿಕೆಯೆನಿಸುತ್ತದೆ.

ಕೊನೆಗೆ ಸಣ್ತಮ್ಮ **"ಗೋಡಾ..... ಮುದ್ಕಿ ಯಿಗೋ ಆಗೋ ಅನ್ನಂಗೈತೆ, ಚೂಜಿ ಮಾಡಿಸ್ಬೇಕು ವಂದತ್ತು ಒಗೀರಿ"**[೧೧೮] ಎಂದು ತಿಮ್ಮ ಅಳೆದುಸುರಿದು ವಿಧಿಯಿಲ್ಲದೆ ಧೈರ್ಯವಾಗಿ ಕೇಳುತ್ತಾನೆ. ಇನ್ನಾರ ಬಳಿ ಹೋಗಲಿ ಎಂಬ ಅಸಹಾಯಕತೆಯೂ ಅಲ್ಲಿದೆ. ಆದರೆ 'ಶ್ರಾವಣ' ಕತೆಯ ಉಪ್ಪಾಳಿ ಹೆಂಡತಿ ಸಂಸ್ಕಾರಕ್ಕೆ ಹಣವಿಲ್ಲದಿದ್ದರೂ ಗೌಡನ ಮುಂದೆ ಕೈಯೊಡ್ಡದೆ ಒಬ್ಬನೇ ಮಣ್ಣು ಮಾಡಿದ. ಗೌಡ ತಿಂದು ತೇಗುತ್ತಾ ಹಣಕೊಡುವ ಬದಲು ಊರಮ್ಮ ದೇವತೆಗೆ ನಡೆದುಕೋ ಎಂದನು. ಮತ್ತೊಂದು ಜೀವವನ್ನು ಲಘುವಾಗಿ ಪರಿಹಾಸ್ಯದ ಸಂಗತಿಯಾಗಿ ನೋಡುವುದು ಉಳ್ಳವರ ಗತ್ತಿನಿಂದೆನ್ನಬಹುದು. ಅದೇ ಊರಿನ ಡಾಕ್ಟರನ ಹೆಂಡತಿಯ ಬಸುರಿಯ ಬಯಕೆಯ ಬಗ್ಗೆ ತಿಮ್ಮ ಮತ್ತು ಅವನ ಹೆಂಡತಿ ಸ್ಪಂದಿಸುವ ಬಗೆ ಕಂಡಾಗ ಭಾವನೆಗಳು ಬಡವರ ಸ್ವತ್ತೆನಿಸತೊಡಗಿ ಅವರು ಎತ್ತರಕ್ಕೇರಿ ಗೌಡ ಪಾತಾಳದೆಡೆಗೆ ಸಾಗುತ್ತಾನೆ.

---

೧೧೭ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೨೫೯.

೧೧೮ ಅದೇ, ಪುಟ : ೨೬೧.

ಅನಿವಾರ್ಯವಾಗಿ ಪುನಃ ಗೌಡನನ್ನು ಹತ್ತು ರೂಪಾಯಿಗಾಗಿ ಅಂಗಲಾಚುತ್ತಾನೆ.

ಕೊನೆಗೆ ತಿಮ್ಮ.... **"ನೀನು ತಂದಿ ಅಲ್ಲ.... ನಾನು ಮನಿಮಗಾ ಅಲ್ಲ.... ನೀನು ಗೋಡಾ.... ನಾನು ಶಂಬಳದಾಳು, ನಾನೇನು ಮಾನಮಿ ಮಾಮೂಲು ಕ್ಯೋಳಾಕ ಬೊಂದಿಲ್ಲ ಗೋಡಾ.... ದುಡ್ದಿದೀನಿ ... ಕ್ಯೋಳಿದೀನಿ..."**[೧೧೯] ಎಂದು ಹಕ್ಕನ್ನು ಪ್ರತಿಪಾದಿಸುತ್ತಾನೆ. ಗೌಡ ಬಗ್ಗದಿದ್ದಾಗ, ಗರ್ವ ದೌಲತ್ತುಗಳನ್ನು ಬಿಡದಿದ್ದಾಗ ಉಡದಿಂದ ಗೌಡನನ್ನು ಹೆದರಿಸಿ ಸಣ್ತಮ್ಮ ತನ್ನ ಸಂಬಳ ವಸೂಲಿ ಮಾಡಿದ, ಗುಂಪು ಹೋ ಎನ್ನುವಲ್ಲಿಗೆ ಪ್ರತಿರೋಧ ಸೀಮಿತವಾಗಿಬಿಡುತ್ತದೆ.

ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲ ಹಿಡಿದ ಕಥೆ'ಯಲ್ಲಿ ಕತ್ತಲ ಮತ್ತು ಅವನ ಹೆಂಡತಿ ಸಂಕುಲಿ ಉಂಡು ದಿನಗಳೇ ಕಳೆದಿವೆ. ಕಣ್ಣು ಚಕ್ರ ಬಂದರೂ 'ಅವರವರ ಹೊಟ್ಟೆಗೆ ಅವರೇ ಬಾಧ್ಯಸ್ಥರು' ಎಂಬ ನಿರ್ಲಿಪ್ತ ಭಾವತೋರಲು ಪ್ರಯತ್ನಿಸಿದರೂ, ಹಸಿವಿಗಾಗಿ ತಾನೇಕೆ ಬಾವಿಗೆ ಬೀಳಬೇಕು, ಹಸಿವಿರಲಿ ಎಂದು ತನ್ನನ್ನು ತಾನೇ ಸಮಾಧಾನಿಸಿಕೊಂಡ. ಗೌಡರ ಮನೆಯ ನಿಷ್ಠೆಯ ಆಳಾದರೂ ಹಸಿವಿಂಗಿಸಿಕೊಳ್ಳಲಾಗದ ತನ್ನ ಸ್ಥಿತಿಯ ಬಗ್ಗೆ ತನಗೇ ಸಿಟ್ಟುಬರುತ್ತದೆ. ಗೌಡರ ಮನೆಯ ನಾಯಿಗೆ ಹೊಟ್ಟೆ ತುಂಬುತ್ತದೆ. ಅವರಲ್ಲಿ ದುಡಿವ ತನ್ನ ಸ್ಥಿತಿ ಹೀಗೇಕೆಂದು ಹಲುಬುತ್ತಾನೆ. ದುಡಿದುಣ್ಣುವರನ್ನು ಶೋಷಿಸಲು ಉಳ್ಳವರು ಬಳಸುವ ಹಸಿವಿನ ಅಸ್ತ್ರ ಪ್ರಯೋಗವಾಗುತ್ತಲೇ ಇರುತ್ತದೆ. ಕತ್ತಲನಿಗೆ ತನ್ನ ಹೊಟ್ಟೆಯ ಮೇಲೆ ಸಿಟ್ಟು ಬರುತ್ತದೆ. ಹಸಿವಿಂಗಿಸಿಕೊಳ್ಳುವ ದಾರಿಹುಡುಕಿದಷ್ಟು ಕಾಣದಾದಾಗ ಉಳ್ಳವರ ಮೇಲೆ ಆಕ್ರೋಶಗೊಂಡು ಎಷ್ಟು ದಿನ ಹೀಗಿರುತ್ತಾರೆ ನೋಡೋಣ ಎಂದು ತನ್ನನ್ನು ಸಮಾಧಾನಪಡಿಸಿಕೊಳ್ಳಲು ಪ್ರಯತ್ನಿಸುವುದು. ಭವಿಷ್ಯದಲ್ಲಾದರೂ ಇಂತಹ ಬದುಕಿಗೆ ತಿಲಾಂಜಲಿ ನೀಡಬಹುದು ಎಂಬ ಸಾಮಾಜಿಕ ಚಿಂತನೆಯ ಆಶಯವೆನಿಸುತ್ತದೆ.

"ಹಸಿವನ್ನು ಐತಿಹಾಸಿಕ ನೆಲೆಯಲ್ಲಿ ಗುರ್ತಿಸಿ ಅದಕ್ಕೆ ಪಾತ್ರದ ವ್ಯಕ್ತಿತ್ವದ ಮಿತಿಯೊಳಗೆ ಊಹೆಗೆ ನಿಲುಕದ ಪರಿಹಾರವನ್ನು ಕಂಡುಕೊಳ್ಳುವ ಕಥೆ, ಇದು ಲೇಖಕನ ಕ್ರಾಂತಿಕಾರಿ ಸಾಧ್ಯತೆಯೊಂದರ ಆಶಯವನ್ನು ಸಾಬೀತುಮಾಡುವ ಕತೆಯೂ ಆಗಿದ್ದು, ಕತೆಯ ಚೌಕಟ್ಟಿನಲ್ಲೊಂದು ಸಮಾಜವಾದಿ ತರ್ಕ ಕತೆಯ ಪರಿಣಾಮವನ್ನು ನಿಯಂತ್ರಿಸುತ್ತದೆ"[೧೨೦] ಎಂಬ ವಿಶ್ಲೇಷಣೆ ಕತೆಗೆ ಪೂರಕವಾಗಿದೆ.

---

೧೧೯ ಕುಂ, ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೨೬೩.

೧೨೦ ಕುಂ.ವೀ. ಇನ್ನಾದರೂ ಸಾಯಬೇಕು, ೧೯೮೧, ಪುಟ – ೧೬.

ಕತ್ತಲನು ಕಡೆಗೆ ಗುಡಿಯ ಕಡೆಗೆ ಹೋದಾಗ ದೇವರ ಮುಂದೆ ಹುಗ್ಗಿ – ಹೋಳಿಗೆಯ ರಾಶಿ ಇರುವುದು ಕಂಡು ಪೂಜಾರಿಗೆ 'ನಾನ್ರೀ ಎಪ್ಪ ಕತ್ಲ, ಎಲ್ಡುದಿನದಿಂದ ಉಂಡಿಲ್ಲ, ಅದ್ರಾಗುಳ್ದ ಒಂದೀಟ ಕ್ವಡ್ರಿ" ಎಂದು ದೈನ್ಯದಿಂದ ಬೇಡಿದ.

"ನಿನ್ನಂಥೋವ್ಕೆ ಕ್ವಡೋಕಲ್ಲ ಅದಿರೋದ.... ಅದು ಪರ್ಸಾದ"[೧೨೧] ಪೂಜಾರಿ ಎಂದಾಗ 'ಪರ್ಸಾದಂತೆ ಪರ್ಸಾದ' ಎಂದು ಆತನನ್ನು ತಳ್ಳಿ ಒಳನುಗ್ಗಿದ್ದು ತಡೆದಿದ್ದ ಹಸಿವಿನ ಪರಾಕಾಷ್ಠತೆಯೆನ್ನಬಹುದು. ಕತ್ತಲ ನೈತಿಕನೆಲೆಯಲ್ಲೇ ಹಸಿವಿಂಗಿಸಿಕೊಳ್ಳಲು ಪ್ರಯತ್ನಿಸಿದರೂ ಆಗದಿದ್ದಾಗ ಗುಡಿಗೆ ನುಗ್ಗಿ ತಿಂದು, ತುಂಬಿಕೊಂಡು ತ್ರಿಶೂಲದಿಂದ ಹೆದರಿಸಿ ಹೊರನಡೆದಿದ್ದರಲ್ಲಿ ಇನ್ನೊಂದು ಜೀವದ ಬಗ್ಗೆ ಸಂವೇದನಾಶೀಲತೆಯಿಲ್ಲದಿರುವುದೇ ಕಾರಣವೆನ್ನಬಹುದು. ಅದುವರೆಗಿನ ಸಾಮಾಜಿಕ ಚಹರೆಗಳನ್ನು ದೈವದ ಎದುರು ಧಿಕ್ಕರಿಸಿದನು. ರಾಮಣ್ಣ ಅವರ ಕತೆಗಳಲ್ಲಿ ಬಡತನ, ಮೋಸ, ಪ್ರೇಮ ವೈಫಲ್ಯ, ಹಾದರ, ವಂಚನೆ, ದಾಂಪತ್ಯ, ಚಳವಳಿ ಹೀಗೆ ಹಲವು ಅಂಶಗಳು ಕಥೆಗಳಲ್ಲಿ ಕಂಡುಬರುತ್ತವೆ. ಆದರೆ ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಕಾಣಿಸುವ ಮೂಲಭೂತವಾದ ಹಸಿವಿನ ತೀವ್ರತೆ ಪ್ರಬಲವಾದುದು.

"..... ವೀರಭದ್ರಪ್ಪನವರ ಕೆಲವು ಮುಖ್ಯ ಪಾತ್ರಗಳಾದ ಡೋಮ, ಉಪ್ಪುಳಿ, ಎಲುಗ, ಶೊಣ್ಣೆ, ಕಿವುಡ ಮುಂತಾದ ವಿಲಕ್ಷಣ ವ್ಯಕ್ತಿಗಳೆಂಬ ಏಕೈಕ ಕಾರಣದಿಂದ ಮುಖ್ಯರಾಗದೆ ಒಂದು ವರ್ಗದ ನೋವು–ನಲಿವುಗಳನ್ನೂ, ದುಃಖ–ದುಮ್ಮಾನಗಳನ್ನು, ಕನಸುಗಳನ್ನೂ ಸಾಂಕೇತಿಸುವುದರಿಂದ ವೀರಭದ್ರಪ್ಪನವರ ಬರವಣಿಗೆಗೆ ಸಾಂಸ್ಕೃತಿಕ ಮಹತ್ವವೂ ಇದೆ"[೧೨೨] ಎಂದು ಟಿ.ಪಿ. ಅಶೋಕ ಅವರು ಕುಂ.ವೀರಭದ್ರಪ್ಪ ಕತೆಗಳ ಪಾತ್ರಗಳನ್ನು ಕುರಿತ ಮಾತು ಸಮರ್ಥನೀಯವಾದುದು.

ಕುಂ.ವೀರಭದ್ರಪ್ಪ ಅವರ 'ಕಿವುಡ ನಾಯಿಯಾದ ಪ್ರಸಂಗ' ಕತೆಯಲ್ಲಿ ಸತ್ತವರಿಗೆ ಗುಣಿತೋಡುವ ಮಾದಿಗರ ಕಿವುಡ ಮತ್ತು ಅವನ ಸಂಸಾರ ಎರಡು ದಿನದಿಂದ ಅನ್ನದ ಅಗುಳಿಲ್ಲದೆ ಹಸಿವಿನಿಂದ ಕಂಗೆಟ್ಟಿದ್ದರು. ಊರಲ್ಲಿ ಜನ ಜಾನುವಾರು ಸತ್ತರೆ ಅವನ ಬದುಕು ನಡೆಯುವುದು. ಹೆಂಡತಿ ಮಕ್ಕಳ ಹಸಿವು, ಗುದ್ದ ತೋಡಲು ಹೇಳೇ ಇಲ್ಲ. ಸಾಲಕೊಟ್ಟಿದ್ದ ಹುಸೇನ್ ಸಾಬಿಯ ಜಬರದಸ್ತು ಕಿವುಡ ಸೋಲತೊಡಗಿದೆ. ಕಡೆಗೆ ಗುದ್ದ ತೋಡಲು

---

೧೨೧ ಕುಂವೀ ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು : ೮.

೧೨೨ ಕುಂ.ವೀ. ಅವರ ಕಥಾ ಸಾಹಿತ್ಯ, ಗಿರಡ್ಡಿಗೋವಿಂದ ರಾಜ (ಸಂ.) ಕರ್ನಾಟಕ ಸಾಹಿತ್ಯ ಅಕಾಡಮಿ, ೨೦೦೧, ಪು : ೨.

ಅನುಮತಿಸಿಕ್ಕಿತು. ಹೆಣಬಿದ್ದರೆ ಹೆಂಡತಿ, ಮಕ್ಕಳ ಹೊಟ್ಟೆ ತುಂಬುವ ವೈರುಧ್ಯ, ಸಾವು ಹಲವರನ್ನು ಬದುಕಿಸಬಲ್ಲ ವೈಫಲ್ಯ ಸಾಮಾಜಿಕ ಅಸಮಾನತೆಯಿಂದಲೇ ಎನ್ನಬಹುದು.

ಹೊಟ್ಟೆತುಂಬ ಉಂಬಬೇಕೆಂದರೆ ಕೊಟ್ಟೋರ ಗಂಟು ವಾಪಸು ಕೊಡಬೇಕೆಂದರೆ ಊರಲ್ಲಿ ಯಾರದಾದರೂ ಜನ, ಜಾನುವಾರು ಸಾಯಬೇಕು. ಅಂಥ ದೊಡ್ಡ ಜೀವ ಯಾವುದೂ ಇತ್ತೀಚೆಗೆ ಹೋದದ್ದು ಕಂಡಿಲ್ಲ. ಪರಿಸ್ಥಿತಿ ಹೀಗಿರುವಾಗ ತನ್ನ ಒಕ್ಕಲಿನಲ್ಲಿಯೇ ಉತ್ತಮಸ್ಥನಾದ ಅಂಗಡಿ ಅಜ್ಜಪ್ಪನ ಮಗಳೇ ಹೋದಸುದ್ದಿ ಕಿವಿಗೆ ಬಿದ್ದಾಗ ಕಿವುಡ ಸಂತೋಷಗೊಳ್ಳದೆ ಇರಲು ಹೇಗೆ ಸಾಧ್ಯ? **"ಆಗತಾನೆ ಪಟ್ಟಾಗಿ ಉಂಡವರ ಮುಖ ಅರಳುತ್ತದಲ್ಲ ಹಾಗೆ ಕಿವುಡನ ಮುಖ ಕಮಲದ ಹಾಗೆ ಅರಳಿತು. ನೊಣಗಳು ಸಲೀಸಾಗಿ ತೂರಬಹುದಾದಷ್ಟು ಸಂದುಗಳಿದ್ದ ಹಲ್ಲುಗಳನ್ನು ತುಟಿಗಳಿಂದ ಮುಚ್ಚಲಿಕ್ಕಾಗದೆ ನಕ್ಕ, ತನ್ನಷ್ಟಕ್ಕೆ ತಾನೆ"**[೧೨೩] ಕೀಳುಮಾದಿಗ ಜಾತಿ, ಬೇರೆ ಕಸುಬು ಮಾಡಿ ಹೊಟ್ಟೆ ತುಂಬಿಸಿಕೊಳ್ಳಲಾರದಕ್ಕೆ ತನ್ನದೇ ಸಮರ್ಥನೆಯನ್ನು ಕಿವುಡ ಕೊಡಬಲ್ಲದವನಾಗಿದ್ದನು.

ಭಾನುಮಷ್ತಾಕ್‌ರ 'ದೇವರು ಮತ್ತು ಅಪಘಾತ' ಕತೆಯಲ್ಲೂ ಮರಿಯಮ್ ಯಾರಾದರೂ ಸಾಯಿಲಿ ದೇವರೇ ಎಂದು ಬೇಡುವುದನ್ನು ಕಾಣಬಹುದು. ಸಾವು ಕಿವುಡನ ಸಂತೋಷಕ್ಕೆ ಕಾರಣವಾಗಿದ್ದು, ಹಸಿವಿಂಗುವ ಸೂಚನೆಯನ್ನು ಇನ್ನೊಬ್ಬರ ಸಾವಿನಲ್ಲಿ ಕಾಣಬಲ್ಲ. ಇಲ್ಲಿ ಸಾವನ್ನು ಹಸಿವು ಮೆಟ್ಟಿನಿಲ್ಲುತ್ತದೆ.

'ಭಗವತಿ ಕಾಡು' ೧೯೯೦' ಕನ್ನಡ ಸಾಹಿತ್ಯ ಪರಿಷತ್ತಿನ ರತ್ನಾಕರ ಮುದ್ದಣ್ಣ ಪ್ರಶಸ್ತಿ ವಿಜೇತ ಈ ಕಥಾ ಸಂಕಲನ ಕುರಿತು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಹೆಚ್.ವಿ. ಶ್ರೀನಿವಾಸ್ ಹೀಗೆ ಹೇಳಿದ್ದಾರೆ. **"ಜಾತಿ ಮತ್ತು ವರ್ಗ ಸಂಘರ್ಷದ ಚಿತ್ರಣವನ್ನು ಒಳಗೊಂಡಿದ್ದರೂ ಸಹ ವೈಯಕ್ತಿಕ ಜೀವನದಲ್ಲಿ ಹೊರಗಿನಿಂದ ಆಗುವ ಶೋಷಣೆಗಿಂತ ಒಳಗಿನವರಿಂದಲೇ ಆಗುವ ಶೋಷಣೆ ಅದೆಷ್ಟು ಅಪಾಯಕಾರಿ ಎಂಬ ಸೂಚನೆ ಇರುವ ಕಥೆಗಳನ್ನು ಈ ಸಂಕಲನ ಒಳಗೊಂಡಿದೆ"**[೧೨೪] ಎಂಬ ಅವರ ಮಾತು ದಲಿತ ಬದುಕಿನ ಶೋಷಣೆಯ ಮುಖವನ್ನು ಅನಾವರಣಗೊಳಿಸುತ್ತದೆ.

ಈರಮ್ಮಳ ಸಾವು ಕಂಪಿಸುವಷ್ಟು ಕಿವುಡನಿಗೆ ಸಂತಸತಂದರೂ ಅವಳನ್ನು ಗುಣಿಗೆ ಹಾಕುವಾಗ ನೊಂದುಕೊಳ್ಳುತ್ತಾನೆ. ತನ್ನೆರಡೂ ಸತ್ತಮಕ್ಕಳನ್ನು ನೆನೆಸಿಕೊಂಡು ಮರುಗುತ್ತಾನೆ.

---

೧೨೩ ಅದೇ, ಪು : ೧೦.

೧೨೪ .... ಕನ್ನಡ ಪ್ರಭ ದಿನಪತ್ರಿಕೆ, ದಿನಾಂಕ ೧೫.೦೯.೧೯೯೧.

ಗುಣಿ ತೋಡಿದ ಹಣ ಪಡೆಯುವವರೆಗೂ ಅವನು ಅನುಭವಿಸಿದ ತಳಮಳ, ದ್ವಂದ್ವ, ಅನಿಶ್ಚಯತೆ, ಗೊಂದಲಗಳಿಂದ ಯಾವ ಹಂತದಲ್ಲೂ ತುಸು ನಿರಾಳ ಸಿಗಲಿಲ್ಲ. ಕಿವುಡ ಗುಣಿ ತೋಡಿದ ಹಣವನ್ನು ಸಾಬಿ ಕಸಿದುಕೊಂಡ ಮೇಲೆ ಮನಸ್ಸು ನಿರ್ಲಿಪ್ತ ಸ್ಥಿತಿಗೆ ಬಂದು ಹಸಿವು ಬೃಹದಾಕಾರವಾಗಿ ಕಾಣಿಸಿತು. ನಂತರ ಗುಣಿಯಲ್ಲಿ ಹೆಣದ ಬುಡದಲ್ಲಿನ ತೆಂಗಿನ ಕಾಯಿ ತೆಗೆದುಕೊಂಡ. 'ಇದ್ದಕ್ಕಿದ್ದಂತೆ ಅವನಿಗೆ ಹೊಳೆಯಿತು. ಎಲ್ಲ ಪಾಪ, ಪುಣ್ಯ ಕರ್ಮಕ್ಕಿಂತ ದೊಡ್ಡದು ಹೊಟ್ಟೆ, ಬಂದು ದಾರಿಗುಂಟ ನಡೆದು ಸುಡುಗಾಡು ಮುಟ್ಟಿದ, ಸುತ್ತ ಕತ್ತಲು ಆ ಕ್ಷಣ ದೆವ್ವವಾಗಿದ್ದ ಕಿವುಡ, ನಾಯಿಗಿಂತ ಮೊದಲು ಅವನು ಅದೇ ತಾನೇ ಅವನೇ ಮುಚ್ಚಿದ್ದ ಗುದ್ದಿನ ಮೇಲೆ ಸಲಿಕೆಯಿಂದ ಮಣ್ಣು ತೆಗೆಯತೊಡಗಿದ. ಕ್ಷಣ ಮಾತ್ರದಲ್ಲಿ ಕುಣಿ ಖಾಲಿಯಾಯಿತು. ಕಡ್ಡಿಗೀರಿ ನೋಡಿದ, ಅವನಿಗೆ ಸ್ವಲ್ಪೇ ಸ್ವಲ್ಪ ಭಯವಾಯಿತು ಅಷ್ಟೇ. ಹೆಣದ ಕಾಲಬುಡದಲ್ಲಿದ್ದ ಎರಡು ತೆಂಗಿನಕಾಯಿಗಳಿಗೆ ತನ್ನೆರಡೂ ಕೈಗಳನ್ನು ಹಚ್ಚಿದ'.

ತೀರಾ ಕೆಳಸ್ತರದ ಜನರ ಹಸಿವನ್ನು ಸಾಂಕೇತಿಕವಾಗಿ ಕಿವುಡನ ಪಾತ್ರದಲ್ಲಿ ಕುಂವೀ ಕಟ್ಟಿಕೊಟ್ಟಿದ್ದಾರೆ. ಹೊಟ್ಟೆಗಾಗಿ ನಿಕೃಷ್ಟ ಕೆಲಸ ಮಾಡುವ ಕಿವುಡನಿಗೆ ಬದುಕಿನಲ್ಲಿ ಸಿಕ್ಕಿದ್ದು ತುಂಡು ಬೀಡಿ, ಒಂದು ರೂಪಾಯಿ, ಚಿಪ್ಪಿನಲ್ಲಿ ಚಹಾ, ಮೂಲೆಯಲ್ಲಿ ಸರಿದು ಕೂರುವುದು, ಅಂಗಲಾಚುವುದು, ಹೆಂಡತಿಯ ಹೀಯಾಳಿಕೆ, ಚಡಪಡಿಕೆ. ಅವನ ಅಸಹಾಯಕತೆಯ ಬದುಕನ್ನು ಹಸಿವು ಮತ್ತು ಅಸ್ಪೃಶ್ಯತೆ ಇನ್ನೂ ಹೈರಾಣಾಗಿಸುತ್ತದೆ.

ಪ್ರೇಮಾ ಭಟ್‌ಅವರ 'ಗುಮಾನಿ' ಕತೆಯಲ್ಲಿ ಸ್ಮಶಾನಕಾಯುವ ಹೆಂಗಸು ಕಷ್ಟದಿಂದಲೇ ತನ್ನ ಕೆಲಸ ನಿರ್ವಹಿಸುತ್ತಾ ಇರುತ್ತಾಳೆ. ಭಯ, ಅಸುರಕ್ಷತೆಯ ನೆರಳಲ್ಲೇ ಹಸಿವನ್ನು ನೀಗಲು ಪ್ರಯತ್ನಿಸುವುದು ಸಮಸ್ಯೆಯ ಮತ್ತೊಂದು ಆಯಾಮವೆನಿಸುತ್ತದೆ. ಒಬ್ಬರ ಸಾವು ಮತ್ತೊಬ್ಬರ ಬದುಕಾಗಬಾರದು, ಸಮಾಜ ಇಂತಹವರ ಬದುಕನ್ನು ಹಸನುಗೊಳಿಸುವ ಕಡೆಗೆ ಯೋಚಿಸಬೇಕಾಗಿದೆ.

ಕುಂ.ವೀರಭದ್ರಪ್ಪ ಅವರ 'ದೇವರಹೆಣ' ಕತೆಯಲ್ಲಿ ಹೊಣ್ಣಿಯ ಹಸಿವಿನ ಬೇಗೆ ಬಿಸಿಲಿನ ಬೇಗೆಯನ್ನು ಮೀರಿಸುವಂತಿತ್ತು. ಗೌಡರ ಮನೆ ಎತ್ತು ಸತ್ತಾಗ **"ಸತ್ತಿರೋ ಎತ್ತು ಕ್ವಡಿಸ್ರೆಪ್ಪೋ... ಆ ಎತ್ತು ತಿನ್ನೋದು ಅಕ್ಕಯಿತ್ರೆಪೊ ..... ಇವತ್ತು ಅನ್ಯಾಯನಂಗಾಯ್ತದೆ. ಮುಂದೆ ಇದೇ ನಾಳೆ ನಿಮ್ಗೂ ಆಯ್ತದೆ... ಇಂಗಾದ್ರೆ ಒಕ್ಕಲಿಗರ ವಕ್ಕಲು ಮಣ್ತೆನ್ನ ಬೈಕಾಯ್ತದ್ರೆಪೋ"**[೧೨೫] ಎಂದು ತನ್ನ

---

೧೨೫ ಕುಂ.ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೪೧.

ಕೇರಿಯ ಮುಂದೆ ಅಲವತ್ತುಗೊಳ್ಳುತ್ತಾನೆ. ಈ ಎಚ್ಚರದ ಪ್ರಜ್ಞೆ ಹಸಿವಿನ ಚಹರೆಯಲ್ಲಿ ಕಂಡುಬಂದರೂ ವ್ಯವಸ್ಥೆಯ ಬದಲಾವಣೆಗಿಂತ ಅವನಿಗೆ ಹಸಿವಿನ ಉಪಶಮನವೇ ಮುಖ್ಯವಾಗುತ್ತದೆ. ಮೇಲ್ವರ್ಗದ ಮುಂದೆ ದನಿ ಎತ್ತಲಾಗದ ತಳವರ್ಗ ತೊಗಲಿನ ದಯಾನಂದನ ಮುಂದೆ ಅಡ್ವಾನ್ಸ್ ಕೇಳಿದಾಗ **"ಓಗು, ಓಗಲೆ, ಮೊದ್ಲು ಎಡಗೈಯಾಗ ತೊಗ್ಲಿಡು ಬಲಗೈಯಾಗ ರೊಕ್ಕ ಎಣಿಸಗುಗ್ಯ"**[೧೨೮] ಎಂದಾಗ ಹಸಿವು ನೀಗಿಸುವ ಹೊಸ ಸಾಧ್ಯತೆಗಳನ್ನು ಠೊಣ್ಣಿ ಹುಡುಕತೊಡಗಿದ.

"ಈ ಕತೆಯ ಕೇಂದ್ರಪಾತ್ರವಾದ ಠೊಣ್ಣಿಯನ್ನು ವಿಲಕ್ಷಣತೆಯ ನೆಲೆಯಲ್ಲಿಟ್ಟೇ ಬರೆಯುವ ಕುಂ.ವೀರಭದ್ರಪ್ಪ ಅವನ ವಿಲಕ್ಷಣವೆಂದು ತೋರುವ ನಡವಳಿಕೆಯಲ್ಲೇ ಶಿಷ್ಟ ಸಮಾಜದ ವೈರುಧ್ಯಗಳನ್ನು ಬಯಲಿಗೆಳೆಯುವ ರೀತಿ ಮನಮುಟ್ಟುವಂತಿದೆ. ಸತ್ಯದ ನಗ್ನದರ್ಶನ ಓದುಗನಿಗೆ ಶಾಕ್ ನೀಡುತ್ತದೆ. ಒಂದು ಪ್ರಸಂಗವನ್ನು ಶಿಷ್ಟ ಸಮಾಜ ಗ್ರಹಿಸುವ ರೀತಿಗೂ ಠೊಣ್ಣಿಯಂಥವನು ಗ್ರಹಿಸುವ ರೀತಿಗೂ ಇರುವ ವ್ಯತ್ಯಾಸಗಳಲ್ಲೇ ವರ್ಗಸಮಾಜದ ವೈರುಧ್ಯಗಳನ್ನು ಬಿಚ್ಚುವ ಲೇಖಕರು ಪ್ರತಿಕ್ರಿಯೆಗಳ ವೈದೃಶ್ಯದಲ್ಲೂ ಸಾಮಾಜಿಕ ಸತ್ಯಗಳನ್ನು ಕಾಣುವ ರೀತಿ ಪ್ರಬುದ್ಧವಾಗಿದೆ"[೧೨೯] ಎಂಬ ಟಿ.ಪಿ. ಅಶೋಕ ಅವರ ಮಾತುಗಳು ಉಲ್ಲೇಖಾರ್ಹವಾಗಿವೆ. ಎತ್ತು ಸತ್ತಿದ್ದು ಖಚಿತವಾದರೂ ಗೌಡರನ್ನು ಎತ್ತಿನ ಬಗ್ಗೆ ಕೇಳಿ ಮತ್ತೂ ಖಚಿತಪಡಿಸಿಕೊಂಡು ಠೊಣ್ಣಿ ಮುಂದಿನ ಹೆಜ್ಜೆಯಿಡುವುದನ್ನು ಸಮರ್ಥಿಸುತ್ತವೆ. ಠೊಣ್ಣಿ ಸಂಯಮದಿಂದಲೇ ಹಸಿವಿನ ಚಹರೆಯನ್ನು ನಿಯಂತ್ರಿಸಿದರೂ ತೊಗಲು ಮಾರಾಟಗಾರನ ಮುಂದೆ ಆ ನಿಗ್ರಹ ಉಳಿಯದಿದ್ದದ್ದು ಸಹಜಮಾನವವರ್ತನೆಯೆನಿಸುತ್ತದೆ.

ತಡೆದೂ ತಡೆದೂ ಠೊಣ್ಣಿ 'ಗೋಡ್ರೆ, ದೇವ್ರ ಎಣಾ ತುಂಬಿದ ಮನ್ಯಾಗ ಬಾಳ ಒತ್ತಿರೋದು ನಂಗ್ಯಾಕೋ ಬೇಷಿ ಕಾಣವಲ್ದು..... ತಕ್ಕೊಂಡೇಗ್ಲೆ ಮಾದಿಗ ಅಂತ ಅಷ್ಟೆ ಕೊಡ್ರಿರದಣಿ... ಒಯ್ದುಬುಡ್ತಿನಿ' – ಎಂದಾಗ ಗೌಡ ಬುಸುಗುಟ್ಟಿದರೂ 'ನಿಮ್ಮಂಥೋರೆ ಇಂಥಮಾತಂದ್ರೆ ಎಂಗ್ರಿ ದಣಿ.. ನಾವು ಎಣಾತಿಂದು ಬದುಕೋ ಮಂದಿ... ದ್ಯಾವ್ರು ಎಣಾ ಕೊಡಿಕ್ವಯ್ದು ತಿಂದು ಬದಿಕಂತೀವಿ.'

---

೧೨೮ ಅದೇ, ಪು : ೧೦.

೧೨೯ ಗಿರಡ್ಡಿ ಗೋವಿಂದರಾಜ (ಸಂ) 'ಕುಂ.ವೀ ಅವರ ಕಥಾ ಸಾಹಿತ್ಯ', ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೧, ಪು ೧೦.

'ತಿಳ್ಕೊದೀರೆ ಇಂಗಂದ್ರೆ ಮನಿ ಮಾದಿಗ್ರು... ನಾವೆತ್ಲಾಗೆ ಓಗ್ಬೇಕು ದಣಿ, ನಿಮ್ಮೆಂಜ್ಲು ತಿನ್ನೋ ಅಕೈತಿ ಕೇಳ್ತೀವಿ... ಓಗ್ಲಿ... ನಿಮ್ಮ ಪಾದಕ್ಕೆ ಒಂದ್ಜೆತಿ ಚಮ್ಮಾ ಮಾಡ್ಕೋಡ್ತೀನಿ... ದೇವ್ರ ಎಣಾ ಕ್ವಡ್ರಿ.....'ಎಂದ ಆವೇಶದ ಮಾತು ಕಡೆಗೆ ಅನುನಯದಿಂದ ಒಪ್ಪಿಸುವ ಪ್ರಯತ್ನವನ್ನು ಠೊಣ್ಣೆ ಮಾಡುತ್ತಾನೆ. ನಂತರ ರೋಸಿಹೋಗಿ ಹಕ್ಕಿನ ಪ್ರಶ್ನೆಗೆ ಬರುತ್ತಾನೆ.

"ಸತ್ತಿರೋ ಎತ್ತು ಕ್ವಡಿಸ್ರೆಪ್ಯೋ_...ಆ ಎತ್ತು ತಿನ್ನೋದು ನನ್ನ ಅಕ್ಕಯಿತ್ರೆ ಪೋ ..... ಇವತ್ತು ಅನ್ಯಾಯ ನಂಗಾಯ್ತದೆ, ಮುಂದೆ ಇದೇ ನಾಳೆ ನಿಮ್ಗೂ ಆಯ್ತದೆ ..... ಇಂಗಾದ್ರೆ ಒಕ್ಕಲಿಗರ ಮಕ್ಕಳು ಮಣ್ತಿನ ಬ್ಯೆಕಾಯ್ತದ್ರೆಪೋ"[೧೨೮] ಎಂದ ಠೊಣ್ಣೆ ಜಾಗೃತ ಪ್ರಜ್ಞೆಯಿಂದ ಪ್ರತಿರೋಧಿಸುವೆಡೆಗೆ ಸಾಗುವುದು ಅವನಿಗೆ ಅನಿವಾರ್ಯವಾಗುತ್ತದೆ.

ಕಡೆಗೆ 'ಏಯ್ ಗೌಡ ..... ಬುಟ್ ಬುಡು ಅಂದ್ರೆ ಬುಟ್ ಬುಡು ಬದುಕಿರೋವರ್ಗೂ ನಿಮ್ದು ..... ಸತ್‌ಮ್ಯಾಕೆ ನಮ್ದು" ..... [೧೨೯] ಎಂಬ ಠೊಣ್ಣೆ ಮಾತಿನಲ್ಲಿ ಹಕ್ಕು, ಅಸಹಾಯಕತೆ, ನೋವು-ಸಂಕಟ, ರೂಢಿಗತ ಪದ್ಧತಿ, ಒಕ್ಕಲಾಗಿ ದುಡಿದಿದ್ದು ಎಲ್ಲವೂ ಅಡಗಿದ್ದವು.

ಕೊನೆಗೆ ಒಂದು ಸಮುದಾಯದ ಸಾಂಸ್ಕೃತಿಕ ನಂಬಿಕೆಯಮುಂದೆ ತನ್ನ ಹಸಿವಿನ ರೋಧನ ವ್ಯರ್ಥವಾದಾಗ ಸಲಾಕೆ, ಪುಟ್ಟಿ, ಹುಲಿಯನೊಂದಿಗೆ ಗುದ್ದ ತೋಡಿ ಮಾಂಸ ಮತ್ತು ತೊಗಲನ್ನು ಕದಿಯುತ್ತಾನೆ.

ಗೌಡನಿಗೆ ಸುದ್ದಿ ಮುಟ್ಟಿದಾಗ,

'ಐತಪ್ಪೋ ಐತೆ, ಅಸಗಂಡ್ಯೂ ಅಸಗಂಡೂ ಏನ್ತಿನ್ನಿ ಏನ್ಬುಡ್ಲೀ ಅನ್ನಂಗಾತೈತಿ' ಎನ್ನುತ್ತಾನೆ. ಠೊಣ್ಣೆ ಅನ್ನ-ಆಹಾರಕ್ಕಾಗಿ ನಡೆಸುವ ಯತ್ನ ಮತ್ತು ಹೋರಾಟದಲ್ಲಿ ಎತ್ತುವ ಪ್ರಶ್ನೆಗಳು, ಅವನ ಅತ್ಯಂತಿಕ ಸಂಕಟ ಹಲವು ಚಾಚುಗಳ ಕಡೆಗೆ ಸಾಗುತ್ತದೆ. **"ನನ್ನ ಆಡಳಿತದಲ್ಲಿ ಅನ್ನಕ್ಕಾಗಿ ಕಳ್ಳತನ ಮಾಡಿದವನಿಗೆ ಶಿಕ್ಷೆಯಿಲ್ಲ. ಯಾಕೆಂದರೆ ಎಲ್ಲರಿಗೂ ಅನ್ನಕೊಡಲು ನನಗೆ ಸಾಧ್ಯವಾಗದಿದ್ದರೆ ಅನ್ನಕ್ಕಾಗಿ ಕಳವು ಮಾಡಿದವರನ್ನು ಶಿಕ್ಷಿಸುವ ಅಧಿಕಾರ ನನಗಿಲ್ಲ"**[೧೩೦] ಎಂಬ ಬಾಬು

---

೧೨೮ ಕುಂ.ವೀರಭದ್ರಪ್ಪ, 'ಬರೀಕಥೆಯಲ್ಲೋ ಅಣ್ಣಾ', ೨೦೧೦, ಪು ೪೨.

೧೨೯ ಅದೇ, ಪು ೪೩.

೧೩೦ ಪ್ರಜಾವಾಣಿ, ೧೬.೩.೨೦೧೬, ಪು : ೬.

ಜಗಜೀವನ್‌ರಾಂ ಅವರ ಮಾತು ಸಮಾಜದಲ್ಲಿದ್ದ ಹಸಿವಿನ ಮಹತ್ವವನ್ನು ತಿಳಿಸುವ ಮಾತಾಗಿದೆ.

ಪೊಲೀಸ್ ಜೀಪನ್ನು ಹಿಂಬಾಲಿಸಿ,

"ನನ್ನೂ ಜೇಲಿಗಾಕ್ರೀ, ನಮ್ಮನ್ನ ಅದೆಂಗಬಿಟ್ಟ ಬಿಟ್‌ಒಗ್ತೀರಿ" "ನಮ್ಮನ್ನೂ ಕರ್ಕೊಂಡೋಗ್ರೋ ಗಂಡಸ್ಸಾಗಿದ್ರೆ ಕರಕೊಂಡೋಗ್ರೋ"[೧೩೧] ಎಂದು ಒದರಾಡಿದಾಗ ಕತೆ ನಾಟಕೀಯ ತಿರುವು ಪಡೆದು ಶಾಕಿಂಗ್, ಬ್ರೇಕಿಂಗ್, ಥ್ರಿಲ್ಲಿಂಗ್ ಆದರೂ ದಲಿತರ ಕೇರಿಗಳ ಭರವಸೆ ಇಲ್ಲದ ಬದುಕಿನ ಹಸಿವಿನ ಕಥೆಗಳಾಗಿಯೇ ಉಳಿಯುತ್ತವೆ.

ಬರಗೂರು ರಾಮಚಂದ್ರಪ್ಪ ಅವರು ತಮ್ಮ 'ಬಂಡಾಯ – ದಲಿತ ಸಾಹಿತ್ಯ' ಕೃತಿಯಲ್ಲಿ ... **"ಅವರ ಇನ್ನೊಂದು ವಿಶೇಷವೇನೆಂದರೆ ಕೆಳವರ್ಗದ ಭೀಕರ ಬಡತನ ಮತ್ತು ಆ ಬಡತನದಿಂದಾಗುವ ಅವಮಾನವನ್ನು ದಾಖಲಿಸುವಾಗ ಅವರು ಭಾವತೀತರೇಕದ ಉರಿಯಲ್ಲಿ ಬೆಂದು ಹೋಗುವುದಿಲ್ಲ. ಆದರೆ ಆ ವರ್ಗದ ಪ್ರತಿಭಟನೆಯ ಧ್ವನಿಮಾತ್ರ ತುಂಬಾ ರೊಮ್ಯಾಂಟಿಕ್ ಆದ ರೀತಿಯಲ್ಲಿ ಪ್ರಕಟವಾಗುವುದಿದೆ. ಅವರ ಕಥೆಗಳ ಮೂಲಕ ಶೂದ್ರಾನುಭವವನ್ನು, ಶೂದ್ರರು ಮೈಕೊಡವಿಕೊಂಡು ಮೇಲೆ ಏಳುತ್ತಿದ್ದಾರೆಂಬ ಸೂಚನೆಯನ್ನು ನೀಡುತ್ತಿದ್ದಾರೆ**[೧೩೨] ಎಂದು ಕುಂ. ವೀರಭದ್ರಪ್ಪ ಅವರ ಕಥೆಗಳ ಮೂಲಕ ತಳವರ್ಗವನ್ನು ಎಚ್ಚರಿಸುವ ಪ್ರಕ್ರಿಯೆಯನ್ನು ಗುರುತಿಸುತ್ತಾರೆ. ಆಹಾರದ ಹಕ್ಕಿಗಾಗಿ ರೊಣ್ಣೆಯತಕರಾರು ದಲಿತರ ಅಸ್ಮಿತೆಯಾಗಿಯೇ ಉಳಿಯುತ್ತದೆ. ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲ ಹಿಡಿದ ಕಥೆ', 'ಕಿವುಡ ನಾಯಿಯಾದ ಪ್ರಸಂಗ', 'ದೇವರ ಹೆಣ' ಕಥೆಗಳು ನಿರ್ಲಕ್ಷಿತ ಅತಿಸಣ್ಣ ಜಾತಿಗೆ ಸೇರಿದ ಜನರ ಹಸಿವಿನ ಕತೆಗಳಾಗಿದ್ದರೆ, ರಾಮಣ್ಣ ಅವರ 'ಸಂತೆಯೊಳಗೊಂದು ಮನೆಯಮಾಡಿ', 'ಕರುಣಾಳು ಬಾಬೆಳಕೆ', 'ಮಾನಭಂಗ', 'ಹತ್ಯೆ' ಕತೆಗಳು ಅವರ ವೃತ್ತಿ ಬದುಕಿನಲ್ಲಿ ಕಂಡ ಬಡತನದ ನೈಜನೋವಿನ ಕತೆಗಳಾಗಿವೆ. ಎಸ್.ಎಲ್. ಭೈರಪ್ಪನವರು ಹೇಳಿರುವಂತೆ **"ಯಾವ ಪ್ರಸಂಗಗಳು ನಮ್ಮ ಜೀವನದಲ್ಲಿ ಆಳವಾಗಿ ಆಗುತ್ತವೆಯೋ ಅವುಗಳನ್ನು ಮರೆಯಲು ಸಾಧ್ಯವಿಲ್ಲ".**[೧೩೩] ಅಂತೆಯೇ ಕುಂ.ವೀರಭದ್ರಪ್ಪ ಅವರ ಹಸಿವಿನ ಅನುಭವ, ರಾಮಣ್ಣ ಅವರು ವೃತ್ತಿ ಬದುಕಿನಲ್ಲಿ

---

೧೩೧ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು : ೪೭.

೧೩೨ ಕುಂ.ವೀರಭದ್ರಪ್ಪ, ಭಗವತಿ ಕಾಡು, ೧೯೯೦, ಪು : ೩೦.

೧೩೩ ಭೈರಪ್ಪ ಎಸ್.ಎಲ್. ಪ್ರಜಾವಾಣಿ, ೧.೭.೨೦೧೮, ಪು: ೮

ಕಂಡ ರೋಗಿಗಳ ಬಡತನ ಗಾಢವಾಗಿ ನೆನಪಿನಲ್ಲಿ ಉಳಿದು ಕಾಡಿದಾಗ ಕಥೆಯರೂಪವಾಗಿ ಅವರಿಂದ ಬರೆಯುಲ್ಪಟ್ಟಿತೆನ್ನಬಹುದು.

ಹಸಿವು ಕುಂ.ವೀರಭದ್ರಪ್ಪ ಅವರಿಗೆ ಬಹಳಷ್ಟನ್ನು ಕಲಿಸಿದರೆ ರಾಮಣ್ಣ ಅವರಿಗೆ ವೃತ್ತಿ ಬಹಳಷ್ಟನ್ನು ತೆರೆದುಕೊಂಡಿತು. ರಾಮಣ್ಣ ಅವರ 'ಸಂತೆಯೊಳಗೊಂದು ಮನೆಯ ಮಾಡಿ' ಕತೆಯಲ್ಲಿ ಅನ್ನಕ್ಕೆ ಬರವಿದ್ದರೂ ಪ್ರೀತಿಗೆ ಬರವಿಲ್ಲದ ಕುಟುಂಬದಲ್ಲಿ ಎಲ್ಲವೂ ಸಹಜವಾಗಿ ಸಾಗುತ್ತಿತ್ತು. ಉಪ್ಪು ತರಲು ಹೋದ ರಾಜ ಸೈಕಲ್‌ನವನು ಬೇಜವಾಬ್ದಾರಿಯಿಂದ ಓಡಿಸಿದಾಗ ತಲೆ ಒಡೆದು ಬಿದ್ದನು. ಅಲ್ಲಿನ ಜನರ ಕಂಡೂಕಾಣದ ವರ್ತನೆಗೆ ಜಾತಿ ಮತ್ತು ಬಡತನ ಮುಖ್ಯವಾಯಿತೆ ಹೊರತು ಮಾನವೀಯತೆಯಲ್ಲ. ಆಸ್ಪತ್ರೆಯಲ್ಲಿ ರಾಜನ ತಾಯಿ ಹೊಂಬಾಳೆ "ನನ್ ಮಗನ್ನ ಉಳಿಸಿಕೊಡಿ, ನಿಂ ರುಣ ತಿನ್ನೋದಿಲ್ಲ. ಎಲ್ಲಾದ್ರೂ ಕೂಲಿನಾಲಿ ಮಾಡಿ ತೀರಿಸ್ತೀನಿ" ಎಂದು ಡಾಕ್ಟರ ಕಾಲು ಹಿಡಿದುಕೊಂಡಳು. ಪುಟ್ಟಣ್ಣ 'ಬೇಜಾರು ಮಾಡ್ಕೋಬ್ಯಾಡಿ ಸ್ವಾಮಿ. ಏನ ಅರೀದ ಮುಕ್ಕ, ಇವಳ ಗಂಡ ಇಲ್ಲೇ ಕಾಳೇನಹಳ್ಳಿ ಗುಡ್ಡದೇಲಿ ದಿಂಡು ಹೊರೋಕೆ ಹೋಗವ್ನೆ ನಿಂಋಣ ತೀರಿಸುವಂಗೆ ನಾನು ತಾಕೀತು ಮಾಡ್ತೀನಿ'.

ದಿಂಡು ಹೊತ್ತು ಬಂದ ಬಿಸಿಲ 'ಈ ಹಾಳು ದೇವರ್ಗೆ ಬಡವರು ಅಂದ್ರೆ ಅದೇನು ಕೋಪವೋ? ಅವ್ನು ಮನೆ ಎಕ್ಕುಟ್ಟೋಗ, ನಂನೇ ಸತಾಯಿಸ್ತಾನೆ' ಬಡವರಿಗೆ ಬಡವರೇ ಆಗುವರು ಎಂಬಂತೆ ಪುಟ್ಟಣ್ಣನಂತಹವರ ಬೆಂಬಲ, ಸಹಕಾರ, ಸಹಭಾಗಿತ್ವ ಹೊಂಬಾಳೆ ಮತ್ತು ಬಿಸಿಲರಂತಹ ಕುಟುಂಬಕ್ಕೆ ಆಸರೆಯಾಗಬಲ್ಲದಷ್ಟೆ. ಹಣವಿಲ್ಲ, ಇದ್ದೊಬ್ಬ ಮಗನನ್ನು ಉಳಿಸಿಕೊಳ್ಳಬೇಕು ಎಂದು ಇದ್ದಾಗ ಅವಳ ಯಾವ ನಡವಳಿಕೆ ಸರಿಯಲ್ಲ ಎನ್ನಲು ಸಾಧ್ಯವಾಗುತ್ತದೆ.

ರಾಜನ ಕಾಯಿಲೆ ಮೀರಿದಾಗ ದೊಡ್ಡಾಸ್ಪತ್ರೆಗೆ ಬಂದಾಗ ಬೆಂಗಳೂರಿಗೆ ಹೋಗಲು ವೈದ್ಯರು ಸೂಚಿಸಿದರು. ಕೈಯಲ್ಲಿ ಹಣವಿಲ್ಲದೆ, ಹೋಗಲು ಸೌಕರ್ಯವಿಲ್ಲದೆ ಕಾನೂನನ್ನು ಹೇಳಿದ ವೈದ್ಯರ ಮುಂದೆ ಅಸಹಾಯಕರಾಗಿ ಕುಗ್ಗಿ ಹೊರಬಂದರು. ಊರಿಗೆ ಹಿಂತಿರುಗುವ ಮಾರ್ಗಮಧ್ಯೆ ರಾಜ ಸತ್ತು ಹೋದನು. ಹಸಿವು ಮತ್ತು ಬಡತನಗಳೆರಡೂ ಕರುಳಿರಿಯುವ ಚಿತ್ರಗಳೇ. ಬಿಸಿಲ ಕೂಲಿ ಬಿಟ್ಟರೆ ಹಸಿವಿನಿಂದ ಸಾಯಬೇಕಾಗುತ್ತದೆ. ರಾಜನ ವೈದ್ಯಕೀಯ ವೆಚ್ಚ ಭರಿಸಲಾಗದ ಅಸಹಾಯಕತೆ ಕಂಡ ವೈದ್ಯರು

"ನಿಮ್ಮಂತಹವರಿಗೆ ಮಕ್ಕಳೇ ಆಗಬಾರದು"[೧೩೪] ಎಂದಿದ್ದು ಜಗತ್ತಿನ ಹಸಿವು - ಬಡತನದ ತೀವ್ರತೆಗೆ ಉತ್ತರ ಹುಡುಕಬೇಕಾದ ಅಗತ್ಯದೆಡೆಗೆ ಹೋಗುತ್ತದೆ. ದಿನವೂ ಹೊಟ್ಟೆತುಂಬಿಸಲು ಪಡುವ ಪಡಿಪಾಟಲು ಬಿಸಿಲನಿಗೆ ಸಾವೇ ಮುಕ್ತಿ ಎನಿಸಿ ಮಗನಿಗೆ ಈ ಬದುಕಿನ ಜಂಜಾಟದಿಂದ ಬಿಡುಗಡೆ ಸಿಕ್ಕಿತಲ್ಲ ಎಂದು ಯೋಚಿಸುತ್ತಾನೆ. 'ಹಾಳು ಜವರಾಯ ಸೂಳೆ ಮಗನ್ಗೆ ಬಡವರು ಅಂದರೆಬೋಸದ್ರ ! ಅವರ ಪರಾಣ ಅಂದ್ರೆ ಅವನ್ಗೆ ಕಸಕ್ಕಿಂತ ಕಡೆ' ಎಂದು ಗೋಳಾಡಿದ್ದರಲ್ಲಿ ಬಡತನ ಅವನನ್ನು ಹೈರಾಣಾಗಿಸಿತ್ತು.

ಪುಟ್ಟಣ್ಣ ತನ್ನ ನೆಲೆಯಲ್ಲಿ ವಿಭಿನ್ನವಾಗಿ ಯೋಚಿಸಬಲ್ಲ ಪ್ರಜ್ಞಾವಂತನೆನಿಸುವುದು ಅವನ ಮಾತುಗಳಲ್ಲೇ ತಿಳಿಯುತ್ತದೆ. **"ಲೋ! ಹೊತಾರಕೆ ಎದ್ದು ಕಾಳೇನಹಳ್ಳಿ ಗುಡ್ಡೇಲಿ ದಿಂಡು ಒರೋಕೆ ಓಗು ಬುಡುಬ್ಯಾಡ, ನಾಳಾಕೆ ಹಾದಿನ ಕೆರೆ ಪೊಲೀಸ್ ಸ್ಟೇಷನ್‌ಗೋಗಿ ಅರ್ಜಿಕೊಡುವ,ಸೈಕೋಲು ಬುಟ್ಟ ನಂ ಹೈದನ ಸಾಯಿಸ್ದೋನ ಪತ್ತೆ ಮಾಡಿ ಜೈಲುಮನೆಗಾಕಿ : ಸೊಳ್ಳೇ ಮನೇಗೆ ಕೂಡಾಕಿ ಅಂತ ಕೇಳುವ, ಎಲ್ಲ ಸದರ ತಿಳ್ಕೊಂಡವ್ರೆ, ಬಡವರ ಪರಾಣ ಅಂದ್ರೆ ಕಸಕ್ಕಿಂತ ಕಡೆ ಅಂತ ತಿಳ್ಕಂಡವ್ರೆ"**[೧೩೫] ಪುಟ್ಟಣ್ಣನಿಗೆ ತಮ್ಮವರ ಬಗೆಗಿನ ಕಾಳಜಿ, ತಮಗಿರುವ ಕಾನೂನನ್ನು ಬಳಸಿಕೊಳ್ಳಬೇಕು, ಅವನಿಗಿರುವ ಜೀವನಪ್ರೀತಿ, ಆಗಿರುವ ಅನ್ಯಾಯಕ್ಕೆ ಪ್ರತಿಭಟಿಸುವ ಮನೋಭಾವ ತಳವರ್ಗದ ಬದುಕಿಗೆ ಬೆಳಕಿನ ದಾರಿಯಾಗಿ ಕಾಣುತ್ತದೆ.

ಆದರೆ ಕುಂ.ವೀರಭದ್ರಪ್ಪ ಅವರ 'ದೇವರಹೆಣ' ಕತೆಯಲ್ಲಿ ಶೊಣ್ಣಿಗೆ ತನ್ನ ಜನರ ಯಾವ ಬೆಂಬಲವೂ ದೊರಕುವುದಿಲ್ಲ, ಏಕಾಂಗಿಯಾಗಿ ಪ್ರತಿಭಟಿಸುತ್ತಾನೆ. ಅವನು ಯಾವ ಕ್ಷಣದಲ್ಲೂ ಹಿಂದೆ ಸರಿಯದಂತೆ ಹಸಿವು ಅವನನ್ನು ಬೃಹದಾಕಾರವಾಗಿ ಕಾಡುತ್ತಿರುತ್ತದೆ. ರಾಮಣ್ಣ ಅವರ ಕತೆಯ ಬಿಸಿಲ ಪೊಲೀಸ್‌ಠಾಣೆ ನೆನೆದು ನಡುಗಿದರೆ ಶೊಣ್ಣಿ ಮತ್ತು ಅವನ ಕುಟುಂಬ ಪೊಲೀಸರಿಗೆ ಕಂಪನ ಉಂಟುಮಾಡಿದ್ದಲ್ಲದೆ, ಅವರು ಹೆದರಿ ಜೀಪು ಹತ್ತಿ ಪಲಾಯನ ಮಾಡುತ್ತಾರೆ. ಇಲ್ಲಿ ಹೈಡ್ರಾಮವೇ ನಡೆದುಬಿಡುತ್ತದೆ.

ಆದರೆ ರಾಮಣ್ಣನವರ ಕತೆಯಲ್ಲಿ ಬಡವನೊಬ್ಬ ಠಾಣೆಗೆ ಹೋದರೆ ಪೊಲೀಸರ ಅಮಾನವೀಯ, ಅಸ್ವಾಭಾವಿಕ ಅನಾಗರೀಕ ನಡವಳಿಕೆ, ಅಲ್ಲಿ ನಡೆಯುವ ಅನ್ಯಾಯವನ್ನು ಎಳೆಎಳೆಯಾಗಿ ಮುಂದಿಡುತ್ತಾರೆ. ಬಡವರಿಗೆ ನ್ಯಾಯ ಕೇಳುವ ಹಕ್ಕಿಲ್ಲವೆನಿಸಿ ರಾಜಸತ್ತ

---

೧೩೪ ಕಣಜ, ಲೋಹಿಯಾ ಪ್ರಕಾಶನ, , ಪು: ೨೫೮.
೧೩೫ ಅದೇ, ಪು: ೨೬೦.

ದುಃಖಕ್ಕಿಂತ ನೋವು, ತಳಮಳ ಉಂಟಾಗಿ ವ್ಯವಸ್ಥೆ ಬಗ್ಗೆ ಭ್ರಮನಿರಸನವಾಗಿ 'ಕಲ್ಕಿ' ಪದ್ಯ ಕಾಡತೊಡಗುತ್ತದೆ. ರಾಮಣ್ಣನವರು ವ್ಯವಸ್ಥೆಯನ್ನು ವಾಸ್ತವಿಕ ನೆಲೆಯಲ್ಲಿ ಕಾಣಿಸಿದರೆ ಕುಂ.ವೀರಭದ್ರಪ್ಪ ನಾಟಕೀಯತೆ ತರುವುದು ಮುದನೀಡಿದರೂ ಅದು ತಾತ್ಕಾಲಿಕವಾಗಿರುತ್ತದೆ. ಪೊಲೀಸ್ ಠಾಣೆಯಲ್ಲಿ ನ್ಯಾಯಸಿಗುವ ಭರವಸೆಯಿಂದ ಅಂದು ಇಂದು ಹೆಜ್ಜೆ ಇಡಲು ಹಿಂಜರಿಯುವ ಮನೋಭಾವ ಬದಲಾಗುವ ಕಾಲ ಎಂದು ಎಂಬ ಪ್ರಶ್ನೆ ರಾಜನ ಸಾವಿಗಿಂತ ಹೆಚ್ಚಾಗಿ ಕಾಡುತ್ತದೆ. ರಾಜನ ಸಾವು ವ್ಯವಸ್ಥೆಯ ಹಲವು ಆಯಾಮ ಪರಿಚಯಿಸಿದರೆ ಕುಂ. ವೀರಭದ್ರಪ್ಪ ಅವರ ಕತೆಗಳ ಹಸಿವಿನ ಚಿತ್ರಣ ಬಡವರ ಬದುಕನ್ನು ಬೆತ್ತಲೆಗೊಳಿಸುತ್ತದೆ.

ರಾಮಣ್ಣ ಅವರ 'ಕರುಣಾಳು ಬಾ ಬೆಳಕೆ' ಕತೆ ಬಡ ಅನಕ್ಷರಸ್ಥ, ಶ್ರಮಜೀವಿ ಪೋಷಕರು ಮಗಳನ್ನು ಹೆರಿಗೆಗಾಗಿ ಆಸ್ಪತ್ರೆಗೆ ಕರೆತಂದಾಗ ಆದ ಅನುಭವ ಅವರು ಬದುಕಿರುವವರೆಗೂ ಹೆಪ್ಪಿಟ್ಟನೋವಾಗಿ ಪರಿಣಮಿಸುತ್ತದೆ. ಹೆರಿಗೆ ಹೆಣ್ಣಿಗೆ, ತಂದೆ ತಾಯಿಯರಿಗೆ ನೋವು - ಸಂಭ್ರಮದ ವಿಚಾರ. ಆದರೆ ಗರ್ಭಿಣಿ ಮಗಳು ತಂದೆ-ತಾಯಿ, ಕುಟುಂಬದವರು ಆಸ್ಪತ್ರೆಯಿಂದ ಆಸ್ಪತ್ರೆಗೆ ವೈದ್ಯರಿಂದ ವೈದ್ಯರಬಳಿಗೆ ಎಡತಾಕಿ ಸುತ್ತಿ ಬಸವಳಿದರೂ ಮಗಳಿಗೆ ಸೂಕ್ತ ಚಿಕಿತ್ಸೆ ದೊರೆಯುವುದಿಲ್ಲ.

ಬಡವರಾದ ಅವರಲ್ಲಿ ಹಣವಿಲ್ಲದಿರುವುದು ಶೋಷಣೆಗೆ ಗುರಿಯಾಗಲು ಕಾರಣವಾಗುವುದು ತೀರಾ ವಿಷಾದನೀಯ ವಿಚಾರ. ಕಡೆಗೆ ಮಗಳನ್ನು ಕಳೆದುಕೊಂಡು ಹೆಣದೊಂದಿಗೆ ತಾವೂ ಜೀವಂತ ಹೆಣವಾಗಿ ಊರಿಗೆ ಮರಳುತ್ತಾರೆ. ಸರ್ಕಾರಿ ಆಸ್ಪತ್ರೆಗೆ ಹೋದ ಬಹಳಷ್ಟು ಮಂದಿಯ ಅನುಭವ ಇದೆ ಆಗಿರುವುದುಂಟು. ಕೊನೆಗೆ ಮಗಳ ಹೆಣಸಿಕ್ಕರೆ ಸಾಕು ಎನ್ನುವ ಮಟ್ಟಕ್ಕೆ ಪೋಷಕರು ಬರುವಂತಾಗುವುದು ವ್ಯವಸ್ಥೆಯ ದಯನೀಯ ಸೋಲೆನ್ನಬಹುದು.

ಕುಂ.ವೀರಭದ್ರಪ್ಪ ಅವರ 'ಕಿವುಡ ನಾಯಿಯಾದ ಪ್ರಸಂಗ' ಕತೆಯಲ್ಲಿ ಕಿವುಡನ ಹಸಿವು ಆ ಊರಿನ ಜನರ ನಾನಾ ಮುಖಗಳನ್ನು ಪರಿಚಯಿಸುತ್ತದೆ. ಅಲ್ಲಿ ಅವನ ಗೋಳನ್ನು ಗಮನಿಸುವರೇ ಇಲ್ಲದೆ ಒಬ್ಬನೇ ಪರದಾಡುತ್ತಾನೆ. ಹೆಂಡತಿ, ತೊಗಲಿನ ಸಾಬಿ, ಚಹಾ ಅಂಗಡಿಯವ ಎಲ್ಲರೂ ಕಿವುಡನನ್ನು ಶೋಷಿಸಿದವರೇ. ಯಾವಾಗ ಗುಣಿತೋಡಿದ ಹಣವನ್ನು ತೊಗಲಿನ ಸಾಬಿಕಿತ್ತು ಕೊಳ್ಳುತ್ತಾನೋ ಆಗ ನಿರ್ಲಿಪ್ತನಾಗಿ ಬೇರೆ ದಾರಿಹುಡುಕುತ್ತಾನೆ.

ಆದರೆ ರಾಮಣ್ಣನವರ ಕತೆಯ ಮರಿಸಿದ್ದೇಗೌಡನಿಗೆ ಕುಟುಂಬದ ಸಂಪೂರ್ಣ ಬೆಂಬಲ ಇದೆ. ಕಿವುಡನ ಹೆಂಡತಿ ಪ್ರತಿಹಂತದಲ್ಲೂ ಗಂಡನನ್ನು ಅನ್ನ ಸಂಪಾದಿಸದ ಕಾರಣಕ್ಕೆ ಹೀಯಾಳಿಸುತ್ತಿರುತ್ತಾಳೆ. ಗುಣಿಯಲ್ಲಿ ಹೆಣದ ಬುಡದ ಕಾಯಿಯನ್ನು ತೆಗೆದುಕೊಂಡಾಗ ಹಸಿವು ಅವನಲ್ಲಿ ಶೂನ್ಯತೆ ಉಂಟುಮಾಡಿದರೆ ಮರಿಸಿದ್ದೇಗೌಡ ಮಗಳ ಹೆಣವನ್ನು ಕಾರಿನಲ್ಲಿ ತೆಗೆದುಕೊಂಡು ಊರಿಗೆ ಹೊರಟಾಗ ವ್ಯವಸ್ಥೆಯ ಕಬಂಧಬಾಹುಗಳಿಂದ ಬಿಡುಗಡೆಹೊಂದಿದ ಶೂನ್ಯತೆ ಆವರಿಸುತ್ತದೆ.

ಕುಂ.ವೀರಭದ್ರಪ್ಪ ಅವರ ಕತೆ 'ಕಿವುಡ'ನ ಹಸಿವಿನ ಹಿನ್ನೆಲೆಯಲ್ಲಿ ಮನುಷ್ಯ ಸ್ವಭಾವದ ಹಲವು ಮುಖಗಳನ್ನು ಕಾಣಿಸಿದರೆ, ರಾಮಣ್ಣನವರ ಕತೆ ಹೆರಿಗೆಯ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿಯ ಅಮಾನವೀಯ ಮುಖಗಳನ್ನು ಅನಾವರಣಗೊಳಿಸಿ ಜಡ್ಡುಗಟ್ಟಿದ ವ್ಯವಸ್ಥೆಯನ್ನು ಎತ್ತಿತೋರಿಸುತ್ತದೆ. ಕಿವುಡನ ಹಸಿವು ಒಂದು ಸಮುದಾಯದ ಅಸಹಾಯಕತೆಗೆ ಕಾರಣವಾದರೆ, ಅದನ್ನು ಉಪಶಮನಗೊಳಿಸದ ಮತ್ತೊಂದು ವ್ಯವಹಾರಿಕ ಮುಖ ನಿರಾಕರಣೆಯ ದೌರ್ಜನ್ಯದ ವ್ಯಾಪ್ತಿಗೆ ಸಲ್ಲುತ್ತದೆ.

'ಕರಿಸಿದ್ದೇಗೌಡ'ನ ಬಡತನ, 'ಕಿವುಡ'ನ ಹಸಿವು ಕತೆಯ ಮೂಲಕ ಸಮಾಜದ ಡಂಭಾಚಾರ, ಅನ್ಯಾಯ, ಭ್ರಷ್ಟತೆಯನ್ನು ನಿರ್ಭಯವಾಗಿ ಬಯಲಿಗೆಳೆಯುತ್ತದೆ. ಹಸಿವಿನ, ಬಡತನದ ಕರುಳಿರಿವ ಚಿತ್ರಗಳ ಹಿಂದೆ ಇರುವುದು ಸಾಮಾಜಿಕ ಕಳಕಳಿಯೇ ಆಗಿದೆ. ಎರಡೂ ಕತೆಗಳಲ್ಲಿ ಮನಸ್ಸಿನ ಬಡತನವೇ ಢಾಳಾಗಿ ಗೋಚರಿಸುತ್ತದೆ. ಶ್ರಮಿಕವರ್ಗದವರ ಬಡತನ ಮತ್ತು ಹಸಿವಿನ ಕಾರಣಗಳನ್ನು ಗುರುತಿಸುವ ಹಂತದಲ್ಲಿ ವಾಸ್ತವವಾದ ಕಾರಣಗಳ ಶೋಧನೆಯ ಅಗತ್ಯತೆಯನ್ನು ಕತೆ ಕಾಣಿಸುತ್ತದೆ. ಎಸ್.ರಾಧಾಕೃಷ್ಣನ್ ಅವರು ಹೇಳಿರುವಂತೆ **"ಹೊರಗೆ ಕಾಣುವ ಬಡತನಕ್ಕಿಂತಲೂ ಮನಸ್ಸಿನ ಬಡತನ ಅಪಾಯಕಾರಿಯಾಗಿ ಕಾಣುತ್ತದೆ."**[೧೩೬]

ಪ್ರತಿಯೊಂದು ಜೀವವೂ ಅಮೂಲ್ಯವೆಂದು ಕಾರ್ಯಗತವಾದಾಗ ಮಾತ್ರ ವೈದ್ಯವೃತ್ತಿಯ ಘನತೆ-ಗೌರವ ಉಳಿಯಬಲ್ಲದು. ಅತ್ಯಂತ ಸುಭದ್ರ ಸರ್ಕಾರಿ ವೈದ್ಯಕೀಯ ಕ್ಷೇತ್ರಕಟ್ಟಿದಾಗ ಮಾತ್ರ ಬಡವರ ಜೀವ ಉಳಿಯುತ್ತವೆ. ಸಿರಂಜ್, ಸ್ಟೆತಾಸ್ಕೋಪ್ ಹಿಡಿದ ಕೈಯ ಹಿಂದಿನ ಹೃದಯ ಮಾನವೀಯಗೊಳ್ಳಬೇಕಾಗಿದೆ.

---

೧೩೬ ಪ್ರಜಾವಾಣಿ, ೨.೯.೨೦೧೬. ಪು: ೫.

ರಾಮಣ್ಣ ಅವರ 'ಮಾನಭಂಗ' ಮತ್ತು 'ಹತ್ಯೆ' ಕತೆಗಳು ಹಸಿವು ಮತ್ತು ಬಡತನದ ಒಳನೋಟ ನೀಡುತ್ತವೆ. ಮಾನಭಂಗ ಕತೆಯ ನಿರಪರಾಧಿ ರಶೀದ ಕಳ್ಳತನದ ಅಪಾದನೆ ಮೇಲೆ ಜೈಲಿಗೆ ಹೋಗುತ್ತಾನೆ. ನಂತರ ಹೆಂಡತಿ ಮಗಳು ಬಾವಿಗೆ ಬಿದ್ದು ಆತ್ಮಹತ್ಯೆಮಾಡಿಕೊಳ್ಳುತ್ತಾರೆ. ಶವಚ್ಛೇದನ ಮಾಡಿದ ವೈದ್ಯರು ರಶೀದನಿಗೆ 'ನಿನ್ನ ಹೆಂಡತಿ ಹೊಟ್ಟೆಯಲ್ಲಿ ನೀರೂ ಇರಲಿಲ್ಲ' ಎಂದಾಗ ರಶೀದ, 'ಗೊತ್ತು ಸ್ವಾಮಿ ಗೊತ್ತು, ಅವಳ ಹೊಟ್ಟೇಲಿ ಏನು ನನ್ನ ಮಗಳ ಹೊಟ್ಟೇಲೂ ಏನೂ ಇರಲಿಲ್ಲ....... ಹೊಟ್ಟೆ ಹಸೀತದೆ ಅಂತ ಚಂಡಿಹಿಡಿದಾಗ ಕತ್ತು ಹಿಸುಕಿ ಸಾಯಿಸಿರಬೇಕು' ಏನೇನೋ ಗೊಣಗಾಡಿದ. ದುಡಿಯುವ ಗಂಡಸು ಜೈಲಿಗೆ ಹೋದರೆ ಕಾಯಿಲೆ ಹೆಂಡತಿ ಹೇಗೆ ಹೊಟ್ಟೆತುಂಬಿಸಿಕೊಳ್ಳಲು ಸಾಧ್ಯ. ಯಾವ ಆರ್ಥಿಕ ಬೆಂಬಲವಿಲ್ಲದೆ ಬದುಕು ದುಸ್ತರವಾದಾಗ ಸಾವೇ ಎಲ್ಲಕ್ಕೂ ಪರಿಹಾರವೆನಿಸುತ್ತದೆ.

ಆದರೆ ಕುಂ.ವೀರಭದ್ರಪ್ಪ ಅವರ ಕತೆಗಳ 'ಕತ್ತಲ', 'ಕಿವುಡ', 'ತೊಣ್ಣೆ' ಈ ರೀತಿಯ ಹತಾಶಭಾವತಾಳುವುದಿಲ್ಲ. ಹೇಗಾದರೂ ಅನ್ನ ಸಂಪಾದಿಸಬೇಕೆಂಬ ಛಲ ಇರುತ್ತದೆ. ಜೇಲಿನಲ್ಲಿರುವ ರಶೀದ ಅಸಹಾಯಕತೆಯಿಂದ ಸಾವನ್ನು ಸಮರ್ಥಿಸುವುದು ಜೀವಪರ ನಿಲುವಲ್ಲವೆನಿಸುತ್ತದೆ. ಕುಂ.ವೀರಭದ್ರಪ್ಪ ಪಾತ್ರಗಳು ಹೇಗಾದರೂ ಜೀವವುಳಿಸಿಕೊಳ್ಳಬೇಕೆಂಬ ನಿಲುವಿಗೆ ಬದ್ಧವಾಗಿರುತ್ತವೆ.

ರಶೀದ, **"ಈ ಅಲಾಲ್ಖೋರ ಪ್ರಪಂಚಕ್ಕೆ ಸುಖಕೋಡೋಕೆ ಈಗ ಇರೋ ಸೂಳೇರು ಸಾಕಲ್ವೆ ಸಾಬ್, ನನ್ನ ಮಗಳೂ ಒಬ್ಬ ಸೂಳೆ ಆಗೋದ, ಒಬ್ಬ ಅಪ್ಪ ಆಗಿ ನಾನು ಹೆಂಗೆ ಸಹಿಸಿಕ್ಕೊಳ್ಳಿ? ಹೊಟ್ಟೆಕೆಟ್ಟದ್ದು ಸಾಬ್, ಸೂಳೇರ ಗೋಳನ್ನು ದಿನಾನೋಡೋ ಪೋಲೀಸರನ್ನೋರ್ನೇ ಕೇಳಬೇಕಾದ್ರೆ"**[೧೩೭] ಎಂದ ರಶೀದನಿಗೆ ಹಸಿವಿನಿಂದ ತನ್ನ ಮಗಳು ಅಡ್ಡದಾರಿ ಹಿಡಿದರೆ ಎಂಬ ಭಯಕಾಡಿತೆನ್ನಬಹುದು. ಆದ್ದರಿಂದಲೇ ಹೆಂಡತಿ ಮತ್ತು ಮಗಳ ಸಾವಿನ ನಂತರ ನಿರುಮ್ಮಳವಾಗಿದ್ದ. ಸಾಮಾಜಿಕ ತುಡಿತಕ್ಕೆ ವ್ಯವಸ್ಥೆ ಸ್ಪಂದಿಸದಿದ್ದರೆ ಮುಗ್ಧಜೀವಿಗಳು ಬಲಿಯಾಗುತ್ತಲೇ ಇರುತ್ತಾರೆ. ಆದರೆ ಕುಂ.ವೀರಭದ್ರಪ್ಪ ಅವರ 'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ'ಯಲ್ಲಿ ಬಡಮುಸ್ಲಿಂ ಕುಟುಂಬವೊಂದು ಶವಸಂಸ್ಕಾರದ ವಿಚಾರದಲ್ಲಿ ಛಿದ್ರವಾಯಿತು. ಕುಟುಂಬದ ಪ್ರಾಮಾಣಿಕ ಬದುಕು ಆಕ್ರೋಶದ ನೆಲೆ ತಲುಪಿದರೂ, ವ್ಯವಸ್ಥೆಯ ಮುಂದೆ ಅಸಹಾಯಕರಾದರೂ ಸಾವನ್ನು ಬಯಸಲಿಲ್ಲ. ವ್ಯವಸ್ಥೆಯೊಂದಿಗೆ ಕಡೆತನಕ

---

೧೩೭ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೪೪೭.

ಹೋರಾಡಿದರು. ಆದರೆ ರಾಮಣ್ಣ ಅವರ ಕತೆಯ ರಶೀದ ಅಸಹಾಯಕತೆಯಿಂದ ಜೀವನ ಪ್ರೀತಿಯನ್ನೇ ಕಳೆದುಕೊಂಡಿರುತ್ತಾನೆ. ಕುಂ.ವೀರಭದ್ರಪ್ಪ ಕತೆಯ ಪಾತ್ರಗಳು ಜೀವಪರ ನಿಲುವನ್ನು ತಾಳುವುದನ್ನು ಕಾಣಬಹುದು. ರಾಮಣ್ಣನವರ ಕತೆಯ ಪಾತ್ರಗಳು ವ್ಯವಸ್ಥೆಯ ಮುಂದೆ ಅಸಹಾಯಕರಾಗಿ ಕೈಚೆಲ್ಲಿಬಿಡುತ್ತವೆ. ರಾಮಣ್ಣ ಅವರ 'ಹತ್ಯೆ' ಕತೆ ಬದುಕಿರುವವರ ಹತ್ಯೆ ಸರ್ಕಾರಿ ಆಸ್ಪತ್ರೆಯಲ್ಲಿ ಆಗುವ ಬಗೆಯನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಸಹಜ ಸಾವನ್ನು ಸಹಿಸುವುದು ಕಷ್ಟದ ವಿಚಾರವಾಗಿರುವಾಗ ಅಸಹಜ ಸಾವು ಉಂಟುಮಾಡುವ ಅಘಾತ, ನೋವು-ಸಂಕಟ, ಗೊಂದಲ, ತಳಮಳಗಳಿಂದ ಹತ್ತಿರದವರ ಮನಸ್ಸು ಛಿದ್ರವಾಗಿ ದಿಕ್ಕುತೋಚದ ಸ್ಥಿತಿಯಾಗಿರುತ್ತದೆ. ಕಾನೂನು ಕಟ್ಟಲೆಗಳನ್ನು ಪೂರೈಸಿ ನಮ್ಮ ಹೆಣ ನಮಗೆ ಸಿಕ್ಕರೆ ಸಾಕು ಎಂಬುದು ದುಃಖವನ್ನೇ ಮರೆಸಿಬಿಡುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ವಿಷಕುಡಿದವರು ಸತ್ತರೆ ಎದುರಿಸಬೇಕಾದ ಸಂಕಷ್ಟಗಳನ್ನು ಹೆಲ್ತ್ ಇನ್ಸ್‌ಪೆಕ್ಟರ್ ತಿಮ್ಮೇಗೌಡ ಹೀಗೆ ಬಿಚ್ಚಿಡುತ್ತಾನೆ.

"ನಿಮಗೆ ಬೆಪ್ಪು, ಇಡದದೆ ಸಾರ್, ಪೊಲೀಸಿನೋರ ಕೈಗೆ ಸಿಗಾಕೊಂಡ್ರೆ ಹೆಣಾನು ಕಣ್ಣೀರು ಸುರಿಸ್ತಾ ಕೊಳೆತು ನಾರೋಕೆ ಶುರುಮಾಡ್ತದೆ? ಆ ರಿಪೋರ್ಟ್ಟು ಈ ರಿಪೋರ್ಟ್ಟು ಅಂತ ಸತಾಯಿಸುತ್ತಾರೆ. ಆಮ್ಯಾಲೆ ನಮ್ಮ ಡಾಕ್ಟರುಗಳು.... ಇನ್ನು ಇವರನ್ನು ಆ ನರ್ಸಿಂಗ್ ಹೋಂ ಈ ನರ್ಸಿಂಗ್ ಹೋಂ ಅಂತ ಒಳ್ಳೆ ನಾಯಿ ಅಲೆದಂಗೆ ಅಲ್ದು ಹಿಡೀಬೇಕು. ಕಳ್ಳರನ್ನು ಹಿಡಿದಂಗೆ ! ಏಳೆಂಟು ಸಾವಿರ ಹೋಗಿ ಮನೆಹಾಳಾದ್ರು ಚಿಂತೆ ಇಲ್ಲ ವಿಷ ಕುಡಿದೋರು ಏನೇ ಆಗ್ಲಿ ಸರ್ಕಾರಿ ಆಸ್ಪತ್ರೆಗೆ ಬರಬಾರ್ದು। ವಿಷ ಕುಡಿದೋನ ತಿಥಿಗಿಂತ ಅವನ ಅಪ್ಪ ಅವ್ವ ಸಂಬಂಧಿಕರ ತಿಥಿ ಆಗೋಯ್ತದೆ!"[೧೩೮] ಎಂದದ್ದು ಸರ್ಕಾರಿ ಆಸ್ಪತ್ರೆಗಳಲ್ಲಿನ ಕಾರ್ಯವೈಖರಿ, ವ್ಯವಸ್ಥೆ ಎಷ್ಟು ರೋಗಗ್ರಸ್ಥವಾಗಿದೆಯೆಂದು, ಅದರ ಬದಲು ಅಡ್ಡದಾರಿ ಸರಿ ಎಂದು ಸಮರ್ಥನೆ ಮಾಡತೊಡಗುತ್ತಾನೆ. ಹೆಣ ಪಡೆಯುವಲ್ಲಿ ವಸೂಲಿ-ವಶೀಲಿ ಇದ್ದು ಇವೆರಡೂ ಇಲ್ಲದ ಬಡ ಅಸಹಾಯಕರು ಹೆಣ ಬಿಟ್ಟು ಪರಾರಿಯಾಗಿರುವುದುಂಟು. ಇದು ಇಡೀ ವ್ಯವಸ್ಥೆಯ ಕೊಳಕುತನವನ್ನು ಪ್ರತಿಬಿಂಬಿಸುತ್ತದೆ.

ಮಗನನ್ನು ಕಳೆದುಕೊಂಡ ತಾಯಿ 'ಸಾವೇಲೂ ನಮಗೆ ಇಷ್ಟುಗೋಳಾಡಿಸ್ತೀರಲ್ಲ - ಬರಿ ಬಡವರೇ ತುಂಬಿರೋ ಈ ದೇಶದಲ್ಲಿ ಇದು ಯಾವ ನ್ಯಾಯ? ಅಯ್ಯೋ ! ಈ ಹಾಳು ಬಡವರಿಗೆ ಯಾಕೆ ಸಾವು ಕೊಟ್ಟೆ? ಯಾಕೆ ನಮ್ಮ ಒಡಲ ಉರೀಸಿ?'

---

೧೩೮ ಅದೇ, ಪು: ೫೨೧.

"ನನ್ನ ಮಗನ ಹೆಣ ಕೊಡಿ, ನನ್ನ ಮಗನ ಹೆಣ ಅಷ್ಟೇ ನಾನು ಕೇಳೋದು ! ದುಡ್ಡಲ್ಲ..... ಬಂಗಾರವಲ್ಲ..... ವಜ್ರವಲ್ಲ..... ವೈಡೂರ್ಯ ಅಲ್ಲ..... ಬರಿ ನನ್ನ ಮಗನ ಹೆಣ!"[೧೩೯] ಎಂದು ತಲೆಸುತ್ತಿ ಬಿದ್ದ ತಾಯಿಯು ಅನ್ಯಾಯವನ್ನು ಕಂಡು ಆಕ್ರೋಶಗೊಂಡಿದ್ದು ಅಲ್ಲಿನ ಸಾಕ್ಷಿ ಪ್ರಜ್ಞೆಗೆ ಸವಾಲು ಹಾಕಿತು. ಅಲ್ಲಿ ಆಗುತ್ತಿದ್ದುದು ಮಾನವನೆನಿಸಿಕೊಂಡವನಿಂದ ಮಾನವನ ಶೋಷಣೆ. ಬಡತನದಿಂದ ಗಿಟಗಿರಿದು ಹೋಗಿದ್ದ ಅವರ ಬದುಕು ತಾಯಿ-ಮಗನ ಪ್ರೀತಿಯಿಂದ ಶ್ರೀಮಂತವಾಗಿತ್ತು. ಶ್ರಮಜೀವಿಗಳ ಬಡತನದ ವಾಸ್ತವದ ಕಾರಣಗಳ ಶೋಧನೆ ಆಗುತ್ತಿಲ್ಲವೆನ್ನಬಹುದು. ಕುಂ.ವೀರಭದ್ರಪ್ಪ ಅವರ ಹಸಿವಿನ ಕಥೆಗಳಲ್ಲಿ ಸರ್ಕಾರಿ ಆಡಳಿತದ ಭ್ರಷ್ಟವ್ಯವಸ್ಥೆಯ ಚಿತ್ರಣ ವಿರಳವೆನ್ನಬಹುದು. ರಾಮಣ್ಣನವರ ಬರವಣಿಗೆಯ ಹಿಂದೆ ಭುಸಗುಡುವ ಸಿಟ್ಟಿಗೆ ಕಾರಣ ಸರ್ಕಾರಿ ಸಂಸ್ಥೆಗಳ ಆಡಳಿತ ವೈಖರಿಯೇ ಆಗಿದೆ. ಸ್ವಾತಂತ್ರ್ಯ ನಂತರವೂ ಬದಲಾಗದ ಧೋರಣೆ ಬಗ್ಗೆ ತೀವ್ರ ಅಸಮಾಧಾನವನ್ನು ಅವರ ಬರವಣಿಗೆಯಲ್ಲಿ ಕಾಣಬಹುದು. ಸ್ವಾತಂತ್ರ್ಯೋತ್ತರದಲ್ಲಿ ಬಡ ಶ್ರಮಜೀವಿಗಳ ದುಃಖದ ಬೇರುಬೀಳಲುಗಳ ಪುರಾಣ ಬೇರೆಯೇ ಆಗಿರುವುದು ರಾಮಣ್ಣನವರಿಗೆ ನೋವಿನಸಂಗತಿಯಾಗಿದೆ.

ರಾಮಣ್ಣ ಅವರ 'ಕಕರನ ಯುಗಾದಿ' ಕುಂವೀ ಅವರ 'ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ' ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹಸಿವು ಮತ್ತು ಬಡತನವನ್ನು ಕುರಿತಾಗಿದೆ. ಕಕರ ದಲಿತವರ್ಗಕ್ಕೆ ಸೇರಿದ ಪ್ರಾಮಾಣಿಕ ಶ್ರಮಜೀವಿ. ಅವನ ದುಡಿತ ಮತ್ತು ನಿಷ್ಠೆಯೇ ಅವನಿಗೆ ಮುಳುವಾಗುತ್ತದೆ. ಊರೆಲ್ಲಾ ಉಗಾದಿ ಸಂಭ್ರಮದಲ್ಲಿದ್ದಾಗ ಕಕರ ಯಾವುದೂ ನೆಟ್ಟಗಿಲ್ಲದ ತನ್ನ ಸಂಸಾರದ ಬಗ್ಗೆ, ಬರಗಾಲ, ಮಳೆಯ ಬಗ್ಗೆ ಯೋಚಿಸುತ್ತಿದ್ದನು.

ಮಳೆ ಬಗ್ಗೆ ಜೋಯಿಸರನ್ನು ಕೇಳಿದಾಗ, **"ಮುಂಡೇದ, ಶಾಸ್ತ್ರ ಯಾವಾಗಲೂ ಒಬ್ಬರಿಗೆ ಸಂಬಂಧಪಟ್ಟಿರುತ್ತೋ, ಎಲ್ಲರಿಗೂ ಅಲ್ಲ"**[೧೪೦] ಎಂದು ಕಕರನ ಬಾಯಿಮುಚ್ಚಿಸಿದರೂ ಕಕರ ದಡ್ಡನಲ್ಲ. ಶ್ರಮ ಪಡದೆ ಉಂಡುಉಟ್ಟು ಶ್ರಮಿಕರನ್ನು ಶೋಷಿಸುವ ಜೋಯಿಸರಂಥವರು ವ್ಯವಸ್ಥೆಯನ್ನು ಬದಲಾಗಲು ಬಿಡುವುದಿಲ್ಲ. ಕಕರ ಉಗಾದಿ ಖರ್ಚಿಗಾಗಿ ಇಪ್ಪತ್ತೈದು ರೂಪಾಯಿ ಸಾಲ ಕೇಳಿದಾಗ ಜೋಯಿಸ ತೇಲಿಸಿದಂತೆ ಮಾತನಾಡುತ್ತಾನೆ. **"ನೀವೂ 'ಹೂ' ಅಂದ್ರೆ ನಂಗೊಂದು ತರ ಸಮಾಧಾನ, ನೀವು ಕೊಡಿ ಬಿಡಿ ಅದು ಬ್ಯಾರೆ ಮಾತು"**[೧೪೧] ಕಕರನ ಜೀವನ

---

೧೩೯ ಅದೇ, ಪು : ೨೨೬.

೧೪೦ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೯೫.

೧೪೧ ಅದೇ, ಪುಟ : ೧೯೫.

ಪ್ರೀತಿ ಅದಮ್ಯವಾದದ್ದೇ. ಪುನಃ ಹೊಸ ಆಶಾಭಾವನೆ, ಉತ್ಸಾಹದಿಂದ ಬದುಕಿನೆಡೆಗೆ ಸಾಗುವ ಅವನ ಪರಿಯಿಂದಲೇ ಸಮಾಜದಲ್ಲಿ ಕಕರನಂಥಹವರು ಬದುಕಿರಲು ಸಾಧ್ಯವಾಗಿರುವುದು.

ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ' ಕತೆಯಲ್ಲಿ ತಿಪ್ಪವ್ವ ತನ್ನೆಲ್ಲಾ ಕಷ್ಟ ನಿಷ್ಟುರಗಳ ನಡುವೆ ಉಗಾದಿಹಬ್ಬ ಮಾಡಲು ಸಿದ್ಧಳಾಗುತ್ತಾಳೆ. ಹುಲಿಗೆಪ್ಪನಿಂದ ಸಾಲಪಡೆದು ಶಂಭುವಿನೊಂದಿಗೆ ಸಂತಿಗೆ ಹೊರಟಿದ್ದು ಜೀವನ ಪ್ರೀತಿಯಿಂದಲೇ.

ರಾಮಣ್ಣನವರ ಕಕರನಿಗೆ ಬರಗಾಲದ ಜೊತೆಗೆ ಹೆಂಡತಿ ಮಕ್ಕಳ ಹೊಟ್ಟೆ ತುಂಬಿಸುವುದು ದಿನದ ಪಡಿಪಾಟಲಾಗಿರುತ್ತದೆ. ಸಾಲದಕ್ಕೆ ಉಗಾದಿಹಬ್ಬ, ದಾರಿತಪ್ಪಿದ ಬಸುರಿ ಮಗಳು, ಕಾಯಿಲೆಯಿಂದ ನರಳುವ ಹೆಂಡತಿ, ಬಡಕಲು ಪುಡಿಹೈಕಳು, ಸಾಲಕ್ಕಾಗಿ ಅಲೆದಾಟ ಅವನ ಬದುಕೇ ಹೋರಾಟವಾಗಿದ್ದರೂ ನಿರಾಶನಾದವನಲ್ಲ.

ತಿಪ್ಪವ್ವನಿಗೆ ದುಶ್ಚಟಗಳಿಂದ ಇರುವ ಆಸ್ತಿ ಕರಗಿಸಿ ಕಾಯಿಲೆಯಿಂದ ಸತ್ತಗಂಡ, ಚಿಕ್ಕಮಕ್ಕಳು, ಘಟವಾಣಿ ಅತ್ತೆ, ಬದುಕುವ ದಾರಿ ಮಂಜಾಗಿದ್ದರೂ ಕಕರನಂತೆ ತಾಳ್ಮೆ ಕಳೆದುಕೊಳ್ಳಲಿಲ್ಲ. ಅತ್ತೆಯ ಅಧೀನ ಅಂಕೆಯಲ್ಲಿದ್ದರೂ, ಅತ್ತೆಯ ಬೈಗುಳ ಹೀಯಾಳಿಕೆಗೆ ಬರವಿರಲಿಲ್ಲ. ಆದರೂ ಕಕರನಂತೆ ತಿಪ್ಪವ್ವ ಗುಣ ನಡತೆಯಲ್ಲಿ ಯಾರೂ ಬೆರಳು ತೋರುವಂತಿರಲಿಲ್ಲ.

ಕಕರ ಹಬ್ಬದ ಸಾಲಕ್ಕಾಗಿ ಅಲೆಯುತ್ತಿದ್ದಾಗಲೇ ಮಗಳ ಹೆರಿಗೆಯ ಖರ್ಚಿಗೆ ಪರದಾಟ, ಸಾಯಲು ಹೊರಟ ಮಗಳು, ಅನ್ನಕ್ಕಾಗಿ ನಾಚಿಕೆಬಿಟ್ಟು ಮದುವೆ ಮನೆ ಬಳಿ ನೆರೆದ ಹೊಲಗೇರಿ ಮಕ್ಕಳು, ಸ್ವಾರ್ಥವನ್ನೇ ಮೈಗೂಡಿಸಿಕೊಂಡ ಮೇಲ್ವರ್ಗ, ಅಂಗಡಿಯವನ ಹೀಯಾಳಿಕೆ ಎಲ್ಲವನ್ನೂ ಜೀವವುಳಿಸುವ ಸಲುವಾಗಿ ಮರೆತಾಗ ಕಕರನಿಗೆ ಸಾವು ಬಂದೆರಗುತ್ತದೆ.

ಕುಂ.ವೀರಭದ್ರಪ್ಪ ಅವರ ಕತೆಯ ರತ್ನ, ಶಂಭು ಸಾಮಾಜಿಕವಾಗಿ ಮೇಲ್ವರ್ಗ ಸೇರಿದವರಾದರೂ ಬಡತನ ಹಾಸುಹೊಕ್ಕಾಗಿರುತ್ತದೆ. ಹಸಿವು ಮತ್ತು ಬಡತನ ತಳವರ್ಗಕ್ಕೆ ಸೀಮಿತವಲ್ಲವೆಂದು ಕುಂವೀ ಕತೆ ಮನಗಾಣಿಸುತ್ತದೆ. ತಳವರ್ಗದ ಕಕರನ ಪರದಾಟ ಒಂದು ರೀತಿಯಾದರೆ, ಸಾಮಾಜಿಕವಾಗಿ ಮೇಲಿರುವ ತಿಪ್ಪವ್ವಳ ಪೇಚಾಟ ಹೇಳುವಂತಿಲ್ಲ, ಅನುಭವಿಸುವಂತಿಲ್ಲ, ಎನಿಸುವಂತಿದೆ. ಇದರ ನಡುವೆ ಎರಡೂ ಸಂಸಾರದಲ್ಲಿ ಹಬ್ಬದ

ಹೋಳಿಗೆಗಾಗಿ ಆಸೆಪಡುವ ಜಾತಿ, ವರ್ಗ ಮೀರಿದ ಮಕ್ಕಳು ಯಾರ ಗಣನೆಗೂ ಬರುವುದೇ ಇಲ್ಲ.

ರಾಮಣ್ಣನವರ 'ದೇವರಸ' ಉಗಾದಿ ದಿನ ಚೌಕಕ್ಕಾಗಿ ಆಸೆಪಟ್ಟು, ಊಟಕ್ಕಾಗಿ ಮೇಲ್ವರ್ಗದ ಮದುವೆಮನೆ ಬಳಿ ತನ್ನ ಓರೆಗೆಯವರೊಂದಿಗೆ ಕಾಯುತ್ತಾನೆ. ಕುಂ.ವೀರಭದ್ರಪ್ಪ ಅವರ ಕತೆಯ ಶಂಭು, ಮತ್ತು ರತ್ನ ಹಬ್ಬದ ದಿನ ಹಸಿದು, ಉಟಕ್ಕಾಗಿ ಕಾತರಿಸಿದರೆ ಸ್ವಾಮಿ ಶಂಕಯ್ಯನಿಗೆ ತಿಪ್ಪವ್ವ ಭಯ ಭಕ್ತಿಯಿಂದ ಉಣಬಡಿಸುತ್ತಾಳೆ. ಹೋಳಿಗೆ ತಯಾರಿ ಆರಂಭವಾದಾಗಲೇ ರತ್ನ ಮತ್ತು ಶಂಭುವಿಗೆ ಟೆನ್ಷನ್ ಹುಟ್ಟಿಕೊಳ್ಳುತ್ತದೆ. ಹೋಳಿಗೆಯ ಬಹುಪಾಲು ತಿಂದುಮುಗಿಸಿದ ಶಂಕ್ರಯ್ಯನನ್ನು ಕಂಡಾಗ, ಆ ದುಗುಡ, ಟೆನ್ಷನ್ ರತ್ನಳ ಕಣ್ಣಲ್ಲಿ ನೀರಾಗಿ ಹರಿಯುತ್ತದೆ.

ಮುದುಕಿ ಸಣ್ಣ ಮಾಡಲು **"ಏಯ್ ಶಂಭೂ, ರತ್ನ, ಬರ್ರೋ, ಅಡ್ಡಬೀಳಿ"**[೧೪೨] ಎಂದಾಗ ಮಕ್ಕಳೂ ಹಿಂದೆ ಸರಿಯುತ್ತಾರೆ. ಶಂಕ್ರಯ್ಯ ಬಾಗಿಲಿಗೆ ತಲೆ ಬಡಿಸಿಕೊಂಡಾಗ ಮಕ್ಕಳಸಿಟ್ಟು ಸಮಾಧಾನಕ್ಕೆ ಬರುತ್ತದೆ.

ಉಗಾದಿ ದಿನ ಕಕರ ಜೋಯಿಸನ ಹೆಂಡತಿ ಬದುಕಿಸಲು ಹೋಗಿ ಪ್ರಾಣಕಳೆದುಕೊಂಡಾಗ ಸಂಸಾರ ಬೀದಿಪಾಲಾಗುತ್ತದೆ. ದೇವರಸ ಬಾವಿಯ ಬಳಿ ಓಡಿ **"ಅಪ್ಪೋ! ಮ್ಯಾಕೆ ಅತ್ತಿ ಬಾಪ್ಪೋ!"**[೧೪೩] ಮುಗ್ಧ ಹುಡುಗನ ಕಾಳಜಿ, ಅಂತಕರಣ ಮಾತು, ಎದೆ ಹಿಂಡಿದರೆ, ಕುಂವೀ ಅವರ ರತ್ನ ಮಾರನೇ ದಿನ ಉಗಾದಿ ಹಬ್ಬದ ಆಟದಲ್ಲಿ ಶಂಭುವಿಗೆ ಓಡಾಡಿಸಿಕೊಂಡು ಬಡಿಯುತ್ತಾಳೆ. ಶಂಭು, ರತ್ನ ತಮ್ಮ ನೆಲೆಯಲ್ಲಿ ಪರಂಪರೆಯ ಕಟ್ಟುಪಾಡುಗಳಿಗೆ ಪ್ರತಿರೋಧ ವ್ಯಕ್ತಪಡಿಸಿದರೆ ದೇವರಸ ಮುಗ್ಧ ನಡವಳಿಕೆಯಿಂದ ಕಾಡುತ್ತಾನೆ. ಉಗಾದಿ ಹಬ್ಬ ತಳವರ್ಗದ ಕಕರನ ಬದುಕಿನ ಹಿನ್ನೆಲೆಯಲ್ಲಿ, ಮುಗ್ಧ ಮಕ್ಕಳ ಹಸಿವಿನ ಹಿನ್ನೆಲೆಯಲ್ಲಿ ಜೀವನದ ನಿಜ–ನೋವು–ಬಡತನ ತಾಳುವಿಕೆಯಲ್ಲಿ ಹಲವಾರು ಪ್ರಶ್ನೆಗಳನ್ನು ಎತ್ತುತ್ತದೆ.

ರಾಮಣ್ಣ ಅವರ 'ಕ್ಷಯ', 'ಆಳುಮಗ', 'ಜಾಡಮಾಲಿ' ಕತೆಗಳು ಬಡತನವಿದ್ದರೂ ಮಾಡುವ ಕೆಲಸದಲ್ಲಿ ನಿಷ್ಠೆಯನ್ನೂ, ಪ್ರಾಮಾಣಿಕತೆಯನ್ನು ಅಳವಡಿಸಿಕೊಂಡ ವ್ಯಕ್ತಿತ್ವದ ಚಿತ್ರಣ

---

೧೪೨ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು: ೨೨೫.
೧೪೩ ಕಣಜ, ಲೋಹಿಯಾ ಪ್ರಕಾಶನ. ೨೦೧೧, ಪು: ೨೦೩.

ನೀಡುತ್ತವೆ. 'ಕ್ಷಯ' ಕತೆಯ ವಾಚ್‌ಮನ್ ದೇವೇಗೌಡನಿಗೆ ಬಡತನವಿದ್ದರೂ ತನ್ನ ಕೆಲಸದಲ್ಲಿ ಪ್ರಾಮಾಣಿಕತೆ, ಪ್ರೀತಿಯಿದ್ದು ತನ್ನ ಕಾಯುವ ಕೆಲಸದ ಬಗ್ಗೆ ಅಪಾರ ಹೆಮ್ಮೆಯಿತ್ತು. ಡ್ಯಾಮನ್ನು ಕಟ್ಟುವ ಕಾಯದಲ್ಲಿ ಕಾಯುವ ದೇವೇಗೌಡ ಓಡೆಯುವ ಹುನ್ನಾರದ ಜಯರಾಮ ಬದುಕಿನ ಎರಡು ಭಿನ್ನ ಮುಖಗಳ ಅನಾವರಣವಾಗಿದ್ದು ಒಳಿತು ಮತ್ತು ಕೆಡುಕಿನ ಸಂಕೇತವೆನಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಕಪ್ಪು ನೆಲದಲ್ಲೊಂದು ಕೆಂಪುಕಥೆ' ಯ ಪರುತ ಕುಲಕರ್ಣಿಯ ಮಾತನ್ನು ನಂಬಿ ಉಲ್ಲಾಸಭರಿತನಾಗಿದ್ದ. **"ಏನ್ಲೇ..... ಪರುತ, ನಾಳೆ ಇಪ್ಪತ್ತು ಕೊಡು, ಸರಕಾರದೋರು ನಿಂಗೆ ಎಲ್ಡೆಕೆರೆ ಹೊಲಕೊಡೋ ಹಂಗ ಮಾಡೀನಿ..... ನಾಳೆ ನೀನು ಇಪ್ಪತ್ತು ಕೊಟ್ರೆ ಮುಂದಿನ್ವಾರನೆ ಪಟ್ಟ ಬರತೈತಿ..."**[೧೪೪] ಅಂದಿದ್ದ.

ಕುಲಕರ್ಣಿಯ ಮಾತನ್ನು ಕೇಳಿ ಪದೇ ಪದೇ ಅವನನ್ನು ಭೇಟಿಯಾದಾಗ ಕುಲಕರ್ಣಿ ಉಡಾಫೆ ಮಾತು, ಅವನ ಇಬ್ಬಂದಿತನ, ಸ್ವಾರ್ಥ, ವ್ಯವಸ್ಥೆಯೊಂದಿಗೆ ಅಪ್ರಾಮಾಣಿಕ ಹೊಂದಾಣಿಕೆಯಿಂದ ಪರುತನ ಅನ್ನಕ್ಕೂ ಸಂಚಕಾರ ಬಂದಿತು. ವಿದ್ಯಾವಂತನಾದ ಕುಲಕರ್ಣಿ ಮುಗ್ಧಪರುತನನ್ನು ವಂಚಿಸುತ್ತಾನೆ. ರಾಮಣ್ಣ ಅವರ ದೇವೇಗೌಡ ತನ್ನ ಜೀವವನ್ನೇ ಪಣಕ್ಕಿಟ್ಟು ತನ್ನ ಕಾವಲಿನ ಕೆಲಸವನ್ನು ಮಾಡಿದರೂ ಅಂತಿಮವಾಗಿ ಕಳ್ಳತನದ ಆರೋಪ ಹೊರಬೇಕಾಗುತ್ತದೆ. ಕೆಳದರ್ಜೆಯ ನೌಕರನಿಗೆ ಇರುವ ಪ್ರಾಮಾಣಿಕತೆ ಮೇಲ್ದರ್ಜೆಯ ಕುಲಕರ್ಣಿಗಿಲ್ಲದಿರುವುದು ನೈತಿಕತೆ ಕುಸಿತವೆನ್ನಬಹುದು. ಗೌಡ, ಕುಲಕರ್ಣಿ, ಸೆಟ್ಟಿ ಮೂವರ ಅವಕಾಶವಾದ ಮತ್ತು ಸ್ವಾರ್ಥಕ್ಕೆ ಪರುತ ಬಲಿಯಾಗುತ್ತಾನೆ.

ರಾಮಣ್ಣ ಅವರ 'ಕ್ಷಯ' ಕತೆಯ ದೇವೇಗೌಡ ತನ್ನ ಜೊತೆಯ ಕಾವಲಿನ ಜಯರಾಮನಿಗೆ,

"ಲೇ ಜಯರಾಮ ಬಾರ್ಲ ನಿಂತ್ಕೋ – ಇವಯ್ಯ ಅದೆಂಗೆ ಎಂದೂ ಇಲ್ಲದೆ ಇವತ್ತು ರಾತ್ರಿ ಸರೋತ್ತೆಲಿ ಸಾಮಾನು ಸಾಗುಸಾನು ನೋಡುದ. ಸರ್ಕಾರಿ ಸ್ವತ್ತು ಇವರಪ್ಪಂದಲ್ಲ"[೧೪೫] ಎಂದು ಪ್ರತಿರೋಧಿಸಿದಾಗ ಕಾಣದ ಕೈಗಳು ಹಿಗ್ಗಾ ಮುಗ್ಗ ಥಳಿಸಿದವು. ಬಡವನಾದರೂ ಪ್ರಾಮಾಣಿಕವಾಗಿ ತನ್ನ ಕೆಲಸ ನಿರ್ವಹಿಸಿದ ದೇವೇಗೌಡ ವ್ಯವಸ್ಥೆಗೆ ಬಲಿಪಶುವಾದ. ಪ್ರಾಮಾಣಿಕತೆ ಎಲ್ಲಾ ಹಂತದಲ್ಲೂ ದೇವೇಗೌಡನ ವಿಚಾರದಲ್ಲಿ ಸೋತುಸುಣ್ಣವಾಗುತ್ತದೆ.

---

೧೪೪ ಕುಂ ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಪು: ೧೦೨.
೧೪೫ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೩೯೫.

ರಾಮಣ್ಣ ಅವರ 'ದೇವೇಗೌಡ' ಮತ್ತು ಕುಂ.ವೀರಭದ್ರಪ್ಪ ಅವರ 'ಪರುತನ' ಆರ್ತನಾದ ದಮನಶಕ್ತಿಗಳಿಗೆ ಕೇಳುವುದೇ ಇಲ್ಲ. ಪ್ರಾಮಾಣಿಕರಿಗೆ ಆದ ಅನ್ಯಾಯ ಅರಗಿಸಿಕೊಳ್ಳಲಾಗದ ವಿಚಾರವೇ ಆಗಿದೆ.

ರಾಮಣ್ಣ ಅವರ 'ಅಳುಮಗ' ಕತೆಯಲ್ಲಿ ಬಡತನ, ಕೀಳುಜಾತಿಯ ಹಿನ್ನೆಲೆಯುಳ್ಳ ಕರಿಬೋರ ನಿಷ್ಠೆ, ಪ್ರಾಮಾಣಿಕತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರೂ ದಿನನೂಕಲು ಹೆಣಗಬೇಕಾಯಿತು. ಪ್ರಾಮಾಣಿಕವಾಗಿ ಹೊಟ್ಟೆತುಂಬಿಸಿಕೊಳ್ಳುವುದು ದುಸ್ತರವೆನಿಸಿದಾಗ ಊರನ್ನೇ ಬಿಟ್ಟನು. ಬಡತನವಿದ್ದರೂ ಸ್ವಾಭಿಮಾನಿಯಾಗಿ, ಯಾರಿಗೂ ಹೊರೆಯಾಗದೆ ಬದುಕಿ ಕೆಳವರ್ಗದ ಬದುಕಿನ ನೋಟವನ್ನು ಉನ್ನತಿಗೇರಿಸಿದ.

ಕುಂ.ವೀರಭದ್ರಪ್ಪ ಅವರ 'ಕುರ್ಮಾವತಾರ' ಕತೆಯ ರಾಯರು ಗಾಂಧಿತತ್ತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಸರಳ ವ್ಯಕ್ತಿ. ಎಲ್ಲರಿಂದ ಆದರ್ಶ ವ್ಯಕ್ತಿ ಎನಿಸಿಕೊಂಡಿದ್ದರೂ ಹೆಂಡತಿ ಮತ್ತು ಮಗನಿಗೆ ಅಷ್ಟಕಷ್ಟೆ, ಕೌಟುಂಬಿಕವಾಗಿ ವಿಫಲವಾದರೂ ಸಾಮಾಜಿಕವಾಗಿ ಆದರ್ಶವೆನಿಸಿದರೂ ಸ್ವಹಿತಾಸಕ್ತಿ ಅವರಲ್ಲಿ ಹೆಚ್ಚಾಗಿತ್ತೆನ್ನಬಹುದು.

ರಾಮಣ್ಣ ಅವರ 'ಜಾಡಮಾಲಿ' ಕತೆಯ ಕುಂಟರಾಮ ದೊಡ್ಡಾಸ್ಪತ್ರೆಯಲ್ಲಿ ಮೂವತ್ತು ವರ್ಷ ಜಾಡಮಾಲಿಯಾಗಿ ನಿಷ್ಠೆಯಿಂದ ದುಡಿದವನು. ಬೇರೆಯವರ ಕೊಳಕನ್ನು ತೊಳೆದು ನಿವೃತ್ತನಾದವನು. ಅದೇ ಆಸ್ಪತ್ರೆಯಲ್ಲಿ ನಿರ್ಲಕ್ಷಿತನಾಗಿ, ಅಸಹಾಯಕನಾಗಿ ಮನುಷ್ಯ ಜನ್ಮದ ಬಗ್ಗೆ ಬೇಸರಗೊಂಡವನು. ದೇಹದಂಡಿಸಿ ದುಡಿಯುವ ಮಂದಿ ಅಸ್ಪೃಶ್ಯತೆ, ಬಡತನ, ಅವಮಾನಗಳ ಹಿಡಿತದಲ್ಲೇ ಬದುಕು ಸಾಗಿಸುತ್ತಿರುತ್ತಾರೆ. ಆದರೂ ಸಮಾಜ ಅವರನ್ನು ಮಾನವೀಯವಾಗಿ ನಡೆಸಿಕೊಳ್ಳುತ್ತಿಲ್ಲ. 'ಕುಂಟರಾಮ'ನ ವ್ಯಕ್ತಿತ್ವ ಕಾಡದಿದ್ದರೂ ಪ್ರಾಮಾಣಿಕವಾಗಿ ದುಡಿದ ಸ್ಥಳದಲ್ಲೇ ಅಲಕ್ಷಿತನಾದದ್ದು ಮನಸ್ಸನ್ನು ಕಹಿಯಾಗಿಸುತ್ತದೆ. ಸಾಮಾಜಿಕ ಅಸಮಾನತೆ ದೂರವಾದಾಗ ಮಾತ್ರ ತಳವರ್ಗದವರ ಬದುಕು ಸಹನೀಯವಾಗಬಲ್ಲದು.

ಕುಂ.ವೀರಭದ್ರಪ್ಪ ಅವರ 'ರಾಯ'ರನ್ನು ಸಮಾಜದಲ್ಲಿ ಎಲ್ಲರೂ ಅವರ ತತ್ತ್ವಗಳಿಂದ ಗೌರವಿಸುತ್ತಿದ್ದರು. ಆದರೆ ಅಷ್ಟೆ ನಿಷ್ಠೆಯಿಂದ ದುಡಿದ ರಾಮಣ್ಣನವರ ಬಡ 'ಕುಂಟರಾಮ' ಎಲ್ಲೆಡೆ ನಿರ್ಲಕ್ಷ್ಯಕ್ಕೆ ಒಳಗಾಗುವುದು ಕಹಿವಾಸ್ತವವಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಅಧೀನ ಸಂಸ್ಕೃತಿಯ ಅಸಹಾಯಕತೆ, ಪ್ರತಿರೋಧ, ಪಲಾಯನಗಳನ್ನು ಪಾತ್ರಗಳಲ್ಲಿ ಕಾಣಬಹುದು. ಬಹುತೇಕ ಕತೆಗಳ ಒಳದನಿ ಬಂಡಾಯದ ಆಶಯವೇ ಆಗಿದೆ.

ಭಾರತದಲ್ಲಿ ಬಡವರ್ಗದವರ ಹಸಿವಿನ ಕಾರಣಗಳನ್ನು ಗುರುತಿಸುವ ಹಂತದಲ್ಲಿ ವಾಸ್ತವದ ಶೋಧನೆ ಆಗದಿರುವುದು, ಹಂಚಿಕೆಯಲ್ಲಿ ಅಸಮತೆ, ದುಡಿದ ಜನರಿಗೆ ಸಿಗಬೇಕಾದ ಪಾಲುಸಿಗದಿರುವುದು ಸಂಘರ್ಷಕ್ಕೆ ಕಾರಣವಾಗಿದೆ. ದುಡಿಯುವವರಾದ ಇವರು ದುಡಿಯದವರ ಹಸಿವನ್ನು ನೀಗಿದರೂ ತಮ್ಮ ಹಸಿವನ್ನು ನೀಗಿಸಿಕೊಳ್ಳಲಾಗದೆ ಹತಾಶಸ್ಥಿತಿಗೆ ತಳ್ಳಲ್ಪಡುತ್ತಿದ್ದಾರೆ.

ರೈತರು ಕಾಯಕಜೀವಿಗಳಾಗಿದ್ದರೂ ಅವರ ಬದುಕು ಹಸಿರು ಹಸಿರಾಗಿಲ್ಲ. ಸ್ವಾತಂತ್ರ್ಯ ಬಂದ ನಂತರ ರೈತರ ಸಂಕಷ್ಟದ ಬೇರು ಬಿಳಲು ಬೇರೆಯಾಗಿದ್ದು ಅಣೆಕಟ್ಟು ಕಟ್ಟಿ "ನಾವು ಬೆಳೆದಿದ್ದೇನು ಬರಿ ಹಸಿವೆ?" ಎನ್ನವಂತಾಗಿದ್ದು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ರೈತರನ್ನು "ತ್ರಿಕರಣಪೂರ್ವಕ"ವಾಗಿ **ಹಿಂಡಿಹಿಪ್ಪೆ ಮಾಡುತ್ತಿರುವುದು ಸುಳ್ಳಲ್ಲ. ಇಂದು ಒಂದೆರಡು ಲಕ್ಷಗಳಿಗೆ ರೈತ ಆತ್ಮಹತ್ಯೆ ಮಾಡಿಕೊಂಡರೆ ೨೦-೩೦ ಕೋಟಿ ಸಾಲ ಉಳಿಸಿಕೊಂಡ ಉದ್ಯಮಿಗಳು ತಲೆಯೆತ್ತಿತಿರುಗುತ್ತಿದ್ದಾರೆಂದರೆ? ನಮ್ಮ ದೇಶದ ಆರ್ಥಿಕ ನೀತಿಯ ಬೀಜವೂ ಸರಿಯಿಲ್ಲ. ಅದರಿಂದ ಬೆಳೆಯೂ ಸರಿಯಿಲ್ಲ**[೧೪೬] ಎಂದು ಪೂರ್ಣಿಮ ಅವರು ಆರ್ಥಿಕ ಅಸಮಾನತೆ ಕುರಿತು ವಿಶ್ಲೇಷಿಸಿರುವುದು ಸಮಂಜಸವಾಗಿದೆ.

ಕಷ್ಟಪಟ್ಟು ದುಡಿದು, ಇನ್ನೊಬ್ಬರ ಹೊಟ್ಟೆ ತುಂಬಿಸುವ ವ್ಯಕ್ತಿಯು ಸಾಲ ಮತ್ತು ಹಸಿವಿನಿಂದ ಬಳಲುವ ದೃಶ್ಯ ಬೇರೆಲ್ಲಾದರೂ ಕಾಣಸಿಗುವುದು ದುರ್ಲಭ. ಶ್ರಮವನ್ನು ಸಮಾಜ ಗುರುತಿಸುತ್ತಿಲ್ಲ. ಅತ್ತ ರೈತನ ಬದುಕನ್ನು ಹಸನಾಗಿಸುವ ಯೋಜನೆಗಳಿಲ್ಲದೆ ಕಿಲುಬುಕಾಸು ಬೆಲೆಯಿಲ್ಲದೆ 'ಅನ್ನದಾತ' ಎಂಬ ಬಿರುದನ್ನು ಕೊಟ್ಟು ಕೂರಿಸಿದ್ದಾರೆ. 'ಸುಸ್ಥಿರ ಕೃಷಿ' ಇಂದು ರೈತನ ಅಗತ್ಯವೆನಿಸುತ್ತಿದೆ.

"ಸ್ವಾತಂತ್ರ್ಯೋತ್ತರದ ಬಹುಪಾಲು ಬೃಹತ್ ಯೋಜನೆಗಳು ಸಮುದಾಯದ ಹಸಿವೆಯಂಥ ಮೂಲ ಅಗತ್ಯಗಳನ್ನು ಪೂರೈಸಬಲ್ಲ ಸರಳ ಜೀವನಕ್ಕೆ ಒಂದು ಮಾದರಿಯನ್ನು ಹಾಕಿಕೊಡಲೇ ಇಲ್ಲ"[೧೪೭] 'ಹಿಂದ್‌ಸ್ವರಾಜ್' ನಲ್ಲಿ ಕಲ್ಪಿತ ಗ್ರಾಮಭಾರತದಲ್ಲಿ ಸರಳತನವೇ ಅಹಿಂಸೆಯೇ ಪ್ರಾಥಮಿಕ ಷರತ್ತಾಗಿತ್ತೆಂಬ ಸತ್ಯವನ್ನು ಮರೆಯಬಾರದೆನ್ನುತ್ತಾರೆ. ಸ್ವಾತಂತ್ರ್ಯ ಮನುಷ್ಯನ ದುಡಿಮೆಯನ್ನು ಬೇಡುತ್ತದೆ. ದುಡಿಯದ ಮನುಷ್ಯನಿಗೆ ಸ್ವತಂತ್ರ್ಯವಿರುವುದಿಲ್ಲ. **"ಬಡತನದ ಪ್ರಮಾಣ ಇಳಿಕೆಯಲ್ಲಿ ಕೃಷಿಯ ಕೊಡುಗೆ ನಗರೀಕರಣಕ್ಕಿಂತ ಐದು ಪಟ್ಟು ಹೆಚ್ಚು.** ನೀತಿನಿರೂಪಕರು

---

೧೪೬ ಆರ್. ಪೂರ್ಣಿಮ, ಪ್ರಜಾವಾಣಿ, ೧೩.೯.೨೦೧೩, ಪು: ೬.
೧೪೭ ಶ್ರೀಧರಬಳಿಗಾರ, ಪ್ರಜಾವಾಣಿ, ೧೩.೦೮.೨೦೧೩, ಪು: ೬.

ಇದನ್ನು ಗಂಭೀರವಾಗಿ ಪರಿಗಣಿಸಬೇಕು"[೧೪೮] ಎಂಬ ವಿದ್ವಾಂಸರ ಮಾತುಗಳಿವೆ ಈ ಇಬ್ಬರ ಕಥೆಗಳು ಪೂರಕವಾಗಿ ನಿಲ್ಲುತ್ತವೆ.

"ಹಳ್ಳಿಗಳನ್ನು ಗುಳೆ ಎಬ್ಬಿಸಿ ಪಟ್ಟಣಗಳನ್ನು ನಿರ್ಮಿಸುವುದು ಅಭಿವೃದ್ಧಿ ಅಲ್ಲ. ಹಳೆಯದನ್ನು ಬೋಳಿಸಿ ಹೊಸದನ್ನು ಕಟ್ಟುವ ಅಭಿವೃದ್ಧಿ ಜೀವವಿರೋಧಿ ಆದರೆ ಪ್ರಕೃತಿಯದ್ದು ಪರಸ್ಪರ ಅವಲಂಬನೆಯ ತತ್ವ, ಅದು ವಿಕಾಸ ಅಭಿವೃದ್ಧಿ"[೧೪೯] ಇದು ಮನುಷ್ಯ ಮತ್ತು ಪ್ರಕೃತಿ ಬೇರೆಯಲ್ಲ ಎಂಬುದನ್ನು ಮನಗಾಣಿಸುತ್ತದೆ. ಅಭಿವೃದ್ಧಿಯ ತತ್ತ್ವವನ್ನು ನಾವಿಂದು ಅರ್ಥೈಸಿಕೊಂಡು ಮುನ್ನಡೆಯಬೇಕಾಗಿದೆ. ಸುಸ್ಥಿರಕೃಷಿಯ ಸ್ಮಾರ್ಟ್ ವಿಲೇಜ್ ಇಂದು ಅವಶ್ಯಕವಾಗಿದ್ದು ಆಹಾರದ ಲಭ್ಯತೆ ಎಲ್ಲರಿಗೂ ದೊರೆತಾಗ ಹಸಿವನ್ನು ನೀಗಬಹುದು.

ಗಾಂಧೀಜಿಯವರ ತತ್ತ್ವದಂತೆ ಶ್ರಮಸಹಿತ ಸರಳ ಬದುಕು, ಸಮಾನತೆಯಿಂದ ಕೂಡಿದ ಸಭ್ಯಬದುಕು ಎಂಬ ಚಿಂತನೆ ಇಂದಿನ ಅಗತ್ಯವಾಗಿದೆ. ಗ್ರಾಮೀಣ ಆರ್ಥಿಕತೆ, ಕೃಷಿಗೆ ಪೂರಕವಾದ ಕೈಗಾರಿಕೆಗಳು ಇಂದು ಬೇಕಾಗಿದ್ದು, ಅವುಗಳ ಮೂಲಕ ಬಡವರ ಮತ್ತು ತಳವರ್ಗದವರಿಗೆ ವೇತನ ಸಹಿತ ಕೆಲಸ ನಿರ್ವಹಿಸುವಂತೆ ಮಾಡಿ, ಅವರ ಬದುಕನ್ನು ಹಸನುಗೊಳಿಸಿದಾಗ ಮಾತ್ರ ಸುಸ್ಥಿರಭಾರತವನ್ನು ಕಾಣಬಹುದು.

"ಜಗತ್ತನ್ನು ಹಸಿವು ಮತ್ತು ಬಡತನದ ಹಿನ್ನೆಲೆಯಲ್ಲಿ ನೋಡಿದಾಗ ಆರ್ಥಿಕ ಅಸಮಾನತೆಯನ್ನು ಪಶ್ಚಿಮ ದೇಶಗಳ ಸಮೃದ್ಧಿ ತತ್ತ್ವದ ಹಿನ್ನೆಲೆಯಲ್ಲಿ ವಿಜ್ಞಾನ ಅವಿಷ್ಕಾರಗಳಿಂದ ಸಮಾನತೆ ಸಾಧ್ಯ ಎನ್ನುವುದು ಲೋಹಿಯಾ ಮತ್ತು ಗಾಂಧಿ ಅವರು ಒಪ್ಪುವುದಿಲ್ಲ."[೧೫೦] ಒಂದು ಪ್ರಜ್ಞಾ ಪೂರ್ವಕ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಿಂದ ರೂಪಿಸಿರುವುದರಿಂದ ಆರ್ಥಿಕ ಸಮಾನತೆ ಸಾಧಿಸುವುದರಿಂದ ಹಸಿವು ಮತ್ತು ಬಡತನವನ್ನು ದೂರಮಾಡಬಹುದೆಂದು ಅಭಿಪ್ರಾಯ ಪಡುತ್ತಾರೆ. ವಿಜ್ಞಾನ ಅವಿಷ್ಕಾರದಿಂದ ಸಮೃದ್ಧಿ ಜನರ ವಿವೇಕವನ್ನು ಕಳೆದುಬಿಡುತ್ತದೆ ಎಂಬ ಮಾತು ಅಂದು ಮತ್ತು ಇಂದು ಸಾಬೀತಾಗಿದೆ. ಸಮೃದ್ಧಿಯಿಂದ ಬರುವ ಗೌರವ ಮತ್ತು ವ್ಯಕ್ತಿಯ ಉನ್ನತ ಜೀವನ ಮಟ್ಟದಿಂದ ಬಹುತೇಕ ಸರಿತಪ್ಪು ಎಂದು

---

೧೪೮ ದೇವೇಂದರ್ ಶರ್ಮಾ, ಪ್ರಜಾವಾಣಿ, ೨.೧೧.೨೦೧೬, ಪು: ೬.

೧೪೯ ಪ್ರಸನ್ನ, ಜನಪದ, ಅಕ್ಟೋಬರ್ ೨೦೧೫, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪು:೧೦.

೧೫೦ ಪ್ರಭಾಕರ ಎ.ಎಸ್, ಶ್ರೀ ಪಾದಶೆಟ್ಟಿ, ಲೋಹಿಯಾ : ವರ್ತಮಾನಮುಖಾಮುಖಿ, ಸಂ. : ಪ್ರಸಾರಾಂಗ, ಹಂಪಿ, ಪು: ೫೬.

ನಿರ್ಧರಿಸುವ ಬುದ್ಧಿಯನ್ನೇ ಜನರು ಕಳೆದುಕೊಂಡು ಬಿಡುತ್ತಾರೆ ಎಂಬ ಲೋಹಿಯಾ ಅವರ ಚಿಂತನೆ ಪ್ರಸ್ತುತದಲ್ಲಿ ವಿಚಾರ ಮಾಡಬೇಕಾಗಿದೆ. **"ಇಂದಿನ ಜಾಗತೀಕರಣದ ನಂತರ ಮೂರನೇ ಜಗತ್ತಿನಲ್ಲಿ ಹಿಂಸೆ, ಬಡತನ ಮತ್ತು ಸಾಮಾಜಿಕಾರ್ಥಿಕ ಅಸಮಾನತೆಗಳು ಹೊಸರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಜಾತಿ ಮತ್ತು ವರ್ಗಗಳಿಗೆ ಅಂತರ್ಗತ ಸಂಬಂಧವಿದ್ದು, ಆರ್ಥಿಕ ಸಮಾನತೆ ಹೋದರೆ ಸಾಕು, ಜಾತಿ ಅಸಮಾನತೆ ತಂತಾನೆ ಹೋಗುತ್ತದೆ ಎಂಬುದು ತಪ್ಪು. ಅವೆರಡು ಜೋಡಿರಾಕ್ಷಸರು ಅವೆರಡನ್ನೂ ಒಟ್ಟಾಗಿಯೇ ಕೊಲ್ಲಬೇಕು ಎಂದು ಜಾತಿವರ್ಗಗಳ ನಡುವಿನ ಸಂಬಂಧವನ್ನು ಲೋಹಿಯಾ ಸ್ಪಷ್ಟವಾಗಿ ವಿವರಿಸಿರುವುದು ಇಂದಿನ ಸಾಮಾಜಿಕ ವ್ಯವಸ್ಥೆಗೆ ಬೇಕಾದ ಚಿಕಿತ್ಸೆ ಎನ್ನಬಹುದು."**[೧೫೧]

ಆರ್ಥಿಕ ಅಭಿವೃದ್ಧಿ ಮತ್ತು ಬಡತನ ನಿವಾರಣೆಯ ಜೊತೆಗೆ ಹೆಚ್ಚುತ್ತಿರುವ ಅಸಮಾನತೆ ತೊಡೆಯಲು ನಾವು ಮಾಡಬೇಕಾಗಿರುವುದು ಏನು ಎನ್ನುವುದು ನಮ್ಮನ್ನು ಕಾಡಬೇಕಿರುವ ಬಹುದೊಡ್ಡ ಪ್ರಶ್ನೆ. ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂಬ ದಾಸರ ಪದದಂತೆ ಮಾನವ ಹೊಟ್ಟೆಗಾಗಿ ಏನೆಲ್ಲಾ ಮಾಡಿದರು ಹಸಿವಿನ ಸಮಸ್ಯೆ ಜೀವಂತವಾಗಿದೆ. ಇದಕ್ಕೆ ಆರ್ಥಿಕ ಅಸಮಾನತೆಯೊಂದಿಗೆ ಹಲವಾರು ಕಾರಣಗಳು ಹೆಣೆದುಕೊಂಡಿವೆ. ಸರ್ಕಾರ ಏನೆಲ್ಲಾ ಯೋಜನೆಗಳನ್ನು ರೂಪಿಸುತ್ತಿದ್ದರೂ ಹಸಿವಿನ ಸಮಸ್ಯೆಯ ಪರಿಹಾರ ಕಷ್ಟಕರವಾಗಿಯೇ ಉಳಿದಿದೆ. ಹಸಿವು ಸಾಮಾಜಿಕ ಬದುಕಿನಲ್ಲಿ ಹಲವಾರು ಆಯಾಮಗಳನ್ನು ಹೊಂದಿದ್ದು ಸಾಮಾಜಿಕವಾದ ಜಟಿಲ ಸಮಸ್ಯೆಯಾಗಿಯೇ ಉಳಿದಿದೆ.

ಹಸಿವಿನ ಹರವಿನಲ್ಲಿ ಸಾಮಾಜಿಕ ಬದುಕೇ ಅಡಗಿದ್ದು, ಅಲ್ಲಿ ಅನುಕಂಪ, ಆರ್ಥಿಕತೆ, ರಾಜಕೀಯ, ವೃತ್ತಿ, ಅನಕ್ಷರತೆ, ಮಾನವೀಯತೆ ಮೊದಲಾದ ಹಲವು ಹತ್ತು ಅಂಶಗಳನ್ನು ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ತಮ್ಮ ಕತೆಗಳಲ್ಲಿ ಕಟ್ಟಿಕೊಡುತ್ತಾರೆ. ಹಸಿವಿನ ದನಿಯನ್ನು ಅರ್ಥಮಾಡಿಕೊಂಡ ಸಮಾಜ ಮಾನವೀಯ ನೆಲೆಯಲ್ಲಿ ನಿಲ್ಲುತ್ತದೆ ಮತ್ತು ಮುಂಚಲನೆಯನ್ನು ಕಾಣುತ್ತದೆ. ಕುಂ.ವೀರಭದ್ರಪ್ಪ ಅವರು ಹಸಿವು ಕೆಲವು ಸಮುದಾಯಗಳಿಗೆ ಬಹುತೇಕವಾಗಿ ಸೀಮಿತವಾಗಿರುವುದನ್ನು ತಮ್ಮ ಕತೆಗಳಲ್ಲಿ ಕಾಣಿಸುತ್ತಾರೆ. ರಾಮಣ್ಣ ಅವರ ಕತೆಗಳು ಬಡತನವನ್ನು ಶ್ರೀಮಂತ ಸಮುದಾಯಗಳು ಮಾನವೀಯ ನೆಲೆಯಲ್ಲಿ ನೋಡದಿರುವುದು, ನಿರಾಕರಿಸುವುದು, ಅವರನ್ನು ಅದೇ ಸ್ಥಿತಿಯಲ್ಲಿ ಇರುವಂತೆ ಮಾಡುವ ಹುನ್ನಾರವನ್ನು

೧೫೧ ಅದೇ, ಪು: ೬೯.

ಕಟ್ಟಿಕೊಡುತ್ತಾರೆ. ಶ್ರಮಿಕ ವರ್ಗದವರನ್ನೇ ಹೆಚ್ಚು ಭಾದಿಸುವ ಹಸಿವಿನ ತೀವ್ರತೆಯನ್ನು ಅದರ ನೆಲೆಯಲ್ಲೇ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳು ತಮ್ಮೊಳಗೆ ನಿರೂಪಿಸಿರುವುದು ಅವರ ಕಥೆಗಳ ಮೌಲಿಕ ಪ್ರಜ್ಞೆಯನ್ನು ಗುರುತಿಸಲು ಸಹಾಯಕವಾಗುತ್ತದೆ. ಈ ಇಬ್ಬರ ಕಥೆಗಳಲ್ಲಿನ ತೀವ್ರತರವಾದ ಬಡತನ ಮತ್ತು ಹಸಿವು ಇದೇ ದೇಶದಲ್ಲಿನ ಎಲ್ಲ ಶ್ರಮಿಕ ಮತ್ತು ತಳವರ್ಗಗಳ ಬಡತನ ಮತ್ತು ಹಸಿವಾಗಿ ನಮಗೆ ಗೋಚರಿಸುತ್ತದೆ. ಆ ಮೂಲಕ ಇಬ್ಬರೂ ಕಥೆಗಾರರು ಶ್ರೇಷ್ಠ ಕಥೆಗಾರರ ಸಾಲಿನಲ್ಲಿ ನಿಂತು ಸಮಾಜವನ್ನು ಎಚ್ಚರಿಸುವ ಕಾರ್ಯವನ್ನು ತಮ್ಮ ಬರವಣಿಗೆಗಳ ಮೂಲಕ ಮಾಡಿರುವುದು ಹೆಚ್ಚು ಮೌಲ್ಯಯುತವಾದುದಾಗಿದೆ.

೫.೪ ಧರ್ಮ ಮತ್ತು ಆಚರಣೆ

ನಮ್ಮ ಆಸಕ್ತಿ ಆಯ್ಕೆಗಳಿಲ್ಲದೆ ಧರ್ಮದ ಚೌಕಟ್ಟಿನಲ್ಲಿ ನಾವಿರುತ್ತೇವೆ. ಜಾತಿಗೆ ಅನುಸಾರವಾಗಿ ಆಚಾರ-ವಿಚಾರ, ನಂಬಿಕೆಗಳನ್ನು ಪೋಷಿಸಿಕೊಂಡು ಬರುವುದನ್ನು ಸಮಾಜದಲ್ಲಿ ಕಾಣುತ್ತೇವೆ. ಹೇಗೆನೋಡಿದರೂ ಜಗತ್ತಿನವರೆಲ್ಲರೂ ಯಾವುದೋ ಒಂದು ಧರ್ಮಕ್ಕೆ ಸೇರಿದವರಾಗಿರುತ್ತಾರೆ. ಒಬ್ಬ ನಿರ್ಧಿಷ್ಟ ವ್ಯಕ್ತಿಯಿಂದ ಹಿಂದೂಧರ್ಮ ಸ್ಥಾಪಿತವಾಗಿಲ್ಲ ಮತ್ತು ಏಕದೇವತಾರಾಧನೆಯೂ ಇಲ್ಲ. ಧರ್ಮದ ಹಿನ್ನೆಲೆಯಲ್ಲೇ ಭಾರತೀಯ ಸಂಸ್ಕೃತಿ ರೂಪುಗೊಂಡಿದ್ದು ಧರ್ಮ ವ್ಯಕ್ತಿಗೆ ಸಾಮಾಜಿಕ ಭದ್ರತೆ, ಆಧ್ಯಾತ್ಮಿಕ ಬೆಂಬಲದ ಮೂಲಕ ವ್ಯಕ್ತಿಗೆ ಆತ್ಮಬಲ ನೀಡುತ್ತದೆ.

ಯಾವುದು ಸಮಾಜಕ್ಕೆ ಒಂದು ಧಾರಣಶಕ್ತಿಯನ್ನು ತಂದುಕೊಡುತ್ತದೋ ಅದೇ ಧರ್ಮ-ಎಂಬ ಸಂಸ್ಕೃತ ಉಕ್ತಿಯಂತೆ ಧರ್ಮದ ತತ್ತ್ವ ಉದಾರವಾದದ್ದೇ ಆದರೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾಚಾರ, ಸಂಘರ್ಷ ಅಲ್ಪವೇನಲ್ಲ.

"ಧರ್ಮ ಎಂದರೆ **Man Making** ಎಂದು ಸ್ವಾಮಿವಿವೇಕಾನಂದರು ಸೂತ್ರೀಕರಿಸುತ್ತಾರೆ"[೧೫೨]

ಆದರೆ ಧರ್ಮ ಮನುಷ್ಯನನ್ನು ಶ್ರೇಣೀಕರಣದೊಳಗೆ ಅರ್ಥಹೀನಮೌಢ್ಯತೆಯೊಳಗೆ, ಇಹ-ಪರದ ತಾಕಲಾಟದಲ್ಲಿ ಸಿಲುಕಿರುವಾಗ ಮನುಷ್ಯನನ್ನು ವೈಚಾರಿಕವಾಗಿ ಬೆಳೆಸುತ್ತಾ ಸಾಮಾಜಿಕ ಏಳ್ಗೆಗಾಗಿ ಪ್ರಯತ್ನಿಸುವುದು ಧರ್ಮದ ಸಾಮಾಜಿಕ ಜವಾಬ್ದಾರಿಯಾಗಿದೆ.

---

೧೫೨ ಜಿ.ಎಸ್.ಶಿವರುದ್ರಪ್ಪ, ಸಮಗ್ರಗದ್ಯ – ೫, ೨೦೦೭, ಪು : ೯.

ಬುದ್ಧ ಹೇಳಿರುವಂತೆ 'ಜಗತ್ತಿನವರಿಗೆಲ್ಲಾ ಬೇಕಾದ ಧರ್ಮದ ಆಯ್ಕೆಯ ಸ್ವಾತಂತ್ರ್ಯ ಇರಬೇಕೇ ಹೊರತು ಬಲಾತ್ಕಾರಸಲ್ಲದು'.

ಶ್ರೀರಾಮಕೃಷ್ಣಪರಮಹಂಸರು ಸಾರಿದ ಸಂದೇಶ 'ಮತಗಳೆಲ್ಲವೂ ಪಥಗಳು' ಎಲ್ಲಾ ಪಥಗಳಿಗೂ ಸಂಸ್ಕಾರವಂತ ಮನುಜನನ್ನಾಗಿಸುವ ಹೊಣೆಗಾರಿಕೆ ಇದ್ದೇ ಇದೆ. **'ಜಗತ್ತಿಗೆಲ್ಲಾ ಒಂದೇ ಧರ್ಮ ಇರಬೇಕೆನ್ನುವುದು ಈ ಹೊತ್ತಿನ ಅಗತ್ಯವಲ್ಲ. ಬೇಕಾದದ್ದು ಧರ್ಮಗಳ ಬಗೆಗಿನ ಪರಸ್ಪರ ಗೌರವ ಮತ್ತು ಸಹನೆ'**[೧೫೩] ಎಂಬ ಗಾಂಧೀಜಿಯವರ ಮಾತಿನಂತೆ ಧರ್ಮದ ತತ್ವವನ್ನು ಅರಿಯಬೇಕಾಗಿದೆ.

ಡಾ. ರಾಧಾಕೃಷ್ಣನ್ ಅವರು ವ್ಯಾಖ್ಯಾನಿಸಿದಂತೆ ರಾಷ್ಟ್ರನೆಲೆಯಲ್ಲಿ ಭಾರತ ಯಾವ ಒಂದು ಧರ್ಮವನ್ನು ಪ್ರೋತ್ಸಾಹಿಸುವುದಿಲ್ಲ. ಆದರೆ ಎಲ್ಲಾ ಧರ್ಮವನ್ನು ಗೌರವಿಸುತ್ತದೆ. ಇಂದು ನಮಗೆ ಧಾರ್ಮಿಕ ರಾಷ್ಟ್ರೀಯತೆ ಬೇಕಾಗಿಲ್ಲ, ವೈವಿಧ್ಯತೆಯಲ್ಲಿ ಏಕತೆ ಕಾಣುವ ರಾಷ್ಟ್ರೀಯತೆ ಬೇಕಾಗಿದೆ. ಧರ್ಮ ಯಾವುದಾದರೂ ಕಾಲಕ್ಕೆ ತಕ್ಕಂತೆ ತನ್ನನ್ನು ತಾನು ಪುನರ್‌ಮೌಲ್ಯೀಕರಣ ಮಾಡಿಕೊಳ್ಳುವುದು ಅಗತ್ಯ. ಸ್ವಧರ್ಮಕುರಿತಂತೆ ಕುರುಡು ಮೋಹ ದೂರಮಾಡಿ, ಸಾಮಾಜಿಕ ಸಹಿಷ್ಣುತೆಯಿಂದ ಇತರ ಧರ್ಮಗಳನ್ನು ಗೌರವಿಸುತ್ತಾ ಬದುಕು ಸಾಗುವಂತೆ ಮಾಡುವುದು ಧರ್ಮದ ಸಾಮಾಜಿಕ ಜವಾಬ್ದಾರಿಯಾಗಿದೆ. ಯಾವುದೇ ಸಮಸ್ಯೆಗಳಿಗೆ ಧರ್ಮ ಈಗ ಉತ್ತರ ಅಲ್ಲ. ಬದಲಿಗೆ ಧರ್ಮವೇ ಸಮಸ್ಯೆಗಳ ಮೂಲವಾಗಿದೆ ಎನ್ನುತ್ತಾರೆ ರಾಮಚಂದ್ರಗುಹಾ.

“ಪ್ರಭೇದ, ವಿಭೇದಗಳ ಸಂಕಲನವಾದ ಹಿಂದೂ ಧರ್ಮ ಇಂದಿನವರೆಗೂ ಬಹುತೇಕ ಪ್ರಶ್ನಾತೀತವಾಗಿಯೇ ಇದೆಯೆನ್ನಬಹುದು. ಪಾಶ್ಚಾತ್ಯರು ಧರ್ಮಗ್ರಂಥ ಶೋಧಿಸುವಂತೆ ನಮ್ಮಲ್ಲಿ ಆಗದೇ ಇರುವುದರಿಂದ ಸಮಾಜಕ್ಕೆ ಒಳಿತಾಗುವಂತೆ ಧರ್ಮ ಪರಿಷ್ಕಾರಗೊಳ್ಳುವಲ್ಲಿ ಹಿನ್ನಡೆಯಾಗುತ್ತಿದೆ. ಪಾಶ್ಚಾತ್ಯರು ತಮ್ಮ ಧಾರ್ಮಿಕ ವಿಚಾರಗಳನ್ನು ಸುಳ್ಳೆ, ನಿಜವೇ? ಅದರಲ್ಲಿರುವ ಸೃಷ್ಟಿ ಕ್ರಮವರ್ಣನೆ ವಾಸ್ತವಿಕವೆ, ಕಾಲ್ಪನಿಕವೆ? ಈ ಪ್ರಶ್ನೆಗಳನ್ನು ಅವರು ನಿರ್ಭಯವಾಗಿ ಕೇಳಿ ಚರ್ಚಿಸುತ್ತಾರೆ”[೧೫೪] ನಮ್ಮ ಸಮಾಜದಲ್ಲಿ ಲೋಪಗಳಿದ್ದರೂ ಸರಿಪಡಿಸುವ ನಿಷ್ಪಕ್ಷಪಾತ, ನಿರ್ದಾಕ್ಷಿಣ್ಯ ಮನೋಭಾವದ ಕೊರತೆಯಿಂದ ಸಾಮಾಜಿಕ ದುಃಖ ಇದ್ದೇ ಇದೆ.

---

೧೫೩ ಅದೇ, ಪು : ೪೭.

೧೫೪ ಡಿ.ವಿ.ಜಿ. ಜೀವನಸೌಂದರ್ಯ ಮತ್ತು ಸಾಹಿತ್ಯ. ೧೯೯೭, ಪು : ೭೪.

ಭಾರತದಲ್ಲಿ ಧರ್ಮ ಅಧಿಕಾರಸೂತ್ರ ಕೈಯಲ್ಲಿಡಿದು ದಬ್ಬಾಳಿಕೆ ನಡೆಸದಿದ್ದರೂ ಧರ್ಮದ ನೆರಳಿದ್ದೇ ಇದೆ. ನಮ್ಮ ದೇಶದಲ್ಲಿರುವಷ್ಟು ಧಾರ್ಮಿಕ ಸ್ವಾತಂತ್ರ್ಯ ಬೇರೆಯಾವ ದೇಶದಲ್ಲೂ ಇಲ್ಲವೆನ್ನಬಹುದು. ಪುರಾತನವಾದದ್ದು ಪವಿತ್ರ ಮತ್ತು ಸತ್ಯ ಎಂದು ಭಾರತೀಯರು ಪ್ರತಿಪಾದಿಸುತ್ತಿದ್ದರೂ ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದವರ ಮೂಲಕ ಜಾತ್ಯತೀತತೆ ಒಂದು ಪರಂಪರೆಯಾಗಿ ಮುಂದೆ ಸಾಗಿ ಬಂದಿದೆ. ಆದಿಕವಿ ಪಂಪ ಸಹ 'ಮನುಷ್ಯಕುಲಂ ತಾನೊಂದೆ ವಲಂ' ಎಂದಿರುವುದು ಈ ಅರ್ಥದಲ್ಲಿಯೇ ಎನ್ನಬಹುದು.

ಭಾರತದ ಆತ್ಮ ಇರುವುದು ಬಹುಸಂಸ್ಕೃತಿ, ಬಹುದೈವ, ಬಹುಧರ್ಮಗಳಲ್ಲಿ ಎಂಬ ಗಾಂಧೀಜಿಯವರ ಮಾತನ್ನು ಅರಿತಾಗಲೇ ಸಹನೆಯ ಮನೋಭಾವ ಮೂಡಲು ಸಾಧ್ಯವಾಗುವುದು. ಎಲ್ಲಾ ಧರ್ಮಗಳಲ್ಲಿರುವಂತೆ ಹಿಂದೂಧರ್ಮದಲ್ಲೂ ಕೆಲವು ಮಿತಿಗಳಿರುವಂತೆ ಅಸ್ಪೃಶ್ಯತೆಯೂ ಅಂಥದೊಂದು ಮಿತಿಯಾಗಿದ್ದು ಅಸ್ಪೃಶ್ಯತೆಯಿಂದ ಸಾಮಾಜಿಕ ನೆಮ್ಮದಿಗೆ ಧಕ್ಕೆ ಬರುತ್ತಿರುವುದನ್ನು ಅರಿತ ಬುದ್ಧ, ಬಸವಣ್ಣ, ಅಂಬೇಡ್ಕರ್ ಅಸ್ಪೃಶ್ಯತೆ ನಿವಾರಣೆಗಾಗಿ ಪ್ರಯತ್ನಮಾಡಿದರು. ನಮಗೆ ಇಂದು ಅಂತಹ ಸಾಮಾಜಿಕ ಕಳಕಳಿ ಬೇಕಾಗಿದೆ. ಜಾತಿಗಳ ನಡುವೆ ಅಪನಂಬಿಕೆಯ ಗರಿಕೆ ಹುಟ್ಟಿದ್ದು ಎಷ್ಟು ಚಿವುಟಿದರೂ ಬೆಳೆಯುತ್ತಲೇ ಇದ್ದು ಮನುಷ್ಯ ಸಂಬಂಧಗಳಲ್ಲಿ ಅತಂತ್ರ, ಅಸುರಕ್ಷಿತ ಭಾವಗಳು ಮೂಡತೊಡಗಿವೆ.

ಹಿಂದೂಧರ್ಮದ ಶ್ರೇಷ್ಠತೆಯೊಂದಿಗೆ ನಮ್ಮ ಸಮಾಜದ ದೋಷಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಹೇಳಬಲ್ಲವರಾಗಿದ್ದರು ಸ್ವಾಮಿವಿವೇಕಾನಂದರು. **“ಹಿಂದೂ ಸಮಾಜದಲ್ಲೂ ಹಲವಾರು ಗಂಟು, ಗೂನು ನ್ಯೂನತೆಗಳಿದ್ದು ದೂಳು, ಕೊಳೆ ಆವರಿಸಿಕೊಂಡಿದೆ. ಇದನ್ನೇ ಸಂಪತ್ತೆಂದು ಮೂಢನಂಬಿಕೆಯಿಂದ ತಮಂಧದಲ್ಲಿ ಕುಳಿತಿದ್ದು ಹಿಂದೂ ಸಮಾಜ ಕತ್ತಲನ್ನು ಹೊರದೂಡಿ, ಹೊಸಗಾಳಿ ಬೆಳಕನ್ನು ಬರಮಾಡಿಕೊಳ್ಳಬೇಕು. ಕೊಳಕು, ವ್ರಣಗಳನ್ನು ತೊಳೆದು, ಕಮಟುಬೀರುವ ಕಟ್ಟುಗಳನ್ನು ಎಸೆದಾಗ ಮಾತ್ರ ಹಿಂದೂಸಮಾಜ ಉನ್ನತಿಗೇರಲು ಸಾಧ್ಯ”**[೧೫೫] ಎಂದು ಚಿಂತನೆ ಮಾಡಿದ್ದರು. ಹಿಂದೂಧರ್ಮದ ನ್ಯೂನತೆಯನ್ನು ಸರಿಪಡಿಸುವ ಮುಮ್ಮೊಗದ ಕೆಲಸಕ್ಕೆ ಬಹುಹಿಂದೆಯೇ ತೊಡಗಿಸಿಕೊಂಡಿದ್ದರು.

ಧರ್ಮದ ಮಾನವೀಯ ಅಂಶಗಳನ್ನು ಆಯಾ ಧರ್ಮದವರು ಅರಿತರೆ ಧರ್ಮ ಮತ್ತು ಸಮಾಜಗಳೆರಡೂ ಉಳಿಯುವುದಲ್ಲದೆ ಸೌಹಾರ್ದಯುತ ಬದುಕು ಎಲ್ಲರದಾಗುತ್ತದೆ. ಇಂದು

---

೧೫೫ ಕುವೆಂಪು, ಸ್ವಾಮಿವಿವೇಕಾನಂದ, ೨೦೦೫, ಪು : ೪.

ಧರ್ಮದ ಸರಳ ಸತ್ಯವನ್ನು ಹೇಳುವ ಧೈರ್ಯ ಮತ್ತು ಹೊಣೆಗಾರಿಕೆಯನ್ನು ಸಂತರು ಹೊರಬಹುದಾಗಿದೆ. ಇಂದು ಕಹಿಯಾದ ಸತ್ಯವನ್ನು ಹೇಳುವ ದಿಟ್ಟತನ ಬೇಕಾಗಿದೆ.

ಮೌಢ್ಯವೆಂಬುದು ಹಿಂದೂಧರ್ಮಕ್ಕೆ ಸೀಮಿತವಾಗಿಲ್ಲ. ದೇವರು, ಧರ್ಮದ ಗುಮ್ಮನನ್ನು ಕೂಡಿಸಿ ಜನರಲ್ಲಿ ಭಯ, ಆತಂಕ, ಮೌಢ್ಯವನ್ನು ಹುಟ್ಟಿಸಿ, ಅದರ ನೆರವಿನಿಂದ ಆರ್ಥಿಕ, ದೈಹಿಕ, ಮಾನಸಿಕ, ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ತಮ್ಮ ಲಾಭಕ್ಕಾಗಿ ದೇವರು ಧರ್ಮವನ್ನು ಮಾರುಕಟ್ಟೆಗೆ ತಂದು, ಮಾರಾಟ ಮಾಡಿ ಧರ್ಮ ಮತ್ತು ದೇವರ ಹೆಸರಿಗೆ ಕಳಂಕತರುತ್ತಿದ್ದಾರೆ.

ಮುಗ್ಧಜನರು, ಅಮಾಯಕರನ್ನುಶೋಷಿಸಲು ಸಮಾಜದಲ್ಲಿ ನೂರಾರುನಂಬಿಕೆಗಳು, ಆಚರಣೆಗಳು, ಅಸ್ತಿತ್ವದಲ್ಲಿದ್ದು ಸಂಸ್ಕೃತಿಯಲೇಪನದಲ್ಲಿ ಇದನ್ನೆಲ್ಲಾ ಶೋಷಿಸುವ ಮಂದಿ ಜನರು ಕತ್ತಲೆಯಲ್ಲೇ ಬದುಕಬೇಕೆಂದು ಬಯಸುತ್ತಾರೆ. ಮನೋವೈದ್ಯರ ಪ್ರಕಾರ ಮೌಢ್ಯ ಮನಸ್ಸಿಗೆ ಸಂಬಂಧಿಸಿದ್ದು ದುರ್ಬಲ ಮನಸ್ಸಿನವರು, ಮುಗ್ಧರು, ಅನಕ್ಷರಸ್ಥರು ಮೌಢ್ಯಕ್ಕೆ ಸುಲಭವಾಗಿ ಒಳಗಾಗುತ್ತಾರೆ. ಅಲ್ಲದೆ ಅಕ್ಷರಸ್ಥರೂ ಈ ದೌರ್ಬಲ್ಯಕ್ಕೆ ಒಳಗಾಗುತ್ತಿದ್ದಾರೆ.

"ನಮ್ಮಲ್ಲಿ ಬೆವರು ಸುರಿಸದೆ 'ಮೌಢ್ಯ'ವನ್ನು ಭಿತ್ತಿ ಫಸಲು ತೆಗೆಯುವ ಚಾಲಾಕಿ ಜನರು ಕಣಿ ಹೇಳುವ, ಗಿಳಿಶಾಸ್ತ್ರ, ಅಂಜನಹಾಕುವ, ಬಾನಾಮತಿ, ಮಾಟ, ಮಂತ್ರ, ವಾಮಾಚಾರ, ಟಿ.ವಿ.ಗಳಲ್ಲಿ ಜ್ಯೋತಿಷ್ಯ ಮುಂತಾದವುಗಳ ಮೂಲಕ ಶೋಷಿಸಿ ಹಣಗಳಿಸುತ್ತಿದ್ದಾರೆ."[೧೫೬] ಕಾನೂನಿಗಿಂತ ಮಕ್ಕಳಿಗೆ ಹೊಸಚಿಂತನೆಧಾರೆ ಎರೆಯಬಲ್ಲ ಬೋಧಕವರ್ಗದಿಂದ ದೀರ್ಘಕಾಲದಲ್ಲಿ ಮೌಢ್ಯಾಚರಣೆಗೆ ಉತ್ತರ ನೀಡಬಹುದು.

ಎಲ್ಲ ರಾಜಕಾರಣಗಳಿಗಿಂತ ಧರ್ಮರಾಜಕಾರಣ ಬಲಿಷ್ಠವಾದದ್ದು. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಮಾನವೀಯ, ಅವೈಚಾರಿಕ, ಅವೈಜ್ಞಾನಿಕ, ಅತಾರ್ಕಿಕ ಮೂಢ ಮತ್ತು ಮೂರ್ಖ ಆಚರಣೆಗಳನ್ನು ಪಾಲಿಸುವುದರಲ್ಲಿ ಹಿಂಸೆಗೆ ಒಳಗಾದವರಲ್ಲಿ ತಳವರ್ಗದವರೇ ಹೆಚ್ಚು. ಮುಲ್ಲಾ, ಪಾದ್ರಿ, ಪೂಜಾರಿ, ಮಠಾಧೀಶರು ಧರ್ಮ ಮತ್ತು ರಾಜಕಾರಣವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಧರ್ಮದ ಮೂಲ ಆಶಯಕ್ಕೆ ಧಕ್ಕೆ ತರುವುದರೊಂದಿಗೆ ಸಾಮಾಜಿಕ ಸ್ವಾಸ್ಥ್ಯಕ್ಕೆ ತೊಡಕಾಗುತ್ತಿದ್ದಾರೆ. ಮೌಢ್ಯವೆನಿಸಿಕೊಂಡವೆಲ್ಲವೂ ಅವೈಜ್ಞಾನಿಕವಾಗಿರುವುದಿಲ್ಲ. ಕೆಲವು ಆಚರಣೆಗಳನ್ನು ಕಂಡಾಗ ವೈಚಾರಿಕ, ವೈಜ್ಞಾನಿಕ ತಳಹದಿಯಲ್ಲಿ ರೂಪುಗೊಂಡಿರುತ್ತವೆ. ಸ್ನಾನಮಾಡಿ ತಿಂಡಿತಿನ್ನು, ತೊಲೆಕೆಳಗೆ ಮಲಗಬೇಡ, ಅಮವಾಸ್ಯೆ ದಿನ ಹೊರಗೆ ಹೋಗಬೇಡ,

---

೧೫೬ ಸುದೇಶದೊಡ್ಡಪಾಳ್ಯ., ಪ್ರಜಾವಾಣಿ, ೨೩,೯,೨೯೧೫, ಪು: ೬.

ಸಂಜೆಕಸ ಚೆಲ್ಲಬಾರದು, ಇತ್ಯಾದಿಗಳಲ್ಲಿ ಜೀವಪರನಿಲುವುಗಳಿದ್ದು ಸಾಮಾಜಿಕ ಸತ್ಯಗಳಿರುತ್ತವೆ. ಸಿನಿಮಾ ನಿರ್ದೇಶಕ ಗ್ರೌಚೋಮಾರ್ಕ್ಸ್‌ರನ್ನು ಸಂದರ್ಶನದಲ್ಲಿ "ನಿಮ್ಮ ದಾರಿಯಲ್ಲಿ ಬೆಕ್ಕು ಅಡ್ಡವಾದರೆ ಏನು ಮಾಡುವಿರಿ" ಎಂದು ಕೇಳಲಾಯಿತಂತೆ, ಅದಕ್ಕವರು 'ಅದು ಎಲ್ಲಿಗೋ ಹೊರಟಿದೆ ಎಂದು ಭಾವಿಸುತ್ತೇನೆ' ಎಂದಂತೆ. "ವಿಚಾರವಾದಿ, ಶಿಕ್ಷಣತಜ್ಞರಾಗಿದ್ದ ಡಾ. ಎಚ್.ನರಸಿಂಹಯ್ಯನವರಿಗೆ ಮೌಢ್ಯದ ವಿರುದ್ಧ ಹೋರಾಟಕ್ಕೆ ಕುಂಬಳಕಾಯಿ ಒಂದು ಪ್ರತಿಮೆಯಾಗಿತ್ತು. ಪೂಜೆ, ಪುನಸ್ಕಾರದ ಹೆಸರಿನಲ್ಲಿ ಅಮೂಲ್ಯ ಆಹಾರವಸ್ತುಗಳನ್ನು ವ್ಯರ್ಥಗೊಳಿಸಬಾರದು ಎನ್ನುವ ಅವರ ಇಂಗಿತ ಕುಂಬಳದ ಮೂಲಕ ಅಭಿವ್ಯಕ್ತವಾಗುತ್ತಿತ್ತು."[೧೫೭]

"ಕಲ್ಲುನಾಗರಕ್ಕೆ ಹಾಲು ಬೇಡ, ಮಕ್ಕಳಿಗೆ ಹಾಲು ನೀಡಿ, ಎಂಬ ಅಭಿಯಾನಕ್ಕೆ ಕೆಲವು ವರ್ಷಗಳಿಂದ ಚಾಲನೆ ದೊರೆತಿರುವುದು ಶ್ಲಾಘನೀಯ. ನಾವು ವೈಭವೀಕರಿಸಬೇಕಾದದ್ದು ಆಚರಣೆಗಳ ಹಿಂದಿನ ಅರ್ಥ, ಅರಹುಗಳನ್ನು ಎನ್ನುತ್ತಾರೆ. ಮೌಢ್ಯತೆ ವಿಚಾರದಲ್ಲಿ ಹೊರಗನ್ನು ತಿದ್ದುವ ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳಬೇಕಾಗುತ್ತದೆ. ಇಂದಿನ ಮಾನವ ಬದುಕನ್ನು ಸಹ್ಯವಾಗಿಸಲು ನಾವೆಲ್ಲರೂ ಸೂಕ್ಷ್ಮದೃಷ್ಟಿಯ ಅನುಭವಿಗಳಾಗಬೇಕು. ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳಲ್ಲಿ ಅಭಿರುಚಿಹೊಂದಬೇಕು. ಅಂಧಶ್ರದ್ಧೆ, ಅನಿಷ್ಟಸಂಪ್ರದಾಯಗಳನ್ನು ಅಲ್ಲಗಳೆದು ನೈತಿಕ ಮೌಲ್ಯಗಳನ್ನು ಮುಂದುವರೆಸಬೇಕು"[೧೫೮] ಎಂದು ಸಿದ್ದರಾಮಸ್ವಾಮಿಗಳು ಜೀವನಮೌಲ್ಯಗಳ ಕುರಿತು ಹೇಳುವುದು ಸಮಂಜಸವಾಗಿದೆ.

ಪ್ರಕೃತಿಯಲ್ಲಿ ಸಹಜವಾದ ಪ್ರಾಣಿಪಕ್ಷಿಗಳ ಚಲನೆಯನ್ನು ಅವೈಜ್ಞಾನಿಕವಾಗಿ ಅರ್ಥೈಸುವುದರಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಎಂದು ಭಿನ್ನಭೇದ ಎಣಿಸುವಂತಿಲ್ಲ. ಸಾಮಾಜಿಕ ಬದುಕಿನಲ್ಲಿ ಕೆಲವೊಂದು ಕುಲಕಸುಬುದಾರರ ಎದುರುಗೊಳ್ಳುವಿಕೆ, ಓಡಾಟವೂ ಅಮಂಗಲವೆಂದು ಭಾವಿಸುವುದರಲ್ಲಿ ವಿದ್ಯಾವಂತರೇ ಹೆಚ್ಚೆನ್ನಬಹುದು. ಅವೈಜ್ಞಾನಿಕ ಆಲೋಚನೆಗಳು ವ್ಯಕ್ತಿ ಧೈರ್ಯಗುಂದಿಸಿ ಅವನಲ್ಲಿ ಬಲಹೀನತೆ ಮತ್ತು ಖಿನ್ನತೆಯನ್ನುಂಟು ಮಾಡಿ ಅವನನ್ನು ಕುಗ್ಗಿಸಿಬಿಡುತ್ತದೆ. ಅಲ್ಬರ್ಟ್‌ಐನ್‌ಸ್ಟೀನ್‌ರ ನುಡಿ 'ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು' ಎಂಬುದು ಇಲ್ಲಿ ಧರ್ಮ ಎಂದರೆ ಮಾನವಧರ್ಮವೆಂದೇ ಪರಿಗಣಿಸಬಹುದು. ಹಿಂದಿನವರ ಬಹುತೇಕ ಆಚರಣೆಗೆ ಒಂದು

---

೧೫೭ ಬಿಂಡಿಗನವಿಲೆ ಭಗವಾನ್, ಪ್ರಜಾವಾಣಿ, ೨.೧೦.೨೦೧೬, ಪು: ೬.

೧೫೮ ಡಾ. ಸಿದ್ದರಾಮಸ್ವಾಮಿಗಳು, ಪ್ರಜಾವಾಣಿ, ೧೨.೮.೨೯೧೭, ಪು: ೪.

ಅರ್ಥವಿರುತ್ತಿತ್ತು. ಅಕ್ಷರಸ್ಥರ ಆಚರಣೆಗೆ ಅರ್ಥವನ್ನು ಹುಡುಕಿದರೂ ಸಿಗದಿರುವುದು ವಿಪರ್ಯಾಸವಾಗಿದೆ. ಮಾಢ್ಯತೆಯೆಂಬುದು ಇಂದು ಗಣಕೀಕರಣವಾಗಿದ್ದು ದಿನೇ ದಿನೇ ವ್ಯಕ್ತಿಯಿಂದ ವ್ಯಕ್ತಿಗೆ ಜ್ಯೋತಿಷ್ಯ, ವಾಸ್ತುವಿನ ಮೂಲಕ ಬಿಗಿಯಾದ ಹೆಣಿಕೆಯಾಗುತ್ತಿದೆ. ಹಂಚಿಉಣ್ಣುವ ಕಾಗೆ ಕೆಲವೊಮ್ಮೆ ಮಂಗಲ, ಕೆಲವೊಮ್ಮೆ ಅಮಂಗಲವಾಗುವ ಬಗೆಯೆ ವಿಚಿತ್ರವಾಗಿದೆ.

ಮಾನವನ ಅಂತರಂಗದಲ್ಲಿ ಮನೆಮಾಡಿರುವ ಶುಭ-ಅಶುಭ ಮತ್ತು ಮಂಗಲ - ಅಮಂಗಲಕರವಾದ ಆಚರಣೆಗಳಿಗೆ ಜಾಗೃತಿಯೊಂದೇ ಪರಿಹಾರವಾಗಿದ್ದು ಅಂತರಂಗದಲ್ಲಿರುವ ಮೌಢ್ಯದ ಬೇರನ್ನು ಮೊದಲು ಕಿತ್ತುಹಾಕಬೇಕಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಧರ್ಮದ ನೆರಳಲ್ಲೇ ರಚಿತವಾದವು. ಆದರೆ ಆಧುನಿಕ ಕನ್ನಡ ಸಾಹಿತ್ಯ ವೈಚಾರಿಕ ಹಿನ್ನೆಲೆಯನ್ನು ತನ್ನೊಳಗೆ ಅಡಗಿಸಿಟ್ಟುಕೊಂಡರೂ ಧರ್ಮ ಮತ್ತು ಆಚರಣೆಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚಿತ್ರಿಸಿಕೊಂಡಿದೆ. ಗ್ರಾಮೀಣ ಜನರ ಬದುಕಿನ ಜೊತೆಗೆ ಮುಪ್ಪರಿಗೊಂಡಿರುವ ಧರ್ಮ ಮತ್ತು ಆಚರಣೆಗಳು ಹೆಚ್ಚು ಮಹತ್ವ ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಕತೆ, ಕಾದಂಬರಿಗಳಲ್ಲೂ ಇಂತಹ ವಿಚಾರಗಳು ಸ್ಥಾನ ಪಡೆದುಕೊಂಡು ಮೌಲ್ಯಯುತ ಅಂಶಗಳಾಗಿಯೇ ಗುರುತಿಸಲ್ಪಟ್ಟಿವೆ. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪನವರು ತಮ್ಮ ಕಥೆಗಳಲ್ಲಿ ಗ್ರಾಮೀಣ ಜನರ ಬದುಕಿನ ಜೊತೆಗಿರುವ ಹಬ್ಬ, ಹರಿದಿನ, ಆಚರಣೆಗಳು, ಆಟ ಪಾಠಗಳು, ಆಚಾರ ವಿಚಾರ ಮುಂತಾದವುಗಳನ್ನು ಕಥೆಯ ಸಂದರ್ಭಕ್ಕೆ ಅನುಗುಣವಾಗಿ ನಿರೂಪಿಸಿ ಅವುಗಳ ಮೂಲಕ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಧರ್ಮ, ಜಾತಿಗೆ ಸಂಬಂಧಿಸಿದಂತೆ ಇರುವ ಭಾವನೆಗಳು ವೈಚಾರಿಕ-ವೈಜ್ಞಾನಿಕ ದೃಷ್ಟಿಕೋನಗಳು ಕತೆಗಳಲ್ಲಿ ಅಭಿವೃದ್ಧಿಗೊಂಡಿರುವ ಬಗೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕತೆಗಳನ್ನು ತುಲನಾತ್ಮಕವಾಗಿ ನೋಡಲಾಗಿದೆ. ಕತೆಗಳಲ್ಲಿ ಕಡುಬಡತನದ ಶ್ರಮ ಜೀವಿಗಳು ಮೌಢ್ಯಾಂಧಕಾರದಿಂದ ಹೊರಬರುವುದು ಸಾಮಾಜಿಕ ಆರ್ಥಿಕ ಕಾರಣಗಳಿಂದ ದುಸ್ತರವಾಗುವುದುಂಟು. ಅನಿಷ್ಟಕಾರಕ, ಅಸಮಾನತೆಯ ಕ್ರೌರ್ಯಗಳೂ ಮೌಢ್ಯತೆಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಕತೆಗಳ ಅಧ್ಯಯನ ಮಾಡಲಾಗಿದೆ.

ರಾಮಣ್ಣನವರ 'ಹಾವಿಲ್ಲದ ಹುತ್ತ' ಕತೆಯಲ್ಲಿ ಕಾಲ್ಪನಿಕ ಪರಿಕಲ್ಪನೆಗಳನ್ನು ನಿಜವೆಂಬಂತೆ ನಂಬುವ ಅಪಾಯವನ್ನು ಕತೆಯಲ್ಲಿ ಕಾಣಬಹುದು. ಯುವ ಪ್ರೇಮಿಗಳ ಜೋಡಿಯೊಂದು ನಿರೂಪಕರ ತೋಟದ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿತು. ಪರೀಕ್ಷೆ ಮುಗಿಸಿದ ನಿರೂಪಕರು ಊರಿಗೆ ಬಂದು ತೋಟದ ಕಡೆ ಹೊರಟಾಗ ಅವರ ಮನೆಯ ಆಳು ಮಾದ ಎದುರಾಗುತ್ತಾನೆ.

'ನಿಮ್ಗೆ ತಿಳೀದು ಚಿಕ್ಕಗೌಡ್ರೆ, ಓದ್ದೋರು ನಂಬಾಕಿಲ್ಲ. ನಮ್ಮ ತೋಟ್ದೇಲಿ ಮೋಹಿನಿ ಅದೆ. ಬರ್ರೀ ಮನೇಕಡೆ ಹೋಗುವ' ಎಂದು ನನ್ನನ್ನೂ ಕರೆದುಕೊಂಡು ಎತ್ತುಗಳೊಡನೆ ಊರಿನ ಕಡೆ ನಡೆದು ಬಿಟ್ಟ.

'ಪುಟ್ಟಿ, ಚಿಕ್ಕಗೌಡ್ರೆ, ಬೆಸ್ತರ ನಮ್ಮೂರ ತೋಟಿ ದಾಸನ ಮಗಳು ಮೂರ್ತಿಂಗಳ ಹಿಂದೆ ಅವಳ ಸಂಗಡಿಕಾರನೊಡನೆ ನೀರಿಗೆ ಬಿದ್ದು ಸತ್ತೋದ್ಲು. ಅದೂ ಯಾವ ಬಾವೀಲೀ ಅಂತೀರಿ, ನಮ್ಮ ತೋಟದ ಬಾವೀಲೆ, ಆದ ನೆನ್ಕಂಡ್ರೆ ಅಪ್ಪ ಮೈಕೂದ್ಲೆಲ್ಲಾ ಜುಂ ಅಂತವೆ' ಎಂದು ಮಾದ ನಡೆದ ಘಟನೆಯ ಅಸ್ಪಷ್ಟ ಚಿತ್ರಕೊಟ್ಟ.

'ಪುಟ್ಟಿಯ ಮೋಹಿನಿ ಯಾವಾಗ ಬರುತ್ತದಂತೋ ನಮ್ಮ ತೋಟಕ್ಕೆ?' ಎಂದೆ.

"ಚುಮಚುಮು ಅಂತ ಬೆಳಗಾಗುವಾಗ, ಮಟಮಟ ಮಧ್ಯಾಹ್ನದಾಗೆ ಮತ್ತೆ ಮುಸ್ಸಂಜೇಲೆ ಬರ್ತದಂತೆ. ಮಧ್ಯರಾತ್ರೀಲಿ ಎರಡೂ ಸೇರಿ ಮಾತಾಡ್ತವಂತೆ. ಅದ ಕಿವಿಯಾರೆ ಕೇಳ್ದೋರೆ ಅವ್ರೆ"[೧೫೯] ಎಂದನು ಮಾದ.

ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ನಿರೂಪಕರಿಗೆ ನಂಬಿಕೆ ಬರದಿದ್ದರೂ ಅಂದು ರಾತ್ರಿ ಕನಸಿನಲ್ಲಿ ದೆವ್ವ ಕಂಡು ಹೆದರಿ ಹೌಹಾರಿ ಹೋದರು. ಮಾದ ಹೆಣೆದಕತೆಯನ್ನು ನಂಬಲು ಮನಸ್ಸು ಒಪ್ಪಲಿಲ್ಲ. ವೈಚಾರಿಕವಾಗಿ ಯೋಚಿಸಿದ ನಿರೂಪಕರು ತೋಟಕ್ಕೆ ಹೋಗಿ ಪರೀಕ್ಷಿಸಲು ನಿರ್ಧರಿಸಿದರು. **"ವ್ಯಕ್ತಿಯು ವ್ಯವಸ್ಥೆ, ಮೌಲ್ಯಸಿದ್ಧಾಂತ, ಮನುಷ್ಯತ್ವದ ಮೇಲೆ ನಂಬಿಕೆ ಇಡಬೇಕೇ ವಿನಾ ಮೂಢನಂಬಿಕೆ ಮೇಲಲ್ಲ ಎಂಬ ಘೋಷಣೆ ಆಳುವವರಿಂದ ಬರುತ್ತಲೇ ಇರುತ್ತದೆ"**[೧೬೦]. ಊರಲ್ಲಿ ಆದ ಆತ್ಮಹತ್ಯೆಯನ್ನು ಮಾದ ಕತೆಹೆಣೆದು ತನ್ನ ಸ್ವಾರ್ಥಕ್ಕಾಗಿ ಜನರಲ್ಲಿ ಭಯಹುಟ್ಟಿಸಿ

---

೧೫೯ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೪೫.

೧೬೦ ಆರ್.ಪೂರ್ಣಿಮ, ಪ್ರಜಾವಾಣಿ, ೨೪.೫.೨೦೧೬, ಪು: ೬.

ಪುಟ್ಟಿ ಮತ್ತು ಅವಳ ಪ್ರೇಮಿ ಸತ್ತದ್ದಕ್ಕೂ, ಜನರು ಹೆದರುವ ದೆವ್ವ ಎಂಬ ಅತಾರ್ಕಿಕ ಭಯಕ್ಕೂ ಸಂಬಂಧ ಕಲ್ಪಿಸಿ ಜನರನ್ನು ಭಯದ ಪ್ರಪಾತಕ್ಕೆ ತಳ್ಳುವ ಅವಕಾಶವಾದಿ ತಂತ್ರಗಾರಿಕೆಯನ್ನು ಮಾಡುತ್ತಾನೆ.

ಅದೆಷ್ಟೋ ದೆವ್ವ, ಬಾನಾಮತಿ, ಮಾಟ, ಮಂತ್ರದಂತಹ ನಂಬಿಕೆ, ಭಯ ಜನರಲ್ಲಿ ನೆಲೆಸುವಂತೆ ಸ್ವಾರ್ಥಿಗಳು ತಮ್ಮ ಹಿತಾಸಕ್ತಿಗಾಗಿ ಮಾಡುತ್ತಾರೆ, ಇಂತಹವನ್ನು ಯಾವ ಕಾನೂನಿನಿಂದಲೂ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಮೂಢ, ಮೂರ್ಖ, ಅತಾರ್ಕಿಕ, ಅವೈಚಾರಿಕ, ಅವೈಜ್ಞಾನಿಕ ನಂಬಿಕೆಗಳನ್ನು ತಮ್ಮ ಹಿತಾಸಕ್ತಿಗಾಗಿ ಬಳಸುವುದು ಮಾದನ ಪಾತ್ರದಲ್ಲಿ ಸಾಂಕೇತಿಕವಾಗಿ ಮೂಡಿದೆ. ಮನುಷ್ಯನ ವೈಚಾರಿಕ ಮನೋಭಾವದಿಂದ ಮಾತ್ರ ಇಂಥ ಮೌಢ್ಯವನ್ನು ದೂರಮಾಡಬಹುದು. ದೆವ್ವ ಎಂದರೆ ಭಯ ಎಂಬುದು ಜನರ ಮನಸ್ಸಿನಲ್ಲಿರುವುದನ್ನು ಮಾದನಂತಹವರು ಕಟ್ಟುವ ಕತೆಗಳು ಜನರ ಧೈರ್ಯವನ್ನು ಕುಂದಿಸುತ್ತವೆ.

ಊರವರ ಅಂತರಂಗದಲ್ಲಿರುವ ಮೌಢ್ಯದ ಬೇರನ್ನು ಕಿತ್ತುಹಾಕಲು ನಿರೂಪಕರು ಪ್ರಯತ್ನಿಸಿದರು. ಊರವರಲ್ಲಿದ್ದ ದೆವ್ವದ ಬಗೆಗಿನ ಭಯ, ಅಂಜಿಕೆಯನ್ನು ದೂರಮಾಡಲು ದಿಟ್ಟ ಹೆಜ್ಜೆಇಟ್ಟುದ್ದುರಲ್ಲಿ ಸತ್ಯದ ಬೆಳಕಿನ ಜನಪರಮೌಲ್ಯದ ಚಿಂತನೆ ಕಾಣಬಹುದು. **“ರಾಮಣ್ಣನವರ ಬಹುಪಾಲು ಕಥೆಗಳು ಹೊಸಜೀವನ ದೃಷ್ಟಿಕೋನವನ್ನು ರೂಪಿಸುತ್ತವೆ. ಅದೇ ಸಾಹಿತ್ಯದ ನಿಜವಾದ ಉದ್ದೇಶ”**[೧೬೧] ಎಂಬ ವಿದ್ವಾಂಸರ ಮೇಲಿನ ಸತ್ಯವನ್ನು ಸಮರ್ಥಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ದೆವ್ವ ಬಂತು ದೆವ್ವ' ಸ್ವಾರ್ಥಕ್ಕಾಗಿ ಹೆಣೆದ ಕತೆಯಾಗಿದ್ದು ರಾಮಣ್ಣನವರ ಕಥಾವಸ್ತುವನ್ನು ಹೋಲುತ್ತದೆ. ನಿರೂಪಕರು ಮತ್ತು ಗೆಳೆಯರು ಸ್ಮಶಾನದಲ್ಲಿ ಹರಟುವ, ಚರ್ಚೆ ಮಾಡುವ ಹುಕಿಯಲ್ಲಿದ್ದಾಗ ಹೊತ್ತು ಕವಿದಿದ್ದು ತಿಳಿಯಲಿಲ್ಲ. ಇವರು ಕತ್ತಲೆಯಲ್ಲಿ ಸ್ಮಶಾನದಿಂದ ಹೊರಟು ಊರಕಡೆಗೆ ಬರುವುದನ್ನು ನೋಡಿದವರು 'ದೆವ್ವ' ಎಂದು ಊರು ತುಂಬ ಸುದ್ದಿ ಮಾಡುತ್ತಾರೆ.

ಮನುಷ್ಯನ ಮನಸ್ಸಿನಲ್ಲಿ ಕೆಲವು ಭಯಗಳಾದ ಸಾವು, ದೆವ್ವ, ನರಕ, ಶಕುನ, ಭೂತ – ಪ್ರೇತಗಳು ಸುಪ್ತವಾಗಿರುತ್ತದೆ. ಇವು ಅವನನ್ನು ದುರ್ಬಲನಾಗಿಸುವುದೂ ಉಂಟು. ಈ ಭಯವನ್ನು, ಗಾಳಿಸುದ್ದಿಯನ್ನು ತನ್ನ ಸ್ವಾರ್ಥಕ್ಕಾಗಿ ಮೇಕಪ್ಪೀರಮ್ಮಜ್ಜಿ, ಬಳಸಿಕೊಳ್ಳುತ್ತಾಳೆ.

---

೧೬೧ ಕೆ.ಎಸ್. ಭಗವಾನ್, ಕನ್ನಂಬಾಡಿ, ೧೯೮೬, ಪು: ೨೮.

ರಾಮಣ್ಣನವರ ಕತೆಯ 'ಮಾದ'ನೂ ಜನರಲ್ಲಿ ಇದೇ ರೀತಿ ಅಂಜಿಕೆ ಹುಟ್ಟಿಸಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿರುತ್ತಾನೆ. ಮೇಕಪ್ಪೀರಮಜ್ಜಿ ಗೌಡನ ಮನೆ ಮುಂದೆ ನಿಂತು 'ಏನ್ರೋ..... ವಾರ ಮುಂದಿನ ನಾಲ್ಕೆಕೆರೆ ಮಸಾಲೆ ಹೊಲವನ್ನು ನನ್ನ ಉಪಪತ್ನಿ ಮೇಕಪ್ ವೀರಾಂಬೆಗೆ ಕೊಡಬೇಕಂತ ಹೇಳಿ ಅಲ್ಲೆ ನಾನು ಪ್ರಾಣಬಿಟ್ಟಿದ್ದು, ಕೊಡದೆ ಎಲ್ಲಾ ಆಸ್ತಿಯ ನೀವೇ ಅನುಭೋಗಿಸ್ತಿದ್ದೀರೇನೋ..... ನಿಮ್ಮನ್ನು ನಾನು ಸುಮ್ಮೇ ಬಿಡೋದಿಲ್ಲ.....' ಎಂದು ಕೂಗುತ್ತಾಳೆ. ಹಳ್ಳಿಯ ಜನ ಇಂತಹ ಮೌಢ್ಯ ನಂಬಿಕೆಗಳಿಗೆ ಜೋತುಬಿದ್ದು ಐಹಿಕಬದುಕನ್ನು ದುಸ್ತರಮಾಡಿಕೊಳ್ಳುವುದುಂಟು. ಕಲ್ಪನೆಯನ್ನು ಭೌತಿಕ ಸತ್ಯವೆಂದು ನಂಬಿಸುವ ಪಿತೂರಿಗಳು ನಡೆಯುತ್ತಲೇ ಇರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಒಂದು ಬಗೆಯಾದರೆ ನಗರಪ್ರದೇಶದಲ್ಲಿ ಇನ್ನೊಂದು ಬಗೆಯಲ್ಲಿ ಜನರನ್ನು ದಾರಿತಪ್ಪಿಸುತ್ತಾರೆ. ಎರಡೂ ಕತೆಗಳಲ್ಲಿ ನಿರೂಪಕರು ವೈಯಕ್ತಿಕ ಅನುಭವದ ಹಿನ್ನೆಲೆಯಲ್ಲಿ ಕತೆಯನ್ನು ನಿರೂಪಿಸುತ್ತಾ ಹೋಗುತ್ತಾರೆ.

ದೇವರು, ಧರ್ಮದ ವಿಚಾರದಲ್ಲೂ ಈ ಬಗೆಯ ಅಸುರಕ್ಷತೆ, ಧಾರ್ಮಿಕ ಪುಕ್ಕಲುತನವನ್ನು ಜನರಲ್ಲಿ ಉಂಟುಮಾಡುವ ಮುಲ್ಲಾ, ಪಾದ್ರಿ, ಪೂಜಾರಿ, ಮಾಂತ್ರಿಕರ ಸಮುದಾಯವನ್ನು ಕಾಣಬಹುದು. ಸಂಬಂಧಗಳ ಶಿಥಿಲತೆ, ಭಾವನಾತ್ಮಕ ಭಾವನೆಗಳ ಕೊರತೆಯಿಂದ ಇಂತಹವರ ಮಾತುಗಳನ್ನು ನಂಬುತ್ತಾರೆ ಮತ್ತು ಅವರು ಹೇಳಿದ್ದೇ ವೇದವಾಕ್ಯವೆನಿಸುತ್ತದೆ. ಇದನ್ನೇ ದುರುಪಯೋಗಪಡಿಸಿಕೊಂಡು ದೇವರ ಹೆಸರಿನಲ್ಲಿ ಹಣ ಮಾಡುತ್ತಾ ಜನರನ್ನು ಆರ್ಥಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಕುಗ್ಗಿಸುತ್ತಾ ಪುರೋಹಿತಶಾಹಿ ವರ್ಗ ಯಾರೂ ಪ್ರಶ್ನಿಸದಂತೆ, ಹತ್ತಿರ ಬರದಂತೆ ಬೃಹದಾಕಾರವಾಗಿ ಬೆಳೆಯುತ್ತಾ ಜನರಲ್ಲಿ ಮೌಢ್ಯತೆಯನ್ನು ನೆಟ್ಟು ಬೆಳೆಸುತ್ತಿದೆಯೆನ್ನಬಹುದು.

"ಭಾರತೀಯರ ಜ್ಞಾನವನ್ನು ಆಂಗ್ಲೇಯರು ಮೌಢ್ಯವೆಂದೇ ಪರಿಭಾವಿಸಿದ್ದಾಗ ಸ್ವಾಮಿ ವಿವೇಕಾನಂದರು ಅಂತಹವರಿಗೆ ಭರತವರ್ಷದ ಜ್ಞಾನದ ಬೆಳಕಿನ ಅರಿವನ್ನುಂಟು ಮಾಡಿದರು. ನರೇಂದ್ರರು ಪರೀಕ್ಷಿಸದೆ ಯಾವುದನ್ನೂ ನಂಬುತ್ತಿರಲಿಲ್ಲ". [೧೬೨] ಪರೀಕ್ಷಿಸುವ, ಪ್ರಶ್ನಿಸುವ ಮನೋಧರ್ಮ ಬಹುಮುಖ್ಯವೆಂದು ಭಾವಿಸಿದ್ದರು.

ರಾಮಣ್ಣನವರ 'ಕೆಂಪುಹುಂಜ' ಕತೆಯಲ್ಲಿ ನಾಗಕ್ಕ ಪ್ರೀತಿಯಿಂದ, ಅಕ್ಕರೆಯಿಂದ ಸಾಕಿದ ಕೆಂಪು ಹುಂಜ ಕಾಣೆಯಾದಾಗ ಅವಳ ಹುಡುಕದ ಜಾಗವಿರಲಿಲ್ಲ. ಹುಂಜ ಸಿಗದಿದ್ದಕ್ಕೆ ಗಂಡ

---

೧೬೨ ಕುವೆಂಪು, ಸ್ವಾಮಿವಿವೇಕಾನಂದ, ೨೦೦೫, ಪು: ೧೫೪.

ಮತ್ತು ಮಗನ ಮೇಲೆ ಸಿಡಿಮಿಡಿಗೊಳ್ಳುತ್ತಾಳೆ. ಕೋಳಿಕುಂಟೇನಾರ ಬಂದಾದೆ? ಎಂದು ಮೂಗುದ್ದ ಮಾಡಿದಳು: ಮತ್ತೆ ನಿರಾಶೆ, ಐನಾತಿ ಹುಂಜ.... ಯಾರೋ ಮುರ್ಕೊಂಡ್ರು, ಎಷ್ಟು ದಿನದಿಂದ ಕಾಯ್ಕೊಂಡಿದ್ರೋ। ಭೂಮಿ ಮ್ಯಾಲೆ ನಡೀತಿರಲಿಲ್ಲ.... ಅದರ ಕೆಂಪು ಪುಕ್ಕ, ನಡೀವಾಗ ಅತ್ತಾಗು ಇತ್ತಾಗುವ ಜುಮುಕ ಜುಮುಕ ಅಂತ ವಾಲಾಡುದು ಕಂಡು ಒಳಗೊಳಗೆ ಕರಬೂರು. ಇನ್ನೇನು ಕರಬೂರು ಬುಡು. ಮುರ್ಕೊಂಡು ಯಕ್ಕೈ ಹುಟ್ಸಿಸ್‌ಕೊಂಡ್ರಲ್ಲ. ಹಿಂಗೇ ಸಾದಿಸ್‌ಕೊಂಡ್ ಬಂದ್ರಲ್ಲ ಹಗೆ. ನಮ್ಮ ಮನೆ ಸುತ್ತಮುತ್ತಲೋರು ಮುರ್ಕೊಳ್ದೆ ಐಗಾಂಚಿಯಿಂದ ಬಂದ್ರೆ ಹಾರಿಸ್ಕೊಂಡೋಗೂಕೆ ಎಂದು ವಾರಗಿತ್ತಿಯ ಮೇಲಿನ ಗುಮಾನಿಯಿಂದಲೇ ಬೈಯುತ್ತಾ ನೆಟಿಕೆಮುರಿದಳು. ತನ್ನ ಸಂಶಯಕ್ಕೆ ಮಗ ಮತ್ತು ಗಂಡ ಬೆಂಬಲಕೊಡದೆ ಇದ್ದಾಗ, ಗಂಡ ಗೊತ್ತಿಲ್ಲದೆ ಮಾತನಾಡಬೇಡ ಎಂದಾಗ ವಾರಗಿತ್ತಿಯನ್ನು ಶಪಿಸತೊಡಗುತ್ತಾಳೆ.

"ಇನ್ನಾರು ಕೆಂಪುಂಜ ಮುರ್ಕೋರ್ಣ ಧೈರ್ಯ ಮಾಡಾರು? ಇವಳೇ ಈ ಕಲಕೇತಿಯೇ ಮುರಿದಿರೋದು ನಾಕಾಣನೆ ಭಗವಂತ।" [೧೬೩] ಎಂದು ಕಾಸು ಮಂತ್ರಿಸಿ ಅರಿಸಿನದ ಪವಡೆಯಲ್ಲಿಟ್ಟು ನೆಲುವಿನ ತಲಕ್ಕೆ ಕಟ್ಟುವುದಕ್ಕೆ ಮುಂಚೆ ಹುಂಜವನ್ನು ಮಾರಮ್ಮನನ್ನು ಚಿತ್ರಿಸಿಕೊಂಡು ಕಣ್ಣು ಮುಚ್ಚಿ ಧ್ಯಾನಿಸುತ್ತಾ 'ಊರ ಮುಂದಲ ಮಾರವ್ವ, ನಿನಗೆ ಕಾಣದೇ ಇರೋದು ಒಂದೂ ಇಲ್ಲ. ನನ್ನ ಕೋಳೀ ಮುರ್ಕೊಂಡೋರ್ನ ಇನ್ನು ಮೂರು ನಾಲ್ಕು ದಿನಕ್ಕೆ ನನ್ನ ಕಣ್ಣೆದುರಿಗೆ ಭೂಗತ ಮಾಡ್ಬಿಡು' ಎಂದು ಹೇಳುತ್ತಾ, ಕಣ್ಣುಮುಚ್ಚಿಕೊಂಡೇ ಮೂರು ಸುತ್ತು ತಿರುಗುತ್ತಾ....

'ನನ್ನ ಕೋಳಿ ಮುರ್ಕೊಂಡಿರೋಳು ಅವಳೇ, ಇನ್ಯಾರು ಅಲ್ಲ – ಅದು ನನಗೆ ಗೊತ್ತು. ಇನ್ನು ಮೂರು ನಾಲ್ಕು ದಿನದೇಲೇ ಅವಳ ಹೆಣ ನನ್ನ ಕಣ್ಣೇಲಿ ನೋಡ್ತೀನಿ' ಎಂದಳು.

ನಿಂಗಕ್ಕ ವಾರಗಿತ್ತಿಯ ಮೇಲಿನ ಅನುಮಾನದಿಂದ ಪವಡೆಯಲ್ಲಿ ಕಾಸುಕಟ್ಟಿ ಕಳೆದ ಹುಂಜ ಸಿಗಲಿ ಎಂದು ಹರಕೆಹೊರುವುದಕ್ಕಿಂತ ಹುಂಜಕದ್ದವರು ಸಾಯಲಿ ಎಂದು ಶಪಿಸುವುದರಲ್ಲಿ ತೊಡಗುವುದು ಅವಳ ಅನುಮಾನ, ಅಸೂಯೆ, ಹಗೆತನ, ದ್ವೇಷದ ಕಾರಣದಿಂದಾದರೂ ಶಾಪ ಅವಳಿಗೇ ತಿರುವುದು ಕಾಕತಾಳೀಯವಾಗುತ್ತದೆ. ಹುಂಜ ಹುಡುಕುವ ಪರಿ ನೈಜವಾಗಿದ್ದು ಒಡಲಾಳದ 'ಸಾಕವ್ವ' ನೆನಪಿಗೆ ಬರುತ್ತಾಳೆ. ನಿಂಗಕ್ಕ ಹುಂಜ ಕಾಣೆಯಾಗಿದ್ದಕ್ಕೆ ಸಂಕಟಪಡುತ್ತಾಳೆ. **"ಕೇಡಿಗತನಕ್ಕೂ ಸಂಕಟಕ್ಕೂ ಸಂಬಂಧವಿರುವುದು ಸಾಧ್ಯ,**

---

೧೬೩ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೧೨೮.

ಕೇಡಿಗತನದ ಜವಾಬ್ದಾರಿ ದೇವರ ಮೇಲೆ ಒರಗುತ್ತದೆ."[೧೬೪] ನಿಂಗಕ್ಕನದು ಸಂಕಟ ಜೊತೆಗಿನ ಕೇಡಿಗತನವು ದೇವರಿಗೆ ಅಂದರೆ ಮಾರಮ್ಮನಿಗೆ ಹರಕೆ ಹೊತ್ತು ಅವಳಿಗೆ ಹುಂಜದ ಜವಾಬ್ದಾರಿಯನ್ನು ದಾಟಿಸಿಬಿಡುತ್ತಾಳೆ. ನಿಂಗಕ್ಕ ದೇವರನ್ನು ಹುಂಜ ಹುಡುಕಲು ಕೋರದೆ, ಒಳ್ಳೆಯದಕ್ಕೆ ಬದಲಾಗಿ ಕೆಟ್ಟದ್ದಕ್ಕೆ ಹರಕೆ ಹೊರುತ್ತಾಳೆ. ಕಡೆಗೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಬಿಡುತ್ತಾಳೆ. ಹರಕೆ, ಮಾಟ, ಮಂತ್ರಗಳಿಂದ ಕೇಡಿನ ಕೈಮೇಲಾಗುತ್ತದೆ ಎಂದು ನಿಂಗಕ್ಕನಿಗೆ ಅನಿಸಿದರೂ ಒಳಿತು ಸೋತು ಮಣ್ಣು ಮುಕ್ಕುವುದಿಲ್ಲ. ಕುಂ.ವೀರಭದ್ರಪ್ಪ ಅವರ 'ಹರಕೆ' ಕತೆಯಲ್ಲಿ ಪುಟ್ಟ ಹುಡುಗಿ ಗೌರಿ ತನ್ನ ತಾಯಿಗೆ ಕಾಯಿಲೆಯಾದಾಗ ಊರವರು ನಂಬುತ್ತಿದ್ದ ಸೌವುಡವ್ವನಿಗೆ ತನ್ನನ್ನೇ ಅರ್ಪಿಸುವುದಾಗಿ ಹರಕೆ ಹೊರುತ್ತಾಳೆ. ಊರವರಿಗೆ ಅವ್ವಳಾದ ಸೌವುಡವ್ವ ಗೌರಿಗೂ ಅವ್ವಳಾಗುವುದು ಅನುಚೂನವಾಗಿ ಬಂದ ನಂಬಿಕೆಯೇ ಆಗಿದೆ.

"ಚರ್ಮ ಕೊರೆವ ಚಳಿಗೆ ಸೊಪ್ಪು ಹಾಕದೆ ಕೆರೆಯ ನೀರಿನಲ್ಲಿ ಮುಳುಗೆದ್ದು ಮಡಿಯಾಗಿ ಸೌಡವ್ವಾ ನಮ್ಮವ್ವನ ಉಳಿಸಿಕೊಡವ್ವಾ... ಉಳಿಸಿ ಕೊಟ್ರೆ ನನ್ ಜೀವನ ನಿಂಗೆ ಅರ್ಪಿಸ್ತೀನಿ ಕಣೆ ತಾಯಿ...."[೧೬೫] ಎಂದು ಪುಟ್ಟ ಹುಡುಗಿ ಹರಕೆ ಕಟ್ಟಿದ್ದು ತಾಯಿಗಾಗಿ. ತಾಯಿಗೆ ಗುಣವಾಯಿತು ಎಂದು ಸಮಾಧಾನವಾದಾಗಲೇ ಹರಕೆ ನೆನಪಾಗಿ ತೀರಿಸುವ ಬಗೆ ಹುಡುಗಿಯನ್ನು ಕಾಡತೊಡಗಿತು. ತನ್ನನ್ನೇ ಅರ್ಪಿಸುವ ಹರಕೆಯ ಬಗ್ಗೆ ಭಯ, ಗೊಂದಲ, ಸಂದಿಗ್ಧ, ಪಾಪ-ಪುಣ್ಯ, ಸ್ವರ್ಗ-ನರಕ ಎಲ್ಲಾ ಯೋಚನೆಗಳು ಪುಟ್ಟ ತಲೆಯಲ್ಲಿ ದಾಂಗುಣಿಯಿಡುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ಮುಗ್ಧ ಮಕ್ಕಳಿಂದ ಮುಪ್ಪಿನವರಗಿನವರಲ್ಲೂ ಬಿಡದ ಮೂಢ ನಂಬಿಕೆಗಳು, ದೇವರ ಬಗೆಗಿನ ಭಯ-ನಂಬಿಕೆ ಕಲ್ಪನೆಗಳು ಅವರ ಬದುಕಿನಲ್ಲಿ ಮಹತ್ವದ ವಿಚಾರಗಳೇ ಆಗಿರುತ್ತವೆ. ಅದಕ್ಕೆ ತಪ್ಪಿ ನಡೆಯಬಾರದೆಂಬ ಅಲಿಖಿತ ನಿಯಮ ಅವರಲ್ಲಿ ಇದ್ದು ಚಾಚೂ ತಪ್ಪದೆ ನಡೆದುಕೊಳ್ಳುತ್ತಾರೆ.

ತನ್ನ ಅವ್ವನನ್ನು ಬದುಕಿಸಿದ ಸೌವುಡವ್ವಗೆ ಗೌರಿ,

"ತಾಯಿ.... ತಡೀ ತಾಯಿ ನಾನೇ ಬತ್ತೀನಿ.... ನಿಂಗೆಂಗೆ ಇಷ್ಟವೋ ಹಾಗೆ ನಿನ್ ಪಾದಕ್ಕೆ ಸೇರುಸ್ಕೋ ತಾಯಿ. ಒಂದ್ತಾಯಿ ಬಿಟ್ಟು ಇನ್ನೊಂದ್ತಾಯಿತ ಸೇರೋಕೆ ಇನ್ನು ಒದ್ದಾಡೋಲ್ಲ ಅಮ್ಮಾ.... ಮತ್ತೆ ಮತ್ತೆ ಕೂಗಿ ಕೂಗಿ ಕರೀಬ್ಯಾಡ. ಮತ್ತೆ ಮತ್ತೆ ಕೈಬೀಸಿ ಕರಿಬ್ಯಾಡ, ನಾನೋ

---

೧೬೪ ಎ.ಎನ್. ಮೂರ್ತಿರಾವ್, ದೇವರು, ೨೦೦೨, ಪು: ೬೮.

೧೬೫ ಕುಂ.ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦. ಪು: ೭೮೫,

ಕಾಟಿಗ್ರಮಗ್ಳು ಹರ್ಕೆ ಕಟ್ಟಿದ ಮ್ಯಾಲ ಮುಗೀತು. ಮುಂದಿಟ್ಟ ಕಾಲು ಹಿಂದಿಡೋಲ್ಲ ತಾಯಿ... ಇಗೋ ಎದ್ದು ಬತ್ತಿದೀನಿ ನೋಡು."[೧೬೬]

ದೇವರಿಗೆ ಕೊಟ್ಟ ಮಾತನ್ನು ತಪ್ಪಬಾರದು ಎಂಬ ಖಚಿತನಿಲುವಿಗೆ ಬಂದ ಹುಡುಗಿ ಹೆದರುತ್ತಲೇ ಗುಡಿಗೆ ಹೋಗಿ ದೇವರ ಮುಂದೆ ಪ್ರಜ್ಞೆ ತಪ್ಪುತ್ತಾಳೆ. ಹರಕೆ ಹೊತ್ತ ಮುಗ್ಧ ಹುಡುಗಿಯ ಮನಸ್ಸಿನ ಭಯ, ಗೊಂದಲ, ತಳಮಳ, ತಾಕಲಾಟಗಳ ಒತ್ತಡ ತಾಳಲಾರದೆ ಗುಡಿಗೆ ಹೋಗಿ ಬೀಳುವತನಕ ಅವಳನ್ನು ಸೌವುಡವ್ವ ಬಿಡುವುದೇ ಇಲ್ಲ.

ರಾಮಣ್ಣನವರ ಕತೆಯಲ್ಲಿ 'ನಿಂಗಕ್ಕ'ನ ಹರಕೆ ನಂಜಿನಿಂದ ಕೂಡಿದ್ದರೆ, ಕುಂ.ವೀರಭದ್ರಪ್ಪರವರ ಕತೆಯ 'ಗೌರಿ'ಯ ಹರಕೆ ನಿಷ್ಕಲ್ಮಶ ಮನಸ್ಸಿನಿಂದ ಕೂಡಿದ್ದು ಗ್ರಾಮೀಣ ಬದುಕಿನ ನಂಬಿಕೆಯನ್ನು ಭಿನ್ನನೆಲೆಯಲ್ಲಿ ಕಾಣಬಹುದಾಗಿದೆ.

ರಾಮಣ್ಣ ಅವರ 'ಗರ್ಜನೆ', 'ದೇವರ ಹೂ' ಕತೆಗಳು ಪರಂಪರೆ ಮತ್ತು ಸಂಪ್ರದಾಯವನ್ನು ಕಥೆಯಲ್ಲಿ ನಿರೂಪಿಸಿರುವುದನ್ನು ಕಾಣಬಹುದು.

'ಗರ್ಜನೆ' ಕತೆಯಲ್ಲಿ ಪಾರ್ವತಿ ಮೈನೆರೆಯುವ ದೈಹಿಕ ಪ್ರಕ್ರಿಯೆ ವಿಶೇಷ ಸಂದರ್ಭವಾಗಿ ರೂಪುಗೊಳ್ಳುತ್ತದೆ. ಇದು ಗ್ರಾಮೀಣ ಪ್ರದೇಶದಲ್ಲಿ ಸಹಜವಾದ ಮುಗುಮ್ಮಾದ ಸಂಭ್ರಮವೂ ಆಗಿದೆ. ಸೂತಕ ಎಂದು ಭಾವಿಸಿದ್ದು ನಂತರ ಬಂಧು ಬಾಂಧವರೆಲ್ಲರೂ ಕೂಡಿ ಸಾಂಪ್ರದಾಯಕ ಕಟ್ಟಲೆಗಳನ್ನು ಅನುಸರಿಸುವುದು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿದೆ. ಪ್ರಾದೇಶಿಕ ಭಿನ್ನತೆಗೆ ಅನುಗುಣವಾಗಿ ಸಂಪ್ರದಾಯದಲ್ಲೂ ಭಿನ್ನತೆ ಕಾಣಬಹುದು. ಎಂದೋ ಯಾರೋ ಅವರಿಗೆ ಬೇಕಾದಂತೆ ಮಾಡಿಕೊಂಡ ಕಟ್ಟು ಕಟ್ಟಲೆಗಳನ್ನು ಅನುಸರಿಸುವುದರಲ್ಲೇ ಅಗಾಧ ತೃಪ್ತಿಯನ್ನು ಪಡೆಯುತ್ತಾರೆ. ಅವರವರ ನಂಬಿಕೆಯ ನೆರಳಲ್ಲಿ ಅವರ ಬದುಕು ಸಾಗಬಹುದು. ಅವರ ಭಾವನಷ್ಟಮಾಡಲು ಅಧಿಕಾರ ಸಲ್ಲದು ಎಂಬುದು ಕತೆಗಾರರ ಇಂಗಿತವೆನ್ನಿಸುತ್ತದೆ.

ಜೀವನ ಶ್ರದ್ಧೆಗಾಗಿ, ಸೌಹಾರ್ದಯುತ ಬದುಕಿಗಾಗಿ, ಧಾರ್ಮಿಕ ನಂಬುಗೆ ಬಗೆಗಿನ ಜಿಜ್ಞಾಸೆಯನ್ನು 'ದೇವರ ಹೂ' ಕತೆ ನಿರೂಪಿಸುತ್ತದೆ. ಚೆನ್ನವ್ವ ಮತ್ತು ರುದ್ರಮ್ಮರ ನಡುವೆ ಹೂ ಕೀಳುವ ವಿಚಾರದ ಜಗಳ ವಿಕೋಪಕ್ಕೆ ಹೋಗಿ ಪಂಚಾಯಿತಿವರೆಗೆ ಬಂದು ನಿಲ್ಲುತ್ತದೆ. ಕತೆಯಲ್ಲಿ ಧರ್ಮ, ಧಾರ್ಮಿಕ ನಂಬುಗೆ ವ್ಯಕ್ತಿಗಳನ್ನು ಸಮಾಜವನ್ನು ಒಂದುಗೂಡಿಸುತ್ತದೆ.

---

೧೬೬ ಅದೇ, ಪುಟ : ೭೯೧, ೨೦೧೦.

ಯಾವುದೇ ಸಮಾಜವಾದರೂ ಧರ್ಮ, ಜೀವನಾದರ್ಶ ಇವುಗಳನ್ನು ಕುರಿತಂತೆ ತನ್ನದೇ ಆದ ಕೆಲವು ಗ್ರಹಿಕೆಗಳನ್ನು ಹೊಂದಿರುತ್ತದೆ. ಈ ಗ್ರಹಿಕೆಗಳು ಆ ಸಮಾಜದ ಸೌಹಾರ್ದಯುತ ಬದುಕಿಗೂ ಕಾರಣವಾಗಬಹುದು.

"ಪೂಜೆಯನ್ನು ದೇವರನ್ನು ಲೋಹಿಯಾರವರು ನಂಬದಿದ್ದರೂ ಅದರಿಂದ ಸಾಮಾನ್ಯ ಜನರು ಪಡೆಯುವ ನೆಮ್ಮದಿ ಮತ್ತು ಶಾಂತಿಯ ಅವಕಾಶವನ್ನು ನಿರಾಕರಿಸಬಾರದೆನ್ನುತ್ತಾರೆ"[೧೬೭] ಆದರೆ ಇನ್ನೊಂದು ಮುಖದಲ್ಲಿ ಜನರಲ್ಲಿರುವ ಭಕ್ತಿ, ಶ್ರದ್ಧೆಗಳನ್ನು ದುರುಪಯೋಗ ಪಡಿಸಿಕೊಂಡು, ಕಂದಾಚಾರಕ್ಕೆ ಪ್ರೋತ್ಸಾಹ ನೀಡುತ್ತಾ ಜನರನ್ನು ಅಂಧಕಾರದಲ್ಲಿ ಉಳಿಸಲು ಪ್ರಯತ್ನಿಸುವುದನ್ನು ಲೋಹಿಯಾರವರು ನಿರಾಕರಿಸುತ್ತಾರೆ.

ಕುಂ.ವೀರಭದ್ರಪ್ಪ ಅವರ 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿ' ಯೂ ಕತೆಯಲ್ಲಿ ಮೇಲ್ಜಾತಿಯವರಿಗೆ ಮನೆಗೆ ನುಗ್ಗಿದ ಹಂದಿ ಲಕ್ಷ್ಮಿಯಾಗಿ ಅದನ್ನು ಹೊರಹೋಗಲು ಬಿಡುವುದಿಲ್ಲ. ಮನೆಯೊಳಗೆ ಕೊಂದು ಅಲ್ಲಿಯೇ ಹೂತು ಲಕ್ಷ್ಮಿಯನ್ನು ಅಲ್ಲಿಯೇ ಸ್ಥಾವರ ಮಾಡಿಬಿಡುವಲ್ಲಿ ಅಂಧಶ್ರದ್ಧೆಯೇ ಕಾರಣವಾಗುತ್ತದೆ. ಹಂದಿಯು ಲಕ್ಷ್ಮಿ ಎಂದು ಮೇಲ್ವರ್ಗದವರು ಭಾವಿಸುವಾಗ ಅಲ್ಲಿ ಜಾತಿ, ವರ್ಗ, ಅಸ್ಪೃಶ್ಯತೆ, ಸಾಮಾಜಿಕಾರ್ಥಿಕ ಅಸಮಾನತೆಗಳು ಕಾಣಿಸಿಕೊಳ್ಳುವುದೇ ಇಲ್ಲ. ಹಂದಿಯನ್ನು ಕೊಲ್ಲುವ ಕಾರ್ಯಕ್ಕೆ ಕಾರಣ ಅಪ್ಪಟ ಕೇಡಿಗತನವಲ್ಲ. ಆದರೆ ಧಾರ್ಮಿಕ ನಂಬಿಕೆಗಳು, ಗೊಡ್ಡು ಆಚರಣೆಗಳು, ಅಂಧಶ್ರದ್ಧೆ. ಅನಿಷ್ಟ ಸಂಪ್ರದಾಯಗಳು ಸಂಘರ್ಷಗಳಿಗೆ ರಕ್ತಪಾತಗಳಿಗೆ ಕಾರಣವಾಗುವುದನ್ನು ಕತೆಯಲ್ಲಿ ಕಾಣಬಹುದು. ಅಂತೆಯೇ ಧರ್ಮ, ದೇವರು, ಜಾತಿ-ಮತ, ಪಂಥ-ಗಡಿಗಳೆಲ್ಲ ಸಮಾಜಮುಖಿಯಾಗಿ ಮಾನವೀಯತೆಯನ್ನು ಪೋಷಿಸುವ ದಿಕ್ಕಿನಲ್ಲಿ ಚಲನಶೀಲವಾಗಬೇಕಾಗಿದೆ.

ರಾಮಣ್ಣನವರ 'ಶೂಲ' ಕತೆ ಪರಂಪರೆಯಲ್ಲಿನ ಸಂಸ್ಕೃತಿಯ ಎಳೆಗಳನ್ನು ಕಾಣಬಹುದು. ಹಬ್ಬದ ವಿವರಗಳು, ಜನರ ನಡಾವಳಿ, ಜನರ ಕಟ್ಟು ನಿಟ್ಟು, ಸಂಪ್ರದಾಯಗಳು ಮೊದಲಾದ ಗ್ರಾಮಸಂಸ್ಕೃತಿಯ ನೋಟವನ್ನು ಪ್ರೀತಿಯಿಂದ, ಸಮಷ್ಟಿಯನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಕುಂ.ವೀರಭದ್ರಪ್ಪ ಅವರ 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಕತೆಯಲ್ಲಿ ಮೇಲ್ವರ್ಗದ ಮೌಢ್ಯತೆಯ ಪರಮಾವಧಿ ಅನಾವರಣವಾದರೆ 'ಶೂಲ'

---

೧೬೭ ಬಂಜಗೆರೆ ಜಯಪ್ರಕಾಶ, ಲೋಹಿಯಾ : ವರ್ತಮಾನ ಮುಖಾಮುಖಿ, ೨೦೧೨, .ಪು : ೧೬.

ಶೂದ್ರಸಂಸ್ಕೃತಿಯ ಹಬ್ಬದ ಆಚರಣೆಯ ವಿಧಿವಿಧಾನಗಳನ್ನು ಸೀಮಿತ ಪರಿಧಿಯಲ್ಲೇ ಲೇಖಕರು ಕಟ್ಟಿಕೊಡುತ್ತಾರೆ.

ಕುಂ.ವೀರಭದ್ರಪ್ಪ ಅವರ 'ಡೋಮ' ಮತ್ತು ರಾಮಣ್ಣನವರ 'ಚೆಲುವನ ಪರಂಗಿ ಗಿಡಗಳು' ಕತೆಗಳಲ್ಲಿ ಗಿಡಬೆಳೆಸುವ ಸಂಸ್ಕೃತಿಯನ್ನು ಕಾಣಬಹುದಾದರೂ ಜಾತಿ ಅಸಮಾನತೆ, ವರ್ಗ ಅಸಮಾನತೆಯ ಕಾರಣದಿಂದ ಸಂಘರ್ಷವುಂಟಾಗಿ ಸಾಮಾಜಿಕ ಚಲನೆಗೆ ಅಡತಡೆಗಳು ಉಂಟಾಗುವುದನ್ನು ಕಾಣಬಹುದು.

ಮಾರಿಹಬ್ಬ ಕುರಿತಾದ ಕುಂ.ವೀರಭದ್ರಪ್ಪ ಅವರ ಕತೆ 'ಬಲಿ'ಯಲ್ಲಿ ಜನರ ನಂಬಿಕೆಗಳಿಗೆ ಬಲಿಯಾಗುವುದು ಅಮಾಯಕ ಕುರಿ, ಕೋಳಿ, ಕೋಣಗಳಾಗಿವೆ. ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ಆಚರಿಸುವ ಹಬ್ಬ ಪ್ರಾಣಿಗಳಿಗೆ ಮಾರಣಾಂತಿಕವಾಗಿ ಪರಿಣಮಿಸಿಬಿಡುತ್ತದೆ. ಜನರೆಲ್ಲರೂ ಸೇರಿ ಮುಗ್ಧ ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಕೊಂದು, ರಕ್ತ ಹರಿಸಿ ಪಡೆಯುವ ವಿಕೃತಸಮಾಧಾನಕ್ಕೆ ಯಾವ ವೈಜ್ಞಾನಿಕ ಹಿನ್ನೆಲೆಯೂ ಇರುವುದಿಲ್ಲ. 'ಮಾರಮ್ಮ ತಾಯಿ ನೀನೆಮ್ಮ ತಾಯಿ' ಅಂತ ಪದ ಹಾಡಿ, ಉದ್ದಂಡ ನಮಸ್ಕಾರ ಮಾಡಿ ಬೆಳಕಿನಿಂದ ಸರಿದರು. ಹರಕೆಹೊತ್ತಿದ್ದ ಜನ ತಾವು ಬೇಡಿಕೊಂಡ ಪ್ರಕಾರ ಕೋಳಿ, ಕುರಿಮರಿ, ಆಡಿನ ಮರಿ ಹಿಡಿದುಕೊಂಡು ನಿಂತಿದ್ದರಿಂದ ಹುಲುಗಪ್ಪ ಕೈಗೆ ಹೊಳೆಯುವ ಮಚ್ಚು ಎತ್ತಿಕೊಂಡ ಸ್ವಲ್ಪ ಹೊತ್ತಿನಲ್ಲಿ ಎಳಗಾಯಿ ಕೆತ್ತಿದಂತೆ ಹತ್ತಾರು ಎಳೆ ಜೀವಗಳನ್ನು ತುಂಡರಿಸಿದ. ಎಲ್ಲರೂ ಕೋಣವನ್ನು ಎತ್ತಿ ಸರಿಸಿಕೊಂಡು ಬಂದು ಅದರ ಕುತ್ತಿಗೆಯನ್ನು ಕವೆಕಟ್ಟಿಗೆಯ ನಡುವೆ ಸಿಕ್ಕಿಸಿದರು. ಒಬ್ಬಾತ ಬೇವಿನ ತೊಪ್ಪಲಿನಿಂದ ಕೋಣದ ಮುಖಕ್ಕೆ ಗಾಳಿ ಹಾಕುತ್ತಿದ್ದ, ಇನ್ನೊಬ್ಬ ಕಟ್ಟೆಯ ಮೇಲಿದ್ದ ಕೊಬ್ಬರಿ ಬಟ್ಟಲನ್ನು ತಂದು ಕೋಣದ ಬಾಯೊಳಗೆ ತುರುಕಿದ. ಅದು ಬಿತ್ತು. ಮೂರು ಮೂರಡಿ ದಪ್ಪವಿರುವ ಇಬ್ಬರು ಗಂಡುಗೊಡಲಿಗಳನ್ನು ಹಿಡಿದುಕೊಂಡು ಕೋಣದ ಕುತ್ತಿಗೆಯ ಎರಡು ಪಕ್ಕಗಳಲ್ಲಿ ನಿಂತು ತುಟಿ ಸವರಿದರು. ಕೋಣದ ಕುತ್ತಿಗೆಗೆ ಕಚಕಚ ಏಟು ಬೀಳತೊಡಗಿದವು.

ಮತ-ಧರ್ಮ ಸಂಬಂಧವಾದ ಮೂಢಭಾವನೆಯಿಂದ ವಿಮುಕ್ತವಾದ ವೈಜ್ಞಾನಿಕ, ವೈಚಾರಿಕಬುದ್ಧಿ ಜನರಲ್ಲಿ ಮೂಡಬೇಕು ಎಂಬುದು ಕತೆಗಾರರ ಆಶಯವೆನಿಸುತ್ತದೆ. ಕೊಂಡಹಾಯುವುದು, ಬಾಯಿ ಬೀಗ, ಬೆತ್ತಲೆಸೇವೆ, ಪ್ರಾಣಿಬಲಿ ಮುಂತಾದ ಆಚರಣೆಗಳಲ್ಲಿ ವರ್ಗ, ವರ್ಣ, ಜಾತಿ, ಲಿಂಗಬೇಧ, ಅಸ್ಪೃಶ್ಯತೆ, ಮೌಢ್ಯ, ಕೀಳಿರಿಮೆ ತುಂಬಿದ್ದು ಮಾನವ ಸಮಾಜವನ್ನು ಅವನತಿಗೆ ತಳ್ಳುತ್ತಲೇ ಸಾಗುತ್ತವೆ.

ಕುಂ.ವೀರಭದ್ರಪ್ಪ ಅವರ 'ಬಲಿ' ಕತೆ ಅರ್ಥವಿಲ್ಲದ ಅಮಾನವೀಯ ಆಚರಣೆಗಳ ಚಿತ್ರ ನೀಡಿದರೆ, ರಾಮಣ್ಣನವರ 'ಶೂಲ' ಸಾಂಸ್ಕೃತಿಕ ಬದುಕಿನ ಹಾರೈಕೆಯ ಸೂಕ್ಷ್ಮ ಮನಸ್ಸಿನ ಚಿಂತನೆಯನ್ನು ಕಾಣಬಹುದು. ದೇವನೂರು ಮಹಾದೇವರ 'ಅಮಾಸ' ಕತೆಯಲ್ಲಿ ಮಾರಿಹಬ್ಬದ ಆಚರಣೆಯಲ್ಲಿ ಹುಲಿಯಾಸದ ಕುಣಿತದ ಚಿತ್ರಣವನ್ನು ಕಾಣಬಹುದು.

"ಮನುಷ್ಯನಿಗೆ ಮಾನವೀಯ ಮೌಲ್ಯಗಳನ್ನು ಹೇಳಿಕೊಡಬೇಕು. ಅದನ್ನು ಪ್ರೌಢ, ಅಧ್ಯಾತ್ಮಿಕ ಮಟ್ಟದಲ್ಲಿ ಬೋಧಿಸಿದರೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಆಗ ಸುಲಭವಾದ, ಸ್ವಾರಸ್ಯಕರವಾದ ಕಥೆಗಳನ್ನು ಕಟ್ಟಿ ದೇವರು, ಧರ್ಮ, ಮನುಷ್ಯನ ಅಸ್ತಿತ್ವ, ಹುಟ್ಟು, ಸಾವು ಕುರಿತು ಅರ್ಥಮಾಡಿಸುವ ಸದಾಶಯದ ಪ್ರಯತ್ನ ಪುರಾಣ, ಪುಣ್ಯಕತೆಗಳಲ್ಲಿ ಫಲಿಸುತ್ತದೆ. ಅವುಗಳನ್ನು ನೀತಿಪಾಠಗಳೆಂದು ಅರ್ಥಮಾಡಿಕೊಳ್ಳದೇ ನಿಜವೆಂದು ತಿಳಿಯುವುದು ನಮ್ಮ ತಪ್ಪೇ ಸರಿ"[೧೬೮] ಎನ್ನುತ್ತಾರೆ ಎಂ. ಅಬ್ದುಲ್‌ರೆಹಮಾನ್ ಪಾಷ. ಕತೆಗಳ ಮಹತ್ವ ಕುರಿತ ಅವರ ಅಭಿಪ್ರಾಯ ವಿಚಾರಣೀಯವಾಗಿದೆ. ಕತೆಗಳು ಮೂಢನಂಬಿಕೆಗಳನ್ನು ಕಿತ್ತೊಗೆದು ಪ್ರಜ್ಞಾವಂತರಾಗಲು ಅರಿವು ಮೂಡಿಸಬೇಕೆನ್ನುವುದು ಅವರ ಆಶಯವೆನ್ನಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಬರಗಾಲದ ಒಂದು ದಿನ' ಕತೆ ಮೂಢನಂಬಿಕೆಯಿಂದ ಮಳೆಗಾಗಿ ಕತ್ತೆಯನ್ನು ಊರ ತುಂಬ ಮೆರವಣಿಗೆ ಮಾಡುವ ವಸ್ತುವನ್ನು ಒಳಗೊಂಡಿದೆ. ಕಪ್ಪೆಗೆ ಮದುವೆ, ಕತ್ತೆಗೆ ಮದುವೆ, ಕೋತಿ ಹೀಗೆ ಅಮಾಯಕ ಪ್ರಾಣಿಗಳಿಗೆ ಹಿಂಸೆ ಕೊಡುವ ಪದ್ಧತಿ ಇಂದಿಗೂ ಇದೆ. ಲಸುಮಿಯ ಕತ್ತೆ ಅರ್ಜುನನನ್ನು ಲೇಖಕರು ಮಾನವೀಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ಕತ್ತೆಗೆ ಅಲಂಕಾರ ಮೆರವಣಿಗೆ ಮಾಡಿಸುವುದು ಮೌಢ್ಯದ ಪರಮಾಧಿಯೇ ಆಗಿದ್ದರೂ ಲೇಖಕರು ಕತ್ತೆಯ ನಿಸ್ವಾರ್ಥ ದುಡಿಮೆ, ಪ್ರಾಣಿಗಳಲ್ಲಿರುವ ಅಂತಃಕರಣವನ್ನು ಕತೆಯಲ್ಲಿ ಅಭಿವ್ಯಕ್ತಗೊಳಿಸುತ್ತಾರೆ. ಕತ್ತೆ ಮತ್ತು ಮನುಷ್ಯರ ಗುಣಾವಗುಣಗಳನ್ನು ಹೋಲಿಕೆಯ ನೆಲೆಯಲ್ಲಿ ಪ್ರಾಣಿ ಮತ್ತು ಮನುಷ್ಯ ಸಂಬಂಧಕ್ಕೆ ಹೊಸತೊಂದು ವ್ಯಾಖ್ಯೆಯನ್ನೇ ಬರೆಯುತ್ತಾರೆ.

ಗೌಡ, ಅದೆಂಥ ಕತ್ತೆಲೇ ನಿಂದು.... ಒಳ್ಳೆ ಪಂಚಕಲ್ಯಾಣಿ ಕುದ್ರೆ ಇದ್ದಂಗೈತಿ ನೋಡು.... ಕತ್ತೆ ಅಂದಮ್ಯಾಲ ಒಂಚೂರು ಬಾಯಿತೆರೆಯೋದು ಬ್ಯಾಡೇನು! ಅದು ಬಾಯ್ತೇರಿಲಿಲ್ಲಾಂದ್ರ ಮಳಿಯಾದ್ರು ಹೆಂಗ ಬಂದೀತು....? ಅದ್ರಿಂದ ಹಾಡ್ಸು.... ಹಂಗಾದ್ರ ರೊಕ್ಕಕೊಡ್ತೀನಿ.... ಎಂದು ಷರತ್ತು ವಿಧಿಸಿದನು.

---

೧೬೮ ಎಂ. ಅಬ್ದುಲ್‌ರೆಹಮಾನ್ ಪಾಷ, ಪ್ರಜಾವಾಣಿ, ೨೪.೧೨.೨೦೧೫, ಪು :೬,

"ಯಂಕೋಬಿ, ವಾರೊಪ್ಪತ್ತಿನಲ್ಲೇನಾದ್ರು ಮಳೆ ಬರ್ಲಿಲ್ಲಾಂದ್ರ ನಿನ್ನೂ, ನಿನ್ಕತ್ತೇನೂ ಊರು ಬಿಟ್ಟು ಓಡಿಸ್ತೀನಿ ಹುಷಾರ್"[೧೬೯] ಎಂದು ಗತ್ತು ಹಾಕಿದನು.

ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವುದರಲ್ಲಿ ಮೌಢ್ಯತೆಯ ಪಾಲೇ ಹೆಚ್ಚೆನ್ನಬಹುದು. ಸಾಮಾಜಿಕ ಬದಲಾವಣೆಗೆ ಕಾನೂನನ್ನು ಒಂದು ಅಸ್ತ್ರವಾಗಿ ಬಳಸಬಹುದು. ಆದರೆ ಅರಿವಿನಿಂದ ಮಾತ್ರ ಮೌಢಾಚಾರಣೆ, ಹಿಂಸೆಗಳನ್ನು ತಡೆಯಬಹುದಾಗಿದೆ. ಕತೆಯಲ್ಲಿ ಬದುಕು, ಬರಗಾಲ, ಬವಣೆ, ಭಾವುಕತೆ, ರೋಚಕತೆ, ಜೀವನ ಸಂಕಷ್ಟಗಳನ್ನು ಹಾಸ್ಯಮಿಶ್ರಿತ ಶೈಲಿಯಲ್ಲಿ ಲೇಖಕರು ನಿರೂಪಿಸಿದ್ದಾರೆ.

ಕುಂ.ವೀರಭದ್ರಪ್ಪ ಅವರ 'ಕ್ರಾಂತಿ' ಕತೆಯಲ್ಲಿ ದಲಿತ ಯುವಕ ಮಂಜ ಗುಡಿಪ್ರವೇಶವನ್ನು ಸವಾಲಾಗಿ ತೆಗೆದುಕೊಂಡು ಜನರಲ್ಲಿ ಅರಿವನ್ನು ಮೂಡಿಸುವ ಪ್ರಯತ್ನಮಾಡುತ್ತಾನೆ. ತಳವರ್ಗದವರಿಗೆ ಯಾವುದು ನಂಬಿಕೆ, ಯಾವುದು ಮೂಢನಂಬಿಕೆ ಎಂಬ ವ್ಯತ್ಯಾಸ ತಿಳಿಯದಂತೆ ವ್ಯವಸ್ಥೆಯನ್ನು ಮೇಲ್ವರ್ಗ ಮಾಡಿಕೊಂಡಿರುತ್ತದೆ. ಜನರು ಕತ್ತಲೆಯಲ್ಲೇ ಬದುಕಲು ಇಚ್ಛಿಸುವುದಿಲ್ಲ.ಅವರಿಗೂ ಬೆಳಕನ್ನು ನೋಡುವ ತುಡಿತವಿರುತ್ತದೆ. ಆದರೆ ಯಥಾಸ್ಥಿತಿವಾದಿಗಳು ಅಂತಹವರಲ್ಲಿ ಭಯಹುಟ್ಟಿಸಿ, ಅವರ ಅಜ್ಞಾನದಿಂದ 'ಅನ್ನ' ಹುಟ್ಟಿಸಿಕೊಳ್ಳುತ್ತಾರೆ. ಮಂಜನಿಗೆ ತನ್ನ ತಾಯಿ, ಅಜ್ಜಿ, ಮುತ್ತಜ್ಜಿಯರನ್ನು ಸೂಳೆಯನ್ನಾಗಿಸಿದ ಮೇಗಳಕೇರಿಯ ಮೇಲೆ ಸಿಟ್ಟು ಮತ್ತು ತಿರಸ್ಕಾರವಿತ್ತು. ಚಾವಡಿ ಕಟ್ಟೆಯ ಮೇಲೆ ಕುಳಿತ ಮಂಜ 'ಎಲ್ಲಾ ಮನುಷ್ಯರಿಗೂ ಪ್ರೀತಿಯ ನೈವೇದ್ಯವನ್ನು ಸಮಾನವಾಗಿ ಹಂಚದ ದೇವರಿಗೆ ನನ್ನ ಧಿಕ್ಕಾರ' ಎಂದು ಗಟ್ಟಿಯಾಗಿ ಕ್ರಾಂತಿಕಹಳೆಯನ್ನು ಮೊಳಗಿಸಿಬಿಟ್ಟನು. ಗುಡ್ಯಾಗ ಕಾಲಿಡೋದು ಉಡಲಾಗೆ ಬೆಂಕಿ ಕಟ್ಕಂಡಂಗೆ; ಗುಡ್ಯಾಗ ಕಾಲಿಟ್ಟ ಅಂದ್ರೆ ಕಣ್ಣಳ ಕಂತಿ ಹೀಗೆ ತನ್ನ ಜನರಿಂದ ಅಂಜಿಕೆ ಹುಟ್ಟಿಸುವ ಮಾತುಗಳಿಗೆ ಮಂಜ ಹೆದರಲೂ ಇಲ್ಲ. ತನ್ನ ನಿರ್ಧಾರದಿಂದ ಹಿಂದೆ ಸರಿಯಲೂ ಇಲ್ಲ. **"ನೀವು ಹಲ್ಲೇನ ನಡೆಸಿದ್ದೇ ಆದರೆ ಭೂಮಿಗೆ ತನ್ನ ದೇಹದಿಂದ ಉದುರುವ ಒಂದೊಂದು ಹನಿರಕ್ತದಿಂದ ಸಾವಿರ ಸಾವಿರಮಂದಿ ತನ್ನಂಥ ಕ್ರಾಂತಿಕಾರಿ ಯುವಕರು ಉದಯಿಸಿ ಬರುತ್ತಾರೆ"**[೧೭೦] ಎಂದು ಹೋರಾಟ ನಿರಂತರವಾಗಿರುತ್ತದೆ ಎಂದು ಎಚ್ಚರಿಕೆ ಕೊಡುವುದರಲ್ಲಿ ಸಾಮಾಜಿಕ ಬದಲಾವಣೆಯ ತುಡಿತವೇ ಇರುತ್ತದೆ. ಒಂದು ವರ್ಗವನ್ನು ಶೋಷಿಸುತ್ತಾ ಮತ್ತೊಂದು ವರ್ಗ ಮುಂದುವರಿದಿರುವುದೇ ಇತಿಹಾಸವಾಗಿರುವಾಗ ಹೊಸ ಚಿಂತನೆ ಹೆಜ್ಜೆ

---

೧೬೯ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦. ಪು: ೬೧೬–೬೧೭

೧೭೦ ಅದೇ, ಪು: ೭೧೧–೭೧೨.

ಪ್ರಯಾಸಕರವಾಗಿದ್ದೇ ಆಗಿರುತ್ತದೆ. ಎಲ್ಲಾ ಮುನ್ನೆಚ್ಚರಿಕೆಯಿಂದ, ಪೂರ್ವತಯಾರಿಯಿಂದ ದೃಢತೆಯಿಂದ ಮಂಜ ಗುಡಿಯನ್ನು ಪ್ರವೇಶಿಸುತ್ತಾನೆ. ಮಂಜ ಹೆದರದೆ ಇಟ್ಟ ಆ ಹೆಜ್ಜೆ ಮೊದಲನೆಯದೂ ಅಲ್ಲ ಕೊನೆಯದೂ ಆಗಿರಲಿಲ್ಲ. ಧಾರ್ಮಿಕ ನಿಷೇಧಮೀರುವ ಪ್ರಯತ್ನ ಮತ್ತು ಪ್ರತಿರೋಧ ಸಾಮಾಜಿಕ ಸಂದರ್ಭದಲ್ಲಿ ಮಹತ್ವದ್ದೇ ಆದರೂ ಯಾರಿಂದಲೂ ಬೆಂಬಲ ಸಿಗುವುದಿಲ್ಲ. ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳು ಮತ್ತು ದಲಿತರ ಮೇಲೆ ಸಮಾನ ಧಾರ್ಮಿಕ ದೌರ್ಜನ್ಯಗಳು ನಡೆಯುತ್ತವೆ. ಕೆಲವು ದೇವಾಲಯಗಳಲ್ಲಿ ಪ್ರವೇಶ ಇಲ್ಲವಾದರೆ, ಸರ್ವತ್ರ ಎಲ್ಲ ದೇವಾಲಯಗಳಲ್ಲಿ ಇವರಿಗೆ ಪ್ರವೇಶ ನಿಷೇಧವಿದೆ. ಅದನ್ನು ಪ್ರಶ್ನಿಸುವ ಪ್ರತಿಯೊಂದು ಪ್ರಯತ್ನವೂ ಚರಿತ್ರಾರ್ಹವೇ. ಆದ್ದರಿಂದಲೇ ಗಾಂಧೀಜಿ, ಅಂಬೇಡ್ಕರ್, ನಂಬೂದರಿಪಾದ್, ವಿವೇಕಾನಂದರ ಕಾಳಜಿಗಳು ಅಷ್ಟು ಪ್ರಾಮುಖ್ಯ ಪಡೆದಿವೆ.

“ಇದೇನು ಮಹಾ! ದೇಶದಲ್ಲಿ ಅಲ್ಲೊಂದು ಇಲ್ಲೊಂದು ದೇವಾಲಯ ಪ್ರವೇಶ ಪ್ರಯತ್ನ ನಡೆದುಬಿಟ್ಟರೆ ದೇಶ ಉದ್ಧಾರ ಆಗಿಬಿಡುತ್ತದೆಯೆ? ಮಹಿಳೆಯರು, ದಲಿತರು ದೇವಾಲಯ ಪ್ರವೇಶಮಾಡಿಬಿಟ್ಟರೆ ಅವರ ಜೀವನ ಉದ್ಧಾರ ಆಗಿಬಿಡುತ್ತದೆಯೇ? ಅದರಿಂದ ಹಣೆಬರಹ ಬದಲಾಗಿಬಿಡುತ್ತದೆಯೇ? ಒಂದು ದಿನ ದೇವಸ್ಥಾನಕ್ಕೆ ಬಂದ ಮಾತ್ರಕ್ಕೆ ಮುಂದೆ ಸುಲಭವಾಗಿ ಬರಲಾಗುತ್ತದೆಯೇ? ಹಿಂದಿನಿಂದ ಬಂದಿದ್ದನ್ನು ಮೀರಿದರೆ ಅವರಿಗೆ ಒಳ್ಳೆಯದಾಗುತ್ತದೆಯೇ? ಇಂತಹ ಮಾತುಗಳು ಎಲ್ಲಾ ಕಾಲದಲ್ಲೂ ಇದ್ದೇ ಇರುತ್ತವೆ”.[೧೭೧] ದಲಿತರು ಮತ್ತು ಹೆಣ್ಣು ಮಕ್ಕಳು ನಿರ್ಬಂಧಮೀರಿ ಗುಡಿ ಪ್ರವೇಶಿಸಿದರೂ ನಂಬದಿರುವುದೇ ಹಲವು ಸಂದರ್ಭಗಳಲ್ಲಿ ಹೆಚ್ಚಾಗಿರುವಾಗ ಮೇಲಿನ ಅವರ ಅಭಿಪ್ರಾಯ ಕತೆಗೆ ಪೂರಕವಾಗಿದೆಯೆನ್ನಬಹುದು.

ಮಂಜನ ದಿಟ್ಟ ಹೆಜ್ಜೆಗೆ ಮೇಲ್ವರ್ಗದ ಕುಮ್ಮಕ್ಕಿನಿಂದ ಮುಸುಕುಧಾರಿಗಳು ಮಂಜನ ಕಣ್ಣಿಗೆ ಆಸಿಡ್ ಹಾಕಿ ಕಣ್ಣನ್ನು ಕುರುಡಾಗಿಸುತ್ತಾರೆ. ಧರ್ಮದ ಕಣ್ಣು ಕುರುಡಾಗಿಬಿಡುತ್ತದೆ. ಮಂಜ ಆಸಿಡ್ ಹಾಕಿದ್ದು ಎಂದರೆ ಅನಕ್ಷರಸ್ಥರಿಂದ ಉನ್ನತಾಧಿಕಾರಿಗಳವರೆಗೆ ಯಾರೂ ನಂಬುವುದಿಲ್ಲ, ಸ್ಪಂದಿಸುವುದಿಲ್ಲ. ಆದರೂ ಸಮಾಜದ ಮೌಢ್ಯತೆಯ ಕಳಚಲು ಮಂಜನಂತಹವರು ಪ್ರಯತ್ನಿಸುತ್ತಲೇ ಇರುತ್ತಾರೆ. ಕಡಿವಾಣ, ನಿಷೇಧಗಳ ಬೇಲಿ ಕಿತ್ತೊಗೆಯುವ ಒಂದೊಂದು ಪ್ರಯತ್ನಕ್ಕೂ ಮೌಲ್ಯ ಬಂದೇ ಬರುತ್ತದೆ ಎನ್ನುವುದು ಲೇಖಕರ ಆಶಯವಾಗಿ ಕಾಣುತ್ತದೆ.

---

೧೭೧ ಆರ್. ಪೂರ್ಣಿಮಾ, ಪ್ರಜಾವಾಣಿ, ೨೬.೦೪.೨೦೧೬, ಪು : ೬.

ಕುಂ.ವೀರಭದ್ರಪ್ಪ ಅವರ 'ದೇವರ ತಳ ಸಡಿಲಿಸಿದಾಗ' ಕತೆಯಲ್ಲಿ ಹೊನ್ನೂರ ಎಂಬ ವ್ಯಕ್ತಿ ಹಿಡಿ ಅನ್ನಕ್ಕೆ ಪರದಾಡುತ್ತಿದ್ದವನು ದೈವತ್ವಕ್ಕೇರಿ ಹೊನ್ನೂರಸ್ವಾಮಿಯಾಗಿ ಬಿಡುತ್ತಾನೆ. ಮುಗ್ಧ ಮತ್ತು ಅಮಾಯಕ ಜನರನ್ನು ಶೋಷಿಸುವ ಗುಂಪಿನಲ್ಲಿ ಒಬ್ಬನಾಗಿ ಬಿಟ್ಟಾಗ ನಿರೂಪಕರು ಅವನ ಬಣ್ಣ ಬಯಲು ಮಾಡಲು ನಿರ್ಧರಿಸುತ್ತಾರೆ. ಹೊನ್ನೂರ ನಂತಹವರು ಧರ್ಮ ಮತ್ತು ಸಂಸ್ಕೃತಿಯ ಲೇಪನದಲ್ಲಿ ಜನರಲ್ಲಿ ಮೌಢ್ಯವನ್ನು ಬಿತ್ತಿ ಪಸಲು ತೆಗೆಯುವ ಚಾಲಾಕಿಗಳಾಗಿದ್ದಾರೆ. ಹೊನ್ನೂರನ ಹುಸಿ ಧಾರ್ಮಿಕತೆಯನ್ನು ಪರೀಕ್ಷೆಗೆ ಒಡ್ಡಲು ಬಾಳೆಹಣ್ಣಿನೊಂದಿಗೆ ಬೇಧಿ ಮಾತ್ರೆ ಸೇರಿಸಿ ತಿನ್ನುವಂತೆ ಮಾಡುತ್ತಾರೆ. ಅವನ ಬಣ್ಣ ಬಯಲಾಗುತ್ತದೆ. ಇಂತಹವರು ಜನರಲ್ಲಿರುವ ಭಕ್ತಿ, ಶ್ರದ್ಧೆಗಳನ್ನು ದುರುಪಯೋಗಪಡಿಸಿಕೊಂಡು, ಕಂದಾಚಾರಕ್ಕೆ ಪ್ರೋತ್ಸಾಹನೀಡುತ್ತಾ ಜನರನ್ನು ಅಂಧಕಾರದಲ್ಲುಳಿಸಲು ಪ್ರಯತ್ನಿಸುತ್ತಾರೆ.

ಮೂಢನಂಬಿಕೆ, ದೇವರು, ಧರ್ಮದ ವಿರುದ್ಧ ಅಲ್ಲ, ಜನರನ್ನು ವಂಚಿಸುವರ ವಿರುದ್ಧ ಪ್ರತಿಭಟನೆ ಎನ್ನಲಾಗುತ್ತದೆ. ಮೂಢನಂಬಿಕೆಗೆ ಸಾಕ್ಷ್ಯವೂ ಇಲ್ಲ, ಪುರಾವೆಯೂ ಇರುವುದಿಲ್ಲ. ಸತ್ಯವನ್ನು ಶೋಧಿಸುವ ಪ್ರಯತ್ನ ನಿರೂಪಕರದಾಗುತ್ತದೆ.

ರಾಮಣ್ಣನವರ 'ಕರೆ' ನಂಬಿಕೆ ಮತ್ತು ಆಚರಣೆಯು ಸಂಸ್ಕೃತಿ ಅಂಶವಾಗಿರುವ ಬಗೆಯನ್ನು ಚಿತ್ರಿಸಿದೆ. ಸತ್ತ ವ್ಯಕ್ತಿಗಳನ್ನು ಸ್ಮರಿಸಿ ಅವರಿಗೆ ಪ್ರಿಯವಾದ ಆಹಾರವನ್ನು ಎಡೆಯಿಟ್ಟು ಪೂಜೆಮಾಡುತ್ತಾರೆ. ಅವರ ಆತ್ಮ ಬಂದು ಊಟಮಾಡುತ್ತದೆ ಎಂಬುದು ಒಂದು ನಂಬಿಕೆ. ಹಿರಿಯರ ಪೂಜೆಯ ಹಬ್ಬಕ್ಕೆ ಆ ಕುಟುಂಬದವರೆಲ್ಲರೂ ಕಡ್ಡಾಯವಾಗಿ ಬರುವ ನಿಯಮವಿದ್ದರೂ ದಾಸೇಗೌಡರಿಗೆ ಮಗ ಆಸ್ತಿಹಂಚಿಕೆಯ ಅಸಮಾಧಾನದಿಂದ ಬರುವುದಿಲ್ಲವೆಂದಾಗ ದಾಸೇಗೌಡರು ಧರ್ಮಸಂಕಟಕ್ಕೆ ಸಿಲುಕಿಕೊಳ್ಳುತ್ತಾರೆ. ಸತ್ತ ತಾಯಿಯ ಪೂಜೆಗೂ, ಆಸ್ತಿಗೂ ಸಂಬಂಧಕಲ್ಪಿಸಿದ ಮಗನ ನಡವಳಿಕೆ ಬೇಸರ ತರಿಸಿದರೂ ಹಬ್ಬದ ಆಚರಣೆ ಬಿಡದಿರಲು ಕಾರಣ ನಂಬಿಕೆ. ಧಾರ್ಮಿಕ ನಂಬಿಕೆಯ ನೆಲೆಯಲ್ಲಿ ಹಬ್ಬ ಹರಿದಿನದ ಸೌಹಾರ್ದದ ಭಾವಬಿಂಬಗಳನ್ನು ಸಹಜವಾಗಿ ಹೇಳುವ ರಾಮಣ್ಣ 'ಮಹಾನವಮಿ' ಮತ್ತು 'ಕರೆ' ಕತೆಗಳಲ್ಲಿ ಸಂಬಂಧಗಳಿಗೆ ಬೆಸುಗೆ ಹಾಕುವ ಪ್ರಯತ್ನದಲ್ಲೇ ತೊಡಗುತ್ತಾರೆ. ದಾಸೇಗೌಡರು ಮಗ, ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಬಂದಾಗ ಅವರೊಂದಿಗಿನ ನವಿರುಹಾಸ್ಯದಲ್ಲಿ ತಮ್ಮ ಹೆಂಡತಿಯ ಅಗಲಿಕೆಯ ದುಗುಡವನ್ನು ಕಡಿಮೆಮಾಡಿಕೊಂಡರು. ಬದುಕಿನ ನಶ್ವರತೆ, ಅಧ್ಯಾತ್ಮಿಕತೆ ಕಡೆಗೆ ದಾಸೇಗೌಡರ ಮನಸ್ಸು ವಾಲತೊಡಗುತ್ತದೆ.

ಕುಂ.ವೀರಭದ್ರಪ್ಪ ಅವರ 'ಭಗವತಿ ಕಾಡು' ಕತೆಯಲ್ಲಿ ಸೊಸೆ ನಾಗಕ್ಕ ಅಕ್ಷರ ಕಲಿತವಳು. ಬೌದ್ಧಿಕವಾಗಿ ಗಂಡ-ಹೆಂಡತಿ ತಮ್ಮ ಸಮುದಾಯದ ಬಂಧುಗಳಿಗಿಂತ ಭಿನ್ನವಾಗಿದ್ದರು. ನಾಗಮ್ಮಳದು ಊರಿನ ಬಗ್ಗೆ ಪ್ರಜ್ಞಾವಂತ ಗ್ರಹಿಕೆಯಾಗಿದ್ದು ಬದುಕನ್ನು ಎಚ್ಚರಿಕೆಯಿಂದ ನೋಡುತ್ತಿದ್ದಳು. ಅತ್ತೆ-ಸೊಸೆ ಬೇವಿನಮರವನ್ನು ತಮ್ಮ ಮನೆಯ ದೈವವೆಂದೇ ಪರಿಭಾವಿಸಿದ್ದರು. ಬೇವಿನಮರ ಮಾರಲು ಭರಮ್ಯಾ ಮುಂಗಡ ಹಣಪಡೆದ ವಿಚಾರ ತಿಳಿದು ಅತ್ತೆ-ಸೊಸೆ ಒಟ್ಟಾಗುತ್ತಾರೆ.

ಸೆವುಡವ್ವ 'ಪೋಲೀಸಪ್ಪ... ನೀನಿಡ್ಕಂಡಿರೋ ಕೋಲಿಗಾಗ್ಲಿ... ನೀ ತೊಟ್ಕಂಡಿರೋ ದಿರಿಸಿಗಾಗ್ಲೀ ಯದ್ರೋಳಲ್ಲ ಈ ಸೆವುಡಿ... ಮರಕಡ್ಸೋ ನಿನ್ ಕಾನೂನ್ಗೆ ಬೆಂಕಿ ಬೂಳ್ಲಿ... ನಿಂ ಕೈಯಲ್ಲಿ ಸೇದಿವಾಗ್ಲಿ... ಎಂದು ವ್ಯವಸ್ಥೆಗೆ ಸಡ್ಡು ಹೊಡೆದು ನಿಲ್ಲುತ್ತಾಳೆ.

ನಾಗವ್ವ ಮರ ಉಳಿಸಲು ಕಡೆಗೆ ದೇವರು ಮೈಮೇಲೆ ಬಂದ ಹಾಗೆ ವರ್ತಿಸುತ್ತಾಳೆ. ಪರಸ್ಪರ ಜಗಳವಾಡುತ್ತಿದ್ದ ಸೆವುಡವ್ವ ಮತ್ತು ನಾಗಕ್ಕ ಒಂದಾಗಿದ್ದೆ ತಮ್ಮ ಅಸ್ತಿತ್ವವಾದ ಬೇವಿನ ಮರ ಉಳಿಸಲು ಮತ್ತು ಅದಕ್ಕಾಗಿ ಯಾರನ್ನೇ ಆದರೂ ಎದುರಿಸಲು ಟೊಂಕಕಟ್ಟಿನಿಂತಾಗ ಗೌಡ ಮತ್ತು ಪೋಲಿಸರು ಅಂಜಬೇಕಾಗುತ್ತದೆ. ಜನರಲ್ಲಿ ಇರುವ ಧಾರ್ಮಿಕನಂಬಿಕೆಯನ್ನು ಅಸ್ತ್ರವನ್ನಾಗಿ ನಾಗಕ್ಕ ಬಳಸಿಕೊಳ್ಳುವುದು ಪರಂಪರೆಯ ಭಾಗವಾದ ದೈವಿಕವಾದ ಬೇವಿನ ಮರ ಉಳಿಸಲು ಎನ್ನಬಹುದು.

ಹುಲಿಗೆವ್ವ ಮಾಂತ್ರಿಕ ಶೈಲಿಯಲ್ಲಿ ಮಾತನಾಡುತ್ತಾ ಒಂದು ಹಿಡಿ ಕುಂಕುಮ ತೆಗೆದು ನಾಗವ್ವನ ಮುಖದ ಮೇಲೆ ಸುರಿದಳು.. ಸುರಿಯುತ್ತಾ ರಕ್ತದಲ್ಲಿ ಅದ್ದಿ ತೆಗೆದಂತೆ ಕಂಡಿತು ಆಕೆಯ ಮೊಗ... ಪ್ರಪಂಚವನ್ನೆಲ್ಲ ಅಪೋಶನ ತೆಗೆದುಕೊಳ್ಳಲಿರುವಳಂತೆ ಕಣ್ಣು ತೆರೆದು ಎಚ್ಚರವಾದಳು ನಾಗವ್ವ... ಮುಗಿಲಮುಟ ನಿಲ್ಲುವವಳಂತೆ... ನೆಲವನ್ನು ಪಾತಾಳಕ್ಕೆ ತಳ್ಳುವವಳಂತೆ ಆಕೆ ನಿಂತೇಟಿಗೆ ಜನ ಎಂಭೋಜನ ನಾಗವ್ವನ ಮೈಯಾಗ ಅವ್ವ ವಕ್ಕಂಡವಳೇ... ಎಂದು ಹರ್ಷೋದ್ಗಾರ ಮಾಡಿದರು...ತಲೆಯನ್ನೂ ಅತ್ತ ಇತ್ತ ವೇಗವಾಗಿ ತಿರುಗಿಸುತ್ತ ನಾಗವ್ವ ಬಾಗಿಲಕಡೆ ಹೆಜ್ಜೆ ಇಡಲು ಹುಲಿಗೆವ್ವ ಚವುಡಿಕೆ ಹರಿದು ಹೋಗುವಂತೆ ನುಡಿಸತೊಡಗಿದಳು".

ಗೌಡ ಮೊದಲು ನಂಬದಿದ್ದರೂ ನಾಗಕ್ಕ ಹಚ್ಚಿದ ಕರ್ಪೂರವನ್ನು ಬಾಯಲ್ಲಿಟ್ಟು ಕೊಂಡಾಗ ಧೋತರ ಒದ್ದೆ ಮಾಡಿಕೊಂಡು ಯವ್ವೇ ತಾಯಿ ಎಂದು ನಾಗಕ್ಕನಕಾಲಿಗೆ ಬಿದ್ದನು. ಪೀಸಿ, ಗಂಡನನ್ನು ಅಟ್ಟಾಡಿಸಿಕೊಂಡು ಹೋದದ್ದು ನಾಟಕೀಯ ತಿರುವೆನ್ನಿಸಿದರೂ ಪ್ರಕೃತಿ-

ಪರಂಪರೆ ಉಳಿಸಲು ಹೆಣ್ಣಿಗೆ ಅನಿವಾರ್ಯ ದಾರಿಯೆನ್ನಿಸುತ್ತದೆ. ಜೀವನ ಶ್ರದ್ಧೆಗಾಗಿ ಧಾರ್ಮಿಕ ನಂಬುಗೆ ಬಳಸಿದ್ದನ್ನು ಲೇಖಕರು ಸಮರ್ಥಿಸುತ್ತಾರೆನ್ನಿಸುತ್ತದೆ.

ಜಾತಿ ಭಾರತದಲ್ಲಿ ವಾಸ್ತವದ ವಿಚಾರ. ಧರ್ಮ, ಜಾತಿ, ವರ್ಗ, ವರ್ಣ, ಅಸ್ಪೃಶ್ಯತೆ, ಮೌಢ್ಯತೆ, ಭಕ್ತಿ, ಶ್ರದ್ಧೆಗಳಿಗೆಲ್ಲವೂ ಅಂತರ್ಗತ ಸಂಬಂಧ ಹೊಂದಿವೆ. ಆದರೆ ಮನುಷ್ಯ ಸಂಬಂಧಗಳು ಯಾವಾಗಲೂ ವೈಯಕ್ತಿಕವಾದದ್ದು. ಅವು ಎಲ್ಲಿಯೂ ಅಸುರಕ್ಷಿತ ಅತಂತ್ರ ಎನ್ನುವಂತಾಗಬಾರದೆಂಬುದು ಚಿಂತಕರ ಅಭಿಪ್ರಾಯವಾಗಿದೆ. ಎಲ್ಲ ಧರ್ಮದ ಅನುಯಾಯಿಗಳಲ್ಲಿ ಆಯಾ ದೇವರ ಹೆಸರಿನಲ್ಲಿ ಆಚರಣೆಗೆ ಬಂದಿರುವ ಅದರಲ್ಲಿಯೂ ಜೀವವಿರೋಧಿ, ಮಾನವೀಯತೆ, ವ್ಯಕ್ತಿಯ ಘನತೆಗೆ, ಗೌರವಕ್ಕೆ ಮಾರಕವಾದ ಆಚರಣೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಭಂಗತರುತ್ತವೆ. ದೇವರು, ಧರ್ಮದ ಗುಮ್ಮನನ್ನು ಕೂಡಿಸಿ ಜನರಲ್ಲಿ ಭಯ, ಆತಂಕ, ಮೌಢ್ಯವನ್ನು ಹುಟ್ಟಿಸಿ ಅದರ ನೆರವಿನಿಂದ ಆರ್ಥಿಕ, ದೈಹಿಕ, ಲೈಂಗಿಕ, ಮಾನಸಿಕ ಶೋಷಣೆ ನಿಲ್ಲಬೇಕೆಂಬುದು ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳ ಆಶಯವಾಗಿದೆ. ಧರ್ಮ, ಜಾತಿ, ಅಸ್ಪೃಶ್ಯತೆ, ಮೌಢ್ಯತೆಗಳಿಲ್ಲದ ಸಮ ಸಮಾಜದ ಅಸ್ತಿತ್ವವಾಗಬೇಕು. ಎಲ್ಲರ ಬದುಕು ಘನತೆ ಗೌರವದಿಂದ ಕೂಡಿರಬೇಕು ಎಂಬ ಮೌಲಿಕವಾದ ಆಶಯವನ್ನು ಕಥೆಗಳು ವ್ಯಕ್ತಪಡಿಸುತ್ತವೆ.

೫.೫ ಭಾಷಿಕನೆಲೆ

ಅಮೂರ್ತವಾದ ಅನೇಕಭಾವ, ಭಾವನೆಗಳಿಗೆ ರೂಪ ಕೊಡಬಲ್ಲ ಭಾಷೆ ಜನಜೀವನದ ನಾಡಿಯೆನ್ನಿಸಿದೆ. ಭಾಷೆ ಮನುಷ್ಯ ಸಮಾಜದಲ್ಲಿ ಬದುಕಲು ಇರುವ ಒಂದು ಸಾಧನ. ಮಾನವನ ಅಂತರಂಗದ ಅಭಿವ್ಯಕ್ತಿಯೆನಿಸಿದ ಭಾಷೆ ಮನುಷ್ಯನ ಸಂವೇದನೆಗಳನ್ನು ಸಾಧ್ಯವಾದ ಮಟ್ಟಿಗೆ ಹೊರಹಾಕಬಲ್ಲದು. ಮಾನವ ಸಂಸ್ಕೃತಿ, ನಾಗರೀಕತೆಯ ಚಹರೆಯನ್ನು ಭಾಷೆ ಉಳಿಸಬಲ್ಲದು. ಭಾರತೀಯ ಭಾಷೆಯಲ್ಲಿ ಅತ್ಯಂತಸಮೃದ್ಧವಾದ ಸಾಹಿತ್ಯವನ್ನು ಹೊಂದಿರುವ ಭಾಷೆ ಕನ್ನಡವಾಗಿದ್ದು ಭಾಷೆಗಳ ಕೊಡು-ಕೊಳ್ಳು ಸಂಬಂಧ ಅದರ ಸಮೃದ್ಧಿಗೆ ಕಾರಣವಾಗಿದೆ.

ಇಂದು ಹಿಂದಿ-ಇಂಗ್ಲೀಷ್ ಭಾಷೆಗಳ ಅಬ್ಬರದಲ್ಲಿ ಕನ್ನಡ ಮತ್ತು ಇತರೆ ಪ್ರಾದೇಶಿಕ ಭಾಷೆಗಳು ಕಣ್ಮರೆಯಾಗುವ ಸೂಚನೆ ಆತಂಕಮೂಡಿಸುತ್ತದೆ. ಭಾಷೆ ಮಾನವನ ಭಾವಕ್ಕೆ, ಅಗತ್ಯಕ್ಕೆ, ಅನಿವಾರ್ಯತೆಗೆ ತಕ್ಕಂತೆ ಬಳಕೆಯಾಗುವ ಅದ್ಭುತಸಾಧನವೆನಿಸಿದೆ. ಸಂಬಂಧ, ಸಹಬಾಳ್ವೆ, ಸೌಹಾರ್ದದ ಪಾಠವನ್ನು ಭಾಷೆ ಹೇಳಿಕೊಡುತ್ತದೆ. ಇಂದು ಮಾತು ಮತ್ತು ಬರವಣಿಗೆ ತಮ್ಮ ಶಕ್ತಿಯನ್ನು ವೃದ್ಧಿಸಿಕೊಂಡು ಭಾಷಿಕನೆಲೆಯನ್ನು ವಿಸ್ತಾರಗೊಳಿಸಿದೆ.

ಬಹುಭಾಷೆ, ಬಹುಸಂಸ್ಕೃತಿಯನ್ನು ಉಸಿರಾಡುವ ನಮ್ಮ ದೇಶದಲ್ಲಿ ಗ್ರಾಮೀಣ ಭಾಷೆಯ ಸೊಗಡನ್ನು ಉಳಿಸಿಕೊಳ್ಳಬೇಕಾಗಿದೆ. ಸಾಹಿತ್ಯ ಭಾಷೆಯ ಶಕ್ತಿಯನ್ನು ಬೆಳೆಸುತ್ತಿದ್ದರೆ ಗ್ರಾಮೀಣ ಭಾಷೆಯನ್ನು ಬಳಸಿದ ಕತೆಗಳು ಗ್ರಾಮ್ಯ ಭಾಷೆಯನ್ನು ಉಳಿಸುವ ಪ್ರಯತ್ನದಲ್ಲಿದೆ ಎನ್ನಬಹುದು.

ಗಾಂಧಿವಾದಿ ಪ್ರಸನ್ನ ಅವರು ಹೇಳುವಂತೆ **"ಇಂದು ಭಾಷೆ ಕಸವಾಗುತ್ತಿದೆ"**[೧೭೨] ಎನ್ನುವಾಗ ಗ್ರಾಮೀಣಭಾಷೆಯನ್ನು ಬಳಸುವುದು ಕೇಳುವುದು ದುರ್ಲಭವೆನಿಸಿದೆ. ಪ್ರಾದೇಶಿಕ ಭಾಷೆ ಸೀಮಿತ ಚೌಕಟ್ಟನ್ನು ಮೀರುವುದಿಲ್ಲವಾದರೂ ಅನುಭವದ ಆಳದಿಂದ ಬಂದ ಮಾತುಗಳು ಸತ್ವಪೂರ್ಣವಾಗಿರುತ್ತವೆ. ಇಂದು ಗ್ರಾಮ್ಯ ಭಾಷೆ ಭಾಷೆಯೊಂದಿಗಿದ್ದರೂ 'ನಿಮ್ಮೊಡನಿದ್ದೂ ನಿಮ್ಮಂತಾಗದ' ಸಂಬಂಧವಾಗಿಬಿಟ್ಟಿದೆ.

ಭಾಷೆ ಎನ್ನುವುದೇ ಮೌಲ್ಯ. ಭಾಷೆ ಕಲಿತಿದ್ದೇ ಒಂದು ಮೌಲ್ಯವಾಗಿದೆ. ಈ ಸಂವಹನ ಮೌಲ್ಯ ಪ್ರಾಣಿಪಕ್ಷಿಗಳಲ್ಲೂ ಇದ್ದು ಶಬ್ದಕ್ಕೆ, ಧ್ವನಿಗೆ, ಭಾಷೆಗೆ ಅರ್ಥವಿದೆ. ಮನುಷ್ಯ ಭಾಷೆಗೆ ಸಾಮಾಜಿಕ ಮೌಲ್ಯವಿದ್ದು, ಭಾಷೆಯನ್ನು ಶಿಷ್ಟ ಮತ್ತು ಜನಪದದಲ್ಲಿ ಬಳಕೆಯಾಗುತ್ತಿದ್ದರೂ ಆಡುನುಡಿ ಎಂಬುದು ಮನುಷ್ಯನ ಭಾವನೆಗಳನ್ನು ಹಂಚಿಕೊಳ್ಳುವ ಸೆಲೆಯಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಭಾಷೆ ಯಾವುದೇ ಚೌಕಟ್ಟಿಗೆ ನಿಲುಕದೆ ಬಳಸಲ್ಪಡುತ್ತದೆ. ಅಲ್ಲಿ ಬಳಕೆಯಾದ ಗಾದೆ, ಒಗಟು, ಬೈಗುಳಗಳು ಶಿಷ್ಟತೆಯ ಪರಿಧಿಯನ್ನು ಮೀರಿ ಬಳಸಲ್ಪಡುತ್ತವೆ.

ಹಿಂದೆ ಜನಪದರ ಈ ಭಾಷಿಕ ನೆಲೆಗಳು ತಿರಸ್ಕಾರಕ್ಕೆ ಗುರಿಯಾಗಿದ್ದವು. ಇಂದು ಅವುಗಳ ಅಧ್ಯಯನಗಳು ನಡೆದು ಅವುಗಳಿಗೂ ಕೂಡ ಮೌಲ್ಯದೊರಕಿರುವುದನ್ನು ಕಾಣುತ್ತೇವೆ. ಇಂದು ಗ್ರಾಮೀಣರ ಬೈಗುಳ, ಗಾದೆ, ಒಗಟುಗಳು ಭಾಷೆಯ ಸಾಮರ್ಥ್ಯವನ್ನು ತಿಳಿಸಬಲ್ಲವಾಗಿವೆ. ಕತೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರದಲ್ಲಿ ಹಳ್ಳಿಯ ಗ್ರಾಮೀಣ ಸೊಗಡಿನ ಮಾತುಗಳು ಮಹತ್ವದ ಸ್ಥಾನವನ್ನು ಗಳಿಸಿದ್ದು ಕನ್ನಡ ಭಾಷೆಯ ಮೌಲ್ಯವೆನ್ನಬಹುದು. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪನವರ ಕಥಾಸಾಹಿತ್ಯದಲ್ಲಿ ಬಳಕೆ ಆಗಿರುವ ಭಾಷೆ ಅವರ ಬರವಣಿಗೆಯನ್ನು ಗಟ್ಟಿಗೊಳಿಸಿ ಕಥಾಸಾಹಿತ್ಯಕ್ಕೆ ಮೌಲ್ಯವನ್ನು ಒದಗಿಸಿವೆ. ಇಂತಹ ಮೌಲ್ಯಯುತವಾದ ಭಾಷೆಯ ನೆಲೆಯನ್ನು ವಸ್ತುನಿಷ್ಠವಾಗಿ ಅವಲೋಕಿಸಬಹುದು. ಪ್ರಾದೇಶಿಕ ಭಾಷೆ ಆಯಾ ನೆಲದ ಗುಣ, ಸ್ವಭಾವ ಸೊಗಡನ್ನು ಪರಿಚಯಿಸಬಲ್ಲದು. ಹಿಂದೆ ದೇವವಾಣಿಯೆನಿಸಿದ್ದ ಸಂಸ್ಕೃತ ಜನಸಾಮಾನ್ಯರನ್ನು

---

೧೭೨ ಪ್ರಸನ್ನ, ಪ್ರಜಾವಾಣಿ, ೨೩.೧೧.೨೦೧೭, ಪು:೬.

ಹತೋಟಿಯಲ್ಲಿಟ್ಟುಕೊಂಡಿದ್ದರೆ ಇಂದು ಇಂಗ್ಲೀಷ್ ಅದೇ ದಾರಿಯಲ್ಲಿದೆ. ಭಾಷೆಯಲ್ಲಿನ ಭಾವನಾತ್ಮಕ ಸತ್ಯಗಳಲ್ಲಿ ಪ್ರಾದೇಶಿಕ ಭಾಷೆ ಆಂತರಿಕ ಜಗತ್ತಿಗೆ ಸೇರಿದ್ದಾಗಿದೆ. ಗ್ರಾಮೀಣ ಭಾಷೆಯಲ್ಲಿ ಸ್ವಂತಿಕೆ ಎದ್ದು ಕಾಣುತ್ತದೆಯಲ್ಲದೆ ಬದುಕಿನ ನೋಟವೂ ಒಳಗೊಂಡಿರುತ್ತದೆ. ಗ್ರಾಮ್ಯ ಭಾಷೆಯ ಜಾಯಮಾನ ಮನುಷ್ಯನ ಸಹಜ ಪ್ರವೃತ್ತಿಯೇ ಆಗಿರುತ್ತದೆ. ಹಳ್ಳಿಗಾಡಿನ ಜನ ತಮ್ಮ ಹುಟ್ಟಿದ ಪ್ರದೇಶದ ಬಗ್ಗೆ ಭಾವನಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ. ಗ್ರಾಮೀಣತನ, ಗ್ರಾಮೀಣಭಾಷೆ ಇಂದಿನ ಸ್ಪರ್ಧೆಯಲ್ಲಿ ಉಳಿಯಬೇಕೇ ಹೊರತು ನಾಶವಾಗಬಾರದು. ವಿಶಿಷ್ಟ ಅಭಿವ್ಯಕ್ತಿಯಾಗಿರುವ ದೇಸಿಯ ಭಾಷೆ ಪ್ರದೇಶ ಮತ್ತು ಭಾಷೆಯನ್ನು ಒಟ್ಟಿಗೆ ಸೂಚಿಸುತ್ತದೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಿಗೆ ಶಕ್ತಿಬಂದಿರುವುದು ಗ್ರಾಮ್ಯಭಾಷೆಯ ಸೊಗಡಿನ ಬನಿಯಿದೆನ್ನಬಹುದು. ಅವರ ಕತೆಗಳಲ್ಲಿ ಭಾಷೆಯ ಸಮಸ್ತ ಶಕ್ತಿಯನ್ನು ಬಳಸಿರುವುದು ಕತೆಯ ಸತ್ವವಾಗಿದೆ. ಗ್ರಾಮೀಣ ಜನರ ಒತ್ತಡ ಅವರಲ್ಲಿನ ಪ್ರತಿಭಟನಾ ಮನೋಭಾವ, ಉದ್ವೇಗ, ಉಮ್ಮಳ ಭಾಷೆಯಲ್ಲಿ ಸಶಕ್ತವಾಗಿ ಮೂಡಿಬಂದಿದೆ.

ಗ್ರಾಮ್ಯಭಾಷೆಯ ಸೌಂದರ್ಯ, ಸುಖದ ಅನುಭವವನ್ನು ಇಂದಿನ ತಲೆಮಾರಿಗೆ ತಲುಪಿಸುವ ಕೆಲಸವನ್ನು ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕತೆಗಳು ಪರಿಣಾಮಕಾರಿಯಾಗಿ ನಿರ್ವಹಿಸುತ್ತವೆನ್ನಬಹುದು. ಗ್ರಾಮ್ಯಭಾಷೆ ಮೂಲಭಾಷೆಯನ್ನು ಸಮೃದ್ಧಗೊಳಿಸಬಲ್ಲದು. ರಾಮಣ್ಣ ನೆಲದ ಭಾಷೆಯನ್ನು ಬದುಕಿನುದ್ದಕ್ಕೂ ಉಸಿರಾಡಿದರೆ ಕುಂ.ವೀರಭದ್ರಪ್ಪ ಕತೆಗಳು ಮೊನಚುಮಾತು ಕಟುವ್ಯಂಗ್ಯಗಳಲ್ಲಿ ನಿಷ್ಠುರಸತ್ಯದ ದರ್ಶನಮಾಡಿಸುತ್ತಾರೆ. ಗ್ರಾಮ್ಯ ಭಾಷೆ ಮರೆಯಾಗುತ್ತಿದೆಯೆಂಬ ವಿಷಾದವನ್ನು ಕತೆಗಳು ಅಳಿಸಬಲ್ಲವಾಗಿವೆ. ಇಬ್ಬರೂ ಕತೆಗಾರರ ಕತೆಗಳು ಭಾಷೆಯ ಸಮರ್ಥಬಳಕೆಯಿಂದ ಹೆಚ್ಚು ಸತ್ವಯುತವಾಗಿದ್ದು ಅವರ ಸಾಹಿತ್ಯದ ಮೌಲ್ಯವನ್ನು ಇಮ್ಮಡಿಯಾಗಿಸಿವೆ.

ರಾಮಣ್ಣ ಅವರು ಮಂಡ್ಯದ ಗ್ರಾಮೀಣ ಭಾಷೆಯ ಮೂಲಕ ಸಮಸ್ತ ಭಾರತದ ಹಳ್ಳಿಗಾಡಿನ ಬದುಕಿನೋಟವನ್ನು ಕಾಣಿಸುತ್ತಾರೆ. ಅವರ ಕತೆಯಲ್ಲಿನ ದೇಸಿಯತೆಯ ಬೇರುಗಳು ಪ್ರಾದೇಶಿಕತೆಯ ಪರಿಧಿಮೀರಿ ನಿಷ್ಠುರ ಸತ್ಯವನ್ನು ಮನಗಾಣಿಸುತ್ತವೆ. ರಾಮಣ್ಣ ಅವರ 'ದೇವರ ಹೂ' ಕತೆಯಲ್ಲಿ **"ನಿನ್ನ ನಾಲಿಗೆ ಸೇದುಹೋಗ...... ನನ್ನ ಅಳಿಯ ನಿನಗೂ ಅಳಿಯ ಅಲ್ವೆ? ಅವನ ಕಿವಿಗೂ ನಿನ್ನ ಯೋಗ್ಯತೆ ಮುಟ್ಟಬೇಕಾಗಿತ್ತು!"**[೧೭೩]

---

೧೭೩ ಕಣಜ, ಲೋಹಿಯಾ ಪ್ರಕಾಶನ, ೨೦೧೧. ಪು: ೬೧.

ಚೆನ್ನಕ್ಕನ ಬೈಗಳದಲ್ಲಿ ಸಂಬಂಧದ ಬಗೆಗಿನ ಕಾಳಜಿ ತಮ್ಮತನ, ಹೊರಗಿನವರ ಮುಂದೆ ತನ್ನ ಹತ್ತಿರದ ಬಂಧುಗಳ ಮರ್ಯಾದೆ ಮುಕ್ಕಾಗದಂತೆ ಕಾಪಾಡುವ ಜವಾಬ್ದಾರಿ ಸಿಟ್ಟಿಗಿಂತ ಹೆಚ್ಚಾಗಿ ಕಾಣಬರುತ್ತದೆ. ಅವಳ ವಿವೇಚನಾಯುಕ್ತ ನಡವಳಿಕೆಯಿಂದಲೇ ಅಲ್ಲಿ ನಿಲ್ಲದೆ ತೋಟಕ್ಕೆ ಹೊರಡುತ್ತಾಳೆ. ಮನೆತನದ ಮರ್ಯಾದೆ ಉಳಿಸುವ, ಸಂಬಂಧಗಳು ರಾಡಿಯಾಗದಂತೆ ಕಾಪಾಡುವಲ್ಲಿ ಎಚ್ಚರಿಕೆ ವಹಿಸುತ್ತಾಳೆ. ಜಗಳದಲ್ಲೂ ಅಂತಃಕರಣ, ಸಂಬಂಧದ ಬಗೆಗೆ ಕಾಳಜಿ ಇದ್ದಾಗ ಮಾತ್ರ ಕೊಂಡಿಕಳಚದೆ ಉಳಿಯಲು ಸಾಧ್ಯವಾಗುತ್ತದೆ. ಗ್ರಾಮ್ಯ ಭಾಷೆಯ ಸೊಗಡಿನಲ್ಲಿ ಕತೆಯ ಮೌಲ್ಯ ಹೆಚ್ಚಾಗುತ್ತದೆ.

'ನೆಲದ ಒಡಲು' ಭರವಸೆ ತುಂಬಿದ ಕಥಾಸಂಕಲನ ಇದು, ಇದರ ಮುಖ್ಯ ಆಕರ್ಷಣೆ ಎಂದರೆ ನಿರೂಪಣೆಯ ಸೊಗಸು ಮತ್ತು ಭಾಷೆಯ ಬಳಕೆಯ ಸತ್ವ. ಎಲ್ಲ ಕಣ್ಣಿಗೆ ಕಟ್ಟಿದಂತೆ ಹೇಳಬಲ್ಲ ಕತೆಗಾರರು. ಗ್ರಾಮ್ಯ ಭಾಷೆಯನ್ನು ವಿದ್ಯಾವಂತರ ಭಾಷೆಯನ್ನು ಸಹಜವಾಗಿ ಪರಿಣಾಮಕಾರಿಯಾಗಿಯೂ ಬಳಸಬಲ್ಲರು."[೧೭೪] ಎಂಬ ಮಾತು ರಾಮಣ್ಣನವರ ಕಥೆಗಳ ಭಾಷೆಯ ಶೈಲಿ ಕುರಿತು ಹೇಳಿರುವುದು ಸಮಂಜಸವಾಗಿದೆ.

"ಬೆಟ್ಟ ಸೇರ್ಕೊಂಡ ಮಳೆ ಇವತ್ತು ಯಾವ ದಿಕ್ಕಿನಿಂದ ಬಂದದೋ ಕಾಣೆ ಕನೋ ದೇವರೇ!"[೧೭೫] ರುದ್ರಮ್ಮ ಕೃಷಿ ಬದುಕಿನ ಅನಿಶ್ಚತತೆ, ಪ್ರಕೃತಿಯನ್ನು ಸಹಕರಿಸುವಂತೆ ಕೇಳಿಕೊಳ್ಳುವ ಭಾವ, ಅಧೀರವಾಗಬಾರದೆಂಬ ದೃಢತೆಯೂ ಮಾತಿನಲ್ಲಿ ವ್ಯಕ್ತವಾಗುತ್ತದೆ.

"ಏನ್ಲಾ ಕೊತ್ತಿ, ಎಲ್ಲಿ ಬುಟ್ಟೆ ನಿನ್ನ ಚಾಲ, ಕಾಸೀಗೋದ್ರೂ ಇಲಿ ತಿನ್ನೋ ಬುದ್ಧಿ"[೧೭೬] ನಿಂಗಕ್ಕ ಬಳಸುವ ಜನಬಳಕೆಯ ಗಾದೆ ಬಳಸಿದಷ್ಟು ಅರ್ಥವತ್ತಾಗುತ್ತಲೇ ಇದೆ.

ರಾಮಣ್ಣ ಅವರ 'ಸ್ವಾರ್ಥ' ಕತೆಯಲ್ಲಿ 'ಊರವರಿಗೆಲ್ಲಾ ನ್ಯಾಯ ಹೇಳೋ ಕೊತ್ತಿ ತಾನೆ ಒಲೆಯ ಮೇಲೆ ಉಚ್ಚೆ ಉಯ್ಯೊಕೋತಂತೆ'.**"ಮನಸ್ಸು ಸರಿಯಿಲ್ಲದ ಮೇಲೆ ಕಾಶಿಗೋದ್ರು ಕೊತ್ತಿ ಇಲಿ ತಿನ್ನೂ ಬುದ್ಧಿ ಬುಟ್ಟಾದೆ"**[೧೭೭] ಕೊತ್ತಿಯನ್ನು ಆಡು ಮಾತಿನಲ್ಲಿ ಬಳಸುವ ಗ್ರಾಮೀಣರು ಅವರ ಕೃಷಿ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಕೊತ್ತಿಯ ಮೂಲಕ ಬದುಕಿಗೆ ನೂರು

---

೧೭೪ ಸುಧಾ ವಾರಪತ್ರಿಕೆ ಕನ್ನಂಬಾಡಿ, ೧೯೮೬. ಪು: ೪೬೨.

೧೭೫ ಕಣಜ, ಲೋಹಿಯಾ ಪ್ರಕಾಶನ, ೨೦೧೧. ಪು: ೬೧.

೧೭೬ ಅದೇ, ಪು: ೬೫.

೧೭೭ ಅದೇ, ಪು: ೧೧೧.

ಅರ್ಥಕೊಡಬಲ್ಲವರಾಗಿದ್ದಾರೆ. ನೀತಿ ಹೇಳುವ ಮುನ್ನ ತಾನು ನೀತಿವಂತನಾಗಬೇಕೆಂದು ಹೇಳುವ ಮಾತು ಮನುಷ್ಯ ಸ್ವಭಾವದ ವಿಶ್ಲೇಷಣೆಯೇ ಆಗಿದೆ.

ಕುಂ.ವೀರಭದ್ರಪ್ಪ ಅವರ 'ಭಗವತಿಕಾಡು' ಕತೆಯಲ್ಲಿ ಕೊಟ್ಟೂರಿನ ಭಾಷೆ ಆವೇಶ, ಅರ್ಭಟಗಳಿಂದ ಪ್ರಾದೇಶಿಕ ನೆಲೆಯಲ್ಲಿ ಹರಳುಗಟ್ಟುತ್ತದೆ. ಅತ್ತೆ-ಸೊಸೆಯರ ನಡುವಣ ಜಗಳ-ಹೊಂದಾಣಿಕೆ, ಅವರ ಮಾತಿನಲ್ಲಿರುವ ಸಂವೇದನೆ ಮನಸ್ಸಿನ ಆಳ ತಲುಪಬಲ್ಲದು.

ಸೆವುಡವ್ವ **"ಯ್ಯೋನಲೋ ಬಾಡ್ಯಾ...... ಯಿಲ್ಲಿ ತಂಕ ಬಂದ್ಯಾ ...... ಇವತ್ತು ಮರಾಮೂರ್ತಿ...... ನಾಳೆ ಕಟ್ಕೊಂಡ ಹೆಂಡ್ತಿ ಮಾರ್ತಿ... ಥೂ.... ನಿನ್ನ ಜನಮಕಪ್ಪು ಬೆಂಕಿ ಆಕ....ಸೊಸೆ ನಾಗವ್ವ "ಬ್ಯೇ ಮುದುಕಿ ಇಂಥೋನ ಕಟ್ಟಕೊಂಡು ಅದೆಂಗೆ ಬಾಳುವೆ ಮಾಡ್ಲಿ"**[೧೭೮]

ಕೊಟ್ಟೂರು ಸೀಮೆಯ ಭಾಷೆಯ ಸೊಗಸು ಅತ್ತೆ-ಸೊಸೆಯ ಸಂಭಾಷಣೆಯಲ್ಲಿ ಮಿಂದು ಎದ್ದಿದೆ.

ಕುಂ.ವೀರಭದ್ರಪ್ಪ ಅವರೇ ಹೇಳುವಂತೆ **"ನಮ್ಮ ಊರಿನ ಆಜುಬಾಜಿನ ಭಾಷೆ, ನಮ್ಮ ರೈತರು, ಜನ ಲೀಲಾಜಾಲವಾಗಿ ಬಳಸೀ ಬಳಸೀ ರೂಪುಗೊಂಡಿರತಕ್ಕಂಥ ಭಾಷೆ ಅದು. ಆಲನಹಳ್ಳಿ, ದೇವನೂರರ ಹೆಗ್ಗಡದೇವನಕೋಟೆಯ ಭಾಷೆಯ ಹಾಗೆ, ರಾವಬಹದ್ದೂರರ ಬಿಜಾಪುರ ಪ್ರದೇಶದ ಭಾಷೆಯ ಹಾಗೆ, ನಮ್ಮ ಬಳ್ಳಾರಿ ಪ್ರದೇಶದ ಭಾಷೆ ವಿಶಿಷ್ಟ ಸೊಗಸಿನಿಂದ, ಅಪೂರ್ವ ಚೈತನ್ಯದಿಂದ ಕೂಡಿರ್ತಕ್ಕಂಥಾದ್ದು. ಅಂಥ ಜನರ ನಡುವೆ ಹುಟ್ಟಿದ್ದು, ಅಂಥ ಭಾಷೆ ಕೇಳುತ್ತ ಬೆಳೆದದ್ದು, ಅಂಥ ಭಾಷೆಯಾಡುವರ ನಡುವೆ ಬದುಕುತ್ತಿರುವುದು ಇವೆಲ್ಲಾ ಪುಣ್ಯ ವಿಶೇಷಗಳೇ. ಗ್ರಾಮೀಣ ಪ್ರದೇಶದ ಕನ್ನಡ ಇಷ್ಟೊಂದು ಖುಷಿ ಕೊಡ್ತದೆ"...**[೧೭೯] ಎಂದು ತಮ್ಮ ನೆಲದ ಭಾಷೆಯ ಬಗ್ಗೆ ಹೇಳಿರುವ ಮಾತುಗಳು ಅಭಿಮಾನದ ಜೊತೆಗೆ ಕತೆಗೆ ಪೂರಕವೆನ್ನಬಹುದು. ಕುಂ.ವೀರಭದ್ರಪ್ಪ ಅವರು ಕೊಟ್ಟೂರಿನ ಸುತ್ತಮುತ್ತಲಿನ ಆಡುಮಾತಿನ, ಜಾನಪದಸತ್ವದ, ನೆಲದ ಭಾಷೆಯಲ್ಲೇ ಆವೇಶ-ಆಕ್ರೋಶ, ಕೆಚ್ಚು-ನಚ್ಚು-ಪ್ರತಿಕಾರ, ವ್ಯಂಗ್ಯ-ವಿಷಾದ, ಪ್ರೀತಿ-ಅಂತಃಕರಣಗಳು ವ್ಯಕ್ತಗೊಳ್ಳುತವೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಆಡುಭಾಷೆಯನ್ನು ಯಥಾವತ್ತಾಗಿ ಬಳಸಿದ್ದರಲ್ಲೇ ಕತೆಗಳು ವಿಶಿಷ್ಟತೆಯನ್ನು ಪಡೆದಿವೆ ಎನ್ನಬಹುದು. ಹಳ್ಳಿಗಾಡಿನ ಕಥೆಗಳಲ್ಲಿ ಸ್ಥಳೀಯ ಭಾಷೆ ಕತೆಯ ಮಹತ್ವವನ್ನು ಹೆಚ್ಚಿಸಿದೆ.

---

೧೭೮ ಕುಂವೀ, ಬರಿಕಥೆಯಲ್ಲೋ ಅಣ್ಣಾ, ೨೦೧೦. ಪು: ೭೨.

೧೭೯ ಗಿರಡ್ಡಿ ಗೋವಿಂದರಾಜ (ಸಂ), ಕುಂ.ವೀ ಅವರ ಕಥಾಸಾಹಿತ್ಯ, ೨೦೦೧, ಪು : ೨೫.

ರಾಮಣ್ಣ ಅವರ 'ಸುಗ್ಗಿ' ಕತೆಯಲ್ಲಿ ಜಾನಪದ ಗೀತೆ ಸುಗ್ಗಿಯನ್ನು ಕುರಿತಾಗಿದೆ.

"ಭೂತಾಯಿಕೊಟ್ಟಳು ಭತ್ತವ

ಕಣಜದ ತುಂಬ ತುಂಬೇವು

ಹೊಸಬೆಳೆಯ ಅನ್ನವ ಮಾಡಿ

ಮನೆಯೆಲ್ಲ ಉಂಡು ನಲಿದೇವು... ಸುಗ್ಗಿಯ

ನೆನೆದೇವು ನೆನೆದೇವು ಸುಗ್ಗಿಯ

ನಮ್ಮೂರ ಕಾಯೋಳೆ ನಮ್ಮವ್ವ
ಎಲ್ಲವ್ವ ನಂಮನೆ ಒಂದಾಗಿ ಇರಸವ್ವ
ನಂ ಮನೆ ಕಣಜ ಹಿಗ್ಗಲವ್ವ

ಶ್ರಮ ಸಂಸ್ಕೃತಿಯ ಫಲ ವರ್ಷದ ಕಾಲ"[೧೮೦]

ಸುಗ್ಗಿಯು ಅನುಭವಿಸಿದ ಬವಣೆಯ ಬದುಕು ನೀಗಿ ರೈತರು ಹಿಗ್ಗುವ ಕಾಲವಾಗಿ ಮನೆಮನ ತುಂಬಿಬರುತ್ತದೆ. ರೈತರ ಓಡಾಟ, ನೇಗಿಲು, ನೆಂಟರ ಸುಗ್ಗಿ, ಏನೋ ಸಡಗರ, ಸಂಭ್ರಮ, ನಲಿವು, ರೈತರ ಮೊಗದಲ್ಲಿ ತೃಪ್ತಿ-ಮಂದಹಾಸ ಮೂಡುವ ಸಮೃದ್ಧಿಯ ಕಾಲ ಸುಗ್ಗಿ. ಸುಗ್ಗಿಯ ಹಾಡು ದೈವ ಮತ್ತು ಕೃಷಿ ಕುರಿತಾಗಿದ್ದು ಮನಸ್ಸಿಗೆ ಮುದನೀಡುವ ಜೀವನೋತ್ಸಾಹದ ಚಿಲುಮೆಗಳೆನಿಸಿವೆ.

"ಪುಟ್ಟಸ್ವಾಮಣ್ಣನಂತ ಮನ್ಸರಿಗೆ ಮೋಸಮಾಡಿದ್ರೆ ಗೆಡ್ಡೆ ಕಿತ್ತೋಯ್ಯದೇಳು" [೧೮೧]

ಹಳ್ಳಿಯ ಆಡುಮಾತಿನಲ್ಲಿರುವ ನೈತಿಕ ಪ್ರಜ್ಞೆ, ತಪ್ಪಿಗೆ ಶಿಕ್ಷೆ ಎಂಬ ಎಚ್ಚರಿಕೆಯಲ್ಲಿ ಸಮುದಾಯದ ಒಳಿತೇ ಅಡಗಿದೆ.

ಕುಂ.ವೀರಭದ್ರಪ್ಪ ಅವರ 'ಕುಡಾಲಕಾಡುಸೋಸಿದ' ಕತೆಯ ಸಂದರ್ಭದಲ್ಲಿ ಜಾನಪದ ಅಂಶವನ್ನು ಪ್ರಸ್ತಾಪಿಸಿದ್ದಾರೆ.

"ಹೊಂಟೇವಿ ನಾವು ಹೊಂಟೇವಿ
ಕಾಡು ಸೋಸಾಕ ಬಾಡು ಸವಿಯಾಕ
ಬಗೆದಾಡಿ ಕಿತ್ತೇವು ಪರಪಂಚ ಮರೆತೇವು
ಕೊರಳಾಗ ಕಾಡು ಧರಸೇವು

---

೧೮೦ ಕಣಜ, ಲೋಹಿಯಾ ಪ್ರಕಾಶನ, ೨೦೧೧, .ಪು: ೩೦-೩೧

೧೮೧ ಅದೇ, ಪು: ೨೭,

ನೆಲ ಮುಗುಲಿಗೇಕಾಗಿ ನಸೆದೇವು"೧೮೨

ಕುಡಾಲನ ಮುಂದಾಳತ್ವದಲ್ಲಿ ಹೊರಟ ಜನರ ಸಂಭ್ರಮದಿಂದ ಹಾಡುವುದಾಗಿದೆ.

'ಮೊಲಂ ಸಿಂಹಮಂ, ಕೊಂದ ಕಥೆ'ಯ ಸವ್ವಾರೆವ್ವ ತಮ್ಮನನ್ನು ಹೊಗಳಿ ಮನತುಂಬಿ ಹಾಡುವ ಹಾಡಾಗಿದೆ.

"ವಿನರಾ ಭಾರತ ವೀರಕುಮಾರಾ
ವಿಜಯಂ ದೊರ ದೇರಾ
ದೂಕಿನ ಗುರ್ರಂ ಮೀಂಟಲೇಚರಾ
ಧೂಳಿ ಅರಸಂ ಕಾವುಲೇಚರಾ
ಕನ್ನೂ ಮೂಚಿ ಕಪ್ಪೆರೆವಲೇದುರಾ
ಕಂಟಕಿ ಗುರ್ರಂ ಕಾಸರಾದುರಾ
ಗುಟ್ಟಲು ಮಿಟ್ಟಲು ದಾಟಿಂದಾ
ಪಿಟ್ಟವೋಲೆ ಅದು ಪೋತುಂದಾ
ತಂದಾನೆ ತಾನ ತಂದಾನ ...."೧೮೩

ಆಂಧ್ರದ ಗಡಿಯಲ್ಲಿನ ಕತೆಗಳಿಗೆ ಕುಂ.ವೀರಭದ್ರಪ್ಪ ತೆಲುಗು ಭಾಷೆಯನ್ನು ಬಳಸಿ ಪ್ರಾದೇಶಿಕ ಮೌಲ್ಯದಿಂದ ಕತೆಯನ್ನು ಪರಿಣಾಮಕಾರಿಯಾಗಿಸಿದ್ದಾರೆನ್ನಬಹುದು.

ರಾಮಣ್ಣ ಅವರ 'ಅಭಿಮಾನ' ಕತೆಯಲ್ಲಿ ವೆಂಕಟಪ್ಪನ ಹುಲ್ಲಿನಮೆದೆಗೆ ಬೆಂಕಿಬಿದ್ದಾಗ ಅವನು ಕೇಳುವ ಪ್ರಶ್ನೆ.... 'ಇದರಲೆಲ್ಲ ಅವರ ಹೊಟ್ಟೆಕಿಚ್ಚು ತೀರೋದದೆ' ಆತ್ಮಸಾಕ್ಷಿಯನ್ನು ಚುಚ್ಚುತ್ತದೆ. ದ್ವೇಷ ಹರಡಬಾರದು ಊರಿನ ವಾತಾವರಣ ಕಾಪಾಡುವುದು ಮುಖ್ಯ ಎಂಬ ಸಿದ್ದೇಗೌಡರ ವಿಚಾರ, ನಾಯಕತ್ವ ಇಂದಿನ ದಿನಮಾನದ ಅಗತ್ಯವೆನಿಸುತ್ತದೆ. 'ಚಿಕ್ಕವ್ವೋ ಯಾಲಕ್ಕಿ ಎಲ್ಲಿ? ಒಳ್ಳೆ ಬುದ್ಧಿವಂತನಿಗೆ ಜನ್ಮಕೊಟ್ಟೆ' ಎನ್ನುವ ಮಾತಿಗೆ **"ಏನ್ಲ ಅಪ್ಪಯ್ಯ, ಈ ಸುತ್ತಮುತ್ತಲಿಗೆಲ್ಲ ನೀನೊಬ್ಬನೇ ಅನ್ನು ಸೀಮೆಎಣ್ಣೆ ಬುದ್ಧಿವಂತ"** ೧೮೪ ಮಾತುಗಳು ಮುದನೀಡುತ್ತವೆ.

---

೧೮೨ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦. ಪು : ೮೯

೧೮೩ ಅದೇ, ಪು : ೫೩೩-೫೩೪.

೧೮೪ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೦೪.

ಕೆ.ಎಸ್. ಭಗವಾನ್ ಅವರು **"ಭಾಷಾ ಪ್ರಯೋಗದ ವಿಚಾರದಲ್ಲಿ ನವ್ಯ ಚಳವಳಿ ವಿಪರೀತ ಗೀಳನ್ನು ಮೆರೆಯಿತು. ಇದರಿಂದಾಗಿ ಭಾಷಾಭಿವ್ಯಕ್ತಿಗೆ ವ್ಯಯವಾದ ಶಕ್ತಿ ಕೃತಿಯ ಸತ್ವವನ್ನು ಭದ್ರಮಾಡುವ ಕಡೆ ಕೇಂದ್ರಿತವಾಗಲಿಲ್ಲ. ಅಭಿವ್ಯಕ್ತಿಯ ವ್ಯಾಕುಲತೆಯಲ್ಲಿ ಅನುಭವದ ವ್ಯಾಕುಲತೆ ಕಡಿಮೆಯಾಗುವ ಅಪಾಯವಿದೆ. ಒಳ್ಳೆಯ ಉಡುಪಿನಿಂದ ಹೇಗೆ ವ್ಯಕ್ತಿ ದೊಡ್ಡವನಾಗುವುದಿಲ್ಲವೋ ಹಾಗೆ ಅಭಿವ್ಯಕ್ತಿಯಿಂದಲೇ ಸಾಹಿತ್ಯಕ್ಕೆ ಶ್ರೇಷ್ಠತೆ ಪ್ರಾಪ್ತವಾಗುವುದಿಲ್ಲ. ಅದು ತಾಳುವ ಧೋರಣೆಯಿಂದ ಮೂಡಿಸುವ ಜೀವನದೃಷ್ಟಿಯಿಂದ ಪ್ರತಿಪಾದಿಸುವ ಮೌಲ್ಯಗಳಿಂದ – ಇವುಗಳನ್ನು ಭಾಷೆಯ ಮೂಲಕ ಕತೆಯಾಗಿಸುವುದರಿಂದ ತನ್ನಕಲೆ ಉಳಿಯಬೇಕಾದರೆ ಅದಕ್ಕನುಗುಣವಾದ ಮಾಧ್ಯಮವನ್ನು ವಸ್ತುವನ್ನು ಆರಿಸಿಕೊಳ್ಳುವುದರಲ್ಲಿ ಕಲಾವಿದ ನಿಪುಣನಾಗಿರಬೇಕು"** [೧೮೫] ಎನ್ನುತ್ತಾರೆ. ಕುಂವೀ ಮತ್ತು ರಾಮಣ್ಣ ಪ್ರಾದೇಶಿಕ ಉಪಭಾಷೆಯನ್ನು ಬಳಸುತ್ತಲೇ ಬದುಕಿನ ಸೂಕ್ಷ್ಮಒಳನೋಟವನ್ನು ಕತೆಗಳಲ್ಲಿ ನೀಡುತ್ತಾರೆ.

ಕುಂ.ವೀರಭದ್ರಪ್ಪ ಅವರ 'ಕಳೇಬರ' ಕತೆಯಲ್ಲಿ ಅತ್ತೆ-ಸೊಸೆಯರ ಸಂಬಂಧ ಕಗ್ಗಂಟಾಗಿಯೇ ಉಳಿದುಬಿಡುತ್ತದೆ.

'ದೊಡ್ಡಾವ ಸತ್ತಿರೋದು ಪ್ರಜ್ಞೆ ಇಲ್ದೆ ಗೂಬೆಯಂತೆ ಅಡ್ಗೆ ಮನೆ ಸೇರ್‍ಕಂಡು ಅದೇನು ಕಡೀತೀಯಲೇ ಕಾಗೆ ಮುಖದ್ದೇ'

"ಗಂಡಸ್ರ ಮೈ ಬಡಿಸಿಕೋತ ಅದೇನು ಸುಖ ಅನುಭವಿಸ್ತೀಯಾಲೇ ಗಂಡರಾಗುಳ್ಳಿ" [೧೮೬]

ಅತ್ತೆಯ ಮೊನಚು, ವ್ಯಂಗ್ಯ, ಕಟುನುಡಿ, ಬೈಗುಳ ಸಹಿಸುತ್ತಲೇ ದಿನದೂಡುತ್ತಿದ್ದ ಸೊಸೆ ಭಾಗಿ ಗಂಡನ ಪ್ರೀತಿ-ಕಾಳಜಿಯಿಲ್ಲದೆ ಗಯ್ಯಾಳಿ ಅತ್ತೆಯೊಡನೆ ದಿನವೂ ಬೇಯುತ್ತಿದ್ದಳು. ಹೃದಯ ಇರಿಯುವ ಮಾತುಗಳನ್ನು ಭಾಗಿ ಮೊದಲೇ ಊಹಿಸಿ ಎಚ್ಚರಿಕೆಯಿಂದ ಕೂತಲ್ಲಿ ಕೂರದೆ, ನಿಂತಲ್ಲಿ ನಿಲ್ಲದೆ ತಡಬಡಾಯಿಸುತ್ತಿದ್ದಳು. ತನ್ನಿಂದ ಮಗ ದೂರವಾಗಬಾರದೆಂಬ ಸಂಕುಚಿತ ಮನಸ್ಸು ಅತ್ತೆಯ ಕಟುಮಾತಿಗೆ ಕಾರಣವೆನ್ನಿಸುತ್ತದೆ.

ಕುಂ.ವೀರಭದ್ರಪ್ಪ ಅವರ ಭಾಷೆ ಮತ್ತು ಶೈಲಿ ಕುರಿತು ರಾಜೇಂದ್ರ ಚೆನ್ನಿಯವರು : **"'ಒಡಲಾಳ' ಹಾಗೂ 'ಕುಸುಮಬಾಲೆ' ಕೃತಿಗಳಲ್ಲಿ ಮಹಾದೇವರು ಇಂಥ ಕಥನ ಕ್ರಮವನ್ನು**

---

೧೮೫ ಕೆ.ಎಸ್. ಭಗವಾನ್, ಕನ್ನಂಬಾಡಿ, ಪು: ೩೬.

೧೮೬ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು: ೧೬೦.

ಪ್ರಬುದ್ಧವಾಗಿ ಬಳಸಿಕೊಂಡಿದ್ದಾರೆ. ನಿರೂಪಣೆಯ ಭಾಗಗಳಲ್ಲಿ ನಮ್ಮ ಲೇಖಕರು ಬಳಸಿಕೊಳ್ಳುತ್ತಿದ್ದ ಶುದ್ಧ ಹಾಗೂ ಸಾಹಿತ್ಯಿಕ ಭಾಷೆಯನ್ನು ತೊರೆದು ಮಹಾದೇವರು ಹಲವಾರು ಸ್ತರಗಳ ಭಾಷೆಗಳನ್ನು ಮಿಶ್ರಣ ಮಾಡಿ ವಿಶಿಷ್ಟವಾದ ನಿರೂಪಣ ಕ್ರಮವನ್ನು ಸೃಷ್ಟಿಸಿಕೊಂಡರು. ಕುಂ.ವೀರಭದ್ರಪ್ಪ ಅವರು ಕೂಡ ಈವರೆಗಿನ ಕೃತಿಗಳಲ್ಲಿ ಇಂಥದೇ ಪ್ರಯೋಗಗಳನ್ನು ಮಾಡುತ್ತ ಬಂದಿದ್ದಾರೆ. ಶಿಷ್ಟ-ಅಶಿಷ್ಟ, ಲಘು-ಗಂಭೀರ, ಭಾವನಾತ್ಮಕ-ವಿಡಂಬನಾತ್ಮಕ ಇವೇ ಮುಂತಾದ ದ್ವಂದ್ವಗಳನ್ನು ತಿರಸ್ಕರಿಸಿ ಬಹುಧ್ವನಿಯುಳ್ಳ ಶೈಲಿಯನ್ನು ಅವರು ಬಳಸುತ್ತ ಬಂದಿದ್ದಾರೆ......ಕುಂ.ವೀರಭದ್ರಪ್ಪ ಅವರ ಬರಹ ವಿಶಿಷ್ಟತೆಯೆಂದರೆ ಇಂಥ ಶೈಲಿಯ ಮೂಲಕ ಸಾಹಿತ್ಯಿಕ ಬರಹದ ಮಡಿವಂತಿಕೆಯನ್ನು ಅವರು ತೊಡೆದು ಹಾಕಿದರು. ಅಶಿಷ್ಟ, ಅಸಹ್ಯ, ಭೀಭತ್ಸ ಇವೇ ಮುಂತಾದ ಹೆಸರುಗಳಿಂದ ಸಾಹಿತ್ಯಕ್ಕೆ ತಕ್ಕುವಲ್ಲವೆನ್ನಲಾಗುತ್ತಿದ್ದ ಅನುಭವಗಳನ್ನು ಅವರು ತಮ್ಮ ಕಥಾಸಾಹಿತ್ಯದಲ್ಲಿ ಬಳಸಿಕೊಂಡಿದ್ದಾರೆ. ಅವರ ಬರಹದಲ್ಲಿ 'ಶಿಷ್ಟ'ವೆಂದು ಕರೆಯಲಾಗುವ ಅನುಭವದ ಜತೆಗೆ 'ಅಶಿಷ್ಟ'ವೂ ಅಷ್ಟೇ ಮಾನ್ಯತೆಯನ್ನು ಪಡೆದಿರುತ್ತದೆ. ಇದರ ಪರಿಣಾಮವೆಂದರೆ ಬದುಕಿನ ಅನುಭವವನ್ನು ಆದಷ್ಟು ಸಮಗ್ರವಾಗಿ ಒಳಗೊಳ್ಳುವುದು ಸಾಧ್ಯವಾಗುತ್ತದೆ" [೧೮೭] ಎಂದು ಹೇಳಿರುವುದು ಸಮರ್ಥನೀಯವಾದುದು.

ಕುಂ.ವೀರಭದ್ರಪ್ಪ ಅವರ 'ರುದ್ರಪ್ಪನ ಖಡ್ಗ' ಕತೆಯಲ್ಲಿ ಅತ್ತೆ ಮತ್ತು ಅಳಿಯ ನಡುವೆ ವಾಕ್ಸಮರಕ್ಕೆ ಕಾರಣ ದುಡಿಯದ ಅಳಿಯ ಮಗಳನ್ನು ಸಾಕುವ ಬಗೆ ಹೇಗೆ ಎಂಬ ಕಾಳಜಿಯೇ ಆಗಿದೆ. 'ದುಡೀಲಿಲ್ಲಾ ದುಕ್ ಪಡೀಲಿಲ್ಲ.... ಬಂದೋರೆದ್ರಗೆ, ಹೋಗೋರೆದ್ರೂಗೆ ಖಡ್ಗಾನ ವರ್ಣಿಸ್ತಾ ಕುಂಡ್ರಂತಿಯಲ್ಲಾ ನೀನೊಬ್ಬ ಗಂಡುಸ್ನೇ' ಮುದುಕಿಯ ಜಬರ್‌ದಸ್ತ್‌ಗೆ ಕಾರಣ ಆಸ್ತಿ ತನ್ನದು ಎಂಬ ಧೈರ್ಯದಿಂದೆನ್ನಬಹುದು. ಗಂಡನನ್ನು ಹೀನಾಯವಾಗಿ ತಾಯಿ ನಿಂದಿಸಿದಾಗ ಮಗಳೂ "ನನ್ನ ಗಂಡನ್ನ ಬಾಯಿಗೆ ಬಂದಂಗ ಅಂದ್ರ ನಾನು ಸುಮ್ಕಿರಾಕಿಲ್ಲ ನೋಡು" [೧೮೮] ತಿರುಗಿ ಬೀಳುವುದು ಸ್ತ್ರೀಯ ಮನಸ್ಥಿತಿ ಗಂಡನ ಪರವಾಗಿರುವ ಬಗ್ಗೆ ತಿಳಿಸುತ್ತದೆ.

ಕುಂ.ವೀರಭದ್ರಪ್ಪ ಅವರ 'ಕುಬುಸ' ಕಥೆಯಲ್ಲಿ 'ಯವ್ವೋ ಸಿಲೇಟು ಬೋಳಾಪ ಕೊಡ್ಸು..... ನಾನಿಸ್ಕೂಲೀಗೋತೀನಿ' ಎಂದ ಮೊಮ್ಮಗನಿಗೆ ಮುದುಕಿ, "ಯಾವ ಕೇಡಿಗಂತ ನಮ್ಮ ನೆಟ್ಕಲ್ಲು ಇಸ್ಕೂಲಿಗೋತೀನಿ ಅಂತತೆ" [೧೮೯] ಎಂದರೂ ಊರಮಂದಿ ತಿಳುವಳಿಕೆ ಹೇಳಿದಾಗ ಓದಲು

---

೧೮೭ ಕುಂ.ವೀ ಅವರ ಕಥಾಸಾಹಿತ್ಯ, ಗಿರಡ್ಡಿ ಗೋವಿಂದರಾಜ (ಸಂ), ೨೦೦೧, ಪು: ೩೦-೩೧.
೧೮೮ ಕುಂ.ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು : ೩೫೩.
೧೮೯ ಅದೇ,. ಪು : ೩೨೭.

ಸಪರೋಟು ಕೊಡುವ ಮುದುಕಿ ಬಗ್ಗೆ, ಶ್ರಮದ ಮಹತ್ವ ತಿಳಿಸಲು ಪ್ರಯತ್ನಿಸುವ 'ರುದ್ರಪ್ಪನ ಖಡ್ಗ' ದ ಮುದುಕಿಯ ಬಗ್ಗೆ ಮನ ಮೆಚ್ಚುಗೆ ಸೂಸುತ್ತದೆ.

ರಾಮಣ್ಣ ಅವರ 'ಹರಕೆ ಹಣ' ಕತೆಯಲ್ಲಿ **"ಐದೈದು ವರ್ಷಕ್ಕೊಂದು ಸಲ ಬಿಳಿಬಟ್ಟೆ ಹಾಕ್ಕೊಂಡು ಜೊಂಯ್ ಅಂತ ಕಾರೇರಿ ಬಂದು ಓಟುಕಿತ್ತುಕೊಂಡು ಹೋಯ್ತೀರಿ, ಆಮೇಲೆ ಕೊಟ್ಟೋನ್ ಕೋಡಂಗಿ, ಈಸ್ಕಂಡೋನು ಈರಭದ್ರ, ನೀವೇ ಸಿಕ್ಕಿದ್ದಲ್ಲಾನೂ ಗೋರ್ಕಂಡು ಗುಡ್ಡೆ ಹಾಕ್ಕೋತಿರಿ"**[೧೯೦] ಎನ್ನುವ ಹಳ್ಳಿಗರ ಮಾತಿನಲ್ಲಿ ಪ್ರಜಾಪ್ರಭುತ್ವದ ನ್ಯೂನತೆ, ರಾಜಕೀಯ ಸೊಗಲಾಡಿತನ, ದುರಾಸೆ-ದುರ್ಬುದ್ಧಿ, ಅಧಿಕಾರದಾಹ, ವಂಚನೆ, ನಯಗಾರಿಕೆ, ಸ್ವಾರ್ಥ ಮನೋಭಾವವನ್ನು ನೇರ-ನಿಷ್ಠುರವಾಗಿ ಹೇಳುವ ಕೆಚ್ಚು ಗ್ರಾಮೀಣರಲ್ಲಿ ಹೆಚ್ಚೆನ್ನಬಹುದು.

"ಇವಯ್ಯ ಸೇರ್ದನ್ಯಾಯ ಯಾವೂ ಥಟ್ಟನೆ ಬಗೆಹರೀದಿಲ್ಲ. ಅವ್ನ ಜುಟ್ಟನಂಗೆ, ಒಂದು ಸಾರಿ ಬಿಚ್ಚತಾನೆ, ಅಲ್ಲೇ ತಿರ್ಗಗಂಟಾಕ್ತಾನೆ"[೧೯೧] ಮೇಲ್ವರ್ಗದ ಶ್ಯಾನುಭೋಗರು ಕುತಂತ್ರ ಮಾಡುತ್ತಾ ಸಾಮರಸ್ಯಕ್ಕೆ ತೊಡಕುಂಟು ಮಾಡುವ ರೀತಿಯನ್ನು ಜುಟ್ಟನ್ನು ಸಂಕೇತಾತ್ಮಕವಾಗಿ ಬಳಸಿ ಹಳ್ಳಿಯ ಸೌಹಾರ್ದಬದುಕಿಗೆ ತೊಡಕಾಗಿರುವ ಬಗೆಗಿನ ಎಚ್ಚರಿಕೆಯ ಮಾತುಗಳಾಗಿವೆ. **"ಕನ್ನಡ ಭಾಷೆಯ ಸಂವೇದನಾ ಸಾಮರ್ಥ್ಯವನ್ನು ನಿರಂತರವಾಗಿ ಹಿಗ್ಗಿಸುವ ಸಾವಯುವ ಲಕ್ಷಣವುಳ್ಳ ಕಥನಕ್ರಮವಿದು. ಕನ್ನಡ ಮುಂಬರುವ ತಲೆಮಾರುಗಳು ಕಲಿಯಲೇಬೇಕಿರುವ ಸಂಸ್ಕೃತಿಯ ಪಾಠಗಳನ್ನು ರಾಮಣ್ಣ ಅವರ ಕತೆಗಳು ತಮ್ಮ ಒಡಲೊಳಗೆ ಹುದುಗಿಸಿಕೊಂಡಿವೆ"**[೧೯೨] ಎಂಬ ಮಾತು ಹೆಚ್ಚು ಮೌಲ್ಯಯುತವಾದುದು. ರಾಮಣ್ಣ ಅವರ 'ಕಕರನಯುಗಾದಿ' ಕತೆಯಲ್ಲಿ ದೇವರಸ ಬಾವಿಯ ಬಳಿ ಓಡಿ "ಅಪ್ಪೋ! ಮ್ಯಾಕೆ ಅತ್ತಿ ಬಾಪ್ಪೋ"[೧೯೩] ಅಪ್ಪ ಬಾವಿಯಲ್ಲಿ ಸತ್ತಿರುವ ಅರಿವಿಲ್ಲದೆ ಹೇಳುವ ಮುಗ್ದ ಮಾತುಗಳು ಭಾದಿಸಬಲ್ಲವು. ಮುಗ್ಧ ಮನಸ್ಸಿಗಾದ ಆಘಾತ ಕಡಿಮೆಯದ್ದಲ್ಲ. ಕುಂ.ವೀರಭದ್ರಪ್ಪ ಅವರ 'ರತ್ನ ಎಂಬ ಹುಡುಗಿಯೂ. ಉಗಾದಿ ಎಂಬ ಆಟವೂ' ಕತೆಯಲ್ಲಿ **"ಅಯ್ನೋರ ಮಗಸಟ್ಟೆ ತಿನ್ನೋಕೆ ನಾಚ್ಕೆ ಆಗಲ್ಲೇನು". ಹಿಂದೆ ಮುಂದೆ ನೋಡದೆ ಮಾಡಿದ ಹೋಳಿಗೇನಲ್ಲ ತಿಂಥೀ ಏನೋ ಬಾಡ್ಕಾವ್ ....."**[೧೯೪] ಓಡಾಡಿಸಿಕೊಂಡು

---

೧೯೦ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೧೭೦.

೧೯೧ ಅದೇ, ಪು : ೧೭೬

೧೯೨ ಅದೇ, ಬೆನ್ನುಡಿ.

೧೯೩ ಅದೇ, ಪು : ೨೦೩.

೧೯೪ ಕುಂ.ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು : ೨೨೭.

ಹೊಡೆಯುವ ರತ್ನಳ ಮಾತಿನಲ್ಲಿ ಮುಗ್ಧತೆಗಿಂತ ತಿಳುವಳಿಕೆ, ಪ್ರಬುದ್ಧತೆ, ದುಡಿದು ತಿನ್ನಬೇಕಾದ ಮಹತ್ವ ತಿಳಿಸುತ್ತದೆ.

'ಕಕರನ ಯುಗಾದಿಯ' ದೇವರಸನ ಮುಗ್ಧತೆ, ರತ್ನಳ ಮುಗ್ಧತೆಯಲ್ಲಿನ ಪ್ರಬುದ್ಧತೆ, 'ಗಾಂಧಿ'ಯ ಆತ್ಮವಿಶ್ವಾಸ, ಪ್ರಶ್ನಾರ್ಹಮನೋಭಾವ ಮುಂದಿನ ಪೀಳಿಗೆಗೆ ಭರವಸೆ ಉಳಿಸುತ್ತವೆ.

ರಾಮಣ್ಣ ಅವರ 'ಗಾಂಧಿ' ಕತೆಯಲ್ಲಿ ಗಾಂಧಿಯ ತಾಯಿ **"ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?"**[೧೯೫] ಮಾತಿನಲ್ಲಿ ಸ್ವಾತಂತ್ರ್ಯಾನಂತರ ವ್ಯವಸ್ಥೆ ಬದಲಾಗಿಲ್ಲ ಎನ್ನುವ ವಾಸ್ತವಿಕ ಸತ್ಯ ಕಹಿ ಎನಿಸುತ್ತದೆ. ಮೊಮ್ಮಗ ಸತ್ತಾಗ ಮಗಳನ್ನು ಸಂತೈಸುತ್ತಾ ಕರೀಗೌಡ **"ಮನುಷ್ಯ ಸಾಯ್ದೆ ಕಲ್ಲು ಸತ್ತಾದ, ಸುಮ್ಕಿರುವಂತೆ"**[೧೯೬] ಅಸಹಾಯಕತೆ, ನೋವು–ಸಂಕಟ, ಬಡತನ, ಮುಗ್ಧ–ಅನಕ್ಷರಸ್ಥರ ಪರದಾಟ–ಪೇಚಾಟ, ದುಃಖದಲ್ಲೂ ಅಧ್ಯಾತ್ಮಿಕದರ್ಶನ ಮಾಡಿಸುವ ಮಾತು ಕಾಡುತ್ತಲೇ ಇರುತ್ತದೆ. ಗಾಂಧಿ ಕತೆ ಕುರಿತು **"ಎಂತಹ ಉತ್ತಮ ಕಥೆ (ಗಾಂಧಿ) ಬರೆದಿದ್ದೀರಿ, ರಾಮಣ್ಣ"**[೧೯೭] ಎಂದು ಚಂದ್ರಶೇಖರ ಪಾಟೀಲರು ಮೆಚ್ಚುಗೆ ಸೂಚಿಸಿದ್ದಾರೆ.

ಕುಂ.ವೀರಭದ್ರಪ್ಪ ಅವರ 'ಕತ್ತಲನು ತ್ರಿಶೂಲಹಿಡದ ಕತೆ' ಯ ಕತ್ತಲ **"ಮನುಷ್ಯರಿಗಾಗಿ ಬದುಕುವ ಮನುಷ್ಯನಾಗಿ ಹುಟ್ಟಬಾರದಿತ್ತು"....**[೧೯೮] ಗೌಡರ ಮನೆಯ ಜಾಲಿಯ ನೆರಳಿನಲ್ಲಿ ದುಡಿದರೂ ಹೊಟ್ಟೆತುಂಬುತ್ತಿಲ್ಲವಲ್ಲ ಎಂಬ ಬೇಸರವನ್ನು ತಳಸಮುದಾಯದ, ಬದುಕಿನ ಬಗೆಗೆ ನಿರಾಸೆಯನ್ನು ಸೂಚ್ಯವಾಗಿ ತಿಳಿಸುತ್ತದೆ.

"ಬೆಳೆ ಹಾಕಿ ಭೂತಾಯಿ ಹಸಿದೀನಿ ಎವ್ವಾ ಅಂತ ತೆನಿ ಕುಯ್ದದ್ದು ತೆಪ್ಪೆ"[೧೯೯]

ಬಿತ್ತಿ–ಬೆಳೆದವರಿಗೆ ಎರಡು ತೆನೆ ಕುಯ್ಯುವ ಹಕ್ಕಿಲ್ಲವೇ? ತಳವರ್ಗದವರ ಪ್ರಶ್ನೆ ಅವರಿಗಷ್ಟೇ ಕೇಳುತ್ತಿತ್ತೇ ಹೊರತು ಉಂಡವರ್ಗದವರಿಗಲ್ಲ. ಕುಂ.ವೀರಭದ್ರಪ್ಪ ಅವರ 'ದೇವರಹೆಣ' ಕತೆಯಲ್ಲಿ ತೊಣ್ಣೆ **"ಕ್ಯೊಳೋ ಅಕ್ಕೈತಿಕ್ಯೋಳೇವಿ, ಅದಕ್ಯಾಕೆ ಗೌಡ ನರ**

೧೯೫ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು : ೨೪೭.
೧೯೬ ಅದೇ, ಪು : ೨೫೩.
೧೯೭ ಬೆಸಗರಹಳ್ಳಿ ರಾಮಣ್ಣ, ಮುನ್ನುಡಿ ಕನ್ನಂಬಾಡಿ, ೧೯೮೬, ಪು: ೪೬೨.
೧೯೮ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೦, ಪು : ೪.
೧೯೯ ಅದೇ, ಪು : ೫.

ಅರಕೋಬೇಕು"[೨೦೦] ಹಕ್ಕಿನ ಪ್ರಶ್ನೆಯಲ್ಲಿನ ಹಸಿವು, ಮೇಲ್ವರ್ಗದವರ ನಡವಳಿಕೆಯನ್ನು ಪ್ರಶ್ನಿಸುವುದನ್ನು ಕಾಣಬಹುದು. ರಾಮಣ್ಣ ಅವರ 'ಶೂಲ' ಕತೆಯ ಜಯರಾಮ ಗೌರಿಗೆ **'ಹೂವು ತಗೋ ಗೌರಿ, ನನಗ್ಯಾಕೆ? ಮುಡಿಯೋಕೆ ಜಡೆ ಇದ್ದಾದೆ ನನಗೆ'**[೨೦೧] ಮಾತಿನಲ್ಲಿ ತನ್ನ ಹುಡುಗಿಯ ಬಗೆಗಿನ ಅಕ್ಕರಾಸ್ಥೆ ವ್ಯಕ್ತವಾಗುವ ಪರಿ ವಿಶಿಷ್ಟವಾಗಿದೆ.

ಕುಂ.ವೀರಭದ್ರಪ್ಪ ಅವರ 'ಕಪ್ಪು ನೆಲದಲ್ಲೊಂದು ಕೆಂಪುಕತೆ'ಯಲ್ಲಿ,

"ಧಂಧಕ್ಕಿಯಲ್ಲಿದ್ದು ಪರತ "ಎವ್ವ .... ನಮ್ಮಪ್ಪ _.......... ಜಾಣೆಲ್ಲಾ........ ಹಂಬಂಗ

ಸ್ವಲ್ಪ ಕಾಲೆತ್ತಿ..... ಹ್ಞಾ ಅಂಗೆ ಅಂತಹ, ಎಮ್ಮೆಗಳನ್ನೂ ಮತ್ತು "ಬಸಣ್ಣ..... ಸ್ವಲುಪ ಎದ್ದೇಳು... ಅಡ್ಯಾಗ ಸೆಗೆಣಿಐತಿ, ಬಳಿತೀನಿ.... ಎದ್ದೇಳು ಕಲಕಲ ಹ್ಞೆ..... ಉಹ್ಞು..... "[೨೦೨] ಎಂದು ಎತ್ತುಗಳನ್ನು ರಮಿಸುತ್ತ ಪ್ರೀತಿಯಿಂದ ಸಗಣಿ ಬಳಿಯುತ್ತಿದ್ದ ಅವನ ಮಾತುಗಳು ಭಾವದ ಸೆಲೆಯನ್ನು ಉಕ್ಕಿಸಿ ಚೆಲ್ಲಿಬಿಡುತ್ತವೆ.

ಕುಂ.ವೀರಭದ್ರಪ್ಪ ಅವರ "ಡೋಮ" ಕತೆಯಲ್ಲಿ **"ಎರ್ಡಕ್ಸರ ಕಲ್ತು ಶಾಣೆ ಆಗು, ಎನ್ನುತ್ತಾ ಅವು ತ್ಯುಳಿದೆನ್ಯೇ ಮಾನುನಿ"**[೨೦೩] ಎಂದು ತಾರಕಸ್ವರದಲ್ಲಿ ಹಾಡಿಕೊಳ್ಳುತ್ತಿದ್ದನು. ತನ್ನೆಲ್ಲಾ ರೇಜಿಗೆಯ ಬದುಕಿನಲ್ಲೂ ಜೀವನ ಪ್ರೀತಿ ಉಳಿಸಿಕೊಂಡಿದ್ದ. **"ಡೋಮಾ ನೀಯಾಕ ಗೌಡರ ತೋಟ ಆಳು ಮಾಡ್ದಿ?"**[೨೦೪] ಡೋಮ ಉತ್ತರಕೊಡದೆ ಗಹಗಹಿಸಿ ನಕ್ಕ. ಮಾತಿಗಿಂತ ನಕ್ಕನಗೆ ಭಾಷೆಗಿಂತ ಭಾವನೆಯೇ ಅಲ್ಲಿದ್ದವರನ್ನು ಹೆಚ್ಚು ಕಂಗಾಲಾಗಿಸಿತು. ಕುಂ.ವೀರಭದ್ರಪ್ಪ ಅವರ **"ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ"**ಯಲ್ಲಿ ಹೆಣ ತೆಗೆಯಲು ಹೇಳಿ ಹಣಕೊಡದಿದ್ದಾಗ ಮಾಯ ಎಂಬ ಕೂಲಿಯಾಳು **"ನೀನ್ ಯಾರಿಗೆ ಉಟ್ಟಿದ್ದೀಯಂತ ನೆಪ್ ಮಾಡಿಕ್ಯಾ... ಕೊಡ್ಡಿದ್ರೆ ಆ ಎಣಾ ಒತ್ಗಂಡು ಬಂದು ನಿಂ ಅಡ್ಗೆ ಮನ್ಯಾಗ ಆಕಿ ಒಕ್ಕೀವಿ.... ಇಂಗೆ ಆಟ ಆಡ್ತಿರ್ರಿ"**[೨೦೫]

---

೨೦೦ ಅದೇ, ಪು : ೪೧.

೨೦೧ ಕಣಜ, ಲೋಹಿಯಾ ಪ್ರಕಾಶನ, ಪು : ೨೨೮.

೨೦೨ ಕುಂವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ಪು : ೧೦೫.

೨೦೩ ಅದೇ, ಪು : ೩೦೧.

೨೦೪ ಅದೇ, ಪು : ೩೧೫.

೨೦೫ ಅದೇ, ಪು : ೧೪೫.

ಮುಸ್ಲಿಂ ಕುಟುಂಬ ತಮಗೆ ನೋವಾಗಿದ್ದರೂ ಅಸಹಾಯಕತೆಯಿಂದ ಅಳೆದು ತೂಗಿ ಮಾತನಾಡಿದರೆ ಕೂಲಿಯಾಳು ಮುಲಾಜಿಲ್ಲದೆ ಮಾತನಾಡಿದ. ಗೌಡನ ಬಳಿ ದುಡಿದು ಅವನ ದಗಾಕೋರ ಬುದ್ಧಿ ತಿಳಿದಿದ್ದರಿಂದ ಜಬರ್‌ದಸ್ತ್ ಮಾಡಿದಾಗ ಗೌಡ ಮೆತ್ತಗಾಗಿ ಹಣ ನೀಡಿದ.

ರಾಮಣ್ಣ ಅವರ 'ಮಾನಭಂಗ' ಕತೆಯಲ್ಲಿ 'ಇಲ್ಲಾ ಸಾಬ್ .... ನಮ್ ಜಾತಿಯೋರು **"ಡಾಕ್ಟು ಸಾಬ್ । ಬದುಕಿದ್ದಾಗ ಅವರವರಿಗೆ ಅವ್ರದೇ ಒಣೆ. ಸತ್ತ ಮ್ಯಾಕೆ ಆ ಅಲ್ಲಾನ ರಾಜ್ಯಕ್ಕೆ ಕಳ್ಸೋದು ನಮ್ಮೋಣೆ"**[೨೦೬] ಎಂಬ ನಸರುಲ್ಲನ ವಿಚಾರವಂತಿಕೆಯಲ್ಲಿ ಉದಾರತ್ವ, ಮನುಷ್ಯತ್ವ ನೆಲೆಗೊಂಡಿದ್ದು ಜಾತಿಯನ್ನು ಅವನು ಒತ್ತಿ ಹೇಳಿದ್ದರೂ ಅಲ್ಲಿ ಮನುಷ್ಯತ್ವವೇ ಗೋಚರವಾಗುತ್ತದೆ. ಅನ್ಯ ಧರ್ಮದ ಬಗೆಗೆ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರಿಗೆ ಒಳ್ಳೆಯದನ್ನೇ ಬಯಸುವ ಇಂಗಿತ ವ್ಯಕ್ತವಾಗುತ್ತದೆ. ರಾಮಣ್ಣ ಅವರ 'ಕರುಣಾಳು ಬಾ ಬೆಳಕೆ' ಕತೆಯಲ್ಲಿ ಮರಿಸಿದ್ದೇಗೌಡ ತನ್ನ ಮಗಳನ್ನು ಹೆರಿಗೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆತಂದಾಗ ಅಸಹಾಯಕತೆಯಿಂದ ವಾಚ್‌ಮನ್‌ಗೆ 'ನಗಬೇಡ ಮಾರಾಯ' ಎಂಬ ಮಾತು ಕಡೆಗೆ ದೀನವಾಗುತ್ತಾ ಹೋಗುತ್ತದೆ.

"ಅಂಗನ್ನಬ್ಯಾಡ ದಮ್ಮಯ್ಯ, ಏಳ್ಸು ಮಾರಾಯ"
"ಸರ್ದಾರಣ್ಣ ನಿನ್‌ದಮ್ಮಯ್ಯಾ ಅಮ್ಮಾವ್ರಿಗೆ ಹೇಳು"
"ನಿನ್ನ ಮಗಳು ಅಂತ ತಿಳ್ಕೋ, ಅವಳ ಜೀವನ ನಿನ್ನ ಕೈಯಲ್ಲಿದೆ"
"ಅಣ್ಣೋ । ವಾಚ್‌ಮನಣ್ಣಾ ಬೀಗ ತೆಗೆಯಣ್ಣಾ"
"ನಿನ್ನ ದಮ್ಮಯ್ಯಾ ಏಳಣ್ಣಾ"
"ಸಾರ್ ವಾಚ್‌ಮನ್ ಸಾಹೇಬರೇ"
"ಅಣ್ಣೋ । ಏನೋ ಕರುಣೆ ತೋರಿಸಣ್ಣಾ ಇಲ್ಲಿ, ಎಷ್ಟೋ ದೂರ್ದಿಂದ ಬಂದೀವಿ, ಹೋಗೋ ಪ್ರಾಣ ಉಳಿಸ್ತೀರಿ ಅಂತ"[೨೦೭]

ಸರ್ಕಾರಿ ಆಸ್ಪತ್ರೆಗೆ ಬಂದವರ ಗೋಗರೆತ ಸ್ವಾತಂತ್ರ್ಯಾನಂತರವೂ ಮುಂದುವರಿಯುತ್ತಲೇ ಇರುವುದನ್ನು ವಿಷಾದದಿಂದ ಲೇಖಕರು ದಾಖಲಿಸುತ್ತಾರೆ. ಅಸಹಾಯಕತೆ, ದೈನ್ಯತೆಯಿಂದ ಕಂಗಾಲಾದವರಿಗೆ ಸ್ಪಂದಿಸುವರು ಕಡಿಮೆಯೆನ್ನಬಹುದು. ಮರಿಸಿದ್ದೇಗೌಡನ ಗರ್ಭಿಣಿ ಮಗಳು ಸೂಕ್ತ ವೈದ್ಯೋಪಚಾರ ಸಿಗದೆ ಸತ್ತಾಗ ಸೋದರಮಾವ ರಾಮೇಗೌಡ ದುರುಗುಟ್ಟಿ,

---

೨೦೬ ಕಣಜ, ಲೋಹಿಯಾ ಪ್ರಕಾಶನ, ೨೦೧೧, ಪು: ೪೪೫.

೨೦೭ ಅದೇ, ಪು: ೪೧೧,

"ನಾವು ಉರಿದುತಿನ್ನೋದು ಆಡು, ಕುರಿ, ಕೋಳಿ ರಕ್ತಾ ಸ್ವಾಮಿ, ಮನುಷ್ಯರ ರಕ್ತಾನಲ್ಲ। ಇನ್ಯಾರಾದ್ರು ಅನಾಥರು ನಿಮ್ಮ ನರ್ಸಿಂಗ್ ಹೋಂಗೆ ಬಂದ್ರೆ ಅವರ್‌ಗೆ ಹಾಕಿ ಪ್ರಾಣ ಉಳಿಸೋದಾದ್ರೆ ಉಳಿಸಿ. ನಮ್ಮ ಹುಡುಗಿ ಜೀವಕ್ಕೆ ಸ್ವರ್ಗಾನಾದರೂ ಸಿಗಲೀ"[೨೦೮]

ರಾಮೇಗೌಡನ ಮಾತಿನಲ್ಲಿ ಪಾಕ, ಪಕ್ವತೆ, ಉರಿವಾಗ್ನಿ, ಜ್ಯೋತಿ, ತಿಳಿವಿನ ಸವಾಲೆಲ್ಲವೂ ಅಡಗಿದೆ. ಆಕ್ರೋಶ ದುಃಖ, ಹತಾಶೆ, ನೋವು, ಸಂಕಟ ವೇದನೆಯಲ್ಲೂ ಮತ್ತೊಂದು ಜೀವನವನ್ನಾದರೂ ಉಳಿಸಿ ಎನ್ನುವ ಮಾತಿನ ಕಟುವ್ಯಂಗ್ಯ ವೈದ್ಯ ವೃತ್ತಿಯಲ್ಲಿ ತುಂಬಿರುವ ಹಣದ ಲಾಲಸೆಗೆ ಕೊಂಚವಾದರೂ ತಾಗಬಹುದೆ? ಗಿಡದ ಸಾರವೆಲ್ಲಾ ಬೀಜದಲ್ಲಿರುವಂತೆ ಕತೆಯ ಸತ್ವ ರಾಮೇಗೌಡನ ಮಾತಿನಲ್ಲಿದೆ. ಕಥೆಗಾರರಾದ ಸುಧಾಕರ ಅವರು **"ನೆಲದ ಬಸಿರಿನಿಂದ ಬಂದ ಈ ಕತೆಗಳು ಸಹಜವಾಗಿಯೇ ನೆಲದ ಉಸಿರನ್ನು ಒಳಗೊಂಡಿವೆ. ಮಣ್ಣಿನ ವಾಸನೆಯನ್ನೇ ಮುಕ್ಕಿ, ಅದರಲ್ಲಿಯೇ ಬಾಯ್ಮುಕ್ಕಳಿಸುತ್ತದೆ"**[೨೦೯] ಎಂಬ ಅಭಿಪ್ರಾಯ ಅವರ ಭಾಷೆಯ ವಿಶಿಷ್ಟತೆಯನ್ನು ಕುರಿತಂತೆ ಹೇಳಿದ್ದಾರೆ.

ಕುಂ.ವೀರಭದ್ರಪ್ಪ ಅವರ 'ದೇವರಹೆಣ' ಕತೆಯ ಠೊಣ್ಣೆ ನಿರಂತರ ಹಸಿವಿನಿಂದ ಕಂಗೆಟ್ಟು ಅನುನಯದಿಂದ ಗೌಡನನ್ನು ಸತ್ತ ಎತ್ತು ಕೊಡುವಂತೆ ಬೇಡುತ್ತಾನೆ. ತಾಳ್ಮೆಯಿಂದಲೇ ಹಸಿವನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರೂ ಗೌಡ ಸ್ಪಂದಿಸದಿದ್ದಾಗ ಅನುನಯದ ಮಾತು ಆವೇಶದ ಕಡೆಗೆ ಹೋಗುತ್ತದೆ. ರಾಮಣ್ಣನವರ 'ಕರುಣಾಳು ಬಾ ಬೆಳಕೆ' ಕತೆಯ ಮರಿಸಿದ್ದೇಗೌಡ ತನ್ನ ಮಗಳ ವೈದ್ಯೋಪಚಾರಕ್ಕಾಗಿ ಅನುನಯದಿಂದ ಸರ್ಕಾರಿ ಆಸ್ಪತ್ರೆಯ ಎಲ್ಲರನ್ನೂ ಬೇಡಿದರೂ ಪ್ರಯೋಜನವಾಗಲಿಲ್ಲ. ಹೀಗೆ ಠೊಣ್ಣೆಯ ಪ್ರಯತ್ನವೂ ವಿಫಲವಾಗುತ್ತದೆ.

"ನಿಮ್ಮಂಥೋರೆ ಇಂಥಮಾತಂದ್ರೆ ಎಂಗ್ರಿ ದಣಿ.. ನಾವು ಎಣಾ ತಿಂದು ಬದುಕೋ ಮಂದಿ ದ್ಯಾವ್ರ ಎಣಾಕೊಡಿ, ಕ್ವಯ್ದು ತಿಂದು ಬದಿಕಂತೀವಿ. ತಿಳ್ದೋರೆ ಇಂಗಂದ್ರೆ ಮಂದಿ ಮಾದಿಗ್ರು..... ನಾವೆತ್ಲಾಗೆ ಓಗ್ಲೇಕು ದಣಿ.. ನಿಮ್ಮೆಂಜ್ಲು ತಿನ್ನೋ ಆಕ್ಮೃತಿ ಕೇಳ್ತೀವಿ.. ಓಗ್ಲಿ ..... ನಿಮ್ಮ ಪಾದಕ್ಕೆ ಒಂದ್ವೆತಿ ಚಮ್ಡಾ ಮಾಡ್ಕೋಡ್ತೀನಿ... ದೇವ್ರ ಎಣಾ ಕ್ವಡ್ರಿ.."[೨೧೦]

---

೨೦೮ ಅದೇ, ಪು : ೪೨೧.

೨೦೯ ಬೆಸಗರಹಳ್ಳಿ ರಾಮಣ್ಣ, ಕನ್ನಂಬಾಡಿ, ೧೯೮೬, ಪು : ೪೬೩.

೨೧೦ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ, ೨೦೧೧, ಪು : ೩೧.

ಭಾಷೆಯ ಬಳಕೆ ಕುರಿತು ಓ.ಎಲ್. ನಾಗಭೂಷಣ ಸ್ವಾಮಿ ಅವರು **"........ ಕನ್ನಡ ಕಥೆಗಳ ಕಾಮನಬಿಲ್ಲಿನ ಒಂದು ತುದಿಯಲ್ಲಿ ತೇಜಸ್ವಿ, ದೇವನೂರು ಕಥೆಗಳ ಬಣ್ಣವಿದ್ದರೆ ಇನ್ನೊಂದು ತುದಿಯಲ್ಲಿ ಕುಂವೀ ಬರವಣಿಗೆಯ ಬಣ್ಣ ಕಾಣುತ್ತದೆ"**[೨೧೧] ಎಂಬ ಅಭಿಪ್ರಾಯ ಭಾಷೆ ಶಕ್ತಿಯಿಂದೆನ್ನಬಹುದು.

ರಾಮಣ್ಣ ಅವರ ಕತೆಗಳ ಭಾಷೆಯು ಸುಗ್ಗಿ, ಮಳೆಗರೆಯಿತು ಬಾನು ಹಸುರಾಯಿತು ಮನ, ದೇವರ ಹೂ ಕತೆಗಳಲ್ಲಿ ತಂಗಾಳಿಯಂತೆ ಸೌಮ್ಯವಾಗಿದ್ದರೆ, ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಕೆಲವೆಡೆ ಚಂಡಮಾರುತದ ಅಬ್ಬರವೇ ಇದೆಯೆನ್ನಬಹುದು. ಇಬ್ಬರ ಕತೆಗಳಲ್ಲೂ ಜಾನಪದಸತ್ವ ಮತ್ತು ದೇಸಿಪ್ರಜ್ಞೆಯನ್ನು ಒಳಗೊಂಡಂತೆ ಕತೆಗಳಲ್ಲಿ ಸಾಹಿತ್ಯ ಸಂಸ್ಕೃತಿ, ಭಾಷೆಗೆ ಅನನ್ಯವಾದ ಸಂಬಂಧವನ್ನು ಕಾಣಬಹುದಾಗಿದೆ. ಗ್ರಾಮೀಣ ಸೊಗಡಿಲ್ಲದ ಭಾಷೆ ಆತ್ಮವಿಲ್ಲದ ದೇಹವಾಗುತ್ತದೆಯೆಂಬುದು ವಿದ್ವಾಂಸರ ಅಭಿಪ್ರಾಯ ಕತೆಗಳ ಭಾಷೆಗೆ ಪೂರಕವಾಗಿದೆ.

ರಾಮಣ್ಣ ಅವರ 'ಸಂತೆಯ ಒಳಗೊಂದು ಮನೆಯಮಾಡಿ' ಕತೆಯಲ್ಲಿ ದಿಂಡು ಹೊತ್ತು ಬಂದ ಬಿಸಿಲ ತನ್ನ ಕಷ್ಟ ನೋವನ್ನು ದೇವರಿಗೆ ಬೈಯ್ಯುವ ಮೂಲಕ ಸಮಾಧಾನ ತಂದುಕೊಳ್ಳಲು ಪ್ರಯತ್ನಿಸಿದ.

"ಈ ಹಾಳು..... ದೇವರ್ಗೆ ಬಡವರು ಅಂದ್ರೆ ಅದೇನು ಕೋಪವೋ? ಅವ್ನ ಮನೆ ಎಕ್ಕುಟ್ಟೋಗ, ನಂನೇ ಸತಾಯಿಸ್ತಾನೆ"[೨೧೨] ಮಗನನ್ನು ಕಳೆದುಕೊಂಡ ದುಃಖದಲ್ಲಿ ಹೊಂಬಾಳೆಯ ಗೋಳಾಟ ಮುಗಿಲು ಮುಟ್ಟಿದಾಗ ಬಿಸಿಲ 'ಲೇ। ಬಾರೆ ಎಂಗೆಬಂದ್ನೋ ಅಂಗೆ ಒಂಟೋದ' **"ಹಾಳು ಜವರಾಯ ಸೂಳೆಮಗನ್ಗೆ ಬಡವರು ಅಂದರೆ ಬೋಸದ್ರ। ಅವರ ಪರಾಣ ಅಂದ್ರೆ ಅವನ್ಗೆ ಕಸಕ್ಕಿಂತ ಕಡೆ"**[೨೧೩]

ಬಡವರಿಗೆ ಬಡವರೇ ಆಗುವುದು, ದೇವರು ಶ್ರೀಮಂತರ ಪರ ಎನ್ನುವುದು ಬಿಸಿಲನ ಅನಿಸಿಕೆ. ಬಸ್ ಪ್ರಯಾಣದ ನಡುವೆ ರಾಜ ಸತ್ತಾಗ ಪ್ರಯಾಣಿಕರು ರಾಜನ ಹೆಣವನ್ನು, ಅವನಪ್ಪನನ್ನು ಬಸ್ಸಿನಿಂದ ಹೊರಹಾಕಿದಾಗ ಪುಟ್ಟಣ್ಣ ಬಸ್ಸಿನಲ್ಲಿದ್ದವರ ಮುಖಕ್ಕೆ ಬಾರಿಸಿದಂತೆ

---

೨೧೧ ಅದೇ, ಬೆನ್ನುಡಿ.

೨೧೨ ಕಣಜ, ಲೋಹಿಯಾ ಪ್ರಕಾಶನ, ೨೦೧೧. ಪು : ೨೫೭.

೨೧೩ ಅದೇ, ಪು : ೨೬೦.

‘ಎಲ್ಲ ಒಂದು ದಿನ ಈ ಮಗಿನಂಗೆ ಹೆಣ ಆಗೋರೆ.. ನೆಪ್ಪಿಟ್ಟುಕೊಳ್ಳಿ’ ಎಂದು ಕೆಳಗಿಳಿದ. ನೋವು-ದುಃಖದಲ್ಲೂ ಪುಟ್ಟಣ್ಣ ಜನರ ಅಮಾನವೀಯ ವರ್ತನೆಯನ್ನು ಖಂಡಿಸಿದ್ದು ತುಸು ಸಮಾಧಾನವೆನಿಸುತ್ತದೆ.

ಕುಂ.ವೀರಭದ್ರಪ್ಪ ಅವರ ‘ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ’ ಕತೆಯಲ್ಲಿ ಎಲುಗ,

‘ಹಂದಿ ಸಂಗಾಟ ಹಂದಿಯಂತೆ ಬಿದ್ದಿರೋ ತನಗ್ಯಾಕೆ ಸರಕಾರದೋರು ಹೇಳುವಂಥ ಜಡ್ಡುಬಾಪತ್ತು’ ಬರುತ್ತಿಲ್ಲ ಎಂಬ ಅವನ ಯೋಚನೆ ಅತಾರ್ಕಿಕವಲ್ಲವೆನಿಸುತ್ತದೆ. ಪೊಲೀಸರು ಹಂದಿಕೊಂದಾಗ ದುಃಖಿತನಾಗಿದ್ದ ಎಲುಗನಿಗೆ ಕೊರಚರು ಹೆಂಡಕುಡಿಸಿ,

“ಸುಮ್ನಿರು ಪರಪಂಚ ದೊಡ್ಡದೈತಿ”[೨೧೪]

ತಳವರ್ಗದವರ ಸಂತೈಸುವಿಕೆಯಲ್ಲಿ ಬದುಕಿನ ಹಂಬಲವೇ ಕಾಣುತ್ತದೆ.

“ದಾ.-----ಲವುಡಿ ಮಗಂದು ನನ್ಕೂಡ ಮಾತಾಡ್ತದೆ”[೨೧೫] ಯಾರೂ ತಾಗಿಸಿಕೊಳ್ಳದ ಹಂದಿಯನ್ನು ಪ್ರೀತಿಸುವ ಕೊರಚ ಜನಾಂಗದ ಬದುಕಿನ, ಪ್ರಾಣಿಯ ಬಗೆಗಿನ ಪ್ರೀತಿ ಹೊಸ ದಿಕ್ಕಿನತ್ತ ನೋಡುವಂತೆ ಮಾಡುತ್ತದೆ. ಶ್ರೇಷ್ಠ ಮತ್ತು ಕನಿಷ್ಠ ಎಂಬ ಭಾವ ಬಿಟ್ಟು ಜೀವವನ್ನು ಜೀವವಾಗಿ ನೋಡಬೇಕೆಂಬ ನೈತಿಕ ಪ್ರಜ್ಞೆ ಅಭಿವ್ಯಕ್ತಗೊಳ್ಳುತ್ತದೆ.

“ ‘ವರೇ ಚಿನ್ನೋಡಾ ವರೇಯ್ ಚವುಡ’
ಚವುಡಾ ಬಾರಯ್ಯ”[೨೧೬]

ತೆಲುಗಿನ ಪ್ರಭಾವ, ಕನ್ನಡತನ ಎರಡೂ ಬೆರೆತ ಅವರ ಕನ್ನಡಾಂಧ್ರಭಾಷೆ ಭಾವ, ಸಂಸ್ಕೃತಿ, ಸಾಮರಸ್ಯದ ಬೆಸುಗೆ, ಬದುಕಿನ ನೋಟವನ್ನು ವಿಶಾಲಭಿತ್ತಿಯಲ್ಲೇ ಕಾಣಿಸುತ್ತದೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳ ಬನಿ, ದನಿ, ಬೆಡಗು, ಬೆರಗು, ದೇಸಿತನವೆಲ್ಲವು ಪ್ರಾದೇಶಿಕ ಭಾಷೆಯಿಂದಲೇ ಬಂದಿದೆಯೆನ್ನಬಹುದು. ಹಳ್ಳಿ ಮತ್ತು ದೇಸಿ ಸಂಸ್ಕೃತಿ ನಿರ್ನಾಮವಾಗಬಾರದೆಂಬ ಕಾಳಜಿ ಇಬ್ಬರದೂ ಎನ್ನಬಹುದು. ರಾಮಣ್ಣ ಅವರ

---

೨೧೪ ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ೨೦೧೦. ಪು : ೨೦-೨೧.
೨೧೫ ಅದೇ, ಪುಟ : ೨೨.
೨೧೬ ಅದೇ, ಪುಟ : ೨೮.

ಕತೆಗಳಲ್ಲಿ ಭಾಷೆ ಹಳ್ಳಿ ಮಾತಿನ ಕಂಪಿನಲ್ಲಿದ್ದರೆ, ಕುಂ.ವೀರಭದ್ರಪ್ಪ ಅವರ ಗ್ರಾಮ್ಯ ಭಾಷೆ ಓದಿ ಅರ್ಥಮಾಡಿಕೊಳ್ಳಲು ಸಮಯ ಬೇಕೆನಿಸುತ್ತದೆ. ಇಬ್ಬರೂ ಗ್ರಾಮೀಣ ಭಾಷೆಯನ್ನು ಕತೆಗಳ ಮೂಲಕ ಉಣಬಡಿಸಿದ್ದಾರೆ. ಬೈಗುಳದಲ್ಲೂ ಸಮೃದ್ಧಭಾಷೆಯನ್ನು ಕತೆಗಳಲ್ಲಿ ಕಾಣಬಹುದಾಗಿದೆ. ದೇಸಿ ಭಾಷೆಯ ಸೊಗಡಿನಿಂದ ಸಮೃದ್ಧವಾದ ಅನುಭವ ಪ್ರಪಂಚವನ್ನು ಅನಾವರಣಗೊಳಿಸುತ್ತ ಕನ್ನಡ ಸಾಹಿತ್ಯ ಮತ್ತು ಭಾಷೆಗೆ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕೊಡುಗೆ ಮಹತ್ವದ್ದಾಗಿದೆ. ಇಂಗ್ಲೀಷ್ ಭಾಷೆಯ ಪ್ರಭಾವದ ಹಂಗಿದ್ದರೂ ದೇಶೀಯ ಪ್ರಜ್ಞೆಯ ನೆಲೆಯಲ್ಲಿ ಅರಳಿದ ಕತೆಗಳಾಗಿವೆ. ಅವರ ಕತೆಗಳಲ್ಲಿ ಭಾಷೆ ಬಂಡವಾಳವೂ ಹೌದು.

"ಸೊಗಡು ಅಂದರೆ ಬರೀ ಶಬ್ದ ಮತ್ತು ಅರ್ಥ ಅಲ್ಲ. ಅದಕ್ಕಿಂತಲೂ ಬಹಳ ಮುಖ್ಯವಾದಂತಹ ಸಮಾಜ, ಸಂಸ್ಕೃತಿ, ಸ್ವಭಾವ, ವರ್ತನೆ, ಸ್ಥಾನಮಾನ, ಭಾವನೆಗಳು, ಪರಸ್ಪರ ನೋಡುವ ದೃಷ್ಟಿ, ಜೊತೆಗೆ ಆಹಾರ ಇವುಗಳಿಗೆ ಸಂಬಂಧಪಟ್ಟ ವಿವರಗಳೆಲ್ಲ ಎರಡೇ ಎರಡು ಮಾತುಗಳಲ್ಲಿ ವ್ಯಕ್ತವಾಗುತ್ತದೆ",[೨೧೭] ಎಂದು ಎಂ.ಹೆಚ್. ಕೃಷ್ಣಯ್ಯ ಅವರು ಹೇಳಿರುವಂತೆ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕತೆಗಳ ಭಾಷೆಯ ಸೊಗಡು ಮಂಡ್ಯ ಮತ್ತು ಬಳ್ಳಾರಿ ಸೀಮೆಯ ಜನರ ಭಾವನೆಗಳನ್ನು ಜೀವಂತವಾಗಿ ಹಿಡಿದಿಟ್ಟಿದೆ.

ಕೊಟ್ಟೂರು ಸುತ್ತಲಿನ ಭಾಷೆಯ ಬೀಸನ್ನು 'ಭಗವತಿಕಾಡಿ'ನ ಸವುಡವ್ವನ ಪಾತ್ರದಲ್ಲಿ, ಮಂಡ್ಯದ ಒರಟು ಮಾತಿನಲ್ಲಿರುವ ಮಾನವೀಯತೆಯನ್ನು 'ಕರುಣಾಳು ಬಾ ಬೆಳಕೆ' ಕತೆಯ ರಾಮೇಗೌಡನ ಪಾತ್ರಗಳಲ್ಲಿ ಸಾಂಕೇತಿಕವಾಗಿ ಕಾಣಬಹುದು. ರಾಮಣ್ಣ ಅವರು ಒಂದೇ ಹದದಲ್ಲಿ ಭಾಷೆ ಬಳಸಿದ್ದಾರೆ. ಅವರ ಕತೆಗಳಲ್ಲಿನ ಪಾತ್ರಗಳಲ್ಲಿ ಬಂಡಾಯ, ಮೌಲ್ಯಗಳ ಸಂಘರ್ಷವಿದ್ದರೂ ಅಂತರಂಗದ ಬುದ್ಧಿ – ಭಾವಗಳಲ್ಲಿ ಪಕ್ವವಾಗಿ ಹದಗೊಂಡು ಭಾವನೆಗಳು ಭಾಷೆಯಲ್ಲಿ ವ್ಯಕ್ತಗೊಳ್ಳುತ್ತದೆ.

ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಸಂಭಾಷಣೆ ಸಹಜ ಅಭಿವ್ಯಕ್ತಿಯಾದರೂ ಅಲ್ಲಿ ಹೈಡ್ರಾಮಾವೂ ಇದೆ. ಕುಂ.ವೀರಭದ್ರಪ್ಪ ಕತೆಯ ಭಾಷೆಯಲ್ಲಿ ಅರ್ಥವಾಗಲು ತಿಣುಕಬೇಕಾದ ಪದಗಳಿದ್ದರೂ, ತೆಲುಗು ಭಾಷೆಯ ಪದಗಳು ಸಹಜವಾಗಿ ಮಿಳಿತಗೊಂಡಿವೆ. ಅವರ ಕನ್ನಡಾಂಧ್ರಭಾಷೆ ಗಡಿ ಸಂಬಂಧವನ್ನು ಬೆಸೆಯಬಲ್ಲವಾಗಿದೆ. ಅಲ್ಲಿ ಭಾಷೆಗೆ ಮೀರಿದ ಶಕ್ತಿಯೊಂದು ಸಂಬಂಧ, ಸಹಬಾಳ್ವೆಯ ಸೌಹಾರ್ದದ ಪಾಠವನ್ನು ಹೇಳಿಕೊಡುತ್ತದೆ.

---

೨೧೭ ಎಂ.ಎಚ್. ಕೃಷ್ಣಯ್ಯ, 'ನುಡಿಸೊಗಡು', ಕನ್ನಡ ಅಭಿವೃದ್ಧಿ ಪ್ರಾಧಿಕಾರವ, ೨೦೧೨, ಪು : ೧೦.

ಪ್ರಾದೇಶಿಕ ಭಾಷೆಯ ಬೆಡಗು-ಬಿನ್ನಾಣ, ವೈವಿಧ್ಯತೆ ವೈಶಿಷ್ಟ್ಯತೆಗಳನ್ನು ಇಬ್ಬರಕತೆಯಲ್ಲೂ ಕಾಣಬಹುದು. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಭಾಷೆ ಪ್ರಾದೇಶಿಕತೆಯಿಂದ ಭಿನ್ನವಾಗಿದ್ದರೂ ಮಣ್ಣಿನ ಸಂಸ್ಕೃತಿಯ ಅಂಶ ಸೇರಿ ಅದರ ಸೊಗಡಿನ ಸೊಗಸು ಅನನ್ಯವಾಗಿ ಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ಕತೆಯ ಭಾಷೆ ಬದುಕಿಗೆ ಭರವಸೆ ಮತ್ತು ಶಕ್ತಿಯನ್ನು ಕೊಡಬಲ್ಲವಾಗಿದೆ.

ತಳವರ್ಗಜನರ ಔದಾರ್ಯ, ಅಕ್ರೋಶ, ಆವೇಶ, ಅಸಹನೆ, ದೈನ್ಯತೆ, ನೋವು-ನಲಿವು, ಜೀವನಪ್ರೀತಿ ಹತಾಶೆ ಭಾಷೆಯಲ್ಲಿ ಸಹಜವಾಗಿ ರೂಪಿತವಾಗಿದೆ. ಕತೆಯಲ್ಲಿ ಬರುವ ಆಡುನುಡಿ, ಸಂದರ್ಭೋಕ್ತಿಗಳು, ಹರಿತವಾದ ನೇರನುಡಿ, ನುಡಿಗಟ್ಟು ಸಂಭಾಷಣೆ, ಗಾದೆ, ಬೈಗುಳ ಕತೆಗೆ ಬನಿಯನ್ನು ಹೆಚ್ಚಿಸಿವೆ. ಜೀವನಶೈಲಿ ಬದಲಾದ ಹಾಗೆ ಭಾಷೆ ಬದಲಾಗುತ್ತದೆ. ಪ್ರಾದೇಶಿಕ ಸಂಸ್ಕೃತಿಯ ಬದುಕಿನ ವಿಧಾನವನ್ನು ಇನ್ನೊಂದು ತಲೆಮಾರಿಗೆ ತಲುಪಿಸುವ ಕೆಲಸಕ್ಕಾಗಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರು ಸಮರ್ಥವಾಗಿ ಭಾಷೆಯನ್ನು ದುಡಿಸಿಕೊಂಡಿದ್ದಾರೆ. ಪ್ರಾದೇಶಿಕ ಸಂಸ್ಕೃತಿಯ ಮೌಲ್ಯ ಮರೆಯಾಗುತ್ತಿರುವ ಸಂದರ್ಭದಲ್ಲಿ ಕತೆಗಳಲ್ಲಿನ ಭಾಷೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿವೆ ಎನ್ನಬಹುದು.

ಗ್ರಾಮ ಸಂಸ್ಕೃತಿ ಬಗ್ಗೆ ಮಡಿವಂತಿಕೆ ತೋರುವ ಇಂದಿನ ತಲೆಮಾರಿಗೆ ಹಳ್ಳಿ ಬದುಕಿನ ಮನೋ ಶ್ರೀಮಂತಿಕೆಯನ್ನು ಕತೆಗಳು ತೋರಬಲ್ಲವಾಗಿದೆ. ಕೃಷಿ ಬದುಕಿನ ಮೌಲ್ಯದ ಅರಿವುಂಟು ಮಾಡುವ ಕತೆಗಳು ಭಾಷೆಯ ಬನಿ ಮತ್ತು ಶಕ್ತಿಯಿಂದ ತಮ್ಮ ಅಸ್ಮಿತೆಯನ್ನು ಕಟ್ಟಿಕೊಂಡಿವೆಯೆನ್ನಬಹುದು.

ಸಮಾರೋಪ

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಪರಂಪರೆಯು ಮಹತ್ವದ್ದಾಗಿದೆ. ಪ್ರಾಚೀನತೆ ಮತ್ತು ಆಧುನಿಕತೆಯ ಸಮ್ಮಿಳನವಾದ ಸಣ್ಣಕತೆ ಜೀವಂತಿಕೆಯ ಪ್ರಕಾರವೂ ಆಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಮುಂತಾದ ಎಲ್ಲಾ ಪಂಥಗಳನ್ನು ಒಳಗೊಂಡ ಲೇಖಕರು ಕಥಾಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ವಸಾಹತು ಪ್ರಭಾವದಿಂದ ಕನ್ನಡದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಬೆಳೆಸಿಕೊಂಡ ಗದ್ಯಕಥನದಲ್ಲಿ ಕಥಾ ಸಾಹಿತ್ಯ ಪ್ರಮುಖವಾದುದು. ಅನುಭವ ಮತ್ತು ಕಲ್ಪನೆ ಮೂಲಕ ಕತೆಕಟ್ಟಬಲ್ಲ ಸಾಹಿತ್ಯ ಸಮಾಜದ, ಲೋಕದ ಸಕಲವನ್ನೂ ತೆರೆದಿಡುತ್ತದೆ. ವಿಶಿಷ್ಟವೂ, ಗಂಭೀರವೂ ಆದ ಸಣ್ಣ ಕಥಾ ಮಾಧ್ಯಮ ಕಾಲಮಾನಕ್ಕೆ ಅನುಗುಣವಾಗಿ ವಿಭಿನ್ನ ವಸ್ತು, ಭಾಷೆ, ತಂತ್ರ ಮತ್ತು ಶೈಲಿಯಿಂದ ಹೊಸ ಆಯಾಮಗಳಲ್ಲಿ ಬೆಳೆಯುತ್ತಾ ಬಂದಿದೆ.

ಬೆಸಗರಹಳ್ಳಿ ರಾಮಣ್ಣನವರು ತಮ್ಮದೇ ಆದ ವಿಶಿಷ್ಟ ನೆಲೆಯಲ್ಲಿ ಕಥೆಗಳನ್ನು ರಚಿಸಿದ ಸೃಜನಶೀಲರು. ವೃತ್ತಿಯಲ್ಲಿ ವೈದ್ಯರಾದ ರಾಮಣ್ಣನವರು ತಾವು ಬೆಳೆದ ಪರಿಸರದಲ್ಲಿನ ಹಲವಾರು ಅಂಶಗಳನ್ನು ವಾಸ್ತವಿಕ ನೆಲೆಯಲ್ಲಿ ಕಥೆಯಾಗಿ ರೂಪಿಸಿದವರು. ತಮ್ಮ ಗ್ರಾಮೀಣ ಕೃಷಿ ಬದುಕಿನ ಅನುಭವಗಳನ್ನು ಮತ್ತು ವೃತ್ತಿ ಬದುಕಿನ ಘಟನೆಗಳನ್ನು ಕಥೆಗಳಾಗಿ ರಚಿಸಿ ಅವುಗಳನ್ನು ಪುನರ್ ನಿರ್ಮಿಸುವ ಪ್ರಯತ್ನವನ್ನು ಮಾಡಿದ್ದಾರೆ. ವ್ಯಕ್ತಿ ಮತ್ತು ಸಮಾಜದ ನಡುವಿನ ವೈವಿಧ್ಯತೆ, ವೈರುಧ್ಯತೆ, ಸಂಕೀರ್ಣತೆ ಹಾಗೂ ಅಮೂರ್ತತೆಯನ್ನು ಶೋಧಿಸುವ ದೇಸಿ ಸಂವೇದನೆ ಅವರ ಕತೆಗಳ ವಿಶಿಷ್ಟತೆಯಾಗಿದೆ. ಗ್ರಾಮೀಣ ಬದುಕನ್ನು ತಮ್ಮ ಕಥಾವಸ್ತುವಾಗಿಸಿಕೊಂಡ ರಾಮಣ್ಣನವರು ಸಾಮಾಜಿಕ ಬದುಕಿನ ದರ್ಪ-ದೌರ್ಬಲ್ಯ, ವಿಷಾದ-ವಿಷಣ್ಣತೆ, ಅಸಹಾಯಕತೆ-ಅಂತಃಕರಣ, ತಿಕ್ಕಾಟ-ತೀವ್ರತೆ, ಸೋಲು-ಗೋಳು, ಅನಾಥ ಪ್ರಜ್ಞೆ-ಆತ್ಮಬಲ, ನೀತಿ-ನಿಯಮಗಳನ್ನೊಳಗೊಂಡು ಬದುಕಿನ ಅನಂತ ಮುಖಗಳನ್ನು ಸೀಮಿತ ಪರಿಧಿಯಲ್ಲಿ ಸೂಕ್ಷ್ಮವಾಗಿ ಅನಾವರಣಗೊಳಿಸಿದ್ದಾರೆ. ಸಂಬಂಧಗಳ ಅರ್ಥಕ್ಕೆ ಹೊಸತೊಂದು ವ್ಯಾಖ್ಯಾನ ಬರೆಯಬಲ್ಲ ರಾಮಣ್ಣನವರ ಕತೆಗಳಲ್ಲಿ ಕೌಟುಂಬಿಕ ಬದುಕಿನ ಆಳವಾದ ಸಂಬಂಧಗಳ ತುಡಿತ ಕಂಡುಬರುತ್ತದೆ. ಅವರ ಕತೆಗಳು ಸಂಬಂಧಗಳನ್ನು ಗಟ್ಟಿಗೊಳಿಸಿ ಭಾವಗಳ ಪಕ್ವತೆ-ಅಪಕ್ವತೆಯ ಪರಿಣಾಮಗಳನ್ನು ಮನಗಾಣಿಸುತ್ತದೆ. ಅವರ ಕತೆಗಳಲ್ಲಿ ಬಹು ಸೂಕ್ಷ್ಮವಾದ ಸಾಂಸ್ಕೃತಿಕ ಪ್ರಜ್ಞೆಯಿದ್ದು, ಗ್ರಾಮೀಣ ಪ್ರದೇಶದ ಸಂಪ್ರದಾಯಕ್ಕೂ, ಸಂಸ್ಕೃತಿಗೂ ಹೆಚ್ಚು ಅಂತರವಿಲ್ಲದ್ದನ್ನು ಕಾಣಿಸುತ್ತದೆ. ಸಂಬಂಧಗಳ ಬಿರುಕಿನಿಂದ ಉಂಟಾಗುವ ಸಂಕಟ-ತಳಮಳಗಳನ್ನು ಕತೆಗಳು ಮನಗಾಣಿಸುತ್ತವೆ.

ವೃತ್ತಿಯಿಂದ ಅಧ್ಯಾಪಕರಾಗಿ, ಸೃಜನಶೀಲ ಬರಹಗಾರರಾಗಿರುವ ಕುಂ.ವೀರಭದ್ರಪ್ಪ ನವರು ಗ್ರಾಮೀಣ ಸಂವೇದನೆಯ ಲೇಖಕರು. ಬಂಡಾಯ ಮನೋಧರ್ಮವರೆಂದು ಗುರುತಿಸಿಕೊಂಡಿರುವ ಅವರಿಗೆ ಬದುಕಿನ ಅನುಭವದ್ರವ್ಯವೇ ಕತೆಗಳಾಗಿ ರೂಪುಗೊಂಡಿವೆ. ಕುಂ. ವೀರಭದ್ರಪ್ಪ ಅವರು ತಮ್ಮ ಕತೆಗಳಲ್ಲಿ ಹಸಿವಿನ ಬಹುಮುಖನೋಟವನ್ನು ಕಾಣಿಸುವುದರೊಂದಿಗೆ, ಅಲಕ್ಷಿತರ ಗುಣಾತ್ಮಕ ಬದುಕಿನ ಸಂವೇದನೆಯನ್ನು ಗುರುತಿಸುತ್ತಾರೆ. ದಲಿತ ಬದುಕಿನ ಬವಣೆಗಳು, ಜೀವಂತಿಕೆಯ ವಿವರಗಳನ್ನು ಕತೆಗಳಲ್ಲಿ ಕಾಣಿಸುವ ಕುಂ.ವೀರಭದ್ರಪ್ಪ ಅವರು ಆ ನೆಲೆಯಲ್ಲೇ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಕರ್ನಾಟಕಾಂಧ್ರಗಡಿಯಲ್ಲಿ ತಳವರ್ಗದ ಜನರ ಬಡತನ, ಅನಕ್ಷರತೆ, ಅಸಹಾಯಕತೆ, ಭೂಮಾಲೀಕರ ದಬ್ಬಾಳಿಕೆ, ಮಹಿಳೆಯರ ಶೋಷಣೆ ಮೇರೆ ಮೀರಿದ್ದವು. ಲೇಖಕರಲ್ಲಿ ಇಂಥ ಸಹಜವಾದ ಅನುಭವ ಲೋಕವಿತ್ತು. ತಮ್ಮ ವೃತ್ತಿ ಬದುಕಿನಲ್ಲಿ ಎದುರಾದ ಅನುಭವಗಳು ಕತೆಗಳಾಗಿ ರೂಪುಗೊಂಡವು.

ವಿಭಿನ್ನ ಪ್ರಾದೇಶಿಕ ವಲಯದ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರು ಭಿನ್ನ ಸಾಂಸ್ಕೃತಿಕ ನೆಲೆಯಲ್ಲಿ ಸಾಮಾಜಿಕ ಬದುಕನ್ನು ಕಟ್ಟಿಕೊಟ್ಟಿರುವುದನ್ನು ಮೌಲ್ಯದ ನೆಲೆಯಲ್ಲಿ ಗುರುತಿಸಲಾಗಿದೆ. ಆಧುನಿಕ ಸಂವೇದನೆಯ ಬರಹಗಾರರ ಒಲವು ಹಳ್ಳಿಗಾಡಿನ ಕಡೆಗೆ ಇದ್ದು ವ್ಯವಸ್ಥೆ ಸುಧಾರಿಸಬೇಕೆಂಬ ಆಶಯ ಕತೆಗಳಲ್ಲಿರುವುದು ಕಂಡುಬರುತ್ತದೆ. ಹಿಂದುಳಿದ ಜನಾಂಗದ ಜ್ವಲಂತ ಸಮಸ್ಯೆಗಳನ್ನು ಕತೆಯ ಚೌಕಟ್ಟಿಗೆ ತಂದಿರುವ ಲೇಖಕರಿಗೆ, ವ್ಯಕ್ತಿ ಕೇಂದ್ರಿತ ಚಿಂತನಾಕ್ರಮದಿಂದ ಸಾಮಾಜಿಕ ಮನುಷ್ಯ ಮುಖ್ಯವಾಗುವುದು ಕತೆಗಳಲ್ಲಿ ಸ್ಪಷ್ಟವಾಗಿದೆ. ಪ್ರತಿಕತೆಯಲ್ಲೂ ಹೊಸ ಆಶಯ, ಹೊಸ ಉತ್ಸಾಹ, ಹೊಸ ತತ್ವ ಪರಿಶೋಧನೆ ಇದ್ದೇ ಇದೆ.

ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರು ಬುದ್ಧ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ಅವರಿಂದ ಪ್ರಭಾವಿತರಾಗಿರುವುದನ್ನು ಅವರ ಕತೆಗಳಲ್ಲಿ ಗುರುತಿಸಲಾಗಿದೆ. ಅಂದರೆ ಗ್ರಾಮ ಸ್ವರಾಜ್ಯ, ಸಮಸಮಾಜ, ಅಸ್ಪೃಶ್ಯತಾ ನಿವಾರಣೆ, ಸ್ತ್ರೀಸ್ವಾತಂತ್ರ್ಯ, ಹಸಿವು ಮತ್ತು ಬಡತನ ನಿರ್ಮೂಲನೆ ಮುಂತಾದ ಸಾಮಾಜಿಕ ಬದಲಾವಣೆಗಳ ಮೂಲಕ ದೇಶವನ್ನು ಸದೃಢಗೊಳಿಸಬೇಕೆಂಬ ಮಹನೀಯರ ಆದರ್ಶಗಳನ್ನು ಇಬ್ಬರ ಕಥೆಗಳು ತಮ್ಮ ನೆಲೆಗಟ್ಟನ್ನಾಗಿ ಮಾಡಿಕೊಂಡಿರುವುದನ್ನು ಗುರುತಿಸಲಾಗಿದೆ. ಜೀತ ಪದ್ಧತಿಯಂತಹ ಅನಿಷ್ಟ ಸಂಪ್ರದಾಯ ತೊಲಗಿ ಎಲ್ಲರಿಗೂ ಊಟ, ಬಟ್ಟೆ, ವಸತಿಗಳು ದೊರೆತಾಗ ನಿಜವಾದ ಸ್ವಾತಂತ್ರ್ಯ ಜನರಿಗೆ ದೊರಕುತ್ತದೆ ಎಂಬ ಸಂದೇಶವನ್ನು ಇಬ್ಬರ ಕಥೆಗಳಲ್ಲಿ ಮನಗಾಣಲಾಗಿದೆ. ರವೀಂದ್ರನಾಥ

ಟಾಗೋರ್, ಪ್ರೇಮಚಂದ್, ಶರಚ್ಚಂದ್ರ, ಕುವೆಂಪು, ಕಾರಂತರ ಸಾಹಿತ್ಯದಲ್ಲಿನ ಮೌಲ್ಯದ ಹೊಳಹುಗಳಿಂದ ಕತೆಗಳು ಪ್ರಭಾವಿತವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಇಬ್ಬರ ಕತೆಗಳಲ್ಲೂ ಸಾಮ್ಯತೆ ಇರುವಂತೆ ವೈರುಧ್ಯವೂ ಮುಖ್ಯವಾಗಿರುತ್ತದೆ. ಸಂಸ್ಕೃತಿ ಚಿಂತನೆ ಕುರಿತಂತೆ ಇಬ್ಬರ ಭಿನ್ನತೆಗಳೇನು ಎಂಬುದನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಹಿಂದುಳಿದ ಸಮುದಾಯಗಳು ಅನೇಕ ರೀತಿಯ ದಮನಕ್ಕೆ ಒಳಗಾಗಿರುವುದನ್ನು ಚಿತ್ರಿಸಿರುವ ಲೇಖಕರು ಸಾಮಾಜಿಕ ನ್ಯಾಯದ ಆಶಯವನ್ನು ಕತೆಗಳಲ್ಲಿ ಕಾಣಿಸುತ್ತಾರೆ. ಸಂಕಷ್ಟದಲ್ಲಿ ಬದುಕುತ್ತಿರುವ ಅಸಹಾಯಕರು ಒತ್ತಡದ ಕೊನೆಯ ಬಿಂದುವಿನಲ್ಲಿ ತಮ್ಮೆಲ್ಲ ಪ್ರತಿರೋಧದೊಂದಿಗೆ ಎದುರುಬೀಳುವುದು, ಕತೆಯ ಅನಿರೀಕ್ಷಿತ ತಿರುವಿನ ಸನ್ನಿವೇಶಗಳು ವಿಶೇಷವೆನಿಸುತ್ತದೆ. ಸಾಮಾನ್ಯನ ಅಸಾಮಾನ್ಯ ವ್ಯಕ್ತಿತ್ವದ ಅನಾವರಣವೇ ಕತೆಯ ಉದ್ದೇಶವಾಗಿದೆ. ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಘರ್ಷವನ್ನು ನಿರೂಪಿಸುವುದು ಕತೆಗಳಲ್ಲಿ ಕಂಡುಬರುತ್ತದೆ. ಕತೆಗಳಲ್ಲಿ ಪ್ರಗತಿಪರ ಚಿಂತನೆ, ಉದಾರಧೋರಣೆ ಕಂಡುಬರುವುದಲ್ಲದೆ, ತಳವರ್ಗದ ಬದುಕನ್ನು ಲೇಖಕರು ಪ್ರೀತಿಯಿಂದ ಕಾಣುತ್ತಾರೆ. ಅವರು ಕತೆಗಳಲ್ಲಿ ಕಾಣಿಸಿರುವ ದಾಂಪತ್ಯ, ಬಡತನ, ವಂಚನೆ, ಅನೈತಿಕತೆ, ಜಾತಿ, ಅಸ್ಪೃಶ್ಯತೆ, ಲಿಂಗಭೇದ, ವರ್ಗಭೇದ, ಸಂಘರ್ಷ ಮತ್ತು ಶೋಷಣೆಯ ವಿಭಿನ್ನ ಮುಖಗಳನ್ನು ಗುರುತಿಸಲಾಗಿದೆ.

ವ್ಯಕ್ತಿ ಮತ್ತು ಸಮಾಜದ ನಡುವಿನ ವೈವಿಧ್ಯ, ವೈರುಧ್ಯ, ಸಂಕೀರ್ಣತೆ, ಅಮೂರ್ತತೆಗಳನ್ನು ಶೋಧಿಸುವ ಸಮಾಜವಾದಿ, ಸಾಂಸ್ಕೃತಿಕ, ದೇಸಿಸಂವೇದನೆ ಇಬ್ಬರ ಕತೆಗಳ ವಿಶಿಷ್ಟತೆಯಾಗಿದೆ. ಹಳ್ಳಿಯ ಜೀವನ, ಹಳ್ಳಿಯ ಪಾತ್ರಗಳು, ಹಸಿವು ಮತ್ತು ಬಡತನದ ಬಹುಮುಖದ ಚಿತ್ರಣಕೊಡುವುದರ ಮೂಲಕ ತಳವರ್ಗದ ಬದುಕನ್ನು ಕತೆಗಳು ಅನಾವರಣಗೊಳಿಸುವುದೇ ಕತೆಗಳ ಕೇಂದ್ರವಸ್ತು. ಇಬ್ಬರ ಕತೆಗಳಲ್ಲಿನ ಮೌಲ್ಯ ಶೋಧನೆ ಗ್ರಾಮೀಣ ಬದುಕು ಮತ್ತು ಅಲ್ಲಿನ ಸಮಸ್ಯೆಗಳನ್ನು ಅಲ್ಲಿಯ ಪಾತ್ರಗಳಿಂದ ಕಾಣಿಸುವ ಲೇಖಕರು ಮಾನವೀಯ ಅಂತಃಕರಣದಿಂದ ತಳವರ್ಗದ ಬದುಕನ್ನು ನಿರೂಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಅವರ ಕತೆಗಳಲ್ಲಿ ಕಂಡುಬರುವ ಮೌಲ್ಯಯುತವಾದ ಅಂಶಗಳನ್ನು ಸಂಶೋಧನಾ ಪ್ರಕ್ರಿಯೆಗೆ ಒಳಪಡಿಸುವುದು ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ಯಂತ ಸೂಕ್ತವಾದ ಕಾರ್ಯವಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಕತೆಗಳಲ್ಲಿ ಪ್ರಸ್ತುತವಾಗಿರುವ ಮೌಲಿಕ ಸಂದೇಶಗಳು ಇಂದಿನ ಸಾಮಾಜಿಕ ಬದುಕಿನ ಮೇಲೆ ಬೆಳಕನ್ನು ಚೆಲ್ಲುತ್ತವೆ. ಸಾರ್ವಕಾಲಿಕ ಮೌಲ್ಯಗಳು ಮತ್ತು

ಆದರ್ಶಗಳು ಅವರ ಕಥಾ ಸಾಹಿತ್ಯದಲ್ಲಿ ರೂಪುಗೊಂಡಿರುವುದನ್ನು ಅಧ್ಯಯನ ಮಾಡಲು ನಾನು ನನ್ನ ಮಹಾಪ್ರಬಂಧವನ್ನು ಈ ಕೆಳಕಂಡ ಅಧ್ಯಾಯಗಳಾಗಿ ವಿಭಾಗಿಸಿ ಸಂಶೋಧನಾ ಕಾರ್ಯವನ್ನು ಕೈಗೊಂಡಿರುತ್ತೇನೆ.

ಪ್ರಸ್ತುತ ಮಹಾಪ್ರಬಂಧದ ಅಧ್ಯಯನದ ಅನುಕೂಲದೃಷ್ಟಿಯಿಂದ ಐದು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿರುತ್ತೇನೆ. ಅಧ್ಯಾಯ ಒಂದು 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ'ಯನ್ನು ಒಳಗೊಂಡಿದ್ದು ನನ್ನ ಮಹಾಪ್ರಬಂಧದ ಅಧ್ಯಯನದ ಉದ್ದೇಶ, ಅಳವಡಿಸಿಕೊಂಡಿರುವ ವೈಧಾನಿಕತೆ ಮತ್ತು ನನ್ನ ಮಹಾ ಪ್ರಬಂಧದ ವ್ಯಾಪ್ತಿಯನ್ನು ಕುರಿತಂತೆ ವಿವರಿಸಲಾಗಿದೆ.

ಎರಡನೇ ಅಧ್ಯಾಯ "ಪೂರ್ವಸಾಹಿತ್ಯ ಸಮೀಕ್ಷೆ"ಯು ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಅವರ ಕತೆಗಳನ್ನು ಕುರಿತಂತೆ ಇದುವರಗೆ ನಡೆದಿರುವ ಅಧ್ಯಯನಗಳ ಪೂರ್ವ ಸಾಹಿತ್ಯ ಸಮೀಕ್ಷೆಯನ್ನು ಒಳಗೊಂಡಿದ್ದು ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನಾ ಕೇಂದ್ರಗಳಲ್ಲಿ ನಡೆದಿರುವ ಸಂಶೋಧನಾ ಪ್ರಬಂಧಗಳ ತಾತ್ವಿಕವಾದ ಸಮೀಕ್ಷೆಯನ್ನು ಈ ಭಾಗದಲ್ಲಿ ಸಮೀಕ್ಷಿಸಲಾಗಿದೆ.

ಮೂರನೆಯ ಅಧ್ಯಾಯ 'ಮೌಲ್ಯ ಪ್ರಜ್ಞೆಯ ಪರಿಕಲ್ಪನೆ' ಭಾಗವು ಸಾರ್ವತ್ರಿಕ ಮೌಲ್ಯಗಳ ಜೊತೆಗೆ ಹೊಸ ಮೌಲ್ಯಗಳ ಗುರುತಿಸುವಿಕೆಯನ್ನು ಒಳಗೊಂಡಿದೆ. ಸಾಹಿತ್ಯದಲ್ಲಿ ದಾಖಲಾಗಿರುವ ಸಾಹಿತ್ಯಿಕ ಮೌಲ್ಯ, ನೈತಿಕಮೌಲ್ಯ, ಅಧ್ಯಾತ್ಮಿಕ ಮೌಲ್ಯ, ಸಾಮಾಜಿಕ ಮೌಲ್ಯಮತ್ತು ವೈಚಾರಿಕ ಮೌಲ್ಯ ಮೊದಲಾದ ಮೌಲ್ಯದ ನೆಲೆಗಳನ್ನು ವಿದ್ವಾಂಸರ ಚಿಂತನೆಯ ಬೆಳಕಿನಲ್ಲಿ ವಿವೇಚಿಸಲಾಗಿದೆ. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ಒಡಮೂಡಿರುವ ಮೌಲಿಕ ಸಂದೇಶಗಳನ್ನು ಗುರುತಿಸಿ ನಿರೂಪಿಸಲಾಗಿದೆ.

ನಾಲ್ಕನೇ ಅಧ್ಯಾಯವು 'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ'ವನ್ನು ಒಳಗೊಂಡಿದೆ. ಈ ಇಬ್ಬರು ಕಥೆಗಾರರ ಜೀವನದ ವಿವಿಧ ಘಟ್ಟಗಳ ಪ್ರಗತಿಯು ಅವರ ಸಾಹಿತ್ಯದ ಪ್ರಗತಿಯನ್ನು ಹೇಗೆ ರೂಪಿಸಲ್ಪಟ್ಟಿತು ಎಂಬ ಅಂಶಗಳನ್ನು ಒಳಗೊಂಡಿದ್ದು ಇಬ್ಬರ ಪರಿಸರವು ಅವರವರ ಸಾಹಿತ್ಯದ ರಚನೆಗೆ ಹೇಗೆ ಬೆನ್ನೆಲುಬಾಗಿ ನಿಂತು ಸಹಕಾರಿಯಾದವು ಎಂಬುದರ ವಿವರಣೆಯನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ 'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಮೌಲ್ಯಪ್ರಜ್ಞೆಯ ವಿಭಿನ್ನ ನೆಲೆಗಳ ತೌಲನಿಕ ವಿವೇಚನೆ' ಕುರಿತಂತೆ ತೌಲನಿಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನವನ್ನು ನಡೆಸಲಾಗಿದೆ. ಈ ಇಬ್ಬರ ಕಥೆಗಳಲ್ಲಿ ಕಂಡುಬರುವ ಪ್ರಮುಖವಾದ ಮೌಲಿಕಸ್ತರಗಳನ್ನು ಸಮಾಜವಾದಿ-ದೇಸಿಸಂವೇದನೆಗಳ ಹಿನ್ನೆಲೆಯಲ್ಲಿ ರೂಪಿಸಲಾಗಿದೆ. ಈ ಕೆಳಕಂಡಂತೆ ಗುರುತಿಸಿ ಉಪ ಅಧ್ಯಾಯಗಳಾಗಿ ರೂಪಿಸಲಾಗಿದೆ. ಅವುಗಳೆಂದರೆ –

೫:೧ ಸಾಮಾಜಿಕ ನೆಲೆ

೫:೨ ಸ್ತ್ರೀಸಂವೇದನೆ

೫:೩ ಹಸಿವು ಮತ್ತು ಬಡತನ

೫.೪ ಧರ್ಮ ಮತ್ತು ಆಚರಣೆ

೫.೫ ಭಾಷಿಕ ನೆಲೆ

'ಸಾಮಾಜಿಕ ನೆಲೆ'ಯಲ್ಲಿ ಇಬ್ಬರೂ ಕಥೆಗಾರರ ಕತೆಗಳಲ್ಲಿ ಕಂಡುಬರುವ ಸಮಾಜದ ಜನಜೀವನ, ಜೀವನ ಪ್ರೀತಿ, ನಿಷ್ಠೆ, ಅಸಮಾನತೆ, ಪ್ರತಿರೋಧಗಳನ್ನು ಗುರುತಿಸಿ ಪ್ರಸ್ತುತ ಸಮಕಾಲೀನ ಸಮಾಜದ ಅಂಶಗಳನ್ನು ವಿಶ್ಲೇಷಿಸಿ ಅದರ ಮೂಲಕ ಸಮಾಜ, ಸಾಮರಸ್ಯಕ್ಕೆ, ಸಮ-ಸಮಾಜ ಸೃಷ್ಟಿಗೆ ಯಾವ ರೀತಿಯ ಮೌಲಿಕ ಅಂಶಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಲಾಗಿದೆ.

'ಸ್ತ್ರೀ ಸಂವೇದನೆ' ಕುರಿತಂತೆ ಇಬ್ಬರೂ ಕಥೆಗಾರರು ವಾಸ್ತವಿಕ ನೆಲೆಯ ಚಿತ್ರಣಗಳನ್ನು ನೀಡಿದ್ದು, ಇದರಲ್ಲಿ ಹೆಣ್ಣಿನ ಬವಣೆಗಳನ್ನು ಆಸಕ್ತಿಯಿಂದ ಚಿತ್ರಿಸಿದ್ದಾರೆ. ಹೆಣ್ಣಿನ ಮೇಲೆ ಆಗುವ ಅನೇಕ ಸಾಮಾಜಿಕ ಶೋಷಣೆಯನ್ನು ಗಮನದಲ್ಲಿಟ್ಟುಕೊಂಡು ಈ ಭಾಗವನ್ನು ವಿಶ್ಲೇಷಿಸಿ ಹೆಣ್ಣಿಗೂ ಕೂಡ ಮೌಲ್ಯಯುತವಾದ ಬದುಕು ಅನಿವಾರ್ಯವೆಂಬುದನ್ನು ಕಂಡುಕೊಳ್ಳುವ ಮಾರ್ಗೋಪಾಯಗಳನ್ನು ಕತೆಗಳು ನಿರೂಪಿಸಿರುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

'ಹಸಿವು ಮತ್ತು ಬಡತನ' ಎಂಬ ಉಪಶೀರ್ಷಿಕೆಯಲ್ಲಿ ನಾನು ಇಬ್ಬರೂ ಕತೆಗಾರರ ಕಥೆಗಳ ಮೂಲನೆಲೆಯಾಗಿರುವ ಹಸಿವು ಮತ್ತು ಬಡತನದ ಚಿತ್ರಣವನ್ನು ಅಧ್ಯಯನಕ್ಕೆ

ಒಳಪಡಿಸಿದ್ದು, ವರ್ತಮಾನದಲ್ಲಿ ಹಸಿವು ಮತ್ತು ಬಡತನಗಳು ಹೇಗೆ ಮೌಲಿಕ ಅಂಶಗಳಾಗಿವೆ ಎಂಬುದನ್ನು ಈ ಇಬ್ಬರ ಕತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

ಮುಂದಿನ ಉಪಶೀರ್ಷಿಕೆ 'ಧರ್ಮ ಮತ್ತು ಆಚರಣೆ'ಯಲ್ಲಿ ಇಬ್ಬರೂ ಕತೆಗಾರರ ಕತೆಗಳಲ್ಲಿ ಒಡಮೂಡಿರುವ ನಂಬಿಕೆ, ಮೂಢನಂಬಿಕೆ, ಆಚರಣೆ, ಸಂಪ್ರದಾಯ, ಪದ್ಧತಿಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿ ಧರ್ಮ ಆಚರಣೆಗಳು ಆಧುನಿಕ ಕಾಲದಲ್ಲಿ ಹೇಗೆ ಮೌಲ್ಯವನ್ನು ಕಳೆದುಕೊಂಡಿವೆ. ನಿಜವಾದ ಧರ್ಮದ ಮೌಲ್ಯ ಮಾನವೀಯತೆ ಎಂಬ ಸತ್ಯವನ್ನು ಇಬ್ಬರ ಕತೆಗಳು ಹೇಗೆ ಧ್ವನಿಸುತ್ತವೆ ಎಂಬುದನ್ನು ತೌಲನಿಕವಾದ ವಿಶ್ಲೇಷಣಾತ್ಮಕ ವಿಧಾನದಿಂದ ಅಧ್ಯಯನ ಮಾಡಲಾಗಿದೆ.

'ಭಾಷಿಕ ನೆಲೆ'ಯೆಂಬ ಉಪಶೀರ್ಷಿಕೆಯು ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪನವರು ತಮ್ಮ ತಮ್ಮ ಪರಿಸರದ ಹಿನ್ನೆಲೆಯ ಭಾಷೆಯನ್ನು ಹೇಗೆ ತಮ್ಮ ಕತೆಗಳಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುದಾಗಿದೆ. ಉತ್ತರಕರ್ನಾಟಕ ಮತ್ತು ದಕ್ಷಿಣದ ಮಂಡ್ಯದ ಆಡುಭಾಷೆ ಅವರವರ ಕತೆಗಳಲ್ಲಿ ಬಳಕೆಯಾಗಿದ್ದು, ಭಿನ್ನ ಭಿನ್ನ ನೆಲೆಗಳಲ್ಲಿ ತನ್ನ ತನ್ನದೇ ಆದ ಭಾಷಾ ಸೊಗಡನ್ನು ಹೊಂದಿದೆ. ಜನರ ಭಾಷೆ ಸಾಹಿತ್ಯ ಭಾಷೆಯಾಗಿ ಹೇಗೆ ಮೌಲಿಕವಾದುದು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

'ಸಮಾರೋಪ' ಎಂಬ ಕೊನೆಯ ಭಾಗದಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯ ಪ್ರಜ್ಞೆಯ ವಿವಿಧ ನೆಲೆಗಳನ್ನು ತೌಲನಿಕವಾಗಿ ವಿಶ್ಲೇಷಣೆಯ ಫಲಿತಗಳನ್ನು ದಾಖಲಿಸಲಾಗಿದ್ದು ಮಹಾಪ್ರಬಂಧದ ಒಟ್ಟು ನೋಟವನ್ನು ಮತ್ತು ನನ್ನ ಅಧ್ಯಯನದ ಮೌಲಿಕ ಫಲಿತಗಳನ್ನು ಇದು ಒಳಗೊಂಡಿರುತ್ತದೆ.

ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದ ಮೂಲಕ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಮೌಲ್ಯ ಪ್ರಜ್ಞೆಯನ್ನು ವಿವಿಧ ಆಯಾಮಗಳ ಮೂಲಕ ತೌಲನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಭಿನ್ನ ಪ್ರಾದೇಶಿಕ ನೆಲೆಯವರಾಗಿದ್ದು ಇಬ್ಬರೂ ಲೇಖಕರ ದೃಷ್ಟಿ–ಧೋರಣೆ, ನಿಲುವು–ಆಶಯಗಳನ್ನು ಅಧ್ಯಯನದ ಮೂಲಕ ಗ್ರಹಿಸಲಾಗಿದೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ ಇಬ್ಬರೂ ವಿಶಿಷ್ಟಕತೆಗಾರರು. ಇಬ್ಬರೂ ಕೂಡ ತಮ್ಮ ಬದುಕಿನಲ್ಲಿ ಕಂಡುಕೊಂಡ ಅನುಭವಗಳನ್ನು ಕಥಾಸಾಹಿತ್ಯವಾಗಿ ರೂಪಿಸಿದ್ದಾರೆ. ದೇಶಿಸಂವೇದನೆ ಮತ್ತು ಸಾಮಾಜಿಕ ಕಳಕಳಿ ಇಬ್ಬರ ಕತೆಗಳ ಕೇಂದ್ರಬಿಂದು. ಮೌಲ್ಯಯುತವಾದ ಕತೆಗಳನ್ನು ರಚಿಸಿ ಕನ್ನಡ ಕಥಾ ಸಾಹಿತ್ಯವನ್ನು ವಿಸ್ತರಿಸಿದ ಈ ಇಬ್ಬರೂ ಕತೆಗಾರರ ಕತೆಗಳಲ್ಲಿ ನಿರೂಪಿತವಾಗಿರುವ ಮೌಲಿಕ ಅಂಶಗಳನ್ನು ಗುರುತಿಸಿ ವಿಶ್ಲೇಷಿಸಿರುವುದು ನನ್ನ ಮಹಾಪ್ರಬಂಧದ ಅಧ್ಯಯನ ಕ್ರಮವಾಗಿದೆ. ನಾನು ಈ ಸಂಶೋಧನಾಕಾರ್ಯದಲ್ಲಿ ಕಂಡುಕೊಂಡ ಮೌಲಿಕ ಅಂಶಗಳನ್ನು ಮತ್ತು ಅದರ ಫಲಿತಗಳನ್ನು ಈ ಕೆಳಕಂಡಂತೆ ಕಾಣಬಹುದು.

- ಸಮಕಾಲೀನ ಜೀವನಮೌಲ್ಯಗಳನ್ನು ಸಾಹಿತ್ಯ ಕೃತಿಯೊಂದು ಎಷ್ಟರಮಟ್ಟಿಗೆ ನಿರ್ವಹಿಸಿದೆ ಎಂಬುದು ಮುಖ್ಯವಾದಾಗ ಅಲ್ಲಿ ವ್ಯಕ್ತಿಶೋಧ, ಸಮಾಜಶೋಧ, ಮೌಲ್ಯಾದರ್ಶಶೋಧವೂ ನಡೆಯುತ್ತದೆ. ಕತೆಗಳು ಒಳಗೊಂಡಿರುವ ಮೌಲ್ಯಗಳನ್ನು ಕುರಿತು ಚಿಂತನೆ ನಡೆದಿದ್ದು ಸಾಮಾಜಿಕವಾಗಿ ಇರುವ ಹಲವಾರು ನ್ಯೂನತೆಗಳನ್ನು ತೆಗೆಯಬೇಕಾದ ಅಗತ್ಯತೆಗೆ ಒತ್ತುಕೊಟ್ಟಿರುವುದನ್ನು ಕಂಡುಕೊಂಡಿದ್ದೇನೆ. ಜೀವಪರವಾದ ಮೌಲ್ಯಗಳನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಪುನರ್ ರೂಪಿಸಿಕೊಳ್ಳಬೇಕಾದ ಅಗತ್ಯತೆಗೆ ಹೆಚ್ಚು ಮಹತ್ವ ಕೊಟ್ಟಿರುವುದು ಅಧ್ಯಯನದಿಂದ ಕಂಡುಬಂದಿದೆ.
- ಕತೆಗಾರರಿಗೆ ಗ್ರಾಮೀಣ ಬದುಕಿನೊಂದಿಗೆ ಸಂವೇದನೆಯಿದ್ದು, ಕತೆಗಳು ಹೇಳುವುದಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತಾ ನೈತಿಕ ನಿಲುವುಗಳನ್ನು ಓದುಗರಿಗೆ ಬಿಡುವ ಶೈಲಿಯಿದೆ. ಕತೆಗಳಲ್ಲಿ ವ್ಯಕ್ತಿಕೇಂದ್ರಿತ ಚಿಂತನಾಕ್ರಮ ಮಾನವತಾವಾದದ ನೆಲೆಯೆನಿಸಿ ವ್ಯಕ್ತಿ ಸಮುದಾಯದ ಚಹರೆಯಾಗಿ ಗುರುತಿಸಲ್ಪಡುವುದನ್ನು ರಾಮಣ್ಣನವರ ಗಾಂಧಿ, ಬೇಲಾ, ಕಕರನಯುಗಾದಿ, ಜೀತ, ಕರುಣಾಳು ಬಾ ಬೆಳಕೆ ಕತೆಗಳಲ್ಲೂ, ಕುಂವೀ ಅವರ ಹುಗ್ಗಿ, ಕತ್ತಲನು ತ್ರಿಶೂಲ ಹಿಡಿದ ಬಗೆ, ದೇವರ ಹೆಣ, ಡೋಮ, ಕಿವುಡ ನಾಯಿಯಾದ ಪ್ರಸಂಗ ಇತರೆ ಕತೆಗಳಲ್ಲಿ ಬಿಂಬಿತವಾಗಿದೆ.
- ಇಬ್ಬರ ಕತೆಗಳಲ್ಲೂ ಗ್ರಾಮಸಂಸ್ಕೃತಿಯ ಸೂಕ್ಷ್ಮ ಒಳನೋಟವಿದ್ದು ಸಾಮಾಜಿಕ ಜೀವನ, ಅರ್ಥವ್ಯವಸ್ಥೆ, ರಾಜಕಾರಣ ಮೌಲ್ಯಾಧಾರಿತವಾಗಬೇಕೆಂಬ ಆಶಯವಿದೆ. ಶೋಷಿತ ಜಗತ್ತಿನ ಗಾಢವಾದ ಅನುಭವದ್ರವ್ಯ ಲೇಖಕರಿಗೆ ಇದ್ದು ದಲಿತ ಬದುಕಿನ ಸತ್ವಭರಿತ

ಬದುಕನ್ನು ಕಟ್ಟಿಕೊಟ್ಟಿರುವುದು ಗಮನಾರ್ಹವಾದ ಅಂಶವಾಗಿದೆ. ತಳವರ್ಗದವರ ದೌರ್ಬಲ್ಯಗಳನ್ನು ಇಬ್ಬರೂ ಲೇಖಕರು ಮಾನವೀಯ ಅಂತಃಕರಣದಿಂದ ನೋಡುತ್ತಾರೆ. ದಲಿತರ ಬದುಕಿನ ಅಸ್ಮಿತೆಯೇ ಅವರ ಬದುಕಿನ ತಿರುಳು ಎಂದು ಲೇಖಕರು ಪರಿಭಾವಿಸುತ್ತಾರೆ. ದಲಿತರ ಬದುಕಿನಲ್ಲಿ ಸಮಸಮಾಜ, ಸಮತೆ, ಗುಣಾತ್ಮಕ ಬದುಕು ಇಬ್ಬರ ಆಶಯವಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಅಗತ್ಯತೆಯನ್ನು ಕತೆಗಳು ಮನಗಾಣಿಸುತ್ತವೆ.

- ಪ್ರಕೃತಿ ಮತ್ತು ಮಾನವ ಸಂಬಂಧ ಶ್ರೇಷ್ಠವಾದ ಅನುಸಂಧಾನವಾಗಿದ್ದು ಒಂದರ ಹೊರತು ಮತ್ತೊಂದು ಇರಲಾರದು. ಇಂತಹ ಪ್ರಕೃತಿಯೊಳಗಿನ ಸಮಾಜದಲ್ಲಿರುವ ಮನುಷ್ಯ ತನ್ನ ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕೆಂಬ ಆಶಯ ಇಬ್ಬರ ಕತೆಗಳಲ್ಲೂ ವ್ಯಕ್ತವಾಗಿದೆ. ಸ್ವಸ್ಥ ಸಮಾಜಕ್ಕೆ ಅಡ್ಡಿಯಾಗಿರುವ ಜಾತಿ, ಧರ್ಮ, ಆಚಾರ, ವಿಚಾರ, ಮೌಢ್ಯತೆ ಮೊದಲಾದ ಸಾಮಾಜಿಕ ಅನಿಷ್ಟಗಳನ್ನು ಕತೆಗಳಲ್ಲಿ ನಿರೂಪಿಸಿದ್ದಾರೆ. ಅವುಗಳಿಂದ ಆಗುವ ಅನಾಹುತಗಳಿಂದ ಮಾನವ ಬದುಕು ಸಂಕಷ್ಟಕ್ಕೆ ಸಿಲುಕಬಾರದು ಎಂಬ ಸಾಮಾಜಿಕ ಮೌಲ್ಯ ಇಬ್ಬರ ಕಥೆಗಳಲ್ಲಿರುವುದು ವ್ಯಕ್ತವಾಗಿದೆ.
- ರಾಮಣ್ಣನವರ ಕತೆಗಳಲ್ಲಿ ಸಹಜಶೀಲತೆಯ ಬೇರುಗಳು ಮುಖ್ಯವಾಗುತ್ತವೆ. ಸಂಬಂಧಗಳ ನಡುವೆ ಉದಾರತೆಯನ್ನು ಅವರು ಬಯಸುವುದನ್ನು ಸುಗ್ಗಿ, ಮಹಾನವಮಿ, ಮಳೆಗೆರೆಯಿತು ಬಾನು ಹಸುರಾಯಿತು ಮನ, ತಾಯಿ ಇತರೆ ಕತೆಗಳಲ್ಲಿ ಭಾವಗಳ ಪಕ್ವತೆ-ಅಪಕ್ವತೆಯ ಪರಿಣಾಮವನ್ನು ಮನಗಾಣಿಸುತ್ತವೆ. 'ಸುಗ್ಗಿ' ಕತೆಯಲ್ಲಿ ಅಣ್ಣನ ಸಹನಶೀಲತೆ ತಮ್ಮನ ಮನೋಭಾವದಲ್ಲಿ ಪರಿವರ್ತನೆಯುಂಟು ಮಾಡಿದರೆ, 'ಮಹಾನವಮಿ' ಭಾಂದವ್ಯವನ್ನು ಗಟ್ಟಿಯಾಗಿಸಿದರೆ, 'ದೇವರ ಹೂ' ಕತೆ ಹಳ್ಳಿಯ ಬದುಕಿನ ವಿಭಿನ್ನ ಮುಖಗಳಿಗೆ, ಸಂದಿಗ್ಧಗಳಿಗೆ ಸೂಚಿಸುವ ಪರಿಹಾರಗಳಲ್ಲಿ ರಾಮಣ್ಣನವರ ಎಚ್ಚರದ ಗ್ರಹಿಕೆ ಬಿಂಬಿತವಾಗಿದೆ. ಸಂಬಂಧಗಳ ಬಿರುಕಿನಿಂದ ಉಂಟಾಗುವ ಸಂಕಟ – ತಳಮಳ, ಅಭದ್ರತೆ, ಅನಿಶ್ಚಯತೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಲ್ಲವೆಂದು ಕತೆಗಳು ಮನಗಾಣಿಸುತ್ತವೆ. ವಾಸ್ತವಿಕ ನೆಲೆಗಟ್ಟಿನ ಅವರ ಕತೆಗಳು ಪರಂಪರೆಯಲ್ಲಿನ ಅರ್ಥಪೂರ್ಣ ಅಂಶಗಳು ಕರಗಲು ಬಿಡಬಾರದೆಂಬ ಕಾಳಜಿ ಕತೆಗಳಲ್ಲಿ ವ್ಯಕ್ತಗೊಂಡಿದೆ.
- ಕುಂ. ವೀರಭದ್ರಪ್ಪನವರ ಕತೆಗಳು ಕರ್ನಾಟಕಾಂಧ್ರದ ಗಡಿಯೊಳಗೆ ಗೂಢವಾಗಿರುವ ನೂರಾರು ಜೀವಪರ ಧ್ವನಿಗಳ ಹುಡುಕಾಟವಾಗಿದೆ. ಕತೆಯ ಮೂಲಕ ಗಡಿಬದುಕಿನ

ಚೌಕಟ್ಟಿನಲ್ಲಿ ನಿಗೂಢಸಂಕೀರ್ಣತೆ ತೆರೆದುಕೊಳ್ಳುವುದರಲ್ಲಿ ತಮ್ಮ ಅನುಭವಗಳೊಂದಿಗೆ ಮುಖಾಮುಖಿ ಆಗಿದ್ದಾರೆ. ಗಡಿಯೇ ಅವರಿಗೆ ಕರ್ಮಭೂಮಿ ಮತ್ತು ಪ್ರಬಲಪ್ರೇರಕ ಶಕ್ತಿಯಾಗುವುದಲ್ಲದೇ ಅಲ್ಲಿಯೇ ಧ್ಯಾನ ಮತ್ತು ಸಾಧನೆಯೆನಿಸುತ್ತದೆ. ಕುಂ.ವೀರಭದ್ರಪ್ಪ ಅವರ 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಕತೆ ಬಹುಭಾಷೆ, ಬಹುಸಂಸ್ಕೃತಿ ಬಿಂಬಿಸುವ ಸಮಾಜದ ಕಿರುಧಾರೆಗಳನ್ನು ಮುಖ್ಯವಾಹಿನಿಗೆ ಬೆಸೆಯುವ ಆಶಯವನ್ನು ಕತೆಯಲ್ಲಿ ಕಾಣಬಹುದು.

- ರಾಮಣ್ಣನವರದು ಕಾವೇರಿಯ ಸಮೃದ್ಧ ಅಸ್ಮಿತೆಯಾದರೆ, ಕುಂ.ವೀರಭದ್ರಪ್ಪ ಅವರದು ಜೀವನೋತ್ಸಾಹ ಹಿಂಡುವ ಬಿಸಿಲಿನ ವರ್ಣನೆಯಿದೆ. ಕುಂ.ವೀರಭದ್ರಪ್ಪ ಅವರದು ಏರುವ-ಜಾರುವ ಹಾದಿಯಲ್ಲಿ ಬದುಕಿನ ಅರ್ಥದ ಹುಡುಕಾಟವಾದರೆ, ರಾಮಣ್ಣನವರದು ಬಾಲ್ಯದ ಗ್ರಹಿಕೆ ಮತ್ತು ವೃತ್ತಿಯಲ್ಲಿ ಬದುಕಿನ ಅರ್ಥ ತಿಳಿಯಲು ಪ್ರಯತ್ನಿಸಿರುವುದು ಇಬ್ಬರಲ್ಲೂ ದೇಸಿ ಪ್ರಜ್ಞೆ ಕತೆಗಳಲ್ಲಿ ವಿಶೇಷತೆಯಾಗಿರುವುದನ್ನು ಗುರುತಿಸಲಾಗಿದೆ. ನೈತಿಕತೆಯ ಮಾನದಂಡದಲ್ಲಿ ನಂಬಿಕೆಗಳನ್ನು ನಿರಂತರವಾಗಿ ಮೌಲ್ಯಮಾಪನಕ್ಕೆ ಒಳಪಡಿಸಬೇಕಾದ ಅಗತ್ಯತೆಯನ್ನು ಕತೆಗಳು ಪರಿಶೀಲಿಸುತ್ತವೆ.
- ಇಬ್ಬರೂ ಲೇಖಕರು ಕತೆಗಳಲ್ಲಿ ಹೆಣ್ಣಿನ ಬದುಕಿನ ಅಸ್ಮಿತೆ, ಅನನ್ಯತೆ, ದೌರ್ಬಲ್ಯಗಳನ್ನು ಕಟ್ಟಿಕೊಡುತ್ತಾರೆ. ಮಹಿಳೆಯು ಬದುಕಿನ ವೈಫಲ್ಯಗಳ ನಡುವೆಯೂ ದೃಢವಾಗಿ ನಿಲ್ಲುವುದನ್ನು ನಿರೂಪಿಸಿದ್ದಾರೆ. ಹೆಣ್ಣಿನ ಅಂತಃಸತ್ವವನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸಿರುವುದನ್ನು ಗ್ರಹಿಸಲಾಗಿದೆ.
- ರಾಮಣ್ಣನವರ ಕತೆಗಳಲ್ಲಿ ಹಸಿವು ಮತ್ತು ಬಡತನದ ಗ್ರಹಿಕೆಯ ಪಕ್ವತೆ ವ್ಯಕ್ತವಾದರೆ, ಕುಂ.ವೀರಭದ್ರಪ್ಪ ಹಸಿವಿನ ತೀವ್ರತೆಯನ್ನು ಎಳೆಎಳೆಯಾಗಿ ಬಿಡಿಸುತ್ತಾರೆ. ಕುಂ.ವೀರಭದ್ರಪ್ಪ ಅವರಲ್ಲಿ ಸಂಘರ್ಷದಿಂದಾದರೂ ಹಸಿವು ನೀಗಲೇಬೇಕು ಎಂಬ ನಿಲುವು ಕತೆಗಳಲ್ಲಿ ವ್ಯಕ್ತವಾಗುತ್ತದೆ. ಇಬ್ಬರ ಕತೆಗಳಲ್ಲೂ ಅಧೀನಸಂಸ್ಕೃತಿಯ ಅಸಹಾಯಕತೆ, ಪ್ರತಿರೋಧ-ಪಲಾಯನಗಳು ಕಂಡುಬರುತ್ತವೆ. ನೂರಾರು ಬಿಕ್ಕಟ್ಟುಗಳ ನಡುವೆಯೂ ಬದುಕು ಪ್ರೀತಿ, ಗೌರವಕ್ಕೆ ಅರ್ಹವಾದುದು ಎಂಬ ನಂಬಿಕೆ ಮುಖ್ಯವೆಂದು ಪ್ರಾದೇಶಿಕ ನೆಲೆಯಲ್ಲಿ ಭಿನ್ನತೆಯಿದ್ದರೂ ವಿಶೇಷ ಅಭಿವ್ಯಕ್ತಿಯನ್ನು ಸೂಚಿಸುತ್ತವೆ.
- ಜೀತಮುಕ್ತ ಸಮಾಜ ಇಬ್ಬರ ಆಶಯವೆಂದು ಕತೆಗಳಲ್ಲಿ ವ್ಯಕ್ತವಾಗಿದೆ. ಕುಂ.ವೀರಭದ್ರಪ್ಪ ಅವರು ಮೇಲ್ವರ್ಗದವರು ತಳವರ್ಗದವರನ್ನು ಮಾನವೀಯವಾಗಿ ನೋಡದಿದ್ದಾಗ ಸಂಘರ್ಷ ಅನಿವಾರ್ಯವೆಂದು 'ದೇವರ ಹೆಣ', 'ಕತ್ತಲನು ತ್ರಿಶೂಲಹಿಡಿದ ಬಗೆ'

ಮುಂತಾದ ಕತೆಗಳಲ್ಲಿ ಕಾಣಿಸುತ್ತಾರೆ. ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿ ಹಸಿವು ಸ್ಥಾಯಿಗುಣವಾಗಿದ್ದು, ಭಿನ್ನವಾಗಿ ಕೆಳಜಾತಿಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು, ಹಸಿವಿನ ಪ್ರಶ್ನೆಯನ್ನು ಮುಖ್ಯವಾಗಿ ಕಾಣಿಸುವುದು ವ್ಯಕ್ತವಾಗಿದೆ. ರಾಮಣ್ಣನವರ 'ಸಂತೆಯೊಳಗೊಂದು ಮನೆಯ ಮಾಡಿ', 'ಕರುಣಾಳು ಬಾ ಬೆಳಕೆ' ಕತೆಗಳು ಅನಕ್ಷರಸ್ಥ ಶ್ರಮಜೀವಿಗಳ ಬದುಕನ್ನು ಕಾಣಿಸುತ್ತವೆ ಮತ್ತು ವೈದ್ಯಲೋಕದ ಅಮಾನವೀಯ ಮುಖವನ್ನು, ಜಡ್ಡುಗಟ್ಟಿದ ವ್ಯವಸ್ಥೆಯನ್ನು ಪ್ರಶ್ನಿಸುತ್ತವೆ. ಹಸಿವು ಮತ್ತು ಬಡತನದ ಕಾರಣಗಳನ್ನು ಗುರುತಿಸುವ ಹಂತದಲ್ಲಿ ವಾಸ್ತವದ ಕಾರಣಗಳ ಶೋಧನೆಯ ಅಗತ್ಯತೆಯನ್ನು ಕತೆಗಳು ಕಾಣಿಸುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಮಹತ್ವಪೂರ್ಣ ಅಂಶವಾಗಿದೆ.

- ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳಲ್ಲಿನ ಪಾತ್ರಗಳಲ್ಲಿ ಬಂಡಾಯ, ಮೌಲ್ಯಗಳ ಸಂಘರ್ಷವಿದ್ದರೂ ಅಂತರಂಗದ ಬುದ್ಧಿ-ಭಾವಗಳಲ್ಲಿ ಪಕ್ವವಾಗಿ ಹದಗೊಂಡು ಭಾವನೆಗಳು ಭಾಷೆಯಲ್ಲಿ ವ್ಯಕ್ತಗೊಳ್ಳುತ್ತವೆ. ಪ್ರಭುತ್ವ ಧಮನಕಾರಿಯಾಗಿದ್ದಾಗ ಸಾಮಾಜಿಕ ಚಿಂತನೆಗಳಿಂದ ಸಮಾನತಾಮೌಲ್ಯವನ್ನು ಕತೆಗಳು ಮನಗಾಣಿಸುತ್ತವೆ ಎಂಬುದು ಇಬ್ಬರಲ್ಲೂ ಕಂಡುಬರುವ ಸಕಾರಾತ್ಮಕ ಅಂಶವೆನ್ನಬಹುದು.

ಇಬ್ಬರೂ ಕತೆಗಾರರು ಬುದ್ಧ, ಗಾಂಧಿ, ಬಸವಣ್ಣ, ಅಂಬೇಡ್ಕರ್, ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದಾರೆ. ಸಮಾಜದ ಪರಿವರ್ತನೆ ಆಧುನಿಕ ಚಿಂತನೆಯು ಲೇಖಕರ ಆಶಯವಾಗಿ ವ್ಯಕ್ತಗೊಂಡಿರುವುದನ್ನು ಮುಖ್ಯ ಕಾಳಜಿಯೆಂದು ಒಪ್ಪಬಹುದು. ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕತೆಗಳು ಜೀವನ ಮೌಲ್ಯಗಳ ಹುಡುಕಾಟವನ್ನು ಮಾಡುತ್ತಾ ಬದುಕಿನ ದರ್ಶನವನ್ನು ಕೊಡುತ್ತವೆ. ಮಾನವ ಮತ್ತು ಮಾನವರ ನಡುವೆ ಸಂಬಂಧ ಸವಕಲುಗೊಳ್ಳುತ್ತಿರುವ ಪ್ರಸ್ತುತದಲ್ಲಿ ಮೌಲ್ಯಯುತವಾದ ಬದುಕಿನ ಸಾಮಾಜಿಕ ಹೊಣೆಯನ್ನು ಕತೆಗಳು ಹೊರಬಲ್ಲವೆಂಬುದು ಪ್ರಬಂಧ ಕಂಡುಕೊಂಡ ಫಲಿತಗಳಲ್ಲಿ ಮುಖ್ಯವೆನಿಸಿದೆ.

ಅನುಬಂಧಗಳು

ಅನುಬಂಧ – ೧

ಆಕರ ಗ್ರಂಥಗಳು

೧) ಬೆಸಗರಹಳ್ಳಿ ರಾಮಣ್ಣ : ಕನ್ನಂಬಾಡಿ
(ಸಮಗ್ರ ಕತೆಗಳು, ೧೯೬೨–೧೯೮೫)
ಪಲ್ಲವಿ ಪ್ರಕಾಶನ, ಮಂಡ್ಯ, ೧೯೮೬.

೨) ಬೆಸಗರಹಳ್ಳಿ ರಾಮಣ್ಣ : ಕಣಜ (ಸಮಗ್ರ ಕಥನ ಸಾಹಿತ್ಯ)
ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೧೧.

೩) ಕುಂ. ವೀರಭದ್ರಪ್ಪ : 'ಬರಿ ಕಥೆಯಲ್ಲೋ ಅಣ್ಣಾ'
(ಕುಂವೀ ಸಮಗ್ರ ಕತೆಗಳು)
ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೦.

೪) ಕುಂ. ವೀರಭದ್ರಪ್ಪ : 'ಗಾಂಧಿ ಕ್ಲಾಸು' (ಆತ್ಮಕಥನ)
ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೩.

ಅನುಬಂಧ – ೨

ಆಧಾರ ಗ್ರಂಥಗಳು

೧) ಅಶೋಕ ಟಿ.ಪಿ : **'ಕಥನಪ್ರೀತಿ'**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೩.

೨) ಕುವೆಂಪು : **'ಸ್ವಾಮಿ ವಿವೇಕಾನಂದ'** ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೫.

೩) ಕರೀಗೌಡ ಬೀಚನಹಳ್ಳಿ : **'ಟಾಲ್‌ಸ್ಟಾಯ್ ದರ್ಶನ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

೪) ಗಿರಡ್ಡಿ ಗೋವಿಂದರಾಜ (ಸಂ) : **'ಕುಂವೀ ಅವರ ಕಥಾ ಸಾಹಿತ್ಯ'**, ಕರ್ನಾಟಕ ಸಾಹಿತ್ಯ ಅಕಾಡಮಿ, ೨೦೦೧.

೫) ಡಿ.ವಿ.ಜಿ : **'ಜೀವನ ಸೌಂದರ್ಯ ಮತ್ತು ಸಾಹಿತ್ಯ'** ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೭.

೬) ತಾರಾನಾಥ ಎಸ್.ಎನ್. (ಸಂ) : **'ಪಂಪನ ಅಧ್ಯಯನಗಳು'** ಸಂವಹನ ಪ್ರಕಾಶನ, ಮೈಸೂರು, ೨೦೧೧.

೭) ಪುಟ್ಟಸ್ವಾಮಿ. ಕೆ. ರವಿಬೆಸಗರಹಳ್ಳಿ : **'ಕಾಡುಗಿಣಿ'**, ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ, ಬೆಂಗಳೂರು, ೨೦೦೯.

೮) ಪ್ರಭಾಕರ ಎ.ಎಸ್. ಶ್ರೀಪಾದಶೆಟ್ಟಿ : **'ಲೋಹಿಯಾ : ವರ್ತಮಾನಮುಖಾಮುಖಿ'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೯) ಬರಗೂರು ರಾಮಚಂದ್ರಪ್ಪ (ಪ್ರ ಸಂ) : **'ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆ'** ಕನ್ನಡ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.

೧೦) ಬರಗೂರು ರಾಮಚಂದ್ರಪ್ಪ (ಪ್ರ ಸಂ) : **'ಸಾಹಿತ್ಯ ಮತ್ತು ರಾಜಕಾರಣ'**, 'ಕನ್ನಡ ಪುಸ್ತಕಪ್ರಾಧಿಕಾರ', ಬೆಂಗಳೂರು, ೧೯೯೮.

೧೧) ಮಹದೇವಯ್ಯ ಬಿ.ಆರ್. : **'ವಚನಗಳಲ್ಲಿ ಜೀವನಮೌಲ್ಯಗಳು'** ಜಗದ್ಗುರು ಶ್ರೀ ಶಿವರುದ್ರೇಶ್ವರ ಗ್ರಂಥಮಾಲೆ, ಮೈಸೂರು, ೨೦೧೧.

೧೨) ಮುಖ್ಯ ಮಂತ್ರಿ ಚಂದ್ರು (ಪ್ರಸಂ) : **'ನುಡಿಸೊಗಡು'**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೧೨.

೧೩) ಮೂರ್ತಿರಾವ್ ಎ.ಎನ್. : **'ದೇವರು'**, ಡಿ.ವಿ.ಕೆ. ಪ್ರಕಾಶನ, ಮೈಸೂರು, ೨೦೦೨.

೧೪) ಮೂರ್ತಿ ಡಿ.ವಿ.ಕೆ. : **'ಜೀವನಮೌಲ್ಯಗಳು ಮತ್ತು ಸಾಹಿತ್ಯ'** ಡಿ.ವ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೦೮.

೧೫) ರಹಮತ್ ತರೀಕೆರೆ : **'ಮಾತು ತಲೆಯೆತ್ತುವ ಬಗೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೧೬) ರಾಜಶೇಖರ ಸಿ.ಎಚ್. : **'ಬುದ್ಧನಂದನ ಬೀಳ್ಕೊಟ್ಟ ಕಾರಮ ತೋರಿಸಿ ಕಲ್ಯಾಣದತ್ತ'**, ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು.

೧೭) ವಾಸವಿ ಎಂ. ಆರ್. (ಸಂ) : **'ಒಳಗನ್ನಡಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೧೮) ವಿಶುಕುಮಾರ್ ಎನ್. ಆರ್. (ಪ್ರ.ಸಂ)	:	**'ಜನಪದ'**, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ೨೦೧೫.
೧೯) ವಿಜಯಾ ಚಿ. ಶ್ರೀನಿವಾಸರಾಜು	:	**'ಅಕ್ಕರೆ'**, ಗೀತಾಬುಕ್ ಹೌಸ್, ಮೈಸೂರು, ೧೯೯೯.
೨೦) ವೀರಪ್ಪ ಜಿ.ಟಿ.(ಸಂ) ಕ್ಯಾತನಹಳ್ಳಿ ರಾಮಣ್ಣ	:	**'ಆಲೆಮನೆ'**, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ, ೧೯೯೫.
೨೧) ವೆಂಕಟಾಚಲಶಾಸ್ತ್ರೀ ಓ.ವಿ.	:	**'ಶಾಸ್ತ್ರೀಯ–೨'** ಸಪ್ನ ಪ್ರಕಾಶನ, ಬೆಂಗಳೂರು, ೧೯೯೯.
೨೨) ಶಿವರುದ್ರಪ್ಪ ಜಿ.ಎಸ್.	:	**'ಸಮಗ್ರ ಗದ್ಯ – ೫'**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೭.
೨೩) ಶೇಷಗಿರಿರಾವ್, ಎಲ್. ಎಸ್.	:	**'ಸಾಹಿತ್ಯ ವಿಶ್ಲೇಷಣೆ'**, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೮೧.
೨೪) ಸಿ.ಪಿ.ಕೆ.	:	**'ಸಾಹಿತ್ಯ ಶೀಲನ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.
೨೫) ಹಾಲತಿ ಸೋಮಶೇಖರ್	:	**'ಮಹಿಳೆ: ಒಂದು ಚಿಂತನೆ'**, ವಿಸ್ಮಯ ಪ್ರಕಾಶನ, ಮೈಸೂರು, ೨೦೧೨.
೨೬) ಹೊನ್ನು ಸಿದ್ದಾರ್ಥ ಸಿ.ಬಿ (ಪ್ರ. ಸಂ.)	:	**'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'**, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.

ಅನುಬಂಧ – ೩

ಪರಾಮರ್ಶನ ಗ್ರಂಥಗಳು

೧) ಅಮೂರ. ಜಿ.ಎಸ್. : **'ಸಮಕಾಲೀನ ಕತೆ – ಕಾದಂಬರಿ : ಹೊಸ ಪ್ರಯೋಗಗಳು'** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

೨) ಅಮೂರ. ಜಿ.ಎಸ್. (ಸಂ) : **'ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ'**, ಅಂಕಿತ ಪುಸ್ತಕ, ಬೆಂಗಳೂರು, ೨೦೦೪.

೩) ಅನಂತಮೂರ್ತಿ. ಯು.ಆರ್. : **'ಸಮಕ್ಷಮ'**, ಅನನ್ಯ ಪ್ರಕಾಶನ, ಮೈಸೂರು, ೧೯೮೦.

೪) ಅರವಿಂದ ಮಾಲಗತ್ತಿ : **ಮೌಢ್ಯಾಚರಣೆ ಪ್ರತಿಬಂಧಕ ವಿಧೇಯಕ 'ಒಳಗೆ–ಹೊರಗೆ'** ವಿಸ್ಮಯ ಪ್ರಕಾಶನ, ಮೈಸೂರು, ೨೦೧೩.

೫) ಅಮರೇಶ ನುಗಡೋಣಿ (ಸಂ) : **'ಕಥೆಹುಟ್ಟುವ ಪರಿ'** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

೬) ಅಮರೇಶನುಗಡೋಣಿ (ಸಂ) : **'ಕನ್ನಡ ಸಂಶೋಧನೆಯ ವೈಧಾನಿಕತೆಗಳು'** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೭) ಕುವೆಂಪು (ಪ್ರಸಂ) : **'ಯುಗ ಯುಗಯಾತ್ರಿ ಭಾರತೀಯ ಸಂಸ್ಕೃತಿ'** ಪ್ರಸಾರಂಗ, ಮೈಸೂರು, ೧೯೭೦.

೮) ಕೀರ್ತಿನಾಥಕುರ್ತು ಕೋಟಿ : **'ಯುಗಧರ್ಮ ಹಾಗೂ ಸಾಹಿತ್ಯದರ್ಶನ'** ಕುರ್ತುಕೋಟಿ ಮೆಮೊರಿಯಲ್ ಟ್ರಸ್ಟ್, ದಾರವಾಢ, ೨೦೧೨.

೯) ಕೃಷ್ಣಪ್ಪ. ಬಿ. : 'ಪ್ರೊ. ಬಿ. ಕೃಷ್ಣಪ್ಪ' (ಚಿಂತನೆಗಳು – ಬರಹಗಳು), ಕನ್ನಡ ಪುಸ್ತಕ ಪ್ರಾಧಿಕಾರಬೆಂಗಳೂರು, ೧೯೯೯.

೧೦) ಕೃಷ್ಣಶಾಸ್ತ್ರಿ. ಎ.ಆರ್. : 'ಕಥಾಮೃತ', ಗೀತಾ ಬುಕ್ ಹೌಸ್, ಮೈಸೂರು, ೧೯೫೨.

೧೧) ಕುರ್ತುಕೋಟಿ ಕೆ.ಡಿ. (ಸಂ) ಜಿ.ಬಿ. ಜೋಗಿ : ವಾಸುದೇವ ಪ್ರಶಸ್ತಿ, ಗುರುರಾವಜೋಗಾಪುರ (ಪ್ರಕಾಶಕರು), ಬಾಗಲಕೋಟೆ, ೧೯೬೪.

೧೨) ಕಲಬುರ್ಗಿ. ಎಂ.ಎಂ. : 'ಕನ್ನಡ ಸಂಶೋಧನ ಶಾಸ್ತ್ರ' ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೪

೧೩) ಕೃಷ್ಣಕುಮಾರ. ಸಿ.ಪಿ. : 'ಪರಿಗ್ರಹಣ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.

೧೪) ಗವಿಸಿದ್ದಯ್ಯ. ಆರ್.ಎನ್. ಮಠ : 'ಶಿಕ್ಷಣದಲ್ಲಿ ಮೌಲ್ಯಗಳ ಬೋಧನೆ' ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೦೭.

೧೫) ಗಿರಡ್ಡಿ ಗೋವಿಂದರಾಜ : 'ಸಣ್ಣ ಕಥೆಗಳ ಸಂಕಲನ', ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ, ೧೯೮೩.

೧೬) ಗಿರಡ್ಡಿ ಗೋವಿಂದರಾಜ : 'ಸಮಗ್ರ ವಿಮರ್ಶೆ', ಸಂಪುಟ –೨, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೧.

೧೭) ಗೊರೂರು ರಾಮಸ್ವಾಮಿ ಅಯ್ಯಂಗಾರ್ : 'ಕನ್ಯಾಕುಮಾರಿ ಮತ್ತು ಇತರ ಕಥೆಗಳು', ಐಬಿಎಚ್ ಪ್ರಕಾಶನ, ಬೆಂಗಳುರು, ೨೦೧೬.

೧೮) ಗೋವಿಂದರಾವ್. ಜಿ.ಕೆ. : **'ಮನು V/s ಅಂಬೇಡ್ಕರ್'** ಲಡಾಯಿ ಪ್ರಕಾಶನ, ಗದಗ, ೨೦೧೫.

೧೯) ಚಂದ್ರಮತಿಸೋದಾ : **'ಚಿಪ್ಪೊಡೆದ ಮೌನ'**, ಅಭಿರುಚಿ ಪ್ರಕಾಶನ, ಮೈಸೂರು, ೨೦೦೪.

೨೦) ಚಂದ್ರಶೇಖರ ಪಾಟೀಲ : **'ಚಂಪಾದಕೀಯ'**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫.

೨೧) ಚಿದಾನಂದ ಮೂರ್ತಿ ಎಂ : **'ಸಂಶೋಧನೆ'** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೧೩.

೨೨) ಜವರೇಗೌಡ. ದೇ : **'ದೇವರ ಮಗು ಮತ್ತು ಇತರ ಕಥೆಗಳು'** ಸಂವಹನ ಪ್ರಕಾಶನ, ಮೈಸೂರು, ೨೦೦೧.

೨೩) ತಾರಾನಾಥ ವರ್ಕಾಡಿ : **'ಕಬ್ಬಿನ ಕೋಲು'** ಅಜ್ಞಾನೋಹಮ್ ಪ್ರಕಾಶನ, ಉಡುಪಿ, ೨೦೧೩.

೨೪) ತಿಪ್ಪೇಸ್ವಾಮಿ. ಜಿ.ಆರ್. : **'ಅರ್ಥ ಸುಗಂಧ'**, ಸಂವಹನ ಪ್ರಕಾಶನ, ಮೈಸೂರು, ೨೦೧೨.

೨೫) ತಿಪ್ಪೇರುದ್ರಸ್ವಾಮಿ. ಹೆಚ್ : **'ತೌಲನಿಕ ಕಾವ್ಯ ಮೀಮಾಂಸೆ'**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೬೫.

೨೬) ತೇಜಸ್ವಿ ಕೆ.ಪಿ. : **ಹುಲಿಯೂರಿನ ಸರಹದ್ದು ಸ್ವರೂಪ, ನಿಗೂಢ 'ಮನುಷ್ಯರು'**, ಪುಸ್ತಕ ಪ್ರಕಾಶನ, ಮೈಸೂರು, ೨೦೧೧.

೨೭) ದೇವನೂರು ಮಹಾದೇವ : **'ಎದೆಗೆ ಬಿದ್ದ ಅಕ್ಷರ'** ಅಭಿನವ ಪ್ರಕಾಶನ, ಬೆಂಗಳೂರು, ೨೦೧೫.

೨೮) ದೇವರಾಜ್. ಆರ್ : **'ಸಾಹಿತ್ಯ ಸಂದರ್ಭ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ'** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೨೯) ನಟರಾಜ್ ಹುಳಿಯಾರ್ : **'ರಾಮಮನೋಹರಲೋಹಿಯಾ ಚಿಂತನೆ'** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೩೦) ನಟರಾಜ ಬೂದಾಳು. ಎಸ್ : **'ನಾಗಾರ್ಜುನ ಮಧ್ಯಮ ಮಾರ್ಗ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೧) ನಾಗರತ್ನ. ಟಿ.ಎನ್. (ಸಂ.) : **'ಹರಿದಾಸವಾಙ್ಮಯ'** ಗಾನಭಾರತಿ ಪ್ರಕಾಶನ, ಮೈಸೂರು, ೧೯೮೫.

೩೨) ನಾಗರಾಜ್. ಡಿ.ಆರ್. : **'ಸಾಹಿತ್ಯ ಕಥನ'**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬.

೩೩) ನಾರಾಯಣ. ಕೆ.ವಿ. : **'ಬೇರು, ಕಾಂಡ, ಚಿಗುರು'**, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭.

೩೪) ನಾಯಕ. ಜಿ.ಹೆಚ್. : **'ಶತಮಾನದ ಕನ್ನಡ ಸಾಹಿತ್ಯ'** (ಸಮೀಕ್ಷೆ) ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ, ೨೦೦೦.

೩೫) ನಾಯಕ. ಜಿ.ಹೆಚ್. (ಸಂ) : **'ಶತಮಾನದ ಕನ್ನಡ ಸಾಹಿತ್ಯ'** ಸಮೀಕ್ಷಾ ಸಂಪುಟ–೨, ರಾಘವೇಂದ್ರ ಪ್ರಕಾಶನ, ಅಂಕೋಲ, ೨೦೦೯.

೩೬) ನಾಗಮಲ್ಲಪ್ಪ. ಎಂ.ಎ. (ಸಂ) : **'ಶೂದ್ರ ಸಂವಾದ'** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜನಗರ, ೨೦೧೦.

೩೭) ನಾಗಭೂಷಣ ಸ್ವಾಮಿ. ಓ.ಎಲ್ : **'ವಿಮರ್ಶೆಯ ಪರಿಭಾಷೆ'** ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೮೩.

೩೮) ನಿಸಾರ್ ಅಹಮದ್ (ಪ್ರ.ಸಂ.) : **'ದಶವಾರ್ಷಿಕ ವಿಮರ್ಶೆಗಳು ೧೯೭೮-೮೩'**, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೮೬.

೩೯) ಪುರುಷೋತ್ತಮ ಬಿಳಿಮಲೆ : **'ಶಿಷ್ಟ ಪರಿಶಿಷ್ಟ'** (ವಿಮರ್ಶಾಲೇಖನಗಳು) ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು, ೧೯೯೨.

೪೦) ಪ್ರಭುಶಂಕರ : **'ಕೃತಿ ಶೀಲ'**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪೧) ಪ್ರಧಾನ್ ಗುರುದತ್ತ (ಪ್ರ.ಸಂ.) : **'ಕೌಂಟ್ ಲಿಯೋಟಾಲ್‌ಸ್ಟಾಯ್ ಅವರ ಆತ್ಮಕತೆ'** (ಅನು : ಆನಂದ) ಕರ್ನಾಟಕ ಅನುವಾದ ಸಾಹಿತ್ಯ ಅಕಾಡಮಿ, ೨೦೦೭.

೪೨) ಪ್ರಧಾನ್ ಗುರುದತ್ತ (ಪ್ರ.ಸಂ.) ಅನು: ಓ.ಎಲ್.ನಾಗಭೂಷಣ ಸ್ವಾಮಿ : **'ಯುದ್ಧ ಮತ್ತು ಶಾಂತಿ'** ಭಾಗ ೧ ಮತ್ತು ೨ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಬೆಂಗಳೂರು, ೨೦೧೦.

೪೩) ಬರಗೂರು ರಾಮಚಂದ್ರಪ್ಪ (ಪ್ರ.ಸಂ) : **'ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ'**, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.

೪೪) ಬರಗೂರು ರಾಮಚಂದ್ರಪ್ಪ (ಪ್ರ.ಸಂ)	:	'ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ' ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.
೪೫) ಬರಗೂರು ರಾಮಚಂದ್ರಪ್ಪ (ಪ್ರ.ಸಂ)	:	'ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ' ಕರ್ನಾಟಕ, ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.
೪೬) ಬರಗೂರು ರಾಮಚಂದ್ರಪ್ಪ (ಪ್ರ.ಸಂ.)	:	'ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ' ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.
೪೭) ಬರಗೂರು ರಾಮಚಂದ್ರಪ್ಪ (ಪ್ರ.ಸಂ)	:	'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ', ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೩.
೪೮) ಬರಗೂರು ರಾಮಚಂದ್ರಪ್ಪ (ಪ್ರ.ಸಂ)	:	'ಸಂಸ್ಕೃತಿ : ಶ್ರಮ ಮತ್ತು ಸೃಜನ ಶೀಲತೆ' ಅಂಕಿತ ಪುಸ್ತಕ, ಬೆಂಗಳೂರು, ೨೦೦೧.
೪೯) ಬಾಪು ಹೆದ್ದಾರ ಶೆಟ್ಟಿ	:	'ಲೋಹಿಯಾ, ವ್ಯಕ್ತಿ ಮತ್ತು ವಿಚಾರ, ಒಂದು ವಿಭಿನ್ನ ವಿಮರ್ಶೆ' ಲಡಾಯಿ ಪ್ರಕಾಶನ, ಗದಗ, ೨೦೧೨.
೫೦) ಭೈರಪ್ಪ. ಎಸ್.ಎಲ್.	:	'ಕತೆ ಮತ್ತು ಕಥಾವಸ್ತು' ಸಾಹಿತ್ಯ ಭಂಡಾರದ ಪ್ರಕಾಶನ, ಬೆಂಗಳೂರು, ೨೦೧೪.
೫೧) ಮನುಬಳಿಗಾರ (ಸಂ) ಜಿ. ಎಂ. ಹೆಗಡೆ	:	'ತಲಸ್ಪರ್ಶಿ' (ಡಾ. ಗಿರಡ್ಡಿಗೋವಿಂದರಾಜ ಅಭಿನಂದನಾ ಗ್ರಂಥ), ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೧.

೫೨) ಮಹಾದೇವ ಶಂಕನಪುರ : 'ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ' ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೫೩) ಮಂಜಣ್ಣ ಎಂ. : 'ಅಂಬೇಡ್ಕರ್ ಮತ್ತು ಸ್ವಾತಂತ್ರ್ಯೋತ್ತರ ಭಾರತ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೫೪) ಮೋಹನ್‌ದಾಸ್ ಕರಮ್ ಚಂದ್ ಗಾಂಧಿ : 'ಹಿಂದ್ ಸ್ವರಾಜ್ಯ' (ಅನುವಾದ) ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ೨೦೦೮.

೫೫) ಮೋಹನ ಚಂದ್ರಗುತ್ತಿ : 'ನೆಲದ ತವಕ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦.

೫೬) ರಮೇಶ. ಸ.ಚಿ. : 'ಡಾ. ಬೆಸಗರಹಳ್ಳಿ ರಾಮಣ್ಣ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

೫೭) ರವಿಕಾಂತೇಗೌಡ (ಸಂ) : 'ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕತೆಗಳು' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪.

೫೮) ರಹಮತ್ ತರೀಕೆರೆ (ಸಂ) : 'ಪ್ರತಿ ಸಂಸ್ಕೃತಿ' ಅಭಿನವ ಪ್ರಕಾಶನ, ಬೆಂಗಳೂರು, ೨೦೧೨.

೫೯) ರಹಮತ್ ತರೀಕೆರೆ (ಸಂ) : 'ಕನ್ನಡ ಅಧ್ಯಯನ' (ಗಾಳಿ ಸಂಚಿಕೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೬೦) ರಹಮತ್ ತರೀಕೆರೆ	:	**'ನುಡಿಸಂಕರ ಸಾಹಿತ್ಯ'**,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.
೬೧) ರಾಜಪ್ಪದಳವಾಯಿ	:	**'ಕನ್ನಡ ಸಾಹಿತ್ಯ ಕೋಶ'**, ದಳವಾಯಿ ಪ್ರಕಾಶನ, ಬೆಂಗಳೂರು, ೨೦೧೦.
೬೨) ರಾಜೇಂದ್ರ ಚೆನ್ನಿ	:	**'ಆಯ್ದ ವಿಮರ್ಶಾಲೇಖನಗಳು'**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.
೬೩) ರಾಮಪ್ರಸಾದ್. ಎನ್.ಎಸ್. (ಸಂ) ಸಂಪುಟ ೧೨	:	**'ವಿಶ್ವ ಕನ್ನಡ'** ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.
೬೪) ರಾಮಚಂದ್ರನ್. ಸಿ.ಎನ್.	:	**'ಪರಂಪರೆ-ಪ್ರತಿರೋಧ'** ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ೨೦೦೨.
೬೫) ರಾಮಚಂದ್ರನ್. ಸಿ.ಎನ್.	:	**'ಪ್ರಮಾಣ ಮತ್ತು ಪರಿಪ್ರೇಕ್ಷ್ಯ'** ಸುಭಾಷ್ ಸ್ಟೋರ್ಸ್ (ಪ್ರಕಾಶಕರು), ಬೆಂಗಳೂರು, ೨೦೦೮.
೬೬) ಲಕ್ಷ್ಮಿನಾರಾಯಣ. ಆರ್. (ಸಂ)	:	**'ಸಾಹಿತ್ಯ ವಿಮರ್ಶೆ'**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, (ಪ್ರೊ. ಎಂ.ವಿ. ಸೀ., ಸಮಗ್ರ ಸಾಹಿತ್ಯ, ಸಂಪುಟ -೪, ಭಾಗ - ೩).
೬೭) ಲಕ್ಷ್ಮಣರಾವ್. ಜೆ.ಆರ್.	:	**'ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಹೇಗೆ'?**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩.
೬೮) ಲೀಲಾ ಅಪ್ಪಾಜಿ (ಪ್ರ.ಸಂ.) ಮದನ್‌ಕುಮಾರ್.ಎ.ಆರ್.(ಸಂ)	:	ಡಾ. ಬೆಸಗರಹಳ್ಳಿ, ಕೀರ್ತನ ಗ್ರಾಫಿಕ್ಸ್, ಮೈಸೂರು, ೨೦೧೫.

೧೯) ವೀರಭದ್ರಸ್ವಾಮಿ. ಎನ್. **'ಸಾಹಿತ್ಯ, ಸಂಸ್ಕೃತಿ, ಕಥನ'** ಚಂದ್ರಿಕ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್, ಮೈಸೂರು, ೨೦೧೧.

೨೦) ವೆಂಕಟಾಚಲಶಾಸ್ತ್ರಿ. ಟಿ.ವಿ : **'ಸಾಹಿತ್ಯ ಚರಿತ್ರೆ – ವಿಮರ್ಶೆ, ಸಮೀಕ್ಷೆ – ಪ್ರಾಚೀನ ಕಾಲ'**, ಸಪ್ನ ಪ್ರಕಾಶನ, ಬೆಂಗಳೂರು, ೧೯೯೯.

೨೧) ವೆಂಕಟೇಶ ಮೂರ್ತಿ. ಎಚ್.ಎಸ್ (ಸಂ) : **'ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಸಂಚಯ'**, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೨.

೨೨) ಸರಜೂಕಾಟ್ಕರ್ : **'ಸ್ನೇಹಸಂಪದ'** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬.

೨೩) ಸವಿತ. ಬಿ.ಸಿ : **ರೈತಹೋರಾಟಗಾರ 'ಪ್ರೊ. ಎಂ.ಡಿ. ನಂಜುಂಡಸ್ವಾಮಿ'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨೪) ಸಹಸ್ರ ಬುದ್ಧೆ ಪ್ರಗ : **'ಜೀವನ ಮೌಲ್ಯಗಳು'** ಅನು: ರಸಿಕಪುತ್ತಿಗೆ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೯೭.

೫) ಶಿರೂರ. ಬಿ. ವ್ಹಿ : **'ಸಂಶೋಧನ ಸ್ವರೂಪ'**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೧೪.

೨೬) ಶಿವರಾಮಕಾಡನಕುಪ್ಪೆ : **'ಸಾಮಾಜಿಕ ನೆಲೆ'** ಸಂವಹನ ಪ್ರಕಾಶನ, ಮೈಸೂರು.

೨೭) ಶಿವರುದ್ರಪ್ಪ. ಜಿ.ಎಸ್. : **'ಸಮಗ್ರ ಗದ್ಯ – ೫'**, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೨೦೦೭.

೮) ಶ್ರೀನಿವಾಸರಾಜು. ಚಿ : **'ಆಗಾಗ'**, ಅಭಿನವ ಪ್ರಕಾಶನ, ಬೆಂಗಳೂರು, ೨೦೦೯.

೭೯) ಶ್ರೀನಿವಾಸ : **'ಸಣ್ಣ ಕತೆಗಳು'**, ಆಯ್ದ ಸಂಕಲನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫.

೮೦) ಶೇಷಗಿರಿರಾವ್. ಎಲ್. ಎಸ್ : **'ಸಾಹಿತ್ಯ ವಿಶ್ಲೇಷಣೆ'** ತ.ವೆಂ. ಸ್ಮಾರಕ ಗ್ರಂಥಮಾಲೆ (ಪ್ರಕಾಶಕರು), ಮೈಸೂರು, ೧೯೮೧.

೮೧) ಹಳ್ಳಿಕೇರಿ. ಎಫ್.ಟಿ.(ಸಂ) ವಿರುಪಾಕ್ಷಿ, ಎನ್. ಬಿ. : **'ಮಾರ್ಗದ ಮಹಾವಾಕ್ಯಗಳು'** ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೨.

ಅನುಬಂಧ – ೪

ಪತ್ರಿಕೆಗಳು

೧) **ಅಭಿವ್ಯಕ್ತಿ** : ಸಾಹಿತ್ಯ ಮಾಸಿಕ ಸಂಚಿಕೆ ೬, ಸಂಪುಟ ೩, ಜೂನ್ ೨೦೦೯.

೨) **ಸಾಕ್ಷಿ** : ತ್ರೈಮಾಸಿಕ ಪತ್ರಿಕೆ, ಹೇಮಂತ ಸಂಚಿಕೆ, ಜನವರಿ, ೧೯೭೨.

೩) **ಸಾಕ್ಷಿ** : ತ್ರೈಮಾಸಿಕ ಪತ್ರಿಕೆ, ಜುಲೈ ೧೯೭೨.

೪) **ಶೋಧ ಭಾರತಿ** : ತ್ರೈಮಾಸಿಕ ಸಂಚಿಕೆ, ಸಂಪುಟ ೧, ಸಂಚಿಕೆ, ೩, ಅಕ್ಟೋಬರ್ – ಡಿಸೆಂಬರ್, ೨೦೧೪.

೫) **ಕನ್ನಡ ಅಧ್ಯಯನ** : ತ್ರೈಮಾಸಿಕ ಪತ್ರಿಕೆ, ಗಾಳಿ ಸಂಚಿಕೆ, ೨೦೦೧. ಪ್ರಸಾರಂಗ, ಹಂಪಿ.

೬) **ಪ್ರಜಾವಾಣಿ** : ದಿನಪತ್ರಿಕೆಗಳು.

೭) **ಕಸ್ತೂರಿ** : ಮಾಸ ಪತ್ರಿಕೆಗಳು.

೮) **ರುಜುವಾತು** : ಸಂಚಿಕೆ ೩೭, ಅಕ್ಟೋಬರ್ ೧೯೯೪.

೯) **ಅರುಹು ಕುರುಹು** : ಸಂಪುಟ ೬, ಸಂಚಿಕೆ ೨೨, ಜುಲೈ– ಸೆಪ್ಟಂಬರ್ ೨೦೧೪.

ಸಂಶೋಧನಾ ಮಹಾಪ್ರಬಂಧಗಳು

೧) ಅಮೃತೇಶ್ವರ ಜಿ. : **ಕುಂವೀ. ಕಥಾಸಾಹಿತ್ಯ : ಒಂದು ಅಧ್ಯಯನ** ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ೨೦೦೧.

೨) ಗೀತಾ ಬಿ.ಎಸ್. **'ಕರ್ನಾಟಕ ಸಾಂಸ್ಕೃತಿಕ ಸಂಘರ್ಷ, ಒಂದು ಅಧ್ಯಯನ'** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೩) ಘಂಟಿಮಲ್ಲಿಕಾ, **'ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ'** ಕರ್ನಾಟಕ ವಿಶ್ವವಿದ್ಯಾಲಯ, ದಾರವಾಢ.

೪) ತೇಜಸ್ವಿನಿ. ಟಿ.ವಿ., **'ಮಂಡ್ಯ ಜಿಲ್ಲೆಯ ಸಣ್ಣ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆ'**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೫) ನರೇಂದ್ರಕುಮಾರ್, ಎಸ್. **'ದೇವನೂರು, ನಾಗವಾರ ಮತ್ತು ಕುಂವೀ ಅವರ ಕಥೆಗಳು'**, ಸುವರ್ಣ ಸಂಪುಟ, ಮೈಸೂರು ವಿಶ್ವವಿದ್ಯಾಲಯ, ೨೦೦೫.

೬) ಬಿಂದುರಾಣಿ. ಎಸ್. ಕೆ. **'ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳ ತೌಲನಿಕ ಅಧ್ಯಯನ'** ಮೈಸೂರು ವಿಶ್ವವಿದ್ಯಾಲಯ, ೨೦೧೫.

೭) ಮಲ್ಲಿಕಾರ್ಜುನ. ಕೆ., **'ಕುಂವೀ ಕಾದಂಬರಿಗಳು; ಒಂದು ಅಧ್ಯಯನ'**, ಜ್ಯೋತಿ ಪ್ರಕಾಶನ, ಮೈಸೂರು, ೨೦೧೧.

೮) ಶಾರದ ಬಿ.ಎನ್. **'ಕನ್ನಡ ಪ್ರಾತಿನಿಧಿಕ ಕಾದಂಬರಿಗಳಲ್ಲಿ ವಿಧವೆ'** ಸಿ.ವಿ.ಜಿ. ಇಂಡಿಯಾ, ಬೆಂಗಳೂರು.

ಸಂಪ್ರಬಂಧಗಳು

೧) ಜಯಲಕ್ಷ್ಮಿ. ಎಂ.ಎಸ್., **'ಬೆಸಗರಹಳ್ಳಿ ಸಾಂಸ್ಕೃತಿಕ ಅಧ್ಯಯನ'** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

೨) ಲೋಕೇಶ್ **'ದೇವನೂರು ಮಹಾದೇವ ಮತ್ತು ಕುಂ.ವೀರಭದ್ರಪ್ಪ ಅವರ ಕಥೆಗಳಲ್ಲಿ ದಲಿತ ಬದುಕು'** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩) ವಸಂತಕುಮಾರ, **'ದೇವನೂರು ಮಹಾದೇವ'** ಮತ್ತು **'ಕುಂ. ವೀರಭದ್ರಪ್ಪ' ಅವರ ಕಥೆಗಳಲ್ಲಿ ಪ್ರತಿಭಟನೆಯ ಸ್ವರೂಪ'** ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.